ಶ್ರೀ ಬಿ ಬಸವಲಿಂಗಪ್ಪ.—ನಾನು ಹೋದಸಾರಿ ಇದರ ಬಗ್ಗೆ ಹೇಳಿದ್ದೇನೆ. ಈ ಸಾರಿಯು ಕೂಡ ಹೇಳುತ್ತಿದ್ದೇನೆ. ಅದು ಒಂದು ವಿಶೇಷ ಪರಿಸ್ಥಿತಿ ಬಂತು ಅದಕಾರಣ ಮುಂದುವರಿಸಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ಏತಕ್ಕಾಗಿ ಮುಂದುವರಿಸಬೇಕಾಗಿತ್ತು? ತಮ್ಮವರಿದ್ದಾರೆಂದು ಮುಂದುವರಿಸಿದ್ದೀರಾ? ಏತಕ್ಕಾಗಿ ಮುಂದುವರಿಸಿದ್ದೀರಿ

ಎಂದು ಒಂದು ಹೇಳಿಕೆ ಕೊಡಿ. ಹಾಗೆ ತಾವು ಹೇಳಿಕೆ ಕೊಡದೆ ಹೋದರೆ ನಾವು ಹೇಗೆ ತಿಳಿದುಕೊಳ್ಳುವುದು ? ಅದು ಯಾವ ವಿಶೇಷ ಪರಿಸ್ಥಿತಿ ಎಂಬುದನ್ನಾದರೂ ತಿಳಿದುಕೊಳ್ಳೋಣ ?

(No Answer)

SRI M. S. KRISHNAN.—The Hon. Minister said that there are certain formalities to be completed in answer to the question of Mr. Sayanak. Are they local formalities or political formalities ? What are the formalities and to what extenet have they been gone into ?

SRI B. BASAVALINGAPPA. -I have said that they are formalities under Section 13 of the Act.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಸಾರಿ ಇದೇ ಪ್ರಶ್ನೆ ಬಂದಾಗ, ತಾವು ಅದಕ್ಕೆ ಬೇಕಾದಂಥ ಕೆಲವು ಕ್ರಮಗಳನ್ನು ಅನುಸರಿಸಬೇಕಾಗಿದೆ, ಅದಕ್ಕೋಸ್ಕರ ಮುನಿಸಿಪಾಲಿಟಿಯ ಅವಧಿಯನ್ನು ಮುಂದುವರಿಸಬೇಕಾಗಿದೆ ಎಂದು ಹೇಳಿದ್ದಿರಿ. ಈಗ ಆರು ತಿಂಗಳು ಕಳೆದರೂ ಕೂಡ ಅದಕ್ಕೆ ಬೇಕಾದಂಥ ಸಿದ್ಧತೆಗಳನ್ನು ಇದುವರೆಗೂ ಏತಕ್ಕೆ ಮಾಡಿಕೊಂಡಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಸಿದ್ಧತೆಗಳನ್ನು ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮಂತ್ರಿಗಳು ವಿಶೇಷ ಕಾರಣಗಳಿಂದ ಬೆಳಗಾವಿ ಮುನಿಸಿಪಾಲಿಟಿಯ ಅವಧಿಯನ್ನು ಆರು ತಿಂಗಳ ಕಾಲ ವಿಸ್ತರಣೆ ಮಾಡಿದ್ದೇವೆಂದು ಹೇಳಿದರು. ಆ ವಿಶೇಷ ಕಾರಣಗಳು ಏನು ? ಅಲ್ಲದೆ ಸೆಕ್ಷನ್ 13ರ ಬಗ್ಗೆ ತಾವು ಹೇಳಿದ್ದೀರಿ, ಅದರ ಬಗ್ಗೆ ವಿವರಣೆಯನ್ನು ಈ ಸದನಕ್ಕೆ ತಿಳಿಸಬೇಕು?

(ಉತ್ತರ ಇಲ್ಲ)

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆಯೂ ಸಹ ಸೆಕ್ಷನ್ 13ರ ಪ್ರಕಾರ ಅವಧಿಯನ್ನು ವಿಸ್ತರಣೆಯನ್ನು ಮಾಡಿದ್ದೇವೆಂದು ಹೇಳಿದ್ದರು. ಈಗಲೂ ಅದನ್ನೇ ಹೇಳುತ್ತಿದ್ದಾರೆ, ಅಲ್ಲಿ ನಿಜವಾಗಿ ಏನು ಪರಿಸ್ಥಿತಿ ಇದೆಯೆನ್ನುವುದನ್ನು ಮಂತ್ರಿಗಳು ಸಭೆಗೆ ತಿಳಿಸಬೇಕು ?

ಶ್ರೀ ಬಿ. ಬಸವಲಿಂಗಪ್ಪ.—ಮುನಿಸಿಪಲ್ ಕಮಿಷನರ್ ಅವರಿಂದ ಶಿಫಾರಸ್ ಬಂದಮೇಲೆ ನಂತರ ಅದು ಗೆಜೆಟ್‌ನಲ್ಲಿ ಪಬ್ಲಿಷ್ ಆಗಬೇಕು. ಸೆಕ್ಷನ್ 13ರ ಪ್ರಕಾರ ಏನು ಕ್ರಮಗಳು ಬೇಕೋ ಅದನ್ನು ಮಾಡುತ್ತಿದ್ದೇವೆ. ಡಿವಿಷನಲ್ ಕಮಿಷನರ್ ಅವರಿಂದ ಶಿಫಾರಸ್ ಬಂದಮೇಲೆ ನಾವು ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಈಗ ಬೆಳಗಾಂ ಮುನಿಸಿಪಾಲಿಟಿಯ ಅವಧಿಯನ್ನು ವಿಸ್ತರಣೆ ಮಾಡಿದ್ದೀರಿ. ತಾವು ಆಗಸ್ಟ್ 15ನೇ ತಾರೀಖಿನಂದು ಮುನಿಸಿಪಾಲಿಟಿಗಳ ಚುನಾವಣೆಗಳನ್ನು ನಡೆಸುತ್ತೇವೆಂದು ಹೇಳಿದ್ದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ. ಅದರಂತೆ ರಾಜ್ಯದ ಎಲ್ಲಾ ಕಡೆಯೂ ಚುನಾವಣೆಗಳನ್ನು ನಡೆಸುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಹಳೆಯ ಮೈಸೂರು ಪ್ರದೇಶದಲ್ಲಿ ಆಗಸ್ಟ್ 15ರ ನಂತರ ಚುನಾವಣೆಗಳನ್ನು ಮಾಡಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದೆ. ಅದರ ಪ್ರಕಾರ ಶ್ರವಣಬೆಳಗೊಳ ಮುನಿಸಿಪಾಲಿಟಿಯ ಚುನಾವಣೆಯ ಫಲಿತಾಂಶ ಬಂದಿದೆ. ಇನ್ನು ಇತರ ಭಾಗಗಳಲ್ಲಿ ಚುನಾವಣೆಗಳನ್ನು ಮಾಡಬೇಕು ಎಂದು ಇದ್ದೇವೆ. ಆದರೆ ಕ್ಷಾಮಕ್ಕೆ ತುತ್ತಾದ ಪ್ರದೇಶ ಏನು ಇದೆ, ಅದರಲ್ಲಿ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ತೀವ್ರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ.

Sri B B. SAYANAK: Whether it is a fact that an ex-Municipal Councillor has filed a writ petition in the High Court to take an order for holding immediate election?

Sri B. BASAVALINGAPA: This is an information.

Sri M. S. KRISHNAN: He needs a report from the Divisional Commissioner. The same reply was given last year. I want to know when you are going to get the information required and when exactly the decision will be taken to hold elections?

Sri B. BASAVALINGAPPA: Over and over again the same questions are being put. I have specifically stated that the elections would be held after 15th August 1973. Instructions have already been issued calender of events

have also been issued and elections are being held. But in the case of those places which were subject to famine, the Government would take a decision whether to hold elections are not. Under the circumstances we will decide it soon.

Sri B. B. SAYANAK: The Divisional Commissioner, Belgaum, was telling that they have submitted a report in this connection. I want to know whether it is a fact or not?

Sri B. BASAVALINGAPPA: I have not received it.

Sri M. S. KRISHNAN: Every time he says there was famine and every time he says that elections will have to be held after the fulfillment of the conditions of clause 13. But we want to know when exactly the elections will be conducted ?

Sri B. BASAVALINGAPPA: Sri Krishnan is putting the same question every time.

Sri M. S. KRISHNAN: That is because you are not giving relevant answers.

Sri B. BASAVALINGAPPA: The provisions of clause 13 have got to be respected. This is mandatory. We are doing it. I have issued instructions and the elections are already being held. Belgaum is in the shadow of famine. Therefore in addition to following Section 13 of the Act the Government will have to take decision under the circumstances on many administrative matters.

Sri B. B. SAYANAK: I want a categorical answer from the Government whether the Government is going to hold elections immediately after the expiry of the period ?

No reply.

ELECTRIFICATION OF VILLAGES IN ARSIKERE TALUK

102. SRI H. S. SIDDAPPA (Arsikere).— Will the Minister for Public Works and Electricity be pleased to state ;—

(*a*) the number of villages included for Rural Electrification in Arsikere Taluk in the III list. (List of villages may please be provided) ;

(*b*) what are the sub-transmission lines proposed to be drawn in Arsikere Taluk and when these would be approved by the Government ;

(*c*) the names of the villages that would be taken up for electrification after drawing these S. T. lines and by what time these would be electrified ?

SRI H. M. CHANNABASAPPA. -(Minister for Public Works and Electricity.)

(*a*) 15 Villages-*vide* Statement I placed on the Table of the House.*

(*b*) *vide* Statement II placed on the Table of the House. The Board has already been asked to take up the scheme*.

(*c*) 50 Villages as indicated in Statement III placed on the Table of the House.* The question of electrification of the villages depends on availability of funds.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ, 15 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲು ಉದ್ದೇಶಿಸಿದೆ ಎಂದು ಹೇಳಿದ್ದೀರಿ. ಆ ಹಳ್ಳಿಗಳಿಗೆ ಎಷ್ಟು ವರ್ಷಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೀರಿ?

---

*Copies placed in the Mysore Legislative Library *vide* Nos. 2 dated 27-8-1973.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎಂದು ಒಂದು ಪ್ರೋಗ್ರಾಂ ಇದೆ. ಅದರಲ್ಲಿ ಯಾವ ಯಾವ ಹಳ್ಳಿಗಳಿಂದ ಏಳೂವರೆ ಪರ್ಸೆಂಟ್ ಉತ್ಪತ್ತಿ ವರ್ಕ್‌ಔಟ್ ಆಗುತ್ತದೆಯೋ ಅಂಥ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ, ಉಪ ವಿದ್ಯುತ್ ವಾಹಕ ಮಾರ್ಗಗಳನ್ನು ಕೈಗೊಳ್ಳುವಂತೆ ಮಂಡಲಿಯವರಿಗೆ ತಿಳಿಸಲಾಗಿದೆ ಎಂದು ಹೇಳಿದ್ದೀರಿ, ಆ ಕೆಲಸವನ್ನು ಎಷ್ಟು ವರ್ಷದಲ್ಲಿ ಶುರು ಮಾಡುತ್ತೀರಿ, ಯಾವ ಸಾಲಿನಲ್ಲಿ ಅದನ್ನು ಮುಗಿಸಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಯೋಜನೆಯನ್ನು ಸುಮಾರು 1,66,000 ರೂಪಾಯಿಗಳ ವೆಚ್ಚದಲ್ಲಿ 1641 ಕಿ. ಮೀ ಲೈನ್ ಡ್ರಾ ಮಾಡಬೇಕು, ಮತ್ತು ಇದನ್ನು ಎರಡು ವರ್ಷದಲ್ಲಿ ಮಾಡಬೇಕು ಎಂದು ಇದ್ದೇವೆ. ಎರಡು ವರ್ಷಗಳಲ್ಲಿ ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಕೆಲಸ ಮಾಡುತ್ತೇವೆ, ಮತ್ತು ಆ ಕೆಲಸವನ್ನು ಎರಡು ವರ್ಷಗಳಲ್ಲಿ ಪೂರೈಸಿಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—(ಸಿ) ಗೆ ಉತ್ತರವಾಗಿ, ಸಬ್ ಟ್ರಾನ್ಸ್‌ಮಿಷನ್ ಲೈನ್ ಮುಗಿದ ನಂತರ ಹಣವನ್ನು ಒದಗಿಸಿಕೊಂಡು ಅರಸೀಕೆರೆಯ ತಾಲ್ಲೂಕಿನ 50 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಯೋಜನೆ ಇದೆ ಯೆಂದು ಹೇಳಿದ್ದೀರಿ. ಆ 50 ಹಳ್ಳಿಗಳಿಗೆ ಎರಡು ವರ್ಷಗಳಲ್ಲಿ ವಿದ್ಯುಚ್ಛಕ್ತಿಯನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸಬ್ ಟ್ರಾನ್ಸ್‌ಮಿಷನ್ ಲೈನ್ ಅನ್ನು ಎಳೆದು ಆದಮೇಲೆ 50 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಲಾಗುತ್ತದೆ. ಹಳ್ಳಿಯವರೂ ಕೂಡ ಅವರು ಮಾಡಬೇಕಾದಂಥ ಕಾರ್ಯವನ್ನು ಮಾಡಿ ಮುಂದೆ ಬಂದು, ಅವರಿಂದ ಏಳೂವರೆ ಪರ್ಸೆಂಟ್ ವರ್ಕ್‌ಔಟ್ ವ್ಯವಸ್ಥೆ ಆದರೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ.—ಏಳೂವರೆ ಪರ್ಸೆಂಟ್ ವರ್ಕ್‌ಔಟ್ ಆಗದೇ ಇದ್ದರೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೀರಿ. ಏಳೂವರೆ ಪರ್ಸೆಂಟ್ ವರ್ಕ್‌ಔಟ್ ಆಗದೆ ಇದ್ದರೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ ಎನ್ನುವುದು ಸರ್ಕಾರದ ಉದ್ದೇಶವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ— ಅಂಥ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ—ಹಳ್ಳಿಯವರು, ಅವರ ಕೆಲಸವನ್ನು ನಿರ್ವಹಿಸಿದರೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದಿರಿ, ಅವರು ಏನು ಕೆಲಸವನ್ನು ನಿರ್ವಹಿಸಬೇಕು ಎಂದು ನಿಗದಿ ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ—ಸಭೆ ಪ್ರಾರಂಭವಾದಾಗ್ಗೆ ನಾನು ಒಂದು ನೋಟಿಫಿಕೇಷನ್ ಅನ್ನು ಎಲ್ಲರಿಗೂ ಕೊಟ್ಟೆ. ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದರೆ ಹಳ್ಳಿಯವರು ಏನು ಏನು ಕಾರ್ಯವನ್ನು ಮಾಡಬೇಕು ಎಂದು ಅಲ್ಲಿ ವಿಧಾಯಕವಾಗಿರತಕ್ಕ ರೀತಿಯಲ್ಲಿ ಅವರು ಕೆಲಸ ಮಾಡಬೇಕು. ಮೊದಲನೆಯದಾಗಿ ಅವರು ರೋಡ್ ಸರ್ವೆ ಫಾರಂ ಅನ್ನು ಫಿಲ್ ಅಪ್ ಮಾಡಿ, ಇಷ್ಟು ಇಷ್ಟು ವಿದ್ಯುಚ್ಛಕ್ತಿ, ಇಂಥಿಂಥ ಕೆಲಸಕ್ಕೋಸ್ಕರ ತೆಗೆದುಕೊಳ್ಳುತ್ತೇವೆ ಎಂದು ಕೊಟ್ಟರೆ, ನಾವು ಅದರ ಅಂದಾಜನ್ನು ಲೆಕ್ಕ ಹಾಕಿ, ಎಷ್ಟು ಇನ್‌ವೆಸ್ಟ್‌ಮೆಂಟ್ ಆಗುತ್ತದೆ ಎಷ್ಟು ಉತ್ಪತ್ತಿ ಬರುತ್ತದೆ ಎನ್ನುವುದನ್ನು ನೋಡಿ, ಬಯಲು ಸೀಮೆಯಲ್ಲಿ ಏಳೂವರೆ ಪರ್ಸೆಂಟ್, ಮತ್ತು ಮಲೆನಾಡಿನಲ್ಲಿ ಐದು ಪರ್ಸೆಂಟ್, ಉತ್ಪತ್ತಿ ಬರುವುದಾದರೆ ಅಂಥಾದ್ದಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ—ತಾವು ಹೇಳಿದಂಥ ಕಾರ್ಯಗಳನ್ನು ಗ್ರಾಮಸ್ಥರು ಮಾಡಿ ಸುಮಾರು ಒಂದು ವರ್ಷವಾದರೂ ಕೂಡ, ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಅವರು ಕೌಂಟರ್ ಸೈನ್ ಮಾಡಿ, ಇದು ವರೆಗೂ ವಿದ್ಯುಚ್ಛಕ್ತಿಯನ್ನು ಕೊಡದೆ ಇರುವ ಹಳ್ಳಿಗಳು ಇವೆ. ಇವುಗಳ ಬಗ್ಗೆ ತಾವು ತಕ್ಕ ಕ್ರಮಗಳನ್ನು ತೆಗೆದು ಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ—ಅಂಥ ಕೇಸುಗಳು ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತರಲಿ, ಆಗ ಅವುಗಳನ್ನು ವಿಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

UMAPUR TANK IN BASAVAKALYAN TALUK

74. SRI BAPURAO ANANDRAO (Basavakalyan) :— Will the Minister for Public Works and Electricity be pleased to state :—

(a) whether the Government is aware of the existance of the Umapur tank in Basavakalyan taluk of Bidar District;

(b) whether the Government has received any representations to improve the tank and evict the unauthorised cultivators and occupants in tank bed area ;

(c) if so, the steps taken by the Government to evict them ?

SRI H.M. CHANNABASAPPA(Minister for Public Works and Electricity) :--

(a) Yes

(b) Yes

(c) 14 Harijans are in possession of the tank bed on the basis of allotment orders issued by the Deputy Commissioner, Bidar. Therefore no steps are taken by Government to evict them.

SRI BAPURAO ANANDRAO :— What is the area of the tankbed of the Umapur Tank in Basvakalyan Taluk ?

*SRI H. M. CHANNABASAPPA :— The Umapur Tank is not in the P.W.D. list and therefore we have not taken the trouble of measuring the extent of water-spread area.

SRI BAPURAO ANANDARAO :— Whether the Government is ready to pay compensation amount to the persons who are in possession of the tankbed and reconstruct the tank ?

SRI H. M. CHANNABASAPPA :— The tankbed has already been disposed of by the Deputy Commissioner for cultivation long before the Police Action or sometime after the police action. Therefore it may be difficult to resume the land.

SRI BAPURAO ANANDARAO :— Can you not pay compensation and resume the tankbed ?

SRI H. M. CHANNABASAPPA :— It is not possible to resume the land because the tankbed has been disposed of some where about 1948 or 1949 to the raiyats. Whether it is going to be profitable to acquire the land and construct a new tank is another question which has to be examined.

SRI BAPURAO ANANDARAO :— Thre is no question of constructing a new tank but it is only restoring the old tank which has been occupied by other persons for cultivation purposes.

Sri H. M. CHANNABASAPPA :— Please note that the land is not under unauthorised occupation. When the land was granted, the Basavakalyan was a Jahagir area. When the Jahagir was there during the Nizam's time, the land was not at all meant for the constuction of a tank Some how tank has been constucted, a sluice has been provided and the lands have also been given for cultivation and the raiyats have lowered the wastewier and the land is under cultivation since 1949. It will be difficult now to go back and reconstruct the tank or improve the tank after acquiring the lands. If this tank has to be restored, the economics of it will have to be worked out and if it is found profitable, we shall examine it.

MADAM SPEAKER :— Now Question Hour is over

SECRETARY'S REPORT

THE SECRETARY: — I beg to lay on the table a statement showing the Bills which have received the assent of the Governor or the President, as the case may be, subsequent to the report made during the previous session*.

STATEMENT SHOWING THE BILLS ASSENTED TO BY THE GOVERNOR OR THE PRESIDENT.

Sl. No	Name of the Bill	Date of Assent	Assented by
1	2	3	4
1	The Mysore Re-enacting Bill, 1973.	19-3-1973	Governor
2	The Mysore Appropriation Bill, 1973.	27-3-1973	Governor
3	The Mysore Appropriation (Vote on Account) Bill, 1973.	27-3-1973	Governor
4	The Mysore Sales Tax (Amendment) Bill, 1973.	30-3-1973	Governor
5	The Mysore Khadi and Village Industries (Amendment) Bill, 1972.	1-5-1973	Governor
6	The Mysore Re-enacting (No 2) Bill, 1973.	4-5-1973	President
7	The Mysore Appropriation (No. 2) Bill, 1973.	25-5-1973	Governor
8	The Public Wakfs (Extension of Limitation) Mysore Amendment Bill, 1973.	30-5-1973	President
9	The Mysore High Court (Amendment) Bill, 1973.	5-6-1973	Governor

(THE SECRETARY)

10 The Mysore Co-operative Societies (Amendment) Bill, 1973.	8-6-1973	Governor
11 The Mysore Appropriation (No. 3) Bill, 1973.	13-6-1973	Governor
12 The Mysore Ownership Flats (Regulation of Promotion of Construction, Sale, Management and Transfer) Bill, 1972.	29-6-1973	President
13 The Mysore Apartment Ownership Bill, 1972.	14-7-1973	President
14 The Mysore Acquisition of Land for the Grant of House Sites Bill, 1972.	18-7-1973	President

PAPERS LAID ON THE TABLE

SRI H. M. CHANNABASAPPA.—(on behalf of Chief Minister) Sir on behalf of I beg to lay:

1 The Mysore State Civil Services (Regulation of Promotion, Pay and Pension) Ordinance, 1973 (Mysore Ordinance No. 1 of 1973)

as required under clause (2) (a) of article 213 of the Constitution of India.

2 Notification No. GSR 134 dated 30th April, 1973.

The Mysore Habitual Offenders (Amendment) Rules 1973

under sub-section 4 of Section 21 of the Mysore Habitual Offenders Act, 1961.

3 (i) Notification No. GSR 19 dated 17th January, 1973.

The Mysore Cinemas (Regulation) (Amendment) Rules, 1973.

(ii) Notification No. GSR 38 dated 30th January, 1973.

The Mysore Cinemas (Regulation) (Second Amendment Rules, 1973.

(iii) Notification No. GSR 71 dated 28th March, 1973.

The Mysore Cinemas (Regulation) (Third Amendment) Rules, 1973.

under Section 22 of the Mysore Cinemas (Regulation) Act, 1964.

4 Notification No. GSR 159 dated 19th June, 1973.

The Mysore Excise (Sale of Indian and Foreign Liquors) (Amendment) Rules, 1973.

under sub-section 4 of Section 71 of the Mysore Excise Act, 1965.

Sir I beg to lay:

1. The Annual Administration Report of the Mysore State Electricity Board for the year 1970-71.

under Section 75 of the Electricity (Supply)Act, 1948.

SRI MALLIKARJUNASWAMY.-(Minister for Community Development and Social Welfare): I beg to lay;

Notification No. GSR 73 dated 22nd February, 1973.

The Mysore Taluk Board (Manner of Publication of Resolution) (Amendment) Rules, 1973.

under Section 246 of the Mysore Village Panchayats and Local Boards Act, 1959.

SRI A. R. BADARINARAYANA.-(Minister for Education): I beg to lay :

The Mysore Private Educational Institutions (Discipline and Control) Ordinance, 1973 (Mysore Ordinance No. 4 of 1973).

as required under clause (2) (a) of article 213 of the Constitution of India.

SRI A. SHANKARA ALVA (Minister for Co-operation) I beg to lay :

The Mysore Agricultural Produce Marketing (Regulation) Amendment Ordinance, 1973 (Mysore Ordinance No. 5 of 1973.)

as required under clause (2) (a) of article 213 of the Constitution of India.

Sir I beg to-relay :

1. Notification No. S. O. 493 dated 16th March, 1973 Regarding taking over the Powers of the Bijapur District Central Co-operative Bank Ltd., Bijapur by the Government in the public interest.

2. Notification No. S. O. 494 dated 16th March, 1973. Regarding taking over the powers of the Gulbarga District Central Co-operative Bank Ltd., Gulbarga by the Government in the public interest.

3. Order No. S. O. 606 dated 13th April, 1973 regarding taking power to exercise control over the conduct and business of Sri Mahadeshwar Sahakara Sakkare Karkhane Limited, Kollegal.

Under Section 130 of the Mysore Co-operative Societies Act, 1959.

SRI N. HUTCHAMASTHY GOWDA (Minister for Revenue): Sir I beg to lay,

1. The Mysore Agricultural Lands (Prohibition of Alienation) Ordinance 1973 (Mysore Ordinance No. 2 of 1973).

2. The Mysore Land Revenue (Amendment) Ordinance, 1973 (Mysore Ordinance No. 3 of 1973).

as required under clause (2) (a) of article 213 of the Constitution of India.

SRI AZEEZ SAIT (Minister for Labour):—
I beg to lay :

(i) Notification No. GSR 333 dated 25th July 1972.

The Mysore Motor Vehicles (5th Amendment) Rules, 1972.

(ii) Notification No. GSR 96 dated 30th January 1973.

the Mysore Motor Vehicles (1st Amendment. Rules, 1973).

(iii) Notification No. GSR 95 dated 2nd February 1973.

the Mysore Motor Vehicles (2nd Amendment) Rules, 1973.

under sub-section (3) of Section 133 of the Mysore Motor Vehicles Act, 1939.

(iv) Notification No. S. O. 95 dated 30th April 1973 Inter-State Transport-Reciprocal Transport agreement between the Governments of Mysore and Tamilnadu.

under sub-section (2) of Section 16 of Mysore Motor Vehicles Taxation Act, 1957.

SRI M. Y. GHORPADE (Minister for Finance) I beg to lay :

1 Notification No.S.O. 639 dated 20th March 1973.

Regarding exemption of tax to Deaf Aid Society.

Sri M. Y. Ghorpade (Minister for Finance)

under sub-Section (2) of Section 30 of the Mysore Lotteries and Prize Competitions Control Act, 1951.

2. Notification No. GSR 62 dated 31st March, 1973.

The Mysore Sales Tax (Amendment Rules, 1973.

3 Notification No. GSR. 62 dated 30th March 1973.

The Mysore Sales Tax (Second Amendment) Rules, 1973.

under Section 39 of Mysore Sales Tax Act, 1957.

4. Notification No. GSR 60 dated 30th March, 1973

The Mysore Entertainment Tax (Amendment) Rules, 1973.

under sub-Section 4 of Section 18 of the Mysore Entertainment Tax Act, 1958.

SRI S. M. KRISHNA (Minister for Industries) Sir I beg to lay:

(i) 3 nd Annual Report of the Mysore Chrome Tanning Limited 1972 together with Audit Report for the year ended 9th June, 197 .

(ii) 25th Annual Report of the Mysore Lac and Paint Works Limited for 1971-72 together with Audit Report for the year ended 30th June, 1972.

(iii) 26th Annual Report of the Hutti Gold Mines Co., Ltd., and accounts for 1971-72 together with Audit Report for the year ended 31st March, 1972.

under Section 619-A(3) of the Companies Act, 1956.

SRI H. N. NANJE GOWDA (Minister of State for Major Irrigation) Sir I beg to lay:

Notification No. PWD 74 LBW 71 dated 28th May, 1973.

The Mysore Irrigation (Amendment) Rules, 1973.

under Section 71 (4) of the Mysore Irrigation Act, 1965

MADAM SPEAKER— All Papers are laid on the Table of the House.

SECOND REPORT OF THE COMMITTEE ON PUBLIC UNDERTAKING

PRESENTATION

SRI B. BHASKER SHETTY (Kaup): – I present the Second Report of the Committee on Public Undertakings on the Mysore State Agro-Industries Corporation along with the minutes and proceedings of the meetings of the Committee.

MADAM SPEAKER :—The report is presented.

2 P.M. :

NOTICES OF ADJOINMENT NOTICE :

(i) RE. ALLEGED POLICE EXCESS AND FIRING AT ARSIKERE

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ) :—

ಸನ್ಮಾನ್ಯ ಅಧ್ಯಕ್ಷರೇ : ಇದೇ ವರ್ಷದ ಆಗಸ್ಟ್ ಕಳೆದ ಹದಿನಾರನೇ ತಾರೀಖಿನಲ್ಲಿ ನಮ್ಮ ಅರಸೀಕೆರೆ ಟೌನಿನಲ್ಲಿ ನಡೆದ ಗೋಲೀಬಾರ್ ಪ್ರಸಂಗದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈ ಸೂಚನೆಯನ್ನು ಕಳುಹಿಸುವುದಕ್ಕೆ ಮುಖ್ಯ ಕಾರಣ ಅಲ್ಲಿ ಒಬ್ಬರು ಸತ್ತಿದ್ದಾರೆ. 40 ಜನರಿಗೆ ತುಂಬಾ ಗಾಯಗಳಾಗಿದೆ. ಮತ್ತು ಇನ್ನೂ ಅನೇಕ ಜನರಿಗೆ ಸಾಮಾನ್ಯ ಗಾಯಗಳಾಗಿವೆ. ನಾನು ಇದೇ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಾರೀಕು 17-8-1973 ರಲ್ಲಿ ಚರ್ಚೆ ನಡೆಸಿದ್ದೇನೆ. ಅವರಿಗೆ ಎಲ್ಲಾ ವಿಷಯಗಳನ್ನೂ ತಿಳಿಸಿದ್ದೇನೆ. ಆದರೆ ಇಂಥ ಒಂದು ದುರ್ಘಟನೆ ಹಿಂದೆ ಇಲ್ಲಿನ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲೂ ಸಹಾ ನಡೆದಿರಲಿಲ್ಲ.

ಅಧ್ಯಕ್ಷರು :— ಈ ಚರ್ಚೆಗೆ ಅವಕಾಶ ಕೊಡಬೇಕೇ ಬೇಡವೇ ಅನ್ನುವುದೇ ಇನ್ನೂ ತೀರ್ಮಾನವಾಗದೆ ಇರುವಾಗ ತಾವು ಆಗಲೇ ಭಾಷಣ ಮಾಡುವುದಕ್ಕೆ

(ಶ್ರೀ ಹೆಚ್. ಎಸ್ ಸಿದ್ದಪ್ಪ)

ಪ್ರಾರಂಭ ಮಾಡಿದ್ದೀರಿ. ಅಲ್ಲದೆ ತಮಗೂ ಮುಂಚಿತವಾಗಿ ಶ್ರೀ ಶಾಮಣ್ಣ ನವರು ಇದೇ ವಿಚಾರದಲ್ಲಿ ಒಂದು ಸೂಚನೆಯನ್ನು ನನಗೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಇಲ್ಲಿ ಇರತಕ್ಕ ಮುಖ್ಯ ಪ್ರಶ್ನೆ ಯಾರು ಮೊದಲು ಸೂಚನೆಯನ್ನು ಕಳುಹಿಸಿದ್ದಾರೆಂಬುದು ಅಲ್ಲ. ನಾನು ಈಗ ಇದೇ ವಿಚಾರದಲ್ಲಿ ಒಂದು ಮನವಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೊಡಬೇಕಾಗಿದೆ, ಅದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡ ಬೇಕು. ಮತ್ತು ಅಲ್ಲಿ ನಡೆದಂಥ ಆ ಗೋಲೀಬಾರಿನ ಹೊಣೆಗಾರಿಕೆಯನ್ನು ಯಾರ ಮೇಲೆ ಹೋರಿಸಬೇಕಾಗಿದೆ ಎಂಬುದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಆ ಪ್ರಸಂಗ ನಡೆದ ಕಾಲಕ್ಕೆ ಜಿಲ್ಲಾಧಿಕಾರಿಗಳ ನಡವಳಿಕೆ ಸರಿಯಾಗಿರಲಿಲ್ಲ ಆದರೆ ಈಗ ಇದರ ವಿಚಾರಣೆಯನ್ನು ಸಬ್‌ಡಿವಿಜನ್ ಅಧಿಕಾರಿಗಳಿಗೆ ವಹಿಸಿರು ವುದು ಸರಿಯೊದ್ದಲ್ಲ. ಕಾರಣ ಅವರು ಆ ಜಿಲ್ಲಾಧಿಕಾರಿಗಳಿಗೆ ಸಬಾರ್ಡಿನೇಟ್ ಅಧಿಕಾರಿಗಳಾಗಿದ್ದಾರೆ. ಆದರೆ ಅಲ್ಲಿ ಕೆಲವರು ಪೋಲೀಸ್ ಸಬ್‌ಇನ್‌ಸ್ಪೆಕ್ಟರ ಮನೆಗೆ ನುಗ್ಗಿ ಧಾನ್ಲೆ ಮಾಡಿದ್ದಾರೆ. ಅದನ್ನು ನಾನು ಸರಿ ಎಂದು ಹೇಳುವುದಿಲ್ಲ. ಆದರೆ ಈ ಗೋಲೀಬಾರಿನ ಬಗ್ಗೆ ನಿಷ್ಪಕ್ಷಪಾತವಾದ ಒಂದು ವಿಚಾರಣೆ ನಡೆಯ ಬೇಕಾಗಿದೆ. ಅಲ್ಲಿ ನೊಂದ ಜನರಿಗೆ ಸರ್ಕಾರ ಕೂಡಲೇ ಸೂಕ್ತ ಪರಿಹಾರವನ್ನು ನೀಡಬೇಕಾಗಿದೆ. ಆ ಜನಕ್ಕೆ ಕೂಡಲೆ ಸರ್ಕಾರ ಪರಿಹಾರವನ್ನು ಕೊಡದೇ ಹೋದರೆ ಆ ಜನರೆಲ್ಲಾ ಹಾಳಾಗಿ ಹೋಗುತ್ತಾರೆ. ಅಥವಾ ಮಾನ್ಯ ಅಧ್ಯಕ್ಷರಾದ ತಾವೇ ಒಂದು ಗಂಟೆಯ ಕಾಲ ವಿರಾಮ ಮಾಡಿಕೊಂಡು ಆ ಸ್ಥಳಕ್ಕೆ ದಯ ಮಾಡಿಸಿದರೆ ಆಗ ತಮಗೆ ಅಲ್ಲಿ ಈ ದಿವಸ ಏನು ಪರಿಸ್ಥಿತಿಯಿದೆ ಎಂಬುದು ಗೊತ್ತಾಗುತ್ತದೆ. ಅಧ್ಯಕ್ಷರು ಅಲ್ಲಿಗೆ ದಯಮಾಡಿಸಿದರೆ ಬಹಳ ಒಳ್ಳೆಯದು ನಾನು ಅಧ್ಯಕ್ಷರಲ್ಲಿ ಕಡೆಯದಾಗಿ ಪ್ರಾರ್ಥಿಸಿಕೊಳ್ಳುವುದಿಷ್ಟೇ ಅಲ್ಲಿ ಒಂದು ನಿಷ್ಪಕ್ಷಪಾತವಾದ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು ಮತ್ತು ಇಲ್ಲಿ ಆ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ

ಶ್ರೀ ಟಿ. ಎಸ್. ಮಂಜುನಾಥ್ (ತಿಪಟೂರು) :—ಅಲ್ಲಿ ನಡೆಯುತ್ತಿರುವ ಘಟನೆಗಳನ್ನು ಹೇಳುವುದಕ್ಕೆ ತೀರದಾಗಿದೆ. ಮೊನ್ನೆ ಪೋಲೀಸಿನವರು ರಾತ್ರಿ 12 ಗಂಟೆಯಲ್ಲಿ ಮಹಿಳೆಯರು ಮಾತ್ರವೇ ಇದ್ದಂಥ ಕಾಲದಲ್ಲಿ ಒಂದು ಮನೆಗೆ ನುಗ್ಗಿ ಅಲ್ಲಿ ಇದ್ದ ರಾಘವೇಂದ್ರ ಸ್ವಾಮಿಗಳ ಒಡವೆಗಳನ್ನು ಕಿತ್ತುಕೊಂಡು ಹೋಗಿದ್ದಾರೆ. ಪೋಲೀಸಿನವರು ಮನಸ್ಸಿಗೆ ಬಂದವರನ್ನು ಅವರ ಮನೆಗೆ ನುಗ್ಗಿ ಹಿಡಿದುಕೊಂಡು ಹೋಗಿ ಅವರಿಗೆ ವಿಚಿತ್ರ ಹಿಂಸೆಯನ್ನು ಕೊಡುತ್ತಿದ್ದಾರೆ. ನಾನು

ಈ ವಿಚಾರದಲ್ಲಿ ಯಾವುದೊಂದನ್ನೂ ಉತ್ಪ್ರೇಕ್ಷೆ ಮಾಡಿ ಮಾತನಾಡುತ್ತಿಲ್ಲ. ಆದರೆ ಪ್ರಜಾಸತ್ತಾತ್ಮಕ ಸರ್ಕಾರ ಆಡಳಿತವನ್ನು ನಡೆಸತಕ್ಕ ಕಾಲದಲ್ಲಿ ಹೀಗೆಲ್ಲಾ ನಡೆಯುತ್ತಿರುವುದಕ್ಕೆ ನಾವು ಯಾರೂ ತಲೆ ಎತ್ತಿ ನಡೆಯುವುದಕ್ಕಾಗುವುದಿಲ್ಲ.

ಶ್ರೀ ಟಿ. ಆರ್. ಶ್ಯಾಮಣ್ಣ (ಬೆಂಗಳೂರು ಕೋಟೆ) :—ಮಾನ್ಯ ಸಿದ್ದಪ್ಪನವರು ಅರಸೀಕೆರೆ ಸ್ಥಳದವರೇ ಇರಬಹುದು. ಆದರೆ ಅದೇ ಊರಿನ ಜನರು ಬೆಂಗಳೂರಿಗೆ ಬಂದು ಶ್ರೀ ಸಿದ್ದಪ್ಪನವರು ಅರಸೀಕೆರೆಯಲ್ಲಿಲ್ಲ—ಅವರು ಬೆಂಗಳೂರಿಗೆ ಬಂದಿದ್ದಾರೆ ಎಂದು ನನ್ನನ್ನು ಅವರು ಬಲವಂತಮಾಡಿ ಅಲ್ಲಿಗೆ ಕರೆದುಕೊಂಡು ಹೋದರು. ನಾನು ಅರಸೀಕೆರೆಗೆ ಹೋದಾಗ ನನ್ನ ಜೊತೆಯಲ್ಲಿ ಇನ್ನೂ ಒಬ್ಬ ಸದಸ್ಯರನ್ನು ಇಲ್ಲಿಂದ ಕರೆದುಕೊಂಡು ಹೋಗಿದ್ದೆ. ನಾನು ಅಲ್ಲಿ ಪ್ರತ್ಯಕ್ಷವಾಗಿ ಜನರಿಂದ ಏನೇನು ವಿಷಯಗಳು ತಿಳಿಯು ಬಂದವೋ ಅಷ್ಟನ್ನು ಮಾತ್ರ ನಮೂದಿಸಿ ಅಧ್ಯಕ್ಷರಿಗೆ ಈ ಅಧಿವೇಶನ ಪ್ರಾರಂಭವಾಗುವುದಿನ್ನೂ ನಾಲ್ಕು ದಿನಗಳಿದ್ದಂತೆ ಒಂದು ನಿಲುವಳಿ ಸೂಚನೆಯನ್ನು ಈ ಸಭೆಯ ಅಧ್ಯಕ್ಷರ ಕಡೆಗೆ ಕಳುಹಿಸಿದ್ದೇನೆ. ಆದರೆ ಇಲ್ಲಿಯತನಕ ಸರ್ಕಾರದಿಂದ ಉತ್ತರ ಬರದಿರುವುದು ಏನು ಕಾರಣವೋ ತಿಳಿಯದು. ಆದರೆ ಅಲ್ಲಿ ಪೋಲೀಸಿನವರ ಮನೆಗೂ ನುಗ್ಗಿ ಕೆಲವರು ದೌರ್ಜನ್ಯ ನಡೆಸಿದ್ದಾರೆ. ಅದೂ ಕೂಡ ಸರಿಯಾದ್ದಲ್ಲ ಅಷ್ಟೇ ಅಲ್ಲದೆ ಅಲ್ಲಿ ಸಬ್‌ಇನ್‌ಸ್ಪೆಕ್ಟರ ಮನೆಯಲ್ಲಿ ಹೆಂಗಸರ ಬಟ್ಟೆಯನ್ನು ಕಿತ್ತು ಹಾಕುವುದಕ್ಕೂ ಕೂಡ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಅದು ಸರಿಯಾದ್ದಲ್ಲ. ಆದರೆ ಇತ್ತೀಚೆಗೆ ಅಲ್ಲಿ ಪೋಲೀಸಿನವರ ದೌರ್ಜನ್ಯವಂತೂ ತುಂಬಾ ಜಾಸ್ತಿ ಆಗಿದೆ. ಅದನ್ನು ಹತೋಟಿಯಲ್ಲಿಡದಿದ್ದರೆ ನಾಳೆ ಆ ಜಾಡ್ಯ ಮಂತ್ರಿಗಳ ಮನೆಗೂ ತಗುಲಬಹುದು. ಆದ್ದರಿಂದ........

ಅಧ್ಯಕ್ಷರು : ಏನು ತಾವಾಗಲೇ ಭಾಷಣ ಮಾಡುವುದಕ್ಕೆ ಹೊರಟಿದ್ದೀರಿ. ಇದಕ್ಕೆಲ್ಲಾ ಮುಂದೆ ಅವಕಾಶ ಕೊಡಬೇಕೆ ಇಲ್ಲಿ ಚರ್ಚೆ ಆಗಬೇಕೇ ಬೇಡವೇ ಅನ್ನುವುದೇ ಇನ್ನೂ ತೀರ್ಮಾನವಾಗದಿರುವಾಗ ತಾವು ಹೇಗೆ ಮಾತನಾಡುವುದಕ್ಕೆ ಅವಕಾಶ ತೆಗೆದುಕೊಳ್ಳುತ್ತೀರಿ ?

ಶ್ರೀ ವಾಟಾಳ ನಾಗರಾಜ್ (ಚಾಮರಾಜಪೇಟೆ) : ಮಾನ್ಯ ಅಧ್ಯಕ್ಷರೇ: ಅಲ್ಲಿ ಗೋಲಿಬಾರು ನಡೆದ ನಂತರ ಇನ್ನೂ ಅನೇಕ ದುರಂತಗಳು ನಡೆದಿವೆ. ಅವುಗಳ ಬಗ್ಗೆ ಒಂದು ಮೆಮೊರಾಂಡಂ ಕೊಡಲು ಜನರು ಬಂದಿದ್ದಾರೆ. ಅವರು ತಮಗೆ ಒಂದು ಮೆಮೊರಾಂಡಂ ಕೊಡಬೇಕೆಂದಿದ್ದಾರೆ............

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಟಿ. ಆರ್. ಶಾಮಣ್ಣ : ಅಲ್ಲಿ ನಡೆದ ಪ್ರಸಂಗದ ಬಗ್ಗೆ ಒಂದು ನಿಷ್ಪಕ್ಷಪಾತವಾದ ವಿಚಾರಣೆ ನಡೆಯುವುದಕ್ಕೆ ಅವಕಾಶ ಮಾಡಿಕೊಡದಿದ್ದರೆ ಅಂಥ ಪ್ರಸಂಗಗಳು ರಾಜ್ಯದಲ್ಲಿ ಇನ್ನೂ ಅನೇಕ ಕಡೆ ನಡೆಯುವುದಕ್ಕೆ ಅವಕಾಶವಾಗಬಹುದು. ಆಗ ರಾಜ್ಯದಲ್ಲಿ ಆಡಳಿತವೇ ಕುಸಿದು ಬೀಳತಕ್ಕ ಪ್ರಸಂಗ ಬರಬಹುದು........

ಅಧ್ಯಕ್ಷರು : ತಾವು ದಯಮಾಡಿ ಜನಗಳಿಗೆ ಇಂಥ ವಿಷಯಗಳನ್ನು ಹೇಳಿಕೊಡಬಾರದು. ನಾನು ಇನ್ನೂ ಇದರ ಆಡ್ಮಿಜಿಬಿಲಿಟಿ ವಿಚಾರದಲ್ಲಿ ಒಂದು ತೀರ್ಮಾನಕ್ಕೇ ಬಾರದಿರುವಾಗ ತಾವು ಇಷ್ಟು ಲಂಬಿಸಿ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೇ! ನಾನೂ ಕೂಡ ಆ ಅರಸೀಕೆರೆಯ ಪಕ್ಕದ ತಾಲ್ಲೂಕಿನಿಂದ ಬರತಕ್ಕ ಸದಸ್ಯನಾಗಿದ್ದೇನೆ ನನಗೂ ಅಲ್ಲಿಯ ಅನೇಕ ವಿಚಾರಗಳು ತಿಳಿದಿವೆ........

ಅಧ್ಯಕ್ಷರು : ಮಾನ್ಯ ಸದಸ್ಯರು ಈ ದಿವಸದ ಅಜೆಂಡಾವನ್ನೇ ನೋಡಿದಂತೆ ಕಾಣುತ್ತಿಲ್ಲ. ಇಂಥ ಚರ್ಚೆಗೆ ಒಂದು ಕಾಲಾವಕಾಶವನ್ನು ನಿಗದಿ ಮಾಡುವುದಕ್ಕೆ ಮೊದಲು ಹೀಗೆಲ್ಲಾ ಮಾತನಾಡುವುದಕ್ಕೆ ಅವಕಾಶ ಎಲ್ಲಿದೆ ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದವರು ಈ ವಿಚಾರದಲ್ಲಿ ಏನು ಉತ್ತರ ಕೊಡಬೇಕೆಂದಿದ್ದಾರೆ ಅದನ್ನು ಅವರು ಇಲ್ಲಿ ಯಾವ ಯಾವ ಸದಸ್ಯರು ಏನೇನು ಹೇಳುತ್ತಾರೆಂಬುದನ್ನು ಕೇಳಿದ ನಂತರ ಉತ್ತರ ಕೊಡುವಂತೆ ತಾವು ಒಂದು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ಈಗ ಇಲ್ಲಿ ಇರತಕ್ಕ ಪ್ರಶ್ನೆ ಇದಕ್ಕೆ ಚರ್ಚೆಗೆ ಅವಕಾಶ ಕೊಡಬೇಕೇ ಅಥವಾ ಬೇಡವೇ ಎಂಬುದು. ಅದಿನ್ನೂ ತೀರ್ಮಾನವಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್ ಪ್ರಕಾರ ಈ ವಿಚಾರವನ್ನು ತಮ್ಮ ಅನುಮತಿ ತೆಗೆದುಕೊಂಡು ಇಲ್ಲಿ ಚರ್ಚೆಮಾಡಬೇಕೋ ಬೇಡವೋ ಎಂಬುದು ಈಗಿರತಕ್ಕ ಪ್ರಶ್ನೆ. ಇದರಲ್ಲಿ ಎರಡು ಮೂರು ವಿಷಯಗಳು ಬಹಳ ಮುಖ್ಯವಾದುದು ಆಗಿವೆ. ಅವುಗಳ ಬಗ್ಗೆ ತಾವು ಒಂದು ತೀರ್ಮಾನವನ್ನು ತೆಗೆದುಕೊಂಡು ಇಲ್ಲಿ ಈ ವಿಷಯ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಅಲ್ಲಿ ಗೋಲೀಬಾರು ಆಗಿದೆಯೆಂಬುದನ್ನು ಜನ ತಿಳಿದಿದ್ದಾರೆ. ಪೋಲೀಸರ ವರ್ತನೆಯ ಬಗ್ಗೆ ಸರಿಯಾದ ವಿಚಾರಣೆ ಮಾಡದೇ ಹೋದರೆ ಅದರಿಂದ ಮುಂದೆ ಬಹಳ ತೊಂದರೆ

ಬರುತ್ತದೆ.. ಅಲ್ಲಿ ಪೋಲೀಸರ ದಬ್ಬಾಳಿಕೆ ಮತ್ತು ದೌರ್ಜನ್ಯ ನಡೆದಿದೆಯೆಂದು ನಿಜವಾಗಿ ನಾವು ಹೇಳಬೇಕಾಗಿದೆ. ಎರಡನೆಯದು ಏನೆಂದರೆ, ಅಲ್ಲಿ ಆ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಯಾರು ಹೊಣೆಗಾರರು? ಅಲ್ಲಿರತಕ್ಕ ಭಾರಿ ವರ್ತಕರೋ ? ಅಥವಾ ಮಧ್ಯವರ್ತಿ ಜನತೂ ಸೇರಿ ಮಾಡಿದರೋ?

ಅಧ್ಯಕ್ಷರು.—ತಾವು ಆಗಲೇ ದರ್ಜೆಯನ್ನು ಸುರು ಮಾಡಿಬಿಟ್ಟಿರಿ.

ಶ್ರೀ ಎಂ ಎಸ್. ಕೃಷ್ಣನ್. ಸರ್ಕಾರದ ನೀತಿಯಲ್ಲಿ ಬ್ಲಾಕ್ ಮಾರ್ಕೆಟ್ಟನ್ನೇ ಹತ್ತಿಕ್ಕುವ ದೃಷ್ಟಿಯಿಂದ ಅಲ್ಲಿ ಆ ರೀತಿಯಾಗಿ ನಡೆಯಿತೋ ಏನೋ ಎಂಬುದು ಯಾವುದೂ ಗೊತ್ತಾಗುತ್ತಾ ಇಲ್ಲ, ಅಥವಾ ಅದಕ್ಕೆ ವಿರುದ್ಧವಾಗಿ ನಡೆಯಿತೋ ಎಂಬುದೂ ಸಹ ಗೊತ್ತಾಗುತ್ತಾ ಇಲ್ಲ ಅರಸೀಕೆರೆಯಲ್ಲಿ ಈ ಒಂದು ಗೊಂದಲಕ್ಕೆ ಅಲ್ಲಿನ ವರ್ತಕರು ಸೇರಿಕೊಂಡಿದ್ದಾರೆ. ಸಾಮಾನ್ಯ ಜನರೂ ಸಹ ಸೇರಿಕೊಂಡಿದ್ದಾರೆ. ಇದರಲ್ಲಿ ಸಾಮಾನ್ಯ ಜನರನ್ನು ವರ್ತಕರು ಉಪಯೋಗ ಮಾಡಿ ಕೊಂಡಿದ್ದಾರೋ ಅಥವಾ ಸಾಮಾನ್ಯ ಜನರೇ ವರ್ತಕರನ್ನು ಉಪಯೋಗ ಮಾಡಿಕೊಂಡಿದ್ದಾರೋ ಎಂಬುದು ಒಂದು ಗಂಭೀರವಾದ ಪ್ರಶ್ನೆ ಇದೆ. ಆದ್ದರಿಂದ ತಾವು ಈ ವಿಚಾರದಲ್ಲಿ ಇಲ್ಲಿ ಚರ್ಚೆ ಮಾಡಲು ತಮ್ಮ ಕನ್‌ಸೆಂಟನ್ನು ಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ : ಸೆಕ್ಷ 50ರ ಪ್ರಕಾರ ನಾನು ಈ ವಿಚಾರವನ್ನು 4 ದಿನಗಳ ಮುಂಚೆಯೇ ಕೊಟ್ಟಿದ್ದೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.....ಈಗ ಒಂದು ಹಾಸ್ಯಾಸ್ಪದ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಜಿಲ್ಲಾಧಿಕಾರಿಗಳು ಮಾಡಿದಂಥ ಒಂದು ತಪ್ಪು ಆಜ್ಞೆಯಿಂದ ಈ ಪ್ರಕರಣ ಅಲ್ಲಿ ನಡೆದಿದೆಯೆಂದು ಸಾರ್ವಜನಿಕರ ದೂರು ಇದೆ. ಈ ರೀತಿಯಾಗಿ ಜಿಲ್ಲಾಧಿಕಾರಿಗಳು ತಪ್ಪಿತಸ್ಥರಾಗಿರುವ ಕಡೆ ಸರ್ಕಾರದವರು ಒಬ್ಬ ಅಸಿಸ್ಟೆಂಟ್ ಕಮಿಷನರ್ ಅವರನ್ನು ಅಲ್ಲಿ ನ್ಯಾಯ ತೀರ್ಮಾನ ಮಾಡಲು ನೇಮಕ ಮಾಡಿರುತ್ತಾರೆ. ಇದರಿಂದ ಯಾವ ವಿಧವಾದ ನ್ಯಾಯ ದೊರಕುತ್ತದೆ ? ಇದು ನಿಜವಾಗಿ ಸಾರ್ವಜನಿಕರನ್ನು ಮರೆ ಮಾಡುವ ಪ್ರಯತ್ನ ಹಾಗೂ ಅಲ್ಲಿರತಕ್ಕ ನಿಜಾಂಶವನ್ನು ಮುಚ್ಚಿಡುವ ಪ್ರಯತ್ನವಾಗುತ್ತದೆಂದು ನಮಗೆ ಭಾಸವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸರಿಯಾದ ನ್ಯಾಯಾಂಗ ವಿಚಾರಣೆ ಆಗಬೇಕೆಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.—ಇದು ಅರಸೀಕೆರೆ ಪ್ರಶ್ನೆ ಇದೆ. ಇದನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಾವು ಒಪ್ಪಿಗೆ ಕೊಡುವ ಪ್ರಶ್ನೆ ಇದೆ. ನಾವು ನಿಮ್ಮ ಆಜ್ಞೆಯನ್ನು ಪರಿಪಾಲನೆ ಮಾಡಬೇಕು. ಅಲ್ಲಿ ನಿರಪರಾಧಿ ಜನಗಳು ಸತ್ತಿರುವ ಕಾರಣ........

ಅಧ್ಯಕ್ಷರು.—ನಿಮಗೆ ಆ ವಿಷಯ ಗೊತ್ತೋ ಇಲ್ಲವೋ ನನಗೇ ಗೊತ್ತಿಲ್ಲ. ಆದರೂ ತಾವು ಅಲ್ಲಿನ ಜನರ ಬಗ್ಗೆ ಹೇಳುತ್ತಾ, ಅಲ್ಲಿ ಯಾರೋ, ಪಾಪ, ತೊಂದರೆಗೆ ಸಿಕ್ಕಿ ಹಾಕಿ ಕೊಂಡಿದ್ದಾರೆ, ಅದಕ್ಕೆ ಇಲ್ಲಿ ಅವರ ಬಗ್ಗೆ ಚರ್ಚೆ ಮಾಡು ವುದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೀರಿ.

ಶ್ರೀ ಎಸ್. ವೈ. ಪಾಟೀಲ್.—ನಮಗೆ ಅದರ ಬಗ್ಗೆ ಹೇಳಿಕೊಳ್ಳುವುದಕ್ಕೆ ಒಪ್ಪಿಗೆ ಕೊಡುವುದಾದರೆ, ಅದರ ಇಂಪಾರ್ಟೆನ್ಸನ್ನು ನಾನು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ತಮಗೆ ಅವಕಾಶ ಕೊಟ್ಟರೆ, ಆ ಬಗ್ಗೆ ಹೇಳುತ್ತೀರಾ ?

ಶ್ರೀ ಎಸ್. ವೈ. ಪಾಟೀಲ್.—ನನಗೂ ಆ ಬಗ್ಗೆ ಹೇಳಲಿಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಅಲ್ಲಿ ನಡೆದಿರತಕ್ಕ ಮುಖ್ಯವಾದ ಮೂರು ಅಂಶಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯು ತ್ತಿದ್ದೇನೆ. ಅಲ್ಲಿ ಗೋಲಿಬಾರು ಆಗುವುದಕ್ಕೆ ಅಲ್ಲಿ ನಡೆದುದು ಏನೆಂಬುದನ್ನು ನಾನು ಹೇಳಬೇಕಾಗುತ್ತದೆ. ನಾವು ಜುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ಕೇಳುತ್ತಿರುವಾಗ, ಅದು ಏಕೆ ಬೇಕೆಂಬುದನ್ನು ಹೇಳುತ್ತೇನೆ ಆದರೆ ಅಲ್ಲಿ ನಡೆದ ಪ್ರಸಂಗವನ್ನು ನಾನು ಈಗ ಹೇಳುವುದಿಲ್ಲ ಅಲ್ಲಿ 10ನೇ ತಾರೀಖಿನಿಂದ 13ನೇ ತಾರೀಖಿನವರೆಗೆ ಅಲ್ಲಿನ ವರ್ತಕರು ಅಕ್ಕಿಯನ್ನು ಮಾರುವುದಿಲ್ಲವೆಂದರೆ, ಅಲ್ಲಿನ ಜಿಲ್ಲಾಧಿಕಾರಿಗಳೇ, ಮತ್ತು ಪೋಲೀಸು ಸೂಪರಿಂಟೆಂಡೆಂಟರವರೇ ನೀವು ಅಕ್ಕಿ ಮಾರಿ ಎಂಬುದಾಗಿ ಪ್ರಚೋದನೆ ಮಾಡಿದರು.

ಶ್ರೀ ಕಾಗೋಡು ತಿಮ್ಮಪ್ಪ ; ನಾವು ಸರ್ಕಾರದ ಉತ್ತರವನ್ನು ಪಡೆಯು ವುದಕ್ಕೆ ಮುಂಚೆ ಒಂದು ವಿಚಾರವನ್ನು ಅವರಲ್ಲಿ ನಾವು ಪ್ರಶ್ನೆ ಮಾಡಬೇಕಾ ಗುತ್ತದೆ. ಈಗಿರತಕ್ಕ ನಿಲುವಳಿ ಸೂಚನೆಯನ್ನು ಈ ಸಭೆಯಲ್ಲಿ ಚರ್ಚೆಗೆ ತೆಗೆದು ಕೊಳ್ಳಬೇಕೇ ಅಥವಾ ಬೇಡವೇ ಎಂಬ ಬಗ್ಗೆ ತಮ್ಮ ಒಪ್ಪಿಗೆಯನ್ನು ಕೊಡುವುದು ಈಗಿರತಕ್ಕ ಪ್ರಶ್ನೆ. ಅದನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಕ್ಕ ಅರ್ಹತೆ ಪಡೆದಿದೆಯೋ ಇಲ್ಲವೋ ಎಂಬುದು ಏನಿದೆ ಅದರ ಬಗ್ಗೆ ನಿಮ್ಮ ಅನುಮತಿ ಇಲ್ಲಿ ಕೊಡಬೇಕಾಗಿದೆ. ಏಕೆಂದರೆ, ಸರ್ಕಾರದಿಂದ ಇದರ ಬಗ್ಗೆ ನೇರವಾದ ಅಭಿಪ್ರಾ ಯವನ್ನು ಕೇಳಿದರೆ, ಈ ವಿಚಾರದಲ್ಲಿ ಜುಡಿಷಿಯಲ್ ವಿಚಾರಣೆ ಮಾಡತಕ್ಕ ಅಗತ್ಯ ವಿಲ್ಲ. ನಾವು ಅಗತ್ಯವಾದಂಥ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ನೇರವಾಗಿ ಉತ್ತರ ಕೊಡುತ್ತಾರೆ. ಆದ್ದರಿಂದ ತಾವು ರೂಲ್ ಪ್ರಕಾರ ಈ ವಿಚಾರದಲ್ಲಿ ಏನು ನಮೂದು ಮಾಡಿದೆಯೋ ಅದರ ಪ್ರಕಾರ ಈ ಎಲ್ಲ ಅಂಶಗಳನ್ನೂ ತಾವು ಗಣನೆಗೆ ತೆಗೆದುಕೊಂಡು ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ತಮ್ಮ ಅನುಮತಿ

ಯನ್ನು ಕೊಡಬೇಕು. ತಮ್ಮ ಜೂರಿಸ್‌ಡಿಕ್ಷನ್‌ನೊಳಗೆ ಇಂತಹ ವಿಚಾರಗಳನ್ನು ಎಕ್ಸರ್‌ಸೈಜ್ ಮಾಡುವ ದೃಷ್ಟಿಯಿಂದ ರೂಲ್ಸ್ ಪ್ರಕಾರ ಏನು ಕಂಡೀಷನ್ಸ್ ಹೇಳಿದ್ದಾರೋ ಆ ಕಂಡೀಷನ್ಸ್‌ನ್ನು ಸ್ಯಾಟಿಸ್‌ಫೈ ಮಾಡುವ ಒಂದು ಅಧಿಕಾರ ತಮಗೆ ಇರುವುದರಿಂದ ತಾವು ಇದರ ಬಗ್ಗೆ ತಮ್ಮ ಅನುಮತಿಯನ್ನು ಕೊಡಬೇಕು. ಆದರೆ ಸರ್ಕಾರದ ಅಭಿಪ್ರಾಯವನ್ನು ಪಡೆದು ತಮ್ಮ ಅನುಮತಿಯನ್ನು ಕೊಡುವುದಕ್ಕೆ ಹೋಗಬೇಡಿ. ತಾವೇ ನೇರವಾಗಿ ಈ ವಿಚಾರವನ್ನು ತೀರ್ಮಾನ ಮಾಡಿ ತಮ್ಮ ಅನುಮತಿಯನ್ನು ಕೊಡಬೇಕು.

ಅಧ್ಯಕ್ಷರು — ಇದೇನೂ ಇವತ್ತು ಹೊಸದಾಗಿ ಬಂದಿರತಕ್ಕದ್ದಲ್ಲ. ನನ್ನ ಒಂದು ಅನುಭವದಲ್ಲಿ ಇಂಥಾದ್ದು ಬಹಳವಾಗಿ ಇಲ್ಲಿ ಬಂದಿದೆ. ಇದರ ಅರ್ಜೆನ್ಸಿ ಎಷ್ಟು, ಇದರ ಬಗ್ಗೆ ಯಾವ ರೀತಿ ಅನುಮತಿ ಕೊಡಬೇಕೆಂಬುದನ್ನು ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಗೋಲೀಬಾರ್ ಆಗಿರುವುದಕ್ಕಿಂತ ಬೇರೆ ಅರ್ಜೆನ್ಸಿ ವಿಷಯ ಇನ್ನು ಏನಿದೆ?

ಶ್ರೀ ಡಿ. ದೇವರಾಜ್ ಅರಸ್ : ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಈಗ ನಡೆದುದಲ್ಲ. ಸುಮಾರು 10-12 ದಿನಗಳ ಮೊದಲೇ ನಡೆದುದು. ಅಲ್ಲಿ ನಡೆದಂಥ ಘಟನೆ ಒಂದು ರೀತಿಯಲ್ಲಿ ಬಹಳ ಸಾಮಾನ್ಯವಾಗಿದ್ದರೂ ಹಿಂದೆ ಎಲ್ಲೂ ನಡೆಯದೇ ಇಂತಕ್ಕ ಘಟನೆಯಾಗಿದೆ. ಪೋಲೀಸ್ ಅಧಿಕಾರಿಗಳ ಮನೆಗೆ ನುಗ್ಗಿ ದೊಡ್ಡದಾಗಿ ಹಗರಣ ಮಾಡಿರತಕ್ಕದ್ದು. ಅದರ ಬಗ್ಗೆ ಗೋಲಿ ಬಾರ್ ಆಗಿರತಕ್ಕದ್ದು. ಇವತ್ತಿನ ಪರಿಸ್ಥಿತಿಯಲ್ಲಿ ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಕಾರಣ 6 ಕೇಸುಗಳು ಈಗಾಗಲೇ ಕೋರ್ಟಿಗೆ ಹೋಗಿದ್ದು ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಆಗುತ್ತಿದೆ. ಅಂಥಾದ್ದರಲ್ಲಿ ಅದನ್ನು ಈಗ ಇಲ್ಲಿ ಚರ್ಚೆ ಮಾಡಿದರೆ ಅದು ಸಬ್‌ಜ್ಯುಡೀಸ್ ಆಗುತ್ತದೆ. ಆದ್ದರಿಂದ ಈ ವಿಚಾರವನ್ನು ಈಗ ಇಲ್ಲಿ ಚರ್ಚೆಮಾಡುವುದು ಬೇಡ.

ಶ್ರೀ ಟಿ. ಆರ್. ಶಾಮಣ್ಣ : ಅಲ್ಲಿ ಮನೆಗೆ ನುಗ್ಗಿ ಲೂಟಿಮಾಡುವಾಗ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡಿಸುತ್ತಿದ್ದೇವೆಂದು ಹೇಳಿದರೆ ಹೇಗೆ ? ಅಲ್ಲ ಮನೆಗೆ ನುಗ್ಗಿ ಸಾಮಾನುಗಳನ್ನು ಲೂಟಿ ಮಾಡುತ್ತಿರುವುದಕ್ಕೂ ನಿಮ್ಮ ಎನ್‌ಕ್ವೈರಿಗೂ ಏನು ಸಂಬಂಧ? ಅದಕ್ಕೆ ಸರಿಯಾದ ಬಂದೋಬಸ್ತ್ ಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್ : ಆ ತರಹ ಅಪಾದನೆಗಳು ಬಂದಿದ್ದುವು. ಅದನ್ನೂ ಸಹ ಎನ್‌ಕ್ವೈರಿ ಮಾಡಿಸಿದ್ದಾಗಿದೆ. ಈಗಾಗಲೇ ಐ. ಜಿ ಪಿ. ಅವರನ್ನು ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ನಿಜಾಂಶವಿದ್ದರೆ ಅದಕ್ಕೆ ತಕ್ಕ ಬಂದೋಬಸ್ತನ್ನು ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ : ಎನ್‌ಕ್ವೈರಿ ಮಾಡಿಸುತ್ತಿದ್ದೇವೆಂದು ಹೇಳಿದರು. ತಪ್ಪಿತಸ್ಥ ಅಧಿಕಾರಿಯನ್ನು ಅಲ್ಲಿಯೇ ಇಟ್ಟುಕೊಂಡು ಏನು ಎನ್‌ಕ್ವೈರಿ ಮಾಡಿಸುವುದು ? ಆ ಅಧಿಕಾರಿ ಸ್ಥಳದಲ್ಲಿದ್ದು ವಿಚಾರಣೆ ಮಾಡಿದರೆ ಸರಿಯಾದ ನಿಜಾಂಶ ಹೊರಬೀಳುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಪೋಲೀಸ್ ಅಧಿಕಾರಿಯನ್ನು ಕೂಡಲೇ ಬೇರೆ ಕಡೆಗೆ ವರ್ಗಮಾಡಬೇಕು. ನಂತರ ವಿಚಾರಣೆ ಮಾಡಿದರೆ ನ್ಯಾಯ ಸಿಗುತ್ತದೆ.

ಅಧ್ಯಕ್ಷರು : ಇದರ ಬಗ್ಗೆ ಇಲ್ಲಿ ಜಾಸ್ತಿ ಈಗ ಚರ್ಚೆ ಮಾಡುವುದು ಸರಿಯಲ್ಲ.

ಶ್ರೀ ಟಿ. ಎಂ. ಮಂಜುನಾಥ್ : ಈಗಲೂ ಕೂಡಾ ಅನೇಕ ದುರ್ಘಟನೆಗಳು ಅಲ್ಲಿ ನಡೆಯುತ್ತಿವೆ. ಒಬ್ಬ ನಾಗರೀಕನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಕೈಗೆ ಬೇಡಿ ಹಾಕಿರುವುದನ್ನು ನಾನು ನೋಡಿದ್ದೇನೆ. ಅಂತಹ ಘಟನೆ ನಡೆದಿದೆ. ದಿನ ನಿತ್ಯ ಅರಸೀಕೆರೆ ಸ್ಮಶಾನದಂತಾಗಿದೆ. ಆದ್ದರಿಂದ ಸಭಾ ನಾಯಕರು ನಮಗೆ ಈಗಲಾದರೂ ನ್ಯಾಯ ವಿಚಾರಣೆ ಬಗ್ಗೆ ಅಶ್ವಾಸನೆ ಕೊಡಲಿ.

ಅಧ್ಯಕ್ಷರು : ಇದರ ಬಗ್ಗೆ ಇನ್ನು ಹೆಚ್ಚಿನ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಟಿ ಎಂ. ಮಂಜುನಾಥ : ಸರ್ಕಾರ ಎನ್‌ಕ್ವಾಯರಿ ಮಾಡಿಸಬೇಕಾದರೆ, ಅಲ್ಲಿ ಯಾರು ತಪ್ಪಿತಸ್ಥ ಅಧಿಕಾರಿಗಳು ಇದ್ದಾರೆ, ಅವರು ಅಲ್ಲೇ ಇದ್ದರೆ ನ್ಯಾಯ ಎಲ್ಲಿ ಸಿಗುತ್ತದೆ?

ಶ್ರೀ ಡಿ. ದೇವರಾಜ್ ಅರಸ್ : ಎನ್‌ಕ್ವಯರಿ ಮಾಡುವುದು ಅಲ್ಲಿಯ ಅಧಿಕಾರಿಗಳಿಂದ ಅಲ್ಲ. ನಮ್ಮ ಸಿ. ಐ. ಡಿ. ಡಿಪಾರ್ಟ್‌ಮೆಂಟಿನಿಂದ ಎನ್‌ಕ್ವಯರಿ ಮಾಡಿಸುತ್ತಿದ್ದೇವೆ. Six cases have been chargesheeted and they are before the Court. That is why it is sub-judice.

(ಕೆಲವು ಸದಸ್ಯರು ಎದ್ದು ನಿಂತರು)

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮೇಲೆ ಪುನಃ ಅದರ ಬಗ್ಗೆ ವಾದ ಮಾಡುವುದಕ್ಕಾಗುವುದಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ : ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದರಿಂದ ಅದು ಸಬ್‌ಜುಡಿಸ್ ಎಂದು ಹೇಳಿದ್ದಾರೆ. ಆದರೆ ನಾವು ಇಲ್ಲಿ ಸಬ್

ಜುಡಿಸ್ ಆಗತಕ್ಕ ವಿಷಯವನ್ನು ಚರ್ಚೆ ಮಾಡುವುದಿಲ್ಲ. ಒಂದು ವಿಷಯ ಕೋರ್ಟಿನಲ್ಲಿ ಪ್ರಸ್ತಾಪ ಮಾಡುವುದಿದ್ದರೆ, ಅದು ಇಲ್ಲಿ ಬರುವುದಿಲ್ಲ. ನಿಮ್ಮ ಚಾರ್ಜ್‌ಶೀಟಿನಲ್ಲಿರತಕ್ಕಂಥ ವಿಷಯ ನೇರವಾಗಿ ಕೋರ್ಟಿನಲ್ಲಿ ತೀರ್ಮಾನ ವಾಗುತ್ತದೆ. ಆದರೆ ಇಲ್ಲಿ ಕೋರ್ಟಿನಲ್ಲಿ ಬಾರದಿರತಕ್ಕಂಥಹ ಪ್ರಶ್ನೆಗಳು ಹಲವಾರು ಇವೆ. ಅವುಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡ ಬೇಕೆಂದು ಕೇಳುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್ : ಕೋರ್ಟಿನಲ್ಲಿ ಡಿಫೆಂಡ್ ಮಾಡತಕ್ಕವರೂ ಇರುತ್ತಾರೆ, ಪರವಾಗಿ ವಾದ ಮಾಡುವವರೂ ಇರುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ : ಮಾನ್ಯ ಮುಖ್ಯಮಂತ್ರಿಯವರು ನೇರವಾಗಿ ಅರಸೀಕೆರೆಯ ಘಟನೆ ಇಲ್ಲಿಯವರೆಗೆ ನಡೆಯದಂತಹ ಘಟನೆ ಎಂದು ಒಪ್ಪಿಕೊಂಡಿ ದ್ದಾರೆ. ಈಗ ಮೊಕದ್ದಮೆಗಳನ್ನು ಕೋರ್ಟಿಗೆ ಹಾಜರುಪಡಿಸಿದ್ದಾರೆ. ವಿಚಾರ ರಣೆ ಸಂಬಂಧಪಟ್ಟ ಯಾವ ವಿಷಯವನ್ನು ಸಹ ನಾವು ಇಲ್ಲಿ ಪ್ರಸ್ತಾಪ ಮಾಡುತ್ತಾ ಇಲ್ಲ. ಆದರೆ ಆ ಪ್ರಕರಣಕ್ಕೆ ಮೂಲಭೂತವಾದ ಕಾರಣ ಏನೆಂಬು ದನ್ನು ಪತ್ತೆ ಮಾಡಬೇಕಾಗಿದೆ. ಈ ವಿಷಯ ನೇರವಾಗಿ ಕೋರ್ಟಿಗೆ ಸಂಬಂಧ ಪಟ್ಟದ್ದಲ್ಲ. ಯಾವ ಅಧಿಕಾರಿಯ ಅವಿವೇಕದಿಂದ, ಮತ್ತು ಯಾವ ಅಧಿ ಕಾರಿಯ ತಪ್ಪು ಆಜ್ಞೆಯಿಂದ ಈ ಅನಾಹುತ ನಡೆದಿದೆ ಎಂಬುದು ಮುಖ್ಯ. ಆದ್ದರಿಂದ ಮುಖ್ಯಮಂತ್ರಿಯವರು ಇದು ಸಬ್‌ಜುಡಿಸ್ ಎಂದು ಹೇಳುವುದು ಸರಿಯಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ನಾನು ಲೀಗಲ್ಲಾಗಿ ಸಬ್‌ಜುಡಿಸ್ ಇರುವು ದರಿಂದ ಹೇಳುತ್ತಿದ್ದೇನೆ. ಈಗ ಕೇಸಸ್ ಹಾಕಿದ್ದಾರೆ. ಜಿಲ್ಲಾಧಿಕಾರಿಯದು ತಪ್ಪೋ, ಸರಿಯೋ ಅಥವಾ ಇತರ ಅಧಿಕಾರಿಗಳದು ತಪ್ಪೋ ಸರಿಯೋ ಇತ್ಯಾದಿ ಕೋರ್ಟಿನಲ್ಲಿ ಗೊತ್ತಾಗುತ್ತದೆ. ಈಗ ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಮ್ಮ ಸ್ನೇಹಿತರು ಏಕೆ ಹೀಗೆ ಹೇಳುತ್ತಾರೆಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ನಾನು ಉದಾಹರಣೆಗೆ ಒಂದು ವಿಚಾರ ಹೇಳುತ್ತೇನೆ. ಅಲ್ಲಿ ಜಿಲ್ಲಾಧಿಕಾರಿಗಳು ಅಕ್ಕಿ ಮಾರಾಟಗಾರರಿಂದ ಅಕ್ಕಿಯನ್ನು ಸಂಗ್ರಹಿಸಬೇಕೆಂದು ರಿಕ್ವಿಸಿಶನ್ ಆರ್ಡರ್ ಇಶ್ಯೂ ಮಾಡಿದ್ದಾರೆ. ಅದು ಯಾವ ಕೋರ್ಟಿನಲ್ಲಿ ಚರ್ಚೆಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಅರಸೀಕೆರೆಯಲ್ಲಿ ಜ್ಯುಡಿಶಿಯಲ್ ಎನ್‌ಕ್ವಯರಿಯಾಗುವಾಗ ಯಾರು ಅಲ್ಲಿ ಅಪರಾಧಿಗಳು ಅಥವಾ ತಪ್ಪಿತಸ್ಥರಿದ್ದಾರೆ, ಅಂಥವರನ್ನು ಸಸ್ಪೆಂಡ್ ಮಾಡದೆ ಜ್ಯುಡಿಶಿಯಲ್ ಎನ್‌ಕ್ವಯರಿ ಮಾಡಿದರೆ ಯಾವ ನ್ಯಾಯ ದೊರೆಯುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ನೀವು ಆಗಲೇ ತೀರ್ಮಾನ ಮಾಡಿದ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಅಲ್ಲಿ ಇರತಕ್ಕಂತಹ ಎರಡು ಪಾರ್ಟಿಗಳನ್ನು ಸಹ ಹೊರಗಡೆ ಇಟ್ಟು ಮೂರನೆಯವರಿಂದ ಎನ್‌ಕ್ವಯರಿ ಮಾಡುವುದಕ್ಕೆ ಹಾಕಿ.

ಶ್ರೀ ಡಿ. ದೇವರಾಜ ಅರಸ್ :—ನಾನು ಸಿ.ಐ.ಡಿ. ಡಿಪಾರ್ಟ್‌ಮೆಂಟಿನವರನ್ನು ಅದಕ್ಕೆ ಹಾಕಿದ್ದೇನೆ ಎಂದರೆ, ಅವರು ಆ ಸ್ಥಳದವರು ಆಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ :—ಅಲ್ಲಿ ಅಧಿಕಾರಿಗಳು ಮಾಡಿದ ಅವಿವೇಕತನದ ಘಟನೆಯ ಬಗ್ಗೆ ಜ್ಯುಡಿಶಿಯಲ್ ಎನ್‌ಕ್ವಯರಿ ಆಗಲೇಬೇಕು.

SRI H. M. CHANNABASAPPA :—I rise on a point of order. It is specifically laid down in sub-rule (vii) of rule 52 that the motion shall not deal with any matter which is under adjudication by a Court of law having jurisdiction in any part of India. Now, by trying to discuss and make out certain cases as each member understands it, will actually lead to discussions of matters of fact. The very object of this rule is that matters of fact pertaining to any case which is under adjudication by a Court of law shall not be a subject matters for discussion here. Therefore, I submit that in view of the fact that so many cases have been launched before the Court and the matter is under adjudication it is not fair that any discussion should take place on this subject.

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಚನ್ನಬಸಪ್ಪನವರು ಹೇಳಿದ್ದನ್ನು ಅಷ್ಟು ಸುಲಭವಾಗಿ ಒಪ್ಪುವುದಕ್ಕಾಗುವುದಿಲ್ಲ. ಅವರು ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿರುವ ರೂಲನ್ನು ಕೋಟ್ ಮಾಡಿ ಹೇಳಿದ್ದಾರೆ. ನಾವು ಚರ್ಚೆ ಮಾಡಬೇಕೆಂದಿರುವುದು—ಯಾರು ಅಪರಾಧಿ, ಯಾರು ತಪ್ಪಿತಸ್ಥ ಎಂಬುದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಯಾವುದು ಕೇಸ್ ಇದೆ. ಅದರ ಮೆರಿಟ್ಸ್ ಬಗ್ಗೆ ಚರ್ಚೆ ಮಾಡಿದರೆ ಅದು ಸಬ್‌ಜ್ಯುಡಿಸ್ ಆಗುತ್ತದೆ. ಆದರೆ ಅಜರ್ನ್‌ಮೆಂಟ್ ಮೋಷನ್ ಕಳಿಸಿರುವುದು ಅದರ ಬಗ್ಗೆಯಲ್ಲ. ಒಟ್ಟಾರೆ ಸರ್ಕಾರದ ನೀತಿ, ಆಹಾರಧಾನ್ಯದ ಬಗ್ಗೆ ಇವರು ಯಾವ ನೀತಿ ಹಾಕಿಕೊಂಡಿದ್ದಾರೆ, ಮತ್ತು ಆ ವಿಚಾರದಲ್ಲಿ ಅರಸೀಕೆರೆಯಲ್ಲಿ ಯಾವ ರೀತಿ ಇವರು ವರ್ತಿಸಿದ್ದಾರೆ ಎಂಬುದರ ಬಗ್ಗೆ ಈಗ ನಿಲುವಳಿ ಸೂಚನೆ ಕಳುಹಿಸಿರುವುದು.

2-30 P. M.

ಆದ್ದರಿಂದ ಅದು ಪಾಲಿಸಿ ಮ್ಯಾಟರ್. ಅದನ್ನು ಚರ್ಚೆ ಮಾಡಬೇಕು.

ಅಧ್ಯಕ್ಷರು :-ತಾವು ಓದಲಿಲ್ಲ ಎಂದು ಕಾಣುತ್ತದೆ. ಎರಡೂ ಇಂಟರ್ ಕನೆಕ್ಟ್ ಆಗಿದೆ. ಆದ್ದರಿಂದ ಅದರ ಮೇಲೆ ಚರ್ಚೆಗೆ ನಾನು ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ :-ಶ್ರೀಮಾನ್ ಚನ್ನಬಸಪ್ಪನವರು ಇದು ಹುತ್ತಿ ಚರ್ಚೆಗೆ ಬಾರದೇ ಇರುವ ವಿಷಯ ಎಂದು ಹೇಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ವಿಚಾರ ಕೋರ್ಟ್ ಆಫ್ ಲಾ ದ ಜೂರಿಸ್‌ಡಿಕ್ಷನ್‌ನಲ್ಲಿರುವುದರಿಂದ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದರಲ್ಲಿ ನಮ್ಮ ಆಪಾದನೆ ಏನೆಂದರೆ ಆಹಾರದ ವಿತರಣೆ ಆಗುವಂಥಾದ್ದು ಜಿಲ್ಲಾಧಿಕಾರಿಗಳ ಅವಿವೇಕದಿಂದ ಆ ಪ್ರಸಂಗ ನಡೆಯಿತು. ಇದು ಕೋರ್ಟ್ ಜ್ಯೂರಿಸ್ ಡಿಕ್ಷನ್ನಿಗೆ ಬರುವುದಿಲ್ಲ. ಇದನ್ನು ಜಿಲ್ಲಾಧಿಕಾರಿಯು ಸಬಾರ್ಡಿನೇಟ್ ಎನ್‌ಕ್ವೈರಿ ಮಾಡಬೇಕು ಎಂದರೆ ಅದು ಸಮಂಜಸವಾಗುತ್ತದೆಯೇ ?

ಅಧ್ಯಕ್ಷರು :- ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ ಸಿ ಐ ಡಿ. ಡಿಪಾರ್ಟ್ ಮೆಂಟಿನವರನ್ನು ಕಳುಹಿಸುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :- ಈ ವಿಷಯದಲ್ಲಿ ಒಂದು ಮೂಲಭೂತವಾದ ಪ್ರಶ್ನೆ ಏನೆಂದರೆ ಇವೊತ್ತು ಇವರು ದೇಶದಲ್ಲಿ ಜನರನ್ನು ಗುಂಡಿಟ್ಟು ಕೊಲ್ಲು ತ್ತಿದ್ದಾರೆ. ಇವರನ್ನು ಹೇಳುವವರು ಕೇಳುವವರು ಯಾರೂ ಇಲ್ಲವೇ ? ಇದನು ತಾವೆಲ್ಲರೂ ಆತ್ಮೀಯತೆಯಿಂದ ವಿಮರ್ಶೆ ಮಾಡಬೇಕು.

ಅಧ್ಯಕ್ಷರು :- ತಾವೆಲ್ಲರೂ ಇಲ್ಲಿಗೆ ಬಂದಿರುವುದು ರಾಜ್ಯವನ್ನು ಕಟ್ಟುವು ದಕ್ಕೆ. ಆದ್ದರಿಂದ ದೇಶವನ್ನು ಹಾಳು ಮಾಡುವುದಕ್ಕೆ ಯಾರೂ ಹೋಗಬೇಡಿ. ಇದು ದೇವರ ಸಭೆ ಇದ್ದಹಾಗೆ. ದಯಮಾಡಿ ಇಲ್ಲಿ ಕೆಟ್ಟ ಶಬ್ದಗಳನ್ನು ಉಪ ಯೋಗ ಮಾಡಬೇಡಿ.

ಶ್ರೀ ಟಿ. ಎಂ. ಮಂಜುನಾಥ :- ಮಾನ್ಯ ಅಧ್ಯಕ್ಷರೇ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಅದು ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಇವೊತ್ತಿನ ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅರಸೀಕೆರೆಯಲ್ಲಿ ನಡೆದ ಘಟನೆಯ ಬಗ್ಗೆ ವಿಷಯವನ್ನು ತಿಳಿದುಕೊಂಡು ಬರುವುದಕ್ಕೆ 8—10 ಜನ ಯುವಕ ಕಾಂಗ್ರೆಸ್ಸಿನವರನ್ನು ಕಳುಹಿಸಿದ್ದಾರೆ ಎಂದು ಹೇಳಿದ್ದಾರೆ. ಅದಕ್ಕಾಗಿ ನನ್ನ ಒಂದು ಸಲಹೆ ಏನೆಂದರೆ ಒಂದೇ ಪಕ್ಷದವರನ್ನು ಆ ರೀತಿ ಕಳುಹಿಸುವುದಕ್ಕೆ ಬದಲಾಗಿ ಎಲ್ಲಾ ಪಕ್ಷದವರನ್ನೂ ಒಳಗೊಂಡ 8—10 ಜನ ಶಾಸಕರನ್ನು ಅರಸೀಕೆರೆಗೆ ಕಳುಹಿಸಿ ಅವರಿಂದ ಒಂದು ನಿಜವಾದ ವರದಿಯನ್ನು ತರಿಸಿಕೊಂಡು ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎಂದು ವಿಚಾರ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಅಧ್ಯಕ್ಷರು :- ಇದು ಹೊಸ ಸೂಚನೆ. ಈ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

SRI T. R. SHAMANNA. – The point that I have raised under rule 50 is that the police are still harassing the people even after the affair is over, and I want that harassment should be stopped by the Government.

MADAM SPEAKER. –The Chief Minister has said that he will look into the matter.

SRI T R. SHAMANNA —I want that strict instructions should be given to see that the harassment is stopped.

MADAM SPEAKER.—On the floor of the house an assurance has been given; what more does the hon. Member want?

ALLEGED MARATHI PEOPLE'S EXCESSES OVER KANNADIGAS IN BELGAUM

ಶ್ರೀ ಎಸ್. ಬಂಗಾರಪ್ಪ.—(ಸೊರಬ) ಮಾನ್ಯ ಅಧ್ಯಕ್ಷರೇ ರೂಲ್ 50ರ ಪ್ರಕಾರ ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅದು ಏನೆಂದರೆ ಕಳೆದ ತಿಂಗಳು 23ನೇ ತಾರೀಖು ಬೆಳಗಾಂ ನಗರದಲ್ಲಿ ಮರಾಠಿ ಜನ ಕನ್ನಡಿಗರ ಮೇಲೆ ಬಹಳ ಪುಂಡಾಟಿಕೆಯನ್ನು ಮಾಡಿದ್ದಾರೆ. ಕನ್ನಡದ ಬೋರ್ಡುಗಳಿಗೆ ಚಪ್ಪಲಿಯನ್ನು ಎಸೆದಿದ್ದಾರೆ. ಕನ್ನಡದ ಶಾಲೆಗಳಿಗೆ ನುಗ್ಗಿದ್ದಾರೆ. 60 ಮ್ಯಾಪ್‌ಗಳನ್ನು ಸುಟ್ಟು ಹಾಕಿದ್ದಾರೆ. ಹೆಣ್ಣುಮಕ್ಕಳ ಉಪಾಧ್ಯಾಯರ ಮೇಲೆ ಕೆಟ್ಟ ಶಬ್ದಗಳನ್ನು ಉಪಯೋಗ ಮಾಡಿದ್ದಾರೆ. ಮಹಾರಾಷ್ಟ್ರದ ವಿಧಾನ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಗವಾಯ್ ಅವರು 23ನೇ ತಾರೀಖು ನಮ್ಮ ರಾಜ್ಯಕ್ಕೆ ಬಂದಿದ್ದಾಗ ಅವರನ್ನು ಸ್ಟೇಟ್ ಗೆಸ್ಟ್ ಎಂದು ಟ್ರೀಟ್ ಮಾಡಿದ್ದಾರೆ. ಅವರಿಗೆ ಕಾರು ಇತ್ಯಾದಿ ಸೌಕರ್ಯಗಳನೆಲ್ಲಾ ಕೊಟ್ಟಿದ್ದಾರೆ. ಆದರೂ ಅವರು ಬೆಳಗಾವಿನಲ್ಲಿ ಮರಾಠಿ ಜನಗಳು ಗಲಾಟೆ ಮಾಡಿದ್ದಾರೆ. ಅವರು ಅದರ ನಾಯಕತ್ವವನ್ನು ವಹಿಸಿದ್ದಾರೆ. ಅವರು ಕನ್ನಡ ಶಾಲೆಗಳಿಗೆ ನುಗ್ಗಿದ್ದಾರೆ. ತುಂಬಾ ಗಲಾಟೆ ಮಾಡಿದ್ದಾರೆ. ಕನ್ನಡ ಜನಗಳಿಗೆ ತೊಂದರೆ ಮಾಡಿದ್ದಾರೆ. ಇದರಿಂದಾಗಿ ಅಲ್ಲಿ ಕನ್ನಡ ಜನಗಳು ಜೀವನ ಮಾಡುವುದಕ್ಕೆ ಕಷ್ಟವಾಗಿದೆ.

ಅಧ್ಯಕ್ಷರು.—ತಾವು ಕಳುಹಿಸಿರುವುದನ್ನು ನಾನು ಈಗತಾನೆ ಸರ್ಕಾರಕ್ಕೆ ಕಳುಹಿಸುತ್ತಿದ್ದೇನೆ. ಇದನ್ನು ನಿಲುವಳಿ ಸೂಚನೆ ಎಂದು ಪರಿಗಣನೆ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಕಾಲ್ ಅಟೆನ್‌ಷನ್ ನೋಟೀಸ್ ಎಂದು ಪರಿಗಣನೆ ಮಾಡುತ್ತೇನೆ. ಇದಕ್ಕೆ ಸರ್ಕಾರದಿಂದ ಉತ್ತರ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೆ ಅನುಮತಿ ಕೊಡುವ ಅಥವಾ ಬಿಡುವ ಅಧಿಕಾರ ತಮಗೆ ಇದೆ. ಅದರಿಂದ ನಾನು ಇದನ್ನು ತಮಗೆ ಬಿಡುತ್ತೇನೆ. ಇದಕ್ಕೆ ತಾವು ಅನುಮತಿ ಕೊಟ್ಟರೆ ಇದು ಇಲ್ಲಿ ಚರ್ಚೆಗೆ ಬರುತ್ತದೆ. ಇಲ್ಲದಿದ್ದರೆ ಇದು ಚರ್ಚೆಗೆ ಬರುವುದಿಲ್ಲ. ಈ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ನಮಗೆ ಬೇಕಾಗಿದೆ.

ಅಧ್ಯಕ್ಷರು.—ಈಗ ನಾನು ಇದನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಬೆಳಗಾವಿಗೆ ಮಹಾರಾಷ್ಟ್ರದ ಲೆಜಿಸ್ಲೆಟೀವ್ ಕೌನ್ಸಿಲ್ಲಿನ ಉಪಾಧ್ಯಕ್ಷರಾದ ಶ್ರೀ ಗವಾಯ್ ಅವರು ಬಂದಿದ್ದಾಗ ಅಲ್ಲಿಗೆ ಶಿವಸೇನೆಯ ಮುಖಂಡರು ಮತ್ತು ನಾಯಕರು ಕೆಲವರು ಬಂದಿದ್ದರು. ಅವರ ನಾಯಕತ್ವದಲ್ಲಿ ಕೆಲವರು ಮರಾಠಿಗರು ಒಂದು ಪ್ರೊಸೆಷನ್ ತೆಗೆದುಕೊಂಡು ಹೋಗಿ ಕನ್ನಡ ಶಾಲೆಗಳಿಗೆ ನುಗ್ಗಿ ಅಲ್ಲಿದ್ದ ಕೆಲವು ಸಾಮಾನುಗಳನ್ನು ಬೆಂಕಿ ಹಾಕಿ ಸುಟ್ಟು ಹಾಕಿದ್ದಾರೆ. ನಾನು ಅದನ್ನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಕಿಟಕಿಯ ಗ್ಲಾಸುಗಳನ್ನೆಲಾ ಒಡೆದು ಹಾಕಿದ್ದಾರೆ. ಕನ್ನಡ ಜನಗಳ ಮೇಲೆ ದುರ್ವರ್ತನೆ ಮಾಡಿದ್ದಾರೆ. ಮಹಾರಾಷ್ಟ್ರದ ಕೌನ್ಸಿಲ್ಲಿನ ಉಪಾಧ್ಯಕರನ್ನು ನಮ್ಮ ಸ್ಟೇಟಿನ ಗೆಸ್ಟ್ ಎಂದು ಟ್ರೀಟ್ ಮಾಡಿ ಅವರಿಗೆ ಕಾರು ಕೊಟ್ಟು ಅವರಿಗೆ

(ಶ್ರೀ ಎಸ್. ಬಂಗಾರಪ್ಪ)

ಸೌಕರ್ಯವನ್ನು ಒದಗಿಸದ್ದರೂ ಕೂಡ ಅವರು ಮರಾಠಿ ಜನಗಳ ನಾಯಕತ್ವವನ್ನು ವಹಿಸಿ ಭಾಷಣ ಮಾಡಿ ಕನ್ನಡ ಜನಗಳಿಗೆ ತೊಂದರೆಯನ್ನು ಕೊಟ್ಟಿದ್ದಾರೆ. ಕನ್ನಡ ಬೋರ್ಡುಗಳಿಗೆ ಚಪ್ಪಲಿಯನ್ನು ಎಸೆದಿದ್ದಾರೆ. ರಾಜ್ಯ ಸರ್ಕಾರದವರು ಮಹಾರಾಷ್ಟ್ರದ ಲೆಜಿಸ್ಲೇಟೀವ್ ಕೌನ್ಸಿಲ್ಲಿನ ಉಪಧ್ಯಾಕ್ಷರನ್ನು ಸ್ಟೇಟ್‌ಗೆಸ್ಟ್ ಎಂದು ಟ್ರೀಟ್ ಮಾಡಿದರೂ ಸಹ ಅವರು ಗಲಾಟೆ ಮಾಡತಕ್ಕ ಮರಾಠಿ ಜನಗಳ ನಾಯಕತ್ವವನ್ನು ಏತಕ್ಕೆ ವಹಿಸಿದರು ಎನ್ನುವ ಬಗ್ಗೆ ನಮ್ಮ ಸರ್ಕಾರದವರು ಮಹಾರಾಷ್ಟ್ರ ಸರ್ಕಾರಕ್ಕೆ ಬರೆದು ಅವರ ವಿವರಣೆಯನ್ನು ಏತಕ್ಕೆ ಕೇಳಲಿಲ್ಲ? ಇದರ ಜೊತೆಗೆ ಪುಣೆಯ ಮೇಯರ್ ಸುಧೀರ್ ಜೋಷಿ ಎನ್ನುವವರು ಮತ್ತು ಮಹಾರಾಷ್ಟ್ರದ ಶಿವಸೇನೆಯ ಮುಖಂಡರು ಬೆಳಗಾವಿಗೆ ಬಂದು ಹೋರಾಟ ಮಾಡಿ ಕನ್ನಡ ಜನಗಳಿಗೆ ತೊಂದರೆಯನ್ನುಂಟು ಮಾಡಿದ್ದಾರೆ. ಇದು ಪತ್ರಿಕೆಗಳಲ್ಲಿ ಕೂಡ ಬಂದಿದೆ. ಈ ಹೋರಾಟಕ್ಕೆ ಶಿವಸೇನೆಯವರು ಬೇಕಾದ ಜನ ಮತ್ತು ಹಣವನ್ನು ಕಳುಹಿಸುತ್ತಿದ್ದಾರೆ.

ಈ ಮಾನ್ಯ ಸಭೆಯ ಸದಸ್ಯರಾದ ಶ್ರೀ ಸೆಯನಕ ಅವರು ಸಹ ಇದರ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ಪೋಲೀಸರು ರಕ್ಷಣೆ ಕೊಡದಿದ್ದರೆ ಕನ್ನಡದ ಜನರನ್ನು ತುಳಿದುಹಾಕುತ್ತೇವೆ ಮತ್ತು ಪೂರ್ತಿಯಾಗಿ ನಾಶ ಮಾಡುತ್ತೇವೆಂದು ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಸಹ ಬಂದಿದೆ. ಇದರ ಬಗ್ಗೆ ಸರ್ಕಾರದವರು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ ಮೊದಲು ಮಹಾರಾಷ್ಟ್ರ ವಿಧಾನಪರಿಷತ್ತಿನ ಉಪಾಧ್ಯಕ್ಷರು ಕೊಟ್ಟಿರುವ ಹೇಳಿಕೆ ಏನಿದೆ ಅದರ ಬಗ್ಗೆ ವಿಚಾರಣೆಯಾಗಬೇಕು. ಇದರ ಜೊತೆಗೆ ಈ ಸದನದ ಸದಸ್ಯರುಗಳನ್ನು ಒಳಗೊಂಡಂತಹ ಒಂದು ಕಮಿಟಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟು ಸಂಪೂರ್ಣವಾದ ತನಿಖೆಯನ್ನು ಮಾಡಿಸಬೇಕು. ಇದು ಪ್ರಾಮುಖ್ಯವಾದ ವಿಷಯವಾದ್ದರಿಂದ ಸರ್ಕಾರ ಇಲ್ಲಿಯ ವರೆಗೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು.

SRI B. B. SAYNAK.—Madam Speaker, I want to know whether you have allowed this adjournment motion. I find Sri Bangarappa is making a statement here.

MADAM SPEAKER.—The hon. member is merely explaining his motion. I request him to finish soon.

ಶ್ರೀ ಎಸ್. ಬಂಗಾರಪ್ಪ.—ಈ ರೀತಿಯ ದೌರ್ಜನ್ಯ ಮರಾಠಿ ಜನರಿಂದ ಕನ್ನಡ ಜನರ ಮೇಲೆ ನಡೆದಾಗಲೂ ಸಹ ಸರ್ಕಾರದವರು ಸುಮ್ಮನೆ ಕುಳಿತು

ಕೊಳ್ಳಲು ಕಾರಣವೇನು? ಸರ್ಕಾರದವರೇ ಇದರ ಬಗ್ಗೆ ಮುಂದೆ ಬಂದು ಸ್ವಪ್ರೇರಣೆಯಾದ ಹೇಳಿಕೆ ಕೊಡಬೇಕಾಗಿತ್ತು; ಆದರೆ ಆ ರೀತಿ ಏನನ್ನೂ ಹೇಳಿಲ್ಲ. ಈಗಲಾದರೂ ಹೇಳಿಕೆ ಕೊಡಬೇಕು ಮತ್ತು ಇದರ ಬಗ್ಗೆ ಇಲ್ಲಿ ತನಿಖೆ ಯಾಗಬೇಕು ಮತ್ತು ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಬಂಗಾರಪ್ಪನವರು ಕಳುಹಿಸಿರುವ ಮೋಷನನ್ನು ನಿಲುವಳಿ ಸೂಚನೆಯಾಗಿ ಪರಿಗಣನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಕಾಲಿಂಗ್ ಅಟೆಂಷನ್ ನೋಟೀಸ್ ಆಗಿ ಪರಿಗಣಣೆ ಮಾಡಿ ಸರ್ಕಾರಕ್ಕೆ ಕಳಿಸಿ ಕೊಡುತ್ತೇನೆ. ಸರ್ಕಾರದವರು ತಾವು ಹೇಳಿರುವುದನ್ನೆಲ್ಲಾ ಕೇಳಿದ್ದಾರೆ. ಅದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ:-- ಕನ್ನಡಿಗರ ಮೇಲೆ ಮೇಲೆ ಅಲ್ಲಿ ಇಷ್ಟೊಂದು ದೊಡ್ಡ ರೀತಿಯಿಂದ ದೌರ್ಜನ್ಯ, ಹಿಂಸೆ ನಡೆಯುತ್ತಿದ್ದರೂ ಸಹ ಸರ್ಕಾರದವರು ಅದರ ಬಗ್ಗೆ ಪೂರ್ಣವಾದ ವರದಿಯನ್ನು ತರಿಸಿಕೊಂಡಿಲ್ಲ. ಆದಕಾರಣ ಇದರ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಟ್ಟರೆ ಯಾರು ತಪ್ಪಿತಸ್ಥರು ಎಂಬುದು ಗೊತ್ತಾಗುತ್ತದೆ,

ಶ್ರೀ ಕೋಣಂದೂರು ಲಿಂಗಪ್ಪ -- ನಾನೂ ಸಹ ಇದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮ್ಮ ಅವಗಾಹನೆಗೆ ಕಳಿಸಿಕೊಟ್ಟಿದ್ದೇನೆ ಮಹಾಜನ ವರದಿಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಬೇಕೆಂದು ಕಳೆದ ಅಧಿವೇಶನ ದಲ್ಲಿ ನಾವು ಸರ್ವಾನುಮತದಿಂದ ನಿರ್ಣಯ ಮಾಡಿ ಅದನ್ನು ಪ್ರಧಾನಮಂತ್ರಿ ಗಳಿಗೆ ಕಳಿಸಿಕೊಟ್ಟಿದ್ದೇವೆ. ಮಹಾಜನ್ ಆಯೋಗವನ್ನು ನೇಮಕ ಮಾಡಿದ್ದು ಕೂಡ ಈ ಮರಾಠಿ ಸ್ನೇಹಿತರ ಒತ್ತಾಯದಿಂದಲೇ ಹೊರತು ನಮ್ಮ ಒತ್ತಾಯ ದಿಂದ ಅಲ್ಲ. ಪರಿಸ್ಥಿತಿ ಈ ರೀತಿ ಇರುವಾಗ ನಮ್ಮ ಮರಾಠಿ ಸ್ನೇಹಿತರು ಇದನ್ನೆಲ್ಲಾ ಮರೆತು ಮತ್ತೆ ಮತ್ತೆ ದಂಗೆಯೇಳುತ್ತಿದ್ದಾರೆ. ಕನ್ನಡಿಗರ ಮೇಲೆ ಕೈ ಮಾಡಿ ತಮ್ಮ ಪರಾಕ್ರಮ ತೋರಿಸುತ್ತಿದ್ದಾರೆ. ಇನ್ನು ಮುಂದಾದರೂ ಸಹ ಕನ್ನಡಿಗರ ಮೇಲೆ ಈ ರೀತಿಯ ದೌರ್ಜನ್ಯ ಮತ್ತು ದ್ರಾಷ್ಟ್ಯವನ್ನು ಮರಾಠಿಗರು ಮಾಡುವುದನ್ನು ನಿಲ್ಲಿಸಬೇಕು. ಹಿಂದೆ ಪೇಶ್ವೆಯು ಖಡ್ಗದಾರಿ ಯಾಗಿ ತನ್ನ ಪರಾಕ್ರಮವನ್ನು ತೋರಿಸುತ್ತಿದ್ದ. ಆದರೆ ಇಂದು ಯಾರೂ ಖಡ್ಗದಾರಿಗಳಾಗಿಲ್ಲ. ಆದರೆ ಕನ್ನಡಿಗರೂ ಸಹ ಪರಾಕ್ರಮಶಾಲಿಗಳು ಎಂಬು ದನ್ನು ಮರಾಠಿಗರು ಮಾತ್ರ ಮರೆಯಬಾರದು. ಸರ್ಕಾರದವರು ಸಹ ಮರಾಠಿ ಮುಖಂಡರಿಗೆ ನಮ್ಮ ನಿಲುವನ್ನು ಸ್ಪಷ್ಟವಾಗಿ ತಿಳಿಸಬೇಕು. ಹೊರಗಡೆಯಿಂದ ಬರತಕ್ಕಂಥ ಮರಾಠಿ ಮುಖಂಡರಿಗೂ ಸಹ ನಮ್ಮ ಸರ್ಕಾರದ ನಿಲುವೇನು

(ಶ್ರೀ ಕೋಣಂದೂರು ಲಿಂಗಪ್ಪ)

ಎಂಬುದನ್ನು ಸ್ಪಷ್ಟವಾಗಿ ಹೇಳಿ ಅವರನ್ನು ಸುಮ್ಮನಿರಿಸಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಂಡು, ಇನ್ನು ಮುಂದೆ ಏನಾದರು ಕನ್ನಡಿಗರ ಮೇಲೆ ಮರಾಠಿಗರಿಂದ ದೌರ್ಜನ್ಯ ನಡೆದರೆ ಸರ್ಕಾರ ತೀವ್ರವಾದ ಕಾರ್ಯ ಕ್ರಮ ಕೈಕೊಳ್ಳಬೇಕೆಂದು ಹೇಳಿ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್---ಮಾನ್ಯ ಅಧ್ಯಕ್ಷರೇ, ಬೆಳಗಾಂ ನಿಂದ ಎಲ್ಲ ಪಾರ್ಟಿಯ ನಿಯೋಗವೊಂದು ಮುಖ್ಯ ಮಂತ್ರಿಯವರನ್ನು ಕಾಣಲು ಬಂದಿದೆ. ಇಂದು ಬೆಳಗಾಂ ನಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ತಮ್ಮ ಪ್ರಭಾವ ವನ್ನು ಕಳೆದುಕೊಂಡಿರುವುದರಿಂದ ಮತ್ತೆ ತಮ್ಮ ರಾಜಕೀಯವನ್ನು ಬೆಳೆಸಿ ಕೊಳ್ಳುವುದಕ್ಕಾಗಿ ಗಡಿ ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. ಇಂದು ಅಲ್ಲಿ ಜನರು ಶಾಂತವಾಗಿ ಜೀವನ ಮಾಡುತ್ತಿದ್ದಾರೆ. ಯಾವ ಗೊಂದಲ ಪರಿಸ್ಥಿತಿಯೂ ಇಲ್ಲ. ಆದರೆ ಉದ್ದೇಶಪೂರ್ವಕವಾಗಿ ಇವರು ಗಡಿ ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. ಮಹಾರಾಷ್ಟ್ರ ಸರ್ಕಾರದವರು ಇವರಿಗೆ ಪರೋಕ್ಷವಾಗಿ ಸಹಾಯ ಮಾಡುತ್ತಿದ್ದಾರೆ. ಮತ್ತು ಎಲ್ಲ ರೀತಿಯ ಬೆಂಬಲ ಮತ್ತು ರಕ್ಷಣೆಯನ್ನು ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದವರ ತಪ್ಪು ಭಾವನೆಯಿಂದ ಇಷ್ಟೆಲ್ಲಾ ನಡೆಯುತ್ತಿದೆ. ಕೇಂದ್ರ ಸರ್ಕಾರದವರು ಮಹಾಜನ ವರದಿಯನ್ನು ಒಪ್ಪಿ ಕೊಂಡಿದ್ದರೆ ಪರಿಸ್ಥಿತಿ ಇಷ್ಟೊಂದು ಉಲ್ಬಣಗೊಳ್ಳುವುದಕ್ಕೆ ಅವಕಾಶವಾಗುವುದಿಲ್ಲ. ಈ ಒಂದು ವರದಿಯ ಆಧಾರದ ಮೇಲೆ ಮಹಾರಾಷ್ಟ್ರ ಏಕೀಕರಣ ಸಮಿತಿ ಯವರು ತಮ್ಮ ಬೆಂಬಲವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ತಮ್ಮ ಬೆಂಬಲವನ್ನು ಮತ್ತೆ ಗಳಿಸಿಕೊಳ್ಳುವುದಕ್ಕಾಗಿ ಗಡಿ ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. ಮಹಾರಾಷ್ಟ್ರದಿಂದ ಶಿವಸೇನೆಯವರನ್ನು ಕರೆಸಿಕೊಂಡಿದ್ದಾರೆ. ಇದರ ಜೊತೆಗೆ ಮಹಾರಾಷ್ಟ್ರದ ವಿಧಾನ ಪರಿಷತ್ತಿನ ಉಪಾಧ್ಯಕ್ಷರು ನಮ್ಮ ರಾಜ್ಯಕ್ಕೆ ಬಂದು ಗಡಿ ಚಳುವಳಿ ಮಾಡುವ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಏನಾಗುತ್ತದೆಂದರೆ ನಮ್ಮ ರಾಜ್ಯದ ಮೇಲೆ ಅವರು ಯುದ್ಧಕ್ಕೆ ಬಂದಂತೆ ಆಗುತ್ತದೆ. ಈ ರೀತಿಯ ಅಭಿಪ್ರಾಯವನ್ನು ಅವರು ನಮ್ಮ ರಾಜ್ಯಕ್ಕೆ ಬಂದು ವ್ಯಕ್ತಪಡಿಸಿದ್ದರಿಂದ ಅವರನ್ನು ಕೂಡಲೆ ನಮ್ಮ ಸರ್ಕಾರದವರು ದಸ್ತ ಗಿರಿ ಮಾಡಬೇಕಾಗಿತ್ತು; ಮತ್ತು ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕಾಗಿತ್ತು. ಆದರೆ ಇದರ ಬಗ್ಗೆ ಒಂದು ಅಕ್ಷರ ಸಹ ಹೇಳಿಲ್ಲ. ಈಗಲಾದರೂ ನಮ್ಮ ಸರ್ಕಾರದ ನಿಲುವೇನು ಎಂಬುದನ್ನು ತಿಳಿಸ ಬೇಕು. ಅವರು ಗಡಿ ಚಳುವಳಿ ನಡೆಸುತ್ತಿರುವುದಕ್ಕೆ ಕಾರಣವೇನು ಎಂಬ ಬಗ್ಗೆ ಸಾಕ್ಷಿ ಆಧಾರಗಳು ಇವೆ. ಅಲ್ಲಿಯ ವಿಧಾನ ಸಭೆಯಲ್ಲಿ ಒಂದು ರೀತಿಯ ನಾಟಕ ನಡೆಯುತ್ತಿದೆ. ಸದಸ್ಯರುಗಳು ಮುಖ್ಯಮಂತ್ರಿಯವರಿಗೆ ಮುತ್ತಿಗೆ ಹಾಕು

ತ್ತಿದ್ದಾರೆ. ಇದನ್ನೆಲ್ಲಾ ಮುಖ್ಯಮಂತ್ರಿಯವರೇ ಹೇಳಿ ಮಾಡಿಸುತ್ತಿದ್ದಾರೆ. ಇಂದು ಅವರಿಗೆ ರಾಜಕೀಯ ಬೇಕಾಗಿದೆ. ಅದಕ್ಕಾಗಿ ಇದನ್ನೆಲ್ಲಾ ಮಾಡುತ್ತಿದ್ದಾರೆ. ಇದರಿಂದ ನಮ್ಮ ಕನ್ನಡಿಗರು ಕಳವಳಗೊಂಡಿದ್ದಾರೆ. ಅವರಿಗೆ ಶಾಂತಿ ಸಮಾಧಾನ ಮಾಡಿಸಲು ಸರ್ಕಾರದವರು ಇಲ್ಲಿಂದ ಎಲ್ಲ ಪಕ್ಷದ ಸದಸ್ಯರನ್ನು ಒಳಗೊಂಡಂತಹ ಒಂದು ಡೆಲಿಗೇಷನನ್ನು ಕಳಿಸಿಕೊಡಬೇಕು. ಮತ್ತು ಇದರ ಬಗ್ಗೆ ಸರ್ಕಾರದ ತೀರ್ಮಾನ ಏನು ಎಂಬುದನ್ನು ತಿಳಿಸಬೇಕು. ಇದರ ಬಗ್ಗೆ ಸಿ. ಐ. ಡಿ. ವರದಿ ಏನಿದೆ ಅದನ್ನು ಸಹ ಮಾನ್ಯ ಸಭೆಗೆ ತಿಳಿಸಬೇಕು. ಇಲ್ಲದಿದ್ದರೆ ಪರಿಸ್ಥಿತಿ ಇನ್ನೂ ಉಲ್ಬಣಗೊಳ್ಳುತ್ತದೆ. ಅಲ್ಲಿಯ ಜನರಿಗೆ ಸಹಬಾಳ್ವೆ ಬೇಕಾಗಿದೆ. ಆದರೆ ಅದಕ್ಕೆ ಇವರು ಅವಕಾಶಕೊಡುತ್ತಿಲ್ಲ. ಇವರಿಗೆ ವರ್ಷಕ್ಕೊಂದು ಚಳುವಳಿ ಬೇಕು. ಅದರಂತೆ ಪ್ರಾರಂಭ ಮಾಡಿದ್ದಾರೆ. ಆದರೆ ಇದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದು. ಈ ವಿಚಾರದಲ್ಲಿ ಪೂರ್ಣವಾದ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

*ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :— ಸ್ವಾಮಿ, ತಾವೇನೋ ಈ ನಿಲುವಳಿ ಸೂಚನೆಯನ್ನು ಕಾಲಿಂಗ್ ಅಟೆನ್ಷನ್ ನೋಟೀಸಾಗಿ ಪರಿವರ್ತನೆ ಮಾಡಿ ಅದರ ಮೂಲಕ ಸರಕಾರದ ಹೇಳಿಕೆ ಬರುತ್ತೆ ಎಂದು ಹೇಳಿದರೆ ಇದರಲ್ಲಿ ಎಲ್ಲ ವಿವರಗಳಿಗೂ ಬರಲು ಅವಕಾಶವಾಗುವುದಿಲ್ಲ ಮತ್ತು ನಾವು ಹೆಚ್ಚು ವಿವರಗಳನ್ನು ಕೇಳಲೂ ಆಗುವುದಿಲ್ಲ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಇದು ಒಂದು ಬಹು ಮುಖ್ಯವಾದ ಪ್ರಶ್ನೆ. ಹಿಂದೆ ಇದೇ ಅಸೆಂಬ್ಲಿಯಲ್ಲಿ ಮಹಾಜನ್‌ರವರು ಕೊಟ್ಟಿರುವ ತೀರ್ಪನ್ನು ಪೂರ್ಣವಾಗಿ ಒಪ್ಪಲೇಬೇಕು ಎಂದು ಇಲ್ಲಿ ನಿರ್ಣಯ ಮಾಡಿ ಕಳುಹಿಸಲಾಗಿದೆ ಮತ್ತು ಇದು ಈಗಾಗಲೇ ಪಾರ್ಲಿಮೆಂಟಿನ ಮುಂದೆ ಇದೆ. ಇದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಇದರಲ್ಲಿ ಮಹಾರಾಷ್ಟ್ರ ಸರಕಾರದವರು ಈ ರಿಪೋರ್ಟನ್ನು ಒಪ್ಪಲು ತಯಾರಾಗಿಲ್ಲ. ಇದಕ್ಕಾಗಿ ಇಲ್ಲಿ ಇಂತಹ ಪರಿಸ್ಥಿತಿಗಳಾಗಲು ಅವಕಾಶವಾಗಿವೆ. ಆದಷ್ಟು ಬೇಗ ಈ ಸರಕಾರ ಈ ಸಮಸ್ಯೆಯನ್ನು ಬಗೆಹರಿಸಲು ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಮ್ಮ ಸರಕಾರದ ನಿಲುವೇನು ಎನ್ನುವುದು ನಮ್ಮ ಜನಕ್ಕೆ ತಿಳಿಯಬೇಕು. ಮಹಾರಾಷ್ಟ್ರದಲಿ ನಡೆದ ಅಸೆಂಬ್ಲಿಯಲ್ಲಿ ಇದೇ ವಿಚಾರದ ಬಗ್ಗೆ ಐದು ದಿನಗಳ ಕಾಲ ಚರ್ಚೆ ಮಾಡಿ ಬೆಳಗಾಂ ನಲ್ಲಿರುವ ಜನರನ್ನು ಪ್ರಚೋದನೆ ಮಾಡುತ್ತಿದ್ದಾರೆ. ಇಷ್ಟು ಮಾಡುತಿದ್ದರೂ ನಮ್ಮ ಸರಕಾರ ಇದರ ಕಡೆಗೆ ಇನ್ನೂ ಸಾಕಷ್ಟು ಗಮನ ಕೊಡುತ್ತಿಲ್ಲ. ಆದುದರಿಂದ ಸರಕಾರ ಇದರ ಬಗ್ಗೆ ಆದಷ್ಟು ಬೇಗ ಗಮನ ಕೊಟ್ಟು ತೀವ್ರವಾಗಿ ಇದನ್ನು ಇತ್ಯರ್ಥಪಡಿಸಬೇಕು ಮತ್ತು ಇದರ ಬಗ್ಗೆ ಸರಕಾರದ ನಿಲುವೇನು ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ.

(ಶ್ರೀ ಎಂ. ಎಸ್. ಕೃಷ್ಣನ್)

ಕಾಲಿಂಗ್ ಅಟೆನ್‌ಷನ್ ನೋಟೀಸ್‌ನಲ್ಲಿ ಈ ಪ್ರಶ್ನೆಗಳು ಬರಲಾಗುವುದಿಲ್ಲ. ಇದೊಂದು ವಿಶಾಲವಾದ ಪ್ರಶ್ನೆ, ಇದರ ಬಗೆ ಎಲ್ಲ ವಿವರಗಳನ್ನೂ ಇಲ್ಲಿ ತಿಳಿಸಬೇಕು ಎಂದು ತಮ್ಮ ಮೂಲಕ ಸರಕಾರವನ್ನು ಕೇಳುತ್ತೇನೆ.

SRI B. B. SAYANAK x x x

MADAM SPEAKER :— Reporters may not take down anything.

SUSPENSION OF A MEMBER

SRI B. B. SAYANAK :— Madam Speaker, I must be allowed to speak.

SRI S. A. PATIL :— If Sri Sayanak is given a chance to speak, A chance should be given to me also to speak.

SRI B. B. SAYANAK :— Madam Speaker, x x x

MADAM SPEAKER :— He cannot say all that

SRI B. B SAYANAK :— You must allow me to speak

MADAM SPEAKER :— No injustice is being done here

SRI B. B. SAYANAK:— I must put forth my grievances You must allow me to speak. Sri Konandur Lingappa is casting aspersions. I must correct him.

SRI D.DEVARAJ URS:—The hon. memeber Sri Sayanak has appealed to the Chair. If she allows, he may speak.

SRI B. B. SAYANAK :— What Sri Banagrrappa and others have stated is x x x

SRI D. DEVARAJ URS :— The words [x x x]used by hon. member Sri Sayanak are unparliamentary.

---

x x x x Matter not recorded as ordered by the Chair

(MADAM SPEAKER ON LEGS)

MADAM SPEAKER :— Will Sri Sayanak sit down? There is a way to explain matters.

SRI B. B. SAYANAK :— Why have you not allowed the M. E. S. people to speak ?

MADAM SPEAKER :— The Hon. member can just request but he cannot make a demand. He cannot challenge anybody and everybody.

He has got to withdraw the two statements

SRI B. B. SAYANAK .—I am not going to withdraw

MADAM SPEAKER :— Then he will have to face the consequences thereof.

SRI B. B. SAYANAK : — I have given notice of a breach of privilege under Rule 177.

MADAM SPEAKER :— A reply has been given to the Hon. member.

SRI G. N. PATIL ;— I rise on a point of order

MADAM SPEAKER :— Sri Sayanak will have to face the consequences for failure to withdraw his statements.

SRI G. N. PATIL :— The Chair has directed Sri Sayanak to withdraw certain of the words used by him but the hon. member says that he is not going to withdraw them. He says that he is not going to obey the orders of the Chair.

MADAM SPEAKER : — I am asking for the third time to Sri Sayanak whether he is going to withdraw those two statements made by him. Or is he going to withdraw from the Assembly ?

SRI B. B. SAYANAK :— I am not going to withdraw the words [x x x x]

---

x x x x Word/words expressed as ordered by the Chair

MADAM SPEAKER ;— I order that those words and all that he has stated in that connection be expunged.

ಶ್ರೀ ಕೆ. ಹೆಚ್. ರಂಗನಾಥ್ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಸೈನಕರವರು ಅವರು ಮಾತನಾಡುವಾಗ (x x x) ಎನ್ನುವ ಮಾತನ್ನು ಬಳಸಿದರು. ಇದು ಅಧ್ಯಕ್ಷರ ಮೇಲೆ ಅಪಾದನೆ ಮಾಡಿದಂತೆ ಆಗುತ್ತದೆ. ಮತ್ತು ಆ ರೀತಿ ಹೇಳಲು ಅವರಿಗೆ ಈ ಸಭೆ ಅಧಿಕಾರ ಕೊಟ್ಟಿಲ್ಲ. ಈ ಪದವನ್ನು ಅವರು ವಾಪಸು ತೆಗೆದು ಕೊಳ್ಳಬೇಕು ಮತ್ತು ಈ ಸಭೆಯಲ್ಲಿ ಅವರು ಅಪಾಲಜಿಯನ್ನೂ ಕೇಳಿಕೊಳ್ಳಬೇಕು. ಅವರು ಈ ಪದವನ್ನು ವಾಪಸು ತೆಗೆದು ಕೊಳ್ಳದೇ ಹೋದರೆ ತಾವು ಕಾನೂನು ಪ್ರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎಂದು ನಾನು ಸಲಹೆ ಮಾಡುತ್ತೇನೆ.

MADAM SPEAKER ;— I agree with the Hon. member What is Sri Sayanak going to do? Is he going to apologise or not ?

3-00 P. M.

SRI B. B. SAYANAK.—I have requested you to allow me to speak. You have not given me permission. I am not going to withdraw.

MADAM SPEAKER. The Hon. member shall withdraw from the house.

SRI B. B. SAYANAK.—No

MADAM SPEAKER.—I name Sri B. B. Sayanak

SRI D. DEVARAJ URS.—I move the following motion "that the Hon. member Sri B. B. Sayanak named by the Speaker may be suspended for a week"

MADAM SPEAKER.—The question is: "that the Hon. member Sri B. B. Sayanak named by the speaker may be suspended for a week".

(THE MOTION WAS ADOPTED)

MADAM SPEAKER.—Sri Sayanak will please withdraw now.

SRI B. B SAYANAK.—I will not withdraw

MADAM SPEAKER.—The Marshal will bodily remove Hon. Member Sri Sayanak from the house.

SRI N. B.—SIRDESAI.—I have a submission to make. Injustice has been done to a Marathi Member. I want to stage a walk out, madam.

MADAM SPEAKER.—Sri Sirdesai may walk out

SRI K. H. RANGANATH.—The Hon. member Sri Sirdesai cannot protest against the decision of the House and the decision of the chair and stage a walk out. I request the Chair to take action against the member according to the rules.

(*At this stage, the Marshal and his staff came to remove Sri B. B. Sayanak from the House and Sri Sayanak withdrew from the House. Sri Sirdesai staged a walk out*).

SRI K. H. RANGANATH:—I am moving a motion against Sri Sirdesai for his protest against the decision of the Chair and walking out. For this offence he has committed in this House, I request you to take action according to the Rules.

MADAM SPEAKER:—Such action may be taken as the House deems fit.

ಶ್ರೀ ಬಿ. ಪುಟ್ಟಸ್ವಾಮಯ್ಯ:- ಮಾನ್ಯ ರಂಗನಾಥ್ ಅವರು ಹೇಳಿದುದನ್ನು ನಾನು ಸಮರ್ಥನೆ ಮಾಡುತ್ತ ಒಂದು ಅಂಶವನ್ನು ಹೇಳುತ್ತೇನೆ. ಕನ್ನಡ ಜನತೆಯನ್ನು ಒಂದು ಕೈ ನೋಡಿಕೊಳ್ಳುತ್ತೇವೆ, ಹೊಡೆದಾಡುತ್ತೇವೆಂದು ಹೇಳತಕ್ಕ ಜನ ಈ ಹೊತ್ತು ಅಧ್ಯಕ್ಷರಿಗೆ ಬಹಿರಂಗವಾಗಿ ಅವಮಾನ ಮಾಡಿದ್ದಾರೆ. ನಾನು ಮಾನ್ಯ ರಂಗನಾಥ್ ಅವರು ಹೇಳಿದ ಮಾತನು ಹೃತ್ಪೂರ್ವಕವಾಗಿ ಸಮರ್ಥನೆ ಮಾಡುತ್ತೇನೆ, ಮತ್ತು ಮಾನ್ಯ ಸದಸ್ಯರಿಗೆ ತಕ್ಕ ಶಿಕ್ಷ ವಿಧಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

MADAM SPEAKER :— We will consider what Sri K. H. Ranganath has said and we will take suitable action.

SRI D. DEVARAJ URS:—We may suspend Hon. member Sri Sayanak for the whole session if it is felt necessary. I agree with the Hon. member Sri K. H. Ranganath that action should be taken against him who has been ordered to be suspended as a result of his defiance of the wishes of the Hon. members of the whole House as well as the ruling of the Speaker. Such a Member, in my opinion, does not deserve to be allowed for the session. You may kindly consider whether the House should not debar this Hon. member from coming into the House for the whole session.

MADAM SPEAKER:—Is it the pleasure of the House that the Hon. member Sri B. B. Sayanak should be suspended from the services of the House for the whole session ?

HON. MEMBERS :- Yes

MADAM SPEAKER :-The Hon. member Sri B. B. Sayanak will not attend the session.

MYSORE LIFTS BILL, 1973—INTRODUCTION

SRI H. M. CHANNABASAPPA:—(Minister for Public Works) Madam Speaker, I introduce the Mysore Lifts Bill, 1973, which has been published in the Mysore Gazette under Rule 64 of the Rules of Procedure.

MADAM SPEAKER :– The Bill is introduced*.

Now will take up further discussion of the Mysore State Co-operative Societies (Amendment) Bill, 1973. Sri H. S. Siddappa will continue in speech.

---

* Bill appended as annexure.

MYSORE CO-OPERATIVE SOCIETIES (AMENDMENT) BILL, 1973

Motion to consider Debate contd.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ) :—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಕಳೆದ ಅಧಿವೇಶನದಲ್ಲಿ ಮಾರ್ಚಿ ಒಂಭತ್ತನೇ ತಾರೀಖು ಈ ಸಹಕಾರಿ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುತ್ತ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಆ ಹೊತ್ತು ಮಾತನಾಡುತ್ತಿರುವಾಗ ಸೆಕ್ಷನ್ 70 ಎ, 72, 105 ಇವುಗಳ ಬಗ್ಗೆ ವಿಶ್ಲೇಷಣೆ ಮಾಡಿ ಅನಾವಶ್ಯಕವಾಗಿ ಸಹಕಾರಿ ಆಂದೋಳನವನ್ನು ಮೊಟಕು ಮಾಡತಕ್ಕ ಧೋರಣೆಯನ್ನು ಮಾನ್ಯ ಸಚಿವರು ಈ ತಿದ್ದುಪಡಿ ಮಸೂದೆಯ ಪ್ರಕಾರ ತಂದು ಹಾಕಿದ್ದಾರೆಂದು ಹೇಳಿದ್ದೆ. ಅವರು ಇದರಲ್ಲಿ ಇನ್ನೂ ಒಂದು ಅಂಶವನ್ನು ಅಳವಡಿಸಿದ್ದಾರೆ.

ಈಗ ಇರುವಂಥ ಕಾನೂನಿನ ಸೆಕ್ಷನ್ 105 ರಲ್ಲಿ ಏನಿದೆ ಎಂದರೆ, ಈ ಸಹಕಾರಿ ತತ್ವದಲ್ಲಿ ಯಾವುದಾದರೂ ಒಂದು ಆಜ್ಞೆಯನ್ನು ಒಬ್ಬ ಅಧಿಕಾರಿ ಮಾಡಿದರೆ ಅದರ ಮೇಲೆ ಕೋರ್ಟಿಗೆ ಹೋಗತಕ್ಕ ಅಥವಾ ಟ್ರಿಬ್ಯುನಲ್ಲಿಗೆ ಹೋಗತಕ್ಕ ಅಂಶವನ್ನು ಅಳವಡಿಸಿದ್ದಾರೆ. ಈ ತಿದ್ದುಪಡಿಯಲ್ಲಿ ಆ ಅಂಶವನ್ನು ಕಿತ್ತು ಹಾಕಿದ್ದಾರೆ. ಇದು ಪ್ರಜಾಪ್ರಭುತ್ವದ ನೀತಿಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ತಿದ್ದುಪಡಿ ಮಸೂದೆಯಲ್ಲಿ ರಿಜಿಸ್ಟ್ರಾರ್ ಅವರ ಆಜ್ಞೆ ಅಂತಿಮವಾದುದು, ಅದರ ಮೇಲೆ ಯಾವ ಕೋರ್ಟಿಗೂ ಹೋಗಕೂಡದು ಎಂದು ಸೇರಿಸಿದ್ದಾರೆ. ಈ ಸಹಕಾರಿ ತತ್ವವನ್ನು ಈ ಸರ್ಕಾರದವರು ತಮ್ಮ ರಾಜಕೀಯ ಉಪಯೋಗಕ್ಕಾಗಿ ಬಳಸಲು ಬೇಕಾದ ತಿದ್ದುಪಡಿಗಳನ್ನು ಇದರಲ್ಲಿ ಸೂಚಿಸಿದ್ದಾರೆಂದು ನಾನು ಹೇಳಬಯಸುತ್ತೇನೆ ಇಂಥ ತಿದ್ದುಪಡಿಗಳನ್ನು ತರತಕ್ಕದ್ದು ಸರ್ವಥಾ ಸರಿಯಲ್ಲ ಎನ್ನುವ ಸಲಹೆಯನ್ನು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಕೊಡ ಬಯಸುತ್ತೇನೆ.

ಇನ್ನು ಪದಾಧಿಕಾರಿಗಳು 6 ವರ್ಷದ ಅವಧಿ ಮುಗಿದ ಮೇಲೆ ಅವರು ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ಇಲ್ಲದ ಹಾಗೆ ಮಾಡಿದ್ದಾರೆ. ಕಳೆದ ಸಾರಿ ಈ ಬಗ್ಗೆ ಪ್ರಸ್ತಾಪ ಮಾಡಿದೆ. ಅದು ಸರಿಯಲ್ಲ ಎಂದು ಕಾಣುತ್ತದೆ. ಒಬ್ಬ ಅನುಭವಸ್ಥ ಸಹಕಾರಿ ತತ್ವದಲ್ಲಿ ಮಾಡುವವನು ಇದ್ದರೆ, ಅವನಿಗೆ ಡೈರೆಕ್ಟರಾಗಿ ಇರಲು ಅವಕಾಶ ಮಾಡಿಕೊಟ್ಟು ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗಿ ಇಲ್ಲದಿದ್ದರೂ ಚಿಂತೆಯಿಲ್ಲ, ಹೊಸಬರಿಗೆ ಸಹಕಾರ ತತ್ವದಲ್ಲಿ ಮಾರ್ಗದರ್ಶನ ಮಾಡುವ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ ಕಾರಣ ಇಷ್ಟೇ ತಮಗೆ ಗೊತ್ತಿರುವ ಹಾಗೆ ಅನೇಕ ಸಹಕಾರ ಸಂಘಗಳಲ್ಲಿ ಆಡಳಿತ

(ಹೆಚ್. ಎಸ್. ಸಿದ್ದಪ್ಪ)

ಮಂಡಳಿಯನ್ನು ಸೂಪರ್ ಸೀಡ್ ಮಾಡುವ ಸಂದರ್ಭದಲ್ಲಿ ಏನು ನಡೆಯುತ್ತದೆ ಏನು ಆಗುತ್ತಾ ಇದೆ ಅಧಿಕಾರಿಗಳು ಏನು ಮಾಡುತ್ತಾರೆ ಎನ್ನತಕ್ಕಂಥದ್ದು ನಿಮಗೆ ತಿಳಿಯುದೇ ಇಲ್ಲ. ಆಡಳಿತ ಮಂಡಲಿ ಇಲ್ಲದೇ ಇರುವಾಗ ಅಧಿಕಾರಿಗಳು ತಮ್ಮ ನೈತಿಕವಾದ ಶಕ್ತಿಯಿಂದ ಸಂಸ್ಥೆಗಳನ್ನು ಬೆಳೆಸುತ್ತಿರುವುದು ಬಹಳ ವಿರಳ. ಆದುದರಿಂದ ಆಡಳಿತ ಮಂಡಲಿಯಲ್ಲಿ ಅನುಭವಸ್ಥರು ಕಡ್ಡಾಯವಾಗಿರಬೇಕು. ಆಗ ಸಹಕಾರ ಸಂಘಗಳ ಬೆಳವಣಿಗೆಯಲ್ಲಿ ಅನುಭವಸ್ಥರು ಬೆಳಕನ್ನು ಚೆಲ್ಲಿ ಸಹಕಾರ ತತ್ವ ಸಹಕಾರ ಆಂದೋಳನ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷಣೀಯವರೇ, ಸರ್ಕಾರ ತನ್ನ ಹಣವನ್ನು ಸಹಕಾರಿ ಸಂಸ್ಥೆಗಳಲ್ಲಿ ತೊಡಗಿಸಿದಂಥ ಸಂದರ್ಭದಲ್ಲಿ ಅಂಥ ಸಹಕಾರಿ ಆಡಳಿತ ಮಂಡಲಿಗಳಲ್ಲಿ ಸರ್ಕಾರದ ಪ್ರತಿನಿಧಿಗಳು 1/3 ಭಾಗ ಇರಬೇಕು ಎಂದು ಒಂದು ಕಲಂನ್ನು ಇದರಲ್ಲಿ ಹಾಕಿದ್ದಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ಒಂದು ವಿಷಯ ತರುವುದಕ್ಕೆ ಇಷ್ಟಪಡುತ್ತೇನೆ. ನೀವು ಯಾರನ್ನೋ ಹಾಕುತ್ತೀರಾ ಎಂದರೆ ಸಹಕಾರದ ಬೆಳವಣಿಗೆಯಲ್ಲಿ ಅನಾನುಭವಿಗಳಾಗಿದ್ದವರನ್ನು ಸರ್ಕಾರದ ಪ್ರತಿನಿಧಿಗಳನ್ನಾಗಿ ಮಾಡುತ್ತೀರಿ. ಅನೇಕ ಸಂದರ್ಭಗಳಲ್ಲಿ ಅವರಿಗೆ ಸಹಕಾರ ತತ್ವಗಳೇ ಗೊತ್ತಿರುವುದಿಲ್ಲ ಅಂಥ ಮೂರು ಜನರನ್ನು ಈ ಆಡಳಿತ ಮಂಡಲಿಯೊಳಗೆ ಸೇರಿಸುತ್ತೀರಿ; ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಕೈಗಾರಿಕಾ ಸಹಕಾರ ಸಂಘಗಳಿದ್ದರೆ ಅಂಥ ಕೈಗಾರಿಕಾ ಸಹಕಾರದ ಆಡಳಿತ ಮಂಡಲಿಯಲ್ಲಿ ನೀವು ನೇಮಕ ಮಾಡುವ ಪ್ರತಿನಿಧಿಗಳಿಗೆ ಕೈಗಾರಿಕೆಯ ಅಭಿವೃದ್ಧಿಯ ಬಗ್ಗೆ ಅನುಭವ ಇರಬೇಕು., ಕೈಗಾರಿಕೆಯನ್ನು ಬೆಳೆಸತಕ್ಕ ಒಂದು ತತ್ವದಲ್ಲಿ ಸಾಕಷ್ಟು ಅನುಭವ ಇರಬೇಕು. ಅಂಥವನನ್ನು ನಿಮ್ಮ ಪ್ರತಿನಿಧಿಯನ್ನಾಗಿ ಹಾಕಿದರೆ ಸರಿ ಒಪ್ಪೋಣ. ಮಾರ್ಕೆಟಿಂಗ್ ಸೊಸೈಟಿಯಲ್ಲಿ ಹಾಕುವ ನಿಮ್ಮ ಪ್ರತಿನಿಧಿಗಳಿಗೆ ಮಾರ್ಕೆಟಿಂಗ್‌ನಲ್ಲಿ ಅನುಭವ ಇರಬೇಕು. ರೈತರ ಉತ್ಪಾದನೆಯನ್ನು ಸೊಸೈಟಿಯ ಮುಖಾಂತರ ವಿತರಣೆ ಮಾಡಿ ರೈತನಿಗೆ ಸಹಾಯ ಮಾಡುವ ಅನುಭವ ಆತನಿಗೆ ಇರಬೇಕು. ಜಿಲ್ಲಾ ಮಟ್ಟದ ಮತ್ತು ಸಂಸ್ಥಾನದ ಮಟ್ಟದ ಸಹಕಾರ ಸಂಘಗಳಲ್ಲಿ ಪ್ರತಿನಿಧಿಗಳನ್ನಾಗಿ ಹಾಕುತ್ತೀರಿ. ಅದು ಸರಿಯಲ್ಲ. ಅವರಿಗೆ ಆಡಳಿತ ನಡೆಸತಕ್ಕ ವ್ಯವಸ್ಥೆ ಮಾಡಿಕೊಟ್ಟಿದ್ದೀರಿ. ಅದನ್ನು ಅವರಿಗೆ ಬಿಟ್ಟು ಬಿಡಬಹುದೇ ವಿನಹ ತಾಂತ್ರಿಕ ಜ್ಞಾನ, ಸಹಕಾರ ಜ್ಞಾನ, ಸಹಕಾರ ಆಂದೋಳನದ ಅನುಭವ ಇಲ್ಲದೇ ಇರತಕ್ಕ ಜನರನ್ನು ಆಡಳಿತ ಮಂಡಲಿಯಲ್ಲಿ ಹಾಕುವುದು ಸರಿಯಲ್ಲ. ಆ ರೀತಿ ನಮ್ಮ ನೀತಿಯನ್ನು ಬದಲಾವಣೆ ಮಾಡಿ ಸರಿಯಾದ ಜನರನ್ನು ಹಾಕಿದರೆ ಬದಲಾವಣೆ ಮಾಡಿದರೆ ನಮ್ಮ

ಸಹಕಾರ ಆಂಧೋಳನ ಬೆಳೆಯುವುದಕ್ಕೆ ಅವಕಾಶವಾಗುತ್ತದೆಂದು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಅನೇಕ ಸಹಕಾರಸಂಘಗಳಲ್ಲಿ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದು ಕಳೆದ ಅಧಿವೇಶನದಲ್ಲಿ ಹೇಳಿದ್ದೇನೆ. ಸನ್ಮಾನ್ಯ ಅಧ್ಯಕ್ಷಣೀಯವರೇ ಸಹಕಾರ ಸಂಘಗಳಲ್ಲಿ ಅಧಿಕಾರಿ ಎಂದರೆ ಒಬ್ಬ ಇನ್ಸ್‌ಪೆಕ್ಟರ್ ಇದ್ದಾನೆ ಎಂದು ಇಟ್ಟುಕೊಳ್ಳಿ, ಸೊಸೈಟಿಯ ಇನ್ಸ್‌ಪೆಕ್ಟರ್ ಇವತ್ತಿನ ದಿವಸ ಒಂದು ಲ್ಯಾಂಡ್ ಡೆವಲೆಪ್‌ಮೆಂಟ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದರೆ ಒಂದು ವರ್ಷದ ಅವಧಿಯೊಳಗೆ ಅವನು ಅಡಿಟರ್ ಆಗಿ ಅದೇ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಲೆಕ್ಕಪತ್ರ ತನಿಖೆ ಮಾಡುವುದಕ್ಕೆ ಬರುತ್ತಾನೆ. ಇಂಥ ನಿದರ್ಶನಗಳು ಬೇಕಾದಷ್ಟು ಇವೆ. ಈಗ ಸಹಕಾರ ಲೆಕ್ಕಪತ್ರಗಳನ್ನು ತನಿಖೆ ಮಾಡುವುದಕ್ಕೆ ಪ್ರತ್ಯೇಕ ಅಡೀಟರ್ ವ್ಯವಸ್ಥೆ ಮಾಡುತ್ತೀರೆಂದು ಕೇಳಿದ್ದೇನೆ. ಆಡೀಟರ್ಸ್ ಆಗುವುದಕ್ಕೆ ಯಾರಿಗಾದರೂ ಇಚ್ಛೆ ಇದೆಯೇ, ಆಡಿಟರ್ ಕೆಲಸಕ್ಕೆ ಬರುತ್ತೀರಾ ಎಂದು ನಿಮ್ಮ ಅಧಿಕಾರಿಗಳಿಗೆ ಸರ್ಕ್ಯುಲರ್ ಕಳುಹಿಸಿದ್ದೀರಿ ಎಂದು ಕೇಳಿದ್ದೇನೆ. ಅದು ಸರಿಯಲ್ಲ ನೀವು ಸಹಕಾರ ಸಂಘಗಳ ಲೆಕ್ಕ ಪತ್ರಗಳನ್ನು ನೋಡಲು ಒಂದು ಪರ್ಮನೆಂಟ್ ವ್ಯವಸ್ಥೆ ಮಾಡಬೇಕು ಆದಕ್ಕೆ ಸ್ಟೇಟ್ ಅಕೌಂಟ್ಸ್ ಡಿಪಾರ್ಟಮೆಂಟಿನಿಂದ ಅಧಿಕಾರಿಗಳನ್ನು ತೆಗೆದುಕೊಂಡು ಅದಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಹಕಾರ ಸಂಘಗಳನ್ನು ನೀವು ಸೂಪರ್‌ಸೀಡ್ ಮಾಡುವಾಗ, ಅವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಾಗ ಹಿಂದಿನ ಖಾಸಗಿ ಆಡಳಿತ ಮಂಡಲಿಯವರು ಯಾವಯಾವ ಯೋಜನೆಗಳನ್ನು ಹಾಕಿದ್ದರೋ ಆ ಯೋಜನೆಗಳು ಹಾಗೆಯೇ ನಿಂತು ಹೋಗುತ್ತವೆ. ಇದೇ ರೀತಿ ಅನೇಕ ಸಹಕಾರ ಸಂಘಗಳಲ್ಲಿ ನಡೆಯುತ್ತಾ ಇರತಕ್ಕದ್ದು ನಾವು ನೋಡುತ್ತೇವೆ. ಒಂದು ಉದಾಹರಣೆ ಕೊಡುತ್ತೇನೆ. ಅರಸೀಕೆರೆ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸರಿಯಾದ ಮಾರ್ಕೆಟಿಂಗ್ ವ್ಯವಸ್ಥೆಯಿಲ್ಲ ವ್ಯವಸಾಯ ಉತ್ಪನ್ನಗಳನ್ನು ತೆಗೆದುಕೊಂಡು ಒಂದು ಮಾರ್ಕೆಟಿಂಗ್ ಮಾಡುವುದಿಲ್ಲ. ಅವರು ರೇಷನ್ ಪದಾರ್ಥಗಳನ್ನು ಡೀಲ್ ಮಾಡುತ್ತಾರೆ ಇಲ್ಲವೇ ಕಬ್ಬಿಣ ಸಿಮೆಂಟ್ ಕೋಟಾ ಡೀಲ್ ಮಾಡುತ್ತಾರೆ. ಈ ಮಾರ್ಕೆಟಿಂಗ್ ಸೊಸೈಟಿಯ ಆಡಳಿತ ಮಂಡಲಿಯಲ್ಲಿ ನಿಮ್ಮ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇದ್ದಾರೆ. ಇನ್ನು ಇಬ್ಬರು ಅಧಿಕಾರಿಗಳನ್ನು ಅಲ್ಲಿ ಹಾಕಿದ್ದಾರೆ. ಈಗಿರತಕ್ಕ ನಿಮ್ಮ ಅಧಿಕಾರಿಗಳು ಸಹಕಾರ ತತ್ವವನ್ನು ಅನುಷ್ಠಾನಕ್ಕೆ ತಂದಿದ್ದಾರೆಯೇ ಅಥವಾ ತರುವ ಪ್ರಯತ್ನ ನಡೆಸಿದ್ದಾರೆಯೇ ಎನ್ನತಕ್ಕದರ ಬಗ್ಗೆ ನೀವು ಸ್ವಲ್ಪ ವಿಚಾರಿಸಿದರೆ ನಿಮ್ಮ ಪ್ರತಿನಿಧಿಗಳನ್ನು ಆಡಳಿತ ಮಂಡಲಿಯಲ್ಲಿ

(ಹೆಚ್. ಎಸ್. ಸಿದ್ದಪ್ಪ)

ಎಂಥವರನ್ನೂ ಹಾಕಬೇಕು ಎಂಬ ಬೆಳಕು ನಿಮಗೆ ಬರುತ್ತದೆ ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಅಮೆಂಡ್‌ಮೆಂಟ್ ಆಕ್ಟ್‌ನಲ್ಲಿ ಮುಖ್ಯವಾಗಿ ಆಡಳಿತ ಮಂಡಲಿಗಳಲ್ಲಿ 6 ವರ್ಷಗಳ ಮೇಲೆ ಪದಾಧಿಕಾರಿಗಳು ಇರಬಾರದು ಎಂಬ ತತ್ವ ಏನು ಇದೆ ಅದನ್ನು ಕಡ್ಡಾಯವಾಗಿ ತೆಗೆದುಹಾಕಿ ಸಹಕಾರ ಆಂದೋಳನ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ: (ಶೃಂಗೇರಿ) :—ಅಧ್ಯಕ್ಷರೇ, ಕೋ-ಅಪರೇಟಿವ್ ಅಮೆಂಡ್‌ಮೆಂಟ್ ಬಿಲ್ಲು ಹೋದ ಸಾರಿ ಬಂತು, ಆಗ ನಾನು ಸ್ವಲ್ಪ ಮಟ್ಟಿಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ಇತ್ತೀಚೆಗೆ ನಮ್ಮ ಸಹಕಾರ ಸಚಿವರು ನಮ್ಮ ಪ್ರಾಂತ್ಯಕ್ಕೆ ಬಂದಾಗ ಅನೇಕ ವಿಷಯಗಳನ್ನು ಅಲ್ಲಿಯ ಕೋ-ಅಪರೇಟಿವ್ ಆಡಳಿತಗಾರರು ಅವರ ನೋಟೀಸಿಗೆ ತಂದಿದ್ದಾರೆ ಮತ್ತು ನನ್ನ ನೋಟೀಸಿಗೂ ತಂದಿದ್ದಾರೆ. ಅದರಲ್ಲಿ ನಾನು ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗಿರತಕ್ಕ ಕೋ-ಅಪರೇಟಿವ್ ಸೊಸೈಟಿಗಳನ್ನು ಸಾಕಷ್ಟು ಒಂದುಗೂಡಿಸಿ ಒಂದೊಂದು ಪಂಚಾಯಿತಿಯನ್ನು ಅಡ್ಮಿನಿಸ್ಟ್ರೇಟಿವ್ ಯೂನಿಟಿ ಮಾಡಿ ಎಂದು ಹೇಳುತ್ತೇನೆ. ಆ ರೀತಿ ಪರಿವರ್ತನೆ ಮಾಡಿ ಎಲ್ಲಾ ವ್ಯವಹಾರಗಳನ್ನು ಕೂಡ ಒಂದೇ ಸೊಸೈಟಿಯಲ್ಲಿ ಬ್ರಾಂಚುಗಳ ಮುಖಾಂತರ ನಡೆಸತಕ್ಕ ಅವಕಾಶ ಕೊಡದೇ ಇದ್ದಲ್ಲಿ, ಆಡಳಿತ ವೆಚ್ಚ ಜಾಸ್ತಿಯಾಗುತ್ತದೆ ಒಳ್ಳೆಯ ಅಡಮಿನಿಸ್ಟ್ರೇಷನ್ ಇರುವುದಕ್ಕೆ ಆಗುವುದಿಲ್ಲ ಈಗ ಅಮೆಂಡ್‌ಮೆಂಟ್ ಮಾಡಿಸಿರುವ ಪ್ರಕಾರ 6 ವರ್ಷಗಳು ಒಬ್ಬರು ಅಧ್ಯಕ್ಷರು ಆಗಿರಬಹುದು. 6 ವರ್ಷಗಳ ನಂತರ ಪುನಃ 6 ವರ್ಷಗಳು ಅಧ್ಯಕ್ಷರಾಗಿರುವುದಕ್ಕೆ ಅವಕಾಶವಿಲ್ಲ ಎನ್ನುವ ಅರ್ಥದಲ್ಲಿ ಇದೆ. ನಾನು ಹೇಳುತ್ತೇನೆ 6 ವರ್ಷಗಳ ಕಾಲ ಯಾವುದೇ ಸೊಸೈಟಿಯಲ್ಲಿ ಮನಾಪಲಿ ಮಾಡಿಕೊಂಡು ಒಬ್ಬರು ಇದ್ದರೆ ಆ ಸೊಸೈಟಿ 6 ವರ್ಷಗಳಲ್ಲಿ ಮುಕ್ತಾಯವಾಗಿರುತ್ತದೆ. ಆದುದರಿಂದ ಇವತ್ತು ಏನು ಇದ್ದರೂ ಕೂಡ ಅದನ್ನು 3 ವರ್ಷಕ್ಕೆ ಇಳಿಸಬೇಕು ಮತ್ತು ಬೋರ್ಡ್ ಚುನಾವಣೆಯಲ್ಲಿ ಒಂದು ಸಾರಿ ಡೈರೆಕ್ಟರು ಆದರೆ ಅದನ್ನು 3 ವರ್ಷಕ್ಕೆ ನಿಲ್ಲಿಸಬೇಕು. ಈಗ ಒಂದು ವರ್ಷದ ಚುನಾವಣೆ ಇರುವುದರಿಂದ ಸ್ವಾಭಾವಿಕವಾಗಿ 3 ತಿಂಗಳ ಮೊದಲು ಪ್ರಿಪೇರ್ ಆಗತಕ್ಕದ್ದು, ಎಲೆಕ್ಷನ್‌ನಲ್ಲಿ ಬಂದೇ ತೀರಬೇಕು ಎಂದು ಅಲ್ಲಿ ನಡೆಸತಕ್ಕ ವ್ಯವಹಾರಗಳು ಏನು ಇವೆ ಅವುಗಳ ಮೇಲೆ ಒತ್ತಾಯ ಹಾಕಿ ಕಾರ್ಯಗಳನ್ನು ಮಾಡುವುದಕ್ಕೆ ಬಿಡುವುದಿಲ್ಲ. ಈ ಸರ್ವೀಸ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಹೆಚ್ಚಿಗೆ ಸಾಲಗಳನ್ನು ವಸೂಲು ಮಾಡುವುದು ಅವರಿಗೆ ಒಂದು ದೊಡ್ಡ ಜವಾಬ್ದಾರಿ. ಡೈರಕ್ಟರುಗಳು ಕೆಲವರಿಗೆ ಟೈಂ ಕೊಡಿ, ಪರ್ವಾ ಇಲ್ಲ ನಾನು

ಮಾಡಿಸುತ್ತೇನೆ, ಯೋಚನೆ ಮಾಡಬೇಡಿ ಎಂದು ಹೇಳುತ್ತಾ ಎಲ್ಲಾ ಕೋ-ಆಪರೇಟೀವ್ ಸೊಸೈಟಿಗಳನ್ನೂ ಕೂಡ ಅದರಲ್ಲೂ ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಅವರ ಡ್ಯೂಸ್ ಜಾಸ್ತಿ ಆಗಿ, ಜಿಲ್ಲಾ ಬ್ಯಾಂಕುಗಳಾಗಲೀ, ಕೇಂದ್ರ ಬ್ಯಾಂಕುಗಳಾಗಲೀ ಹಣ ಸಂದಾಯ ಆಗದೆ ಇರತಕ್ಕದನ್ನು ನೋಡಿದ್ದೇವೆ. ಎರಡು ವರ್ಷವಾದರೂ ಕೂಡ ಚುನಾವಣೆಯಾಗದೆ ಬರೀ ಆಡಳಿತ ಮಟ್ಟದಲ್ಲಿ ದೃಷ್ಟಿಯನ್ನು ಇಡುವ ಸಂದರ್ಭ ನೋಡಬಹುದು. 3 ವರ್ಷ ಡೈರಕ್ಟರು ಆಗಿ ಒಂದು ಸಾರಿ ಚುನಾವಣೆಯಾದರೆ ಮತ್ತೆ ಇರುವ 3 ವರ್ಷವೂ ಪ್ರೆಸಿಡೆಂಟರಾಗಿ ಕೆಲಸ ಮಾಡತಕ್ಕದ್ದು, ಮಧ್ಯದಲ್ಲಿ 6 ವರ್ಷ ಬಿಡುಗಡೆ ಆಗಬೇಕು ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅವರು ಒಂದು ಚೈನ್ ಸಿಸ್ಟಂನಂತೆ ಡೈರಕ್ಟರುಗಳನ್ನು ತಮ್ಮ ಕೈಯ್ಯಲ್ಲಿ ಇಟ್ಟುಕೊಂಡು ಆಡಳಿತ ನಡೆಸುವುದನ್ನು ತಪ್ಪಿಸಬೇಕಾದರೆ ಒಂದು ಸಾರಿ ಪ್ರೆಸಿಡೆಂಟರಾದರೆ, ಪುನಃ 3 ವರ್ಷ ಅವರು ಬರದೇ ಇದ್ದ ಹಾಗೆ ಮಾಡಬೇಕು. ನನ್ನ ಅಭಿಪ್ರಾಯದಲ್ಲಿ ಒಂದು ವರ್ಷವೇ ಸಾಕು. ಈ ತರಹ ಅಭಿಪ್ರಾಯ ಸರಿಯಲ್ಲ. ಒಂದು ಸಾರಿ 6 ವರ್ಷಕ್ಕೆ ಪದಾಧಿಕಾರಿಯಾದರೆ ಪುನಃ 6 ವರ್ಷ ಅಲ್ಲಿ ಇರಬಾರದು ಎನ್ನುವುದು ಸಾಲದು. 3 ವರ್ಷ ಇದ್ದರೆ ಪುನಃ 3 ವರ್ಷ ಬರಬಾರದು ಎಂದು ಮಾಡಿದರೆ ಆಗ ಕೋ-ಆಪರೇಟೀವ್ ಸೊಸೈಟಿಗಳನ್ನು ಸಾಕಷ್ಟು ಒಳ್ಳೆಯ ರೀತಿಯಿಂದ ನಡೆಸುವುದಕ್ಕೆ ಅವಕಾಶವಾಗುತ್ತದೆ.

ಇನ್ನು ಅಧಿಕಾರಿಗಳ ನೇಮಕ. ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಸ್ವಾಭಾವಿಕವಾಗಿ ಸ್ಥಳೀಯವಾಗಿರತಕ್ಕವರನ್ನು ನೇಮಕ ಮಾಡಿಕೊಂಡು ಎಲ್ಲೂ ಕೂಡ ಬದಲಾವಣೆ ಮಾಡತಕ್ಕ ಅವಕಾಶವಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹೀಗಾಗಿ ಅವರು ಬೇರೂರಿ ಯಾರೇ ಪ್ರೆಸಿಡೆಂಟರು ಚುನಾವಣೆಯಾಗಿ ಬಂದರೂ ಕೂಡ ಅವರ ಆಟವನ್ನೇ ನಡೆಸತಕ್ಕ ಕಾರ್ಯ ಮಾಡುತ್ತಿದ್ದಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ದೇಶದಲ್ಲಿ ಸಹಕಾರ ಚಳುವಳಿ ನಡೆಯುತಕ್ಕ ಕಾಲದಲ್ಲಿ ಡಿಸ್ಟ್ರಿಕ್ಟ್ ಲೆವಲಿನಲ್ಲಿ ಒಂದು ಯೂನಿಟ್ ಮಾಡಿಕೊಂಡು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಅಪಾಯಿಂಟ್‌ಮೆಂಟ್ ಮಾಡಬೇಕು. ಆ ಲೆವಲಿನಿಂದ ಆಯಾಯ ಸೊಸೈಟಿಗಳಿಗೆ ಅಧಿಕಾರಿಗಳನ್ನು ಪೋಸ್ಟು ಮಾಡತಕ್ಕದ್ದು ಸರಿ. ಬೇರೆ ಅಧಿಕಾರಿಗಳಿಗೆ ಹೇಗೆ ವರ್ಗ ಮಾಡುವುದು ಇದೆ, ಅದೇ ರೀತಿ ಸೊಸೈಟಿಯ ಎಲ್ಲಾ ಅಧಿಕಾರಿಗಳಿಗೂ ಕೂಡ ಈ ಸಂಬಂಧದಲ್ಲಿ ಸರ್ಕಾರದ ಆರ್ಡರ್ ಅನ್ವಯಿಸುವ ಹಾಗೆ ಇರಬೇಕು. ಹೀಗೆ ಇಲ್ಲದೇ ಇರುವುದರಿಂದ ಅನೇಕ ಕಡೆಗಳಲ್ಲಿ ಅಲ್ಲಿ ಅಧಿಕಾರಿಗಳು ಬೇರೂರಿ ರಿಕಾರ್ಡುಗಳನ್ನು ಅವರ ಕಡಿತದಲ್ಲಿ ಇಟ್ಟುಕೊಂಡು ಯಾವುದು ಚೆಕ್ಕುಗಳನ್ನು ಕೊಟ್ಟಿದ್ದಾರೆ ಯಾವುದಕ್ಕೆ ವೋಚರುಗಳನ್ನು ಹಾಕಿದ್ದಾರೆ

(ಶ್ರೀ ಕೆ. ಎಸ್ ವೀರಪ್ಪಗೌಡ)

ಎಂದು ಪತ್ತೆ ಮಾಡದೆ ಇರುವ ರೀತಿಯಲ್ಲಿ ಕಾರ್ಯಗಳು ನಡೆಯುತ್ತವೆ. ಚಾರ್ಜ್ ಹ್ಯಾಂಡ್ ಓವರ್‌ಮಾಡುವ ಸಂದರ್ಭ ಬಂದಾಗ ಇವೆಲ್ಲ ಬೆಳಕಿಗೆ ಸ್ವಾಭಾವಿಕವಾಗಿ ಬರುತ್ತವೆ. ಆದುದರಿಂದ ಒಂದು ಡಿಸ್ಟ್ರಿಕ್ಟ್ ಲೆವೆಲ್ ಯೂನಿಟ್ ಮಾಡಿ ಅಧಿಕಾರಿಗಳನ್ನು ಅಪಾಯಿಂಟ್ ಮಾಡಿಕೊಳ್ಳತಕ್ಕದ್ದು ಸೂಕ್ತ. ಒಂದು ವೇಳೆ ಸ್ಟೇಟ್ ಯೂನಿಟ್ ಮಾಡಿಕೊಂಡರೂ ನನ್ನ ಅಭ್ಯಂತರವಿಲ್ಲ.

ಎರಡನೆಯದು, ಪ್ರೆಸಿಡೆಂಟರು 3 ವರ್ಷ ಇದ್ದರೆ, ಪುನಃ 3 ವರ್ಷ ಇಲ್ಲದೇ ಇರುವುದು, ವರ್ಷಕ್ಕೊಮ್ಮೆ ಡೈರೆಕ್ಟರ್ ಬೋರ್ಡ್‌ಗೆ ಎಲೆಕ್ಷನ್ ಆಗುವುದನ್ನು ತಪ್ಪಿಸುವುದು. ಈ ರೀತಿ 3—4 ತಿದ್ದುಪಡಿ ಕೊ ಆಪರೇಟಿವ್ ಸೊಸೈಟಿ ಆಕ್ಟ್‌ನಲ್ಲಿ ನಿರ್ದಿಷ್ಟವಾಗಿ ಬರದೇ ಹೋದರೆ, ಯಾವ ತರಹ ಅಮೆಂಡ್‌ಮೆಂಟ್ ಬಂದರೂ ಅದು ಪ್ರಯೋಜನಕ್ಕೆ ಬರುವುದಿಲ್ಲ. ಆದುದರಿಂದ ಈಗಿರತಕ್ಕ ಆಕ್ಟನ್ನು ಬದಲಾವಣೆ ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಕಾಗುತ್ತದೆ. ಆ ರೀತಿ ಮಾಡತಕ್ಕದ್ದು ಬಹಳ ಪ್ರಾಮುಖ್ಯ. ಈ ಸೊಸೈಟಿಗಳನ್ನು ವೈಯೆಬಲ್ ಯೂನಿಟ್ಸ್ ಆಗಿ ಮಾಡುವುದು ಬಹಳ ಅಗತ್ಯ. ನಮ್ಮ ಸಹಕಾರ ಸಚಿವರು ಮೊನ್ನೆ ನಮ್ಮ ಊರಿಗೆ ಬಂದಾಗ ಅವರಿಗೆ ಅದರ ಅನುಭವ ಸಂಪೂರ್ಣವಾಗಿದೆ. ಯಾವ ಯಾವ ಸೊಸೈಟಿಗಳಲ್ಲಿ ಯಾವ ಯಾವ ತರಹದ ಸಾಲ ತೆಗೆದುಕೊಳ್ಳುತ್ತಾರೆ ಎನ್ನುವುದು ಅವರಿಗೆ ಗೊತ್ತಾಗಿದೆ. ಜನರಿಗೆ ಉತ್ಪತ್ತಿ ಮಾಡಿ ಸಾಲ ತೀರಿಸಬೇಕು ಎನ್ನುವ ಮನೋಭಾವ ಬರುವುದಿಲ್ಲ. ಈ ಸೊಸೈಟಿಯಿಂದ ಸಾಲ ತೆಗೆದುಕೊಂಡು, ಆ ಸೊಸೈಟಿಗೆ ಕೊಡುವುದು, ಈ ಸೊಸೈಟಿಯಿಂದ ತೆಗೆದುಕೊಂಡು ಈ ಸೊಸೈಟಗೆ ಕೊಡುವುದು, ಹೀಗಾಗಿ ಎಲ್ಲಾ ಲೆಕ್ಕವೂ ಕೂಡ ಒಂದೇ ಸೊಸೈಟಿಯಲ್ಲಿ ಇಲ್ಲದೇ ಇರುವುದನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ನಾನಂತು ಎಷ್ಟೋ ಕೊ-ಆಪರೇಟಿವ್ ಸೊಸೈಟಿಗಳಲ್ಲಿ ಕೂಡ ಡೈರೆಕ್ಟರಾಗಿ ಮತ್ತು ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈ ಒಂದು ಅನುಭವದ ಮೇಲೆ ತಮ್ಮ ಮುಂದೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಸರ್ಕಾರದವರು ಈಗ ತಂದಿರತಕ್ಕ ಬಿಲ್ ಏನಿದೆ ಅದರಲ್ಲಿರುವ ಈ ಬದಲಾವಣೆಗಳನ್ನು ಒಪ್ಪಿಕೊಂಡು ಈ ಬಿಲ್ಲನ್ನು ಪಾಸ್ ಮಾಡತಕ್ಕದ್ದು ಬಹಳ ಅಗತ್ಯ ಎಂದು ನಾನು ನಂಬಿದ್ದೇನೆ. ಡಿಸ್ಟ್ರಿಕ್ಟ್ ಬ್ಯಾಂಕ್ ಎನ್ನತಕ್ಕದ್ದನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂದು ಕಾಣುತ್ತದೆ. ಕೈಗಾರಿಕೆ ಜಿಲ್ಲಾ ಬ್ಯಾಂಕ್ ಎನ್ನುವುದು ಒಂದು ಕಡೆ, ಕೊ ಅಪರೇಟೀವ್ ಡಿಸ್ಟ್ರಿಕ್ಟ್ ಬ್ಯಾಂಕ್ ಎನ್ನುವುದು ಇನ್ನೊಂದು ಕಡೆ, ಹೀಗೆ ಅಡ್ಮಿನಿಸ್ಟ್ರೇಷನ್ ಜಾಸ್ತಿ ಮಾಡುವುದರಿಂದ ಮತ್ತು ಅನೇಕ ಸಂಘಸಂಸ್ಥೆಗಳನ್ನು ಡೂಪ್ಲಿಕೇಟ್ ಆಗಿ ಸ್ಥಾಪನೆಮಾಡುವುದರಿಂದ, ಜೊತೆಗೆ ಹೊಸದಾಗಿ ಹೊಸದಾಗಿ ಕಾರ್ಪೊರೇಷನ್‌ಗಳನ್ನು ಸ್ಥಾಪನೆ ಮಾಡುವುದ

ಠಿಂದ ಹಣಕಾಸಿನ ಮೇಲೆ ಬಹಳ ತೊಂದರೆಯಾಗುತ್ತದೆ. ಅದನ್ನು ಸರ್ಕಾರದವರು ವಿಮರ್ಶೆಮಾಡಿ ಎಲ್ಲವೂ ಕೂಡಾ ಹೆಚ್ಚಿಗೆ ತಾಲ್ಲೂಕ್ ಮತ್ತು ಹೋಬಳಿ ಲೆವೆಲ್‌ನಲ್ಲಿ ಇರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ತುಕೋಳ ಕಮಿಷನ್ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅವರು 15 ಸಾವಿರ ರೂಪಾಯಿ ಉತ್ಪತ್ತಿ ಇರುವ ಒಂದು ಪಂಚಾಯಿತಿಯನ್ನು ಒಂದ ಯೂನಿಟ್ಟಾಗಿ ಮಾಡಿದರೆ ಅದು ಸರಿಯ್ಯಾಗಿ ಕೆಲಸ ಮಾಡುತ್ತದೆ, ಆದರಿಂದ ಅನುಕೂಲವಾಗುತ್ತದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಮಲೆನಾಡಿಗೆ 10 ಸಾವಿರ ಮೈದಾನಕ್ಕೆ 15 ಸಾವಿರ ಎಂದು ಮಾಡಿದರೆ, ಪಂಚಾಯಿತಿ ಚೆನ್ನಾಗಿ ಕೆಲಸಮಾಡಬಹುದಾದ ಸೊಸೈಟಿಗಳಿಗೂ ಕೂಡಾ ಅಷ್ಟೇ ಪ್ರದೇಶವನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈ ವಿಷಯವನ್ನು ಅಲೋಚನೆ ಮಾಡಬೇಕು. ಜೊತೆಗೆ ಸೊಸೈಟಿಗಳನ್ನು ಡಿಫಾಲ್ಟರ್ ಎಂದು ಪರಿಗಣಿಸಿ ಮಾಡತಕ್ಕ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಡಿಸ್ಟ್ರಿಕ್ಟ್ ಬ್ಯಾಂಕ್‌ನಲ್ಲಿ ಕೆಲವು ಕಡೆ ಏನಾಗಿದೆಯೆಂದರೆ, 10-15 ಸೊಸೈಟಿಗಳಿದ್ದರೆ ಕ್ವಾಲಿಫಿಕೇಷನ್ ಪಡೆಯತಕ್ಕ ಸೊಸೈಟಿಗಳು ಕೆಲವು ಕಡೆ 2-3 ಇರಬಹುದು ಉಳಿದ ಸೊಸೈಟಿಗಳಿಗೆ ಚುನಾವಣೆಯಲ್ಲಿ ಬರತಕ್ಕ ಅವಕಾಶ ಹೊರಟು ಹೋಗುತ್ತದೆ. ವ್ಯಕ್ತಿಗಳನ್ನು ಡಿಫಾಲ್ಟರ್ ಎಂದು ಹೇಳತಕ್ಕದ್ದು ಅವರಿಗೆ ಓಟಿಂಗ್ ಪವರಿಲ್ಲ ಎಂದು ಹೇಳುವುದನ್ನು ಸ್ವಾಭಾವಿಕವಾಗಿ ಒಪ್ಪಿಕೊಳ್ಳುವುದು ಸಹಜ. ಆದರೆ ಸೊಸೈಟಿಗಳವರು ಒಬ್ಬ ಡೈರೆಕ್ಟರ್ ಆಗುವುದಕ್ಕೆ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೆ ಓಟ್ ಮಾಡುವುದಕ್ಕೆ ಅವಕಾಶ ಇಲ್ಲದೇ ಹೋದರೆ ಆ ಸೊಸೈಟಿಗಳ ಕಷ್ಟಸುಖಗಳನ್ನು ಹೇಳುವುದಕ್ಕಾಗಲಿ ಯಾವುದಕ್ಕೂ, ಅವಕಾಶವಿಲ್ಲದೆ, ಸೊಸೈಟಿಗಳನ್ನು ತೆಗೆದು ಬೇರೆ ಇಟ್ಟ ಹಾಗೆ ಆಗುತ್ತದೆ. ಅವರನ್ನು ಹೇಳುವವರು, ಕೇಳುವವರು ಇರುವುದಿಲ್ಲ. ತೊಂದರೆ ಏನು ಎಂದರೆ ಜಿಲ್ಲಾ ಬ್ಯಾಂಕಿನ ಜನರಲ್‌ಬಾಡಿಯಲ್ಲಿ ವಿಷಯ ಪ್ರಸ್ತಾಪಮಾಡುವುದಕ್ಕೆ ಅವಕಾಶವಿರುವುದಿಲ್ಲ. ಆದುದರಿಂದ ಈ ರೀತಿ ಇರತಕ್ಕದ್ದು ಬದಲಾಯಿಸಿ ಇನ್‌ಸ್ಟಿಟ್ಯೂಷನ್‌ಗಳಿಂದ ಪ್ರತಿನಿಧಿಗಳನ್ನು ಕಳುಹಿಸುವಾಗ ಡಿಫಾಲ್ಟರ್ ಸೊಸೈಟಿಗಳು ಓಟು ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವುದನ್ನು ತೆಗೆದುಹಾಕತಕ್ಕದ್ದು ಒಳ್ಳೆಯದು. ಅದೇ ಸೊಸೈಟಿಯಲ್ಲಿ ಜನರಲ್ ಬಾಡಿ ಆದಾಗ ವ್ಯಕ್ತಿಗಳು ಓಟ್ ಮಾಡತಕ್ಕ ಪ್ರಶ್ನೆ ಬರುತ್ತದೆ. ವ್ಯಕ್ತಿಗಳು ಡಿಫಾಲ್ಟರ್ ಆದಾಗ, ವ್ಯಕ್ತಿಗಳನ್ನು ಡಿಫಾಲ್ಟರ್ ಆಗಿ ಟ್ರೀಟ್ ಮಾಡುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಜಿಲ್ಲಾ ಬ್ಯಾಂಕ್ ಡೈರೆಕ್ಟರಾಗಿ ಬರತಕ್ಕ ಸಂದರ್ಭದಲ್ಲಿ ಅಷ್ಟೊಂದು ಜವಾಬ್ದಾರಿಯನ್ನು ತಾಲ್ಲೂಕುಗಳ ಪರವಾಗಿ ವಹಿಸಿಕೊಂಡು ಬರುವಾಗ ಅವರಿಗೆ ಓಟು ಮಾಡುವುದಕ್ಕೆ ಅವಕಾಶ ಕೊಡಬೇಕು. ಕೆಲವು ವೇಳೆ ಜಿಲ್ಲಾ ಬ್ಯಾಂಕ್ ಅಧ್ಯಕ್ಷರು ತಮಗೆ ಬೇಕಾದವರಾದರೆ ನಿಮ್ಮದು ಎಷ್ಟು ಬಾಕಿ, ಎಷ್ಟು ಇದೆಯೋ

(ಶ್ರೀ ಕೆ. ಎಸ್ ವೀರಪ್ಪಗೌಡ)

ಅದರ ಬಗ್ಗೆ ಜನರಲ್‌ಬಾಡಿಯಿಂದ ರೆಸಲ್ಯೂಷನ್ ತೆಗೆದುಕೊಂಡು ಬನ್ನಿ, ಕ್ಯಾಷ್ ಕ್ರೆಡಿಟ್ ತೆಗೆದುಕೊಳ್ಳಿ, ಇಲ್ಲಿ ಡ್ರಾ ಮಾಡಿ ಇಲ್ಲಿ ಕೊಟ್ಟು ಬಿಡಿ, ನೀವು ಡಿಫಾಲ್ಟರ್ ಆಗಿರುವುದು ಹೋಯಿತು ಎಂದು ಹೇಳಿ ಆ ತರಹ ಹಣ ಸಹಾಯ ಕೊಟ್ಟು ಈ ರೀತಿ ಡೈರೆಕ್ಟರ್ ಮಾಡಿ ಕೂರಿಸಿಕೊಂಡು ಇರುತ್ತಾರೆ. ಆ ರೀತಿ ಖಾಯಂ ಆಗಿ ಅವರೇ ನುನಾಪಲಿ ಮಾಡಿಕೊಳ್ಳುವ ಅವಕಾಶ ಕೂಡ ಅವರಿಂದ ಆಗಿರುವುದನ್ನು ನೋಡಿದ್ದೇನೆ. ಕೋಆಪರೇಟೀವ್ ಸೊಸೈಟಿಗಳು ಸರಿಯಾಗಿ ದೇಶದಲ್ಲಿ ಕೆಲಸ ಮಾಡಬೇಕಾಗಿದ್ದರೆ ಈ ಒಂದು 3-4 ವಿಷಯಗಳನ್ನು ತಾವು ಸಂಪೂರ್ಣವಾಗಿ ಯೋಚನೆ ಮಾಡತಕ್ಕದ್ದು ಒಳ್ಳೆಯದು. ಈ ರೀತಿ ಕೆಲವು ಬದಲಾವಣೆಗಳನ್ನು ಅಮೆಂಡ್‌ಮೆಂಟ್ ಅಕ್ಟ್‌ನಲ್ಲಿ ತರಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರಿಗೆ ವಂದಿಸಿ, ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಐ. ಚೆನ್ನಪ್ಪ : (ಮಾಗಡಿ) ಮಾನ್ಯ ಸಭಾಪತಿಗಳೇ, ಈಗ ನಮ್ಮ ಈ ಸದನದ ಮುಂದೆ ಇರತಕ್ಕ ಕೋ ಆಪರೇಟೀವ್ ಅಮೆಂಡ್‌ಮೆಂಟ್ ಬಿಲ್ ಏನಿದೆ ಇದನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಮಾತನಾಡಲು ಬಯಸುತ್ತೇನೆ. ಈ ಒಂದು ಅಮೆಂಡ್‌ಮೆಂಟ್ ಬಿಲ್ಲಿನ ಮೇಲೆ ಈಗತಾನೆ ಶ್ರೀಮಾನ್ ವೀರಪ್ಪಗೌಡರು ಮಾತನಾಡುತ್ತಾ ಕೆಲವು ವಿಷಯವನ್ನು ಹೇಳಿದರು. 6 ವರ್ಷಗಳ ಅವಧಿಯನ್ನು 3 ವರ್ಷಕ್ಕೆ ಇಳಿಸಬೇಕು ಎಂದು ನಾನು ಹಿಂದೆ ಮಾತನಾಡಿದಾಗ ಹೇಳಿದೆ. ನಮ್ಮ ದೇಶದಲ್ಲಿ ಈ ಸಹಕಾರ ತತ್ವ ಯಾವ ಮಟ್ಟದಲ್ಲಿ ಮುಂದುವರೆಯುತ್ತಿದೆ, ಅದರಿಂದ ಜನತೆಗೆ ಏನು ಪ್ರಯೋಜನವಾಗುತ್ತಿದೆ ಎನ್ನುವ ವಿಷಯದಲ್ಲಿ ನಾನು ಹಿಂದೆ ಮಾತನಾಡಿದ್ದೇನೆ. ಮತ್ತೊಮ್ಮೆ ಈ ಅಮೆಂಡ್‌ಮೆಂಟ್ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಅವರು ಹೇಳಿರತಕ್ಕಂಥಾದ್ದು ನಿಜವಾಗಿಯೂ ಅಕ್ಷರಶಃ ವಾಸ್ತವಾಂಶವಾಗಿರತಕ್ಕದ್ದು. ಅವರ ಅಧಿಕಾರಾವಧಿ 6 ವರ್ಷಗಳು ಇರತಕ್ಕದ್ದು ಜಾಸ್ತಿ ಎಂದು ನಾನೂ ಕೂಡ ತಿಳಿದುಕೊಂಡಿದ್ದೇನೆ. ಆದುದರಿಂದ ಇದನ್ನು ಕಡಿಮೆ ಅವಧಿಗೆ ಇಳಿಸುವುದು ಸ್ವಾಗತಾರ್ಹ. ಕೆಲವರು ಈ ಸೊಸೈಟಿಗಳನ್ನು ತಮ್ಮ ಮನೆಗಳ ಸ್ವತ್ತು ಎಂದು ಭಾವಿಸಿಕೊಂಡಿದ್ದಾರೆ. ಈ ಸೊಸೈಟಿಯಲ್ಲಿ ಒಂದೇ ಪಕ್ಷದವರು; ಚ. ಒಂದೇ ಕೈವಾಡ ಇಟ್ಟುಕೊಂಡಿರತಕ್ಕಂಥ ಜನ ಸೇರಿಕೊಂಡು ಈ ಸೊಸೈಟಿಗಳನ್ನು ತಮ್ಮ ಇಚ್ಛೆ ಬಂದಂತೆ ನಡೆಸಿಕೊಂಡು ಅದರ ಪ್ರತಿಫಲ ಷೇರ್‌ಹೋಲ್ಡರ್ಸ್‌ಗೆ ಸಿಗದಂತೆ ಅನುಭವಿಸಿಕೊಂಡು ಬಂದಿದ್ದಾರೆ. ಆದುದರಿಂದ ಈಗ ಸೊಸೈಟಿಯ ಅಧ್ಯಕ್ಷರ ಅಧಿಕಾರಾವಧಿ 6 ವರ್ಷ ಇರುವುದಕ್ಕೆ 3 ವರ್ಷಕ್ಕೆ ಇಳಿಸುವುದು ಸ್ವಾಗತಾರ್ಹವಾದುದು. ಆದುದರಿಂದ ನಾನು ಇದನ್ನು ಸ್ವಾಗತಿಸುತ್ತೇನೆ.

3-30 P. M.

ಇನ್ನು ಆರ್ಬಿಟ್ರೇಟರ್ ಕೋರ್ಟ್ ವಿಚಾರ ಹೇಳಬೇಕಾದರೆ ಚ ಸೊಸೈಟಿಯು ಚುನಾವಣಾ ಸಂದರ್ಭದಲ್ಲಿ ಯಾವುದಾದರೂ ಕೇಸುಗಳನ್ನು ಹಾಕಿದರೆ ಅದು ಆರ್ಬಿಟ್ರೇಟರ್ ಕೋರ್ಟಿಗೆ ಹೋಗುವಂತೆ ಆಗಬೇಕು. ಈಗ ರೆವಿನ್ಯೂ ಟ್ರಿಬ್ಯೂನಲ್ ಕೋರ್ಟು ಯಾವರೀತಿ ಇದೆಯೋ ಅದೇ ರೀತಿ ಇದಕ್ಕೆ ಒಂದು ಕೋರ್ಟ್ ಮಾಡಿದರೆ ಅಲ್ಲಿಗೆ ಅಪೀಲು ಹೋದವರಿಗೆ ನ್ಯಾಯ ದೊರಕಿಸಿ ಕೊಟ್ಟಂತಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಈಗ ಏನಾಗಿದೆ ಎಂದರೆ ಯಾರೋ ರಿಟೈರ್ಡ್ ಆದ ಅಧಿಕಾರಗಳನ್ನಾಗಲಿ ಅಥವಾ ತಮ್ಮ ಪಕ್ಷಕ್ಕೆ ಬೇಕಾದ ಅಧಿಕಾರಿಗಳನ್ನಾಗಲಿ ಅರ್ಬಿಟ್ರೇಟರ್ ಆಗಿ ನೇಮಿಸಿಕೊಂಡು ತಮಗೆ ಇಚ್ಛೆ ಬಂದಂತೆ ನ್ಯಾಯ ದೊರಕಿಸಿಕೊಳ್ಳುತ್ತಾರೆ. ಆದುದರಿಂದ ಈ ಅರ್ಬಿಟ್ರೇಟರ್ ರ್‌ನ್ನು ತೆಗೆದು ಅರ್ಬಿಟ್ರೇಟರ್ ಕೋರ್ಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಲಾರ್ಜ್‌ಸ್ಕೇಲ್ ಸೊಸೈಟಿ ವಿಚಾರ ಹೇಳಬೇಕಾದರೆ ಈ ಬಗ್ಗೆ ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ. ಅದು ಏನೆಂದರೆ ಲಾರ್ಜ್‌ಸ್ಕೇಲ್ ಸೊಸೈಟಿ ಇರತಕ್ಕ ಕಡೆ 3 ಮೈಲಿ ಫಾಸಲೆ ಒಳಗೆ ಪ್ರೈಮರಿ ಸೊಸೈಟಿಗಳನ್ನು ರಿಜಿಸ್ಟರ್ ಮಾಡಕೂಡದು ಎಂದು. ನಾನು ಈ ಬಗ್ಗೆ ಹೇಳಬೇಕಾದರೆ ಅದು ಲಾರ್ಜ್‌ಸ್ಕೇಲ್ ಸೊಸೈಟಿಯೇ ಆಗಿರಲಿ ಅಥವಾ ಪ್ರೈಮರಿ ಸೊಸೈಟಿಯೇ ಆಗಿರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪ್ರತಿಯೊಂದು ಪಂಚಾಯಿತಿಗೂ ಒಂದೊಂದು ಸೊಸೈಟಿ ಕೊಟ್ಟು ಅವರು ವ್ಯವಹಾರ ನಡೆಸಿಕೊಂಡು ಹೋಗುವಂತೆ ಅನುಕೂಲ ಮಾಡಿಕೊಡಬೇಕು. ಆದುದರಿಂದ ಲಾರ್ಜ್‌ಸ್ಕೇಲ್ ಸೊಸೈಟಿ ಇರುವ ಕಡೆ 3 ಮೈಲಿ ಒಳಗೆ ಪ್ರೈಮರಿ ಸೊಸೈಟಿ ರಿಜಿಸ್ಟರ್ಡ್ ಮಾಡಕೂಡದು ಅಂತ ಏನು ಇದೆಯೋ ಅದನ್ನು ಅಮೆಂಡ್ ಮಾಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ವಿಷಯ ಹೇಳುವುದಾದರೆ ಲಾರ್ಜ್‌ಸ್ಕೇಲ್ ಸೊಸೈಟಿಯವರು ಗೊಬ್ಬರವನ್ನು ಹಂಚಿಕೆ ಮಾಡಿದಾಗ ಬೇರೆ ಪಂಚಾಯಿತಿಯವರು ಯಾರಾದರೂ ಹೋದರೆ ನೀವು ನಮ್ಮ ಪಂಚಾಯಿತಿಗೆ ಸಂಬಂಧಪಟ್ಟದ್ದಲ್ಲ, ಆದ್ದರಿಂದ ನಿಮ್ಮ ಪಂಚಾಯಿತಿಗೆ ಗೊಬ್ಬರ ಕೊಡುವುದಿಲ್ಲ ಎನ್ನುತ್ತಾರೆ, ಹಾಗಾದರೆ ಆ ಪಂಚಾಯಿತಿಯವರು ಎಲ್ಲಿಗೆ ಹೋಗ ಬೇಕು. ಯಾರ ಹತ್ತಿರ ಹೋಗಿ ಅವರು ಗೊಬ್ಬರ ತೆಗೆದುಕೊಳ್ಳಬೇಕು. ಹೀಗಾಗಿ ಆ ಪಂಚಾಯಿತಿಯವರಿಗೆ ಯಾವ ಸೌಲಭ್ಯವೂ ಸಿಕ್ಕುವುದಿಲ್ಲ, ಮತ್ತು ಲಾರ್ಜ್‌ಸ್ಕೇಲ್ ಸೊಸೈಟಿ ಇದ್ದ ಕಡೆ ಪಕ್ಕದ ಸೊಸೈಟಿಗಳಿಗೂ ಯಾವ ಸೌಲಭ್ಯವೂ ಸಿಕ್ಕುವುದಿಲ್ಲ. ಇದರಲ್ಲಿ ಯಾರ ಮೆಜಾರಿಟಿ ಇದೆಯೋ, ಯಾರ ಕೈವಾಡ ಇದೆಯೋ ಅವರಿಗೆ ಸೌಲಭ್ಯ ಸಿಕ್ಕುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ಅದು ಲಾರ್ಜ್‌ಸ್ಕೇಲ್ ಸೊಸೈಟಿಯೇ ಆಗಿರಲಿ, ಪ್ರೈಮರಿ ಸೊಸೈ ಟಿಯೇ ಆಗಿರಲಿ ಪ್ರತಿಯೊಂದು ಪಂಚಾಯಿತಿಗೂ ಒಂದು ಸೊಸೈಟಿ ರಿಜಿಸ್ಟರ್ಡ್

(ಶ್ರೀ ಹೆಚ್ ಐ ಚನ್ನಪ್ಪ)

ಮಾಡಿಸಿಕೊಂಡರೆ ಆಯಾಯ ಪಂಚಾಯಿತಿಗಳು ಅದನ್ನು ಚೆನ್ನಾಗಿ ನಡೆಸಿಕೊಂಡು ಸಹಬಾಳ್ವೆ ಮಾಡಿಕೊಂಡು ಹೋಗಲು ಅನುಕೂಲವಾಗುತ್ತದೆ ಆದುದರಿಂದ ಈ ಬಗ್ಗೆ ಒಂದು ಅಮೆಂಡ್‌ಮಾಡಿ ಅದಕ್ಕೆ ತಕ್ಕ ನಿಯಮಾವಳಿಗಳನ್ನು ತರಬೇಕು ಎಂದು ನಾನು ಒತ್ತಾಯಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಡಿಫಾಲ್ಟರ್ ವಿಷಯದ ಬಗ್ಗೆ ಹೇಳಬೇಕಾದರೆ ಒಂದು ಸೊಸೈಟಿಯಲ್ಲಿ ಒಬ್ಬ ಹಣವನ್ನು ತೆಗೆದುಕೊಂಡು ಅವನು ಕೊಡದೇ ಹೋದರೆ ಆ ಸೊಸೈಟಿಗೆ ಬಾರೋಯಿಂಗ್ ಕಪಾಸಿಟಿ ಇಲ್ಲ ಎಂದು ಯಾವ ವಿಧವಾದ ಧನಸಹಾಯವನ್ನು ಕೊಡುವುದಿಲ್ಲ ಎನ್ನುವ ನೀತಿ ಸರಿಯಲ್ಲ. ಯಾರೋ ಒಬ್ಬ ತಪ್ಪು ಮಾಡಿದರೆ ನ್ಯಾಯವಾಗಿರತಕ್ಕಂಥವರಿಗೂ ಸೌಲಭ್ಯ ಸಿಗದಂತೆ ಮಾಡುವುದು ಸರಿಯಲ್ಲ. ಇದು ಹೋಗಬೇಕು. ಯಾವನಾದರೂ ಒಬ್ಬ ತಪ್ಪು ಮಾಡಿ ಅವನು ಡಿಫಾಲ್ಟರ್ ಆದರೆ ಕಾನೂನು ರೀತ್ಯ ಕ್ರಮ ತೆಗೆದುಕೊಂಡು ಆ ಹಣಕ್ಕೆ ಇಂಟರೆಸ್ಟ್ ಮತ್ತು ಪೀನಲ್ ಇಂಟರೆಸ್ಟ್ ವಸೂಲ್ಮಾಡಿ. ಈ ರೀತಿಯಾಗಿ ಅವನಿಂದ ವಸೂಲ್ಮಾಡಿ ತುಂಬಿಸಿಕೊಳ್ಳುವಂಥ ಅವಕಾಶ ಸರ್ಕಾರಕ್ಕೆ ಇರುವಾಗ ಯಾರೋ ತಪ್ಪು ಮಾಡಿದರು ಎಂದು ಬೇರೆಯವರಿಗೂ ಅವಕಾಶ ಇಲ್ಲದಂತೆ ಮತ್ತು ಆ ಸೊಸೈಟಿಗೆ ಬಾರೋಯಿಂಗ್ ಕೆಪಾಸಿಟಿ ಇಲ್ಲ ಎನುವುದು ಸರಿಯಾದುದಲ್ಲ. ಇದರಿಂದ ಬೇರೆಯವರ ಏಳಿಗೆಗೆ ಕುಂಠಿತವಾಗುತ್ತದೆ. ಆದದರಿಂದ ಈ ಬಗ್ಗೆ ಒಂದು ನಿಯಮಾವಳಿಯನ್ನು ತಿದ್ದುಪಡಿ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಮತ್ತು ಈಗ ಅಧ್ಯಕ್ಷರ ಅಧಿಕಾರಾವಧಿಯನ್ನು 6 ವರ್ಷದಿಂದ 3 ವರ್ಷಕ್ಕೆ ಇಳಿಸುವುದು ಸ್ವಾಗತಾರ್ಹ. ಆದರೆ 3 ವರ್ಷಕೊಮ್ಮೆ ನಡೆಯುವ ಚುನಾವಣೆಯಲ್ಲಿ ಅವರನ್ನೇ ಮತ್ತೆ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಅವಕಾಶ ಕೊಡಬಾರದು, ಬೇರೆಯವರು ಅಧ್ಯಕ್ಷರಾಗವುದಕ್ಕೆ ಅವಕಾಶ ಇರಬೇಕು. ಹಾಗಾದರೆ ಹೊಸಬರಾಗಿ ಬರತಕ್ಕವರು ಹುರಿಯಾಳುಗಳಾಗಿ ಬಹಳ ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಮತ್ತು ಅವರಿಗೆ ಒಂದು ಉತ್ತೇಜನವನ್ನೂ ಕೂಡ ಕೊಟ್ಟಂತಾಗುತ್ತದೆ. ಈಗ ಎಲ್ಲರೂ ಕಾನೂನುಗಳನ್ನು ತಿಳಿದುಕೊಂಡಿದ್ದಾರೆ. ಈವೊತ್ತಿನ ದಿವಸ ಸೊಸೈಟಿಗೆ ಬರತಕ್ಕಂಥಾವರು ಕಾನೂನು ತಿಳಿದುಕೊಳ್ಳದೆ ಇರತಕ್ಕಂಥಾವರು ಬರುವುದಿಲ್ಲ ಪ್ರತಿಯೊಬ್ಬರೂ ಕಾನೂನು ತಿಳಿದುಕೊಂಡಿದ್ದಾರೆ. ನಮ್ಮ ಸ್ನೇಹಿತರು ಇನ್ನೊಬ್ಬರು ಹೇಳಿದರು ಅವರನ್ನೇ ಮತ್ತೆ ಅಧ್ಯಕ್ಷರನ್ನಾಗಿ ಮಾಡುವುದರಿಂದ ಹಿರಿಯರ ಅನುಭವ ಸಿಕ್ಕಿದಂತಾಗುತ್ತದೆ ಎಂದು, ಅದಕ್ಕೆ ನಾನು ಹೇಳುವುದು ಏನೆಂದರೆ ಕೆಲವು ಸಂದರ್ಭದಲ್ಲಿ ಅವರಿಂದ ನಮ್ಮ ಏಳಿಗೆಗೆ

ಕುಂಠಿತವಾಗುತ್ತದೆ. ಅನಾಹುತಗಳಾಗುತ್ತದೆ ಎಂದು ಹೇಳುತ್ತೇನೆ. ಅವರು ಹೊರಗಡೆಯೇ ಇದ್ದು ಸಹಕಾರ ಕೊಡಲಿ; ಅದು ಸೂಕ್ತ. ಹಾಗಿದ್ದರೆ ಅಧಿಕಾರ ನಡೆಸತಕ್ಕಂಥಾವರು ಹೊರಗಡೆಯೇ ಇದ್ದುಕೊಂಡು ಅವರ ಸಹಾಯ ಪಡೆಯುತ್ತಾರೆ. ಇಲ್ಲದೆ ಹೋದರೆ ಇದು ಸರಿಯಾಗಿಲ್ಲ ಎಂದು ಹೇಳುತ್ತಾರೆ. ಆದರೆ ಈಗ ಏನಾಗಿದೆ ಎಂದರೆ 25 ವರ್ಷದಿಂದಲೂ ಒಬ್ಬರೇ ಅಧ್ಯಕ್ಷರಾಗಿರುತ್ತಾರೆ. ಇಲ್ಲವೇ ಅವರ ಪರವಾಗಿ ಯಾರಾದರೂ ಇರುತ್ತಾರೆ. ಹೀಗಾಗಿ ಅವರು ಮಾಡತಕ್ಕ ಅನಾಚಾರ, ಅಚಾತುರ್ಯಗಳನ್ನು, ಸೊಸೈಟಿಯ ತಪ್ಪುನೆಪ್ಪುಗಳನ್ನೂ ತಿದ್ದುವುದಕ್ಕೆ ಅವಕಾಶ ಇರುವುದಿಲ್ಲ, ಆದುದರಿಂದ ಅದರ ಅಧಿಕಾರಾವಧಿ 3 ವರ್ಷ ಇರಬೇಕು ಎನ್ನುವ ನಿಯಮಾವಳಿಯನ್ನು ತರಬೇಕು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಆದುದರಿಂದ ಸಾರ್ವತ್ರಿಕವಾಗಿ ಬರುವ ಪದ್ಧತಿ ಈ ಪದ್ಧತಿ ಇರಕೂಡದು, ಪ್ರತಿಯೊಬ್ಬರಿಗೂ ಅವಕಾಶ ಇರಬೇಕು. ಹಾಗಿದ್ದರೆ ಅದರಲ್ಲಿರುವ ತಪ್ಪು ನೆಪ್ಪುಗಳನ್ನು ಕಂಡಾಗ ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಈಗ ಅರ್ಬಿಟ್ರೇಟರ್ಸ್ ತಮಗೆ ಯಾರು ಬೇಕೋ ಅವರನ್ನು ನೇಮಕ ಮಾಡಿಕೊಂಡು ಬರತಕ್ಕಂಥ ಪದ್ಧತಿ ಹೋಗಬೇಕು. ಇದಕ್ಕೆ ಲೀಗಲ್ ಆಗಿರತಕ್ಕಂಥ ಒಬ್ಬ ಜಡ್ಜನ್ನು ಅಪಾಯಿಂಟ್ ಮಾಡಿ. ಲೀಗ್ ರೆವಿನ್ಯೂ ಟ್ರಿಬ್ಯೂನಲ್ ಕೋರ್ಟ್ ಯಾವ ರೀತಿ ಇದೆಯೋ ಅದೇ ರೀತಿ ಕೋಆಪರೇಟೀವ್ ಅರ್ಬಿಟ್ರೇಟರ್ ಕೋರ್ಟ್ ಮಾಡಿ. ಹಾಗಾದರೆ ಅವರಿಗೆ ನ್ಯಾಯ ದೊರಕಿಸಿ ಕೊಟ್ಟಂತಾಗುತ್ತದೆ. ಇಲ್ಲದಿದ್ದರೆ ಇದು ಅನೇಕ ಜನ ಬಂಡವಾಳಶಾಹಿಗಳ ಮತ್ತು ಪ್ರಭಾವಶಾಲಿಗಳ ಕೈಗೆ ಸಿಕ್ಕಿ ಹೋಗುತ್ತದೆ ಆನಂತರ ಈ ಸಹಕಾರ ತತ್ವ ಏನು ಇದೆಯೋ ಅದನ್ನು ಪುನರ್ಜೀವನಗೊಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ 20—25 ವರ್ಷಗಳಿಂದಲೂ ಈ ಒಂದು ಸಹಕಾರಿ ತತ್ವ ಮಸುಕಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಕೆಲವೊಂದು ವಿಷಯದಲ್ಲಿ ಈಗ ತಂದಿರತಕ್ಕಂಥ ನಿಯಮಾವಳಿಗಳನ್ನು ಅನುಮೋದಿಸಿ, ಇನ್ನು ಕೆಲವು ವಿಷಯಗಳಲ್ಲಿ ಕೆಲವು ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕೇಳಿಕೊಂಡು ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ್ : (ಹಿರೇಕೆರೂರ್)—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಸಹಕಾರಿ ಮಂತ್ರಿಗಳು ಮೈಸೂರು ಸಹಕಾರಿ ಇಲಾಖೆ ಬಗ್ಗೆ ಮಂಡಿಸಿರತಕ್ಕಂಥ ತಿದ್ದುಪಡಿಯನ್ನು ಸಂಪೂರ್ಣವಾಗಿ ಸಮರ್ಥಿಸಿ ಆ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಇದರಲ್ಲಿ ಸೆಕ್ಷನ್ (2 ಬಿ) ನಲ್ಲಿ ಮಾಡಿರತಕ್ಕಂಥ ತಿದ್ದುಪಡಿ ಏನು ಇದೆ ಅದು ಸೂಕ್ತವಾಗಿದೆ. ಮೊದಲು ಯಾವುದಾದರೂ ಕೇಸಿನ ಬಗ್ಗೆ ಒಂದು ಹಿಯರಿಂಗ್ ನಡೆಸಬೇಕಾಗಿದ್ದಲ್ಲಿ ಅಥವಾ ಒಂದು ತೀರ್ಮಾನ ಕೊಡಬೇಕಾಗಿದ್ದಲ್ಲಿ 3 ಜನ

(ಶ್ರೀ ಬಿ. ಜಿ. ಬಣಕಾರ್)

ಸದಸ್ಯರೂ ಸೇರಿ ತೀರ್ಮಾನ ಕೊಡಬೇಕಾಗಿತ್ತು. ಅದರಲ್ಲಿ ಒಬ್ಬ ಸದಸ್ಯ ಇಲ್ಲದೇ ಇದ್ದ ಪಕ್ಷದಲ್ಲಿ ತೀರ್ಮಾನ ಕೊಡಲು ಕಷ್ಟವಾಗುತ್ತಿತ್ತು. ಆದುದರಿಂದ ಇದನ್ನು ತಿದ್ದುಪಡಿ ಮಾಡಿ ಯಾವನೇ ಒಬ್ಬ ಸದಸ್ಯ ಇಲ್ಲದೇ ಇದ್ದರೂ ಕೂಡ ಛೇರ್ಮನ್ ಇನ್ನೊಬ್ಬ ಸದಸ್ಯ ಕೂಡಿಕೊಂಡು ಕೇಸಿನ ಬಗ್ಗೆ ಹೀರಿಂಗ್ ನಡೆಸಬಹುದು ಅಥವಾ ತೀರ್ಮಾನ ಕೊಡಬಹುದು. ಆದುದರಿಂದ ಈ ತಿದ್ದುಪಡಿ ಬಹಳ ಯೋಗ್ಯವಾದುದು ಎಂದು ಹೇಳಬಯಸುತ್ತೇನೆ.

ಇನ್ನು ಸೆಕ್ಷನ್ 14(ಬಿ) ತಿದ್ದುಪಡಿ ಮಾಡಿದ್ದಾರೆ. ಇದೂ ಕೂಡ ಬಹಳ ಯೋಗ್ಯವಾದುದು. ಏತಕ್ಕೆಂದರೆ ನಮ್ಮ ರಾಜ್ಯದಲ್ಲಿ 20 ಸಾವಿರ ಸಹಕಾರ ಸಂಘಗಳು ಇವೆ. ಅದರಲ್ಲಿ ಒಂದೊಂದು ಪಂಚಾಯಿತಿ ಸರಹದ್ದಿನಲ್ಲಿ 3-4 ಸಹಕಾರಿ ಸಂಘಗಳು ಇವೆ. ಅವುಗಳನ್ನು ಒಂದು ಕೂಡಿಸಿ ಒಂದು ಸಹಕಾರ ಸಂಘವನ್ನು ಒಂದು ಪಂಚಾಯಿತಿಗೆ ಮಾಡುವುದು ಒಳ್ಳೆಯದು. ನಮ್ಮ ರಾಜ್ಯದಲ್ಲಿ ಉತ್ತಮವಾದ ಸಹಕಾರ ಸಂಘಗಳಿಗೆ ಉತ್ತೇಜನ ಕೊಟ್ಟು ಅನಾವಶ್ಯಕವಾಗಿ ಇರುವುದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ಇದನ್ನು ನಿಜವಾಗಿಯೂ ಸಮರ್ಥನೆ ಮಾಡುತ್ತೇನೆ.

ನಾನು ಇನ್ನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಈ ಸಹಕಾರಿ ಸಂಘಗಳ ಚುನಾವಣೆ ಮೂರು ನಾಲ್ಕು ವರ್ಷಗಳಿಗೆ ಒಮ್ಮೆ ಆಗಬೇಕೆಂದು ಹೇಳಿದರೆ ಸೂಕ್ತ. ಈಗ ನಡೆಯುತ್ತಿರುವ ಕ್ರಮದಲ್ಲಿ ವರ್ಷಕ್ಕೊಂದು ಸಾರಿ ಚುನಾವಣೆ ನಡೆಯುತ್ತದೆ. ಈ ರೀತಿ ವರ್ಷಕ್ಕೊಂದು ಸಾರಿ ಚುನಾವಣೆ ಮಾಡಿದರೆ ಜನರಿಗೆ ಇದರಿಂದ ಯಾವ ರೀತಿಯಾದ ಅನುಕೂಲವೂ ಆಗುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿವರ್ಷ ಸುಮಾರು 8 ಸಾವಿರ, 9 ಸಾವಿರ ಸಹಕಾರ ಸಂಘಗಳ ಚುನಾವಣೆ ಮಾಡಿ ಕಾರ್ಯಕಾರಿ ಮಂಡಲಿ ಒಂದು ವರ್ಷ ಅಸ್ತಿತ್ವದಲ್ಲಿ ಇರಬೇಕಾಗುತ್ತದೆ. ಚುನಾವಣೆಯಲ್ಲಿ ಯಾವುದಾದರೂ ತಕರಾರು ಬಂದರೆ ಕೋ ಆಪರೇಟೀವ್ ಅಪಲೇಟ್ ಟ್ರಿಬ್ಯೂನಲ್‌ಗೆ ಹೋದರೆ ಅದು ತೀರ್ಮಾನವಾಗಬೇಕಾದರೆ ವರ್ಷಾನುಗಟ್ಟಲೆ ಹಿಡಿಯುತ್ತದೆ. ಅಷ್ಟರಲ್ಲಿ ಅವರ ಅಧಿಕಾರಾವಧಿ ಒಂದೇ ವರ್ಷ ಇರುವುದರಿಂದ ಅವರು ಹೊರಟು ಹೋಗುತ್ತಾರೆ. ಅದರೊಳಗೆ ತೀರ್ಮಾನ ಬರದೇ ಹೋದರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಈ ಅಧಿಕಾರಾವಧಿಯನ್ನು ಮೂರು ನಾಲ್ಕು ವರ್ಷಗಳ ಅವಧಿ ಮಾಡಿದರೆ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಹಾಯಕವಾಗುತ್ತದೆಂದು ಹೇಳಿ ನಮ್ಮ ಸಹಕಾರ ಮಂತ್ರಿಗಳು ಒಂದು ತಿದ್ದುಪಡಿಯನ್ನು ತರಬೇಕೆಂದು ಹೇಳುತ್ತೇನೆ. ಇಲ್ಲದೆ ಹೋದರೆ ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಚುನಾವಣೆಯಲ್ಲಿ ತಮಗೆ ಬಹುಮತ ಇಲ್ಲದೆ

ಹೋದರೂ ಸಹಿತ ಬೇರೆಯವರು ಅದರ ಆಡಳಿತದ ಒಳಗಡೆ ಬರುವುದಕ್ಕೆ ಅವಕಾಶ ಕೊಡುವುದಿಲ್ಲ. ಅಧಿಕಾರ ರೂಢರಾದವರು ತಾವು ಸೋತು ಹೋದರೂ ಕೂಡ ಆರ್ಬಿಟ್ರೇಟರ್ ಕಡೆ ಹೋಗಿ ಅನಾವಶ್ಯಕವಾಗಿ ತಮ್ಮ ಅವಧಿಯನ್ನು ಮುಂದುವರಿಸುತ್ತಾರೆಂದು ನಾನು ಹೇಳುತ್ತಿದ್ದೇನೆ. ಅದಕ್ಕೆ ಅವಕಾಶವಾಗದ ಹಾಗೆ ಈ ಒಂದು ಬದಲಾವಣೆಮಾಡಿ ಎಂದು ನಾನು ಹೇಳಬಯಸುತ್ತೇನೆ. ಅದ್ದರಿಂದ ಸೆಕ್ಷನ್ 29 (ಎ) ನಲ್ಲಿ ಕೆಲವು ಸೂಕ್ತ ತಿದ್ದುಪಡಿ ಮಾಡಿ ಅದನ್ನು ಅಮಲ್ ಬಜಾವಣೆ ಮಾಡಿದರೆ ಪಟ್ಟಭದ್ರ ಹಿತಾಸಕ್ತಿಗಳ ಹತೋಟಿ ಹೋಗಲಿಕ್ಕೆ ಅವಕಾಶವಾಗುತ್ತದೆ. ಈ ಸಹಕಾರ ಸಂಘಗಳ ಆಡಳಿತ ಒಳ್ಳೆಯ ರೀತಿಯಲ್ಲಿ ಆಗುತ್ತದೆಂದು ಹೇಳುತ್ತೇನೆ.

ಇನ್ನೊಂದು ತಿದ್ದುಪಡಿ ಮಾಡಬೇಕೆಂದು ಸಹಕಾರ ಮಂತ್ರಿಗಳಿಗೆ ನಾನು ಒತ್ತಿ ಹೇಳುತ್ತೇನೆ. ಸೆಕ್ಷನ್ 29 (ಸಿ) ನಲ್ಲಿ ಹೀಗೆ ಇದೆ. "If he is in default to any co-operative society in respect of any dues from him, either as borrower or as surety;

ಅದಕ್ಕೆ "or any member of the family" ಎಂಬುದನ್ನು ಸೇರಿಸಬೇಕೆಂದು ಹೇಳುತ್ತೇನೆ. ಏಕೆಂದರೆ ಅನೇಕ ಕಡೆ ಗ್ರಾಮಾಂತರ ಸಹಕಾರ ಸಂಘಗಳಲ್ಲಿ ಚೇರ್‌ಮನ್ ಸಾಲ ತೆಗೆದುಕೊಂಡಿರುವುದಿಲ್ಲ ಅವರ ಮಗ ಸಾಲ ತೆಗೆದುಕೊಂಡು ಡಿಫಾಲ್ಟ್ ಆಗಿರುತ್ತಾನೆ; ಇನ್ನು ಕೆಲವು ಕಡೆ ಮಗ ಚೇರ್‌ಮನ್ ಆಗಿರುತ್ತಾನೆ. ಅವನ ತಮ್ಮ ಡಿಫಾಲ್ಟ್ ಆಗಿರುತ್ತಾನೆ; ಇದೇ ರೀತಿ ಒಂದು ಮನೆಯಲ್ಲಿಯೋ ಒಬ್ಬರು ಚೇರ್‌ಮನ್ ಆಗಿದ್ದು ಅದೇ ಮನೆಯಲ್ಲಿ ಇನ್ನೊಬ್ಬರು ಡಿಫಾಲ್ಟರ್ ಆಗಿರುತ್ತಾರೆ. ಆದರೂ ಅವರು ಚೇರ್‌ಮನ್ ಆಗಿ ಮುಂದುವರಿಯುತ್ತಿರುತ್ತಾರೆ. ಆದರಿಂದ ಈ ತರಹ ಯಾವುದೇ ರೀತಿ ಒಂದು ಮನೆತನದಲ್ಲಿ ಯಾವುದೇ ವ್ಯಕ್ತಿ ಡಿಫಾಲ್ಟರ್ ಆಗಿ ಇದ್ದರೆ ಅವನು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಅದು ಒಂದು ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆ ಎಂಬ ನಿಯಮವನ್ನು ಹಾಕಬೇಕು. ಅದೇ ರೀತಿ ಸೆಕ್ಷನ್ 29 (ಸಿ) ನಲ್ಲಿ "If he carries on a busines of the kind carried on by such co-operative society" ಎಂದು ಇದೆ. "he" ಎನ್ನುವುದಕ್ಕೆ ಬದಲಾಗಿ "he or any member of his family" ಎಂದು ತಿದ್ದುಪಡಿ ಮಾಡಬೇಕೆಂದು ಮಂತ್ರಿಗಳಿಗೆ ಸಲಹೆಮಾಡುತ್ತೇನೆ. ಒಬ್ಬ ವ್ಯಕ್ತಿ ಯಾವುದೇ ರೀತಿಯಿಂದ ಕಮಿಷನ್ ಏಜೆಂಟ್ ಆಗಲಿ ಅಥವಾ ಯಾವುದೇ ರೀತಿಯ ಹಣಕಾಸಿನ ಲೇವಾದೇವಿಗಳನ್ನು ಇಟ್ಟುಕೊಂಡಿದ್ದರೆ ಆಗಲಿ ಅವನು ಸಹಕಾರಿ ಸಂಘಗಳಲ್ಲಿ ಆಗಲೀ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಆಗಲಿ ಡೈರೆಕ್ಟರ್ ಆಗುವುದಕ್ಕೆ ಬರುವುದಿಲ್ಲ. ಒಂದೇ ಮನೆತನದಲ್ಲಿ ಯಾರಾದರೂ ಮನಿ ಲೆಂಡರ್ ಇದ್ದರೆ ಅಪ್ಪನೇ ಆಗಲಿ ಅಥವಾ ಮಗನೇ ಆಗಲಿ ಡಿಸ್ಟ್ರಿಕ್ಟ್‌ಕೋ ಆಪರೇಟೀವ್

(ಶ್ರೀ ಬಿ. ಜಿ. ಬಣಕಾರ್)

ಬ್ಯಾಂಕಿನಲ್ಲಿ ಡೈರೆಕ್ಟರ್ ಆಗಿರುತ್ತಾರೆ. ಚೇರ್‌ಮನ್ ಕೂಡ ಆಗಿರುತ್ತಾರೆ. ಆದರೆ ಇನ್ನುಮುಂದೆ ಯಾವುದೇ ವ್ಯಕ್ತಿ ಸಹಕಾರ ಸಂಘಗಳಲ್ಲಿ ಕೆಲಸಮಾಡುತ್ತಾ ಇದ್ದು ಅವರ ಮನೆಯಲ್ಲಿ ಯಾವ ರೀತಿಯಾದ ಲೇವಾದೇವಿ ಇಟ್ಟು ಕೊಂಡಿದ್ದರೆ ಅವರು ಚುನಾವಣೆಯಲ್ಲಿ ನಿಲ್ಲಲಿಕ್ಕೆ ಅನರ್ಹರು ಎಂದು ಮತ್ತೊಂದು ತಿದ್ದುಪಡಿ ಯನ್ನು ಸಹಕಾರ ಮಂತ್ರಿಗಳು ಇದರಲ್ಲಿ ಸೇರಿಸಬೇಕೆಂದು ಒತ್ತಿ ಹೇಳುತ್ತೇನೆ. ಯಾವುದೇ ಒಬ್ಬ ವ್ಯಕ್ತಿಯೇ ಆಗಲಿ ಆತನಿಗೆ ಡಿಸ್ಟ್ರಿಕ್ಟ್ ಕೊ ಆಪರೇಟೀವ್ ಸೆಂಟ್ರಲ್ ಬಾಂಕ್, ತಾಲ್ಲೋಕು ಕೋ ಆಪರೇಟೀವ್ ಸೊಸೈಟಿ ಮತ್ತು ಗ್ರಾಮಾಂತರ ಕೋ ಆಪರೇಟೀವ್ ಸೊಸೈಟಿ ಈ ಮೂರು ಸಂಸ್ಥೆಗಳಲ್ಲಿಯೂ ಕೆಲಸ ಮಾಡುವುದಕ್ಕೆ ಅವಕಾಶವಿರಬಾರದು. ಅದಕ್ಕೆ ಸೂಕ್ತವಾದ ತಿದ್ದುಪಡಿ ತರಬೇಕೆಂದು ಹೇಳುತ್ತೇನೆ.

ಸೆಕ್ಷನ್ 29 (ಡಿ)ಯಲ್ಲಿ 6 ವರ್ಷಗಳಿಗೆ ಮೇಲ್ಪಟ್ಟು ಒಂದೇ ಸಮನೆ ಚೇರ್‌ಮನ್ ಆಗುವುದಕ್ಕೆ ಅವಕಾಶ ಇರಬಾರದೆಂದು ಹಾಕಿದ್ದಾರೆ. ಆದರೆ ಇದು ಪ್ರಜಾಪ್ರಭುತ್ವಕ್ಕೆ ವಿರೋಧವೆಂದು ಕೆಲವರು ಹೇಳುತ್ತಿದ್ದಾರೆ ಆದರೆ ಆ ರೀತಿ ಒಬ್ಬರೇ ವರ್ಷಾನುಗಟ್ಟಲೆ ಸಹಕಾರಿ ಸಂಘದಲ್ಲಿ ಇದ್ದರೆ ಅದು ಸಹಕಾರಿ ಚಳುವಳಿಯ ಬೆಳವಣಿಗೆಗೆ ಸಹಕಾರಿಯಾಗುವುದಿಲ್ಲವೆಂದು ನಾನು ಇಲ್ಲಿ ಹೇಳಬಯಸುತ್ತೇನೆ. ಇದರ ಬಗ್ಗೆ ಸಹಕಾರ ಮಂತ್ರಿಗಳು ಈ ತಿದ್ದುಪಡಿ ತಂದಿರುವುದಕ್ಕಾಗಿ ಅವರನ್ನು ಪ್ರಶಂಸೆ ಮಾಡುತ್ತೇನೆ. ಸೆಕ್ಷನ್ 29 (ಸಿ) ಸಬ್‌ಕ್ಲಾಸ್ (2) ರಲ್ಲಿ ಎರಡಕ್ಕಿಂತ ಹೆಚ್ಚಿಗೆ ಸಹಕಾರಿ ಸಂಸ್ಥೆಗಳಲ್ಲಿ ಒಬ್ಬ ವ್ಯಕ್ತಿಯೇ ಪ್ರೆಸಿಡೆಂಟ್ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಇರಬಾರದು ಎಂದು ಹಾಕಿದ್ದಾರೆ. ಆ ರೀತಿ ಇದ್ದರೆ ಅವರು ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ; ಮತ್ತು ಬೇರೆಯವರೂ ಕೆಲಸಮಾಡುವುದಕ್ಕೆ ಅವರು ಬಿಡುವುದಿಲ್ಲ. ಆದರಿಂದ ಆ ರೀತಿ ಮಾಡಿರುವುದು ಸರಿಯಾಗಿದೆಯೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ 30 (ಎ) ನಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸಹಕಾರ ಸಂಘಗಳಿಗೆ ಸೂಕ್ತ ನಿರ್ದೇಶನ ಕೊಡಲು ಅವಕಾಶ ಮಾಡಿ ಕೊಟ್ಟಿದ್ದಾರೆ. ಇವೊತ್ತಿನ ದಿವಸ ಒಮ್ಮೊಮ್ಮೆ ರಾಜಕೀಯ ಧುರೀಣರು ಹೇಳಿದಂತೆ ಅಧಿಕಾರಿಗಳು ಕೆಲಸ ಮಾಡದಿದ್ದರೆ, ಅವರನ್ನು ಅಲ್ಲಿಂದ ವರ್ಗಮಾಡಿಸಿ ಬಿಡುತ್ತಾರೆಂದು ಹೆದರಿಕೆಯಿಂದ ಅವರು ಹೇಳಿದಂತೆ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಅಂಥಹ ಅಧಿಕಾರಿಗಳು ಇವೊತ್ತು ಇದ್ದಾರೆ. ಆದ್ದರಿಂದ ಅವರ ಅಧಿಕಾರ ದುರುಪಯೋಗವಾಗದಂತೆ ಸರ್ಕಾರ ಮುತುವರ್ಜಿವಹಿಸಬೇಕು ಎಂದು ಹೇಳು ತ್ತೇನೆ.

Finally I feel it is necessary to issue direction to any class of co-operative societies generally or to any co-operative society or co-operative societies in particular. He may issue directions to them from time to time and all such co-operative societies or the co-operative society concerned, as the case may be, shall be bound to comply with such directions, after giving the society concerned a reasonable opportunity of being heard. ಈ ರೀತಿ ಇದರಲ್ಲಿ ಹೊಸದಾಗಿ ಒಂದು ನಿಯಮವನ್ನು ಸೇರಿಸಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ಅಧಿಕಾರಿಗಳು ಹದ್ದುಮೀರಿ ವರ್ತನೆ ಮಾಡುವುದು ಮತ್ತು ಅಧಿಕಾರ ದುರುಪಯೋಗ ಮಾಡುವುದು ಏನಿದೆ ಅದು ಆಗಬಾರದು ಎನ್ನುವ ದೃಷ್ಟಿಯಿಂದ ಆ ಕಡೆ ಗಮನವಿಡಬೇಕೆಂದು ಹೇಳಿ ಈ ಸಲಹೆಯನ್ನು ಮಂತ್ರಿಗಳಿಗೆ ಕೊಡ್ಡಬಯಸುತ್ತೇನೆ.

ಆ ಮೇಲೆ ಸೆಕ್ಷನ್ 53(ಎ) ನಲ್ಲಿ "Nomination of members of Committee bv State Government in certain cases." ಎಂದು ಇದೆ, ಇದು ಬಹಳ ಸೂಕ್ತವಾದದು. ಇವತ್ತಿನವರೆಗೆ ನಮ್ಮ ರಾಜ್ಯದ ಅನೇಕ ಸಹಕಾರ ಸಂಘಗಳಲ್ಲಿ ಸರಕಾರದ ಷೇರು ಹಣವನ್ನು ಬರ್ತಫರ್ ಮಾಡಿದ್ದಾರೆ. ಕೆಲವು ಕಡೆ ಮಾರ್ಕೆಟಿಂಗ್ ಸೊಸೈಟಿಗಳು ಸರಕಾರದ ಕಣ್ಣಿಗೆ ಮಣ್ಣು ಹಾಕುವಂಥ ಕೆಲಸವನ್ನು ಮಾಡುತ್ತಿವೆ. ಆದ್ದರಿಂದ ಸರ್ಕಾರ ಇವುಗಳ ಮೇಲೆ ಸರಿಯಾದ ನೋಟವನ್ನು ಇಟ್ಟು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಸರಕಾರದ ಷೇರು ಹಣ ಸಾರ್ವಜನಿಕ ಸ್ವತ್ತು, ಈ ಹಣಕ್ಕೆ ಅವರು ಯಾವ ರೀತಿಯ ಬಡ್ಡಿ ಅಥವಾ ಶುಲ್ಕವನ್ನೂ ಕೊಡುತ್ತಾ ಇಲ್ಲವಾದ್ದರಿಂದ ಇವುಗಳಿಂದ ಸಾರ್ವಜನಿಕರಿಗೆ ಉಪಯೋಗವಂಥ ಕೆಲಸಗಳು ಆಗಬೇಕಾಗಿರುವುದರಿಂದ ಸಹಕಾರಿ ಸಂಘಗಳಲ್ಲಿ ಸರಕಾರದ ನಾಮಿನೇಷನ್ ಇರುವುದು ಯುಕ್ತ ಅನೇಕ ಕಡೆ ಸಹಕಾರ ಸಂಘಗಳವರು ತಮಗೆ ಬೇಕಾದಂತೆ ರೆಸಲ್ಯೂಷನ್ ಮಾಡಿಕೊಂಡು, ಅಲ್ಲಿಯ ಪ್ರೊಸಿಡಿಂಗ್ಸ್ ಕಾಪಿಯನ್ನೂ ಸಹಿತ ಬೇರೆಯವರಿಗೆ ಕೊಡುವುದಿಲ್ಲ. ಆದ್ದರಿಂದ ಇಂಥ ಸಂಸ್ಥೆಗಳಲ್ಲಿ ಸರ್ಕಾರದ ನಾಮಿನಿ ಇರುವುದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಕೆಲವು ಕಡೆ ಡೈರೆಕ್ಟರ್ಸ್ ಇದ್ದರೂ ಸಹಿತ ಅವರು ಮೀಟಿಂಗ್‌ಗಳಲ್ಲಿ ಹಾಜರು ಆಗುವುದಿಲ್ಲ. ಸಹಕಾರ ಸಂಘಗಳಿಗೆ ಸರಿಯಾದ ಸೂಚನೆಯನ್ನಾಗಲೀ ಸಲಹೆಯನ್ನಾಲಿ ಕೊಡುವುದಿಲ್ಲ. ಆದ್ದರಿಂದ ಮೂರನೆಯ ಒಂದು ಭಾಗ ನಾಮಿನೀಸ್ ಇದ್ದರೆ, ಆಗ ಎಲ್ಲರಿಗೂ ಧೈರ್ಯ ಬರುತ್ತದೆ, ಮತ್ತು ಸಹಕಾರ ಸಂಸ್ಥೆಗಳ ಮೇಲೆ ಒಂದು ಹತೋಟಿಯೂ ಇರುತ್ತದೆ. ಏಕೆಂದರೆ, ಸಹಕಾರ ಸಂಘಗಳು ಒಂದು ವರ್ಗಕ್ಕೆ ಅನ್ಯಾಯವಾಗುವಂಥ ಕೆಲಸ ಮಾಡುತ್ತಾ ಇದ್ದರೆ, ಸರ್ಕಾರದ ಹಣವನ್ನು ದುರುಪ

(ಶ್ರೀ ಬಿ. ಜಿ. ಬಣಕಾರ್)

ಯೋಗ ಮಾಡುತ್ತಾ ಇದ್ದರೆ ಇಂಥ ಡೈರೆಕ್ಟರುಗಳು ಸಹಕಾರ ಸಂಘಕ್ಕೆ ಮಾರಕವಾಗದೆ, ಉಪಯುಕ್ತವಾದ ರೀತಿಯಲ್ಲಿ ಸಹಕಾರ ಸಂಘಗಳಿಗೆ ತಾರಕವಾಗಿ ಕೆಲಸ ಮಾಡುವಂತಾಗಬೇಕು. ಅಂಥ ಡೈರೆಕ್ಟರುಗಳು ಬರಬೇಕು ಎಂದು ಹೇಳಿ ಈ ತಿದ್ದುಪಡಿಯನ್ನು ಒಮ್ಮನಸ್ಸಿನಿಂದ ಒಪ್ಪುತ್ತೇನೆ.

ಇನ್ನು 72(ಬಿ) ನಲ್ಲಿ "*R*eimbursement to the Deposit Insurance Corporation by the Liquidators"

ಎಂದು ಒಂದು ಸೆಕ್ಷನ್ ಅನ್ನು ಹಾಕಿದ್ದಾರೆ. ಇದು ಕೂಡ ಬಹಳ ಒಳ್ಳೆಯದು.

128 (ಎ) ನಲ್ಲಿ "Constitution of authority for recruitment, training etc., of employees of Co-operative societies" ಎಂದು ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ಇವತ್ತಿನ ಸಹಕಾರ ಸಂಘಗಳಲ್ಲಿ ಸರಿಯಾದ ನೌಕರದಾರರು ಇಲ್ಲ. ಅವರಿಗೆ ಸರಿಯಾದ ಶ್ರೇಣಿ ಇಲ್ಲ. ಒಂದೊಂದು ಸಹಕಾರ ಸಂಘದಲ್ಲಿ ಸೆಕ್ರೆಟರಿ 20 ರೂಪಾಯಿ ಪಗಾರವನ್ನು ಪಡೆಯುತ್ತಾ ಇದ್ದರೆ ಇನ್ನೊಂದು ಕಡೆ ಒಂದು ಸಾವಿರ, ಎರಡು ಸಾವಿರ ರೂಪಾಯಿಗಳ ಪಗಾರವನ್ನು ತೆಗೆದುಕೊಳ್ಳುವಂಥ ನೌಕರರು ಇದ್ದಾರೆ. ಈ ರೀತಿ ಆಗಬಾರದು. ನಮ್ಮ ರಾಜ್ಯದಲ್ಲಿ ಒಟ್ಟು 20 ಸಾವಿರ ಸಹಕಾರ ಸಂಘಗಳು ಇದೆ. ಇವುಗಳಿಗೆ ನೌಕರದಾರರನ್ನು ನೇಮಕ ಮಾಡುವಾಗ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿ, ಅವರದ್ದೇ ಒಂದು ಕೇಡರ್ ಮಾಡಿ ಸೂಕ್ತವಾದಂಥ ಪಗಾರ ಕೊಟ್ಟರೆ ರಾಜ್ಯದಲ್ಲಿ ಸಹಕಾರ ಸಂಘಗಳು ಉತ್ತಮವಾದಂಥ ರೀತಿಯಲ್ಲಿ ನಡೆಯುತ್ತವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ನಮ್ಮ ಸಹಕಾರ ಸಂಘಗಳ ಮೇಲೆ ಹೆಚ್ಚಿನ ಹೊಣೆ ಇದೆ. ರಾಜ್ಯದ ಮೂರು ಕೋಟಿ ಜನರಿಗೆ ಅನ್ನ ಕೊಡುವಂಥ ರೈತರಿಗೆ ಸಹಾಯ ಮಾಡುವಂಥ ದೊಡ್ಡ ಜವಾಬ್ದಾರಿಯನ್ನು, ಹೊಣೆಯನ್ನು ಸಹಕಾರ ಸಂಘಗಳು ಹೊತ್ತಿವೆ. ರೈತರು ಬೆಳೆದ ಫಸಲನ್ನು ಸರಿಯಾದ ರೀತಿಯಲ್ಲಿ ಮಾರಾಟ ಮಾಡಿಸಿ ಸರಿಯಾದ ಬೀಜಗೊಬ್ಬರ ಕೊಟ್ಟು ಅವರಿಗೆ ಒಳ್ಳೆಯ ಫಸಲನ್ನು ಬೆಳೆಯಲಿಕ್ಕೆ ಸಹಾಯ ಮಾಡುವಂಥ ಒಂದು ಕಾರ್ಯ ಸಹಕಾರ ಸಂಘಗಳ ಮೇಲೆ ಇದೆ. ಇಂಥ ಒಂದು ಒಳ್ಳೆಯ ಜವಾಬ್ದಾರಿ ನಮ್ಮ ಸಹಕಾರ ಸಂಘಗಳ ಮೇಲೆ ಇರುವುದರಿಂದ, ಇವುಗಳಿಂದ ಸಲ್ಲಬೇಕಾದಂಥ ಸೇವೆಯು ಮಹತ್ತರವಾದದ್ದು, ಆದ್ದರಿಂದ ಅವುಗಳ ಮೇಲೆ ಸಾರ್ವಜನಿಕರ ಹಿಡಿತ ಇರುವುದು ಒಂದು ದೃಷ್ಟಿಯಿಂದ ಒಳ್ಳೆಯದು. ಆದ್ದರಿಂದ ಸೆಕ್ಷನ್ 128 (ಎ) ಕೂಡ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ನಮ್ಮ ಸಹಕಾರ ಮಂತ್ರಿಗಳು ಏನು ತಿದ್ದುಪಡಿಗಳನ್ನು ಇಟ್ಟಿದ್ದಾರೆ ಅವು ಶೇಕಡ

20ರಷ್ಟು ತಿದ್ದುಪಡಿಗಳು. ಇನ್ನೂ ಹೆಚ್ಚು ತಿದ್ದುಪಡಿಗಳನ್ನು ಮಾಡಬೇಕಾದಂಥ ಅವಶ್ಯಕತೆ ಇದೆ. ಆ ಬಗ್ಗೆ ಸಹಕಾರ ಮಂತ್ರಿಗಳು ನುರಿತ ಅಧಿಕಾರಿಗಳು ಯಾರು ಇದ್ದಾರೆ, ನಿಷ್ಪಕ್ಷಪಾತವಾದ ಅಧಿಕಾರೇತರರು ಯಾರು ಇದ್ದಾರೆ ಅವರುಗಳ ಸಲಹೆಯನ್ನು ತೆಗೆದುಕೊಂಡು ಹೆಚ್ಚು ತಿದ್ದುಪಡಿಗಳನ್ನು ತರಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಈಗ ತಂದಿರತಕ್ಕ ತಿದ್ದುಪಡಿಗಳನ್ನು ಸಂತೋಷದಿಂದ ಒಪ್ಪಿ, ಈ ತಿದ್ದುಪಡಿಗಳನ್ನು ಆದಷ್ಟು ತ್ವರಿತವಾಗಿ ಜಾರಿಯಲ್ಲಿ ತರಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಒತ್ತಿ ಹೇಳಿ ಇಷ್ಟು ಸ್ವಲ್ಪ ವೇಳೆಯನ್ನು ಅಧ್ಯಕ್ಷರು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಪೂಗೌಡ ರಾಯಪ್ಪ (ಷಹಪುರ್) :— ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ತಂದಂಥ ತಿದ್ದುಪಡಿಗಳಲ್ಲಿ, ಅನೇಕ ತಿದ್ದುಪಡಿಗಳನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಕೆಲವು ತಿದ್ದುಪಡಿಗಳ ಬಗ್ಗೆ ನನಗನ್ನಿಸುತ್ತದೆ ಅವು ಸಹಕಾರ ಸಂಘಗಳ ಮೂಲ ತತ್ವಕ್ಕೆ ಧಕ್ಕೆ ಉಂಟಾಗತಕ್ಕ ತಿದ್ದುಪಡಿಗಳು ಎಂದು. ಮೊದಲನೆಯದಾಗಿ, ಮ್ಯಾನೇಜಿಂಗ್ ಡೈರೆಕ್ಟರ್, ಪ್ರೆಸಿಡೆಂಟ್ ಅಥವಾ ವೈಸ್ ಪ್ರೆಸಿಡೆಂಟ್ ಇವರ ಅವಧಿಯನ್ನು ಆರು ವರ್ಷ ಎಂದು ನಿಗದಿ ಮಾಡಿರತಕ್ಕಂಥ ಉದ್ದೇಶ ಇಷ್ಟೇ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇನೆಂದರೆ ಇದರಲ್ಲಿ ಕೆಲವೇ ವ್ಯಕ್ತಿಗಳು ಹೆಚ್ಚಿನ ಮಟ್ಟಿಗೆ ಪಾಲುಗಾರರಾಗಿ ಮತ್ತು ಸಹಕಾರ ಸಂಘಗಳ ಮುಖಾಂತರ ತಮ್ಮದೇ ಆದಂಥ ಉದ್ದೇಶವನ್ನು ಹೊಂದಬಾರದು ಎನ್ನುವುದು ಈ ತಿದ್ದುಪಡಿಯ ಉದ್ದೇಶ. ಆದರೆ ವಿಶೇಷವಾಗಿ ಪ್ರತಿಯೊಬ್ಬ ವ್ಯಕ್ತಿಯು ಕೂಡ, ಕಾರ್ಯಕರ್ತನೂ ಕೂಡ ಪ್ರತಿಯೊಂದರಲ್ಲಿಯೂ ಆಸಕ್ತಿ ಉಳ್ಳವನಾಗಿರುವುದಿಲ್ಲ. ಯಾವ ವ್ಯಕ್ತಿಗೆ ಇದರಲ್ಲಿ ವಿಶೇಷವಾದ ಆಸಕ್ತಿ ಇರುತ್ತದೆಯೋ ಅಂಥವನಿಗೆ ಅರು ವರ್ಷದ ಅವಧಿಯ ನಿರ್ಬಂಧವನ್ನು ಹಾಕಿ, ಸಹಕಾರ ಸಂಘಗಳ ಉತ್ತೇಜನಕ್ಕೆ ಒಂದು ಕೊಡಲಿ ಪೆಟ್ಟನ್ನು ಹಾಕಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಹಕಾರ ಸಂಘಗಳ ಮೇಲೆ ಏನೇನೋ ಅಪಾದನೆಗಳನ್ನು ಜನರು ಮಾಡುತ್ತಿದ್ದಾರೆ. ಮಾರ್ಕೆಟಿಂಗ್ ಸೊಸೈಟಿಯಲ್ಲಿರತಕ್ಕ ವ್ಯಕ್ತಿಗಳು ಲೋಪದೋಷಗಳನ್ನು ಮಾಡಿ ತಮ್ಮ ಸ್ವಾರ್ಥವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದರೆ ಇಂಥವರಿಗೆ ಸಹಕಾರ ಸಂಘದ ಆಕ್ಟಿನಲ್ಲಿ ಕಠೋರವಾದ ಶಿಕ್ಷೆ ಕೊಡಲಿಕ್ಕೆ ಅವಕಾಶವನ್ನು ಮಾಡಿದ್ದಾರೆ ಆರು ವರ್ಷದ ವರೆಗೆ ಯಾರೂ ಅಧ್ಯಕ್ಷರು ಇರಬಾರದು ಎನ್ನುವ ಗೆರೆಯನ್ನು ಹಾಕಿದರೆ, ಯಾವ ಸಹಕಾರ ಸಂಘಗಳಲ್ಲಿ ಒಳ್ಳೆಯ ಪ್ರಾಮಾಣಿಕರು ಇದ್ದಾರೆ, ಯಾರು ಸಹಕಾರ ಸಂಘಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಮುಂದಕ್ಕೆ ತರಬೇಕು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೋ ಅಂಥವರಿಗೆ ನಿರುತ್ಸಾಹ ಮಾಡಿದಂತಾಗುತ್ತದೆ ಮತ್ತು ಸಹಕಾರ ಸಂಘಗಳ ಜೀವನವನ್ನು ಕುಂಠಿತ

(ಶ್ರೀ ಬಾಪೂಗೌಡ ರಾಯಪ್ಪ)

ಮಾಡಿ ಅವುಗಳಿಗೆ ಒಂದುಪೆಟ್ಟು ಬೀಳುತ್ತದೆ. ಎನ್ನುವ ಶಂಕೆ ನನಗೆ ಇದರಿಂದ ಕಾಣುತ್ತದೆ. ಆದ್ದರಿಂದ ಈ ಆರು ವರ್ಷದ ಅವಧಿ ಏನು ಇದೆ ಅದನ್ನು ಇಲ್ಲಿ ತರಬಾರದು ಎಂದು ನಾನು ಹೇಳುತ್ತೇನೆ. ಕೆಲವು ಸಹಕಾರ ಸಂಘಗಳಲ್ಲಿ ನನಗೆ ತಿಳಿದ ಪ್ರಕಾರ, ಕೆಲವೇ ವ್ಯಕ್ತಿಗಳು ಹಲವಾರು ವರ್ಷದಿಂದ ಕಾಣುತ್ತಿದ್ದಾರೆ. ಅವರು ತಪ್ಪು ಮಾಡಿದರೆ, ಶಿಕ್ಷೆ ಮಾಡಲಿಕ್ಕೆ ಸಹಕಾರ ಸಂಘದ ಆಕ್ಟಿನಲ್ಲಿ ಅವಕಾಶ ಇದೆ. ಈಗ ತಾವು ಮೂರು ವರ್ಷ, ಎರಡು ವರ್ಷ ಅವಧಿಯನ್ನು ಇಟ್ಟುಕೊಂಡು, ಬೇರೆ ಬೇರೆ ವ್ಯಕ್ತಿಗಳನ್ನು ಇಟ್ಟುಕೊಂಡು ಕೆಲಸ ಮಾಡಿದ ಕಾಲಕ್ಕೆ ಸಹಕಾರ ಸಂಘಗಳ ಉದ್ದೇಶ ಪೂರ್ಣವಾಗುವುದಿಲ್ಲ. ಸಹಕಾರ ಸಂಘಗಳಿಗೆ ನಾವು ಯಾವ ದೃಷ್ಟಿಯಿಂದ ಉತ್ತೇಜನ ಕೊಡುತ್ತಿದ್ದೇವೆಯೋ ಅದು ಪೂರ್ಣವಾಗುವುದಿಲ್ಲ. ಸಂಘಗಳಿಗೆ ಬರತಕ್ಕ ವ್ಯಕ್ತಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು. ಅವರು ಎಲ್ಲಿಯಾದರೂ ತಪ್ಪುಮಾಡಿದರೆ, ಶಿಕ್ಷೆ ಮಾಡುವುದಕ್ಕೆ ಅವಕಾಶ ಇರಬೇಕು ಎಂದು ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

4-00 P. M.

ಇದಾದ ನಂತರ ಕ್ಲಾಜ 53-ಎ ನಲ್ಲಿ ಯಾವ ಸಹಕಾರ ಸಂಘದಲ್ಲಿ ಸರಕಾರದ ಷೇರು ಬಂಡವಾಳ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ 50ಕ್ಕಿಂತ ಹೆಚ್ಚಾಗಿದೆ ಮತ್ತು 5 ಲಕ್ಷ ಷೇರು ಬಂಡವಾಳ ಸರಕಾರದಿಂದ ಅಲ್ಲ, ಸರಕಾರ ಒಟ್ಟು ಮೆಂಬರುಗಳಲ್ಲಿ ಮೂರನೆಯ ಒಂದು ಭಾಗದಷ್ಟು ಮೆಂಬರುಗಳನ್ನು ನಾಮಿನೇಟ್ ಮಾಡಲು ಅವಕಾಶವಿದೆ. ಸರಕಾರದ ಷೇರನ್ನು ಸುರಕ್ಷಿತವಾಗಿ ನೋಡಿಕೊಳ್ಳಲು ಈ ರೀತಿ ಮಾಡಿರಬಹುದು. ಆದರೆ ಈಗ ಆಡಿಟ್ ಸಿಬ್ಬಂದಿ ಇದೆ, ಇನ್‌ಸ್ಪೆಕ್ಟರು, ಡೆಪ್ಯುಟಿ ಡೈರೆಕ್ಟರು ಮುಂತಾದವರು ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿರುವ ಸಂಘಗಳನ್ನು ನೋಡಿಕೊಳ್ಳುತ್ತಿದ್ದಾರೆ. ಸರಕಾರದ ಪ್ರತಿನಿಧಿಗಳು ಯಾವಾಗಲೂ ಕೂಡ ಈ ಸಂಘ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅವಕಾಶವಿದೆ ಆದರೂ ಕೂಡ ಮೂರನೆಯ ಒಂದು ಭಾಗ ಡೈರೆಕ್ಟರುಗಳನ್ನು ನಾಮಿನೇಟ್ ಮಾಡಲು ಅವಕಾಶ ಮಾಡಿಕೊಂಡಿದ್ದಾರೆ. ಇದು ಎಷ್ಟುಮಟ್ಟಿಗೆ ಸರಿಯಾದುದು ಎಂಬುದನ್ನು ವಿಚಾರಮಾಡಬೇಕು. ಇದರಿಂದ ಠರಾವುಗಳು ಬಂದಾಗ ಅವು ಅಂಗೀಕಾರವಾಗಲು ಅವಕಾಶವಿರುವುದಿಲ್ಲ. ಈಗ ತಂದಿರುವ ತಿದ್ದುಪಡಿಯಿಂದ ಸರಕಾರ ಸ್ವೇಚ್ಛಾನುಸಾರವಾಗಿ ಕಾರ್ಯಕಲಾಪ ನಡೆಸಲು ಅವಕಾಶವಾಗುವುದು. ಅಂಥ ಅಧಿಕಾರ ಈ ತಿದ್ದುಪಡಿಯ ಮೂಲಕ ಸರಕಾರಕ್ಕೆ ಬರುವುದು. ಸಹಕಾರ ಸಂಘಗಳು ಪ್ರಜಾಪ್ರಭುತ್ವಕ್ಕನುಗುಣವಾಗಿ ಕೆಲಸಮಾಡಲು ಅದರಿಂದ ಸಾಧ್ಯವಾಗುವುದಿಲ್ಲ. ನಾಮಿನೇಟ್

ಮಾಡಿರುವವರು ಒಪ್ಪದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಈ ರೀತಿ ತಿದ್ದು ಪಡಿ ಮಾಡಿರುವುದು ಸೂಕ್ತವಲ್ಲ, ಇದನ್ನು ಕಿತ್ತು ಹಾಕಬೇಕು. ಇದು ರೈತರಿಗೆ ಕೊಡಲಿ ಪೆಟ್ಟಾಗಿದೆ. ಯಾರಾದರೂ ಸರಕಾರಿ ಅಧಿಕಾರಿಗಳು ನೋಟ್ ಆಫ್ ಡಿಸೆಂಟ್ ಹಾಕಿದರೆ ತೊಂದರೆಯಾಗುವುದು. ಮೂರನೆಯ ಎರಡು ಭಾಗ ಡೈರೆಕ್ಟರುಗಳು ಒಪ್ಪಿದರೂ ನೋಟ್ ಆಫ್ ಡಿಸೆಂಟ್ ಬಂದಾಗ ನಿರ್ಣಯ ಕಾರ್ಯ ಗತವಾಗಲು ತೊಂದರೆಯಾಗುವುದು. ಇದು ಸರಿಯಲ್ಲ, ಇದನ್ನು ತೆಗೆದುಹಾಕ ಬೇಕು. ತೆಗೆದು ಹಾಕಿದರೆ ಕೆಲಸ ಸುಲಲಿತವಾಗಿ ಜರುಗುವುದು. ಸರಕಾರಕ್ಕೆ ಪ್ರತಿಯೊಂದರಲ್ಲೂ ಹಿಡಿತ ಇರಬೇಕೆಂದು ತಿದ್ದುಪಡಿಗಳನ್ನು ತಂದಿದೆ. ಜೊತೆಗೆ ಇದರಲ್ಲಿ ರಾಜಕೀಯವೂ ಅಡಕವಾಗಿದೆ ಸರಕಾರ ತನಗೆ ಬೇಕಾದವರಿಗೆ ಅವಕಾಶ ಮಾಡಲು ನಾಮಿನೇಟ್ ಮಾಡುವ ಅವಕಾಶ ಪಡೆಯಲು ತಿದ್ದುಪಡಿ ಮಾಡಲಾಗಿದೆ. ಇದು ಉಚಿತವಲ್ಲ. ಇದರಿಂದ ಸಹಕಾರ ಚಳವಳಿಗೆ ಧಕ್ಕೆ ಬರುವುದು. ಚಳವಳಿ ಬೆಳೆಯಲು ಅವಕಾಶ ಆಗುವುದಿಲ್ಲ ಯಾವುದಾದರೂ ಸಹಕಾರ ಸಂಘದಲ್ಲಿರುವ ವ್ಯಕ್ತಿ ತಮಗೆ ಬೇಕಾಗಿಲ್ಲದಿದ್ದರೆ ಅಂಥವರನ್ನು ತೆಗೆಯಲು ಅಧಿಕಾರ ಪಡೆದುಕೊಂಡಿದ್ದಾರೆ. ಓಟ್ ಆಫ್ ಡಿಸೆಂಟ್ ಹಾಕಿ ಸಂಘದ ಕಾರ್ಯ ಸ್ಥಗಿತಗೊಳಿಸಲು ಅವಕಾಶವಿದೆ. ಆದುದರಿಂದ ಸಹಕಾರ ಸಂಘಗಳ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ, ಸಹಕಾರ ಸಂಘಗಳು ಬೆಳೆಯಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಕಿತ್ತು ಹಾಕ ಬೇಕು. ಇಲ್ಲದಿದ್ದರೆ ಸರಕಾರದ ನಾಮಿನೇಟೆಡ್ ಬಾಡಿಯನ್ನೇ ಇಡಿ, ಅಭ್ಯಂತರವಿಲ್ಲ.

ಇದಾದ ನಂತರ 63-ಬ ಇದೆ. ಸಹಕಾರಿ ಬ್ಯಾಂಕನ್ನು ವಶಕ್ಕೆ ಸರಕಾರ ತೆಗೆದುಕೊಂಡ ನಂತರ ಕೋರ್ಟಿಗೆ ಹೋಗಲು ಅವಕಾಶ ಕೊಟ್ಟಿಲ್ಲ. ಸಹಕಾರ ಸಂಘದ ಹಿತದೃಷ್ಟಿಯಿಂದ ಜನರು ಅವುಗಳಲ್ಲಿ ಹೆಚ್ಚು ಭಾಗವಹಿಸಲು ಅವಕಾಶ ವಿರಬೇಕೆಂಬ ದೃಷ್ಟಿಯಿಂದ ತಿದ್ದುಪಡಿ ತಂದಿಲ್ಲ. ಈ ತಿದ್ದುಪಡಿ ಕೊಡಲಿ ಪೆಟ್ಟಿನಂತಾಗಿದೆ. ಇದರಿಂದ ಕೆಲಸ ಮಾಡುವವರಿಗೆ ಉತ್ಸಾಹ ಕಡಿಮೆಯಾಗುವುದು. ಸಹಕಾರ ಸಂಘಗಳಲ್ಲಿ ಏನಾದರೂ ತಪ್ಪನ್ನು ಕಂಡುಹಿಡಿದು ಅವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಂಡಿರುವುದು ಸರಿಯಲ್ಲ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಇದು ಎಷ್ಟುಮಟ್ಟಿಗೆ ಸಾಧುವಾದುದು ಎಂಬುದನ್ನು ಗಮನಿಸ ಬೇಕು. ಯಾವಾಗಲೂ ಅಪೀಲಿಗೆ ಅವಕಾಶವಿರಬೇಕು. ಇಂದು ಸರಕಾರದವರು ಮೂರು ನಾಲ್ಕು ಬ್ಯಾಂಕುಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಕಲ್ಬುರ್ಗಿ ಮತ್ತು ಬಿಜಾಪುರದ ಬ್ಯಾಂಕುಗಳನ್ನು ವಶಪಡಿಸಿಕೊಂಡಿದ್ದಾರೆ. ಈ ರೀತಿ ಮಾಡುವುದು ಯೋಗ್ಯವಲ್ಲ. ತಮಗೆ ಬೇಕಾದ ಬ್ಯಾಂಕುಗಳನ್ನು ವಶಕ್ಕೆ ತೆಗೆದು ಕೊಳ್ಳುವುದಕ್ಕೆ ಈ ಅಧಿಕಾರ ಇಟ್ಟುಕೊಂಡಿರುವಂತೆ ತೋರುವುದು. ಕೋಲಾರ, ಚಿತ್ರದುರ್ಗ, ಬೆಂಗಳೂರು ಬ್ಯಾಂಕುಗಳ ಇನ್‌ಸ್ಪೆಕ್ಷನ್ ರಿಪೋರ್ಟ ನನ್ನ ಬಳಿ ಇದೆ

(ಶ್ರೀ ಬಾಪೂಗೌಡ ರಾಯಪ್ಪ)

ಅದನ್ನು ಕಳಿಸಿಕೊಡುತ್ತೇನೆ, ನೋಡಬಹುದು, ಆಡಿಟ್ ರಿಪೋರ್ಟು ನೋಡಬಹುದು. 71 ಲಕ್ಷದವರೆಗೆ ಡಿಫಾಲ್ಟರ್ಸ್ ಇದ್ದಾರೆ. ಆ ಬ್ಯಾಂಕುಗಳಲ್ಲಿ ಸರಕಾರಿ ಪಕ್ಷದ ಅಧ್ಯಕ್ಷರುಗಳಿದ್ದಾರೆ. ಆದುದರಿಂದ ಅವುಗಳನ್ನು ವಶಪಡಿಸಿಕೊಂಡಿಲ್ಲ. ಅದೇ ಗುಲ್ಬರ್ಗ, ಬಿಜಾಪುರ ಮತ್ತು ಬಳ್ಳಾರಿಗಳ ಬ್ಯಾಂಕುಗಳಲ್ಲಿ ಕಾಂಗ್ರೆಸ್ಸಿನ ಜನವರು ಅಧ್ಯಕ್ಷರಾಗಿರುವುದರಿಂದ ಅವುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಇಂಥ ಅನ್ಯಾಯ ಎಲ್ಲೂ ಇಲ್ಲ. ರಾಜಕೀಯ ದೃಷ್ಟಿಯಿಂದ ಈ ರೀತಿಯ ಅನಾಹುತ ಮಾಡಿದ್ದಾರೆ. ಇದರಿಂದ ಕೀರ್ತಿ ಬರುವುದಿಲ್ಲ. ಬ್ಯಾಂಕುಗಳ ಏಳಿಗೆಯಾಗುವುದಿಲ್ಲ. ಇನ್‌ಸ್ಪೆಕ್ಷನ್ ರಿಪೋರ್ಟುಗಳನ್ನು ನೋಡಿದರೆ ಸರಕಾರ ಮಾಡಿರುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ವ್ಯಕ್ತವಾಗುವುದು. ಸಹಕಾರಿ ಅಂದೋಳನ ಸಂಪೂರ್ಣವಾಗಿ ನಶಿಸಿ ಹೋಗಲು ಸರಕಾರ ಅವಕಾಶ ಮಾಡಿದೆ. ಇದರಿಂದ ಎಷ್ಟರ ಮಟ್ಟಿಗೆ ಸರಕಾರ ನಿಸ್ಪಕ್ಷಪಾತವಾಗಿ ಕೆಲಸ ಮಾಡುತ್ತಿದೆ ಎಂಬುದು ವ್ಯಕ್ತವಾಗುವುದು. ಕೋರ್ಟಿಗೆ ಹೋಗಲು ಅವಕಾಶ ಇಲ್ಲದಿರುವುದು, ಮೂರನೆಯ ಒಂದು ಭಾಗದವರಿಗೆ ವಿಶೇಷ ಅಧಿಕಾರ ಕೊಟ್ಟಿರುವುದು, ವಿಟೋ ಮಾಡುವ ಅಧಿಕಾರವಿರುವುದು ಸರಿಯಲ್ಲ. ಇದರಿಂದ ಸರಕಾರ ಪರಮಾವಧಿ ಅದಿಕಾರವಿಟ್ಟುಕೊಂಡು ಸಹಕಾರ ಚಳವಳಿ ಅಧೋಗತಿಗೆ ಹೋಗಲು ಅವಕಾಶ ಆಗುವುದು. ಇದು ಸರಿಯಲ್ಲ ಎಂದು ಇಷ್ಟು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರಿ ಕೆ. ಎಂ. ರುದ್ರಪ್ಪ (ಸಕಲೇಶಪುರ)— ಸನ್ಮಾನ್ಯ ಸಭಾಧ್ಯಕ್ಷರೇ: ಸಭೆಯ ಮುಂದಿರತಕ್ಕ ಸಹಕಾರ ಸಂಘದ ತಿದ್ದುಪಡಿ ಮಸೂದೆಯನ್ನೇನು ನಮ್ಮ ಮಾನ್ಯ ಸಹಕಾರ ಸಚಿವರು ಮಂಡಿಸಿದ್ದಾರೆ. ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತ ಮಾಡತಕ್ಕ ಕಾಲದಲ್ಲಿ ನಾಲ್ಕು ಮಾತುಗಳನ್ನಾಡುವುದಕ್ಕೆ ನಿಂತಿದ್ದೇನೆ.

ಈ ದಿವಸ ನಾವೆಲ್ಲರೂ ರಾಜ್ಯದಲ್ಲಿ ಸಮಾಜವಾದ ತತ್ವವನ್ನು ಜಾರಿಗೆ ತರಬೇಕು ಎಂಬ ನಿಷ್ಠೆಯುಳ್ಳವರಾಗಿದ್ದೇವೆ. ಅದರೆ ಇದನ್ನು ಜಾರಿಗೆ

ತರುವುದಕ್ಕೆ ಈ ಸಹಕಾರಿ ತತ್ವದ ಒಂದು ವ್ಯಾಪಕತ್ವವೇನಿದೆ. ಅದರ ಹೊತತಾಗಿ ಬೇರೊಂದು ಮಾರ್ಗವಿಲ್ಲ. ನಾವು ಸಮತಾವಾದ ತತ್ವವನ್ನು ಸಹಕಾರಿ ತತ್ವದೊಳಗೆ ಅಳವಡಿಸಿ ತಂದಾಗ ಮಾತ್ರ ಹಾಲಿ ಈ ಸಹಕಾರಿ ತತ್ವದಲ್ಲಿ ಈ ದಿವಸ ಏನೊಂದು ವೆಸ್ಟೆಡ್ ಇಂಟ್ರೆಸ್ಟ್ ಅಥವಾ ಬಂಡವಾಳಷಾಹಿಗೆ ಅವಕಾಶವಿದೆ ಅದು ತಪ್ಪಿ ಮುಂದೆ ಇದು ಬೆಳೆಯುವುದಕ್ಕೆ ಒಂದು ಒಳ್ಳೆ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಆದರೆ ಹಾಲಿ ಜಾರಿಯಲ್ಲಿದ್ದ ಆಕ್ಟಿನಲ್ಲಿ ಏನೇನು ಕೆಲವು ಲೋಪ ದೋಷಗಳಿದ್ದವು ಅವುಗಳನ್ನು ಸರಿಪಡಿಸತಕ್ಕ ಉದ್ದೇಶದಿಂದ ಈಗ ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಸಚಿವರು ಸಭೆಯ ಮುಂದೆ ಇಟ್ಟಿದ್ದಾರೆ. ಈ ಕೆಲವು ಲೋಪ ದೋಷಗಳನ್ನು ಹಿಂದೆಯೇ ತಿದ್ದುಪಡಿ ಮಾಡಬೇಕೆಂದು ಹಿಂದೆ ಸಹಕಾರ ಸಚಿವರಾಗಿದ್ದ ಶ್ರೀ ಪಿ. ಎಂ. ನಾಡಗೌಡರು ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದರು. ಆದರೆ 10-20 ವರ್ಷಗಳ ಕಾಲ ಒಬ್ಬರೇ ಒಂದೊಂದು ಸಹಕಾರ ಸಂಸ್ಥೆಯಲ್ಲಿ ಅಧ್ಯಕ್ಷರಾಗಿರುವುದಕ್ಕೆ ಹಿಂದಿದ್ದ ಆಕ್ಟಿನಲ್ಲಿ ಅವಕಾಶವಿತ್ತು. ಅದನ್ನು ತಪ್ಪಿಸಿದರೆ ತಮ್ಮ ಕಡೆಯ ಜನರಿಗೆ ಅನಾನುಕೂಲವಾಗುತ್ತದೆಂದು ಹಿಂದಿದ್ದ ಸಚಿವರಾದ ಶ್ರೀ ನಾಡಗೌಡರು ಅದನ್ನು ಮುಂದುವರಿಸಲಿಲ್ಲ. ಆದರೆ ಅಂಥ ಪದ್ಧತಿಗೆ ಅವಕಾಶ ಕೊಡಬಾರದೆಂಬ ಸದುದ್ದೇಶದಿಂದ ಈಗ ಈ ಸಚಿವರು ಇದನ್ನು ತಂದಿದ್ದಾರೆ. ಅದಕ್ಕಾಗಿ ಇವರಿಗೆ ನಾವು ನಮ್ಮ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ದೇಶದಲ್ಲಿ ಇನ್ನು ಮುಂದೆ ಈ ಸಹಕಾರ ಸಂಘಗಳು ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿ ಕೆಲಸ ಮಾಡಬೇಕಾಗಿದೆ ಇವು ರಾಜ್ಯದಲ್ಲಿ ಜನರಿಗೆ ಅತಿ ಪ್ರಾಮುಖ್ಯವಾದ ಆಹಾರ ಗೊಬ್ಬರ ಹಾಗೂ ಸೀಮೆ ಎಣ್ಣೆ ಸಕ್ಕರೆ ಇತ್ಯಾದಿ ಅನೇಕ ವಸ್ತುಗಳನ್ನು ಹಂಚಬೇಕಾಗಿದೆ. ಇವುಗಳ ಹಂಚಿಕೆಯನ್ನು ಬಂಡವಾಳಷಾಹಿಗಳಿಗೆ ಕೊಡುವುದು ಅಷ್ಟು ಸೂಕ್ತವಲ್ಲ. ಈಗ ನಾನು ಹೇಳಿದ ಸಾಮಾನುಗಳನ್ನು ಸರಿಯಾದ ರೀತಿಯಲ್ಲಿ ಹಂಚುವುದಕ್ಕೆ ಒಂದು ಸರಿಯಾದ ಏಜನ್ಸಿಯನ್ನು ನೇಮಕ ಮಾಡುವುದಕ್ಕೆ ಈ ತಿದ್ದುಪಡಿ ಮಸೂದೆಯಿಂದ ಅನುಕೂಲವಾಗುತ್ತದೆ. ಆದರೆ ಈ ಸಹಕಾರ ಸಂಘಗಳಲ್ಲಿ ಇಲ್ಲಿಯವರೆಗೂ ಕೆಲವು ವ್ಯಕ್ತಿಗಳು ಅಧ್ಯಕ್ಷ ಸ್ಥಾನವನ್ನು ಅಕ್ರಮಿಸಿಕೊಂಡು ತಮ್ಮ ಸ್ವಂತ ಆಸ್ತಿಯಂತೆ ಅವರು ಅವರು ತಪ್ಪಿದರೆ ಅವರ ಮನೆತನದವರು ಹೀಗೆ ಅಧ್ಯಕ್ಷರಾಗುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಂಡಿದ್ದರು. ನನಗೆ ತಿಳಿದಿರುವ ಹಾಗೆ ಕೆಲವು ಡಿ.ಸಿ.ಸಿ ಬ್ಯಾಂಕುಗಳಲ್ಲಿ ಒಬ್ಬೊಬ್ಬರೇ 15-16 ವರ್ಷಗಳಿಂದ ಅಧ್ಯಕ್ಷರಾಗಿದ್ದಾರೆ. ಆ ರೀತಿ ಇರುವುದಕ್ಕೆ ಹಿಂದಿನ ಆಕ್ಟಿನಲ್ಲಿ ಅವಕಾಶವಿತ್ತು. ಆದರೆ ಈಗ ಅದನ್ನು ತಪ್ಪಿಸುವುದಕ್ಕೆ ಇದರಲ್ಲಿ ತಿದ್ದುಪಡಿಯನ್ನು ತರಲಾಗಿದೆ. ಆದರೆ ಈ ವಿಚಾರದಲ್ಲಿ ಶ್ರೀ ಬಣಕಾರ್‌ರವರು ಮಾತನಾಡುತ್ತಾ ಈ ಒಂದು ತಿದ್ದುಪಡಿಯು ರಾಜ್ಯಾಂಗಕ್ಕೆ ವಿರೋಧ ಆಗಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿದರು. ಆದರೆ ಅಂಥ ಯಾವ ಶಂಕೆಗೂ ಅವಕಾಶವಿಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ

ಶ್ರೀ ಕೆ. ಎಂ. ರುದ್ರಪ್ಪ)

ಹಿಂದೆ ಹಳೇ ಮೈಸೂರಿನಲ್ಲಿ ಕೆಲವು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಒಬ್ಬರೇ 3—4 ಸರ್ತಿ ಅಧ್ಯಕ್ಷರಾಗಿ ಆರಿಸಿ ಬರುತ್ತಿದ್ದರು. ಆಗ ಒಂದು ವ್ಯವಹಾರ ನಡೆದು ಯಾರೊಬ್ಬರಿಗೇ ಆಗಲಿ ಎರಡು ಸಾರಿಗಿಂತ ಹೆಚ್ಚು ಅಧ್ಯಕ್ಷರಾಗಿ ಬರುವುದಕ್ಕೆ ಅವಕಾಶವಿರಬಾರದೆಂದು ಆಗ ಆಕ್ಟನ್ನು ತಿದ್ದುಪಡಿ ಮಾಡಿ ತೀರ್ಮಾನ ಮಾಡಿದ್ದಾರೆ. ಹಾಗೆಯೇ ಹಾಲಿ ತಂದಿರತಕ್ಕ ತಿದ್ದುಪಡಿ ಮಸೂದೆಯಲ್ಲಿ ಕೂಡ ಈ ಅಧ್ಯಕ್ಷರ ಟರ್ಮನ್ನು ಆರು ವರ್ಷದ ಒಂದು ಅವಧಿಯತನಕ ಇರಬಹುದೆಂದು ಹೇಳಲಾಗಿದೆ. ಅದರೆ ನನ್ನ ಅಭಿಪ್ರಾಯದಲ್ಲಿ ಇದೂ ಕೂಡ ಹೆಚ್ಚಾಯಿತೆಂದೇ ಹೇಳುತ್ತೇನೆ. ಈಗಲೂ ಕೂಡ ಸಾಧ್ಯವಾಗುವುದಾದರೆ ಈ ಆರು ವರ್ಷದ ಅವಧಿಯನ್ನು ಕಿತ್ತು ಹಾಕಿ ಇದನ್ನು ಮೂರು ವರ್ಷಕ್ಕೆ ಇಳಿಸಬೇಕು ಎಂದು ಹೇಳುತ್ತೇನೆ. ಹೀಗೆ ಮಾಡಿದರೆ ಇನ್ನೂ ಒಳ್ಳೆಯದೆಂದು ನಾನು ಹೇಳಬಯಸುತ್ತೇನೆ.

ಇನ್ನು ಸೊಸೈಟಿಗಳ ಆಡಿಟ್ ವಿಚಾರಕ್ಕೆ ಬಂದರೆ—ಇದು ಸರಿಯಾಗಿ ನಡೆಯುತ್ತಿಲ್ಲ. ಇದರ ಬಗ್ಗೆ ಕೂಡ ಒಂದು ಸೂಕ್ತ ತಿದ್ದುಪಡಿಯನ್ನು ತರಬೇಕಾಗಿತ್ತು ಎಂದು ಹೇಳಬಯಸುತ್ತೇನೆ. ಸಾಧ್ಯವಾದ ಮಟ್ಟಿಗೂ ಈ ಮಸೂದೆಯಲ್ಲಿ ಒಂದು ಕ್ಲಾಜನ್ನ ಅಡಕ ಮಾಡುವುದರ ಮೂಲಕ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಸರಹದ್ದಿನಲ್ಲೂ ಸಹಕಾರ ತತ್ವದ ಮೇಲೆ ನಡೆಯತಕ್ಕ ಒಂದು ಸಹಕಾರ ಸಂಘ ಒಂದು ಪಾಠ ಶಾಲೆ ಈ ಎರಡನ್ನು ಸ್ಥಾಪಿಸುವುದಕ್ಕೆ ಅವಕಾಶ ಮಾಡಿಕೊಡುವುದು ಅತ್ಯಗತ್ಯ ಎಂದು ಹೇಳಬಯಸುತ್ತೇನೆ.

ಇನ್ನು ರಾಜ್ಯದಲ್ಲಿ ಅಲ್ಲಲ್ಲೇ ಸ್ಥಾಪಿಸಬಹುದಾದ ಎಲ್ಲ ಸಕ್ಕರೆ ಕಾರ್ಖಾನೆಗಳನ್ನೂ ಕೂಡ ಸಹಕಾರ ತತ್ವದ ಮೂಲಕವೇ ನಡೆಯುವಂತೆ ಮಾಡಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಸೂಚಿಸ ಬಯಸುತ್ತೇನೆ. ಈ ದಿವಸ ಆ ಮಹರಾಷ್ಟ್ರದಲ್ಲಿ ಜನರ ಆರ್ಥಿಕಾಭಿವೃದ್ಧಿ ಆಗಿರುವುದಕ್ಕೆ ಕಾರಣವಾದರೂ ಇದೇ. ಅಲ್ಲಿ ಎಲ್ಲಾ ಸಕ್ಕರೆ ಕಾರ್ಖಾನೆಗಳೂ ಸಹಕಾರ ತತ್ವದ ಮೇಲೆ ನಡೆಯುತ್ತಿವೆ. ಅಷ್ಟೇ ಅಲ್ಲದೆ ಅಲ್ಲಿನ ಕೆಲವು ಡಿ. ಸಿ. ಸಿ, ಬ್ಯಾಂಕುಗಳು ಬಹಳ ದಕ್ಷತೆಯಿಂದ ಕೋಟ್ಯಾಂತರ ರೂಪಾಯಿಗಳ ವ್ಯವಹಾರವನ್ನು ನಡೆಸುತ್ತಿವೆ. ಹಾಗೇ ಇಲ್ಲಿಯೂ ಕೂಡ ಇವು ಬಹಳ ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡಬೇಕಾದ್ದು ಬಹಳ ಮುಖ್ಯವಾದದ್ದು. ಇನ್ನು ಮುಂದೆ ಬಂಡವಾಳಷಾಹಿಗಳಿಗೆ ಇಂಥ ಯಾವ ಅವಕಾಶವನ್ನೂ ಸರ್ಕಾರ ಕೊಡಬಾರದು. ಹಾಸನ ಜಿಲ್ಲೆಯಲ್ಲಿ ಬಂಡವಾಳಗಾರರಿಗೆ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಅವಕಾಶ ಖಂಡಿತ ಕೊಡಕೂಡದೆಂದೂ ಸಹಕಾರ ವ್ಯಾಪ್ತಿಯ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಬೇಕೆಂದೂ ಒತ್ತಾಯಪಡಿಸುತ್ತೇನೆ.

ಇನ್ನು ಆಬ್ರಿಟ್ರೇಟರುಗಳ ವಿಚಾರಕ್ಕೆ ಬಂದರೆ ಇವರು ಯಾರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಇದರಿಂದ ಜನರು ಬೇಸತ್ತು ಹೋಗಿದ್ದಾರೆ ಈ ಆಬ್ರಿಟ್ರೇಟರುಗಳು ಸಹಕಾರ ಸಂಘದ ಕಾರ್ಯದರ್ಶಿ ಇಲ್ಲವೆ ಅಧ್ಯಕ್ಷರುಗಳು ಏನನ್ನು ಅವರ ಮುಂದೆ ಬರೆದಿಟ್ಟರೆ ಅದಕ್ಕನುಸಾರವಾಗಿ ಅವರು ಡಿಕ್ರಿ ಕೊಡುತ್ತಿದ್ದಾರೆ. ಪಾರ್ಟಿ ಸಂಘಕ್ಕೆ ಹಣವನ್ನು ಕೊಟ್ಟಿದ್ದಾನೆಯೋ ಇಲ್ಲವೇ ಎಂಬುದನ್ನು ಒಂದನ್ನೂ ನೋಡದೆ ಡಿಕ್ರಿ ಕೊಡುತ್ತಿದ್ದಾರೆ. ಇದು ಸರಿಯಲ್ಲ, ಆದ್ದರಿಂದ ಹಾಲಿ ಈ ಆಬ್ರಿಟೇಜರುಗಳನ್ನು ನೇಮಕ ಮಾಡತಕ್ಕ ಪದ್ಧತಿ ಏನಿದೆ ಇದನ್ನು ತಪ್ಪಿಸಿ ಜಿಲ್ಲೆಗೊಬ್ಬ ಪೈಡ್ ಅಬ್ರಿಟ್ರೇಟರನ್ನು ನೇಮಕ ಮಾಡುವುದು ಒಳ್ಳೆಯದೆಂದು ಸೂಚಿಸಬಯಸುತ್ತಾನೆ. ಹೀಗೆ ಮಾಡಿದರೆ ಇವರು ಸಹ ಆ ಮುನ್ಸೀಫ ಕೋರ್ಟಿನಲ್ಲಿ ಎವಿಡೆನ್ಸ್ ರಿಕಾರ್ಡ್ ಮಾಡುವಂತೆ ಒಂದು ನಿರ್ಬಂಧ ಹಾಕಿ, ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಇನ್ನು ಸಿಬ್ಬಂದಿ ನೇಮಕದ ವಿಚಾರಕ್ಕೆ ಬಂದರೆ :— ಈ ವಿಚಾರದಲ್ಲಿ ಯಾವ ಒಂದು ಸರಿಯಾದ ಕಾನೂನೂ ಇದ್ದಹಾಗೆ ಕಾಣುತ್ತಿಲ್ಲ. ಹೀಗಾಗಿ ಇಂದು ಆಯಾಯ ಸ್ಥಳೀಯ ಜನರನ್ನೇ ಅದರಲ್ಲೂ ಅಧ್ಯಕ್ಷರು ತಮಗೆ ಬೇಕಾದವರನ್ನೇ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದರಿಂದ ಇಲಾಖೆಯಲ್ಲಿ ದಕ್ಷತೆ ಎಂಬುದು ಮಾಯವಾಗಿದೆ. ಸರಿಯಾದ ವಿದ್ಯಾ ಅರ್ಹತೆಯುಳ್ಳ ಜನರಿದ್ದರೂ ಅವರನ್ನು ನೇಮಕ ಮಾಡಿಕೊಳ್ಳುತ್ತಿಲ್ಲ. ಕಾರಣ ತಮ್ಮವರಿಗೆ ಅಲ್ಲಿ ನೌಕರಿ ಕೊಡಬೇಕೆಂಬ ಉದ್ದೇಶದಿಂದ ವಿದ್ಯಾ ಅರ್ಹತೆ ಇಲ್ಲದ ಜನರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದನ್ನು ತಪ್ಪಿಸಬೇಕು. ವಿದ್ಯಾ ಅರ್ಹತೆ ಇರತಕ್ಕವರಿಗೆ ಮಾತ್ರ ಕೆಲಸಕ್ಕೆ ನೇಮಿಸಿಕೊಳ್ಳತಕ್ಕ ಪದ್ಧತಿಯನ್ನು ಜಾರಿಗೆ ತರಬೇಕು.

ಇನ್ನು ಈ ಸಹಕಾರ ಸಂಘಗಳಿಗೆ ಪ್ರತಿ ವರ್ಷವೂ ಆಡಳಿತ ಮಂಡಳಿಯನ್ನು ಮತ್ತು ಡೈರೆಕ್ಟರುಗಳನ್ನು ಬದಲಾಯಿಸಲು ಚುನಾವಣೆಗಳನ್ನು ನಡೆಸಲಾಗುತ್ತಿದೆ. ಇದರಿಂದ ಜನರಿಗೆ ಬಹಳ ಬೇಜಾರಾಗಿದೆ. ಅವರು ಆ ಸಂಘದ ಪರಿಚಯ ಮಾಡಿಕೊಳ್ಳುವುದಕ್ಕೇ ನಾಲ್ಕಾರು ತಿಂಗಳು ಬೇಕು. ಅಷ್ಟರಲ್ಲಿ ಅವರ ಅವಧಿ ಮುಗಿಯುವುದಕ್ಕೆ ಬಂದಿರುತ್ತದೆ. ಆದ್ದರಿಂದ ಇವರ ಅವಧಿಯನ್ನು ಕನಿಷ್ಟ ಪಕ್ಷ ಮೂರು ವರ್ಷಗಳಿಗಾದರೂ ನಿಗದಿ ಮಾಡಬೇಕೆಂದು ಸೂಚಿಸ ಬಯಸುತ್ತೇನೆ. ಬಹುಮುಖ್ಯವಾಗಿ ಈಗ ನಮ್ಮ ಸೊಸೈಟಿಗಳನ್ನು ಹಣದ ಅಪವ್ಯಯ ಬಹಳವಾಗಿ ಆಗುತ್ತಿದೆ. ಯಾವ ಸೊಸೈಟಿಯನ್ನು ತೆಗೆದುಕೊಂಡರೂ ಅಲ್ಲಿ ಹಣ ದುರುಪಯೋಗ ಆಗುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಸರಿಯಾದಂಥ ರೀತಿಯಲ್ಲಿ ಖರ್ಚುಮಾಡತಕ್ಕ ಸೊಸೈಟಿಗಳು ಬಹಳ ಕಡಿಮೆ ಇವೆಯೆಂದು ಹೇಳಿದರೆ

(ಶ್ರೀ ಕೆ. ಎಂ. ರುದ್ರಪ್ಪ)

ತಪ್ಪಾಗಲಾರದು. ಆದ್ದರಿಂದ ಸರ್ಕಾರದವರು ಹಣದ ಅಪವ್ಯಯವಾಗದಂತೆ ನೋಡಿಕೊಳ್ಳುವುದಕ್ಕೆ ಸರಿಯಾದಂಥ ಕಾರ್ಯ ಕ್ರಮಗಳನ್ನು ಹಾಕಿಕೊಳ್ಳಬೇಕು. ಆದಕ್ಕೂ ಸಹ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಯನ್ನು ಮಾನ್ಯ ಸಚಿವರು ತರ ಬೇಕೆಂದು ಹೇಳಬಯಸುತ್ತೇನೆ. ಬಹು ಮುಖ್ಯವಾಗಿ ಸಮಾಜದಲ್ಲಿರತಕ್ಕ ಹೆಚ್ಚಿನ ಬಂಡ ವಾಳಗಾರರು ಇತ್ತೀಚೆಗೆ ಅನೇಕ ಜನರನ್ನು ಶೋಷಣೆ ಮಾಡುವುದಕ್ಕೆ ಹೊರಟಿ ದ್ದಾರೆ ಇದನ್ನು ತಪ್ಪಿಸಿ ಸಹಕಾರ ತತ್ವದಲ್ಲಿ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ತಕ್ಕ ಅವಕಾಶವನ್ನು ಸಹಕಾರ ಕ್ಷೇತ್ರದಲ್ಲಿ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಈಗ ತಂದಿರುವ ತಿದ್ದುಪಡಿ ಬಹಳ ಚೆನ್ನಾಗಿದೆ. ಇದರಲ್ಲಿ ಇನ್ನೂ ಹೆಚ್ಚಿನ ತಿದ್ದುಪಡಿಯನ್ನು ತರುವುದಕ್ಕೆ ಅವಕಾಶ ಬರಬಹುದು. ಆದಕ್ಕೂ ಸಹ ನಮ್ಮ ಸರ್ಕಾರದವರು ಹಿಂದು ಮುಂದು ನೋಡದೆ ನಿದಾರ್ಕ್ಷಿಣ್ಯವಾಗಿ ಸಹಕಾರ ತತ್ವದ ಪ್ರಕಾರ ಈ ಸಹಕಾರ ಸಂಘಗಳು ಹೆಚ್ಚು ಹೆಚ್ಚಾಗಿ ಬೆಳೆಯು ವುದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿ, ಮಾನ್ಯ ಸಭಾಧ್ಯಕ್ಷರು ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿ ದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಮಾನ್ಯ ಅಧ್ಯಕ್ಷರೇ, ನಮ್ಮ ಸಹ ಕಾರ ಇಲಾಖೆಯ ಸಚಿವರು ತಂದಿರತಕ್ಕ ಈ ತಿದ್ದುಪಡಿ ಮಸೂದೆ ಕೆಲವು ಭಾಗ ದಲ್ಲಿ ಒಂದು ಉಪಯುಕ್ತತೆಯನ್ನು ಪಡೆದಿದ್ದರೂ ಸಹಕಾರ ಇಲಾಖೆಗೆ ಸಂಬಂಧ ಪಟ್ಟ ಈ ಕಾನೂನನ್ನು ಒಂದು ಸಮಗ್ರ ರೀತಿಯಲ್ಲಿ ತಿದ್ದುಪಡಿ ಮಾಡುವುದರಲ್ಲಿ ಅವರು ಪ್ರಯತ್ನ ಮಾಡಲಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವು ದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಯಾವ ಒಂದು ದೊಡ್ಡ ಆಶೆ ಆಕಾಂಕ್ಷೆ ಗಳನ್ನು ಈ ಸಹಕಾರಿ ಆಂದೋಳನದಲ್ಲಿ ನಾವು ಇಟ್ಟಿದ್ದೆವೋ ಮತ್ತು ಅದಕ್ಕೆ ಏನೇನು ಪ್ರಯತ್ನಗಳನ್ನು ಮಾಡಿದ್ದೇವೋ ಅದರ ಒಂದು ಮೂಲೋದ್ದೇಶ ಇವತ್ತಿ ನವರೆಗೂ ಸಾಧನೆಯಾಗಲಿಲ್ಲ. ಇವತ್ತು ಸಹಕಾರಿ ಆಂದೋಳನ ನಡೆಯುತ್ತಾ ಇರುವ ರೀತಿ ನೀತಿ ನೋಡಿದರೆ ಜವಾಬ್ದಾರಿಯುತವಾದ ಯಾವನೇ ಒಬ್ಬ ಪ್ರಜಾ ಪ್ರಭುತ್ವ ವ್ಯಕ್ತಿ ಅದನ್ನು ಸೈರಿಸುವುದಕ್ಕಾಗುವುದಿಲ್ಲ. ನಾವು ಇವತ್ತು ಅದಕ್ಕಾಗಿ ತಲೆ ತಗ್ಗಿಸುವ ಪ್ರಸಂಗ ಬಂದಿದೆ. ಅದು ಸಣ್ಣ ಸಹಕಾರ ಸಂಘ ಆಗಬಹುದು. ಅಥವಾ ದೊಡ್ಡ ಸಹಕಾರ ಸಂಘವಾದರೂ ಆಗಬಹುದು. ಎಲ್ಲಿ ನೋಡಿದರೂ, ಸಹಕಾರ ಸಂಘವೆಂದು ಹೇಳಿದರೆ ಅಲ್ಲಿ ವಂಚನೆ, ಮೋಸ, ಇತ್ಯಾದಿ ದ್ರೋಹ ಗಳನ್ನು ಮಾಡತಕ್ಕ ಒಂದು ಸಂಸ್ಥೆಯಾಗಿದೆ ಎಂಬ ಪರಿಪಾಠ ಇವತ್ತು ಎಲ್ಲರ ಮನಸ್ಸಿಗೆ ಬಂದಿದೆ. ಅದರಲ್ಲಿಯೂ ಸಾಮಾನ್ಯ ಜನರು, ವಿದ್ಯಾವಂತರು ಅಲ್ಲದೇ ಇರತಕ್ಕವರು, ತಿಳಿವಳಿಕೆ ಇಲ್ಲದೇ ಇರತಕ್ಕವರು, ಸಹಕಾರ ಸಂಘದ ವ್ಯವಹಾರವೇ

ನಮಗೆ ಬೇಡ ಎನ್ನುವ ಸ್ಥಿತಿಗೆ ಬಂದಿದ್ದಾರೆ. ಕಾರಣ, ಮೊದಲೇ ನಮ್ಮಲ್ಲಿ ಅವಿದ್ಯಾವಂತರೇ ಜಾಸ್ತಿ ಇರುತ್ತಾರೆ. ನಮ್ಮ ಗ್ರಾಮದಲ್ಲಿರತಕ್ಕ ಸಹಕಾರ ಸಂಘದ ವ್ಯವಹಾರವನ್ನೇ ತಿಳಿದುಕೊಳ್ಳಬೇಕೆಂಬ ಕುತೂಹಲವಾಗಲಿ ಬುದ್ಧಿಯಾಗಲಿ ಅವರಿಗೆ ಇರುವುದಿಲ್ಲ. ಅಲ್ಲಿರತಕ್ಕ ಹತ್ತಾರು ಜನ ಬುದ್ಧಿವಂತರು ಸಹಕಾರ ಸಂಘಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡಿರುವುದನ್ನು ನಾವು ಪ್ರತಿನಿತ್ಯ ಕಾಣುತ್ತಿದ್ದೇವೆ ತಾವು ಲೆಕ್ಕಪತ್ರ ನಮಗೆ ಕೊಟ್ಟಿರುವುದನ್ನು ನೋಡಿದರೆ, ನಮ್ಮ ರಾಜ್ಯದಲ್ಲಿ ಕೃಷಿಕ್ಷೇತ್ರದಲ್ಲಿ ಈಗ ಸುಮಾರು 8 ಸಾವಿರ ಸಹಕಾರ ಸಂಘಗಳಿವೆ. ಇದರಲ್ಲಿ ಕೆಲಸ ಮಾಡುತ್ತಿರುವ ಸಂಘಗಳು ಕೇವಲ ಎರಡು ಸಾವಿರ ಇರಬಹುದು. ಅವು ವಯಬಲ್ ಯೂನಿಟ್ಟುಗಳಾಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇನ್ನುಳಿದ ಸಹಕಾರ ಸಂಘಗಳ ವ್ಯವಹಾರ ಅಸಮರ್ಥವಾಗಿವೆ ಯೆಂದು ಹೇಳಬಹುದು, ಅನೇಕ ಸಹಕಾರ ಸಂಘಗಳಲ್ಲಿ ನಾನು ನೋಡಿದ ಹಾಗೆ ಹಣ ದುರುಪಯೋಗವಾಗಿ ಅವ್ಯವಹಾರಿಕವಾಗಿ ಅನೇಕ ಕೆಲಸ ಕಾರ್ಯಗಳು ಅಲ್ಲಿ ನಡೆಯುತ್ತಿವೆಂಬ ಮಾತುಗಳೇ ಈಗ ವಿಶೇಷವಾಗಿ ವ್ಯಕ್ತ ಪಡುತ್ತಿದೆ. ಅಂದ ಮೇಲೆ 1973 ನೇ ಇಸವಿಯಲ್ಲಿರತಕ್ಕ ನಾವು ಅದರಲ್ಲಿಯೂ, ಈ ಒಂದು ಪ್ರಜಾಪ್ರಭುತ್ವ ಯುಗದಲ್ಲಿ ಕಾಲು ಶತಮಾನ ಕಳೆದ ಮೇಲೆ ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಹಕಾರ ಸಂಘಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಮಗೆ ಬರಲಿಲ್ಲವೆಂದು ಈಗ ನಾವು ವ್ಯಸನಪಡಬೇಕಾಗಿದೆ ಆದ್ದರಿಂದ ಸಹಕಾರ ಸಂಘದ ಕ್ಷೇತ್ರದಲ್ಲಿ ಇಂತಹ ಅಪಚಾರಗಳು ಆಗುತ್ತಿರುವಾಗ ಇದನ್ನು ತಡೆಗಟ್ಟುವ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕಾದ ಕಾಲ ಈಗ ಬಂದಿದೆ. ಈ ಒಂದು ಕಾಲದಲ್ಲಿ ಸಮಗ್ರವಾಗಿ ಸಹಕಾರ ಸಂಘದ ಕಾನೂನಿಗೆ ಸೂಕ್ತ ತಿದ್ದುಪಡಿ ತರುವ ಕಾಲ ಸನ್ನಿಹಿತವಾಗಿದೆ. ಅಂಥಾದ್ದರಲ್ಲಿ ಎಲ್ಲಾ ವಿಷಯಗಳನ್ನು ಪೂರ್ಣವಾಗಿ ಪರ್ಯಾಲೋಚಿಸಿ ಸೂಕ್ತ ತಿದ್ದುಪಡಿಯನ್ನು ತರುವುದನ್ನು ಬಿಟ್ಟು ಕೆಲವಕ್ಕೆ ಮಾತ್ರ ಈಗ ತಿದ್ದುಪಡಿಯನ್ನು ತಂದಿರುವುದಾಗಿದೆ. ಇದರಿಂದ ಸಹಕಾರ ಸಂಘಕ್ಕೆ ಆಗಿರುವ ಅಡಚಣೆಗಳನ್ನು ಸಂಪೂರ್ಣವಾಗಿ ತೊಡೆದುಹಾಕುವುದಕ್ಕೆ ಈ ಸರ್ಕಾರ ಏನೂ ಪ್ರಯತ್ನ ಮಾಡಲಿಲ್ಲವೆಂಬುದು ಈಗ ಸ್ಪಷ್ಟವಾಗುತ್ತದೆಂದು ನಾನು ಕಳಕಳಿಯಿಂದ ಹೇಳುತ್ತೇನೆ. ಆದ್ದರಿಂದ ಈ ಕಾನೂನುಗಳನ್ನು ಮತ್ತೆ ಪುನರ್ ಪರಿಶೀಲನೆಮಾಡಿ ಈ ಸಭೆಯಲ್ಲಿ ಮತ್ತೆ ತರುವುದು ಉಚಿತ. ಏಕೆಂದರೆ ಇವತ್ತು ವ್ಯವಸಾಯಗಾರನಿಗೆ ಹಣ ಕೊಡತಕ್ಕ ಸಂಸ್ಥೆಗಳು ಹಲವಾರು ಇವೆ. ಒಂದು ಕಡೆ ಜಮೀನು ಅಭಿವೃದ್ಧಿ ಬ್ಯಾಂಕ್, ಸೇವಾ ಸಹಕಾರ ಸಂಘಗಳು ಇನ್ನೊಂದು ಕಡೆ, ಮತ್ತೊಂದು ಕಡೆ ತಾಲ್ಲೂಕು ಬೋರ್ಡ್ ಕೊಡತಕ್ಕ ತಕಾವಿ ಸಾಲಗಳು ಹೀಗೆ ಅನೇಕ ಸಂಸ್ಥೆಗಳು ಆಗಿವೆ. ಇದರಿಂದ ರೈತನಾದವನ್ನು ಯೊರಲ್ಲಿ ಹೋಗಿ ಏನು ಸಹಾಯ ಪಡೆಯಬೇಕೆಂಬುದೇ ಗೊತ್ತಾಗುವುದಿಲ್ಲ. ಅವನಿಗೆ ಇದು ಬಹಳ ಕಷ್ಟವಾಗಿದೆ. ಆದ್ದರಿಂದ ವ್ಯವಸಾಯಗಾರನಿಗೇ ಆಗಲೀ, ಅಥವಾ ಬೇಸಾಯಗಾರನಿಗೇ ಆಗಲಿ, ತಾನು ಪಡೆಯಬೇಕಾದ

(ಶ್ರೀ ಕಾಗೋಡು ತಿಮ್ಮಪ್ಪ)

ಎಲ್ಲಾ ಸಾಲಗಳನ್ನೂ ಮತ್ತು ಸೌಲಭ್ಯಗಳನ್ನು ಒಂದು ಕೇಂದ್ರ ಸ್ಥಾನದಲ್ಲಿ ಪಡೆಯುವುದಕ್ಕೆ ಸರ್ಕಾರದವರು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು ಇಲ್ಲದಿದ್ದರೆ ಅವನಿಗೆ ಸರಿಯಾಗಿ ಸಾಲ ಪಡೆಯುವುದಕ್ಕೆ ಸರ್ಕಾರದವರು ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಅವನಿಗೆ ಸರಿಯಾಗಿ ಸಾಲ ಪಡೆಯುವುದಕ್ಕೆ ಕಷ್ಟವಾಗುತ್ತದೆ. ಅನಾವಶ್ಯಕವಾಗಿ ಅವನು ಸಾಲಕ್ಕೆ ನಾನಾ ತರಹ ಸಹಕಾರ ಸಂಘಗಳಲ್ಲಿ ಒಡಾಡಬೇಕಾಗುತ್ತದೆ ಜಮೀನು ಅಭಿವೃದ್ಧಿ ಬ್ಯಾಂಕ್‌ಗಳಲ್ಲಿ ಜಮೀನು ಅಭಿವೃದ್ಧಿಗಾಗಿ ಸಾಲ ಕೊಡುತ್ತಾರೆ. ತಾಲೂಕು ಅಭಿವೃದ್ಧಿ ಬೋರ್ಡ್‌ಗಳಲ್ಲಿ ತಕಾವಿ ಸಾಲವನ್ನು ಮತ್ತು ಜಮೀನು ಅಭಿವೃದ್ಧಿಗೋಸ್ಕರ ಸಾಲವನ್ನು ಕೊಡುತ್ತಾರೆ. ಆದ್ದರಿಂದ ವ್ಯವಸಾಯಗಾರನಿಗೆ ಸಂಬಂಧಪಟ್ಟ ಸಂಸ್ಥೆಗಳು ಅಂದರೆ, ಜಮೀನು ಅಭಿವೃದ್ಧಿ ಬ್ಯಾಂಕ್, ತಾಲ್ಲೋಕ್ ಬೋರ್ಡ್ ಸಹಕಾರ ಸಂಘಗಳು ಇವು ವ್ಯವಸಾಯಗಾರನಿಗೆ ಸೀಮಿತವಾದಂಥ ಸಂಸ್ಥೆಗಳು ಇವು ಬೇರೆ ಯಾವ ವ್ಯವಹಾರವನ್ನೂ ಸಹ ಮಾಡಲು ಬಯಸುವುದಿಲ್ಲ. ಆದ್ದರಿಂದ ವ್ಯವಸಾಯಗಾರನಿಗೆ ಪ್ರೈಮರಿ ಯೂನಿಟ್ ವಿಲೇಜ್ ಲೆವೆಲ್ಲಿನಲ್ಲಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಇವುಗಳ ಮೇಲ್ವಿಚಾರಣೆಯನ್ನು ಮಾಡತಕ್ಕ ಸಂಸ್ಥೆಗಳು ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿದ್ದರೆ ಸಾಕು. ರೈತರಿಗೆ ಕೊಡತಕ್ಕ ಎಲ್ಲ ಸವಲತ್ತುಗಳನ್ನು ಒಂದೇ ಕಡೆಯಲ್ಲಿ ದೊರಕುವಂತೆ ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಈಗ ಅನೇಕ ಸಂಘ ಸಂಸ್ಥೆಗಳು ನಾನಾ ರೀತಿಯಲ್ಲಿ ಕೆಲವು ಸಹಕಾರ ಸಂಘಗಳನ್ನು ಶೋಷಣೆ ಮಾಡುತ್ತಿವೆ. ನಾನು ಒಂದು ಸಣ್ಣ ಉದಾಹರಣೆಯನ್ನು ಬೇಕಾದರೆ ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಒಂದು ತಾಲ್ಲೂಕು ಬೋರ್ಡಿನ ಅಧ್ಯಕ್ಷ. ಒಬ್ಬ ಬಡ ರೈತನಿಗೆ 17 ಗುಂಟೆ ಜಮೀನು ಇದೆ. ಅವನು ನಮ್ಮಲ್ಲಿಗೆ ಬಂದು ಒಂದು ಎತ್ತು ಕೊಳ್ಳುವುದಕ್ಕೆ ಹಣವಿಲ್ಲವೆಂದು ಹೇಳಿದ. ಅವ ತಾಲ್ಲೂಕು ಬೋರ್ಡಿಗೆ ತಕಾವಿ ಸಾಲಕ್ಕೆ ಬಂದಿದ್ದ. ಒಂದು ಎತ್ತು ಕೊಳ್ಳಲು 300 ರೂ. ಗಳನ್ನು ಕೊಡಬಹುದು ಎಂದು ಹೇಳಿದೆ ನಾನು ಅಧ್ಯಕ್ಷನಾಗಿ ಬಿ. ಡಿ. ಒ. ಗೆ ಆ ರೀತಿಯಾಗಿ ಕೊಡಿ ಎಂಬುದಾಗಿ ಬರೆದೆ ಅವರು ಅವನು ಕೊಲ್ಲಾಟರಲ್ ಸೆಕ್ಯೂರಿಟಿ ಕೊಟ್ಟರೆ ಆ ರೀತಿಯಾಗಿ ಕೊಡಬಹುದೆಂದು ಹೇಳಿದರಂತೆ. ಅವ ಏನು ಕೊಲ್ಲಾಟರಲ್ ಸೆಕ್ಯೂರಿಟಿ ಕೊಡುವುದು ಹೇಗೆ ? ಅವನಿಗೆ ಇರುವುದು ಕೇವಲ 17 ಕುಂಟೆ ಜಮೀನು, ಅದು ಬಿಟ್ಟರೆ, ಅವನಿಗೆ ಇರತಕ್ಕ ಒಂದು ಹುಲ್ಲು ಗುಡಿಸಲು. ಅವನು ಕೊಲ್ಲಾಟರಲ್ ಸೆಕ್ಯೂರಿಟಿ ಕೊಡಲಿಲ್ಲ ಅವನಿಗೆ ಸಹಾಯ ಸಿಗಲಿಲ್ಲ. ಅವನಿಗೆ ಆಗ ಹಣ ಸಹಾಯ ದೊರೆತ್ತಿದ್ದರೆ ಅವನಿಗೆ ಇರತಕ್ಕ 17 ಕುಂಟೆ ಜಮೀನಿನಲ್ಲಿ ಸಾಗು ಮಾಡಿ ತನ್ನ ಜೀವನವನ್ನು ಸಾಗಿಸುತ್ತಿದ್ದ. ಆ 17 ಕುಂಟೆ ಜಮೀನು ಮಾಡಲು ತಕಾವಿ ಲೋನ್ ತೆಗೆದುಕೊಳ್ಳುವುದಕ್ಕೆ ಅವನು 150 ರೂ. ಗಳು ಕನಿಷ್ಟ ಪಕ್ಷ ಖರ್ಚಾಗುತ್ತದೆ.

ಹೇಗೆಂದರೆ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟ್‌ಗೆ 29 ರೂ. ಗಳು ಖರ್ಚಾಗುತ್ತದೆ. ಸುಮಾರು ಒಂದು ವರ್ಷದವರೆಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಬಿಲ್ಡಪ್ ಮಾಡಬೇಕಾದರೆ ಮತ್ತೆ 25 ರೂಪಾಯಿಗಳು ಖರ್ಚಾಗುತ್ತದೆ, ಗ್ರಾಮಸೇವಕ ನಿಗೆ ಬೇರೆ 50 ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಹೀಗೆ ನೂರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಎಲ್ಲಾ ಖರ್ಚು ಗಳೂ ಸೇರಿ ಕನಿಷ್ಠಪಕ್ಷ 150 ರೂ. ಗಳನ್ನು ಅವನು ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಕೊನೆಗೆ ನಾನೇ ಅವನಿಗೆ ಕೈಮುಗಿದು ಇನ್ನು ಮುಂದೆ ಇಲ್ಲಿ ಸಾಲ ಕೇಳುವುದಕ್ಕೆ ಬರಬೇಡ, ನಿನ್ನ ದಾಖಲು ನೀನು ತೆಗೆದುಕೊಂಡು ಹೋಗು ಎಂಬು ದಾಗಿ ಹೇಳಿ, ಬೇರೆ ಯಾರಿಂದಲೋ ಒಬ್ಬರಿಂದ ಅವನಿಗೆ ಎತ್ತು ತೆಗೆದುಕೊಳ್ಳು ವುದಕ್ಕೆ ಬೇಕಾದಷ್ಟು ಹಣವನ್ನು ಕೊಡಿಸಿಕೊಟ್ಟಂಥ ಸಂದರ್ಭ ಬಂತು.

4-30 P. M.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು):—ಅವರು ಹೇಳುವುದು ಎಲ್ಲಾ ಸತ್ಯ. ತಾಲ್ಲೂಕ ಮಟ್ಟದಲ್ಲಿರತಕ್ಕಂತಹ ವಿದ್ಯಮಾನವನ್ನು ಅವರು ಹೇಳುತ್ತಿದ್ದಾರೆ. ಈಗ ಅದಕ್ಕೆ ಏನು ದಾರಿ ಎಂಬುದನ್ನು ನಾವೂ ನೀವೂ ಯೋಚನೆ ಮಾಡಬೇಕು. ಈ ತಕಾವಿ ಲೋನು ಕೊಡುವುದನ್ನೇ ನಿಲ್ಲಿಸಿ ಬಿಡು ವುದು ಒಳ್ಳೆಯದೆಂದು ನಮ್ಮ ತೀರ್ಮಾನ. ಏಕೆಂದರೆ ಬಡವರು ಒಂದು ನೂರು ರೂಪಾಯಿ ಸಾಲ ಪಡೆಯಬೇಕಾದರೆ ಅದಕ್ಕೆ ಸುಮಾರು 50 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಹೀಗೆ ಅದರ ಅರ್ಧಹಣ ಇತರರ ಕೈಗೆ ಹೋಗುವುದರ ಬದಲು, ಅದು ಹೆಚ್ಚು ಸದ್ವಿನಿಯೋಗವಾಗುವ ಹಾಗೆ ಮಾಡಬೇಕು. ಅದಕ್ಕೆ ಬೇರೆ ಸಂಸ್ಥೆಗಳಿಂದ ಹೆಚ್ಚು ಹಣದ ಸಹಾಯ ಕೊಡುವ ಹಾಗೆ ಮಾಡಬೇಕು. ಈಗ 5 6 ಪಂಚಾಯತುಗಳಿಗೆ ಒಂದೊಂದು ಸೊಸೈಟಿ ಇದೆ. ಅವರು ಬೇಕಾದರೆ ಡಿ. ಸಿ. ಸಿ. ಬ್ಯಾಂಕಿನಿಂದ ಬರತಕ್ಕಂತಹ ಹಣವನ್ನು ಬಿಲ್ಡ್ ಅಪ್ ಮಾಡಿದರೆ ಇಂಥ ಜನರಿಗೆ ಸಹಾಯ ಮಾಡಬಹುದು. ಒಬ್ಬರು ಇನ್ನೊಬ್ಬರಿಗೆ ಸೆಕ್ಯೂರಿಟಿ ನಿಂತು ಸಾಲ ಕೊಡಿಸಬಹುದು. ಇವತ್ತು ಏನಾಗಿದೆಯೆಂದರೆ, ಯಾರ ಕೈಗೆ ಇದನ್ನು ಕೊಟ್ಟರೂ ಅಲ್ಲಿ ಮೇಯುವವರೇ ಜಾಸ್ತಿಯಾಗಿರುವುದನ್ನು ಕಾಣುತ್ತಿದ್ದೇವೆ. ಅದನ್ನು ಸಹಕಾರಿ ಸಂಸ್ಥೆಗಳಿಗೆ ಆಗಲಿ, ಅಧಿಕಾರಿಗಳಿಗೆ ಆಗಲಿ ಅಥವಾ ಖಾಸಗೀ ಸಂಸ್ಥೆಗೆ ಆಗಲಿ ಕೊಟ್ಟರೆ ಅಲ್ಲಿಯೂ ದೂರುಗಳು ಬರುತ್ತವೆ. ಆದ್ದರಿಂದ ಇದಕ್ಕೆ ಯಾವ ರೀತಿ ಮಾಡಬೇಕೆಂದು ತಾವು ಸೂಚಿಸಿ.

ಶ್ರೀ ಎಚ್. ಟಿ. ಕೃಷ್ಣಪ್ಪ :—ತಾವು ಈಗ ತಕಾವಿ ಲೋನ ಕೊಡುವುದು ಸರಿಯಲ್ಲ ಮತ್ತು ಅನೇಕ ಸಂಘ ಸಂಸ್ಥೆಗಳು ಸಾಲ ಕೊಡುತ್ತಿರುವಾಗ ಇದು ಅನಾವಶ್ಯಕವೆಂದು ಹೇಳಿದ್ದೀರಿ. ಅದಕ್ಕೆ ನನ್ನ ಸ್ವಾಗತ. ಆದರೆ ವಿಶೇಷ ಸನ್ನಿವೇಶಗಳಲ್ಲಿ ಈ ಸಾಲ ಉಪಯೋಗಕ್ಕೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ವ್ಯವಸಾಯಗಾರನಿಗೆ ಸಹಕಾರ ಸಂಸ್ಥೆಗಳಿಂದ ಎತ್ತುಗಳನ್ನು ಕೊಳ್ಳುವುದಕ್ಕಾಗಲಿ, ಅಥವಾ ಇತರ ವಿಚಾರಕ್ಕಾಗಲಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅಷ್ಟು ಕಷ್ಟ ವಾಗುತ್ತಾ ಇಲ್ಲ. ಆದ್ದರಿಂದ ರೈತ ತಾಲೂಕು ಬೋರ್ಡಿಗೆ ಹೋಗಿ ವರ್ಷಗಟ್ಟಲೆ ಅಲೆದಾಡುವುದಕ್ಕಿಂತ ಆತನ ಊರಿನಲ್ಲಿರುವ ಸಹಕಾರೀ ಸಂಘದಿಂದಲೇ ದೊರೆತರೆ ಒಳ್ಳೆಯದು. ಹಿಂದೆ ಮಧ್ಯಮ ಅವಧಿಯ ಸಾಲವನ್ನು ಸಹ ಕೊಡುತ್ತಿದ್ದರು ಅದನ್ನು ಈಗ ನಿಲ್ಲಿಸಿದ್ದಾರೆ. ಆದ್ದರಿಂದ ವ್ಯವಸಾಯಗಾರನಿಗೆ ಒಂದು ನಿರ್ದಿಷ್ಟ ವಾದ ಏಜನ್ಸಿಯಿಂದ ಸಾಲ ಸಿಗುವ ಹಾಗೆ ಮಾಡಿದರೆ ಒಳ್ಳೆಯದು. ಇವತ್ತು ಸಹಕಾರೀ ಸಂಘಗಳಲ್ಲಿ ಸಾಲ ಸಿಗುವುದು ಖಾಯಂ ಆದ ಮೇಲೆ ಕೆಲವರು ಮನೆಯಲ್ಲಿ ಸಾಲ ಮಾಡಬೇಕಾಗಿಲ್ಲದಿದ್ದರೂ ಸಹ ಸಾಲ ಮಾಡಿಕೊಂಡು ಮದುವೆ ಮತ್ತಿತರ ಖರ್ಚುಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಬೇಕಾದರೆ ತಾವು ಇದನ್ನು ತನಿಖೆಮಾಡಿ ನೋಡಬಹುದು. ವ್ಯವಸಾಯಕ್ಕೋಸ್ಕರ ವ್ಯವಸಾಯಗಾರನಿಗೆ ಕೊಟ್ಟಂತಹ ಸಾಲ ನಿಜವಾಗಿಯೂ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿದೆಯೇ ಎಂಬುದನ್ನು ಲೆಕ್ಕ ಹಾಕಿದರೆ, ಅದು ಆ ರೀತಿ ಉಪಯೋಗವಾಗದೆ ದುರ್ವಿನಿ ಯೋಗವಾಗಿದೆ. ಜನರು ಒಂದು ಸಲ ಸಾಲಗಾರನಾದರೆ, ಅದರಿಂದ ಮತ್ತೆ ತಪ್ಪಿಸಿಕೊಳ್ಳುವದಕ್ಕಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ರೈತನು ತನ್ನ ಸಾಲ ವನ್ನು ತೀರಿಸಲು ಮತ್ತು ಅದರ ಕಂತುಗಳನ್ನು ಕಟ್ಟಲು ಉತ್ಪತ್ತಿಯಾಗಿರುವ ಧವಸಧಾನ್ಯಗಳನ್ನು ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ. ಆದ್ದರಿಂದ ಒಂದು ಸಲ ಸಾಲಕ್ಕೆ ಕೈಹಾಕಿದರೆ ಅದು ಸಾರೋದ್ಧಾರವಾಗಿ ನಡೆದುಕೊಂಡು ಹೋಗು ತ್ತದೆ. ತಾವು ಸಹಕಾರ ಸಂಘಗಳ ಮುಖಾಂತರ ಕೊಟ್ಟ ಹಣ ಸದ್ವಿನಿಯೋಗ ವಾಗಿದೆಯೇ ಎಂಬುದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ಅದರಲ್ಲೂ ಈಗ ಲ್ಯಾಂಡ್ ಮಾರ್ಟಗೇಜ ಬ್ಯಾಂಕಿನವರು ಮನೆ ಮನೆಗೆ ಹೋಗಿ ಸಾಲಕೊಡುವ ಒಂದು ಸ್ಕೀಮು ಹಾಕಿಕೊಂಡಿದ್ದಾರೆ. ಇದರಿಂದ ಏನಾಗಿದೆ ಅಂದರೆ, ಸಾಲ ತೆಗೆದುಕೊಳ್ಳದವನು ಸಹ ಸಾಲ ತೆಗೆದುಕೊಳ್ಳುವ ಹಾಗೆ ಆಗಿದೆ. ಇದನ್ನೆಲ್ಲಾ ಆಲೋಚನೆ ಮಾಡಿಕೊಂಡು ಒಂದು ಸಮಗ್ರವಾದ ತಿದ್ದುಪಡಿಯನ್ನು ತಂದರೆ ಸಹಕಾರೀ ಆಂದೋಳನವನ್ನು ಕಾರ್ಯಗತಗೊಳಿಸುವುದಕ್ಕೆ ಸಹಾಯವಾಗುತ್ತದೆ. ಇದರಲ್ಲಿ ಒಂದೆರಡು ಸಹಕಾರೀ ಸಂಘಗಳನ್ನು ಒಟ್ಟಿಗೆ ಸೇರಿಸತಕ್ಕಂತಹ ಪ್ರಯತ್ನ ಮಾಡಿದ್ದೀರಿ. ಒಂದು ಗ್ರಾಮದಲ್ಲಿ, ಒಂದು ಕಡೆ ಸೇವಾ ಸಹಕಾರ

ಸಂಘ ಇದೆ; ಇನ್ನೊಂದು ಕಡೆ ಅಡಿಕೆ ಸಹಕಾರ ಸಂಘ ಇದೆ. ಇವೆಲ್ಲವೂ ವ್ಯವಸಾಯಗಾರನಿಗೆ ಅನುಕೂಲ ಕಲ್ಪಿಸುವುದಕ್ಕೆ ಇರುವುದು. ಇವುಗಳೆಲ್ಲವನ್ನೂ ಒಟ್ಟುಗೂಡಿಸಿ ಒಂದು ಸೇವಾ ಸಹಕಾರ ಸಂಘದ ರೀತಿಯಲ್ಲಿ ಮಾಡಬೇಕು. ನಮ್ಮಲ್ಲಿ ಮೊನ್ನೆ ಒಂದು ಸೇವಾ ಸಹಕಾರ ಸಂಘ ಡಿಫಾಲ್ಟ್ ಆಯಿತು. ಅದಕ್ಕೆ ಅವರು ಅಲ್ಲಿಯೇ ಬೇರೆ ಒಂದು ಹೊಸ ಸೊಸೈಟಿ ರಿಜಿಸ್ಟರ್ ಮಾಡಿ ಒಂದುಲಕ್ಷ ರೂಪಾಯಿ ಫಸಲು ಸಾಲ ತೆಗೆದ ಕೊಂಡು ಹಂಚಿದರು ಇದರಿಂದ ಏನಾಗುತ್ತದೆ ಅಂದರೆ, ಒಬ್ಬ ಒಂದು ಸಹಕಾರ ಸಂಘದಲ್ಲಿ ಸಾಲ ತೆಗೆದುಕೊಂಡು ಮುಳುಗಿಸಿ, ಮತ್ತೊಂದರಲ್ಲಿ ಪುನಃ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಒಂದು ಪಂಚಾಯತಿ ವ್ಯಾಪ್ತಿಯಲ್ಲಿ 2-3 ಸೇವಾ ಸಹಕಾರ ಸಂಘ ಇದ್ದರೆ, 2-3 ಸಹಕಾರ ಸಂಘಗಳಲ್ಲಿಯೂ ಸಾಲ ಪಡೆದುಕೊಂಡು ಎಲ್ಲಾ ಸಹಕಾರ ಸಂಘಗಳನ್ನು ಮುಳುಗಿಸಿರುವುದಕ್ಕೆ ಅವಕಾಶವಾಗುತ್ತದೆ.

ಆದ್ದರಿಂದ ಇದನ್ನು ಸ್ಟ್ರಿಕ್ಟಾಗಿ ಪಾಲನೆ ಮಾಡಬೇಕು. ಗ್ರಾಮಪಂಚಾಯಿತಿ ಕ್ಷೇತ್ರದಲ್ಲಿ ಅಡಿಕೆ ಬೆಳೆಗಾರರ ಹೆಸರಿನಲ್ಲಿ, ಭತ್ತದ ಬೆಳೆಗಾರರ ಹೆಸರಿನಲ್ಲಿ ಅಥವಾ ಯಾವುದೇ ಹೆಸರಿನಲ್ಲಾಗಲೀ ಒಂದು ಸಂಘ ಇರಬೇಕು. ಹಲವಾರು ಸಂಘ ಗಳನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬಾರದು. ಈಗ ಅಮೊಲ್ಗ ಮೇಷನ್ ಮಾಡತಕ್ಕ ಒಂದು ತಿದ್ದುಪಡಿಯನ್ನೇನು ತಂದಿದ್ದೀರಿ ಇದರ ಪೂರ್ಣ ಜನತೆಗೆ ದೊರೆಯುವಂತಾಗಬೇಕಾದರೆ ತಮ್ಮ ಸಿಬ್ಬಂದಿ ವರ್ಗ ಬಹಳ ಪ್ರಾಮಾ ಣಿಕವಾಗಿ ಕೆಲಸ ಮಾಡಬೇಕು. ಈಗ ಏನು ತಾವು ತಿದ್ದುಪಡಿಯನ್ನು ತಂದಿ ದ್ದೀರಿ ಇದರಲ್ಲಿ ಒಂದು ಗ್ರಾಮ ಪಂಚಾಯಿತಿ ಕ್ಷೇತ್ರದಲ್ಲಿ ಎರಡು ಸೊಸೈಟಿ ಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರ ಅರ್ಥ ಏನು? ತಾವು ಹೇಳತಕ್ಕಂಥಾ ದೋರಣೆಗೂ ಮಾಡತಕ್ಕಂಥಾ ಕೃತಿಗೂ ವ್ಯತ್ಯಾಸ ಇದೆ. ಆದ್ದರಿಂದ ಇದನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ.

ಸೇವಾ ಸಹಕಾರ ಸಂಘಗಳ ಚುನಾವಣೆಯನ್ನು ನಡೆಸತಕ್ಕ ಕಾಲದಲ್ಲಿ ಚುನಾವಣೆಯ ಚಿನ್ಹೆಯನ್ನು ಚುನಾವಣೆಯ ಗುರುತನ್ನು ಕೊಡುತ್ತಿಲ್ಲ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡಾ 20-25 ಪರ್ಸೆಂಟ್ ಜನಗಳು ಮಾತ್ರ ವಿದ್ಯಾವಂತರಾಗಿದ್ದಾರೆ. ಆದ್ದರಿಂದ ಓದು ಬರಹ ಬಾರದೇ ಇರುವವರು ಜಾಸ್ತಿ ಜನ ಇದ್ದಾರೆ. ಇದರಿಂದಾಗಿ ವಿದ್ಯಾವಂತರಾಗಿರತಕ್ಕವರೇ ಸಹಕಾರ ಸಂಘಗಳಿಗೆ ಅಧ್ಯಕ್ಷರು ಉಪಾಧ್ಯಕ್ಷರು ಹಾಗು ಡೈರೆಕ್ಟರಾಗಿ ಚುನಾವಣೆಯಲ್ಲಿ ಆರಿಸಿ ಬರುತ್ತಾರೆ. ಅವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುವುದ ಕ್ಕಾಗುವುದಿಲ್ಲ. ಇದರ ಜೊತೆಗೆ ಇನ್ನೊಂದು ಏನಾಗಿದೆ ಎಂದರೆ ಸಹಕಾರ ಸಂಘಗಳ ಚುನಾವಣೆಗೆ 25 ಜನ ನಿಂತರೆ ಅವಿದ್ಯಾವಂತ ಸದಸ್ಯರಿಗೆ ಎಷ್ಟೇ ಇನ್‌ಸ್ಟ್ರಕ್ಷನ್ ಕೊಟ್ಟಿದ್ದರೂ ಸಹ ರಾಮಪ್ಪನಿಗೆ ಓಟು ಹಾಕುವುದನ್ನು ಬೀಮಪ್ಪ

(ಶ್ರೀ ಕಾಗೋಡು ತಿಮ್ಮಪ್ಪ)

ನಿಗೆ ಹಾಕಿರುತ್ತಾರೆ, ಭೀಮಪ್ಪನಿಗೆ ಓಟು ಹಾಕುವುದನ್ನು ರಾಮಪ್ಪನಿಗೆ ಹಾಕಿರುತ್ತಾರೆ. ಇದರಿಂದಾಗಿ ಅವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುವುದು ಬಹಳ ಕಷ್ಟವಾಗಿದೆ. ಆದಕಾರಣ ದಯಮಾಡಿ ಸಹಕಾರ ಸಂಘಗಳ ಚುನಾವಣೆಗೆ ಗುರುತು ಕೊಡುವುದು ಕಡ್ಡಾಯವಾಗಿ ಮಾಡಬೇಕು. ಸಹಕಾರ ಸಂಘಗಳ ಚುನಾವಣೆಗಳಲ್ಲಿ ಗರುತು ಕೊಡದೇ ಇರುವ ಉದ್ದೇಶ ಏನು ? ಬುದ್ಧಿವಂತರೇ ಸಹಕಾರ ಸಂಘಗಳ ಆಡಳಿತದಲ್ಲಿ ಇರಬೇಕು ಎನ್ನುವ ಉದ್ದೇಶವೇ 100ಕ್ಕೆ 80 ಜನ ವಿದ್ಯಾವಂತರೇ ಸಹಕಾರ ಸಂಘಗಳಲ್ಲಿ ಆಡಳಿತದಲ್ಲಿರುವುದರಿಂದ ಅವರು ಸಹಕಾರ ಸಂಘಗಳಲ್ಲಿ ದುಡ್ಡು ಹೊಡೆಯುತ್ತಾರೆ. ಮತ್ತು ಹಳ್ಳಿಗಾಡಿನಲ್ಲಿರತಕ್ಕ ಅವಿದ್ಯಾವಂತರನ್ನು ಶೋಷಣೆ ಮಾಡುತ್ತಾರೆ. ಆದ್ದರಿಂದ ಅವರು ಶೋಷಣೆಯಿಂದ ವಿಮುಕ್ತರಾಗಿ ಅವಿದ್ಯಾವಂತರೂ ಸಹಕಾರ ಸಂಘಗಳ ಚುನಾವಣೆಗೆ ನಿಲ್ಲುವ ಅವಕಾಶ ಇದ್ದು ಅವರನ್ನು ಜನಗಳು ಚುನಾವಣೆಯಲ್ಲಿ ಆರಿಸುವುದಕ್ಕೆ ಅವಕಾಶ ಇರಬೇಕು. ಈ ದೃಷ್ಟಿಯಿಂದ ಸಹಕಾರ ಸಂಘಗಳಲ್ಲಿ ನಡೆಯುತಕ್ಕ ಚುನಾವಣೆಗೆ ಚಿನ್ನೆಯನ್ನು ಕೊಡುವಂತೆ ಮಾಡಬೇಕು. ಅದು ಕಾನೂನಿನಲ್ಲಿ ಇಲ್ಲದೇ ಇರುವುದರಿಂದ ಚುನಾವಣಾ ಚಿನ್ನೆಯನ್ನು ಕೊಡಬೇಕಾದ ಅಗತ್ಯ ಇಲ್ಲ ಎಂದು ಹೇಳುತ್ತಾರೆ. ನಾನು ಇದನ್ನು ಒಂದೆರಡು ಪ್ರಸಂಗದಲ್ಲಿ ನೋಡಿದ್ದೇನೆ. ಜಮೀನು ಅಭಿವೃದ್ಧಿ ಬ್ಯಾಂಕಿನ ಆಡಳಿತ ವರ್ಗದ ಚುನಾವಣೆ ನಡೆದರೆ ಅದಕ್ಕೆ ಅವಿದ್ಯಾವಂತ ಸದಸ್ಯರು ಓಟನ್ನೇನೋ ಹಾಕುತ್ತಾರೆ. ಆದರೆ ಅವುಗಳಲ್ಲಿ ಸರಿಯಾದ ಕ್ರಮದಲ್ಲಿ ಗುರುತು ಹಾಕದೇ ಇರುವುದರಿಂದ ಅವುಗಳು ಇನ್‌ವ್ಯಾಲಿಡ್ ಆಗುತ್ತವೆ. 50 ಜನ ವಿದ್ಯಾವಂತರು ವೋಟು ಹಾಕಿದ್ದು ವ್ಯಾಲಿಡ್ ಆಗಿ ಅವರು ಚುನಾಯಿತರಾಗುತ್ತಾರೆ. ಯಾವಾಗ ವಿದ್ಯಾವಂತರು ಚುನಾವಣೆಯಲ್ಲಿ ಆರಿಸಿ ಬರುತ್ತಾರೆಯೋ ಆಗ ಅವಿದ್ಯಾವಂತರ ಶೋಷಣೆ ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಒಬ್ಬ ಮನುಷ್ಯ ಒಂದು ಸಹಕಾರ ಸಂಘದ ಮ್ಯಾನೇಜಿಂಗ್ ಕಮಿಟಿಯಲ್ಲಿ 6 ವರ್ಷಗಳಿಗಿಂತ ಜಾಸ್ತಿ ಅಧ್ಯಕ್ಷನಾಗಿಯಾಗಲೀ ಅಥವಾ ಉಪಾಧ್ಯಕ್ಷನಾಗಿಯಾಗಲೀ ಇರಬಾರದು ಎಂದು ಇದರಲ್ಲಿ ಹೇಳಿದ್ದಾರೆ. ಇದು ಕೆಲವರ ಒಂದು ತರಹ ಆಸ್ತಿ ಇದ್ದ ಹಾಗೆ, ಅವನು 10 ವರ್ಷ ಇರಬಹುದು, 20 ವರ್ಷ ಇರಬಹುದು. ಅವನನ್ನು ಆ ಸ್ಥಾನದಿಂದ ಹೊರಗಡೆ ಹಾಕುವುದಕ್ಕೆ ಆಗುತ್ತಾ ಇಲ್ಲ. ಈಗ ಈ ಒಂದು ತಿದ್ದುಪಡಿಯನ್ನು ತರುವುದರಿಂದ ಸಹಕಾರ ಆಂದೋಲನದಲ್ಲಿ ಹೊಸಬರು ಬರಬಹುದು. ಒಂದು ಈ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಹೆಬ್ಬೆಟ್ಟನ್ನು ಹಾಕುವವರು ಆರಿಸಿ ಬಂದರೂ ಕೂಡ ಅವರಿಗೆ ಓದುವುದಕ್ಕೆ ಬರೆಯುವುದಕ್ಕೆ ಬಾರದೇ ಇದ್ದರೂ ಕೂಡ ಅವರಿಗೆ ವ್ಯವಹಾರ ಜ್ಞಾನ ಇರುತ್ತದೆ. ಅವರು ಬರಹಗಾರರಂತೆ ಮೋಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಅವರನ್ನು ಅಧಿಕಾರದಿಂದ ತೆಗೆದು ಹಾಕಿ. ಆದರೆ ಈಗ ಸರ್ಕಾರದವರು ಈಗ ಇರುವುದನ್ನೇ

ಮುಂದುವರಿಸಿಕೊಂಡು ಹೋಗೋಣ ಎಂದು ಪ್ರಯತ್ನ ಪಟ್ಟರೆ ಅವಿದ್ಯಾವಂತರು
ಚುನಾವಣೆಯಲ್ಲಿ ಆರಿಸಿ ಬರುವುದಕ್ಕಾಗುವುದಿಲ್ಲ. ಆದ್ದರಿಂದ ಸಹಕಾರಿ
ಕ್ಷೇತ್ರದಲ್ಲಿ ನಡೆಯತಕ್ಕ ಚುನಾವಣೆಗೆ ಇತರ ಕ್ಷೇತ್ರದಲ್ಲಿರುವಂತೆ ಚುನಾವಣಾ
ಚಿನ್ಹೆಯನ್ನು ಕೊಡಬೇಕು. ಈಗ ಸಪ್ಟೆಂಬರ್ ತಿಂಗಳಿನಲ್ಲಿ ಸಹಕಾರ ಸಂಘಗಳ
ಜನರಲ್‌ಬಾಡಿ ಮೀಟಿಂಗ್‌ಗಳು ನಡೆಯುವುದಕ್ಕೆ ಪ್ರಾರಂಭವಾಗುತ್ತದೆ. ಆದ್ದ
ರಿಂದ ಈ ಚುನಾವಣೆಗಳಲ್ಲಿ ಚಿನ್ಹೆಯನ್ನು ಕೊಡುವ ಬಗ್ಗೆ ಒಂದು ತಿದ್ದುಪಡಿಯನ್ನು
ಈ ಸಭೆಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಅಧ್ಯಕ್ಷರ
ಮುಖಾಂತರ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇದರಲ್ಲಿ
ಇನ್ನೊಂದು ಏನು ಮಾಡಿದ್ದಾರೆ ಎಂದರೆ ಸಹಕಾರಿ ಸಂಸ್ಥೆಯಲ್ಲಿ ಸರ್ಕಾರದ ಪರ
ವಾಗಿ 1/3 ಭಾಗದ ಪ್ರತಿನಿಧಿಗಳು ಇರಬೇಕು ಎಂದು ಮಾಡಿದ್ದಾರೆ. ಇದರಿಂದ
ಒಂದು ಆತಂಕವಾಗಬಹುದು ಎಂಬ ಸಂಶಯ ಇದೆ. ಏತಕ್ಕೆಂದರೆ ಸಹಕಾರಿ
ಸಂಘಗಳು ಸಾಧ್ಯವಾದ ಮಟ್ಟಿಗೂ ಸ್ವಾಯುತ್ತತೆಯಿಂದ ನಡೆಯುವುದಕ್ಕೆ ರಕ್ಷಣೆ
ಮಾಡಿಕೊಡುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಸಹಕಾರಿ ಸಂಘಗಳನ್ನು
ತೀರಾ ಹತೋಟಿಯಲ್ಲಿಡಬೇಕು ಎನ್ನುವ ಉದ್ದೇಶದಿಂದ ಸಹಕಾರಿ ಸಂಘಗಳ
ದಿನನಿತ್ಯದ ವ್ಯವಹಾರದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿದರೆ ಸಹಕಾರಿ ಸಂಘಗಳ
ಸ್ವಾಯತ್ತತೆಯನ್ನು ರಕ್ಷಣೆ ಮಾಡಿದಂತಾಗುವುದಿಲ್ಲ. ಸಹಕಾರಿ ಸಂಘಗಳಿಗೆ
ಸರ್ಕಾರದವರು ಷೇರು ಬಂಡವಾಳವನ್ನು ಕೊಟ್ಟಿದ್ದೇವೆ ಎನ್ನುವ ಕಾರಣದಿಂದ
ಇದರಲ್ಲಿ 1/3 ಭಾಗ ಸರ್ಕಾರದ ಪ್ರತಿನಿಧಿಗಳು ಇರಬೇಕು ಎಂದು ಮಾಡಿದ್ದಾರೆ.
ಇಂಥಾ ಒಂದು ಅವಕಾಶ ಮಾಡುವುದಕ್ಕೆ ಹೋಗಬೇಡಿ. ಅವುಗಳ ಸ್ವಾಯತ್ತತೆ
ಇರುವುದಕ್ಕೆ ಅವಕಾಶ ಮಾಡಿಕೊಡಿ. ಬಂಡವಾಳ ಹಾಳಾಗಬಾರದು ಎನ್ನುವು
ದನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದ ಪ್ರತಿನಿಧಿ ಒಬ್ಬರು ಇದ್ದರೆ ಸಾಕು.
ಸರ್ಕಾರದ ಹಣವನ್ನು ತೊಡಗಿಸುವಂತಹ ಸಹಕಾರಿ ಸಂಘಗಳ ಕ್ಷೇತ್ರದಲ್ಲಿ
ಸರ್ಕಾರಿ ಪ್ರತಿನಿಧಿ ಒಬ್ಬರು ಇದ್ದರೆ ಸಾಕು. 1/3 ನೇ ಭಾಗ ಪ್ರತಿನಿಧಿ ಇರುವು
ದನ್ನು ಕೈ ಬಿಡಬೇಕು. ಆ ರೀತಿ ಮಾಡಿದರೆ ಸಹಕಾರಿ ಸಂಘಗಳ ಸ್ವಾಯತ್ತತೆ
ಯನ್ನು ರಕ್ಷಣೆ ಮಾಡಿದ ಹಾಗಾಗುತ್ತದೆ ಎಂದು ನಾನು ಹೇಳುತ್ತೇನೆ.

ಸಹಕಾರಿ ಸಂಘಗಳು ಮೂಲತಃ ಕೆಡುವುದಕ್ಕೆ ಯಾರು ಯಾರು ಜವಾಬ್ದಾ
ರರಾಗಿದ್ದಾರೆ ಎಂದರೆ ಆಡಿಟರ್ಸ್ ಕಾರಣ. ಬೇರೆ ಯಾರೂ ಅಲ್ಲ. ಅಂಥಾ
10 ಉದಾಹರಣೆಯನ್ನು ತಮಗೆ ಬೇಕಾದರೆ ಕೊಡುತ್ತೇನೆ. ನಿಮ್ಮ ಆಡಿಟರ್ಸ್
ಒಂದು ಸೊಸೈಟಿಗೆ ಹೋಗಿ ಅಲ್ಲಿ ಹಣ ದುರುಪಯೋಗ ಆಗಿದೆ ಎಂದು ಹೇಳು
ತ್ತಾನೆ. ಇನ್ನೊಬ್ಬ ಹೋಗಿ ಹಣ ದುರುಪಯೋಗವಾಗಿಲ್ಲ ಎಂದು ಹೇಳುತ್ತಾನೆ.
ಆದ್ದರಿಂದ ಕೋ ಆಪರೇಟೀವ್ ಇಲಾಖೆಯ ಆಡಿಟರ್ಸ್ ವಿಭಾಗವನ್ನು ತೆಗೆದು
ಪ್ರತ್ಯೇಕವಾದ ಆಡಿಟರ್ಸ್ ವಿಭಾಗವನ್ನು ಮಾಡಿದರೆ ಒಳ್ಳೆಯದು. ವರ್ಷಂಪ್ರತಿ
ಆಡಿಟ್ ಮಾಡುತ್ತಾ ಬಂದರೆ ಹಣ ದುರುಪಯೋಗವಾಗುವುದಿಲ್ಲ. ಅಷ್ಟು ಅವ್ಯವ

(ಶ್ರೀ ಕಾಗೋಡು ತಿಮ್ಮಪ್ಪ)

ಹಾರಗಳು ಸಹಕಾರಿ ಸಂಘಗಳಲ್ಲಿ ನಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಲ್ಲಿಯವರೆಗೆ ನಿಮ್ಮ ಇಲಾಖೆಯು ಸೀನಿಯರ್ ಇನ್‌ಸ್ಪೆಕ್ಟರ್ ಆಡಿಟ್ ಮಾಡುವ ವ್ಯವಸ್ಥೆ ಅನ್ನು ಇಟ್ಟುಕೊಂಡಿರುತ್ತೀರೋ ಅಲ್ಲಿಯವರೆಗೆ ಈ ವ್ಯವಸ್ಥೆಯಿಂದ ಸಹಕಾರಿ ಸಂಘಗಳಲ್ಲಿರತಕ್ಕ ದುರ್ವ್ಯವಹಾರವನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕೆ ಒಂದು ಪ್ರತ್ಯೇಕವಾದ ಆಡಿಟ್ ವಿಭಾಗವನ್ನು ಮಾಡಬೇಕು. ಆ ರೀತಿ ಮಾಡಿದರೆ ಸಹಕಾರ ಸಂಘಗಳು ಉದ್ಧಾರವಾಗುತ್ತವೆ ಇಲ್ಲದಿದ್ದರೆ ಆಗುವುದಿಲ್ಲ. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ತಿದ್ದುಪಡಿಯನ್ನು ಇಲ್ಲಿ ತಂದರೆ ಚೆನ್ನಾಗಿರುತ್ತದೆ. ಮತ್ತು ಅದು ಕಾನೂನು ಬದ್ಧವಾಗಿರುತ್ತದೆ. ಈಗ ತಮಗೆ ಉದಾಹರಣೆಗೆ ಹೇಳಬೇಕಾದರೆ ಅನೇಕ ಸಹಕಾರ ಸಂಘಗಳಲ್ಲಿ 4 ವರ್ಷ 5 ವರ್ಷಗಳಿಂದ ಆಡಿಟ್ ಆಗಿಲ್ಲ. ಇದು ನಮಗೆ ಆಶ್ಚರ್ಯವಾಗಿ ಕಾಣಬಹುದು. ಅಂಥಾ ಒಂದು ಪರಿಸ್ಥಿತಿ ಇದೆ. ಅನೇಕ ಸಹಕಾರ ಸಂಘಗಳಿಗೆ ಯಾವೊತ್ತೋ ಒಂದು ದಿವಸ ಆಡಿಟರ್‌ಗಳನ್ನು ಕಳುಹಿಸುತ್ತಾರೆ.

ಮೊನ್ನೆ ನಾನು ಎರಡು ಮೂರು ಕಡೆಗಳಲ್ಲಿ ನೋಡಿದ ಪ್ರಕಾರ ಕೆಲವು ಜಿಲ್ಲಾ ಬ್ಯಾಂಕ್‌ಗಳಲ್ಲಿಯೂ ಸಹ ಪ್ರತಿ ವರ್ಷದ ಆಡಿಟ್ ನಡೆದಿಲ್ಲ. ಆಡಿಟ್ ಮಾಡಲು ಪ್ರತ್ಯೇಕವಾದ ವಿಭಾಗವನ್ನು ರಚನೆ ಮಾಡಬೇಕು. ಈಗಿನ ವಿಧಾನದಿಂದ ಅಧಿಕಾರಿಗಳನ್ನು ಒಲಿಸಿಕೊಳ್ಳಲು ಅವಕಾಶವಿರುತ್ತದೆ. ಮತ್ತು ಈಗಿನ ವಿಧಾನದಿಂದ ಸಹಕಾರಿ ಕ್ಷೇತ್ರವನ್ನು ಮುಳುಗಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ಇದಕ್ಕಾಗಿ ಪ್ರತ್ಯೇಕ ವಿಭಾಗವನ್ನು ಇಟ್ಟು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು 3 ತಿಂಗಳು ಅಥವಾ 6 ತಿಂಗಳಿಗೊಮ್ಮೆ ಹೋಗಿ ಯಾವ ರೀತಿ ಆಡಿಟ್ ಮಾಡುತ್ತಾರೋ ಅದೇ ರೀತಿ ಮಾಡುವಂತೆ ಏರ್ಪಾಡು ಮಾಡಬೇಕು. ಇಂದು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕೋ ಅಪರೇಟಿವ್ ಸೊಸೈಟಿಗಳಲ್ಲಿ ಆಗುತ್ತಿರುವಷ್ಟು ನಷ್ಟ ಬೇರೆ ಕಡೆಗಳಲ್ಲಿ ಆಗುತ್ತಿಲ್ಲ. ಸಾಗರ ಹೊಸನಗರ, ಶಿವಮೊಗ್ಗ, ಸೊರಬ ಮುಂತಾದ ಕಡೆಗಳಲ್ಲಿ ನಷ್ಟ ತೋರಿಸಿದ್ದಾರೆ. ಸೊರಬದ ಸೊಸೈಟಿಯಲ್ಲಿ ಒಂದೂವರೆ ಲಕ್ಷದಿಂದ ಎರಡು ಲಕ್ಷದವರೆಗೆ ಹಣ ದುರುಪಯೋಗವಾಗಿದೆ ಎಂದು ಕೇಳಿದ್ದೇನೆ. ಒಂದೂವರೆಸಾವಿರ ಕ್ವಿಂಟಾಲ್ ಭತ್ತವನ್ನು ಶೇಖರಣೆ ಮಾಡಿದ್ದರು. ಹಳೆಯ ಚೀಲ ತೆಗೆದು ಹೊಸ ಚೀಲಗಳಿಗೆ ಬತ್ತವನ್ನು ತುಂಬಬೇಕೆಂದು ಸರ್ಕಾರದವರು ಚೀಲಗಳನ್ನು ಒದಗಿಸಿದರು. ಆದರೆ ಅವರು ಹೊಸ ಚೀಲಗಳಿಗೆ ಬದಲಾಯಿಸಲೇ ಇಲ್ಲ. ಹಳೆಯ ಚೀಲದಲ್ಲಿ ಇದ್ದಂತೆ ಮಾರಾಟ ಮಾಡಿ ಬಿಟ್ಟರು. ಹೊಸ ಚೀಲಗಳನ್ನು ಸಹ ಹರಾಜು ಹಾಕಿಬಿಟ್ಟರು. ಇಂದು ಲೆವಿ ವ್ಯವಹಾರವನ್ನು ಸಹ ಈ ಸೊಸೈಟಿಗಳವರು ತೀರ ಹದಗೆಡಿಸಿಬಿಟ್ಟಿದ್ದಾರೆ. ಇದಕ್ಕೆಲ್ಲಾ ಕಾರಣವೇನೆಂದರೆ ಕಾಲಕ್ಕೆ ಸರಿಯಾಗಿ

ಆಡಿಟ್ ಆಗದಿರುವುದು. ಸಹಕಾರಿ ವಿಸ್ತರಣಾಧಿಕಾರಿಯವರಾಗಲೀ, ಅಸಿಸ್ಟೆಂಟ್ ರಿಜಿಸ್ಟ್ರಾರ ಅವರಾಗಲೀ ಪ್ರತಿವರ್ಷದ ಸ್ಟಾಕ್ ವೆರಿಫಿಕೇಷನ್ ನೋಡುತ್ತಿಲ್ಲ. ಆಡಿಟ್ ಮಾಡುತ್ತಾರೆಂಬ ಹೆದರಿಕೆಯೇ ಈ ಸೊಸೈಟಿಗಳವರಿಗೆ ಇಲ್ಲವಾಗಿದೆ. ಈ ಕಾರಣದಿಂದ ಸಾಮೂಹಿಕವಾಗಿ ಎಲ್ಲ ಸಹಕಾರಿ ಸಂಘಗಳಲ್ಲಿಯೂ ಸಹ ಹಣದ ವಂಚನೆ, ಹಣದ ದುರುಪಯೋಗ ಸರ್ವೇ ಸಾಧಾರಣವಾಗಿಬಿಟ್ಟಿದೆ. ಈ ಹಣದ ದುರುಪಯೋಗವನ್ನು ತಪ್ಪಿಸಬೇಕಾದರೆ ಆಡಿಟ್ ಇಲಾಖೆಯನ್ನೇ ಪ್ರತ್ಯೇಕಗೊಳಿಸಿ, ಆ ಮೂಲಕ ಆಡಿಟ್ ಮಾಡಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈಗಿನ ಅನಾಹುತವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಈಗಿನ ಆಡಿಟ್ ವಿಧಾನದಿಂದ ಅಧಿಕಾರಿಗಳನ್ನು ವೊಲಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಸರ್ಕಾರದ ಪ್ರತಿನಿಧಿಗಳನ್ನು ವೊಲಿಸಿಕೊಳ್ಳುವ ವಿಧಾನವನ್ನು ಅವರು ಅರಿತು ಕೊಂಡಿದ್ದಾರೆ ಯಾವ ಯಾವ ಪ್ರತಿನಿಧಿಗಳು ಯಾವಯಾವುದರಲ್ಲಿ ವೊಲಿಯುತ್ತಾರೆಂಬುದನ್ನು ಅವರು ತಿಳಿದು ಕೊಂಡುಬಿಟ್ಟಿದ್ದಾರೆ. ಎಲ್ಲರೂ ಸಮಾಜಜೀವಿಗಳೇ ಆಗಿದ್ದಾರೆ. ಈ ದೃಷ್ಟಿಯಿಂದ ಸರ್ಕಾರದ ಅಧಿಕಾರಿಗಳನ್ನು ವೊಲಿಸಿಕೊಳ್ಳುವದು ಅವರಿಗೆ ಸುಲಭ. ಅವರ ಒಂದು ದಕ್ಷಹೀನತೆ ಮತ್ತು ದುರ್ಬಲತೆಯನ್ನು ವೊಲಿಸಿಕೊಳ್ಳುವ ಮೂಲಕ ಮೇಲಿಂದ ಮೇಲೆ ದರೋಡೆ ಮಾಡುತ್ತಿದ್ದಾರೆ. ಈಗಿನ ಕಾನೂನು ಪ್ರಕಾರ ಸರ್ಕಾರದ ಪ್ರತಿನಿಧಿಗಳನ್ನು ಸಹಕಾರಿ ಸಂಘಗಳಲ್ಲಿ ಇಟ್ಟ ಮಾತ್ರಕ್ಕೆ ಸಹಕಾರಿ ಸಂಘಗಳು ಉದ್ಧಾರವಾಗುವುದಿಲ್ಲ. ಏಕೆಂದರೆ ನಿಮ್ಮ ಪ್ರತಿನಿಧಿಗಳನ್ನು ಸುಲಭವಾಗಿ ವಂಚಿಸುವುದಕ್ಕೆ ಸಾಧ್ಯವಿದೆ. ನಿಮ್ಮ ಅಧಿಕಾರಿಗಳ ದಕ್ಷಹೀನತೆ ಮತ್ತು ದುರ್ಬಲತೆಯನ್ನೇ ಅವರು ಆಸ್ತಿಯನ್ನಾಗಿ ಮಾಡಿಕೊಂಡು ಹಣದ ದರೋಡೆ ಮಾಡುತ್ತಿದ್ದಾರೆ. ಮೂರನೇ ಒಂದು ಭಾಗದಷ್ಟು ಸರ್ಕಾರಿ ಅಧಿಕಾರಿಗಳು ಇರಬೇಕೆಂಬ ಕಾನೂನು ಈಗ ಏನಿದೆ ಅದನ್ನು ಕೈಬಿಟ್ಟು ಒಬ್ಬರು ಇದ್ದರೆ ಸಾಕು ಎಂದು ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ.

ಇಂದು 3—4 ಜಿಲ್ಲಾ ಬ್ಯಾಂಕ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದು ಕೊಂಡಿದ್ದೀರಿ. ನಾನು ಗದಗಕ್ಕೆ ಹೋದಾಗ ಯಾರೋ ಹೇಳುತ್ತಿದ್ದರು ಒಂದು ಜಿಲ್ಲಾ ಬ್ಯಾಂಕಿನಲ್ಲಿ ಒಬ್ಬರಿಗೆ ಕೇವಲ 15 ದಿವಸಗಳ ಕಾಲದವರೆಗೆ ಅಧ್ಯಕ್ಷಸ್ಥಾನ ಸಿಕ್ಕಿದ್ದಕ್ಕೆ ಹನ್ನೆರಡೂವರೆ ಲಕ್ಷ ರೂಪಾಯಿ ರೈಸ್ ಮಾಡಿದ್ದಾರೆಂದು. ಈ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಏನಿವೆ, ಇವು ಒಂದು ತರಹ ಸರ್ಕಸ್ ತಂತಿಯ ಮೇಲೆ ನಡೆಯುತ್ತಿವೆ. ಇವರು ಒಳ್ಳೆಯ ಉಪಾಯ ಮಾಡುತ್ತಾರೆ. ಉಪಾಯ ಏನೆಂದರೆ, ಚುನಾವಣೆಯ ಸಮಯದಲ್ಲಿ ಯಾರು ತಮಗೆ . ಓಟು ಕೊಡುತ್ತಾರೋ ಅಂತಹ ಸಹಕಾರ ಸಂಘಗಳು ಡಿಫಾಲ್ಟರ್ ಇದ್ದರೂ ಸಹ ಅಡ್ಜಸ್ಟ್‌ಮೆಂಟ್ ಆಫ ಎಂಟ್ರೀಸ್ ಮಾಡಿ ಡಿಫಾಲ್ಟರ್ ಆಗಿಲ್ಲ ಎಂದು ಮಾಡಿಬಿಡುತ್ತಾರೆ. ತಾಲ್ಲೂಕ್ ಮಟ್ಟದ ಮತ್ತು ಗ್ರಾಮ ಮಟ್ಟದ ಸಹಕಾರಿ ಸಂಘಗಳು ಏನಿವೆ, ಇವುಗಳು ಕೆಲವು

(ಶ್ರೀ ಕಾಗೋಡು ತಿಮ್ಮಪ್ಪ)

ಚೆನ್ನಾಗಿ ಕೆಲಸ ಮಾಡುತ್ತಿದ್ದು, ತಮಗೆ ಓಟು ಕೊಡುವುದಿಲ್ಲ ಎಂದು ಕಂಡು ಬಂದರೆ, ಅವು ಬಾಕಿ ಇರತಕ್ಕಂಥ ಸಹಕಾರ ಸಂಘಗಳು ಎಂದು ಟ್ರೀಟ್ ಮಾಡಿ ಬಿಡುತ್ತಾರೆ. ಜಿಲ್ಲಾ ಬ್ಯಾಂಕುಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನಿಮಗೆ ಮೇಲ್ನೋಟಕ್ಕೆ ಕಂಡುಬಂದರೂ ಸಹ, ಒಳಹೊಕ್ಕು ನೋಡಿದರೆ ಈ ದುರ್ವವ ಹಾರಗಳೆಲ್ಲಾ ಗೊತ್ತಾಗುತ್ತದೆ. ಎಷ್ಟೊಂದು ಲಕ್ಷ ರೂಪಾಯಿಗಳು ದುರ್ವವ ಹಾರ ನಡೆದಿದೆ ಎಂಬುದು ಗೊತ್ತಾಗುತ್ತದೆ. ನಿಜವಾದ ಬಣ್ಣ ಏನಿದೆ ಎಂಬುದು ಕಂಡುಬರುತ್ತದೆ. ಚುನಾವಣೆ ಸಮಯ ಬಂತು ಎಂದರೆ ಸಾಕು, ತಮಗೆ ಸಾಕಷ್ಟು ಓಟುಗಳು ಬರಲಿ ಎಂದು ಹೊಸದಾಗಿ ನಾನಾ ಹೆಸರುಗಳಲ್ಲಿ ಸಹ ಕಾರಿ ಸಂಘಗಳನ್ನು ಸ್ಥಾಪನೆ ಮಾಡಿಸುತ್ತಾರೆ. ಈ ರೀತಿಯಲ್ಲಿ 'ಓಟುಗಳನ್ನು ಪಡೆದು ಅಧಿಕಾರದಲ್ಲ ಕೆಲವರು ಮುಂದುವರೆಯುತ್ತಿದ್ದಾರೆ. ಈ ರೀತಿ ದುರ್ವ ವಹಾರಗಳು ಮತ್ತು ದುರ್ನಡತೆಗಳು ನಡೆಯುತ್ತಿದ್ದರೂ ಸಹ ತಾವು ಸರಕಾರಿ ಕ್ಷೇತ್ರ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಿದ್ದೀರಿ. ಪವಿತ್ರವಾದ ಗಂಗಾನದಿಯಲ್ಲಿಯೂ ಸಹ ಕೊಳಚೆ ಸೇರಿರುವುದರಿಂದ ಅದನ್ನು ಕುಡಿಯುವುದಕ್ಕೆ ನಮಗೆ ಯಾವ ರೀತಿ ಹೇಸಿಗೆಯಾಗುತ್ತದೆಯೋ ಅದೇ ರೀತಿ ಇಂದು ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ನೋಡಿದರೆ ಹೇಸಿಗೆಯಾಗುತ್ತದೆ. ಸಹಕಾರಿ ಕ್ಷೇತ್ರ ಎಂಬುದು ಇಂದು ದುರ್ವವಹಾರಗಳ ಸಂಗಮವಾಗಿಬಿಟ್ಟಿದೆ ಇದನ್ನು ಮುಕ್ತಗೊಳಿಸುವುದಕ್ಕೆ ತಾವು ದೊಡ್ಡ ಮನಸ್ಸು ಮಾಡಬೇಕು. ಇಂತಹ ಸಣ್ಣಪುಟ್ಟ ತಿದ್ದುಪಡಿಗಳಿಂದ ಈಗ ನಡೆಯುತ್ತಿರುವ ದುರ್ವವಹಾರಗಳನ್ನು ಸರಿಪಡಿಸುವುದಕ್ಕೆ ತಮ್ಮಿಂದ ಸಾಧ್ಯವಾಗುವುದಿಲ್ಲ ಈಗ ತಾವು ತಂದಿರತಕ್ಕಂಥ ತಿದ್ದುಪಡಿ ಏನಿದೆ, ಇದರಿಂದಲೂ ಸಹ ತಾವು ನಿರೀಕ್ಷೆ ಮಾಡಿರುವಂತೆ ಕೆಲಸ ಕಾರ್ಯಗಳು ಈ ಇಲಾಖೆಯಲ್ಲಿ ಆಗುವುದಕ್ಕೆ ಸಾಧ್ಯವಾಗುವುಲ್ಲ. 'ಏನೋ ನಮ್ಮನ್ನು ತಾತ್ಪೂರ್ವಿಕವಾಗಿ ಸಮಾಧಾನಪಡಿಸುವುದಕ್ಕೆ ಇದನ್ನು ಪಾಸ್ ಮಾಡು ವುದಕ್ಕೆ ಬದಲು ವಾಪಸ್ ತೆಗೆದುಕೊಳ್ಳುವುದು ಒಳ್ಳೆಯದು. ಇದರ ಬಗ್ಗೆ ತಾವು ಇನ್ನೂ ಆರು ತಿಂಗಳ ಕಾಲ ಸಮಗ್ರವಾಗಿ ವಿಚಾರ ಮಾಡಿದರೂ ಚಿಂತೆಯಿಲ್ಲ: ಒಂದು ಸಮಗ್ರವಾದಂಥ ಕಾನೂನನ್ನು ತಾವು ತಂದರೆ ಮಾತ್ರ ಈ ಸಹಕಾರಿ ಆಂದೋಳನಕ್ಕೆ ಒಂದು ಸ್ಫೂರ್ತಿ ಬರುವುದಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಇದನ್ನು ವಾಪಸ್ ಪಡೆದರೆ ಒಳ್ಳೆಯದೆಂದು ಹೇಳುತ್ತೇನೆ. ಈ ಒಂದು ತಿದ್ದುಪಡಿಯಿಂದ ನಮ್ಮ ನಿರೀಕ್ಷೆಗೆ ತಕ್ಕಂತೆ ಕೆಲಸಗಳು ಆಗುವುದಿಲ್ಲ: ಒಂದು ವೇಳೆ ಇದನ್ನು ವಾಪಸ್ ಪಡೆಯುವುದಕ್ಕೆ ಆಗದಿದ್ದರೂ ಸಹ, ಕೆಲವೊಂದು ತಿದ್ದುಪಡಿಗಳನ್ನು ಮಾಡುವುದರ ಮೂಲಕ ಸರ್ಕಾರದ ಹತೋಟಿಯನ್ನು ಈ ಸಂಸ್ಥೆಯಲ್ಲಿ ಬಹಳ ಸುಲಭವಾಗಿ ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

5 P.M.

*ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್) : ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ತಂದಿರುವ ಮೈಸೂರು ಸಹಕಾರ ಸಂಘದ ಕಾಯದೆಯು ತಿದ್ದುಪಡಿಗಳನ್ನು ಬೆಂಬಲಿಸುತ್ತ ವನ್ನ ಎರಡು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಸಮಾಜ ವಾದವನ್ನು ಜಾರಿಗೆ ತರಬೇಕು ಮತ್ತು ಸಮಾಜವಾದದಲ್ಲಿ ಬಡವರಿಗೆ ಸಹಾಯ ಮಾಡಿ ಅವರು ಮುಂದಕ್ಕೆ ಬರಬೇಕೆಂದು ಪ್ರಯತ್ನ ಮಾಡುವಾಗ ಸಹಕಾರ ಸಂಘ ಗಳನ್ನು ಮಾಡಿ ಅದರಿಂದ ಬಡವರಿಗೆ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಚಿಂತನೆ ಮಾಡುತ್ತಿರುವ ನಾವು ಇಂದು ಇಲ್ಲಿ ತಂದಿರುವ ತಿದ್ದುಪಡಿ ಮಸೂದೆಯನ್ನು ನೋಡಿದರೆ ಇದರಿಂದ ಬಡವರಿಗೆ ಕೆಲವು ಅಡ್ಡಿ ಆತಂಕಗಳು ಬರಲು ಅವಕಾಶವಾಗಿದೆ ಎಂದು ಇಲ್ಲಿ ಹೇಳಬೇಕಾಗಿದೆ. ಇದರಲ್ಲಿರುವ ಸೆಕ್ಷನ್ 29 (ಸಿ) (5) ರಲ್ಲಿ ಹೀಗಿದೆ :

29C (5)"............no member shall be eligible for being appointed or elected as a member of the Committee of such Co-operative Society if he does not fulfill the minimum qualifications relating to his transactions with the co-operative society upto such monetary limits as may be specified from time to time in such notification."

ಇದರಂತೆ ಕಾಲ ಕಾಲಕ್ಕೆ ಸರಕಾರದವರೇ, ನೋಟಿಫಿಕೇಷನ್ ಕೊಟ್ಟು ಸೊಸೈಟಿ ಗಳವರಿಗೆ ಎಲ್ಲ ವ್ಯವಹಾರಗಳನ್ನೂ ಮಾಡಬೇಕೆಂದು ಹೇಳಿದರೆ ಇದರಿಂದ ಬಡವರಿಗೆ, ಹರಿಜನರಿಗೆ ಹಾಗೂ ಹಿಂದುಳಿದ ವರ್ಗಗಳವರಿಗೆ ಅನುಕೂಲ ಮಾಡಲು ಸಾಧ್ಯ ವಾದೀತೇ ಎನ್ನುವುದರ ಬಗ್ಗೆ ಸರಕಾರದವರನ್ನು ನಾನು ಇಲ್ಲಿ ಕೇಳುತ್ತೇನೆ. ಇಂತಹ ಒಂದು ತಿದ್ದುಪಡಿಯನ್ನು ಇಲ್ಲಿ ತರುವುದರಿಂದ ಹಿಂದುಳಿದ ವರ್ಗಗಳವರು ಹಾಗೂ ಅಂತಹ ಸಂಸ್ಥೆಗಳು ಮುಂದೆ ಬರಲು ಸಾಧ್ಯವಿಲ್ಲದಂತಾಗುತ್ತದೆ. ಆದುದರಿಂದ ಈ ತಿದ್ದುಪಡಿಯಲ್ಲಿರುವ ಸೆಕ್ಷನ್ 29 (ಸಿ) (5) ನ್ನು ತೆಗೆದು ಹಾಕ ಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು 29 (ಸಿ) (ಎಫ್) ನಲ್ಲಿ "if he is near relation of a paid employee of shch co-operative society." ಎಂದು ಹೇಳಿದ್ದಾರೆ. ಸಹಕಾರದ ಇಲಾಖೆಗೆ ಸೇರಿದ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಸಂಬಂಧೀಕರು ಇದರಲ್ಲಿ ಕಮಿಟಿ ಸದಸ್ಯರಾಗಿರಕೂಡದು ಎಂದು ಇದ್ದರೆ ಇಲ್ಲಿನ ವ್ಯವಹಾರಗಳು ಪಕ್ಷಪಾತವಿಲ್ಲದಂತೆ ನಡೆಯಲು ಸಹಾಯವಾಗುತ್ತದೆ ಮತ್ತು ಇಲ್ಲಿರುವ ಅಧಿಕಾರಿಗಳು ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಹಾಯ

(ಎಂ. ಎಂ. ಸಜ್ಜನ್)

ವಾಗುತ್ತದೆ. ಮತ್ತು ಇಲ್ಲಿನ ನೌಕರರುಗಳೇ ಕಮಿಟಿ ಸದಸ್ಯರಾಗಿರಕೂಡದು ಎನ್ನುವ ತಿದ್ದುಪಡಿಯನ್ನು ಮಾಡಿರುವುದು ಸರಿಯಾದುದು.

ಸೆಕ್ಷನ್ 29 ಸಬ್‌ಕ್ಲಾಸು (2) ರಲ್ಲಿ ಒಬ್ಬ ಸದಸ್ಯರು ಎರಡಕ್ಕಿಂತ ಹೆಚ್ಚು ಸಂಘಗಳಲ್ಲಿ ಸದಸ್ಯರಾಗಿರಕೂಡದು ಎಂದು ಇದೆ. ಆದರೆ ಇದೇ ಸೆಕ್ಷನ್ ಸಬ್ ಕ್ಲಾಸ್ 29 (4) ರಲ್ಲಿ ಹೇಳಿರುವಂತೆ "Nothing in th s Section shall apply to a membtr nominated to the committee by the State Government or the Registrar." ಸರಕಾರದವರಿಂದ ನಾಮಿನೇಟಾದವರು ಎಷ್ಟು ಸಂಘಗಳಲ್ಲಿ ಬೇಕಾದರೂ ಇರಬಹುದು ಎಂದು ಇದೆ. ಇದರಂತೆ ಮಾಡಿದರೆ ಇದು ಪಕ್ಷಪಾತ ಮಾಡಿದಂತಾಗುವುದಿಲ್ಲವೇ? ಸರಕಾರದವರ ಕಡೆಯಿಂದ ಎಷ್ಟು ಜನರನ್ನು ಬೇಕಾದರೂ ನಾಮಿನೇಟು ಮಾಡಬಹುದು. ಇತರ ಸಂಘಗಳ ಸದಸ್ಯರನ್ನು ಮಾತ್ರ ಎರಡು ಸಂಘಗಳಿಗೇ ಇರಬೇಕೆಂದು ಮಿತಿ ಮಾಡುವುದು ಸರಿಯಾದುದಲ್ಲ. ಸೆಕ್ಷನ್ 29(ಸಿ) (4)ರಲ್ಲಿ ಈ ಒಂದು ದೋಷ ಇದೆ. ಇದರ ಬಗ್ಗೆ ಸರಕಾರ ವಿಚಾರ ಮಾಡಬೇಕು.

ಇನ್ನು ಸೆಕ್ಷನ್ 29 (ಡಿ) ನಲ್ಲಿ ಡಿಸ್ ಕ್ವಾಲಿಫಿಕೇಶನ್ ಬಗ್ಗೆ ಹೇಳಿದ್ದಾರೆ. ಇದರಂತೆ ಆರು ವರ್ಷಗಳ ಅವಧಿಯವರೆಗೆ ಪ್ರೆಸಿಡೆಂಟರಾಗಿ ಇಲ್ಲವೇ ವೈಸ್ ಪ್ರೆಸಿಡೆಂಟರಾಗಿದ್ದವರು ಮತ್ತೆ ಅವರು ಚುನಾವಣೆಗೆ ನಿಲ್ಲಕೂಡದು ಎಂದು. ಆದರೆ ಇದರಲ್ಲಿ ಕೆಲವು ಸಂಘ ಸಂಸ್ಥೆಗಳಲ್ಲಿ ಬಹುತೇಕ ಇರುವ ಪ್ರೆಸಿಡೆಂಟರು ಹಾಗೂ ವೈಸ್ ಪ್ರೆಸಿಡೆಂಟರು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಸರಕಾರ ಪೂರ್ವಭಾವಿಯಾಗಿ ತಿಳಿದುಕೊಂಡು ಅವರನ್ನು ಮುಂದೆ ಚುನಾವಣೆಗೆ ನಿಲ್ಲದಂತೆ ಮಾಡಬೇಕೆಂದು ಇದರಲ್ಲಿ ಮಾಡುತ್ತಿದ್ದಾರೆಂದು ಕಾಣುತ್ತೆ. ಆದರೆ ಬಹುತೇಕ ಸದಸ್ಯರು ಚೆನ್ನಾಗಿ ಕೆಲಸಮಾಡಿರುವ ಪ್ರೆಸಿಡೆಂಟರು ಹಾಗೂ ವೈಸ್ ಪ್ರೆಸಿಡೆಂಟರವರೇ ಇರಬೇಕೆಂದು ಚುನಾವಣೆ ಮಾಡಿದರೆ ನಿಷ್ಠಾವಂತರಾದ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವವರಿಗೆ ಇದರಿಂದ ಅಡ್ಡಿಯಾಗುತ್ತದೆ. ಇದರ ಬಗ್ಗೆ ಸರಕಾರ ಸ್ವಲ್ಪ ವಿಚಾರಮಾಡುವುದು ಒಳ್ಳೆಯದು ಇದರಿಂದ ಪ್ರಾಮಾಣಿಕವಾಗಿ ಕೆಲಸಮಾಡುವವರನ್ನು ತೆಗೆದುಹಾಕಿದಂತಾಗುತ್ತದೆ. ಪ್ರಾಮಾಣಿಕವಾಗಿ ಕೆಲಸಮಾಡುವವರಿಗೆ ಯಾವ ಅಡ್ಡಿಯೂ ಇರದಂತೆ ಮಾಡಬೇಕು. ಇದರಲ್ಲಿ ಬರೀ ಪ್ರೆಸಿಡೆಂಟರು ಹಾಗೂ ವೈಸ್ ಪ್ರಸಿಡೆಂಟರುಗಳ ಬಗ್ಗೆ ಇದೆ. ಪಾರ್ಲಿಮೆಂಟು ಮೆಂಬರುಗಳಿಗೆ ಹಾಗೂ ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳಿಗೆ ಇದನ್ನು ಅನ್ವಯಿಸುವುದಿಲ್ಲ. ಹೀಗಿರುವಾಗ ಬರೀ ಈ ಸಂಘಗಳ ಪ್ರೆಸಿಡೆಂಟರು ಹಾಗೂ ವೈಸ್ ಪ್ರೆಸಿಡೆಂಟರವರಿಗೇಕೆ ಇಲ್ಲಿ ಅನ್ವಯಿಸಬೇಕು? ಎಂದು ನಾನು ಕೇಳುತ್ತೇನೆ. ಇಂತಹ ವ್ಯತ್ಯಾಸಗಳು ಇದರಲ್ಲಿರಬಾರದು.

ಇನ್ನು ಪುಟ 11 ರಲ್ಲಿ ಸೆಕ್ಷನ್ 53 (ಎ) ನಾಮಿನೇಷನ್ ಬಗ್ಗೆ ಹೇಳಿದ್ದಾರೆ. ಇದರಂತೆ ಯಾರು ಸೊಸೈಟಿಗೆ ಐದು ಲಕ್ಷದಷ್ಟು ಷೇರು ಹಣಕ್ಕೆ ಸಹಾಯ ಮಾಡಿರುತ್ತಾರೋ ಅಂತಹ ಸಂಸ್ಥೆಗಳ ಮೂರನೇ ಒಂದು ಭಾಗದಷ್ಟು ಸದಸ್ಯರುಗಳನ್ನು ಇದರಲ್ಲಿ ನಾಮಿನೇಟು ಮಾಡಬೇಕೆಂದು ಹೇಳಿದ್ದಾರೆ. ಆದರೆ ಯಾವುದೇ ಸಂಘದಲ್ಲಿ ಸಾಕಷ್ಟು ಷೇರಿಗೆ ಸಹಾಯ ಮಾಡಲಿಲ್ಲ ಎಂದರೆ ಅವರಿಗೆ ಅವಕಾಶವಿಲ್ಲ ಎಂದರೆ ಇದರಿಂದ ಬಡವರಿಗೆ ಸಹಾಯ ಮಾಡಿದಂತಾಗುತ್ತದೆಯೇ? ಸರಕಾರದವರೇನೋ ಸಂಘಗಳ ಮೇಲೆ ಹತೋಟಿ ಇಡಬೇಕು ಎಂದು ಹೇಳುತ್ತಾ ಕೆಳಮಟ್ಟದಲ್ಲಿರುವ ಸಹಕಾರ ಸಂಘಗಳನ್ನು ಮುಂದೆ ತರುವುದಾದರೂ ಹೇಗೆ? ಸಣ್ಣ ಸಂಘಗಳಿಂದಲೂ ಒಬ್ಬೊಬ್ಬರನ್ನು ನಾಮಿನೇಟು ಮಾಡಲು ಅವಕಾಶ ಇರುವಂತೆ ಮಾಡುವುದು ಸರಿಯಾಗಿರುತ್ತದೆ. ಶೇಕಡಾ ಐವತ್ತರಷ್ಟು ಷೇರು ಬಂಡವಾಳಕ್ಕೆ ದೊಡ್ಡ ಸಂಘಗಳವರು ಕೊಡಬಹುದು. ಆದರೆ ಇದನ್ನು ಪುರಸ್ಕಾರ ಮಾಡುವಾಗ ಸಣ್ಣ ಸಹಕಾರ ಸಂಘಗಳನ್ನು ಮರೆಯಬಾರದು. ಅವರಿಗೂ ಇದರಲ್ಲಿ ನಾಮಿನೇಟ್ ಮಾಡಲು ಅವಕಾಶ ಇರಬೇಕು.

ಇನ್ನು ಕ್ಲಾಸ್ 71 (ಎ) ನಲ್ಲಿ ಸಾಲ ಕೊಟ್ಟ ಸೊಸೈಟಿಗಳು ಅವರ ಸಾಲವನ್ನು ವಾಪಸು ಕೊಡದೇ ಇದ್ದಾಗ ಅವರ ಮೇಲೆ ಕ್ರಮ ಜರಗಿಸುವುದರ ಬಗ್ಗೆ ಹೇಳಿದ್ದಾರೆ. ಗ್ರಾಮೀಣ ಸಹಕಾರ ಸಂಘಗಳಿಗೆ ಸಾಲವನ್ನು ಕೊಟ್ಟಾಗ ಅವು ವಾಪಸು ಕೊಡದೇ ಇದ್ದರೆ ಅರ್‌ಬಿಟ್ರೇಷನ್ ಕೇಸುಗಳು ಅಂತಹ ಸಂಘಗಳ ಮೇಲೆ ಬರುತ್ತವೆ. ಆದರೆ ಮೂರು ತಿಂಗಳಿನಷ್ಟು ಕಾಲಾವಕಾಶ ಕೊಟ್ಟರೂ ಬ್ಯಾಂಕಿನವರು ಅವರಿಗೆ ಸಹಾಯ ಕೊಡುವುದನ್ನು ತುಂಬಿಸಿಕೊಡದೇ ಹೋದರೆ ಸಂಘಗಳವರು ಅವರ ಸಾಲದ ಹಣವನ್ನು ವಾಪಸು ಕೊಡಲು ಕಷ್ಟವಾಗುತ್ತದೆ. ಆಗ ಅವರ ಮೇಲೆ ಕೇಸುಗಳನ್ನು ಹಾಕುತ್ತಾರೆ. ಸಕಾಲದಲ್ಲಿ ಬ್ಯಾಂಕುಗಳವರು ಇಂತಹ ಸಂಘಗಳಿಗೆ ಸಹಾಯ ಮಾಡಿ ಇದನ್ನೂ ಇನ್ನೂ ಸರಳವಾಗಿರುವಂತೆ ತಿದ್ದುಪಡಿ ಮಾಡುವುದು ಸರಿಯಾಗಿರುತ್ತದೆ.

ಸಹಕಾರ ಸಂಘದ ಕ್ಷೇತ್ರದಲ್ಲಿ ಸಾಲ ವಸೂಲಿಯ ದೃಷ್ಟಿಯಿಂದ ಈ ತಿದ್ದುಪಡಿ ಬಹಳ ಮಹತ್ವದ ತಿದ್ದುಪಡಿ ಎಂದು ನಾನು ತಿಳಿದು ಕೊಂಡಿದ್ದೇನೆ.

ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಸಂಘಗಳ ಪ್ರಗತಿಯಾಗಬೇಕು, ಅವು ಸುಧಾರಿಸಬೇಕು, ಯಾವ ತರಹ ಅನ್ಯಾಯವೂ ಆಗಬಾರದು, ಪಕ್ಷಪಾತವಾಗಬಾರದು, ಸಂಘ ಒಬ್ಬರ ಸ್ವತ್ತಾಗಬಾರದು ಎನ್ನುವ ಮಹೋದ್ದೇಶವನ್ನಿಟ್ಟು ಕೊಂಡು ಸರ್ಕಾರದವರು ತಿದ್ದುಪಡಿಯನ್ನು ತಂದಿದ್ದಾರೆ. ಅದನ್ನು ನಾನು ಬೆಂಬಲಿಸಿ, ನನಗೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ):....ಮಾನ್ಯ ಅಧ್ಯಕ್ಷರೇ, ಈ ಹೊತ್ತಿನ ದಿವಸ ಸಹಕಾರ ಮಂತ್ರಿಗಳು ತಂದಿರತಕ್ಕ ಸಹಕಾರ ಸಂಘಗಳ ದುರಸ್ತಿ ಬಿಲ್ಲನ್ನು ನಾನು ಅನುಮೋದಿಸಿ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಸಹಕಾರಿ ಆಂದೋಲನ ಸಮಾಜವಾದಿ ಸಮಾಜ ರಚನೆಯಲ್ಲಿ ಬಹಳ ಮಹತ್ವವಾದುದು. ಸಹಕಾರಿ ಕ್ಷೇತ್ರ ಬೆಳೆಯಬೇಕು ಪ್ರಗತಿ ಹೊಂದಬೇಕು. ಎಲ್ಲ ಜನರಿಗೆ ಸುಖವಾಗಬೇಕು ಅಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ಸರ್ಕಾರ ಇದಕ್ಕೆ ಕೈಹಾಕಿದೆ. ಎಷ್ಟೋ ಸಹಕಾರ ಸಂಘಗಳಲ್ಲಿ ಅವ್ಯವಹಾರ, ದುರ್ವ್ಯವಹಾರ ಬಹಳವಾಗಿದೆ. ಅದಕ್ಕೆ ಕಾರಣವೇನೆಂಬುದನ್ನು ಸರ್ಕಾರ ಕಂಡು ಹಿಡಿದಿದೆ. ಬಹಳ ಕಾಲದಿಂದ ಸಹಕಾರಿ ಕ್ಷೇತ್ರ ಕೆಲವೇ ಪಟ್ಟಭದ್ರ ಜನರ ಕೈಯಲ್ಲೇ ಸಿಕ್ಕಿದ್ದರಿಂದ ಎಲ್ಲ ಜನರಿಗೂ ಸುಖವಾಗತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದ್ದು ಅವರು ಈ ದುರಸ್ತಿ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಇದರ ಬಗ್ಗೆ ಒಂದೆರಡು ಸೂಚನೆಗಳನ್ನು ಮಾತ್ರ ಕೊಡಬಯಸುತ್ತೇನೆ.

ಎಲ್ಲಕ್ಕಿಂತ ಮುಖ್ಯವಾದ ಉದ್ದೇಶವೆಂದರೆ ಯಾವುದೇ ಸಹಕಾರಿ ಸಂಸ್ಥೆಯ ಚೇರ್‌ಮನ್, ವೈಸ್‌ಚೇರ್‌ಮನ್, ಪದಾಧಿಕಾರಿ ಇತರರುಗಳು ಆರು ವರ್ಷಕ್ಕಿಂತ ಹೆಚ್ಚುಕಾಲ ಇರಕೂಡದು ಎಂದು ತಂದಿದ್ದಾರೆ. ಇದು ಅತ್ಯಂತ ಉಪಯುಕ್ತವಾದ ಸೂಚನೆ. ಆದರೆ 6 ವರ್ಷ ಎಂದು ಇರುವುದನ್ನು ಮೂರು ವರ್ಷ ಮಾಡಬೇಕೆಂದು ನಾನು ಸೂಚನೆ ಮಾಡಬಯಸುತ್ತೇನೆ. ಸಹಕಾರಿ ಸಂಸ್ಥೆಗಳ ಚುನಾವಣೆಗಳು ಪ್ರತಿ ವರ್ಷ ನಡೆದು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯಕಾರಿ ಮಂಡಲಿ ಪ್ರತಿ ವರ್ಷ ಬದಲಾವಣೆಯಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಆರು ವರ್ಷದ ಅವಧಿ ಬಹಳವಾಯಿತು. ಈ ವರೆಗೆ ಯಾರು ಆಡಳಿತ ನಡೆಸುತ್ತಾ ಬಂದಿದ್ದಾರೆ. ಅವರಿಗೆ ಮತ್ತೆ ಆರು ವರ್ಷ ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಆರು ವರ್ಷ ಎಂದು ಇರುವುದನ್ನು ಮೂರು ವರ್ಷ ಎಂದು ಬದಲಾವಣೆ ಮಾಡಬೇಕೆಂದು ನನ್ನ ಸೂಚನೆ ಇದೆ. ಇದರ ಜೊತೆಗೆ ಆರು ವರ್ಷದ ಅವಧಿ ಎಂದು ಏನು ಹೇಳಿದ್ದಾರೆ. ಅದು ಈ ಬಿಲ್ ಆಮಲಿನಲ್ಲಿ ಬಂದ ನಂತರ ಎಂದು ಹೇಳಿದ್ದಾರೆ. ಈಗಾಗಲೇ ಹತ್ತಿಪ್ಪತ್ತು ವರ್ಷದಿಂದ ಪಟ್ಟಭದ್ರಜ್ಞರಾಗಿ ಸೊಸೈಟಿಯನ್ನು ನಮ್ಮ ಕೈಯಲ್ಲಿ ಇಟ್ಟುಕೊಂಡು ಕುಳಿತಿರುವವರಿಗೆ ಇನ್ನು ಮುಂದೆ ಆರು ವರ್ಷ ಅವಕಾಶ ಕೊಡುವುದು ತಪ್ಪಾದೀತು ಎಂದು ನನಗನ್ನಿಸುತ್ತದೆ. ಆದುದರಿಂದ ನಾನು ಸೂಚನೆ ಮಾಡಿರುವಂತೆ ಮೂರು ವರ್ಷದ ಅವಧಿ ಈಗಾಗಲೇ ಆಗಿದ್ದರೆ ಅವರು ಇನ್ನು ಮುಂದೆ ಮುಂದುವರಿಯುವಂತೆ ಆಗಬಾರದು. ಆ ರೀತಿ ದುರಸ್ತು ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಸೂಚನೆ ಮಾಡ ಬಯಸುತ್ತೇನೆ.

ಸಹಕಾರಿ ಕ್ಷೇತ್ರದಲ್ಲಿ ಯಾರು ಮೆಂಬರ್ ಆಗಬಹುದು ಎನ್ನುವ ವಿಚಾರ ವನ್ನು ಹೇಳಿದ್ದಾರೆ. ಆ ನಿರ್ಬಂಧದಿಂದ ಸಾಮಾನ್ಯ ಜನರಿಗೆ, ಬಡ ಜನರಿಗೆ ಪ್ರಯೋಜನವಾಗುವುದಕ್ಕೆ ಸಾಧ್ಯವಿಲ್ಲ. ಸಹಕಾರ ಚಳುವಳಿ ಸಾಮಾನ್ಯ ಜನರ ಪ್ರಗತಿಗಾಗಿ, ಅವರ ಅಭಿವೃದ್ಧಿಗಾಗಿ ಉಪಯೋಗವಾಗಬೇಕು ಎಂದು ಹೇಳು ತ್ತಿರುವಾಗ ಸಾಮಾನ್ಯ ಜನರಿಗೆ ಪ್ರವೇಶ ದೊರೆಯದಂತೆ ಮಾಡುವುದು ಸರಿ ಯಾಗಲಾರದು. ಸಾಮಾನ್ಯ ಜನರಿಗೆ ಕೂಡ ಯಾವುದೇ ಅಡ್ಡಿ ಇಲ್ಲದೆ, ಯಾವುದೇ ಪ್ರತಿಬಂಧಕವಿಲ್ಲದೆ ಸಹಕಾರಿ ಕ್ಷೇತ್ರದಲ್ಲಿ ಸದಸ್ಯರಾಗುವುದಕ್ಕೆ ಅವಕಾಶ ವಿರಬೇಕು. ಈ ಅವಕಾಶವನ್ನು ಕಿತ್ತುಕೊಂಡರೆ ಸಾಮಾನ್ಯ ಜನರ ಹಿತ ರಕ್ಷಣೆ ಮಾಡಬೇಕೆಂಬ ಕಲ್ಪನೆ ಏನಿದೆ, ವಿಚಾರವೇನಿದೆ ಅದು ಹಾಳಾಗುತ್ತದೆ. ಸಮಾಜವಾದ ತತ್ವ ಬರಬೇಕೆಂದು ಏನು ಹೇಳುತ್ತೇವೆ. ಅದಾಗಬೇಕಾದರೆ ಸಹ ಕಾರ ಚಳುವಳಿ ಬೆಳೆಯಬೇಕು ಎಂದು ಹೇಳುತ್ತೇನೆ. ಸಹಕಾರಿ ಕ್ಷೇತ್ರದಿಂದ ಸಾಮಾನ್ಯ ಜನರನ್ನು ಹೊರಗಡೆ ಇಡುವುದರಿಂದ ಯಾವ ರೀತಿಯಲ್ಲಿಯೂ ಅದರ ಅಭಿವೃದ್ಧಿಯಾಗಲಾರದು. ಈಗಿನ ಸಹಕಾರಿ ಕ್ಷೇತ್ರದಲ್ಲಿ ಸಹಕಾರ ಚಳುವಳಿ ಯಲ್ಲಿ, ಕಾರ್ಯಕ್ರಮಗಳಲ್ಲಿ ಕೆಲವೇ ಪಟ್ಟಭದ್ರ ಹಿತಾಸಕ್ತಿಗಳು ಉಪ ಯೋಗವನ್ನು ಪಡೆಯುತ್ತಿವೆ. ಯಾರಿಗೆ ಉಪಯೋಗವಾಗಬೇಕೋ, ಯಾರಿಗೆ ಅದರ ಫಲ ಮುಟ್ಟಬೇಕೋ ಅವರಿಗೆ ಹೋಗುತ್ತಿಲ್ಲ. ಬಡ ಜನರಿಗೆ, ಸಾಮಾನ್ಯ ಜನರಿಗೆ ಎಲ್ಲಿಂದಲೂ ಸಹಾಯ ದೊರೆಯುತ್ತಿಲ್ಲ. ಈ ಜನರಿಗೆ ಸಹಕಾರ ಕ್ಷೇತ್ರದಿಂದ ಸಹಾಯ ದೊರೆಯುವಂತೆ ಪ್ರಯತ್ನ ಮಾಡಬೇಕು. ಆದ್ದರಿಂದ ಈಗ ಸದಸ್ಯರಾಗುವುದಕ್ಕೆ ಏನು ನಿರ್ಬಂಧ ಹಾಕಿದ್ದಾರೆ ಅದನ್ನು ಸಡಿಲಗೊಳಿಸಬೇಕು ಎಂದು ಹೇಳುತ್ತೇನೆ.

ಆರು ವರ್ಷಗಳ ನಿರ್ಬಂಧ ಏಕೆ ಇರಬೇಕು ಎಂದು ಮಾನ್ಯ ಸಜ್ಜನ್ ಅವರು ಮಾತನಾಡುತ್ತ ಹೇಳಿದರು, ಎಂ. ಎಲ್. ಎ ಅಥವಾ ಎಂ. ಪಿ ಆಗು ವುದಕ್ಕೆ ಯಾವುದೇ ನಿರ್ಬಂಧವಿಲ್ಲದೆ ಇರುವಾಗ ಇವರಿಗೇಕೆ ನಿರ್ಬಂಧವಿರಬೇಕು ಎಂದು ಹೇಳಿದರು. ಸಹಕಾರಿ ಕ್ಷೇತ್ರವೆಂದರೆ ಜನರ ಆಸೆ ಆಕಾಂಕ್ಷೆ ಅವರ ಕೈಯಲ್ಲಿರುತ್ತದೆ ಸಹಕಾರಿ ಕ್ಷೇತ್ರದಲ್ಲಿ ಈ ನಿರ್ಬಂಧವನ್ನು ಹಾಕಿರುವುದು ಒಳ್ಳೆಯದು ಎಂದು ನಾನಾದರೂ ಹೇಳುತ್ತೇನೆ. ಸಾಮಾನ್ಯ ಜನರ ಸಲುವಾಗಿ, ಅವರಿಗೆ ಅನುಕೂಲ ಮಾಡಬೇಕೆಂದು ನಿರ್ಬಂಧವನ್ನು ಹಾಕಬೇಕಾಗಿದೆ. ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಎಂದು ಹಳ್ಳಿಯಲ್ಲಿರುವವರಿಗೂ ಅಧಿಕಾರ ಕೊಡುವುದು ಒಳ್ಳೆಯದು ಅವರು ಒಳ್ಳೆಯ ಕೆಲಸ ಮಾಡಬಹುದು ಎನ್ನುವ ಉದ್ದೇಶದಿಂದ ಮಾಡಿದರು. ಆದರೆ ಈ ವ್ಯವಸ್ಥೆ ಸರಿಯಾಗಿ ಕೆಲಸ ಮಾಡು ತ್ತಿಲ್ಲ ಇದರ ಮೂಲೋದ್ದೇಶ ಸಫಲವಾಗಿಲ್ಲ. ಕೆಲವೇ ಜನರ ಕೈಯಲ್ಲಿ ಅಧಿಕಾರಹೋಗಿ, ಆ ಅಧಿಕಾರ ದುರುಪಯೋಗವಾಗುತ್ತಿದೆ. ಸಹಕಾರ ಸಂಸ್ಥೆಗಳ ಆಡಳಿತದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದೆಂಬ ವಿಚಾರ

(ಶ್ರೀ ಪಿ. ಪಿ. ಹೆಗಡೆ)

ಇದ್ದರೂ ಕೂಡ ಸಹಕಾರ ಕ್ಷೇತ್ರಗಳಲ್ಲಿ ದುರ್ವ್ಯವಹಾರ, ಅವ್ಯವಹಾರಗಳು ನಡೆಯುತ್ತಿರುವುದರಿಂದ ಸರ್ಕಾರ ಅವುಗಳ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಳ್ಳದೆ ಇದ್ದರೆ, ಅವುಗಳಿಗೆ ಸಂಪೂರ್ಣ ಸ್ವಾಯತ್ತತೆಯನ್ನು ಕೊಟ್ಟರೆ ಎಷ್ಟೋ ಸೊಸೈಟಿಗಳನ್ನು ಮುಚ್ಚಬೇಕಾಗಿ ಬರಬಹುದು. ನಾವು ನೋಡುತ್ತಿರುವಂತೆ ಎಷ್ಟೋ ಸೊಸೈಟಿಗಳು ಡಿಫಂಕ್ಟ್ ಆಗಿದ್ದು ಕೆಲವೇ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿವೆ. ಸಹಕಾರ ಸಂಸ್ಥೆಗಳಲ್ಲಿ ಇರುವಂಥ ಕಾರ್ಯದರ್ಶಿಗಳು ಸರ್ಕಾರದವರು ನೇಮಕ ಮಾಡಿದಂಥ ಕಾರ್ಯದರ್ಶಿಗಳಿರಬೇಕು ಮತ್ತು ಒಂದು ಕಡೆಯಿಂದ ಮತ್ತೊಂದು ಕಡೆಗೆ ಅವರನ್ನು ಟ್ರಾನ್ಸ್‌ಫರ್ ಮಾಡುವಂಥ ಅಧಿಕಾರಕ್ಕೆ ಸರ್ಕಾರಕ್ಕೆ ಇರಬೇಕು. ಹಾಗಾದರೆ ಮಾತ್ರ ಸಹಕಾರಿ ಕ್ಷೇತ್ರದಲ್ಲಿ, ಸಹಕಾರಿ ಸಂಸ್ಥೆಗಳಲ್ಲಿ ಶಿಸ್ತು, ನಿರ್ಮಾಣವಾದೀತು. ಅದೇ ಗ್ರಾಮದವರು ಅದೇ ಗ್ರಾಮದಲ್ಲಿರುವ ಸಹಕಾರಿ ಕ್ಷೇತ್ರದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುವುದರಿಂದ ಕೆಲವೇ ಜನರು ಚೇರ್‌ಮನ್ ಕಾರ್ಯದರ್ಶಿ, ಮ್ಯಾನೇಜಿಂಗ್ ಕಮಿಟಿ ಸದಸ್ಯರಾಗಿ, ಮುಂದುವರಿದರೆ ಅವರ ಕೈಯಲ್ಲಿಯೇ ಸಂಪೂರ್ಣ ಅಧಿಕಾರವನ್ನು ಕೊಟ್ಟು ಹಾಗೆ ಆಗಿ ಯಾವತ್ತೂ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ.

ಅಲ್ಲಿ ಕಾರ್ಯದರ್ಶಿಗಳು ಇರಲೇ ಕೂಡದು, ಕಾರ್ಯದರ್ಶಿಗಳು ಸರ್ಕಾರದಿಂದ ನೇಮಕ ಆಗಿರುವವರು ಇರಬೇಕು, ಅವರು ಒಂದು ಸೊಸೈಟಿಯಿಂದ ಇನ್ನೊಂದು ಸೊಸೈಟಿಗೆ ಟ್ರಾನ್ಸ್‌ಫರ್ ಮಾಡುವಂತಿರಬೇಕು, ಹಾಗಿದ್ದರೆ ಸಹಕಾರ ತತ್ವದ ಉದ್ದೇಶ ಸಾರ್ಥಕವಾಗುತ್ತದೆ. ಊರ ಜನರ ಕಲ್ಯಾಣವಾಗುತ್ತದೆಂದು ವಿನಂತಿಸಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವಾರ್ತೂರು) ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘಗಳ ಸಮಸ್ಯೆಗಳನ್ನು ಅರಿತು ಸಹಕಾರ ಸಂಘಗಳನ್ನು ಸುವ್ಯವಸ್ಥಿತವಾಗಿ ಮಾಡಿ ಜನಗಳಿಗೆ ಅವುಗಳಿಂದ ಹೆಚ್ಚಿನ ಉಪಕಾರ ಆಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಈ ತಿದ್ದುಪಡಿ ಕಾನೂನನ್ನು ಸಭೆಯ ಮುಂದೆ ತಂದಿರುವುದು ಬಹಳ ಸಂತೋಷ. ಬಹಳ ಹಿಂದಕ್ಕೆ ಈ ಕಾರ್ಯ ಆಗಬೇಕಾಗಿತ್ತು. ನಮ್ಮ ದೇಶದಲ್ಲಿ ಇನ್ನೂ ಸಹಕಾರಿ ತತ್ವ ಸಂಪೂರ್ಣವಾಗಿ ಜನಗಳ ನೆರವಿಗೆ ಬಂದಿಲ್ಲ ಎಂದರೆ ತಪ್ಪಾಗಲಾರದು. ಕೋ-ಅಪರೇಟಿವ್ ಮೂವ್‌ಮೆಂಟ್ ಎಂದರೆ ಸಹಕಾರದ ಆಂದೋಳನ ಏನು ಇದೆ ಅದು ಸಂಪೂರ್ಣವಾಗಿ ಎಲ್ಲಾ ತರಹ ಜನಗಳ ಜೀವನದ ಸಮಸ್ಯೆಗಳನ್ನು ಅರಿತು ಸಹಾಯ ಮಾಡುವ ಮಟ್ಟಕ್ಕೆ

ಬಂದಿಲ್ಲ. ಸರ್ಕಾರದ ಕಡೆಯಿಂದ ಆಗತಕ್ಕ ಅನೇಕ ಪ್ರಯತ್ನಗಳನ್ನು ಸರ್ಕಾರದವರು ಮಾಡಿದ್ದಾರೆ. ನಮ್ಮ ದೇಶದ ಜನ ಸಹಕಾರಸಂಘಗಳ ಆಗುಹೋಗುಗಳನ್ನು ಒಳ್ಳೆಯ ರೀತಿಯಲ್ಲಿ ನಡೆಸಿ ಅದರಿಂದ ಸದಸ್ಯರ ಯೋಗಕ್ಷೇಮ ಆಗಿ ಜನಾಂಗದ ಯೋಗಕ್ಷೇಮ ಆಗುವ ಮಟ್ಟದ ಮನೋಧರ್ಮ ಜನರಲ್ಲಿ ಬೆಳೆದಿಲ್ಲ. ಸರ್ಕಾರದಿಂದ ದೊರೆಯತಕ್ಕ ಸಾಲ ಸಹಕಾರ ಸಂಘಗಳಿಂದ ದೊರೆಯಲಿ, ಅಥವಾ ನೇರವಾಗಿ ದೊರೆಯಲಿ ನಾವು ಅದನ್ನು ವಾಪಸು ಕೊಡಬೇಕು ಎನ್ನುವ ಮನೋಧರ್ಮ ನಿಧಾನವಾಗಿ ಬರುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಜನರಿಗೆ ಹಣ ಕೈಗೆ ತೆಗೆದುಕೊಳ್ಳಬೇಕೆಂದು ಎಷ್ಟು ಆಶೆಯಿಂದ ಇರುತ್ತಾರೋ ಅಷ್ಟೇ ಶ್ರದ್ಧೆಯಿಂದ ಅದನ್ನು ವಾಪಸು ಕೊಡಬೇಕು ಎನ್ನುವುದರಲ್ಲಿ ಬೆಳೆಯಬೇಕು. ಸಹಕಾರ ಸಂಘಗಳನ್ನು ನಾನಾ ರೂಪದಲ್ಲಿ ಬೆಳೆಸುತ್ತಾ ಬಂದರೂ ಕೂಡಾ ಅನೇಕ ಕ್ಷೇತ್ರಗಳಲ್ಲಿ ಇನ್ನು ಸಹಕಾರ ಸಂಘಗಳನ್ನು ಅನ್ವಯಿಸಬೇಕಾಗಿದೆ. ಅನೇಕ ಕ್ಷೇತ್ರಗಳಲ್ಲಿ ಸಂಘದ ಶಕ್ತಿಯಿಂದ ಸಮಸ್ಯೆಗಳನ್ನು ಯಾಕೆ ಎದುರಿಸಬಾರದು ಎಂದು ಬೇಡಿಕೆಗಳು ದಿನದಿನಕ್ಕೆ ಹೆಚ್ಚಾಗುತ್ತಿವೆ. ಇಂಗ್ಲೆಂಡಿನಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಕಾರ ಸಂಘಗಳು ಅನ್ವಯವಾಗಿವೆ ಎಂದು ಕೇಳಿದ್ದೇವೆ. ಮದುವೆಗಾಗಲೀ ನಾಮಕರಣಕ್ಕಾಗಲೀ, ಬೆರಳಿಗೆ ಬಣ್ಣ ಹಾಕಿಕೊಳ್ಳುವುದಕ್ಕಾಗಲೀ, ಆಟ ಆಡುವುದಕ್ಕಾಗಲೀ ಪ್ರತಿಯೊಂದಕ್ಕೂ ಜನಗಳ ಸೇವೆ ಸಲ್ಲಿಸುವ ಪ್ರಯತ್ನಗಳು ಸಹಕಾರಸಂಘಗಳು ಮೂಲಕ ಇದೆ ಎಂದು ಕೇಳಿದ್ದೇವೆ. ನಮ್ಮ ದೇಶದಲ್ಲಿ ಸಹಕಾರ ಸಂಘಗಳು ಈ ರೂಪದಲ್ಲಿ ಯಾವ ಕಾಲಕ್ಕೆ ಬೆಳೆಯುತ್ತವೆ ಎನ್ನುವ ಶಂಕೆ ಇದ್ದೇ ಇದೆ. ಮಾನ್ಯ ಮಂತ್ರಿಗಳು ಹಿಂದೆ " ಒಬ್ಬರು Co-operative fields are rich grass lands for the hungry cattle " ಎಂದು ಹೇಳಿದ್ದರು. ಅದನ್ನು ಹೇಳುವಾಗ ಬಹಳ ಟೀಕೆ ಟಿಪ್ಪಣಿಗಳು ಆದುವು.

ಇನ್ನು ಇವತ್ತಿನ ದಿವಸ ಅವುಗಳ ಸ್ಥಿತಿ ಉತ್ತಮವಾಗಬೇಕಾದರೆ, ಇಂಥ ಒಂದು ಕಾನೂನು ತಿದ್ದುಪಡಿ ಅವಶ್ಯಕತೆ ಸಂಪೂರ್ಣವಾಗಿ ಇದೆ. ಅದು ಒಳ್ಳೆಯದು ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ. ಒಂದು ಉದಾಹರಣೆ ಕೊಡುವುದಾದರೆ, (Small formers Co-operative movements) ಎನ್ನುವುದನ್ನು ಸಕ್ರಿಯವಾಗಿ ಮಾಡಬೇಕೆಂಬ ಪ್ರಯತ್ನ ದೇಶದಲ್ಲಿ ನಡೆದಿದೆ. ನಮ್ಮ ದೇಶದಲ್ಲಿ (Haves and havenots) ಎಂದರೆ ಬಡವ ಬಲ್ಲಿದರ ಮನೋಭಾವ ಈ ಸಹಕಾರ ಕ್ಷೇತ್ರದಲ್ಲಿ ಒಂದು ರೂಪದಲ್ಲಿ ಬೆಳೆದುಕೊಂಡು ಬಂದಿದೆ. ಧನಿಕರು ಎಷ್ಟು ತಪ್ಪು ಮಾಡಿದರೂ ಬಹಳ ದುಡ್ಡನ್ನು ಲಪಟಾಯಿಸಿದರೂ, ರಾಜಕೀಯದಲ್ಲಿರತಕ್ಕ ಜನ ಸೊಸೈಟಿಗಳನ್ನು ಲೂಟಿ ಮಾಡಿದರೂ ಅಂಥವರನ್ನು ಮುಟ್ಟಬೇಕಾದರೆ ಹಿಂದು ಮುಂದು ನೋಡುವ ದೃಷ್ಟಿಯಿಂದ ಕಾಣುತ್ತಾರೆ. ನಿರ್ಭಯವಾಗಿ ಎದೆಗಾರಿಕೆಯಿಂದ ಮಾಡುವ ಶಕ್ತಿ ಸರಕಾರಕ್ಕೆ ಇದೆ. ಆದರೆ 'ಇನ್‌ಫ್ಲೂಯೆನ್ಸ್' ಎನ್ನುವ ಪೀಡೆಯಿಂದ ಸೊಸೈಟಿಗಳ ಆಡಳಿತ ಕೆಟ್ಟುಹೋಗಿದೆ.

(ಶ್ರೀ ಕೆ. ಪ್ರಭಾಕರ್)

ಸೊಸೈಟಿಗಳ ಬೆಳವಣಿಗೆಗೆ ಧಕ್ಕೆ ಬಂದಿದೆ. ಇದನ್ನು ಸರಿಪಡಿಸಿ ಸೊಸೈಟಿಗಳು ಸುವ್ಯವಸ್ಥಿತವಾಗಿ ಬೆಳೆಯುವ ಅವಶ್ಯಕತೆ ಇದೆ. ಈ ಸೊಸೈಟಿಗಳಲ್ಲಿ 5 ರೋಗಗಳು ಇವೆ ಎಂದು ನನ್ನ ಅನುಭವದಿಂದ ಹೇಳಬೇಕಾಗಿದೆ. ಈ ಸೊಸೈಟಿಗಳಲ್ಲಿ ಆಡಿಟ್ ಮಾಡುವುದಕ್ಕೆ, ಲೆಕ್ಕ ತಪಾಸಣೆಗಳನ್ನು ಪರಿಶೀಲನೆ ಏನು ಮಾಡುತ್ತಾರೆ ಅದನ್ನು ಎಲ್ಲಾ ಸಹಕಾರ ಸಂಘಗಳಿಗೂ ಅಳವಡಿಸುವುದಿಲ್ಲ. ನೂರು ಸೊಸೈಟಿಗಳು ಇದ್ದರೆ 20 ರಷ್ಟು 30 ರಷ್ಟು ಸೊಸೈಟಿಗಳಲ್ಲಿ ಆಡಿಟ್ ಮಾಡುತ್ತಾರೆ. ಈ ರೀತಿಯಾಗಿ ಸೊಸೈಟಿಯಲ್ಲಿ ತಪ್ಪು ಮಾಡುವವರಿಗೆ ಭಯವಿರುವುದಿಲ್ಲ. ಶೇಕಡ 80 ಭಾಗ ಸೊಸೈಟಿಗಳ ಆಡಿಟ್ ಮಾಡುವುದನ್ನು ಬಿಟ್ಟು ಬಿಟ್ಟಿರುತ್ತಾರೆ. ಬರುವ ವರ್ಷ ಮತ್ತೆ ಅದನ್ನೇ ಬಿಟ್ಟಿರುತ್ತಾರೆ. ಹೀಗೆ 10 ವರ್ಷ 20 ವರ್ಷದವರೆಗೆ ಸೊಸೈಟಿಗಳು ಆಡಿಟ್‌ಗೆ ಸಿಕ್ಕದ ರೂಪದಲ್ಲಿ ಮ್ಯಾನೇಜ್ ಮಾಡತಕ್ಕ ಅವಕಾಶ ಒಂದು ಮನೋಧರ್ಮ, ಅದರಲ್ಲಿರತಕ್ಕ ಕೆಟ್ಟ ಜನಗಳಿಗೆ ಒಂದು ಅವಕಾಶವಿದೆ. ಇದನ್ನು ಸರ್ಕಾರದವರು ತಪ್ಪಿಸಿ, ಸೊಸೈಟಿಗಳನ್ನು ಆಡಿಟ್ ಮಾಡಿಸಿ ಪ್ರತಿ ವರ್ಷವೂ ಸೊಸೈಟಿಯು ಆಡಿಟ್‌ಗೆ ಸಿಕ್ಕಲೇಬೇಕು ಎಂದು ಮಾಡಬೇಕು. ಶೆಡ್ಯೂಲ್ಡ್ ಕ್ಯಾಸ್ಟ್, ವೆಲ್‌ಫೇರ್‌ಗೆ ಸಂಬಂಧಪಟ್ಟ ಹಾಗೆ ಮನೆ ಕಟ್ಟುವುದಕ್ಕೆ ಸೊಸೈಟಿಯಿದೆ. ಯಾವುದೇ ಒಂದು ಸಮಸ್ಯೆ ಇದ್ದರೂ ಕೂಡ ಅದನ್ನು ಪರಿಹರಿಸಲು ಸೊಸೈಟಿ ನಡೆಸುವ ಜನಕ್ಕೆ ಏನು ಟ್ರೈನಿಂಗ್ ಕೊಡುತ್ತಿದ್ದಾರೆ. ಅದು ಸಾಲದು. ಸೊಸೈಟಿಗಳನ್ನು ನಡೆಸುವ ಆಫೀಸರ್‌ಗಳಿಗೆ ಈಗ ಟ್ರೈನಿಂಗ್ ಕೊಡುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ. ಈ ಬಗ್ಗೆ ಸೊಸೈಟಿಯು ಹೆಬ್ಬೆಟ್ಟು ಹಾಕುವವರಿಂದ ಹಿಡಿದು ಸೊಸೈಟಿಯಲ್ಲಿರುವ ಎಲ್ಲಾ ಜನರಿಗೂ ಎಜುಕೇಶನ್ ಕೊಡಬೇಕಾಗಿದೆ. ಮತ್ತೊಂದು ಕೊರತೆ ಎಂದರೆ ಯಾರಾದರೂ ಸೊಸೈಟಿಯಲ್ಲಿ ತಪ್ಪು ಮಾಡಿದ್ದಾರೆ ಎಂದು ಗೊತ್ತಾದರೆ ಸೊಸೈಟಿ ಇಲಾಖೆಯಲ್ಲಿರತಕ್ಕ ಚಿಕ್ಕವರಿಂದ ಹಿಡಿದು ದೊಡ್ಡ ಅಧಿಕಾರಿಗಳ ಹತ್ತಿರ ಹೋಗಿ ತಪ್ಪು ಮಾಡಿದ ಮನುಷ್ಯನನ್ನು ಅರೆಸ್ಟ್ ಮಾಡಿ, ತನಿಖೆ ನಡೆಸಬೇಕು ಎಂದರೆ The officer says, 'I am not empowered to do that under the present rules' ಎಂದು ಹೇಳುತ್ತಾರೆ. ಆದುದರಿಂದ ಅಂಥ ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳಲು ಕಾನೂನಿನಲ್ಲಿ ಸೂಕ್ತ ಬದಲಾವಣೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಮಲ್ಟಿಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳು ಆಗುವುದು ಒಳ್ಳೆಯದೆಂದು ಇನ್ನು ಪ್ರಯೋಗ ನಡೆಯುತ್ತಲೇ ಇದೆ. ಸೊಸೈಟಿಯಲ್ಲಿ ದುಡ್ಡು ತಿನ್ನುವ ಜನ ಒಂದು ಲಕ್ಷ ರೂಪಾಯಿ ದುರ್ವಿನಿಯೋಗ ಮಾಡಿದರೂ ಈಗ ಅವರು ದುಡ್ಡು ಕೊಟ್ಟು ಬಿಟ್ಟಿದ್ದಾರೆ. ಅವರನ್ನು ಬಿಟ್ಟು ಬಿಡಿ ಎಂದು ಶಿಫಾರಸುಗಳು ಸರ್ಕಾರಕ್ಕೆ ಬರುವುದು ಉಂಟು. ಮಾನ್ಯತೆ ನ್ಯಾಯಕ್ಕೆ ಇರಬೇಕು, ದುಡ್ಡಿಗೆ ಅಲ್ಲ. ಆದುದ

ರಿಂದ (Criminality should be pushed) ಎಂದು ಇರಬೇಕು. ಈಗ ತಂದಿರುವ ತಿದ್ದುಪಡಿ ಪ್ರಕಾರ ಚಿಕ್ಕ ಪುಟ್ಟ ಸೊಸೈಟಿಗಳಿಗೆ, ಶೇರ್‌ಕ್ಯಾಪಿಟಲ್ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ. ಯಾವುದಾದರು ಸೊಸೈಟಿ ಹಣದ ಅಭಾವದಿಂದ ಕುಂಠಿತವಾಗಿ ನಡೆಯುತ್ತಿದ್ದರೆ ಬಡವರಿಗೆ ಸಹಾಯ ಮಾಡುವುದು ಇದು ಡೆಮಾಕ್ರೆಟಿಕ್ ಸೋಷಿಯಲಿಸಂ ತತ್ವಕ್ಕೆ ಅನುಗುಣವಾಗುತ್ತದೆ. ಆ ಸೊಸೈಟಿಗಳಿಗೆ ಶೇರ್‌ಕ್ಯಾಪಿಟಲ್ ಕೊಟ್ಟು ಬಡವರಿಗೆ ಹೆಚ್ಚಿನ ಉಪಕಾರ ಮಾಡುವುಕ್ಕೆ ಅವಕಾಶವಿದೆ. ಆ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದೀರಿ ಇದು ಸೂಕ್ತವಾಗಿದೆ ಎಂದು ಸಂತೋಷ ಪಡುತ್ತೇನೆ. ಇನ್ನೂ ದೊಡ್ಡ ದೊಡ್ಡ ಸೊಸೈಟಿಗಳಲ್ಲಿ ಲಕ್ಷಾಂತರ ರೂಪಾಯಿ ಹಾಕಿ ಇರುವ ಕಡೆ ನಾಮಿನೇಷನ್‌ಗೆ ಅವಕಾಶ ಮಾಡಿದ್ದಾರೆ. ಅನೇಕ ಕಡೆ ಸೊಸೈಟಿಯಲ್ಲಿರತಕ್ಕ ಜನಗಳ ಮನೋಧರ್ಮದ ಹಾವಳಿಂದ ದೀನದಲಿತರು ಮತ್ತು ಬಡವರು ಮುಂದೆ ಬರುವುದಕ್ಕೆ ಆಗುತ್ತಿಲ್ಲ. ಅಂಥ ಕಡೆ ಕೂಡ ಹೆಚ್ಚು ಹೆಚ್ಚಾಗಿ ಜನರಿಗೆ ನಾಮಿನೇಷನ್ ಮಾಡುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಂಡಿದ್ದಾರೆ ಇದು ಸಂತೋಷದ ಸಮಾಚಾರ. ಇದರಲ್ಲಿ ಕೋ-ಆಪರೇಟಿವ್ ಮ್ಯಾಟರ್ಸ್ ನಲ್ಲಿ ಸಾಮಾನ್ಯವಾಗಿ "Unless it is criminal action" ಪೋಲೀಸಿಗೆ ಆಗಲೀ, ಕೋರ್ಟಿಗೆ ಆಗಲೀ ಹೋಗುವುದು ಬೇಡ ಎಂದು ಸ್ವಲ್ಪ ತಾಯಿತನ ಇಟ್ಟಿದ್ದಾರೆ. ಆದುದರಿಂದ ನಿರ್ಭಯವಾಗಿ ಗುಂಪುಗಾರಿಕೆ ಮಾಡಿ ಲಪಟಾಯಿಸಿದರೆ ಅರೆಸ್ಟು ಮಾಡಲಿ ನೋಡಿಕೊಳ್ಳೋಣ ಎನ್ನುವ ಭಾವನೆ ಬಂದಿದೆ. ಆದುದರಿಂದ ತಪ್ಪು ಮಾಡಿದವರಿಗೆ ಶಿಕ್ಷೆಕೊಡುವ ರೂಪದಲ್ಲಿ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ.

5-30 P.M.

ಇನ್ನು ಕೆಲವು ಚಿಕ್ಕಪುಟ್ಟ ಸೊಸೈಟಿಗಳನ್ನು ಸರ್ಕಾರದವರು ತೆಗೆದುಕೊಂಡು They must nurse them for years. ಹಾಗೆ ಮಾಡದೆ ಸ್ಥಾನದವರಿಗೆ ಬಿಟ್ಟು ಬಿಟ್ಟು, ಅಲ್ಲಿ ಏನು ವ್ಯವಹಾರ ನಡೆಯುತ್ತಾ ಇದೆ ಎಂದು ನೋಡದೆ ಇದ್ದರೆ, ಅದರಿಂದ ಹೆಚ್ಚಿನ ಉಪಕಾರವಾಗುವುದಿಲ್ಲವೆಂದು ನನ್ನ ಭಾವನೆ. ಈ ತಿದ್ದುಪಡಿ ಮಸೂದೆಯಿಂದ ಹೆಚ್ಚಿನ ಉಪಕಾರವಾಗುತ್ತದೆ ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದಾರೆ. ಇದರಿಂದ ಉಪಕಾರವೇನೋ ಆಗುತ್ತದೆ. ತಮಗೆ ಉದಾಹರಣೆ ಕೊಡುವುದಾದರೆ, ವ್ಯಾಪಾರದಲ್ಲಿ ಅನೇಕ ಸೊಸೈಟಿಗಳು ತೊಡಗಿರುತ್ತವೆ. ಆದರೆ ಅವು ರೇಟ್ ಮತ್ತು ಸ್ಟಾಕ್‌ಬೋರ್ಡ್ ಎಕ್ಸಿಬಿಟ್ ಮಾಡುವುದಿಲ್ಲ. ಕಬ್ಬಿಣ ಅಥವಾ ಅಕ್ಕಿ ಮಾರುವ ಸೊಸೈಟಿಗಳು ಹೋಲ್‌ಸೇಲ್ ವರ್ತಕರು ಮಾಡುವ ಹಾಗೆ, ರೂಲ್ ಪ್ರಕಾರ ಕಡ್ಡಾಯವಾಗಿ ರೇಟ್ ಮತ್ತು ಸ್ಟಾಕ್ ಬೋರ್ಡು ಬ್ಯಾಲೆನ್ಸ್ ಹಾಕಬೇಕು. ಅದನ್ನು ಎಷ್ಟೋ ಸಲ ಬಿಟ್ಟು ಬಿಡುತ್ತಾರೆ. ಸೊಸೈಟಿಗಳಲ್ಲಿ ಮೆಜಾರಿಟಿಯಿಂದ ತೀರ್ಮಾನವಾಗುವ ವಿಚಾರಗಳು ಇರುವುದರಿಂದ ಕೆಲವೇ

(ಶ್ರೀ ಕೆ. ಪ್ರಭಾಕರ್)

ಜನ ಬೇರೆಯುವರು ಯಾವ ಸ್ಥಾನಕ್ಕೂ ಬರದ ಹಾಗೆ ತಪ್ಪಿಸಿಬಿಡುತ್ತಿದ್ದಾರೆ. ಈ ರೋಗ ಇನ್ನೂ ಉಳಿದುಕೊಂಡಿದೆ. ಆ ರೋಗವನ್ನು ಕಿತ್ತು ಹಾಕಿ ಧೈರ್ಯವಾಗಿ, ನಿರ್ಭಯವಾಗಿ ಕೆಲಸ ಮಾಡುವವರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಕೋ-ಅಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಇರುವ ಆಫೀಸರುಗಳಲ್ಲಿ ಒಳ್ಳೆಯವರಿಲ್ಲ ಎಂದು ಹೇಳುವುದು ತಪ್ಪು. ಅನೇಕರು ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ. ಒಂದೆಂದು ಸಲ ದುರದೃಷ್ಟಕ್ಕೆ ಚೆನ್ನಾಗಿ ಕೆಲಸ ಮಾಡುವ ಆಫೀಸರುಗಳಿಗೆ ಡಿಸ್ಕರೇಜ್‌ಮೆಂಟ್ ಜಾಸ್ತಿ. ಅವರು ಕಳ್ಳರನ್ನು ಹಿಡಿಯುವುದಕೆ ಹೋದರೆ, ಯಾರು ಹಿಡಿಯುವುದಕ್ಕೆ ಹೋಗುತ್ತಾರೋ ಅವರೇ ಸಿಕ್ಕಿ ಹಾಕಿಕೊಂಡು ಕಳ್ಳರು ಬಚಾವ್ ಆಗುವ ಪರಿಸ್ಥಿತಿ ಇದೆ. ಸೊಸೈಟಿಗಳಲ್ಲಿ ಈ ವ್ಯವಹಾರ ಇರುವುದರಿಂದ ಇನಿಷಿಯೇಟಿವ್ ತೆಗೆದುಕೊಳ್ಳುವ ಆಫೀಸರುಗಳು ಡಿಸ್ಕರೇಜ್ ಆಗಿ ಸೊಸೈಟಿ ಇದ್ದರೇನು ಹೋದರೇನು ಎಂಬು ಜೋಳದ ಹೊಟ್ಟು ಆದ ಹಾಗ ಆಗಿದ್ದಾರೆ. ನಮ್ಮ ಮಿನಿಸ್ಟರಿಗೆ ಲಾಯರ್ ಬುದ್ಧಿ ಇದೆ. ಮನಸ್ಸು ಮಾಡಿ ಪತ್ತೆ ಹಚ್ಚಿಬಿಟ್ಟರೆ ಅವರಿಂದ ಬಿಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಅವರು ಹಿಡಿಯುವುದು ನಿಧಾನ. ಅವರು ಸ್ವಲ್ಪ ಚುರುಕಾಗಿ ಹಿಡಿಯಬೇಕು. ಹಿಡಿದವರನ್ನು ಬಿಡದ ಹಾಗೆ ನೋಡಿಕೊಳ್ಳಬೇಕು. ಆಗ ಒಳ್ಳೆಯ ಕೆಲಸವಾಗುತ್ತದೆಂದು ನಂಬಿಕೆ. ಆಫೀಸರುಗಳನ್ನು ತಳಕು ಮಾಡುವವರು ಇನ್‌ಫ್ಲೂಯನ್ಸ್ ಮಾಡುವವರು ಸುಳ್ಳು ಲೆಕ್ಕ ಯಾವ ರೀತಿ ಬರೆಯಬೇಕು ಎಂದು ಹೇಳಿಕೊಡುವವರು ಇದ್ದಾರೆ. ಅವರನ್ನು ವೀಡ್‌ಔಟ್ ಮಾಡಬೇಕೆಂದು ಹೇಳುತ್ತೇನೆ. ಅಂಥವರ ಪರ್ಸೆಂಟೇಜ್ ಹೆಚ್ಚು ಇದೆಯೆಂದು ನನ್ನ ಭಾವನೆ ಅಂಥವರಿಗೆ ಕಾನೂನಿನ ಭಯ ಇರುವ ಹಾಗೆ ಮಾಡಬೇಕು. ಒಳ್ಳೆಯವರಿಗೆ ಎನ್‌ಕರೇಜ್‌ಮೆಂಟ್ ಕೊಡಬೇಕು. ಈ ಬಿಲ್ ತಂದಿರುವುದು ಸಮಯೋಚಿತವಾಗಿದೆ, ಇದರಿಂದ ಬಹಳ ಉಪಕಾರ ಸಹಕಾರ ಕ್ಷೇತ್ರದಲ್ಲಿ ಉಂಟಾಗುತ್ತದೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

॥ ಜೈ ಹಿಂದ್ ॥

ಶ್ರೀ ಸಿ. ಬೈರೇಗೌಡ: (ವೇಮಗಲ್): ಅಧ್ಯಕ್ಷರೇ, ಇವತ್ತು ಮಾನ ಸಹಕಾರ ಸಚಿವರು ಸಹಕಾರ ಸಂಘಗಳ ಕಾನೂನಿಗೆ ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ವಿರೋಧ ಮಾಡದೇ ಇದ್ದರೂ ಸಹ ಮಂತ್ರಿಗಳು ಇದನ್ನು ವಾಪಸ್ ಪಡೆಯಬೇಕೆಂದು ಅತಿ ವಿನಯದಿಂದ ಹೇಳಬೇಕೆಂದು ಇಚ್ಛಿಸುತ್ತೇನೆ. ಕಾರಣವೇನೆಂದರೆ ಸಹಕಾರ ಸಂಘಗಳ ತತ್ವ ಇರತಕ್ಕದ್ದು ಒಬ್ಬನು ಎಲ್ಲರಿಗಾಗಿ, ಎಲ್ಲರಿಗಾಗಿ ಒಬ್ಬನು ಆದರೆ ಇವತ್ತು ಈ ತತ್ವ ಏನಾಗಿದೆ ಎಂದರೆ, ಎಲ್ಲರದು ತನಗಾಗಿ, ತನ್ನದು ತಮ್ಮವರಿಗಾಗಿ ಎನ್ನುವ

ಒಂದು ಸಹಕಾರ ತತ್ವ ನಮ್ಮ ರಾಜ್ಯದಲ್ಲಿ ಪ್ರಚಲಿತವಾಗಿದೆ. ಈ ದೃಷ್ಟಿಯಿಂದ ಸಚಿವರಿಗೆ ಕೆಲವು ಸಲಹೆಗಳನ್ನು ಸೂಚಿಸಬೇಕು ಎಂದು ಇದ್ದೇನೆ. ಈ ಸಲಹೆಗಳನ್ನು ಒಪ್ಪಿ ಬೇರೆ ಸಮಗ್ರವಾದ ಬಿಲ್ಲನ್ನು ತಂದರೆ ಉತ್ತಮ ಎಂದು ನಾನು ಭಾವಿಸುತ್ತೇನೆ. ಯಾವುದೇ ಸಹಕಾರ ಸಂಘಗಳನ್ನು ತೆಗೆದುಕೊಂಡರೂ ಅಲ್ಲಿ ಜನರಲ್ ಬಾಡಿ ಮೀಟಿಂಗ್ ಅಗಬೇಕು. ಈಗ ತಂದಿರತಕ್ಕ ಬಿಲ್‌ನಲ್ಲಿ ಜನರಲ್ ಬಾಡಿ ವಿಷಯವಿಲ್ಲ. ವರ್ಷಾನುಗಟ್ಟಲೆ ಜನರಲ್ ಬಾಡಿ ಮೀಟಿಂಗ್ ಇಲ್ಲದೆ ಆಡಿಟ್ ಇಲ್ಲದೆ 2ವರ್ಷ ಹಣ ಮಿಸ್ ಅಪ್ರೊಪ್ರಿಯೇಷನ್ ಮಾಡಿದರೂ, 3ನೇ ವರ್ಷ ಅವರನ್ನು ಕೇಳುವ ಅಧಿಕಾರವಿಲ್ಲ. ಈಗ 6ವರ್ಷ ಮಾಡಿದ್ದಾರೆ. ಈಗ ತಂದಿರತಕ್ಕ ಕಾಯಿದೆಯಲ್ಲಿ ಕೂಡ ಲೋಪದೋಷಗಳಿವೆ. 6 ವರ್ಷ ಒಂದೇ ಗುಂಪಿನವರು, ಒಂದೇ ಪಾರ್ಟಿಯವರು ಅಧಿಕಾರದಲ್ಲಿದ್ದು ಲಕ್ಷಾನುಗಟ್ಟಲೆ ಹಣ ಲಪಟಾಯಿಸಿದರೂ, 6 ವರ್ಷವಾದರೂ ಕೇಳತಕ್ಕ ಅಧಿಕಾರ ಈಗಿರತಕ್ಕ ಆಕ್ಟಿನಲ್ಲಿ ಇಲ್ಲ. ಯಾರ ಮನಸ್ಸಿಗೆ ಯಾವ ರೀತಿ ತೋರುತ್ತದೋ ಅದೇರೀತಿ ಪಾಂಪ್ಲೆಟ್ ಹೊರಡಿಸಿ ತನಗೆ ಬೇಕಾದ ಜನಕ್ಕೆ ಪಾಂಪ್ಲೆಟ್ ಹಂಚಿ ಜನರಲ್ ಬಾಡಿ ಸಭೆ ಎಂದು ಬರೆದು, ಅದಕ್ಕೆ ರುಜು ಹಾಕಿರತಕ್ಕಂಥಾದ್ದು 100ಕ್ಕೆ 99 ನಿದರ್ಶನಗಳಿವೆ. ಆದುದರಿಂದ ಜನರಲ್‌ಬಾಡಿ ವಿಷಯದಲ್ಲಿ ಸಮರ್ಪಕವಾಗಿ ಕಾನೂನು ತಂದು ಕಂಪಲ್ಸರಿಯಾಗಿ ವರ್ಷೇ ವರ್ಷೇ ಜನರಲ್‌ಬಾಡಿ ಮೀಟಿಂಗ್ ಮಾಡಿ 3 ವರ್ಷಕ್ಕಾದರೂ ಒಂದು ಸರ್ತಿ ಚುನಾವಣೆ ಕಂಪಲ್ಸರಿಯಾಗಿ ತಪ್ಪದೇ ನಡೆಯುವ ವ್ಯವಸ್ಥೆಯನ್ನು ಕಾನೂನಿನಲ್ಲಿ ಮಾಡಬೇಕೆಂದು ಇಚ್ಛಿಸುತ್ತೇನೆ. ಇವತ್ತು ಅಮಲ್ಗಮೇಷನ್ ಬಗ್ಗೆ 14(ಎ) ಕಲಮನ್ನು ತಂದಿದ್ದಾರೆ. ಇದು ಖಂಡಿತ ಆಗಬೇಕಾದುದು. ಸಹಕಾರ ಸಂಘಗಳು ಎಷ್ಟು ಹೆಚ್ಚುತ್ತವೋ ಅಷ್ಟು ಹೆಚ್ಚಿಗೆ ದೇಶದಲ್ಲಿ ಅನಾಹುತ, ಅಷ್ಟು ಹೆಚ್ಚಿಗೆ ದೇಶದಲ್ಲಿರತಕ್ಕ ಕೆಟ್ಟ ಚಾಳಿಯ ಜನ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಅಮಾಲ್ಗಮೇಷನ್ ಪ್ರಾವಿಷನ್ ಏನು ತಂದಿದ್ದೀರಿ, ಅದನ್ನು ಸ್ವಾಗತಿಸುತ್ತೇನೆ ಇನ್ನು ಕ್ಲಾಸ್ 29 (ಎ) (ಬಿ) (ಸಿ) (ಡಿ) ರಲ್ಲಿ ಡಿಸ್ ಕ್ವಾಲಿಫಿಕೇಷನ್ ಆಫ್ ಮೆಂಬರ್ಸ್ ಬಗ್ಗೆ ನಿಯಮಗಳನ್ನು ಮಾಡಿದ್ದೀರಿ. 6 ವರ್ಷವಾದ ಮೇಲೆ ಪದಾದಿಕಾರಿಗಳಿಗೆ ಅವಕಾಶ ಇರ ಬಾರದು ಎನ್ನುವುದನ್ನು ನಾನಾದರೂ ಕೂಡ ಒಪ್ಪುತ್ತೇನೆ. 53 (ಎ) (ಬಿ) ಕ್ಲಾಸಿನವರಾದ ಸುಮಾರು 50 ಪರ್ಸೆಂಟಿಗಿಂತ ಹೆಚ್ಚಿನ ಶೇರ್ ಬಂಡವಾಳ ಅಂದರೆ 5 ಲಕ್ಷ ಎಂದು ಕಾಣಿಸುತ್ತದೆ. ಆಗ ಸೊಸೈಟಿಯ ಆಡಳಿತ ಮಂಡಲಿಯಲ್ಲಿ 1/3 ಭಾಗ ನಾಮಿನೇಟೆಡ್ ಮೆಂಬರ್ಸ್ ಇರಬೇಕು ಮತ್ತು ನಾಮಿನೇಟೆಡ್ ಮೆಂಬರ್ಸ್ ಡಿಸೆಂಟಿಂಗ್ ನೋಟ್ ಕೊಟ್ಟರೆ ಅದು ರೆಸಲ್ಯೂಷನ್ ಆಗುವುದಿಲ್ಲ ಎಂದು ಹೇಳಿದ್ದೀರಿ. ಅದು ಪ್ರಜಾಪ್ರಭುತ್ವಕ್ಕೆ ವಿರೋಧ ಇವತ್ತಿನ ದಿವಸ ಆರ್ ಕಾಂಗ್ರೆಸ್ ಪಕ್ಷ ಆಡಳಿತದಲ್ಲಿ ಇದೆ. ಇವರ ಒಂದು ಇನಫ್ಲೂಯನ್ಸ್ ಇವರ ಒಂದು ಕಕ್ಷೆಯಲ್ಲಿ ಎಲ್ಲೆಲ್ಲಿ ಸಹಕಾರ ಸಂಘಗಳಲ್ಲಿ ಬೆಳೆಸಬೇಕಾಗಿದ್ದರೆ ಈ ಒಂದು ಬಲವಾದ ಅಸ್ತ್ರವನ್ನು

(ಶ್ರೀ ಸಿ. ಬೈರೇಗೌಡ)

ಸರ್ಕಾರ ಇಟ್ಟುಕೊಂಡು ಕೂತಿದೆ. ಈಗಾಗಲೇ ಅನೇಕ ಸಹಕಾರ ಸಂಘಗಳಲ್ಲಿ ಆಡಳಿತ ವ್ಯವಸ್ಥೆಯನ್ನು ಸರ್ಕಾರದವರು ವಹಿಸಿಕೊಂಡಿರುವ ಸಂದರ್ಭಗಳಿವೆ. ಅಲ್ಲಾದರೂ ಕೂಡ ಸರಿಯಾಗಿ ಕೆಲಸ ನಡೆಯುತ್ತಿದೆಯೇ ಎಂದು ನೋಡಿದರೆ, ಅಲ್ಲೂ ಕೂಡ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಗೋರಿಬಿದನೂರು ಸಹಕಾರ ಸಂಘವನ್ನು ಸರ್ಕಾರ ವಹಿಸಿಕೊಂಡ ಮೇಲೆ ಅಲ್ಲಿ ಅದ ಅನಾಹುತ, ಸರ್ಕಾರ ಸಹಕಾರ ಸಂಘವನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಆಗಿರಲಿಲ್ಲ. ಈ ಸಹಕಾರ ಸಂಘಗಳಲ್ಲಿ ಒಳ್ಳೆಯ ರೀತಿಯಲ್ಲಿ ಇರುವಂಥ ಅಧಿಕಾರಿಗಳು ಇಲ್ಲದಿರುವುದರಿಂದ ಮತ್ತು ಅಲ್ಲಿರುವ ಅಧಿಕಾರಿಗಳು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಮತ್ತು ಅಲ್ಲಿ ಆಡಳಿತ ಪಕ್ಷದವರನ್ನು ಸಹಕಾರಿ ಸಂಘದ ಆಡಳಿತ ಸಮಿತಿಗೆ ನೇಮಕಮಾಡುವ ಪರಿಸ್ಥಿತಿ ಇರುವುದರಿಂದ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ರಾಜ್ಯದಲ್ಲಿ ಅನೇಕ ಅಪೆಕ್ಸ್ ಬ್ಯಾಂಕ್‌ಗಳಿವೆ. ಇವತ್ತು ರಿಸರ್ವ್ ಬ್ಯಾಂಕ್‌ನಿಂದ ಅಪೆಕ್ಸ್ ಬ್ಯಾಂಕ್‌ನಿಂದ ಶೇಕಡ 4 ರಂತೆ ಹಣ ಬರುತ್ತದೆ. ಕೊನೆಗೆ ಹಳ್ಳಿಯಲ್ಲಿರತಕ್ಕ ಸಾಮಾನ್ಯ ಜನಕ್ಕೆ ಅದು ಮುಟ್ಟಬೇಕಾದರೆ 9 ರಿಂದ 10 ಪರ್ಸೆಂಟ್ ಅವರು ಡಿಫಾಲ್ಟರ್ ಆದರೆ 25 ಪರ್ಸೆಂಟ್ ವರೆಗೂ ಕೂಡ ಬಡ್ಡಿ ತೆರುವಂಥ ಪರಿಸ್ಥಿತಿ ಇದೆ. ಜನರ ಹಣ ಜನಕ್ಕೆ ನೇರವಾಗಿ ಸಿಗಬೇಕಾದರೆ ಶೇಕಡ 4 ರಂತೆ ಸಿಗಬೇಕಾದ ಹಣ 9 ರಿಂದ 10—25 ಪರ್ಸೆಂಟ್ ಆಗುವ ಪರಿಸ್ಥಿತಿ ಇದೆ ಆ ರೀತಿ ಆಗ ಕೂಡದು. ಈಗಿರುವ ಅಪೆಕ್ಸ್ ಬ್ಯಾಂಕ್‌ಗಳನ್ನು ತೆಗೆದು ಹಾಕಿ ಕಮರ್ಷಿಯಲ್ ಬ್ಯಾಂಕ್ ಯಾವುದು ರಾಷ್ಟ್ರೀಕೃತವಾಗಿದೆ ಅದಕ್ಕೆ ಇವನ್ನು ಒಪ್ಪಿಸಿ. ಅವುಗಳ ಮೂಲಕ ನೇರವಾಗಿ ಕಡಿಮೆ ಬಡ್ಡಿಯಲ್ಲಿ ಹಣ ಜನರಿಗೆ ಸಿಗುವಂತೆ ಮಾಡಿದರೆ, ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈಗ ಹಣ ಪಡೆಯಬೇಕಾಗಿದ್ದರೂ ಕೂಡ ಅನೇಕ ದಾಖಲೆಗಳನ್ನು ಒದಗಿಸಬೇಕಾಗಿದೆ. ಇವನ್ನು ಒದಗಿಸಬೇಕಾದರೆ ತಿಮ್ಮಪ್ಪನವರು ಹೇಳಿದಂತೆ ಕೆಲವು ಸಂದರ್ಭದಲ್ಲಿ 150 ರೂಪಾಯಿ ಖರ್ಚಾಗುತ್ತದೆ. ಅದಕ್ಕೆ ಬದಲು ನಾನು ಸಲಹೆ ಮಾಡುವುದು, ಬ್ಯಾಂಕ್ ಪಾಸ್ ಬುಕ್, ಮೋಟಾರ್ ವೆಹಿಕಲ್‌ಗೆ ಒಂದು ಪಾಸ್ ಬುಕ್ ಇರುವಂತೆ ಮಾಡಿ, ಅವನ ಆಸ್ತಿ ಬೆಲೆ ನಿಗದಿ ಮಾಡಿ ಅದರಲ್ಲಿ ಎಂಟ್ರಿ ಮಾಡಿದರೆ, ಒಂದೇ ನಿಮಿಷದಲ್ಲಿ ಸಾಲ ಕೊಡುವಂಥ ವ್ಯವಸ್ಥೆ ಮಾಡಿದರೆ, ನಿಜವಾಗಿ ಸಹಕಾರ ಸಂಘಗಳ ತತ್ವದಿಂದ ಜನಕ್ಕೆ ಉಪಯೋಗವಾಗುತದೆ. ಈ ಕೆಲವು ಅಂಶಗಳನ್ನು ಸರ್ಕಾರ ಗಮನಿಸಿ, ಈ ರೀತಿ ತಿದ್ದುಪಡಿ ತರಬೇಕು. ಈಗ ತಂದಿರುವುದನ್ನು ವಾಪಸ್ ಪಡೆಯಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಕೆ. ಆರ್ ಶ್ರೀನಿವಾಸುಲು ನಾಯುಡು, (ಶಾಂತಿನಗರ) : ಸನ್ಮಾನ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿ

ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ತಮ್ಮ ಮುಂದೆ ಎದ್ದು ನಿಂತಿದ್ದೇನೆ.

ಈ ಬಗ್ಗೆ ಅನೇಕ ಮಂದಿ ಮಾತನಾಡತಕ್ಕವರಲ್ಲಿ ಈ ಸಹಕಾರಿ ತತ್ವದ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅದರಲ್ಲಿ ಶ್ರೀಮಾನ್ ಬೈರೇಗೌಡರು, ಈ ಬಗ್ಗೆ ಮಾತನಾಡುತ್ತಾ once for all and all for each ಎಂಬು ದನ್ನು ಕನ್ನಡದಲ್ಲಿ ತರ್ಜುಮೆಮಾಡಿ ಒತ್ತಿ ಹೇಳಿದ್ದಾರೆ. ಈ ಸಹಕಾರಿ ತತ್ವ ಮುಕ್ಕಾಲು ಶತಮಾನದಿಂದಲೂ ನೋಡಿದರೆ ಸರಿಯಾಗಿ ನಡೆದುಕೊಂಡು ಬಂದಿಲ್ಲ. ಇದಕ್ಕೆ ಮುಖ್ಯ ಕಾರಣ ಏನೆಂದರೆ we lack in two things *i.e.* honesty and basic National character. ಈ ತರಹ ಬೇಸಿಕ್ ಕ್ಯಾರೆಕ್ಟರ್ ನಮ್ಮಲ್ಲಿ ಇಲ್ಲದೇ ಹೋದರೆ ಅಲ್ಲಿಯವರೆಗೆ ನಮ್ಮ ದೇಶವನ್ನು ಎಂದಿಗೂ ರಾಮರಾಜ್ಯ ಮಾಡುವುದಕ್ಕಾಗುವುದಿಲ್ಲ, ಈ ಸಹಕಾರಿ ತತ್ವವನ್ನು ಮೊದಲು ನಾವು ಕಲಿತದ್ದು ಪಾಶ್ಚಾತ್ಯ ದೇಶದವರಿಂದ. ಆದರೆ ಇದರಲ್ಲಿ ಒಳ್ಳೆಯದನ್ನು ಬಿಟ್ಟು ಕೆಟ್ಟದ್ದನ್ನು ಮಾತ್ರ ಹೆಚ್ಚಾಗಿ ಕಲಿತಿದ್ದೇವೆ. ಅದರಲ್ಲೂ ನಮ್ಮ ಈ "ಲ್ಯಾಂಡ್ ರೀಫಾರಂಸ್" ಬಂದಮೇಲೆ, ನಮ್ಮ ಸಮಸ್ಯೆ ಬಹಳ ಕಟುವಾಗಿದೆ. ಇದರಲ್ಲಿ ಮುಖ್ಯವಾಗಿ 5 ತಿದ್ದುಪಡಿಗಳನ್ನು ತಂದಿದ್ದಾರೆ. ಅದರಲ್ಲಿ ಒಂದು ಕಡೆ ಹೇಳಿದ್ದಾರೆ does not fulfill all qualification required under law ಎಂದು ಇದರ ಬಗ್ಗೆ ವಿವರ ಹೇಳುವುದಕ್ಕೆ ನಾನು ಹೋಗುವುದಿಲ್ಲ, ಇನ್ನು ಎಕ್ಸ್‌ಟೆನ್‌ಷನ್ ಆಫ್ ಡಿಪಾಸಿಟ್ ಇನ್‌ಷೂರೆನ್ಸ್ ಸ್ಕೀಂ ಇದೆ. ಇದರಲ್ಲಿ ಕಮರ್ಷಿಯಲ್ ಬ್ಯಾಂಕಿನ ಕೈವಾಡ ಹೇಗೆ ಇರಬೇಕು ಎಂದು ಹೇಳಿದ್ದಾರೆ. ಇದೇ ರೀತಿ ಇನ್ನು ಏನೇನೋ ಹೇಳಿದ್ದಾರೆ. ಇನ್ನು ನಾಮಿನೇಟೆಡ್ ಮೆಂಬರ್ಸ್ 6 ವರ್ಷಗಳ ಮೇಲೆ ಇರಬಾರದು ಎಂದು ಹೇಳಿದ್ದಾರೆ. ಇದು ಸ್ವಾಗತಾರ್ಹ. ಈ ಸಹಕಾರಿ ತತ್ವ ಏನು ದೆ, ಇದರಲ್ಲಿ ಎರಡು ಮುಖ್ಯ ಅಂಗಗಳು ಅಡಗಿವೆ ಒಂದು ಅಗ್ರಿಕಲ್‌ಚರಲ್ ಕೋ-ಆಪರೇಟೀವ್ಸ್ ಮತ್ತೊಂದು ಇಂಡಸ್ಟ್ರಿಯಲ್ ಕೋ-ಆಪರೇಟೀವ್ಸ್ ಎಂದು. ಆದರೆ ಈಗ ಸದ್ಯಕ್ಕೆ ಅಗ್ರಿಕಲ್‌ಚರಲ್ ಕೋ-ಆಪರೇಟೀವ್ಸ್‌ನಿಂದ ಬಡ ರೈತರಿಗೆ ಯಾವ ವಿಧ ವಾದ ಪ್ರಯೋಜನವೂ ಹೆಚ್ಚಿನ ರೀತಿಯಲ್ಲಿ ಆಗುತ್ತಾ ಇಲ್ಲ. ಪ್ರಯೋಜನ ಹೊಂದಬೇಕಾದರೆ ಹೆಚ್ಚಿಗೆ ಇಂಡಸ್ಟ್ರೀಸ್ ಕೋ-ಆಪರೇಟೀವ್ ನಿಂದ ಮಾತ್ರ ಹೊಂದಬೇಕಾಗಿದೆ. ಇದು ನಮಗೆ ಚೆನ್ನಾಗಿ ಗೊತ್ತಿದೆ. ಇದೇ ರೀತಿ ಇನ್ನೂ ಅನೇಕ ತರಹ ಸೊಸೈಟಿಗಳು ಇವೆ ಉದಾಹರಣೆಗೆ ಹೇಳುವುದಾದರೆ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಮಲ್ಟಿಪರ್ಪಸ್ ಕೋ-ಆಪರೇಟೀವ್ ಸೊಸೈಟಿ, ಸೇವಾ ಸೊಸೈಟಿ ಇತ್ಯಾದಿ ಈ ತರಹ ಬೇಕಾದಷ್ಟು ಸೊಸೈಟಿಗಳು ನಮ್ಮಲ್ಲಿ ಪಾಡಿಕೆಯಾಗಿವೆ. ಕಮರ್ಷಿಯಲ್ ಬ್ಯಾಂಕ್ಸ್‌ನಲ್ಲಿ ಕಸ್ಟೋಡಿಯನ್ಸ್‌ಗೆ ಬೇಕಾ ದಷ್ಟು ಅಧಿಕಾರ ಕೊಟ್ಟಿದ್ದಾರೆ. ಆದರೆ ಅವರಿಂದ ಸಾಮಾನ್ಯ ಜನರಿಗೆ ಅಷ್ಟು ಪ್ರಯೋಜನವಾಗಿಲ್ಲ.

(ಶ್ರೀ ಕೆ. ಆರ್ ಶ್ರೀನಿವಾಸುಲು ನಾಯಿಡು)

ಇನ್ನು ಈ ಸಹಕಾರಿ ಮೂವ್‌ಮೆಂಟನ್ನೂ ಹೆಚ್ಚಿನ ರೀತಿಯಲ್ಲಿ ಬೆಳಸಲು ಒಂದು ಪೇಪರನ್ನು ಹೊರಡಿಸುತ್ತಾ ಇದ್ದಾರೆ. ಆದರೆ ಇದನ್ನು ಎಷ್ಟು ಜನ ಓದಿದ್ದಾರೋ ನನಗಂತೂ ಗೊತ್ತಿಲ್ಲ. ಈಗ ಈ ಸಹಕಾರಿ ತತ್ವ ಏನಾಗಿದೆ ಎಂದರೆ, ಇದು ಸಾಹುಕಾರರಿಗೆ ಸಹಕಾರಿಯಾಗಿದೆಯೇ ವಿನಹ ಬಡವರಿಗೆ ಸಹಕಾರಿಯಾಗಿಲ್ಲ. ಈ ಕೋ-ಆಪರೇಟೀವ್ಸ್ ಮುಖ್ಯವಾಗಿ ಬಡವರಿಗೆ ಸಹಕಾರಿಯಾಗಿರಬೇಕು. ಆದರಲ್ಲಿ ಕೋ-ಆಪರೇಟೀವ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಒಂದನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪನೆ ಮಾಡಬೇಕು. ಹಾಗೆಯೇ ಇನ್ನೊಂದು Co-operative Societies for Development of Brackward Class and Weaker Sections ಗೆ ಪ್ರತ್ಯೇಕವಾಗಿ ಒಂದು ಸ್ಟಾರ್ಟ್ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಹಿಂದುಳಿದ ಜನಾಂಗದವರಿಗೆ ಅನುಕೂಲವಾಗುತ್ತದೆ. ಈ ಕೋ-ಆಪರೇಟೀವ್ ಮೂವ್‌ಮೆಂಟ್ ಹೆಚ್ಚಿನ ರೀತಿಯಲ್ಲಿ ಬೆಳೆಯಬೇಕಾದರೆ ಪ್ರತಿಯೊಂದು ಹಳ್ಳಿ ಹಳ್ಳಿಯಲ್ಲೂ ಇದರ ತತ್ವ ಪ್ರಚಾರವಾಗಬೇಕು ಮತ್ತು ಬೆಳೆಯಬೇಕು.

ಇನ್ನು ನೀವು ಸ್ಟೇಟ್ ಟ್ರೇಡಿಂಗನ್ನು ತೆಗೆದುಕೊಳ್ಳುವಾಗ ಸುಮ್ಮನೆ ಅಲ್ಲಿಗೆ ಹೋಗಿ ಆಡಿಟರ್ಸ್ ಬರೆಯುವ ಹಾಗೆ checked and found correct ಅನ್ನುವ ರೀತಿಯಲ್ಲಿ ಮಾಡಬಾರದು. ಆ ರೀತಿ ಮಾಡುವುದನ್ನು ತಪ್ಪಿಸಿ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಯಾವ ರೀತಿ ರಿಪೋರ್ಟ್ ಬರೆಯುತ್ತಾರೋ ಅದೇ ರೀತಿ ಸಹಕಾರ ಸಂಘಗಳಿಗೆ ಆಡಿಟರ್ಸ್ ಪ್ರತಿವರ್ಷವೂ ಹೋಗಿ ಚೆಕ್ ಮಾಡಿಕೊಂಡು ಬರಬೇಕು ಎಂದು ಹೇಳಬಯಸುತ್ತೇನೆ.

SRI M. S. KRISHNAN — I wish to make only one point.

MR. DEPUTY SPEAKER.—The Minister will reply.

SRI M. S. KRISHNAN.—I have only one point to make.

MR. DEPUTY SPEAKER.- I am sorry. I have called upon the Minister to speak. At one stage in fact I was searching for members to participate in the discussion. There was none.

SRI M. S. KRISHNAN.—The point is, several speakers have spoken on several aspects. But I have only one point which is left out

MR. DEPUTY SPEAKER.—I am sorry. I have called upon the Minister to reply. Please co-operate with the Chair.

ಶ್ರೀ ಎ. ಶಂಕರ ಆಳ್ವ (ಸಹಕಾರ ಶಾಖೆಯ ಮಂತ್ರಿಗಳು) :—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಚರ್ಚೆಯಲ್ಲಿ 12 ಜನ ಸದಸ್ಯರು ಭಾಗವಹಿಸಿದ್ದಾರೆ. ಮುಖ್ಯವಾಗಿ ಇದರಲ್ಲಿ ಕೆಲವರು ಈ ಸಹಕಾರಿ ತತ್ವವನ್ನೇ ಕಿತ್ತು ಹಾಕಿದಂತೆ ಮಾತ ನಾಡಿದ್ದಾರೆ. ಇನ್ನು ಕೆಲವರು ಕೆಲವು ಮಟ್ಟಿಗೆ ಈ ಬಗ್ಗೆ ಕೆಲವು ಸಲಹೆ ಸೂಚನೆ ಗಳನ್ನು ಇಟ್ಟಿದ್ದಾರೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಶ್ರೀಮಾನ್ ಬೈರೇಗೌಡರು ಈಗ ತಂದಿರತಕ್ಕದ್ದು ಸಾಲದು, ಇನ್ನೂ ಕಠಿಣವಾಗಿ ತರಬೇಕಾಗಿತ್ತು ಎಂದು ಹೇಳಿದ್ದಾರೆ. ಅನೇಕ ಸೊಸೈಟಿಗಳು ಬಹಳ ತೊಂದರೆ ಯಲ್ಲಿವೆ. ಅದನ್ನು ಈಗಿರುವ ಕಾನೂನಿನಲ್ಲೇ ಸರಿಪಡಿಸಲಿಕ್ಕೆ ಆಗಲಿಕ್ಕಿಲ್ಲ ಎಂದು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅವೆಲ್ಲವೂ ಉಪಯುಕ್ತವಾದ ಸಲಹೆಗಳು. ಇನ್ನೂ ಸಹ ಆದಷ್ಟು ತಿದ್ದುಪಡಿಗಳನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೂ ಸಹ ಆಲೋಚನೆ ಮಾಡಲಿಕ್ಕೆ ಸಾಧ್ಯ ಉಂಟು ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡಲಿಕ್ಕೆ ಕೂಡದು ಎನ್ನುವುದರಲ್ಲಿ ನಾನೂ ಒಬ್ಬನಾಗಿದ್ದೇನೆ. ಒಂದು ಉದಾಹರಣೆ ಹೇಳುವುದಾ ದರೆ ಕೆನಡಾದಲ್ಲಿ ಆಂಟೇರಿಯೊ ಅನ್ನುವ ಜಾಗದಲ್ಲಿ ಈ ಒಂದು ಸಹಕಾರೀ ಕಾನೂನು ಇಲ್ಲದೇನೇ ಸೊಸೈಟಿಗಳನ್ನು ರನ್ ಮಾಡುತ್ತಿದ್ದಾರೆ. ಪ್ರತಿಯೊಬ್ಬರೂ ಒಂದೊಂದು ಸೊಸೈಟಿ ಮಾಡಿಕೊಂಡು ಅವರದೇ ಆದಂಥ ಒಂದು ಬೈಲಾವನ್ನು ಮಾಡಿಕೊಳ್ಳುತ್ತಿದ್ದಾರೆ. ಇದೂ ಒಂದು ತರಹ Ideal state of affairs. ಆದರೆ ಈಗಿನ ಇಂತಹ ಪರಿಸ್ಥಿತಿಯಲ್ಲಿ ಅಂತಹ ಸಹಕಾರೀ ಸಂಸ್ಥೆಗಳನ್ನು ಇಲ್ಲಿ ನಡೆಸುವುದು ಸಾಧುವೇ ಎಂಬುದನ್ನು ಆಲೋಚನೆ ಮಾಡಬೇಕು. ಅನೇಕ ಸಂದರ್ಭಗಳಲ್ಲಿ ಅನೇಕ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ. ಅದರ ಲೆಕ್ಕಾಚಾರ ಸರಿಯಾಗಿಲ್ಲ. ಸಣ್ಣಪುಟ್ಟ ಕೆಲವು ಗುಮಾಸ್ತರನ್ನು ಅಲ್ಲಿ ಹಿಡಿದು ಕೊಂಡಿದ್ದಾರೆ. ದೊಡ್ಡ ದೊಡ್ಡ ಡೈರೆಕ್ಟರ್ಸ್ ಮತ್ತು ಚೇರ್ಮನ್‌ರು ಇಂಥವರೆಲ್ಲಾ ಇದರಲ್ಲಿ ತಪ್ಪಿಸಿಕೊಂಡು ಹೋಗುತ್ತಿದ್ದಾರೆ.

ಅಲ್ಲಿ ಎಷ್ಟೇ ಅನಾಹುತಗಳು ನಡೆದರೂ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಪಟ್ಟರೂ ಮತ್ತೆ ಅದನ್ನೇ ಮಾಡುತ್ತಾ ಇರುತ್ತಾರೆ. ಇನ್ನು ಅನೇಕ ಸಂಗತಿ ಗಳನ್ನು ಸಹಿತ ಕೇಳುತ್ತಾ ಇರುತ್ತೇವೆ. ನಾವೂ ಕೂಡ ನೋಡುತ್ತಿದ್ದೇವೆ. ಅವು ಗಳನ್ನು ನಾವು ತಡೆಗಟ್ಟಲಿಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿರುತ್ತೇವೆ. ಅವು ಗಳ ಬಗ್ಗೆ ನಾನು ಜವಾಬು ಕೊಡಲು ಬಯಸುತ್ತೇನೆ. ನಿಜವಾಗಿಯೂ ಉಪ ಯುಕ್ತವಾದ ಸಲಹೆಗಳನ್ನು ಮಾನ್ಯ ಸದಸ್ಯರು ಅನೇಕರು ಈಗಾಗಲೇ ಕೊಟ್ಟಿ

(ಶ್ರೀ ಎ. ಶಂಕರ ಆಳ್ವ)

ದ್ದಾರೆ. ಆದರಲ್ಲಿ ಸಹಕಾರಿ ಕ್ಷೇತ್ರದಲ್ಲಿ ಆಡಿಟ್ ಡಿಪಾರ್ಟ್‌ಮೆಂಟ್ ಪ್ರತ್ಯೇಕವಾಗಿ ಇರಬೇಕೆಂಬುದೇ ಎಲ್ಲರ ಅಭಿಪ್ರಾಯವಾಗಿದೆ. ಮುಖ್ಯವಾಗಿ ಈಗ ಇದ್ದ ಸೊಸೈಟಿ ಅಧಿಕಾರಿಗಳು ಆಡಿಟ್ ಲೆಕ್ಕಗಳನ್ನು ಮಾಡುತ್ತಿದ್ದಾರೆ. ಅಲ್ಲಿ ಮುಖ್ಯವಾಗಿ ಕೆಲಸ ಮಾಡುತ್ತಾ ಇದ್ದವರು ಯಾರು ನಿಪುಣರು ಇದ್ದಾರೆ ಅಂಥವರನ್ನು ನೋಡಿ ಎಷ್ಟು ಜನರು ಈ ಆಡಿಟ್ ಡಿಪಾರ್ಟ್‌ಮೆಂಟಿಗೆ ಬರಲಿಕ್ಕೆ ತಯಾರು ಇದ್ದಾರೆ, ಎಷ್ಟು ಜನರು ಸಿಗಬಹುದು ಎಂಬುದನ್ನು ನೋಡಿಕೊಂಡು ಕೆಲಸ ನಡೆಯುತ್ತಿದೆ, ಮತ್ತೆ ಬಾಕಿ ವ್ಯವಹಾರದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರನ್ನು ನೇಮಿಸುತ್ತೇವೆ. ಇತರ ವ್ಯವಹಾರ ಮಾಡುವವರು ಮತ್ತು ಆಡಿಟ್ ಮಾಡುವವರು ಪ್ರತ್ಯೇಕವಾಗಿ ಇರಬೇಕು ಅದಕ್ಕೋಸ್ಕರ ಅವರಿಗೆ ಆಡಿಟ್ ಇಲಾಖೆ ಪ್ರತ್ಯೇಕವಾಗಿ ಕೊಡಬೇಕು ಎಂದು ಇಷ್ಟು ಹೇಳ ಬಯಸುತ್ತೇನೆ. ಇನ್ನು ಶ್ರೀಮಾನ್ ಬಾಪುಗೌಡರು ಒಂದು ವಿಷಯ ಹೇಳಿದರು. ಆ ವಿಷಯದಲ್ಲಿ ನಾನು ಇಷ್ಟು ಹೇಳುತ್ತೇನೆ ಬ್ಯಾಂಕುಗಳ ಹತೋಟಿ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದೇವೆ, ಎಂದು ಹೇಳಿದ್ದಾರೆ. ನಾನು ಆ ವಿಷಯದಲ್ಲಿ ಏನನ್ನೂ ಹೇಳಲು ಬಯಸುವುದಿಲ್ಲ. ಅವರು ಯಾವ ಬ್ಯಾಂಕಿನ ವಿಷಯ ಹೇಳಿದ್ದಾರೆ. ಆ ಬ್ಯಾಂಕುಗಳ ಕೇಸು ಕೋರ್ಟಿನಲ್ಲಿ ಇವೆ.

ಶ್ರೀ ಬಾಪುಗೌಡ ರಾಯಪ್ಪಗೌಡ : ಯಾವುದೇ ಬ್ಯಾಂಕುಗಳು ಅಪೀಲು ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಹೇಳುತ್ತೇನೆ. ಆ ಬ್ಯಾಂಕುಗಳಲ್ಲಿ ತಾವು ಹೇಳುತ್ತೀರಿ ಶೇರು ಬಂಡವಾಳ ಜಾಸ್ತಿ ಇದೆ ಎಂದು, ಅವುಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎ. ಶಂಕರ ಆಳ್ವ : ಈ ಬ್ಯಾಂಕುಗಳ ವಿಷಯದಲ್ಲಿ ನಾನು ಏನನ್ನೂ ಹೇಳಬಯಸುವುದಿಲ್ಲ. ಯಾವುದೇ ಬ್ಯಾಂಕುಗಳಾಗಲಿ ಅದರ ವ್ಯವಹಾರಗಳನ್ನು ಮೊದಲು ಕೂಲಂಕುಷವಾಗಿ ಪರಿಶೀಲಿಸಿ ಅದರ ವ್ಯವಹಾರಗಳ ಬಗ್ಗೆ ವಿವರವಾದ ವರದಿಯನ್ನು ಕೊಡುವುದಕ್ಕಾಗಿ ನಮ್ಮ ಆಫೀಸರ್‌ಗಳನ್ನು ಕಳುಹಿಸಿ ಕೊಡುತ್ತೇವೆ. ಅಂಥ ಸಂದರ್ಭಗಳಲ್ಲಿ ನಮ್ಮ ಅಧಿಕಾರಿಗಳು ಅದರ ವ್ಯವಹಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಯಾವ ರಾಜಕೀಯ ಒತ್ತಡವಿಲ್ಲದೆ, ಇನ್ನೂ ಬೇರೆ ಯಾವ ರೀತಿಯಾದ ವಿಷಯಕ್ಕೂ ಗಮನಕೊಡದೆ, ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ಸೆಕ್ಷನ್ 54ರ ಪ್ರಕಾರ ಯಾವ ಸಹಕಾರಿ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡುವುದೇ ಆಗಲಿ ಆ ಸಂಸ್ಥೆಗಳಲ್ಲಿ ಯಾವ ಪಕ್ಷದವರೇ ಇರಲಿ, ಯಾವ ಪಕ್ಷದ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಮಂಡಲಿ ಅಸ್ತಿತ್ವದಲ್ಲಿರಲಿ ನ್ಯಾಯವಾದ ರೀತಿಯಲ್ಲಿ ಆ ಸಂಸ್ಥೆಯ ಕೆಲಸ ಕಾರ್ಯಗಳು ನಡೆಯುತ್ತಿದ್ದರೆ ಅದರ

ಮೇಲೆ ಯಾವ ಕ್ರಮ ತೆಗೆದುಕೊಳ್ಳುವುದಿಲ್ಲ. ಇದನ್ನು ಮಾತ್ರ ಯಾವಾಗಲೂ ನಾವು ಅನುಸರಿಸಿಕೊಂಡು ಬರುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಮುಖ್ಯವಾಗಿ ಈ ಬಿಲ್ ಇಂಟರ್‌ಡ್ಯೂಸ್ ಮಾಡುವ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಎತ್ತಿ ಹಿಡಿದಿದ್ದಾರೆ. ಮಾನ್ಯ ಸಿದ್ದಪ್ಪನವರು ಟ್ರಿಬ್ಯೂನಲ್ ವಿಷಯವನ್ನು ಹೇಳಿದ್ದಾರೆ. ಆ ಟ್ರಿಬ್ಯೂನಲ್ ವಿಷಯದಲ್ಲಿ ಹೇಳುವುದಾದರೆ ಅದರಲ್ಲಿ ಒಬ್ಬ ಜಿಲ್ಲಾ ಜಡ್ಜರು, ಒಬ್ಬರು ನಮ್ಮ ಸಹಕಾರಿ ಡಿಪಾರ್ಟ್‌ಮೆಂಟ್ ಅಧಿಕಾರಿ ಅಂದರೆ ಜಾಯಿಂಟ್ ರಿಜಿಸ್ಟ್ರಾರ್ ಮತ್ತು ಒಬ್ಬ ಅಫಿಷಿಯಲ್ ಸದಸ್ಯರನ್ನು ಅಂದರೆ ನ್ಯಾಯವಾದಿಯಾದ ವಕೀಲರನ್ನು ಸೇರಿಸಬೇಕು. ಈ ಟರ್ಮ್ಸ್ ಪ್ರಕಾರ ಯಾವುದಾದರೂ ತಂಟೆತಕರಾರು ಒಂದರೆ ಕೋರ್ಟಿಗೆ ಹೋಗಬೇಕಾಗುತ್ತದೆ. ಕೋ ಆಪರೇಟಿವ್ ಸೊಸೈಟಿಗೆ ಸಂಬಂಧಪಟ್ಟವರು ಮೂರನೆಯವರು ಅದರಲ್ಲಿ ಇದ್ದರೆ ಮಾತ್ರ ಸಿವಿಲ್ ಕೋರ್ಟಿಗೆ ಹೋಗಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಲಿಮಿಟ್ ಮಾಡಬೇಕಾಗುತ್ತದೆ. ಇನ್ನು ಸೆಕ್ಷನ್ 14ರ ಪ್ರಕಾರ ಅಮಾಲ್ಗಮೇಷನ್ ಮಾಡುವುದಕ್ಕೆ ಕೋ ಆಪರೇಟಿವ್ ಡಿಪಾರ್ಟ್‌ಮೆಂಟ್ ರಿಜಿಸ್ಟ್ರಾರ್‌ರವರು ಯಾವುದೇ ಸೊಸೈಟಿಗಳನ್ನು ಅಮಾಲಗ್‌ಮೇಟ್ ಮಾಡಬೇಕಾದರೆ ಅದು ಕೂಡಾ ಸಾರ್ವಜನಿಕರ ಹಿತದೃಷ್ಟಿಯಿಂದ ಅಮಾಲ್ಗಮೇಟ್ ಮಾಡುವುದಕ್ಕೆ ಮೊದಲು ಸರ್ಕಾರದ ಪರವಾನಿಗೆಯನ್ನು ಪಡೆದು ಮಾಡಬೇಕಾಗುತ್ತದೆ. ಒಂದು ಮುಖ್ಯವಾದ ಸ್ಥಳದಲ್ಲಿ ಒಂದೇ ಒಂದು ಸೊಸೈಟಿ ಇರಬೇಕು. ಅಲ್ಲಿ ಕೆಲವು ಸಣ್ಣ ಸಣ್ಣ ಸೊಸೈಟಿಗಳು ಇದ್ದರೆ ಅವುಗಳು ಲೀಗಲ್ ಆಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅಂಥ ಸಣ್ಣ ಸಣ್ಣ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರೇ ನಾವು ನಾವು ಸೇರಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರೆ ಅಂತಹ 2-3 ಸೊಸೈಟಿಗಳನ್ನು ಒಂದಾಗಿ ಸೇರಿಸುವುದಕ್ಕೆ ಡೈರೆಕ್ಟ್ ಆಗಿ ಆ ಅಧಿಕಾರವನ್ನು ನಾವು ತೆಗೆದುಕೊಳ್ಳುತ್ತೇವೆ. ಅವರೇ ಎಲ್ಲರೂ ಒಂದಾಗಿ ನಡೆದುಕೊಳ್ಳುತ್ತೇವೆಂದು ಹೇಳಿದರೆ ಅವರಿಗೆ ಅವಕಾಶಕೊಡುತ್ತೇವೆ.

ಸೆಕ್ಷನ್ 29 ಪ್ರಕಾರ ಒಂದು ಸಹಕಾರ ಸಂಘದ ಚೇರ್‌ಮನ್ ಅಥವಾ ಕಾರ್ಯಕಾರಿ ಮಂಡಳಿಯು ಸುಮಾರು ಆರು ವರ್ಷಗಳ ಕಾಲ ಮುಂದುವರಿಸುವುದು ಒಳ್ಳೆಯದು ಎಂದು ಕೆಲವರು ಹೇಳಿದರು, ಇನ್ನು ಕೆಲವರು ಮೂರು ವರ್ಷಗಳ ಕಾಲ ಮುಂದುವರಿಯುವುದು ಒಳ್ಳೆಯದು ಎಂದು ಹೇಳಿದ್ದಾರೆ. ಅಂಥ ಸಂದರ್ಭಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಅಲ್ಲಿನ ಸದಸ್ಯರು ಇಷ್ಟಪಟ್ಟರೆ ಅವರನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯ ಇರುತ್ತದೆ. ಅಲ್ಲಿನ ಕೆಲಸಕಾರ್ಯಗಳು ಸುಗಮವಾಗಿ ನಡೆದುಕೊಂಡು ಹೋಗುವುದಾದರೆ ಯಾವ ಅಭ್ಯಂತರವೂ ಇರುವುದಿಲ್ಲ. (ಅಂಥ ಸಂದರ್ಭಗಳಲ್ಲಿ ರಿಸ್ಟ್ರಿಕ್ಷನ್ ರೀಸನಬಲ್ ಆಗಿ ಇರುತ್ತದೆ ಹೊರತು ತೊಂದರೆಯಾಗುವುದಿಲ್ಲ.) ಕಂಟೀನ್ಯೂಸ್ ಆಗಿ 6 ವರ್ಷಕ್ಕಿಂತ

(ಶ್ರೀ ಎ. ಶಂಕರ ಆಳ್ವ)

ಹೆಚ್ಚು ಕಾಲಗಳು ಆದನಂತರ ಮುಂದುವರಿದರೆ ಅದರಲ್ಲಿ ವೆಸ್ಟೆಡ್ ಇನಟರೆಸ್ಟ್ ಇದ್ದ ಹಾಗೆ ತೋರುತ್ತದೆ. ಅದರಿಂದ ಮನಾಪಲಿ ಮಾಡಿಕೊಂಡ ಹಾಗೆ ಆಗುತ್ತದೆ. ಕೆಲವು ಸೊಸೈಟಿಗಳು ಸ್ವಲ್ಪ ದಿವಸ ಅದೇ ರೀತಿ ಮನಾಪಲಿ ಮಾಡಿಕೊಂಡು ನಡೆಸಿ ಕೊಂಡು ಹೋದರೆ ಅವುಗಳ ಪರಿಸ್ಥಿತಿ ಕೆಡುತ್ತದೆ ಎಂಬ ಭಾವನೆ ಎಲ್ಲರಲ್ಲಿ ಕಂಡು ಬರುತ್ತದೆ. ಅಂಥ ಪರಿಸ್ಥಿತಿಯಲ್ಲಿ 6 ವರ್ಷಗಳ ಮಟ್ಟಿಗೆ ಮಾತ್ರ ಬೇಕಾದರೆ ಅವರೇ ಚೇರ್‌ಮನ್ ಆಗಿ ಮುಂದುವರಿಯಬಹುದು.

ಸೆಕ್ಷನ್ 53 (ಎ) ಮತ್ತು (ಬಿ) ಇದರಲ್ಲಿ ಒಂದು ಏನು ವಿಷಯ ಇದೆ ಎಂದು ಹೇಳಿದರೆ ಈಗ ನಾವು ಮೂರನೇ ಒಂದು ಭಾಗ ಡೈರೆಕ್ಟರ್ಸ್‌ನ್ನು ನಾಮಿನೇಟ್ ಮಾಡಬೇಕು. ಅವೇ ಸೆಕ್ಷನ್ 54ರ ಪ್ರಕಾರ ಹೆಚ್ಚು ಜನರನ್ನು ನೇಮಿಸಬೇಕೆಂದು ಹೇಳಿದರೆ ಮೂರನೇ ಒಂದು ಭಾಗವನ್ನು ಸೊಸೈಟಿಯವರೇ ಮಾಡಿಕೊಳ್ಳಬೇಕು ಮತ್ತು ಅದು ಅಲ್ಲದೆ ಕೆಲವು ಸಾರಿ ಎಕ್ಸ್‌ಪರ್ಟ್ಸ ಹಾಕಬೇಕಾಗುತ್ತದೆ.ಎಕ್ಸಪರ್ಟ್ಸ ಎಂದರೆ ಅದರಲ್ಲಿ ಆಳವಾಗಿ ಅಭ್ಯಾಸ ಮಾಡಿ ಕೋ ಅಪರೇಟೀವ್ ಮೂವ್‌ಮೆಂಟ್ ತಿಳಿದುಕೊಂಡಿರತಕ್ಕ ತಜ್ಞರನ್ನು ನೇಮಿಸಿದಾಗ ಅವರು ಏನು ಡಿಸಿಷನ್ ಕೊಡು ತ್ತಾರೆ. ಅವರು ಯಾವುದು ಸರಿಯೆಂದು ಹೇಳುತ್ತಾರೆ ಅದಕ್ಕೆ ಸಹಿತ ಬೆಲೆ ಕೊಡುತ್ತಾರೆ. ಕಡೆಗೆ ಸರಕಾರದವರು ಏನು ಸೂಚನೆ ಅದರಲ್ಲಿ ಕೊಡುತ್ತಾರೆ ಅವನ ಆ ಸೂಚನೆ ಪ್ರಕಾರ ಒಪ್ಪಿಗೆ ಪಡೆದುಕೊಳ್ಳಬೇಕಾಗುತ್ತದೆ. ಅದರಲ್ಲಿ ಒಬ್ಬರು ಅದಕ್ಕೆ ವಿರುದ್ಧವಾಗಿ ಇದ್ದರೆ ಮತ್ತೆ ಸರ್ಕಾರಕ್ಕೆ ಬರುತ್ತದೆ.

ಶ್ರೀ ಬಾಪುಗೌಡ ರಾಯಪ್ಪ :— ಅಲ್ಲಿ ಬೇರೆ ಪಕ್ಷದವರು ಅದರ ಆಡಳಿತ ವನ್ನು ನಡೆಸುತ್ತಾ ಇರುತ್ತಾರೆ. ಅಲ್ಲಿ ಬೇಕೆಂದು ಅವರಿಗೆ ಕಿರುಕುಳ ಕೊಡು ತ್ತಾರೆ ಅಂಥಹ ಎಲ್ಲಾ ಕಡೆಗಳಿಗೆ ಸರ್ಕಾರದವರು ನಾಮಿನೇಟ್ ಮಾಡುತ್ತಾರೆ.

ಶ್ರೀ ಎ. ಶಂಕರ ಆಳ್ವ :— ಈ ಆಕ್ಟ್ ಪ್ರಕಾರ ಸರಿಯಾಗಿ ನಡೆಯುವ ಸೊಸೈಟಿಗಳಿಗೆ ನಾಮಿನೇಟೆಡ್ ಮೆಂಬರುಗಳನ್ನು ಹಾಕುವ ಸಂದರ್ಭ ಬರುವುದಿಲ್ಲ.

ಶ್ರೀ ಬಾಪುಗೌಡ ರಾಯಪ್ಪ :— ಸರಿಯಾಗಿ ನಡೆಸಿಕೊಂಡು ಬರುತ್ತಿದ್ದಂಥ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುತ್ತಾರೆ, ಸರಿಯಾಗಿಲ್ಲದೆ ಇರುವ ಸೊಸೈಟಿಗಳನ್ನು ಅವರೇ ನಡೆಸಿಕೊಂಡು ಹೋಗುವುದಕ್ಕೆ ಬಿಡುತ್ತಾರೆ.

ಶ್ರೀ ಎ. ಶಂಕರ್ ಆಳ್ವ ;— ಸೆಕ್ಷನ್ 54ರ ಪ್ರಕಾರ ಯಾವ ಸೊಸೈಟಿಯು ಆಡಳಿತ ಸರಿಯಾಗಿ ನಡೆಯುವುದಿಲ್ಲ ಅಂತಹ ಸಂಸ್ಥೆಗಳನ್ನು ನಾವು ಸರ್ಕಾರದ

ವಶಕ್ಕೆ ತೆಗೆದು ಕೊಳ್ಳುತ್ತೇವೆ. ಆದನ್ನು ತೆಗೆದುಕೊಂಡು ಮತ್ತೆ ಅದು ಸೂಕ್ತ ವಾಗಿ ನಡೆಯುವ ಸ್ಥಿತಿಗೆ ಬಂದಾಗ ಪುನಃ ಅವರಿಗೆ ಬಿಟ್ಟುಕೊಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ ;— ನಾವು ದಿನಸಿತ್ಯ ಅಲ್ಲಿ ಅನ್ಯಾಯ ನಡೆಯುತ್ತಿದೆ ಎಂದು ಹೇಳಿದರೂ ಕೂಡ ಅಂಥ ಸಂಘ ಸಂಸ್ಥೆಗಳ ಬಗ್ಗೆ ಸರಕಾರ ದವರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ.

6-00 P.M.

ಶ್ರೀ ಎ. ಶಂಕರ್ ಆಳ್ವ :— ತಾವು ಹೇಳುವ ಸೊಸೈಟಿಯ ನೆನಪು ನನಗೆ ಉಂಟು. ಎಲೆಕ್ಷನ್ ಆಗುವವರೆಗೆ ಕಾಯುತ್ತಾ ಇದ್ದೇವೆ; ಕ್ರಮ ತೆಗೆದುಕೊಳ್ಳು ವುದಿಲ್ಲ ಎಂದಲ್ಲ.

ಶ್ರೀ ಟಿ. ಎಂ. ಮಂಜುನಾಥ :—ಎಲೆಕ್ಷನ್ ಆಗುವವರೆಗೆ ಏತಕ್ಕೆ ಕಾಯ ಬೇಕು ? ಕಾನೂನು ಇದೆ, ಆ ಸೊಸೈಟಿಯನ್ನು ಏತಕ್ಕೆ ಸೂಪರ್‌ಸೀಡ್ ಮಾಡಿಲ್ಲ? ತಾವು ತಿದ್ದುಪಡಿಯನ್ನು ತರತಕ್ಕ ಕಾಲದಲ್ಲಿ, ತಮ್ಮ ತಿದ್ದುಪಡಿ ನ್ಯಾಯವಾಗಿರ ಬೇಕು ಮತ್ತು ಪಕ್ಷಾತೀತವಾಗಿರಬೇಕು.

ಶ್ರೀ ಎ. ಶಂಕರ್ ಆಳ್ವ :— ಅನೇಕ ಸಂದರ್ಭಗಳಲ್ಲಿ, ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಬೇಕಾದರೆ ನಾವು ಅನೇಕ ವಿಷಯಗಳನ್ನು ಆಲೋಚನೆ ಮಾಡಬೇಕಾಗುತ್ತದೆ. ಕೆಲವು ಸೊಸೈಟಿಗಳಲ್ಲಿ ಎಲೆಕ್ಷನ್ ಆಗಿರುವುದಿಲ್ಲ, ಅಕೌಂಟ್ಸ್ ಸರಿಯಾಗಿರುವುದಿಲ್ಲ. ಅದನ್ನೆಲ್ಲಾ ನಾವು ಸರಿಪಡಿಸಬೇಕಾಗುತ್ತದೆ. ಅದಾದ ನಂತರ ಸಂಬಂಧಪಟ್ಟ ಆಫೀಸರ್ ಅನ್ನು ಟ್ರಾನ್ಸ್‌ಫರ್ ಮಾಡಬೇಕಾಗು ತ್ತದೆ, ಮತ್ತು ಸೊಸೈಟಿಯನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಯಾವ ಒಂದು ನಿದರ್ಶನ ಕೊಟ್ಟರೋ ಅದಕ್ಕೆ ಸಂಬಂಧಪಟ್ಟ ಮಾಹಿತಿ ಯನ್ನು ತರಿಸಿಕೊಂಡು ತನಿಖೆ ಮಾಡಿಸುತ್ತೇನೆ. ನಮ್ಮ ಆಫೀಸರ್ಸ್ ಅದರ ಬಗ್ಗೆ ತನಿಖೆ ನಡೆಸುತ್ತಾರೆ

ಎಲೆಕ್ಷನ್ ವಿಚಾರದಲ್ಲಿ ನಮ್ಮ ಮಿತ್ರರು ಕೆಲವು ವಿಷಯಗಳನ್ನು ಹೇಳಿದರು 108 (ಎ) ಪ್ರಕಾರ ರಿಸರ್ವ್ ಬ್ಯಾಂಕನವರು ಕೆಲವು ಸೊಸೈಟಿಗಳನ್ನು ತನಿಖೆ ಮಾಡಿ ಅವು ಸರಿಯಾಗಿ ಕೆಲಸ ಮಾಡದಿದ್ದರೆ ಸೂಪರ್‌ಸೀಡ್ ಮಾಡಬೇಕು ಎಂದರೆ ಮಾತ್ರ ನಾವು ಸರ್ವಸಾಮಾನ್ಯವಾಗಿ ಅವುಗಳನ್ನು ಸೂಪರ್‌ಸೀಡ್ ಮಾಡಬೇಕಾಗುತ್ತದೆ. 108 (ಎ) ನಲ್ಲಿ ಈ ರೀತಿ ಹೇಳಿದೆ. "No appeal or revision in certain cases:- Notwithstanding anything contained in

this Act, where with the previous sanction in writing or on the requisition of the Reserve Bank,—

(i) a co-operative bank has been ordered to be wound up; or

(ii) a scheme of amalgamation or reorganisation of a co-operative bank is given effect to; or

(iii) an order for the removal of the committee and the appointment of an Administrator in respect of a co-operative Bank, has been made, there shall be no appeal or revision against such order or action and the sanction or requisition of the Reserve Bank shall not be liable to be called in question in any court of law'. ಇಂಥ ಸಂದರ್ಭದಲ್ಲಿ ರಿಸರ್ವ ಬ್ಯಾಂಕನವರು ಕ್ರಮ ತೆಗದುಕೊಳ್ಳಬೇಕು ಎಂದು ಹೇಳುವಾಗ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಾಪೂಗೌಡ ರಾಯಪ್ಪ:—ಗುಲ್ಬರ್ಗ, ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಯ ಕೋ-ಅಪರೇಟೀವ್ ಬ್ಯಾಂಕ್‌ಗಳನ್ನು ಸೂಪರ್‌ಸೀಡ್ ಮಾಡುವ ಕಾಲಕ್ಕೆ ಹೇಗೆ ಮಾಡಿದ್ದಿರಿ?

ಶ್ರೀ ಎ. ಶಂಕರ್ ಅಳ್ವ:—ಕ್ಷಮಿಸಬೇಕು, ತಾವು ಹೇಳುವ ಬ್ಯಾಂಕಿನ ವಿಷಯ, ಹೈಕೋರ್ಟಿನಲ್ಲಿ ಉಂಟು ಅದರೆ ವಿಷಯ ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ನಾನು ಜವಾಬು ಕೊಡುವುದಕ್ಕೆ ತಯಾರು ಇದ್ದರೂ ಸಹಿತ, ವಿಷಯ ಸಬಜ್ಯುಡೀಸ್ ಆಗಿರುವುದರಿಂದ, ಅದನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ.

MR. DEPUTY SPEAKER:- Now the House will stand adjourned to meet tommorrow at 1 p. m.

(The House adjourned at Five minutes past Six of the clock to meet again at one of the clock on Tuesday, the 28th August 1973.)

ANNEXURE

THE MYSORE LIFTS BILL, 1973

(I. A. Bill No 24 of 73)

A Bill to provide for the regulation of the construction, maintenance and safe working of certain classes of lifts and all machinery and appartus pertaining thereto in the State of Mysore.

WHEREAS it is expedient to provide for the regulation of the construction, maintenance and safe working of certain classes of lifts and all machinery and apparatus pertaining thereto in the State of Mysore;

BE it enacted by the Mysore State Legislature in the Twenty-fourth Year of the Republic of India as follows :—

1. SHORT TITLE, EXTENT AND COMMENCEMENT.—(1) This Act may be called the Mysore Lifts Act, 1973.

(2) It extends to the whole of the State of Mysore

(3) It shall come into force on such date as the Government may by notification appoint.

2. DEFINITIONS.—In this Act, unless the context otherwise requires.—

(*a*) "Government" means the State Government ;

(*b*) "Inspector of Lifts" means on officer appointed as such by the Government :

(*c*) "licence" means a licence granted under Section 4 ;

(*d*) "lift" means a hoisting mechanism equipped with a car which moves in a substantially vertical direction, is worked by power and is designed to carry passengers or goods or both ;

(*e*) " lift car "-means the cage or car of a iift used whether for the conveyance of passangers or goods or both and includes the floor or platform car frame, sling and enclosing body work but shall not include a hoist or lift to which the Factories Act, 1948, applies ;

(*f*) "lift installation" includes the lift car, the lift way, the lift way enclosure and the operating mechanism of the lift and all ropes, cables, wires and plant, directly connected with the operation of the litt;

(*g*) " lift way " means the shaft in which the lift car travels;

(*h*) "lift way enclosure" includes and permanent substantial strucre surrounding or enclosing the lift way;

(*i*) "notification" means a notification published in the official Gazette;

(*j*) "power" means any form of energy which is not generated by human or animal agency: and

(*k*) "prescribed" means prescribed by rules made under this Act.

3. Permission to erect a lift.—Every owner of a place intending to instal a lift in such place after the commencement of this Act shall make an application to such officer as the Government may authorise in this behalf for permission to erect such lift. Such application shall be in writing and in such form as may be prescribed. Such application shall specify —

(*a*) the type of the lift;

(*b*) the rated maximum speed of the lift;

(*c*) the maker's or designer's rated capacity in weight;

(*d*) the maximum number of passengers in addition to the lift operator which the lift can carry ;

(*e*) the total weight of the lift car carrying the maximum load ;

(*f*) the weight of the counterweight ;

(*g*) the number, description, weight and size of the supporting cables ;

(*h*) the depth of the pit from the lowest part of the car when at the lowest floor ;

(*i*) such details of the construction of the overhead arrangement with the weight and sizes of the beams as may be prescribed ; and

(*j*) such other particulars as may be prescribed

On receipt of such application the officer authorised under this Section shall, after making such enquiry and requiring the applicant to furnish such information as may be necessary, forward the application with his remarks to the Government. The Government may thereupon either grant or refuse the permission. Such permission shall be valid only for a period of six months from the date on which it is granted. .

4. LICENCE TO USE A LIFT :— (1) Every owner of a place who is permitted to instal a lift under Section 3, shall, within one month after the completion of the erection of such lift deliver or send or cause to be delivered or sent to such officer as the Government may authorise in this behalf notice in writing of such completion and shall make an application to him for a licence for working the lift.

(2) An application for a licence made under sub-section (1) shall be in such form as may be prescribed.

(3) On receipt of such application such officer as may be authorised in this behalf by the Government, after making such enquiry as may be necessary, forward the application with his remarks to the Government. The Government may, thereupon, either grant or refuse the licence.

(4) A fee of rupees one hundred shall be paid along with such application.

(5) APPLICATION FOR LICENCE IN CASE OF EXISTING LIFTS :— (2) Notwithstanding anything contained in Sections 3 and 4 every owner of a place in which a lift has been installed before the date of the commencement of this Act, shall within two months from such date apply for a licence for the working of such lift.

(2) The provisions of sub-sections (2) to (4 of Section 4 shall, so far as may be, apply to such application

6. LIFT NOT TO BE OPERATED WITHOUT A LICENCE :-- Subject to such rules as may made in this behalf no lift shall be worked except under and in cenformity with the terms of the licence granted in respect of the same :

Provided that nothing in this Section shall apply to a lift installed at the date of the commencement of this Act, for a period of two months from such date or if an application for licence is made within that period in accordance with the provisions of Section 5, until such application is finally disposed of under the said Section.

7. ADDITIONS AND ALTERATIONS TO THE LIFT INSTALLATION :— No additions or alterations other than those required to be made under sub-section (2) of Section 8, shall be made to any lift installation except with the previous permission in writing of an officer authorised in this behalf by the Government.

8. RIGHT TO ENTER ANY BUILDING FOR INSPECTION OF LIFTS AND LIFT INSTALLATION :— (1) An officer authorised in this behalf by the Government may at any time after giving reasonable notice to the occupant enter upon any building in which a lift is installed or is being installed or in connection with which an application for a licence has been received, for the purpose of inspecting the lift or the lift installation or the site thereof.

(2) If on such inspection the officer is of the opinion that any lift in any building is in an unsafe condition, he may issue an order on the owner of the building or his agent appointed under sub-section (2) of Section 10 requiring such repairs or alterations to be made to such lift as he may deem necessary within the time specified therein and may also, if necessary, order the use of such lift to be discontinued until such repairs or alterations are made or such unsafe condition is removed. The owner or his agent, as the case may be, shall thereupon comply with the order within the period specified therein and shall forthwith report in writing to the officer of having so complied.

(3) Any person aggrieved by an order of the officer under sub-section (*2*) may, within thirty days from the date of such order appeal to the Appellate Authority appointed in this behalf by the Government.

(4) Notwithstanding any appeal made under sub-section (*3*), any order to discontinue the use of a lift made by the officer under sub-section (*2*) shall be complied with unless the Appellate Authority has reversed such order.

(5) The order made by the officer under sub-section (*2*), subject to an appeal to the Appellate Authority, and the decision of the Appellate Authority on the appeal, shall be final.

9. OWNER TO GIVE FACILITIES FOR INSPECTION.— The owner of a building in which a lift is installed or his agent appointed under sub-section (*2*) of Section 10 shall afford all reasonable facilities to the officer for inspecting a lift under Section 8 and whenever ordered to do so by the officer shall, at his own cost, procure at such inspection, the attendance of the person, if any, with whom he has entered into a contract for the erection or maintenance of the lift or a representative of such person who is competent to guide the officer in inspecting the lift.

10. REPORT OF ACCIDENTS.—(1) Where any accident occurs in the operation of any lift which results or was likely to result in injury to any person, the owner of the building in which the lift is working or if such owner has appointed an agent and has communicated his name to the Inspector of Lifts under sub-section (3), such agent shall, as soon as may be, after such accident give notice with full details of the accident to the Inspector of lifts and also to the Commissioner of Police of the City of Bangalore and elsewhere to the District Magistrate or such officer as the Government may by order specify and the lift installation shall not be interefered with in any way and the working of such lift shall not be resumed except with the written permission of the officer authorised in this behalf by the Government.

(2) For the purposes of sub-section (1), the owner of every building in which a lift has been installed may, and if such owner does not reside in such building shall, appoint an agent who shall be a resident in the town or village in which the building is situate to give notice of any accident occurring in the operation of the lift.

(3) The name of every agent appointed under sub-section (2) shall be communicated to the Inspector of lifts.

11. DELEGATION OF POWERS OF GOVERNMENT.—The Government may by order published in the official *Gazette* delegate any of the powers conferred on it by or under this Act (other than the power to make rules under Section 14) subject to such conditions as may be specified in the order to such officer as it thinks fit.

12. INSPECTION OF LIFTS.— Every lift shall be inspected at least once in three months by an officer authorised in this behalf by the Government. An annual fee of rupees fifty shall be charged for such inspection and such fee shall include the charges for the inspection of the motor.

13. RECOVERY OF FEES.— All sums payable as fees under this Act shall be recoverable as arrears of land revenue.

14. POWER TO MAKE RULES.— (1) The Government may after previous publication, by notification make rules to carry out the purposes of this Act.

(2) In particular and without prejudice to the generality of the foregoing provision such rules may be made for all or any of the following matters, namely :—

(a) specifications for lifts ;

(b) the manner in which erection plans of lifts shall be submitted ;

(c) the manner in which the lifts may be tested ;

(d) the form of application for the erection of a lift or a licence for working the same ;

(e) the terms and conditions subject to which and the form in which the licences may be granted for the working of a lift under Section 6 ;

(f) the manner in which and the terms subject to which the lifts shall be worked under Section 6 ;

(g) the manner in which notice of accidents shall be given and the from of such notice, and

(h) the form of notice to be given under Section 8

(3) Every rule made under this section shall be laid, as soon as may be, after it is made before each House of the State Legislature, while it is in session for a total period of thirty days which may be comprised in one session or in two or more successive sessions and if, before the expiry of the session immediately following the session, or successive sessions aforesaid both Houses agree in making any modification in the rule or

both Houses agree that the rule should not be made, the rule shall, from the date on which the modification ar annulment is notified by the Government in the official *Gazette*, have effect only in such modified form or be of no effect, as the case may be ; so however, that any such modification or annulment shall be without prejudice to the validity of anything previously done under such rule.

15. PENALTY.—Whoever contravenes any of the provisions of this Act; rules or conditions of a licence or a direction given by the Inspector of lifts under this Act or the rules shall, on conviction, be punishable with fine which may extend to one thousand rupees and in default to simple imprisonment which may extend to one month and in the case of a continuing contravention with an additional fine which may extend to fifty rupees for every day during which such contravention continues after conviction for the first such contravention.

16. OFFENCES BY COMPANIES.—(1) If a person committing an offence under this Act is a company, every person, who at the time the offence was committed was in charge of and was responsible to, the company for the conduct of the business of the company, as well as the company, shall be deemed to be guilty of the offence and shall be liable to be proceeded against and punished accordingly :

Provided that nothing contained in this sub-section shall render any such person liable to any punishment provided in this Act, if he proves that the offence was committed without his knowledge or that he exercised all due diligence to prevent the commission of such offence.

(2) Notwithstanding anything contained in sub-section (1) where an offence under this Act has been committed by company and it is proved that the offence has been committed with the consent or connivance of, or

is attributable to any neglect on the part of any director, manager, secretary or other officer of the company, such director, manager, secretary or other officer shall be liable to be proceeded against and punished accordingly.

EXPLANATION.—For the purpose of this section.—

(*a*) 'company' means a body corporate and includes a firm or other association of individuals and;

(*b*) 'director' in relation to a firm means a partner in the firm.

Ex. No. 290

17. SANCTION FOR PROSECUTION.—No prosecution for any offence punishable under this Act shall be instituted except with the previous sanction of the Government.

18. SERVICE OF NOTICES, ORDERS OR DOCUMENTS.—(1) Every notice, order or document by or under this Act required or authorised to be addressed to any person may be served by post or left.

(a) where a Government is the addressee, at the office of the agent appointed under sub-section (2) of section 10;

(b) where a local authority is the addressee, at the office of the local authority;

(c) where a company is the addressee, at the registered office of the company or in the event of the registered office of the company not being in India;

(d) where any other person is the addressee, at the usual or last known place of abode or business of the person.

(2) Every notice, order or document by or under this Act required or authorised to be addressed to the owner or

the agent of the owner, or the occupant of any premises shall be deemed to be properly addressed, if addressed by the description of the 'owner' or 'agent of the owner' or 'occupant' of the premises' (naming the premises) and may be served by delivering it or a true copy thereof, to some person on the premises or, if there is no person on the premises to whom the same can with reasonable deligence be delivered by affixing it on some conspicuous part of the premises.

19. PROTECTION FOR ACTS DONE IN GOOD FAITH.—No suit, prosecution or other legal proceedings shall be instituted against any officer for anything which is in good faith done or intended to be done by on number this Act.

20. SAVING.—Nothing contained in this Act shall affect the provisions of the Indian Electricity Act, 1910, or any rules made thereunder.

21. Repeal.—On the date on which this Act comes into force the Bombay Lifts Act, 1939 (Bombay Act 10 of 1939) as in force in the Bombay Area shall stand repealed.

Provided that Sections 8 and 24 of the Mysore General Clauses Act, 1899 shall be applicable as if the said enacement had been repealed and re-enacted by this Act.

STATEMENT OF OBJECTS AND REASONS

Consequent upon the construction of many multi-storeyed buildings with lifts, particularly in Bangalore City, the number of lifts working in the State is on the increase. A number of safety devices and safety precautions are necessary for operating the lifts in the interest of the safety of users. But they cannot be insisted upon in the absence of proper authority. The Bombay Lifts Act, 1939 is in force at present in the Bombay Area only. It is therefore proposed to enact a law on the line of the Bambay Act applicable throughout the State.

Hence this Bill.

FINANCIAL MEMORANDUM

It is proposed to appoint the Electrical Inspector to Government as Inspector of Lifts in addition to his own duties. Consequently no additional expenditure is likely to be involved as a result of the Bill being enacted into law. On the other hand Government is likely to realise a sum of rupees fifteen thousand every year by way of inspection charges on the assumption that there will be about three hundred lifts working in the State.

MEMORANDUM REGARDING DELEGATED LEGISLATION.

-O-

Under clause 11 of the Bill, power is conferred on the State Government to delegate to such officer as it thinks fit, its powers under the Bill other than the powers to make rules under clause 14, subject to such conditions as may be specified in the order to be published in, the official *Gazette*.

Under clause 14, power is conferred on the State Government to make rules after previous notification. Sub-clause (2) of clause 14 specifies the various matters in respect of which rules can be made by the State Government. Under sub-clause (3) of clause 14, rules made under the Act are required to be placed before the Houses of Legislature and are subject to modifications to be made by the Houses.

The proposed delegation of legislative power is of a normal character.

H. M. CHANNABASAPPA

WD 3—GBPC—550—22-4-.4.

(Sri. D. Devaraj Urs)

available and as regards category ( ), 344 Gazetted officers and 876 NGOs. have been allotted under the S. *R*. Act. All these officials can be presumed to be Mulki officials.

(*b*) Since Mulki rules were applicable for initial recruitment only, the question of any facilities being available to the allottees under the S. *R*. Act, does not arise.

SRI PRABHAKAR TELKAR :- In inviting attention to reply in (b), I wish to know what is the effect of that Supreme Court ruling over this and can any facilities be given to the Mulki persons there?

†SRI D. DEVARAJ URS :- The Supreme Court judgement has been examined carefully by the Law Department and the department has advised that the Mulki Rules, as were made applicable to erstwhile Hyderbad State, are not applicable to all the Districts that have come to us.

SRI PRABAKAR TELKAR :—At this stage can they get any facilities in recruitment?

SRI D. DEVARAJ URS :—As I stated, the Mulki *R*ules are not applicable. The question does not arise.

SRI M. S. KRISHNAN : - Is it not a fact that prior to States *R*eorganisation and at the time of the States *R*eorganisation, it was the understanding that all the facilities and other conditions which were applicable to them would be made applicable even after those officials come over to the new State and hence according to the Mulki *R*ules the facilities that were available to them should also be accorded to them in the new State?

---

‡Asterisks indicate that remarks or speeches have not been received by the member concerned.

SRI D. DEVARAJ URS.—Let us make two distinctions here. One thing is the advantages or facilities, whatever they be, that are visualised under the 1956 States Reorganisation Act. Ove and above this, there is the Mulki Rules. And subsequent to the States Reorganisation Act there was what was called Public Employment Recruitment (as to Resident) Act of 1957-a Central Act. So, this is the Act under which the Mulki Rules application is governed. So, according to that Act Section 2 was interpreted subsequently by the Supreme Court-I mean Section 2 of the 1957 Act which I just now mentioned. The Supreme Court judgement has specifically mentioned that the Mulki Rules as they existed in the erstwhile Hyderabad State are applicable only to the person in Telengana region and not to the Districts that have come over to the new State of Mysore or Karnataka in accordance with 1956 Act of States Re-organisation.

SRI N. B. SIRDESAI.—May I know whether the Government is aware that Mulki rules are applied in Maharashtra State particularly to those areas which are called Marathwada areas?

SRI D. DEVARAJ URS.—I am not aware of this

SRI D. B. KALMANKAR.—In view of the fact that Hyderabad Karnatak area is a backward area and since such arrangements are made in Marathwada and also Telengana, I want to know whether special facilities will be given to Hyderabad Karnatak area for its all round progress, as it is a backward area.

SRI D. DEVARAJ URS.—It cannot be done. Backward people are there througout the State.

RRI M. S. KRISHNAN.—Are there any representations from any of those officials, who were governed previously by Mulki Rules, to the Governments now, in the light of the Supreme Court decision?

SRI D. DEVARAJ URS.—The actual position is this. Many of those officers who came from erstwhile Hyderabad Districts have opted to the service Rules governing here. It appears that only one gentleman has applied for extending this concession and we have stated that it is not possible.

ಶ್ರೀ ಕೋಣಂದೂರು ಲಿಂಗಪ್ಪ : ಸ್ವಾಮಿ, ಮಲೇನಾಡಿನ ಪ್ರದೇಶಕ್ಕೆ ಈ ಬಗ್ಗೆ ಒಂದು ವಿಶೇಷವಾದ ಕಾನೂನು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಅಧ್ಯಕ್ಷರು : ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ

ROAD WORKS IN NORTH KANARA DISTRICT

61. SMT. RADHA BHAT (Ankola).—

Will the Minister for Public Works and Electricity be pleased to state :—

(a) the number of years within which the Haldur-Achave Road works in Ankola Taluk of North Kanara District will be completed ;

(b) the number of years within which Hulekal Dorangere Road repair works in Sirsi Taluk of the said District will be completed ;

(c) when the repair works of the road of Donagara-Halasagi *via*, Goli in Sirsi Taluk of the said District will be started ?

SRI H. M. CHANNABASAPPA.—(Minister for Public Works and Electricity)

(a) It depends upon the financial position

(b) The road from Hulekal to Kakkalli is under the control of Public Works Department. The soling work from 13/0 to 20/0 km. on Hulekal-Songimade road is in progress.

(c) This is not under the control of Public Works Department.

ಶ್ರೀಮತಿ ರಾಧಾಭಟ್ :— (ಅ) ಪ್ರಶ್ನೆಗೆ ಉತ್ತರವಾಗಿ ಇದು ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿದೆ ಎಂದು ಹೇಳಿದ್ದೀರಿ. ಆದರೆ ಇದು ಎಷ್ಟು ದಿವಸಕ್ಕೆ ಸುಧಾರಿಸುತ್ತದೆ? ಸುಧಾರಿಸಿದ ನಂತರ ಶ್ರೀಘ್ರದಲ್ಲೇ ಈ ಕೆಲಸವನ್ನು ಪೂರ್ಣಗೊಳಿಸುತ್ತೀರಾ? ಮತ್ತು ಹಲ್ದೂರು-ಅಚವೆ ರಸ್ತೆಯ ಕಾಮಗಾರಿ ಕೆಲಸ ಎಲ್ಲಿಯವರೆಗೆ ಬಂದಿದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ಹಲ್ದೂರು-ಅಚವೆ ರಸ್ತೆಯ ಕಾಮಗಾರಿ ಕೆಲಸ 4 ಮೈಲಿಯವರೆಗೆ ಮೆಟಲ್ ಮಾಡಿದ್ದಾರೆ. 3 ಮೈಲಿ ಸ್ಟೋನಿಂಗ್ ಅಂಡ್ ಮೆಟಲಿಂಗ್ ಕೆಲಸ ನಡೆಯುತ್ತಾ ಇದೆ. ಇನ್ನು 6 ಮೈಲಿ ಕೆಲಸ ತೆಗೆದುಕೊಳ್ಳುವುದಕ್ಕೆ ದುಡ್ಡಿನ ಅಭಾವದಿಂದ ಸದ್ಯಕ್ಕೆ ನಿಂತಿದೆ.

ಶ್ರೀಮತಿ ರಾಧಾಭಟ್ :— ಇದನ್ನು ಎಷ್ಟು ದಿನದಲ್ಲಿ ಸುಧಾರಿಸುತ್ತೀವೆಂದು ಹೇಳಲಿಲ್ಲಾ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ ;-- ಹಣಕಾಸಿನ ಪರಿಸ್ಥಿತಿ ಆಗಿಂದಾಗ್ಗೆ ಸುಧಾರಣೆ ಆದ ಹಾಗೆ ಹೆಚ್ಚು ಖರ್ಚು ಮಾಡುತ್ತೇವೆ. ಹಣಕಾಸಿನ ಪರಿಸ್ಥಿತಿ ಕಡಿಮೆ ಆದಾಗ ಕಡಿಮೆ ಖರ್ಚು ಮಾಡುತ್ತೇವೆ ಆದರೆ ಈ ಬಗ್ಗೆ ಇಷ್ಟೇ ದಿನದಲ್ಲಿ ಸುಧಾರಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ

ಶ್ರೀಮತಿ ರಾಧಾಭಟ್ :— (ಸಿ) ಪ್ರಶ್ನೆಗೆ ಉತ್ತರವಾಗಿ ಇದು ಲೋಕೋಪಯೋಗಿ ಇಲಾಖೆ ವಶದಲ್ಲಿಲ್ಲ ಎಂದು ಹೇಳಿದ್ದೀರಿ. ಇದನ್ನು ಶೀಘ್ರದಲ್ಲೇ ತೆಗೆದುಕೊಂಡು ಈ ರಸ್ತೆಯ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ಈ ರಸ್ತೆ ಸುಮಾರು $17\frac{1}{2}$ ಕಿಲೋಮೀಟರ್ ಇದೆ. ಇದು ಸಧ್ಯದಲ್ಲಿ ಪಿ. ಡಬ್ಲ್ಯು. ಡಿ. ರಸ್ತೆ ಆಗಿಲ್ಲ. ಇದನ್ನು ರಿಪೇರಿ ಮಾಡಬೇಕಾದರೆ 8-9 ಲಕ್ಷ್ ರೂಪಾಯಿ ಬೇಕಾಗುತ್ತದೆ. ಮತ್ತು ಇದನ್ನು ಪಿ. ಡಬ್ಲ್ಯು. ಡಿ. ರಸ್ತೆಗೆ ಸೇರಿಸಬೇಕಾದರೆ ಕೆಲವು ನಿಯಮಾವಳಿಗಳು ಇವೆ. ಆ ನಿಯಮಾವಳಿಗಳನ್ನು ಅನುಸರಿಸಿ ಪಿ. ಡಬ್ಲ್ಯು. ಡಿ. ರಸ್ತೆಗೆ ಸೇರಿಸಿಕೊಳ್ಳುವ ಕಾಲ ಬಂದಾಗ ಇದನ್ನೂ ಕೂಡ ಪರಿಶೀಲನೆ ಮಾಡುತ್ತೇನೆ.

ಶ್ರೀ. ಎಂ. ಹೆಚ್. ಜಯಪ್ರಕಾಶನಾರಾಯಣ್ :— ಸ್ವಾಮಿ, ಮಲೆನಾಡು ಪ್ರದೇಶದಲ್ಲಿ ರಸ್ತೆ ವ್ಯವಸ್ಥೆ ಬಹಳ ಹಿಂದುಳಿದಿದೆ. ಅದರಲ್ಲೂ ಶಿರಸಿ ತಾಲ್ಲೂಕಿನಲ್ಲಿ ಹುಲೇಕಲ್-ದೋರಣಗಿರಿ ರಸ್ತೆ ಎನ್ನುವುದನ್ನು 6 ವರ್ಷದಿಂದಲೂ ಕೂಡ ಒತ್ತಾಯ ಮಾಡುತ್ತಿದ್ದರೂ ಸಹ ಇನ್ನೂ ಪೂರ್ಣವಾಗಿಲ್ಲ. ಅದುದರಿಂದ ಇದಕ್ಕೆ ವಿಶೇಷ ರಿಯಾಯಿತಿ ಕೊಟ್ಟು ಈ ಕೆಲಸವನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :-- ದೇಶದಲ್ಲಿ ರಸ್ತೆಗಳ ಪ್ರಾಮುಖ್ಯತೆ ಹೆಚ್ಚಿಗೆ ಆಗಬೇಕು ಮತ್ತು ಅದರಲ್ಲೂ ಮಲೆನಾಡಿನಲ್ಲಿ ಹೆಚ್ಚು ಮಳೆಬೀಳತಕ್ಕ ಭಾಗದಲ್ಲಿ ರಸ್ತೆಗಳ ಮತ್ತು ಸೇತುವೆಗಳ ಕೆಲಸ ಹೆಚ್ಚಿಗೆ ಆಗಬೇಕು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದು ಕಷ್ಟ. ಈ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು, ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಕೆಲವು ನಿರ್ದಿಷ್ಟ ಕಾಲದೊಳಗೆ ಇವೆಲ್ಲವನ್ನೂ ಉತ್ತಮ ಪಡಿಸಬೇಕೆಂಬುದು ಸರ್ಕಾರದ ಆಶಯವಾಗಿದೆ.

ಶ್ರೀ ಎಂ. ಎಸ್ ಕೃಷ್ಣನ್ :— ಸ್ವಾಮಿ (ಸಿ) ಗೆ ಉತ್ತರವಾಗಿ ಇದು ಲೋಕೋಪಯೋಗಿ ಇಲಾಖೆ ವಶದಲ್ಲಿಲ್ಲ ಎಂದು ಹೇಳುತ್ತಿದ್ದೀರಿ. ಆದರೆ ಇದಕೆ ಒಂದು ವಿಶ್ಲೇಷಣೆಕೊಟ್ಟು ಆರ್ಥಿಕ ಪರಿಸ್ಥಿತಿ ಅನುಕೂಲವಾದಹಾಗೆಲ್ಲಾ ಅನು ಕೂಲವಾಗುತ್ತದೆ ಎಂದು ಹೇಳಿದ್ದೀರಿ. ಈರೀತಿ ಒಂದು ವಿಶ್ಲೇಷಣೆ ಕೊಟ್ಟಿರು ವುದರಿಂದ ಈಗ ತಾವು ತೆಗೆದುಕೊಂಡಿರುವ ತೀರ್ಮಾನದ ಪ್ರಕಾರ ಈಗಿನ ಎಕ್ಸಾನಮಿ ಆರ್ಡರ್‌ನಿಂದ ಯಾವ ಕಾಮಗಾರಿ ಕೆಲಸವಾಗಲಿ, ರಿಪೇರಿಯಾಗಲಿ ಆಗಕೂಡದು ಎನ್ನುವುದು ಅರ್ಥವಾದಂತಾಗುವುದಿಲ್ಲವೇ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ರಸ್ತೆ, ಕಾಮಗಾರಿ ಕೆಲಸಗಳು ಆಗ ಕೂಡದು ಎಂದು ತೀರ್ಮಾನ ತೆಗೆದುಕೊಂಡಿಲ್ಲ. ಇರತಕ್ಕ ದುಡ್ಡಿನಲ್ಲಿ ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು, ಯಾವುದಕ್ಕೆ ಕಡಿಮೆ ಪ್ರಾಮುಖ್ಯತೆ ಕೊಡಬೇಕು ಎನ್ನುವುದು ಅಷ್ಟೇ ಇರುವುದು.

KALASA—MAGUNDI—BALEHONNUR ROAD

65. SRI G. PUTTASWAMY (Mudigere).—

16. Will the the Minister for Public Works and Electricity be pleased to state :—

(a) whether it is a fact that on Kalasa—Magundi—Balehonnur road in Mudigere taluk pits have been formed due to recent rainfall ;

(b) if so, whether it has come to the notice of the Government that inconvenience has been caused to vehicular traffic on this road ;

(c) if so, when this road repair work will be under taken ?

SRI H. M. CHANNABASAPPA (Minister for Public Works and Electricity).

V-31 N73
N74-21-1-7
(B) 4898

(*a*) Yes

(*b*) Yes

(*c*) Consideration of this is dependent on availability of funds.

ಶ್ರೀ ಜಿ. ಪುಟ್ಟಸ್ವಾಮಿ : ಸ್ವಾಮಿ, ತಾವು (ಅ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ. ಈ ರಸ್ತೆ ರಿಪೇರಿ ಮಾಡಬೇಕು ಎಂದು ಯಾರಿಂದಲಾದರೂ ಮನವಿಗಳು ಬಂದಿವೆಯೋ?

ಶ್ರೀ ಹೆಚ್. ಎಂ ಚೆನ್ನಬಸಪ್ಪ: ಮನವಿ ತಮ್ಮಿಂದಲೂ ಬಂದಿದೆ ಮತ್ತು ಅನೇಕ ಜನರಿಂದಲೂ ಬಂದಿದೆ.

ಶ್ರೀ ಜಿ ಪುಟ್ಟಸ್ವಾಮಿ : ಸ್ವಾಮಿ, ಜೂನ್ ಅಖೈರ್‌ನಲ್ಲಿ ಮತ್ತು ಜುಲೈ ಮೊದಲ ವಾರದಲ್ಲಿ ಆದಂಥ ಮಳೆಯಿಂದಾಗಿ ಈ ರಸ್ತೆಗಳು ಕೊರಕಲು ಬಿದ್ದು ಬಸ್ಸುಗಳ ಸಂಚಾರಕ್ಕೆ ಮತ್ತು ಇನ್ನು ಇತರ ಸಂಚಾರಕ್ಕೆ ಅನಾನುಕೂಲವಾಗಿದೆ ಆದುದರಿಂದ ಈಗ ಹಣ ಎಷ್ಟು ಇದೆಯೋ ಅಷ್ಟೇ ಹಣದಲ್ಲಿ ಸರ್ಕಾರದವರು ಈ ರಸ್ತೆಗೆ ಪ್ರಾಮುಖ್ಯತೆ ಕೊಟ್ಟು ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಈ ರಸ್ತೆ ಪಿ ಡಬ್ಲ್ಯು. ಡಿ. ಗೆ ಸೇರಿದೆ. ಕ್ರಮಕ್ರಮವಾಗಿ ಇದರ ಕೆಲಸ ನಡೆಯುತ್ತಾ ಇದೆ. ಈ ಬಗ್ಗೆ ಹೆಚ್ಚು ವಿವರ ಹೇಳಬೇಕಾದರೆ ಈಗ 4 ಮೈಲಿ ಆಸ್ಫಾಲ್ಟ್ ಮಾಡಿದ್ದಾರೆ ಮತ್ತು 2 ಮೈಲಿ ಸಬ್‌ಗ್ರೇಡ್ ಇಂಪ್ರೂ ಆಗಿದೆ. ಉಳಿದುದನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ :—ಈಗ ಇದಕ್ಕೆ ಎಸ್ಟಿಮೇಟ್ ಎಷ್ಟು ಆಗಿದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಇದರ ರೀಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಮತ್ತು ಸಬ್‌ಗ್ರೇಡ್ ಮಾಡುವುದಕ್ಕೆ 1 ಲಕ್ಷ 20 ಸಾವಿರ ರೂಪಾಯಿ ಬೇಕಾಗುತ್ತದೆ ಮತ್ತು ಇದನ್ನು ಆಸ್ಫಾಲ್ಟ್ ಮಾಡುವುದಕ್ಕೆ 3 ಲಕ್ಷ 30 ಸಾವಿರ ರೂಪಾಯಿ ಬೇಕಾಗುತ್ತದೆ. ಒಟ್ಟು ಇದಕ್ಕೆ 5 ಲಕ್ಷ 50 ಸಾವಿರ ರೂಪಾಯಿ ಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ:— ಸ್ವಾಮಿ, ಮೂಡಿಗೆರೆ ತಾಲ್ಲೂಕು ಕಳಸ-ಮಾಗುಂಡಿ-ಬಾಳೆಹೊನ್ನೂರು ರಸ್ತೆ ಏನು ಇದೆ ಇವು ಇತ್ತೀಚಿನ ಮಳೆಯಿಂದಾಗಿ ಕೊರಕಲು ಬಿದ್ದು ಜನಗಳ ಸಂಚಾರಕ್ಕೆ ಉಪಯೋಗಕ್ಕೆ ಬಾರದೇ ಇರುವ ಹಾಗೆ ಇವೆ. ಆದುದರಿಂದ ಈ ರಸ್ತೆಯನ್ನು ತಕ್ಷಣವೇ ರಿಪೇರಿ ಮಾಡಿಸುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :— ಈ ರಸ್ತೆಯಲ್ಲಿ ಹಲವು ಕಲ್ವರ್ಟ್ಸ್ ಕಟ್ಟಬೇಕು ಕಟ್ಟಿದತಕ್ಕಂಥ ಕಲ್ವರ್ಟ್ಸ್ ಬಿದ್ದುಹೋದರೆ ರಿಪೇರಿ ಮಾಡುತ್ತಾರೆ. ಹೊಸದಾಗಿ ಮಾಡುವಂತೆ ಕೆಲಸವನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಹಾಕಿಕೊಂಡು ಮಾಡಬೇಕಾಗುತ್ತದೆ. ಇದು 15 ಮೈಲಿಯೂ ಕೂಡ ಪ್ರಾಮುಖ್ಯವಾದ ರಸ್ತೆ ಎಂದು ಸರ್ಕಾರ ಗಮನಿಸಿದೆ. ಅದಕ್ಕೋಸ್ಕರ ಈಗ 4-5 ಮೈಲಿ ಆಸ್ಫಾಲ್ಟ್ ಮಾಡಿದ್ದಾರೆ. 2 ಮೈಲಿ ಸಬ್‌ಗ್ರೇಡ್ ಇಂಪ್ರೂ ಆಗಿದೆ. ಉಳಿದುದನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಎಂ. ಬಿ. ರಾಮಸ್ವಾಮಿ : ಸ್ವಾಮಿ, (ಸಿ) ಗೆ ಉತ್ತರವಾಗಿ "Consideration of this is dependent on availability of funds" ಎಂದು ಹೇಳಿದ್ದೀರಿ. ಇದಕ್ಕೆ ಯಾವಾಗ ಫಂಡ್ಸ್ ಅವೈಲಬಿಲಿಟಿ ಆಗುತ್ತದೆ ? ಇದು ಪ್ರಾಮುಖ್ಯವಾದ ರಸ್ತೆ ಆದುದರಿಂದ ಇದನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ ? ಎಷ್ಟು ದಿವಸದಲ್ಲಿ ಈ ಕೆಲಸವನ್ನು ಮಾಡಿಸಿಕೊಡುತ್ತೀರಿ ? ತಾವು ಜನಗಳ ಅನುಕೂಲತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತೀರಾ ಅಥವಾ ಬರೀ ಅವೈಲಬಿಲಿಟಿ ಆಫ್ ಫಂಡ್ಸ್ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತೀರಾ ? ಜನಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹೇಳುವುದಾದರೆ ಈ ಕೆಲಸವನ್ನು ತೀವ್ರವಾಗಿ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಜನಗಳಿಗೆ ಅನುಕೂಲ ಮಾಡಿ ಕೊಡುವುದಕ್ಕೋಸ್ಕರವಾಗಿ ಸಮಗ್ರವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದನ್ನು ಒಂದು ಫೇಸ್ಡ್ ಪ್ರೋಗ್ರಾಮ್‌ನಲ್ಲಿ ಮಾಡಬೇಕಾಗುತ್ತದೆ. ಅಖಂಡ ಕರ್ನಾಟಕದಲ್ಲಿ ಯಾವುದಕ್ಕೆ ಮೊದಲು ಪ್ರಾಮುಖ್ಯತೆ ಕೊಡಬೇಕು, ಆಮೇಲೆ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಮತ್ತು ಯಾವ ವಿಧವಾದ ರೀತಿಯಲ್ಲಿ ಪ್ರಾಮುಖ್ಯತೆ ಕೊಡಬೇಕೆನ್ನುವುದೇ ಬುದ್ಧಿವಂತಿಕೆ ಎನ್ನುವುದು, ಅದನ್ನು ತಾವು ಕೂಡ ಒಪ್ಪಿಕೊಳ್ಳುತ್ತೀರಿ.

ಶ್ರೀ ಬಿ. ಪುಟ್ಟಸ್ವಾಮಿ : ಯಾವುದಕ್ಕೆ ಮೊದಲನೇ ಆದ್ಯತೆ ಕೊಡಬೇಕೋ ಅದಕ್ಕೆ ಕೊಟ್ಟು ಹಣದ ಸುಧಾರಣೆಯಾದ ತಕ್ಷಣ ಈ ಕೆಲಸಕಾರ್ಯಗಳಿಗೆ ಮೊದಲನೆ ಆದ್ಯತೆ ಕೊಡುತ್ತೀರಾ ಸ್ವಾಮಿ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಇದಕ್ಕಿಂತಲೂ ಮೊದಲು ಸಾಗರ ತಾಲ್ಲೋಕಿನಲ್ಲಿ ಮುಖ್ಯವಾದ ರಸ್ತೆ ಯಾವರೀತಿಯಾಗಿ ಇದೆ ಎನ್ನುವುದನ್ನು ಸರ್ಕಾರ ಮನಗಂಡಿದೆ. ಸಾಮಾನ್ಯವಾಗಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಾ ಜಿಲ್ಲೆಗಳಲ್ಲಿ ಹೆಚ್ಚು ಮಳೆ ಆಗುತ್ತದೆ ಆದ್ದರಿಂದ ಅಲ್ಲಿನ ಸೇತುವೆಗಳು ಮತ್ತು ರಸ್ತೆಗಳ ಬಗ್ಗೆ ಅವಶ್ಯಕವಾಗಿ ಮೊದಲು ಗಮನಕೊಟ್ಟು ನೋಡಿಕೊಳ್ಳಬೇಕೆಂಬುದು ಸರ್ಕಾರದ ಗಮನದಲ್ಲಿದೆ.

RESERVATION OF POSTS TO B. Cs ; S.Cs./S.Ts. BY PUBLIC UNDERTAKINGS

85. SRI K. SIDDAIAH (SANTHEMARAHALLY).—

17. Will the Chief Minister be pleased to state :—

The date on which the Government Order of September 1969 with regards to classification; rotation and reservation of posts to Backward Classes, Scheduled Castes and Scheduled Tribes was given effect to by the respective public undertakings (including Corporation and other autonomous bodies) in the State?

SRI D. DEVARAJ URS, (CHIEF MINISTER) :—The provisions of the Government Order No. GAD 42 SRR 69-1, dated 6th September 1969 are not applicable to appointments in public undertakings including Corporation and other autonomous bodies since the Government Order provides for reservation of posts only in State Civil Services required to be filled by direct recruitment, in favour of Scheduled Tribes, Scheduled Castes and other Backward Classes.

ಶ್ರೀ ಕೆ. ಸಿದ್ದಯ್ಯ : ಇದರಲ್ಲಿ ತಾವು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ 1969 ನೇ ಇಸವಿಯಲ್ಲಿ ಸರ್ಕಾರಿ ಆಜ್ಞೆ ಪ್ರಕಾರ ಅಪ್ಲೈ ಆಗುವುದಿಲ್ಲ ಎಂದು ಹೇಳಿದ್ದೀರಿ. ಪಬ್ಲಿಕ್ ಅಂಡರ್‌ಟೇಕಿಂಗ್ಸ್, ಜಾಯಿಂಟ್‌ಸ್ಟಾಕ್ ಕಂಪನಿಗಳು ಈ ಆಜ್ಞೆಯಲ್ಲಿ ಸೇರಿವೆಯೋ ಸ್ವಾಮಿ ? ಈ ಗೌರ್ನಮೆಂಟ್ ಆರ್ಡರ್ ಎಲ್ಲಡಕ್ಕೂ ಅಪ್ಲೈ ಆಗುವುದಿಲ್ಲವೇ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್ :—ಪಬ್ಲಿಕ್ ಅಂಡರ್ ಟೇಕಿಂಗ್ಸ್ ಅಂದರೆ ಯಾವುದರಲ್ಲಿ ಸರ್ಕಾರದ ಹಣ ಸುಮಾರು ಶೇಕಡ 50 ಪರ್ಸೆಂಟ್‌ಗಿಂತ ಹೆಚ್ಚು ಇದೆಯೋ ಅದು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಆಗುತ್ತದೆ.

ಶ್ರೀ ಕೆ. ಸಿದ್ದಯ್ಯ:—ತಾವು ಹೇಳಿದಹಾಗೆ ಶೇಕಡ 50 ಪರ್ಸೆಂಟ್‌ಗಿಂತ ಜಾಸ್ತಿಯಾಗಿ ಇದ್ದರೆ ಎಂ. ಎಸ್. ಆರ್. ಟಿ ಸಿ., ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ ಮತ್ತು ಇನ್ನು ಇತರೆ ಇಂತಹ ಫ್ಯಾಕ್ಟರಿಗಳಿಗೆ ಈ ಗೌರ್ನಮೆಂಟ್ ಆರ್ಡರ್ ಅಪ್ಲೈ ಆಗುವ ಪ್ರಕಾರ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗೆ ಅಪ್ಲೈ ಆಗುವುದಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್ :—ಈ ಗೌರ್ನಮೆಂಟ್ ಆರ್ಡರ್ ಮಾಡಿದ್ದು 1969ನೇ ಇಸವಿಯಲ್ಲಿ ಮತ್ತೆ 1971ರ ಸರ್ಕಾರದ ಆರ್ಡರ್‌ನಲ್ಲಿ ಇದನ್ನು ಅಪ್ಲೈ ಮಾಡಬೇಕು ಎಂದು ಎಲ್ಲರಿಗೂ ಆಜ್ಞೆ ಕಳುಹಿಸಿಕೊಟ್ಟಿದ್ದಾರೆ. ಕೆಲವು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನವರು ಈ ಆರ್ಡರನ್ನು ಜಾರಿಗೆ ಕೊಡುತ್ತಿದ್ದಾರೆ. ಇದೆ ರೀತಿ ಟೂರಿಸ್ಟ್ ಕಾರ್ಪೊರೇಷನ್, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಇನ್ನು ಇತರೆ ಕೋ ಅಪರೇಟೀವ್ ಸೊಸೈಟಿಗಳಲ್ಲಿ ಮತ್ತು ಇನ್ನು ಗೌರ್ನಮೆಂಟ್ ಇಂಡಸ್ಟ್ರೀಯಲ್ ಕನ್ಸರ್ನ್ಸ್ ಮೈಸೂರು ಶುಗರ್ ಕಂಪೆನಿ, ಎನ್.ಜಿ.ಎಫ್, ಐರನ್ ಅಂಡ್ ಸ್ಟೀಲ್ ಭದ್ರಾವತಿ, ಕರ್ನಾಟಕ ಯೂನಿವರ್‌ಸಿಟಿ, ಮೈಸೂರು ಯೂನಿವರ್ಸಿಟಿ ಮತ್ತು ಬೆಂಗಳೂರು ಯೂನಿವರ್‌ಸಿಟಿಗಳಲ್ಲಿ ಕೂಡಾ ಈ ಆರ್ಡರನ್ನು ಜಾರಿಗೆ ಕೊಡುತ್ತಾ ಇದ್ದಾರೆ.

ಶ್ರೀ ಕೆ. ಸಿದ್ದಯ್ಯ : —ಈ ಗೌರ್ನಮೆಂಟ್ ಆರ್ಡರ್‌ನಲ್ಲಿರುವ ಆಜ್ಞೆ ಎಲ್ಲಾ ಕಡೆಗೂ ಅಪ್ಲೈ ಆಗುವುದಿಲ್ಲವೇ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್ :—1969ನೇ ಇಸವಿಯಲ್ಲಿ ಆದದ್ದಲ್ಲದೆ ಮತ್ತೆ 1971ನೇ ಇಸವಿಯಲ್ಲಿ ಎಲ್ಲ ಕಡೆಗೂ ಅಪ್ಲೈ ಮಾಡಬೇಕೆಂದು ಆದೇಶ ಕೊಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಆರ್ಡರ್ 1971ರಲ್ಲಿ ಹೊರಡಿಸಿದ್ದಾರೆಂದು ಹೇಳಿದ್ದೀರಿ. ಈ ಆರ್ಡರ್ ಎಷ್ಟು ದೂರ ಜಾರಿಗೆ ಬಂದಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲವೇ ಸ್ವಾಮಿ? ಎಷ್ಟು ಜಾರಿಗೆ ಬಂದಿದೆ ಅಥವಾ ಬರದೆ ಇದ್ದರೆ ಏನು ಮಾಡುತ್ತೀರಿ ಎಂದು ತಿಳಿಸುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್. ಆ ಆರ್ಡರ್‌ರನ್ನು ಜಾರಿಗೆ ಕೊಟ್ಟಿಲ್ಲವೆಂದು ನನ್ನ ಗಮನಕ್ಕೆ ಬಂದಿಲ್ಲ. ಆ ರೀತಿ ಎಲ್ಲಿ ಜಾರಿಗೆ ಕೊಟ್ಟಿಲ್ಲವೆಂದು ಕೆಲವು ನಿದರ್ಶನಗಳನ್ನೇನಾದರೂ ಹೇಳಿದರೆ ಅದರ ಬಗ್ಗೆ ಸರ್ಕಾರ ಜಾರಿಗೆ ಕೊಡುವಂತೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ — ಎಲ್ಲಿ ಶೇಕಡ 50 ಪರ್ಸೆಂಟ್ ಸರ್ಕಾರದ ಹಣ ಇರುತ್ತದೆಯೋ ಅಂತಹ ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳಿಗೂ ಅಪ್ಲೈ ಮಾಡಬೇಕೆಂದು 1971ನೇ ಇಸವಿಯ ಆರ್ಡರ್‌ನಲ್ಲಿ ತಿಳಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಯಾವ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲೂ ಕೂಡ ಆ ಆರ್ಡರ್‌ರನ್ನು ಇಂಪ್ಲಿಮೆಂಟ್ ಮಾಡಿಲ್ಲ. ಆ ರೀತಿ ಮಾಡದೆ ಇರುವವರ ಮೇಲೆ ಕ್ರಮ ತೆಗೆದುಕೊಂಡು ಆ ಆರ್ಡರ್ ಇಂಪ್ಲಿಮೆಂಟ್ ಮಾಡುವುದಕ್ಕೆ ಸ್ಟ್ರಿಕ್ಟ್ ಆರ್ಡರ್ ಮಾಡಿ ಪುನಃ ಜಾರಿಗೆ ಕೊಡುತ್ತೀರಾ ಸ್ವಾಮಿ? The order is only on paper and it is not implemented. That is my view.

(No answer)

ಶ್ರೀ ಕಾಗೋಡು ತಿಮ್ಮಪ್ಪ.—ಈ 1971ನೇ ಇಸವಿಯ ಆರ್ಡರನ್ನು ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರು ಮತ್ತು ಭದ್ರಾವತಿ ಉಕ್ಕಿನ ಕಾರ್ಖಾನೆಯವರು ಪರಿಪಾಲನೆ ಮಾಡಿಲ್ಲ ಎಂದು ತಮಗೆ ದೂರು ಬಂದಿಲ್ಲವೇ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

SRI D. DEVARAJ URS.—I have just now said that I will call for a report from all these industries.

ಶ್ರೀ ಕೆ. ಸಿದ್ದಯ್ಯ.—1969ನೇ ಇಸವಿಯಲ್ಲಿ ಆದ ಗೌವರ್ನಮೆಂಟ್ ಆರ್ಡರ್‌ನಲ್ಲಿ ಕೆಲವು ಬದಲಾವಣೆಗಳು 1971ನೇ ಇಸವಿಯಲ್ಲಿ ಆಗಿವೆ. 1971ನೇ ಇಸವಿಯಲ್ಲಿ ಒಂದು ವೇಳೆ ಆಯಾಯ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಅವರು ಇವರಿಗೆ ಪ್ರಾತಿನಿಧ್ಯ ಕೊಡದೆ ಇದ್ದ ಪಕ್ಷದಲ್ಲಿ ಅದನ್ನು ಯಾವಾಗ ಜಾರಿಗಿ ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ?

ಶ್ರೀ ಡಿ. ದೇವರಾಜ್ ಅರಸ್.—ಅದರ ಬಗ್ಗೆ ಒಂದು ರಿಪೋರ್ಟ್ ತರಿಸುತ್ತೇನೆ ಎಂದು ಹೇಳಿದ ಮೇಲೆ ಮತ್ತೆ ಇದರ ಮೇಲೆ ನಾನು ಏನು ಹೇಳುವುದಕ್ಕೂ ಬರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಯಾವು ಯಾವುದು ಇದೆ ಅದರಲ್ಲಿ ಸೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಸೆಡ್ಯೂಲ್ಡ್ ಟ್ರೈಬ್ಸ್ ಜನಾಂಗದವರಿಗೆ ಕೊಡಬೇಕಾದಂತಹ 18 ಪರ್ಸೆಂಟ್ ಪ್ರಾತಿನಿಧ್ಯವನ್ನು ಯಾವ ಯಾವ ಸಂಸ್ಥೆಗಳಲ್ಲಿ ಎಷ್ಟೆಷ್ಟು ಪರ್ಸೆಂಟ್ ಕೊಟ್ಟಿದ್ದಾರೆಂದು ಹೇಳುತ್ತೀರಾ ಸ್ವಾಮಿ ?

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ ಆಗಿರುವುದರಿಂದ ಇದನ್ನು ಚರ್ಚೆ ಮಾಡಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್.—ನಾನು ಹೇಳುವುದು ಇಷ್ಟೆ. ರಿಪೋರ್ಟ್ ತರಿಸಿ ಅವರಿಗೆ ಕೊಟ್ಟಮೇಲೆ ಮಾನ್ಯ ಅಧ್ಯಕ್ಷರು ಕಾಲಿಂಗ್ ಅಟೆನ್‌ಷನ್ ನೋಟೀಸು ಎಂದು ಟ್ರೀಟ್ ಮಾಡಬೇಕೋ ಅಥವಾ ಯಾವ ರೀತಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಕೊಡಬೇಕೋ ಆ ರೀತಿ ಕೊಡಲಿ.

AMOUNT PROVIDED AND SPENT BY THE SAGAR PUBLIC WORKS DEPARTMENT SUB-DIVISION

124. SRI KAGODU THIMAPPA (Sagar).—
Will the Minister for Public Works and Electricity be pleased to state :—

(*a*) the total mileage of R. C Road sanctioned in each taluk of Sagar Division during 1972-73 ;

(*b*) the amount provided in respect of R. C. Road in each of the taluks during 1972-73 and the amount spent in each of taluks up to 30th of March ;

(*c*) the amount provided in respect of irrigation under different heads in each of the taluks of Sagar Division during 1972-73 and amount spent in each of the taluks within 30th of March ;

(*d*) whether it has come to the notice of the Government that the amount provided in some of the Taluks has not been fully spent; if so, the reason therefor;

SRI H. M. CHANNABASAPPA.—(Minister for Public works and Electricity).

(*a*)

Taluks	Roads (In Kilometers)
Sagar	88-00
Hosanagar	10-60
Soraba	92-00
Shikaripura	114-80
	376-40

(*b*)

	Taluks	Amount sanctioned during 1972-73	Amount spent during 1972-73
1	Sagar	2,20,000	3,35,049
2	Hosanagar	2,20;000	2,32,578
3	Soraba	1,50,000	1,82,073
4	Shikaripura	1,50;000	2,49,961
	Total	7,30,000	9,99,661

(*c*) The amount is not distributed talukwise. The details of the amount provided and amountspent in respect of Minor Irrigation Works during 1972-73 in Public Works Department, Sub-Divisions of Sagar Division are given in the statement placed on the Table of the House.

(*d*) Yes. Due to non-supply of cement and hume pipes in time the amount in Sagar Division only could not be spent fully.

---

*Copies placed in the Mysore Legislative Library *vide* Nos. 5 dated 28-8-1973.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಈಗ ಉತ್ತರದಲ್ಲಿ ಅದಕ್ಕೆ ಬೇಕಾದ ಸಿಮೆಂಟು ಪೈಪುಗಳು ಮತ್ತು ಇನ್ನು ಇತರೆ ಸೌಲಭ್ಯಗಳು ಕಾಲಕ್ಕೆ ಸರಿಯಾಗಿ ಸರಬರಾಜಾಗದೆ ಇದ್ದುದರಿಂದ ಸಾಗರ ಡಿವಿಜನ್‌ನಲ್ಲಿ ಮಾತ್ರ ಪೂರ್ತಾ ಹಣ ಖರ್ಚು ಮಾಡಲಾಗಲಿಲ್ಲವೆಂದು ಹೇಳಿದ್ದೀರಿ. ಆದರೆ ಬೇರೆ ಡಿವಿಜನ್‌ಗಳಿಗೆ ಪೂರ್ತಾ ಹಣ ಖರ್ಚಾಗುವಂತೆ ಕೆಲಸ ಕಾರ್ಯಗಳ್ನು ಮಾಡಿದ್ದೀರಲ್ಲಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಗೊತ್ತು. ನಾವು ಕೆಲಸ ಮಾಡಬೇಕಾದ ಸಂದರ್ಭದಲ್ಲಿ ಅಲ್ಲಿಗೆ ಬೇಕಾದಂತಹ ಪದಾರ್ಥಗಳು ದೊರಕದೆ ಇರುವುದರಿಂದ ಅಲ್ಲಿನ ಕೆಲಸಕಾರ್ಯಗಳು ನಿಧಾನವಾಗಿವೆ. ಕೆಲವು ಕಡೆ ಪೈಪಿನ ಕೆಲಸ ಇರುತ್ತವೆ, ಇನ್ನು ಕೆಲವು ಕಡೆ ಮಣ್ಣಿನ ಕೆಲಸವಿರುತ್ತದೆ ಇನ್ನು ಕೆಲವು ಕಡೆ ಕೋಡಿ ಕೆಲಸವಿರುತ್ತದೆ ಇನ್ನು ನಾನಾ ತರಹೆ ಕೆಲಸಗಳು ಇರುತ್ತವೆ. ನಿಮ್ಮ ತಾಲ್ಲೋಕಿನಲ್ಲಿ ಇರುವ ಕೆಲಸಕ್ಕೆ ಬೇಕಾಗುವ ಪದಾರ್ಥಗಳು ಸಿಗದೆ ಇದ್ದುದರಿಂದ ಪೂರ್ತಾ ಹಣ ಖರ್ಚು ಮಾಡಲಾಗಲಿಲ್ಲ. ಹಾಗಿರುವಾಗ ಏತಕ್ಕೆ ಮಾಡಲಿಲ್ಲವೆಂದು ಕೇಳಿದರೆ ಕಷ್ಟವಾಗುತ್ತದೆ.

1-30 P. M.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, 44ರ ಐ.ಎನ್.ಇ.ಡಿ. ಗ್ರಾಂಟಿನಿಂದ ಸಾಗರ್ ಡಿವಿಷನ್‌ಗೆ ಕೊಟ್ಟಿರತಕ್ಕ 1,70,000, ರೂಪಾಯಿಗಳಲ್ಲಿ ಕೇವಲ 90,497 ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದೀರಿ. ಆ ಕೆಲಸವೂ ಕೂಡ 44 ಕೆರೆಗಳನ್ನು ರಿಪೇರಿ ಮಾಡತಕ್ಕ ಕೆಲಸ. ಕೆರೆಗಳ ರಿಪೇರಿಗೆ ಅಷ್ಟೊಂದು ಹಣವನ್ನು ಖರ್ಚುಮಾಡತಕ್ಕ ಅಗತ್ಯ ಇರಲಿಲ್ಲ ಎಂದು ಕಾಣುತ್ತದೆ. ಕೆರೆಗಳ ರಿಪೇರಿಗೆ ಹ್ಯೂಂ ಪೈಪುಗಳ ಅಗತ್ಯ ಏನು ಇರಲಿಲ್ಲ ಅಲ್ಲವೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಕೆರೆಗಳ ರಿಪೇರಿಯ ಸಮಗ್ರ ವಿವರಣೆಯನ್ನು ತಾವು ಮರೆತಂತೆ ಕಾಣುತ್ತದೆ. ತೂಬುಗಳ ರಿಪೇರಿ ಇರುತ್ತದೆ, ಕಾಲುವೆಗಳ ರಿಪೇರಿ ಇರುತ್ತದೆ, ಇಂಥ ಕೆಲಸಗಳು ಎಲ್ಲವೂ ರಿಪೇರಿಯಲ್ಲಿ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ 1972-73ನೇ ಸಾಲಿನಲ್ಲಿ 376 ಕಿ.ಮಿ. ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಈಗ ಮಳೆಗಾಲದಲ್ಲಿ, ತಾವು ಸಕಾಲದಲ್ಲಿ ಕಲ್‌ವರ್ಟ್ ಮಾಡದೆ ಹೋಗಿದ್ದರಿಂದ ರಸ್ತೆಗೆ ಹಾಕಿದ ಮಣ್ಣು ಕೊಚ್ಚಿಕೊಂಡು ಹೋಗಿದೆ. ಇದನ್ನು ತಾವು ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ರಸ್ತೆಯ ಕೆಲಸದಲ್ಲಿ ಮೊದಲನೆಯ ಸ್ಟೇಜ್, ಎರಡನೆಯ ಸ್ಟೇಜ್, ಮತ್ತು ಮೂರನೆಯ ಸ್ಟೇಜ್ ಎಂದು ಮೂರು ಸ್ಟೇಜಿನಲ್ಲಿ ಕೆಲಸ ಆಗುತ್ತದೆ, ಈಗ ಸಾಗರ ಡಿವಿಷನ್‌ಗೆ ಎರಡು ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿದ್ದು ಮೂರುವರೆ ಲಕ್ಷ ರೂಪಾಯಿಗಳು ಖರ್ಚಾಗಿದೆ. ಏಕೆ ಜಾಸ್ತಿ ಖರ್ಚು ಮಾಡಿದಿರಿ ಎಂದು ತಾವು ಪ್ರಶ್ನೆ ಕೇಳಲಿಲ್ಲ ಎಂದು ನನಗೆ ಆಶ್ಚರ್ಯವಾಗುತ್ತದೆ. ಮೂರು ವರ್ಷದಲ್ಲಿ ಈ ಪ್ರೋಗ್ರಾಂ ಅನ್ನು ಪೂರೈಸಬೇಕು ಎಂದು ಮಾಡಿದ್ದೇವೆ, 376 ಕಿ.ಮೀ ರಸ್ತೆಯನ್ನು ಮೂರು ವರ್ಷದಲ್ಲಿ ಮಾಡಿದರೆ, ವರ್ಷಕ್ಕೆ 120 ಕಿ ಮೀ. ಆಗುತ್ತದೆ, ಅದಕ್ಕೆ ಬದಲು 192 ಕಿ ಮೀ. ಮಾಡಿದ್ದೇವೆ. ಒಂದು ಗ್ರೇಡ್ ಹೆಚ್ಚು ಕೆಲಸವನ್ನು ನಿಮ್ಮ ಡಿವಿಷನ್‌ಗೆ ಮಾಡಿದ್ದೇವೆ, ಇದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್ —ಸಾಗರ ಡಿವಿಷನ್‌ನಲ್ಲಿ ಹೆಚ್ಚು ಕಡಿಮೆ ಎಲ್ಲಾ ತಾಲ್ಲೂಕಿನಲ್ಲಿ ಮಳೆಗಾಲ ಪ್ರಾರಂಭವಾಗುವ ಮೊದಲು ಬರೀ ಅರ್ತ ವರ್ಕ ಮಾಡಿಬಿಟ್ಟು ಜಲ್ಲಿ ಕಲೆಕ್ಷನ್ ಮಾಡದೆ ಹಾಗೆ ಇಟ್ಟು ಬಿಡುತ್ತಾರೆ. ಮೂರು ತಿಂಗಳಲ್ಲಿ ಮಳೆಯ ದೆಸೆಯಿಂದ ಅದು ಕೊಚ್ಚಿಕೊಂಡು ಹೋಗುತ್ತದೆ.

ಶ್ರೀ ಹೆಚ್.ಎಂ. ಚೆನ್ನಬಸಪ್ಪ.—ತಾವು ಹೇಳತಕ್ಕಂಥಾದ್ದು ನನಗೆ ಅರ್ಥ ವಾಗುತ್ತದೆ. ಮೊದಲು ಮಣ್ಣು ಕೆಲಸ ಆಗಬೇಕು, ಹಾಕಿದ ಮಣ್ಣು ಚೆನ್ನಾಗಿ ಕೂತುಕೊಳ ಬೇಕು, ಕೂತುಕೊಳ್ಳದೆ ಇದ್ದಾಗ ಅದರ ಮೇಲೆ ಜಲ್ಲಿ ಹಾಕಬಾರದು. ಯಾವಾಗಲೂ ಮಳೆ ಬಂದಾಗ ಎರಡು ತರಹ ಕೆಲಸಗಳು ಆಗುತ್ತದೆ. ಹೆಚ್ಚು ಮಳೆ ಬಂದಾಗ, ರಸ್ತೆಯಲ್ಲಿ ಹಾಕಿದ ಮಣ್ಣು ಕೊಚ್ಚಿ ಹೋಗತಕ್ಕದ್ದು ಉಂಟು. ಮಣ್ಣು ಇರತಕ್ಕ ಕಡೆ, ಜೆಲ್ಲಿಯನ್ನು ಹಾಕುವುದು ಉಂಟು. ಮಣ್ಣು ಹಾಕಿದ ಮೇಲೆ ತಕ್ಷಣ ಕಲ್ಲು ಹಾಕಿದರೆ, ಮಣ್ಣು ಕಲ್ಲು ಎರಡು ಹೊರಟು ಹೋಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ :—ಆರ್. ಸಿ. ರಸ್ತೆಗಳನ್ನು, ಮತ್ತು ಅವುಗಳ ರಿಪೇರಿಯ ಕೆಲಸವನ್ನು ಪಿ. ಡಬ್ಲ್ಯು ಡಿ. ಯವರು ತೆಗದು ಕೊಳ್ಳುವುದಕ್ಕೆ ನಿರ್ಧಾರ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ :—ನಾನು ಈ ಸಭೆಯಲ್ಲಿ ಒಂದು ಭರವಸೆಯನ್ನು ಕೊಟ್ಟೆ. ಏನೆಂದರೆ, ಈ ರಸ್ತೆಗಳ ಮೇಲ್ವಿಚಾರಣೆ ಮಾಡುವುದಕ್ಕೆ ನಾವು ಒಂದು ಕಮಿಟಿಯನ್ನು ಏರ್ಪಾಡು ಮಾಡುತ್ತೇವೆ, ಕಮಿಟಿಯವರು ಮೀಟಿಂಗ್ ನಡೆಸಿ, 30 ದಿವಸದಲ್ಲಿ ಅವರು ಒಂದು ರಿಪೋರ್ಟು ಕೊಡುತ್ತಾರೆ, ಆ ರಿಪೋರ್ಟು ಬಂದಮೇಲೆ ಆಯಾ ರಸ್ತೆಗಳ ಮುಂದಿನ ಭವಿಷ್ಯ ಯಾವ ಯಾವ ರೀತಿ ನಿರ್ಧಾರ ಆಗಬೇಕು ಎನ್ನುವುದನ್ನು ಯೋಚನೆ ಮಾಡುತ್ತೇವೆ ಎಂದು.

ಶ್ರೀ ಕಾಗೋಡು ತಿಮ್ಮಪ್ಪ :—1973-74ನೇ ಸಾಲಿನಲ್ಲಿ ಸಾಗರ ಡಿವಿಷನ್ ಗೋಸ್ಕರ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೀರಿ, ಎಷ್ಟೆಷ್ಟು ಹಣವನ್ನು ಯಾವ, ಯಾವ ಬಾಬಿಗೆ ಎಂದು ವಿಂಗಡಿಸಿದ್ದೀರಿ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ತಾವು ಇದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದ್ದರೆ, ನಾನು ನಿರ್ದಾಕ್ಷಿಣ್ಯವಾಗಿ ಉತ್ತರವನ್ನು ಕೊಟ್ಟು ಬಿಡುತ್ತಿದ್ದೆ.

ಶ್ರೀ ಎಚ್. ಎಸ್ ಸಿದ್ದಪ್ಪ :—ರೂರಲ್ ಕಮ್ಯುನಿಕೇಷನ್ ರೋಡ್ಸ್ ಅನ್ನು ಪಿ. ಡಬ್ಲ್ಯೂ. ಡಿ. ಗ ತೆಗೆದುಕೊಳ್ಳುವುದಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆಂದು ಹೇಳಿದಿರಿ, ಆ ಕಮಿಟಿಯವರು ಬೆಂಗಳೂರಿನಲ್ಲಿ ಕೂತು ಯಾವ ಯಾವ ರಸ್ತೆಯನ್ನು ತೆಗೆದುಕೊಳ್ಳಬೇಕು ಎಂದು ನಿರ್ಧಾರ ಮಾಡುತ್ತಾರೋ ಅಥವಾ ರಸ್ತೆಗಳನ್ನು ಸುತ್ತಿಕೊಂಡು ಬಂದು ನಿರ್ಧಾರ ಮಾಡುತ್ತಾರೋ ;

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ರಸ್ತೆಗಳನ್ನು ಪಿ. ಡಬ್ಲ್ಯೂ. ಡಿ. ಗೆ ತೆಗೆದುಕೊಳ್ಳಬೇಕು ಎಂದು ಕಮಿಟಿಯನ್ನು ನಾವು ಮಾಡಿಲ್ಲ. ರೂರಲ್ ಕಮ್ಯೂನಿಕೇಷನ್ ಪ್ರೋಗ್ರಾಂನಲ್ಲಿ ಯಾವ ಯಾವ ರಸ್ತೆಗಳು ಪ್ರಾಮುಖ್ಯವಾಗಿವೆ, ಯಾವ ಯಾವ ರಸ್ತೆಗಳು ಅಪ್ರಾಮುಖ್ಯವಾಗಿವೆ, ಯಾವ ಯಾವ ರಸ್ತೆಗಳು ಒಂದು, ಎರಡು ಮೂರನೆಯ ದರ್ಜೆಯ ರಸ್ತೆಗಳು, ಪಿ. ಡಬ್ಲ್ಯೂ. ಡಿ. ಯವರು ಯಾವ ಯಾವ ರಸ್ತೆಯನ್ನು ಮೇಂಟೇನ್ ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡುವುದಕ್ಕೋಸ್ಕರ ಕಮಿಟಿಯನ್ನು ಮಾಡಿದ್ದೇವೆ. ಕೆಲವು ಕಡೆ 10 ಮೈಲಿಯ ರಸ್ತೆಗಳು ಇರುತ್ತವೆ, ಕೆಲವು ಕಡೆ ನಾಲ್ಕು ಹಳ್ಳಿಗಳು ಸೇರುವಂಥ ರಸ್ತೆಗಳು ಇರುತ್ತವೆ, ಈ ರಸ್ತೆಗಳಲ್ಲಿ ತಾಲ್ಲೂಕು ಬೋರ್ಡಿನವರು ಯಾವುದನ್ನು ಮಾಡಬೇಕು, ಸರ್ಕಾರ ಯಾವುದನ್ನು ಮಾಡಬೇಕು, ಎನ್ನುವ ಬಗ್ಗೆ ಒಂದು ಕ್ವಾಲಿಫಿಕೇಷನ್ ಅನ್ನು ಫಿಕ್ಸ್ ಮಾಡುತ್ತಾರೆ. ಆದಕ್ಕೆ ಅನುಗುಣವಾಗಿ ರಸ್ತೆಗಳನ್ನು ನಾವು ತೂಕ ಮಾಡಿ ಯಾವ ರಸ್ತೆಯನ್ನು ನಾವು ತೆಗೆದುಕೊಳ್ಳಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ.

AUTOMATIC FLOOD GATE FOR PREVENTION OF FLOOD

285. SRI S. M. SHEERANALY CHANDRASHEKHAR (Hosanagar) :—Will the Minister for Public Works and Electricity be pleased to state :—

(*a*) whether the Government is aware that one Sri H. R. Somasundara, Junior Engineer, P. W. D. resident of Sira, Tumkur District now working at Major Investigation Sub-division at Shimoga has designed a new kind

of Automatic flood gate for prevention of flood damages ;

(*b*) whether the Government is aware that the domonstration of the above said invention was witnessed by the then Chief Minister on 7th June 1966 at Gandhi Memorial hall, Chanpatna as per news item published on page 3 column 5 of the '(Indian Express)' dated 16th June 1966 and an assurance was given by the Chief Minister that he will give encouragement by adopting his invention in all dams ;

(*c*) whether the Government is aware that the said invention was given recognition by the Union Government and published in its Gazette dated July 27, 1963 :

(*d*) if so, the reason for not utilising his services properly ?

SRI H. M. CHANNABASAPPA.—(Minister for Public Works and Electricity).

(*a*) Yes.

(*b*) Government are not aware of this

(*c*) Government are not aware of this

(*d*) It is not desirable to depend on automatic arrangements particularly in case of a storage reservoir where any failure of the automatic arrangement will result in great disaster and that there is operational difficulties and attendant problems.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್ :—ನನ್ನ (ಆ) ಮತ್ತು (ಈ) ಪ್ರಶ್ನೆಗೆ 'ಈ ವಿಷಯವು ಸರ್ಕಾರದವರಿಗೆ ಗೊತ್ತಿಲ್ಲ.'' ಎಂದು ಹೇಳಿದ್ದೀರಿ, ಇದನ್ನು ಅಧಿಕಾರ ವರ್ಗದವರು ತಿಳಿದುಕೊಳ್ಳುವುದಕ್ಕೂ ಪ್ರಯತ್ನ ಮಾಡಲಿಲ್ಲವೇ ಅಥವಾ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎಚ್. ಎಂ ಚೆನ್ನಬಸಪ್ಪ.—1966ನೇ ಇಸವಿಯ ಇಂಡಿಯನ್ ಎಕ್ಸ್‌ಪ್ರೆಸ್ ಅನ್ನು ಹುಡುಕಿಕೊಂಡು ಹೋಗುವುದು ಸ್ವಲ್ಪ ಕಷ್ಟವಾಗುತ್ತದೆ ನಮ್ಮ

(ಶ್ರೀ ಹೆಚ್ ಎಂ ಚನ್ನಬಸಪ್ಪ)

ಸರ್ಕಾರಕ್ಕೆ ಅಧಿಕೃತವಾಗಿ ಇದರ ಬಗ್ಗೆ ಯಾವ ವಿಷಯವೂ ಬಂದಿಲ್ಲ. ಎಂದು ಮಾನ್ಯ ಸದಸ್ಯರಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ.ಶೀರನಾಳಿ ಚಂದ್ರಶೇಖರ್.–ಸರ್ಕಾರಿ ಕರಪತ್ರ ನಂಬರು ಕೊಟ್ಟು ಹೇಳಿದರೂ ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲವೇ

SRI H. M. CHANNABASAPPA.—You will also admit that searching for an Indian Express Copy of 1966 is not worth the while.

SRI M. S. KRISHNAN.—The way in which the Hon. Minister's answering is rather funny. When a specific question has been asked giving the date, the Minister says that it is not worth the while. Wheter the Minister should decide whether it is not worth the while or the member who has put the question should decide? When a date has been given, it is the duty of the Government to find out the information. If they are not in a position to find out then we will decide what to do in the matter. I may point out that the questioner has also indicated the Gazette in which the information is furnished.

ಶ್ರೀ ಎಚ್. ಎಂ. ಚೆನ್ನಬಸಪ್ಪ:—ಪ್ರಶ್ನೆಗಳಿಗೆ ಸಂಬಂಧಪಟ್ಟಂಥ ರೂಲ್ಸ್ ಅನ್ನು ತಾವು ಓದಿ, ರೂಲ್ಸಿನಲ್ಲಿ ಏನು ಹೇಳುತ್ತದೆ ಎಂದರೆ, ಯಾವ ಒಂದು ಪ್ರಶ್ನೆಗೆ ಉತ್ತರವನ್ನು ಒದಗಿಸತಕ್ಕಂಥಾದ್ದು ಬಹಳ ಕಷ್ಟವಾಗುತ್ತದೋ, ಯಾವುದು ವಿಶೇಷವಾಗಿ ಲೇಬರ್ ಅನ್ನು ತಿನ್ನುತ್ತದೋ ಅಂಥ ವಿಷಯಗಳನ್ನು ಒಂದು ವೇಳೆ ಸರ್ಕಾರ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ.

SRI *M*.S. KRISHNAN.-ನೋಟೀಸ್ ಕೊಡಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. But to sav Government is not aware of it and it is not worthwhile to collect the information, is not a kind of answer which we expect from the Minister.

ಶ್ರೀ ಎಚ್. ಎಂ ಚೆನ್ನಬಸಪ್ಪ.—1966ನೇ ಇಸವಿಯ ಇಂಡಿಯನ್ ಎಕ್ಸ್‌ಪ್ರೆಸ್ ಅನ್ನು ಹುಡುಕಿಕೊಂಡು ಹೋಗುವ ಅಂಶದ ಬಗ್ಗೆ ತಾವು ಆಲೋಚನೆ

ಮಾಡಿ? ಎಷ್ಟು ಶ್ರಮ ಇದೆ, ಎಷ್ಟು ಹಣ ಖರ್ಚಾಗುತ್ತದೆ, ನಮ್ಮ ಪ್ರಯತ್ನ ಎಷ್ಟಾಗುತ್ತದೆ ಎನ್ನುವುದನ್ನು ನೋಡಿಕೊಂಡು ಅದರ ತಾರತಮ್ಯದ ಮೇಲೆ ನಾನು ತಮಗೆ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—1963ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ಈ ಒಂದು ಸಂಶೋಧನೆಗೆ ಮಾನ್ಯತೆ ನೀಡಿದ್ದಾರೆ. ಮತ್ತು ಅದನ್ನು ಕೇಂದ್ರ ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟಿಸಿರುವ ಬಗ್ಗೆಯೂ ಹೇಳಿದ್ದೇನೆ, ಅದನ್ನು ತರಿಸಿಕೊಳ್ಳುವುದಕ್ಕೆ ಕಷ್ಟವಾಗುತ್ತದೆಯೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅನೇಕ ವಿಷಯಗಳನ್ನು ಗೆಜೆಟ್‌ನಲ್ಲಿ ಪ್ರಚಾರ ಮಾಡುವುದಕ್ಕೋಸ್ಕರ ಪ್ರಕಟಣೆ ಮಾಡುತ್ತಾರೆ. ಆದರೆ ಈ ವಿಷಯ ನಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಮಾನ್ಯ ಸದಸ್ಯರು ಇಂಥ ಗೆಜೆಟ್, ಇಂಥ ದಿವಸದ ಪತ್ರಿಕೆಯಲ್ಲಿ ಪ್ರಕಟಿತವಾಗಿದೆ ಯೆಂದು ಹೇಳಿದರು. ಅದನ್ನೆಲ್ಲಾ ಪತ್ತೆ ಹಚ್ಚಬೇಕಾದರೆ, ಸ್ವಲ್ಪ ಕಾಲ ಹಿಡಿಯುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಪತ್ರಿಕೆಯನ್ನು ಹುಡುಕುವುದು ಸ್ವಲ್ಪ ಕಷ್ಟ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಭಾರತ ಸರ್ಕಾರದ ಮತ್ತು ಮೈಸೂರು ರಾಜ್ಯ ಸರ್ಕಾರದ ಪರಿಪತ್ರದ ತಾರೀಖು, ನಂಬರ್ ಕೊಟ್ಟರೂ, ಇದನ್ನು ಹುಡುಕುವುದು ಸರ್ಕಾರಕ್ಕೆ ಕಷ್ಟ ಎಂದು ಹೇಳಿದರೆ, ನಮಗೆ ಆಶ್ಚರ್ಯ ವಾಗುತ್ತದೆ.

ಅಧ್ಯಕ್ಷರು —ಈ ಸಂಶೋಧನೆ ಪ್ರಯೋಜನ ಇಲ್ಲ ಎಂದು ಹೇಳಿದ್ದರಿಂದ ಅವರ ಉತ್ತರ ಸಮಂಜಸವಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕನ್ನಂಬಾಡಿ ಅಣೆಯಲ್ಲಿ ಆಟೋಮ್ಯಾಟಿಕ್ ಗೇಟಿದೆ. ಅಲ್ಲಿ ಮುಂದುವರೆದು ಪ್ರಯೋಗ ನಡೆದಿರುವುದು ಗಮನಕ್ಕೆ ಬಂದಿದೆಯೇ? ಒಬ್ಬ ಸಾಮಾನ್ಯ ಜೂನಿಯರ್ ಇಂಜನಿಯರು ತನ್ನ ಪ್ರತಿಭೆಯಿಂದ ಕಂಡು ಹಿಡಿದಿರುವುದಕ್ಕೆ ಮನ್ನಣೆ ದೊರೆಯಬೇಡವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಟೊಮ್ಯಾಟಿಕ್ ಅರೆಂಜಮೆಂಟಿನಿಂದ ಪ್ರಮಾದವಾಗುವ ಸಂಭವವಿದೆ ಎಂಬುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್—ಇದನ್ನು ಕಂಡು ಹಿಡಿದ ಇಂಜನಿಯರು ತೊಂದರೆಯಾದರೆ ಹೇಗೆ ರಿಪೇರಿ ವಗೈರೆ ಮಾಡಬೇಕೆಂಬುದನ್ನು

ಕೂಡ ಬರೆದು ತಿಳಿಸಿದ್ದಾರೆ. ಈಗಲಾದರೂ ಇದನ್ನು ಗಮನಿಸಿ ಅವರಿಗೆ ಸರಿಯಾದ ರೀತಿಯಲ್ಲಿ ಮಾನ್ಯತೆ ಕೊಡುವಿರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯವನ್ನು ತಜ್ಞರು ಪರಿಶೀಲಿಸಿದ್ದಾರೆ. ಆಟೋಮ್ಯಾಟಿಕ್ ಫ್ಲಡ್ ಗೇಟುಗಳಿಂದ ದೊಡ್ಡ ಜಲಾಶಯಗಳಲ್ಲಿ ಅನಾಹತವಾಗುವ ಸಂಭವವಿದೆ. ಇದರಿಂದ ಬಹಳ ಕಷ್ಟವಾಗುತ್ತದೆ, ಅಲ್ಪ ಸ್ವಲ್ಪ ಹೆಚ್ಚು ಕಡಿಮೆಯಾದರೆ ತೊಂದರೆಯಾಗುವುದು, ಆದದರಿಂದ ಅದನ್ನು ಅಳವಡಿಸುವುದಕ್ಕಾಗುವುದಿಲ್ಲ ಎಂದು ತಜ್ಞರು ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ.

AUDITING OF ACCOUNTS IN GROUP PANCHAYATS OF MAGADI TALUK

16. SRI BETTASWAMY GOWDA (Kudur).—

Will the Minister for Community Development and Social Welfare be pleased to state :—

(a) the number of group panchayats in Magadi Taluk where annual auditing of accounts has been conducted regularly and the number of group panchayats where funds have been misappropriated ;

(b) the names of the group panchayats where funds have been misappropriated ;

(c) the action taken by the Government in this behalf?

SRI M. MALLIKARJUNASWAMY — (Minister for Community Development and Social Welfare).

(a) Annual auditing of occounts in repect of—5 Panchayat's for the year 1967-68, 8 Panchayats for the year 1968-69, 30 Panchayats for the year 1969-70, 8 Panchayats for the year 1970-71 and 17 Panchayats for the year 1971-1972 have been conducted.

Funds have been misappropriated in four Village Panchayats

(b) 1 Marur Panchayat

2. Hulikal Panchayat
3. Narasandra Panchayat
4. Chikkamudigere Panchayat

(*c*) The case being disposed of in the Court of the Assistant Commissioner, Ramanagar, the misappropriated funds are being recovered from the concerned.

ಶ್ರೀ ಬೆಟ್ಟಸ್ವಾಮಿಗೌಡ: ವಿಳಂಬವಾಗಿ ಆಡಿಟ್ ಆಗುವುದಕ್ಕೆ ಕಾರಣ ವೇನು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಸಿಬ್ಬಂದಿಯಿಲ್ಲದಿದ್ದುದೇ ಕಾರಣ.

ಶ್ರೀ ಬೆಟ್ಟಸ್ವಾಮಿಗೌಡ: ಉತ್ತರದಲ್ಲಿ ನಮೂದಿಸಿರುವುದಲ್ಲದೆ ಇನ್ನು ಕೆಲವು ಪಂಚಾಯಿತಿಗಳಲ್ಲಿ ದುರುಪಯೋಗವಾಗಿದೆ, ರಾಜ್ಯದ ಕೆಲವು ಮುಖಂಡರು ಅದರ ಆಡಿಟ್ ಆಗುವುದನ್ನು ತಡೆ ಹಿಡಿದಿದ್ದಾರೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಅದು ಸರಿಯಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ : ಪಂಚಾಯಿತಿ ಹಣ ದುರುಪಯೋಗವಾದಾಗ ಅದನ್ನು ಇಷ್ಟು ಕಾಲದೊಳಗೆ ವಸೂಲು ಮಾಡಬೇಕೆಂದು ಕಾಲ ನಿಗದಿಮಾಡಿದ್ದೀರಾ ಅಥವಾ ಕೊಟ್ಟಾಗ ತೆಗೆದುಕೊಳ್ಳುವ ಪದ್ಧತಿ ಮುಂದುವರಿಸುತ್ತಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಚಿಕ್ಕಮುದಿಗೆರೆ ಪಂಚಾಯಿತಿಯಲ್ಲಿ 790 ರೂಪಾಯಿ ದುರುಪಯೋಗವಾಗಿದೆ, ಹಾಗೆಯೇ ಇತರ ಮೂರು ಪಂಚಾಯಿತಿಗಳಲ್ಲಿ ಸಹ ದುರುಪಯೋಗ ನಡೆದಿದೆ. ಈ ಸಂಬಂಧದಲ್ಲಿ ಅಸಿಸ್ಟೆಂಟ್ ಕಮಿಷನರ್ ಮುಂದೆ ಕೇಸು ಇದೆ.

ಶ್ರೀ ಎಚ್. ಎಸ್. ಸಿದ್ದಪ್ಪ : ದುರುಪಯೋಗವಾದ ಹಣ ಬರಮಾಡಿಕೊಳ್ಳಲು ಕಾಲ ನಿಗದಿ ಮಾಡಿದೆಯೇ ಅಥವಾ 5 ಪೈಸೆ, 10ಪೈಸೆ ಕೊಟ್ಟಾಗ ತೆಗೆದು ಕೊಳ್ಳುವಿರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಕೊಟ್ಟಾಗ ತೆಗೆದುಕೊಳ್ಳುವುದಿಲ್ಲ. ಕಾಲ ನಿಗದಿ ಮಾಡಿಲ್ಲ ಕೆಲವು ಸಂದರ್ಭಗಳಲ್ಲಿ ಪಾರ್ಟಿ ಸಿಗುವುದಿಲ್ಲ. ಹೀಗೆ ಅನೇಕ ಕಾರಣಗಳಿಂದ ನಿಧಾನವಾಗುವುದು,

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ : 4 ಪಂಚಾಯಿತಿಗಳಲ್ಲಿಷ್ಟು ಹಣ ದುರುಪಯೋಗವಾಗಿದೆ? ದುರುಪಯೋಗ ಯಾವರೀತಿ ಮಾಡಿದ್ದಾರೆ? ಕೇಸನ್ನು ಈ ಸಂಬಂಧವಾಗಿ ಯಾವಾಗ ರಾಮನಗರದ ಅಸಿಸ್ಟೆಂಟ್ ಕಮೀಷನರ್ ಕೋರ್ಟಿನಲ್ಲಿ ಹಾಕಲಾಯಿತು? ಅದು ಇತ್ಯರ್ಥವಾಗಿದೆಯೇ? ಆಗಿಲ್ಲದಿದ್ದರೆ ಇನ್ನೂ ಎಷ್ಟು ಕಾಲ ಬೇಕು? ದುರುಪಯೋಗವಾಗಿರುವ ಹಣವನ್ನು ವಸೂಲು ಮಾಡುವುದೊಂದೇ ಇರುವ ಕ್ರಮವೋ ಅಥವಾ ಬೇರೆ ಇದಕ್ಕೆ ಶಿಕ್ಷೆ ಏನಾದರೂ ಇದೆಯೋ?

ಅಧ್ಯಕ್ಷರು : ಅನೇಕ ಪ್ರಶ್ನೆಗಳನ್ನು ಕೇಳಿರುವುದರಿಂದ ಒಂದಕ್ಕೆ ಉತ್ತರ ಕೊಟ್ಟರೆ ಸಾಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ: ಒಂದು ಪಂಚಾಯಿತಿಯಲ್ಲಿ 790 ರೂಪಾಯಿ, ಇನ್ನೊಂದರಲ್ಲಿ 2472 ರೂಪಾಯಿ ದುರುಪಯೋಗವಾಗಿದೆ. ಕೆಲವು ಭಾಗ ವಸೂಲಾಗಿದೆ.

ಶ್ರೀ ಬೆಟ್ಟಸ್ವಾಮಿಗೌಡ : ಮಾಗಡಿ ತಾಲ್ಲೂಕು ಚಿಕ್ಕಕಳ್ಳಿ ಗ್ರೂಪ್ ಪಂಚಾಯಿತಿಯಲ್ಲಿ ದುರುಪಯೋಗವಾಗಿದೆ. ಅಲ್ಲಿ ಆಡಿಟ್ ಮಾಡಿಸಲು ಕ್ರಮ ತೆಗೆದುಕೊಳ್ಳುವಿರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಅದು ಗೊತ್ತಾಗಿಲ್ಲ. ಮಾನ್ಯ ಸದಸ್ಯರು ಈಗ ಹೇಳಿದ್ದಾರೆ. ಅದನ್ನು ನೋಡಿಸುತ್ತೇನೆ.

Questions for Answers on the day (but not taken up)

COMMON OFFICE FOR T. D. B. AND C. D. B. IN A TALUK

11. SRI B. SUBBAYYA SHETTY (Surathkal).—

Will the Minister for Community Development and Social Welfare be pleased to state:—

(*a*) whether there is any proposal before Government to have a common office for both the Taluk Development Board and for the Community Development Block in a Taluk;

(*b*) whether it has come to the notice of Government that the Taluk Development Boards are required to follow certain statutory rules for their office procedure and that the Community Development Block Office has to follow the office procedure prescribed for State Government Offices;

(*c*) whether it is the intention of the Government to depute the officials of the Community Development Block Office to work in the Taluk Board office without treating them as on foreign service and fix responsibility on them for the smooth working of the Taluk Development Board;

(*d*) if not whether it is the intention of the Government that the duties and functions attached to the staff of the Block Office and that of the Taluk Development Board Office are so demarcated that they do not conflict or overlap with each other;

(*e*) whether the Accountant General has advised the State Government not to entrust any Government work particularly work relating to financial matters to the staff of the Taluk Board Office; if so, whether the advice has been put into practice?

SRI M. MALLIKARJUNASWAMY.—(Minister for Community Development and Social Welfare).

(*a*) There is already a common office for both the Taluk Development Board and for the Community Development Block in a Taluka.

(*b*) There is no distinction between the two offices.

(*c*) Does not arise in view of replies to clauses (*a*) and (*b*) above.

(SRI M. MALLIKARJUNASWAMY)

(*d*) Does not arise in view of replies to clauses (*a*) and *b*) above.

(*e*) No such communication has been received from the Accountant General.

RE-OPENING OF GOLD MINES AT BELLARA

30. SRI N. BASAVAIAH (Chikknayakanahally).—
Will the Minister for Industries be pleased to state:—
whether there is any proposal before the Government for re-opening of the Gold Mines at Bellara in response to the recent survey conducted by the Geological Department?

SRI S. M. KRISHNA.—(Minister for Industries).

No

TOWN PLANNING AUTHORITY IN BELGAUM CITY

95. SRI B. B. SAYANAK (Belgaum).—

11. Will the Minister for Municipal Administration be pleased to state:—

(*a*) whether there is any Town Planning Authority in Belgaum City;

(*b*) if so, when this office has been started in Belgaum and the purpose for which it has been started?

SRI B. BASAVALINGAPPA— (Minister for Municipal Administration).—

(*a*) Yes.

(*b*) The Office of the Town Planning Authority started functioning since 25th November, 1967. The purpose of constituting the Planning Authority is to prepare and enforce the master plan under the Mysore Town and Country Planning Act, so as to ensure orderly development of the city.

NOTICE OF ADJOURNMENT MOTION

Re: Search of one Smt. Sumitra Desai

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ): ಸನ್ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯ ದಿವಸ ತಮಗೆ ಒಂದು ಸೂಚನೆಯನ್ನು ಕಳಿಸಿದ್ದೇನೆ. ಅದರ ವಿಚಾರವಾದರೂ ಕಳೆದ ಮೂರೂವರೆ ತಿಂಗಳ ಹಿಂದೆ ನಮ್ಮ ರಾಜ್ಯ ಸರಕಾರದ ಒಬ್ಬ ಉಪಸಚಿವರ ರಾಜೀನಾಮೆಗೆ ಕಾರಣವಾದ ಪ್ರಸಂಗ. ಶ್ರೀಮತಿ ಸುಮಿತ್ರಾ ದೇಸಾಯಿಯವರು ಇದು ವರೆಗೆ ಪತ್ತೆಯಾಗಿಲ್ಲ.

ಅಧ್ಯಕ್ಷರು : ಈಗ ಮುಖ್ಯಮಂತ್ರಿಗಳಿಲ್ಲವಲ್ಲಾ

ಶ್ರೀ ಎಚ್. ಟಿ. ಕೃಷ್ಣಪ್ಪ : ಡೆಪ್ಯುಟಿ ಲೀಡರ್ ಇದ್ದಾರೆ. ವಿಚಾರ ವೇನೆಂದರೆ ಮೂರೂವರೆ ತಿಂಗಳ ಹಿಂದೆ ಈ ವಿಚಾರ ಈ ವಿಧಾನ ಸಭೆಯಲ್ಲಿ ಚರ್ಚೆಯಾದಾಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆ ನಮಗೆ ಕೊಟ್ಟಿದ್ದರು. ಈ ವಿಚಾರದಲ್ಲಿ ತನಿಖೆ ನಡೆಸಿ ಜನತೆಗೆ ಈ ವಿಚಾರದಲ್ಲುಂಟಾಗಿರತಕ್ಕ....

ಅಧ್ಯಕ್ಷರು : ಈಗ ನೋಟೀಸು ಕೊಟ್ಟಿದ್ದೀರಿ.

ಶ್ರೀ ಎಚ್. ಟಿ. ಕೃಷ್ಣಪ್ಪ : ಸೂಕ್ಷ್ಮವಾಗಿ ಹೇಳುತ್ತೇನೆ.

ಅಧ್ಯಕ್ಷರು : ಅದಕ್ಕೆ ಈಗ ಅಷ್ಟು ಅರ್ಜನ್ಸಿಯೇನಿದೆ? ಈ ಪ್ರಕರಣ ನಿನ್ನೆ ಮೊನ್ನೆ ಆಗಿಲ್ಲ. ಅದರ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದರೆ ಇಷ್ಟು ಹೇಳಬೇಕೇ ?

ಶ್ರೀ ಎಚ್. ಟಿ. ಕೃಷ್ಣಪ್ಪ : ಇದರ ಚರ್ಚೆಗೆ ಅವಕಾಶ ಕೊಡಬೇಕು ಎಂದು ರೂಲ್ 59 ರ ಕೆಳಗೆ ಸೂಚನೆ ಕಳಿಸಲಾಗಿದೆ. ಸರಕಾರದ ಗಮನ ಈ ಕಡೆಗೆ ಸೆಳೆಯಲು ಈ ಪ್ರಶ್ನೆ ಚರ್ಚೆಯಾಗಬೇಕು. ಈಗ ಮೂರೂವರೆ ತಿಂಗಳಿಂದ ರಾಜ್ಯದ ಪೋಲೀಸಿನವರು ತನಿಖೆ ಮಾಡಿದ್ದಾರೆ. ಆದರೂ ಕೂಡ ಆ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಮಹಿಳೆಯನ್ನು ಪತ್ತೆ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಗೃಹ ಖಾತೆಯನ್ನು ಸಹ ಹೊಂದಿದ್ದಾರೆ. ಗೃಹ ಖಾತೆಯಲ್ಲಿ ನಮ್ಮ ಪೋಲೀಸು ಇಲಾಖೆಯಲ್ಲಿ ಉನ್ನತ ಪರಿಣತರೂ, ಸುಸಂಸ್ಕೃತರೂ, ವಿದ್ಯಾವಂತರೂ ಪಳಗಿದವರೂ ಪ್ರಶಂಸೆಗೆ ಪಾತ್ರರಾದವರೂ ಇದ್ದಾರೆ. ಆದುದರಿಂದ ಅವರಿಗೆ ಎಲ್ಲಾ ಕಡೆಯ ಪರಿಚಯವಿದೆ, ಸಂಬಂಧವಿದೆ. ಆದರೆ ಇಂಥ ಮಹಿಳೆಯನ್ನು ಪತ್ತೆ ಮಾಡಲು ಸರಕಾರ ವಿಫಲವಾಗಿದೆ. ಅಂದ ಮೇಲೆ ಸರಕಾರ ತನ್ನ ಮೂಲಭೂತವಾದ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಾಹ ಮಾಡಿಲ್ಲ ಎಂಬುದು ವ್ಯಕ್ತವಾಗುವುದು. ಒಬ್ಬ ನಾಗರಿಕ ಮಹಿಳೆಯ ಮಾನ ಸಂರಕ್ಷಣೆ ಮಾಡುವ, ಪ್ರಾಣ ರಕ್ಷಣೆ ಮಾಡುವ ಕರ್ತವ್ಯವನ್ನು ಸರಕಾರ ನಿರ್ವಹಿಸಿಲ್ಲ. ಸರಕಾರ ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ. ಇದು ಖಂಡನೀಯ. ಇದನ್ನು ಗಮನಕ್ಕೆ ತರುತ್ತಿದ್ದೇನೆ ಆದುದರಿಂದ ಈ ವಿಷಯದಲ್ಲಿ ಸಮಗ್ರವಾದ ಚರ್ಚೆಯಾಗಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇದು ವರೆಗೆ ಪೋಲೀಸು ಇಲಾಖೆಯವರೇನು ತನಿಖೆ ಮಾಡಿದ್ದಾರೆ ಎಂಬ ವಿಚಾರದಲ್ಲೇನೂ ತಿಳಿಸದೆ ಆ ವಿಷಯವನ್ನು ಮುಚ್ಚಿಟ್ಟಿದ್ದಾರೆ. ಪೋಲೀಸು ವರದಿಯನ್ನು ಸಭೆಯ ಮುಂದಿಟ್ಟು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಇದು ಸರಕಾರದ ಆದ್ಯ ಕರ್ತವ್ಯ. ಇದನ್ನು ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಮುಖ್ಯ ಮಂತ್ರಿಗಳಿಗೆ ಐ. ಜಿ. ಪಿ. ಯಿಂದ ವರದಿ ಬಂದಿದೆ, ಎರಡನೆಯ ವರದಿ ಸಹ ಸಿ. ಬಿ. ಐ. ಗೆ ಈ ವಿಷಯವನ್ನು ರೆಫರ್ ಮಾಡುವುದಕ್ಕೆ ಮುಂಚೆ ಬಂದಿದೆ ಎಂಬುದು ನನಗೆ ತಿಳಿದಿದೆ. ಅದರ ಅಂಶ ನಾವು ತಿಳಿಯಬೇಕಾಗಿದೆ.

ಈ ವಿಚಾರದಲ್ಲಿ ಜನರು ಏನು ಹೇಳುತ್ತಿದ್ದಾರೆ. ಆ ಸುಮಿತ್ರ ದೇಸಾಯಿ ಅವರನ್ನು ಪೋಲೀಸರ ಸಹಾಯದಿಂದ ಸರ್ಕಾರದವರು ಕೊಲೆಮಾಡಿಸಿದ್ದಾರೆ ಎಂದು.

ಶ್ರೀ ಎಚ್. ಎನ್. ನಂಜೇಗೌಡ (ದೊಡ್ಡನೀರಾವರಿ ಮಂತ್ರಿ) :—ಮಾನ್ಯ ಅಧ್ಯಕ್ಷರೇ....

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) : ಮಾನ್ಯ ನಂಜೇಗೌಡರು....

ಅಧ್ಯಕ್ಷರು : ಮಾನ್ಯ ಕೃಷ್ಣಪ್ಪನವರಿಗೆ ಲಿಂಗಪ್ಪನವರ ಸಹಾಯವೇನೂ ಬೇಕಾಗಿಲ್ಲ. ಅವರು ಅವರನ್ನು ಡಿಫೆಂಡ್ ಮಾಡಿಕೊಳ್ಳಬಲ್ಲರು.

ಶ್ರೀ ಎಚ್. ಟಿ. ಕೃಷ್ಣಪ್ಪ :—ಜನರು ಹಾದಿ ಬೀದಿಗಳಲ್ಲಿ, ರೈಲು ಬಸ್ಸುಗಳಲ್ಲಿ ಈ ವಿಚಾರದಲ್ಲಿ ಮಾತನಾಡುತ್ತಿರುವುದನ್ನು ನೋಡಿದರೆ ಅದು ರಾಜ್ಯಕ್ಕೂ

ರಾಜ್ಯದ ಜನತೆಗೂ ಕಳಂಕವನ್ನು ತರತಕ್ಕದ್ದಾಗಿದೆ. ಆ ಸುಮಿತ್ರಾ ದೇಸಾಯಿ ಅವರು ಕಣ್ಮರೆ ಆದ ವಿಚಾರ ಇದೇ ಸಭೆಯಲ್ಲಿ ಚರ್ಚೆಗೆ ಬಂದು ಇಲ್ಲಿಗೆ ಮೂರು ತಿಂಗಳಿಗೂ ಮೇಲಾಯಿತು. ಆದರೆ ಇಲ್ಲಿಯವರೆಗೂ ಅವರೇನಾಗಿದ್ದಾರೆ ಎಂಬುದನ್ನು ಪತ್ತೆ ಹಚ್ಚದಿದ್ದ ಮೇಲೆ ಇಷ್ಟು ದೊಡ್ಡ ಪೋಲೀಸ್ ಇಲಾಖೆಯನ್ನು ಸರ್ಕಾರ ಇಟ್ಟುಕೊಂಡಿದ್ದರಿಂದ ಆದ ಪ್ರಯೋಜನವಾದರೂ ಏನು ? ಇಲ್ಲಿಯವರೆಗೂ ಆಗಿರುವುದೇನು ಎಂಬುದನ್ನು ಪರಿಶೀಲಿಸಿದರೆ ಅದು ಸರ್ಕಾರದ ಮುಖಕೆ ಮಸಿ ಹಚ್ಚುವ ಕಾರ್ಯವೊಂದನ್ನು ಮುಗಿಸಿದಂತಾಗಿದೆ....

SRI H. M. CHENNABASAPPA :— Minister for Public Works) : I raise to a point of order. It is open to the Hon. Member to rise a discussion under rule 59 provided it is permitted by the Hon. Speaker. Now the Hon. member has only given notice of the motion under rule 59. When the Hon. Speaker has not permitted how can the Hon. member go into the details of the matter ?

SRI H.S. SIDDAPPA : The Chair has not said that she has not permitted.

SRI H.M. CHANNABASAPPA : What I want to say is that it would not be in the fitness of things to dilate on the subject unless the Speaker permits the matter to be raised.

SRI M. S. KRISHNAN :—(Malleswara) Rule 59 says that discussion has to be permitted by the Chair after considering all aspect of the question and the case that is going to be made out on this side. The rule reads thus.

> " 59. Any member desirous of raising discussion on a matter of urgent public importance may give notice in writing to the Secretary specifying clearly and precisely the matter to be raised :
>
> Provided that the notice shall be accompanied by an explanatory note stating reasons for raising a discussion on the matter in question';

(SRI M. S. KRISHNAN)

But I don't think there is any necessity for the Hon. Minister to raise a point of order and say that the Hon. Member has no right to speak at all.

SRI H. M. CHANNABASAPPA.—Hon. Member Mr. Krishnan is well-versed in twisting the matters. The proviso to the rule is very clear. It says:

> "Provided that the notice shall be accompanied by an explanatory note........

ಶ್ರೀ ಪಟೇಲ್ ನಾಗರಾಜ್ (ಚಾಮರಾಜಪೇಟೆ) :- ನಾವು ಇಲ್ಲಿ ಆ ಸುಮಿತ್ರಾದೇಸಾಯಿ ಅವರ ಹೆಸರನ್ನೆತ್ತಿದರೆ ಮಾನ್ಯ ಚನ್ನಬಸಪ್ಪನವರಿಗೇಕೆ ಅಷ್ಟು ಆಘಾತವಾಗುತ್ತಿದೆಯೋ ತಿಳಿಯದಲ್ಲ?

ಅಧ್ಯಕ್ಷರು :—ಈ ವಿಷಯದಲ್ಲಿ ಚರ್ಚೆ ನಡೆಯುವುದಕ್ಕೆ ಅವಕಾಶ ಕೊಡಬೇಕೇ ಬೇಡವೇ ಅನ್ನುವುದೇ ಇನ್ನೂ ತೀರ್ಮಾನವಾಗಲಿಲ್ಲ. ಆದದರಿಂದ ಭಾಷಣಕ್ಕೆ ಯಾರಿಗೂ ಈಗ ಅವಕಾಶವಿಲ್ಲ.

SRI H. M. CHANNABASAPPA.:—The proviso says:

> "Provided that the notice shall be accompanied by an explanatory note stating reasons for raising a discussion on the matter in question."

So, the explanation cannot be given now.

ಶ್ರೀ ಎಚ್. ಎಸ್. ಸಿದ್ದಪ್ಪ :—ಮಾನ್ಯ ಅಧ್ಯಕ್ಷರೇ........

ಅಧ್ಯಕ್ಷರು :—ನಾನು ಹೇಳುವುದನ್ನಿನ್ನೂ ಮುಗಿಸುವುದಕ್ಕೇ ಇಲ್ಲ ಆವಾಗಲೇ ಎದ್ದರೆ ನಾನು ಏನು ಹೇಳಲಿ? ಅನೇಕ ಸದಸ್ಯರು ನನಗೆ ಇಂಥ ಮೋಷನ್ನುಗಳನ್ನು ಕಳುಹಿಸುವಾಗ ಅದಕ್ಕೆ ಸಂಬಂಧಪಟ್ಟ ರೂಲ್‌ಗಳನ್ನೂ ಹಾಕಿ ಅದರ ಜೊತೆಗೆ ಒಂದು ಎಕ್ಸ್‌ಪ್ಲನೇಟರಿ ನೋಟನ್ನೂ ಸಹಾ ಇಟ್ಟು ಕಳುಹಿಸಿ ಕೊಡುತ್ತಾರೆ. ಆದರೇ ಚರ್ಚೆಗೆ ತೆಗೆದುಕೊಳ್ಳತಕ್ಕ ಅಗತ್ಯ ಅದರಲ್ಲಿ ಅಡಕವಾಗಿದೆಯೋ, ಅದು ರೀಸೆಂಟ್ ಅಕ್ಕರೆನ್ಸೇ ಇತ್ಯಾದಿ ಅಂಶಗಳನ್ನೆಲ್ಲಾ ನೋಡಬೇಕು.

ಶ್ರೀ ವಾಟಾಳ್ ನಾಗರಾಜ್ :—ತಾಯಿ ಅವರಲ್ಲಿ ಒಂದು ಪ್ರಾರ್ಥನೆ ಆ ಸುಮಿತ್ರಾದೇಸಾಯಿ ಅವರ ಬಗ್ಗೆ ರಾಜ್ಯದಲ್ಲಿ ಎಲ್ಲ ಜನತೆಗೂ ಬಹಳ ಕಾತುರತೆ ಇದೆ.........

ಅಧ್ಯಕ್ಷರು :—ಇರಲಿ. ತಾವು ದಯ ಮಾಡಿ ಕುಳಿತುಕೊಳ್ಳಬೇಕು. ಇದು ನಾಲ್ಕೈದು ತಿಂಗಳ ಹಿಂದಿನ ಸಮಾಚಾರ. ಆದುದರಿಂದ ಇದನ್ನು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಲು ಅನುಮತಿ ಕೊಡುವುದಕ್ಕೆ ಬರುವುದಿಲ್ಲ.

SRI D. DEVARAJ URS :—With the permission of the Chair, I would like to say that while addressing the Speaker it may not be in consonance with the dignity of the House to address as "ಅಮ್ಮಾ" ಅಥವಾ "ತಾಯಿ".

ಶ್ರೀ ಎಂ. ಎಸ್. ಕೃಷ್ಣನ್ :—ಹಾಗಾದರೆ ಕನ್ನಡದಲ್ಲಿ ಸದಸ್ಯರು ಅಧ್ಯಕ್ಷರನ್ನು ಯಾವ ರೀತಿ ಅಡ್ರೆಸ್ ಮಾಡಬೇಕೆಂಬುದನ್ನು ತಾವೇ ತಿಳಿಸಿಕೊಡಿ.........

ಶ್ರೀ ಡಿ. ದೇವರಾಜ ಅರಸ್ :—"ಮಾನ್ಯ ಅಧ್ಯಕ್ಷರೇ," ಅಥವಾ "ಅಧ್ಯಕ್ಷಿಣಿಯರೇ" ಎಂದು ಹೇಳಿದರೆ ಅಷ್ಟು ಸಾಕು.

ಶ್ರೀ ಬಿ. ಪುಟ್ಟಸ್ವಾಮಯ್ಯ, (ರಾಮನಗರ) :—ಅಧ್ಯಕ್ಷರನ್ನು ಕಂಡಾಗ ಅದರ ಬಗ್ಗೆ ನನಗೆ ತಾಯಿಯ ಭಾವನೆಯೇ ಬರುತ್ತದೆ. ಆದುದರಿಂದ ನಾನು ಅವರನ್ನು "ತಾಯಿ" ಎಂದು ಹೇಳುತ್ತೇನೆ. ಅದಕ್ಕೆ ತಾವೇಕೆ ಅಡ್ಡಿ ತರುತ್ತಿದ್ದೀರಿ?

ಶ್ರೀ ಡಿ. ದೇವರಾಜ ಅರಸ್ :—ನಾನು ಇನ್ನಾವ ಭಾವನೆಯಿಂದಲೂ ಹೇಳುತ್ತಿಲ್ಲ. ಅವರ ಸಭಾ ಮರ್ಯಾದೆಗೆ ತಕ್ಕಂತೆ ಇರಲಿ ಎಂಬ ಉದ್ದೇಶದಿಂದ ನಾನು ಅವರನ್ನು "ಅಧ್ಯಕ್ಷರೇ" ಅಥವಾ "ಅಧ್ಯಕ್ಷಿಣಿಯರೇ" ಎಂದು ಅಡ್ರೆಸ್ ಮಾಡಿದರೆ ಸರಿಯಾಗಿರುತ್ತದೆಂದು ಹೇಳಿದೆ.

† ಶ್ರೀ ಎಚ್. ಟಿ. ಕೃಷ್ಣಪ್ಪ :—ಇಲ್ಲಿ ಉದ್ಭವಿಸಿರತಕ್ಕ ಮುಖ್ಯ ಪ್ರಶ್ನೆ ಒಂದು ಏನೆಂದರೆ ಆ ಸುಮಿತ್ರಾ ದೇಸಾಯಿ ಅವರು ಕ್ರಿಮ್ಮರೆಯಾದ ಪ್ರಸಂಗದಲ್ಲಿ ಏಕೆ ಜನರು ಅಷ್ಟು ಕಾತುರರಾಗಿದ್ದಾರೆ, ಎಂದರೆ ಇದೇ ಸುಮಿತ್ರಾ ದೇಸಾಯಿ ಅವರ ಪ್ರಕರಣದಲ್ಲಿ ಒಬ್ಬ ರಾಜ್ಯದ ಮಂತ್ರಿಗಳು ರಾಜೀನಾಮೆ ಕೊಡಬೇಕಾದ ಪ್ರಸಂಗವುಂಟಾಯಿತು. ಹಾಗೆ ಆ ಮಂತ್ರಿಗಳು ಕೊಟ್ಟ ರಾಜೀನಾಮೆ ಪತ್ರದಲ್ಲಿ

(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಈ ಪ್ರಸಂಗದಲ್ಲಿ ಎದ್ದಿರತಕ್ಕ ಗೊಂದಲದ ಬಗ್ಗೆ ಒಂದು ತನಿಖೆ ನಡೆಯಬೇಕಾಗಿರುವುದರಿಂದ ಆ ತನಿಖೆ ಸುಗಮವಾಗಿ ನಡೆಯಲೆಂದು ತಾವು ರಾಜೀನಾಮೆ ಕೊಟ್ಟಿದ್ದಾಗಿ ಅವರು ನಮೂದಿಸಿದ್ದಾರೆ. ಅಂದಾಗ ಸರ್ಕಾರದವರು ಈ ವಿಚಾರದಲ್ಲಿ ಇಲ್ಲಿಯತನಕ ಏನು ತನಿಖೆ ನಡೆಸಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕಾಗಿದೆ. ಆದರೆ ಇತ್ತೀಚೆಗೆ ಒಂದು ಪತ್ರಿಕೆಯಲ್ಲಿ " ಮುಖ್ಯ ಮಂತ್ರಿಗಳು ಆ ಸುಮಿತ್ರಾ ದೇಸಾಯಿ ಕಣ್ಮರೆಯೊದ ಬಗ್ಗೆ ನಾನೇನು ಮಾಡುವುದಕ್ಕಾಗುತ್ತದೆ? ಅದಕ್ಕೆ ಮತ್ತೆ ವಿಶ್ವಾಮಿತ್ರ ಸೃಷ್ಟಿಯಾಗಬೇಕು. ಎಂದು ಹೇಳಿದರೆಂದು ವರದಿಯೊಗಿರುವುದು, ಖಂಡಿತವಾಗಿಯೂ ಒಂದು ಜವಾಬ್ದಾರಿ ಸ್ಥಾನದಲ್ಲಿರುವಂಥ ಮುಖ್ಯ ಮಂತ್ರಿಗಳ ಬಾಯಿಂದ ಬರತಕ್ಕ ಮಾತಲ್ಲ ಅವು. ಆದರೆ ಇದರ ಮುಂದಿನ ತನಿಖೆಯನ್ನು ಮುಖ್ಯ ಮಂತ್ರಿಗಳು ಸಿ. ಬಿ. ಐ. ಗೆ ವಹಿಸಿದರೆ ಅಷ್ಟಕ್ಕೆ ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳ ಒಂದು ಜವಾಬ್ದಾರಿ ತಪ್ಪಿತೇ? ಇದರ ವಿಚಾರಣೆಯನ್ನು ಸಿ.ಬಿ.ಐ. ಗೆ ಹಿವಸುವುದಕ್ಕೆ ಮುನ್ನ ಇವರು ಆ ಕಳೆದ ಮೂರುವರೆ ತಿಂಗಳ ಅವಧಿಯಲ್ಲಿ ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದರು? ಇವರು ಆ ಅವಧಿಯಲ್ಲಿ ಇದರ ಬಗ್ಗೆ ಸಾಧಿಸಿದ್ದಾದರೂ ಏನು? ಇವರು ತಮ್ಮ ಕೈಲಿ ಇಂಥ ಒಂದು ದೊಡ್ಡ ಗೃಹಖಾತೆಯನ್ನು ಇಟ್ಟುಕೊಂಡು ತಾವು ಇದನ್ನು ಪತ್ತೆ ಹಚ್ಚದಿದ್ದದ್ದು ಇಡೀ ಮೈಸೂರು ಪೋಲೀಸ್ ಇಲಾಖೆಗೂ ಮತು ಮೈಸೂರು ರಾಜ್ಯಕ್ಕೂ ಅಪಮಾನ ಎದ್ದು ಕಾಣುತ್ತಿದೆ. It is a Cognizable offence ಇದಕ್ಕೆ ಬೇರೆಯವರಿಂದ ಹೆಚ್ಚಿನ ವರಾತವೇನೂ ಬೇಕಾಗಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಅಧ್ಯಕ್ಷರಲ್ಲಿ ಪ್ರಾರ್ಥಿಸಿಕೊಳ್ಳುವುದು ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಅವರು ಪೋಲೀಸ್ ಇಲಾಖೆ ಮುಖ್ಯಾಧಿಕಾರಿಗಳೇನು ತಿಳಿಸಿದ್ದರು, ಅವರೇನು ಆದರ ಬಗ್ಗೆ ತನಿಖೆ ನಡೆಸಿದರು ಮತ್ತು ಈ ಮಧ್ಯೆ ಏನೇನು ಕರೆಸ್‌ಪಾಂಡೆನ್ಸ್ ಸರ್ಕಾರಕ್ಕೂ ಪೋಲೀಸ್ ಇಲಾಖೆಗೂ ನಡೆದಿದೆ, ಎಂಬುದನ್ನು ಸಭೆಗೆ ತಿಳಿಸುವ ತನಕ ನಾವು ಈ ಸಭೆಯ ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಖಂಡಿತಾ ಅವಕಾಶ ಕೊಡುವುದಿಲ್ಲ.

† ಶ್ರೀ ವಾಟಾಳ್ ನಾಗರಾಜ್ :—ಮಾನ್ಯ ಅಧ್ಯಕ್ಷರೇ ನಾನೂ ಕೂಡ ಇದೇ ವಿಚಾರದಲ್ಲಿ ತಮ್ಮ ಕಡೆಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಇದರ ಬಗ್ಗೆ ಒಂದು ರಾಜಕೀಯ ನಡೆಸಬೇಕೆಂಬ ಇಚ್ಛೆ ನಮಗೆ ಇಲ್ಲ. ಆದರೆ ಹಿಂದೆ ಈ ಸಭೆ ಹಠಾತ್ತಾಗಿ ಮುಂದೂಡಲ್ಪಟ್ಟಿತು. ಮೊನ್ನೆ ಒಂದು ಪತ್ರಿಕೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಒಂದು ಹೇಳಿಕೆಯನ್ನು ಕೊಡುತ್ತಾ ,, ಅರಸೂರವರ ಸ್ಪಷ್ಟನೆ '' " ಸುಮಿತ್ರಾ ದೇಸಾಯಿ ಪ್ರಸಂಗದಲ್ಲಿ ರಾಜೀನಾಮೆ ಕೊಟ್ಟ ಮಂತ್ರಿ

ಗಳು ನಿರಪರಾಧಿಗಳು ಅದಾಗ್ಯೂ ಅವರಿಗೆ ಮತ್ತೆ ಮಂತ್ರಿಮಂಡಲದಲ್ಲಿ ಸ್ಥಾನವಿಲ್ಲ ಎಂದು ವರದಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಕಿತ್ತೂರ್ ಅವರು ಈ ವಿಚಾರದಲ್ಲಿ ನಿರಪರಾಧಿಗಳು ಎಂದು ಯಾವ ಆಧಾರಗಳ ಮೇಲೆ ಆ ತೀರ್ಮಾನಕ್ಕೆ ಬಂದರು? ಹಾಗೆ ಅವರು ನಿರಪರಾಧಿಗಳಾಗಿದ್ದ ಪಕ್ಷದಲ್ಲಿ ಅವರನ್ನು ಪುನಹ ಏಕೆ ಮಂತ್ರಿಯಾಗಿ ಅವರನ್ನು ಇವರು ತೆಗೆದುಕೊಳ್ಳಲಿಲ್ಲ? ಅವರು ನಿರಪರಾಧಿಗಳಾಗಿದ್ದರೆ ಮತ್ತೆ ಅವರಿಗೆ ಕ್ಯಾಬಿನೆಟ್ಟಿನಲ್ಲಿರುವುದಕ್ಕೆ ಒಂದು ಸ್ಥಾನ ಅಡಕವಾಗಿರಲೇ ಬೇಕು.

ಈಗ ಇದೆಲ್ಲವನ್ನೂ ಬಿಟ್ಟು ಈ ವಿಚಾರವನ್ನು ಸಿ. ಬಿ. ಐ. ಗೆ ಒಪ್ಪಿಸಿರುವುದು ಒಂದು ಮುಖ್ಯವಾದಂಥ ನಿರ್ಣಯವೆಂದು ಹೇಳುತ್ತಿದ್ದಾರೆ. ಅವರು ನಿರಪರಾಧಿ ಅಂದಮೇಲೆ ಅವರಿಗೇಕೆ ಮಂತ್ರಿಸ್ಥಾನವಿಲ್ಲ. ಅವರೇ ಅಗಲಿ ಅವರು ನಿರಪರಾಧಿಯಾದ ಮೇಲೆ ಅವರು ಮಂತ್ರಿಸ್ಥಾನವನ್ನು ಏಕೆ ಬಿಡಬೇಕು? ಅವರಿಗೆ ಇಲ್ಲಿ ಮಂತ್ರಿಸ್ಥಾನ ಇಲ್ಲವೆಂದ ಮೇಲೆ ಅವರು ಅಪರಾಧಿಯಾಗಿರಬೇಕೆಂದು ಹೇಳಬೇಕಾಗುತ್ತದೆ.

2-00 p. m.

ಅಧ್ಯಕ್ಷರು : ಈ ವಿಚಾರವನ್ನು ಈ ಸಭೆಯಲ್ಲಿ ಇನ್ನೂ ಚರ್ಚೆಮಾಡಲು ಅವಕಾಶ ಕೊಡಬೇಕೋ ಬೇಡವೋ ಎಂಬುದಾಗಿ ಯೋಚನೆ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರವನ್ನು ಪತ್ತೆ ಮಾಡುವ ಕಾರ್ಯವನ್ನು ಈಗಾಗಲೇ ಸಿ. ಬಿ. ಐ. ಗೆ ಬಿಟ್ಟಿದ್ದೇವೆ, ಇನ್ನು ಬೇರೆ ವಿಷಯಗಳನ್ನು ನಾವು ನೋಡಿಕೊಳ್ಳುತ್ತೇವೆಂದು ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಗೃಹಶಾಖೆಯ ಆಡಳಿತವನ್ನು ಅವರ ಕೈಲಿ ಇಟ್ಟುಕೊಂಡಿರುವುದರಿಂದ ಸುಮಾರು ಮೂರುವರೆ ತಿಂಗಳುಗಳಿಂದ ಇದರ ಬಗ್ಗೆ ಏನೇನು ವ್ಯವಹಾರ ನಡೆದಿದೆ, ಏನೇನು ಮಾಹಿತಿಗಳು ಇವರಿಗೆ ಬಂದಿವೆ ಅವೆಲ್ಲನ್ನೂ ಅವರು ಈ ಸಭೆಯಲ್ಲಿ ವಿವರವಾಗಿ ಕೊಟ್ಟು ಅವುಗಳ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇದು ಅತಿ ಮುಖ್ಯವಾದುದು. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ವಿಚಾರವನ್ನು ಎಲ್ಲೆಲ್ಲಿಯೂ ಮಾತನಾಡುತ್ತಿದ್ದಾರೆ. ಇದು ಎಲ್ಲರ ಮನದಲ್ಲಿಯೂ ಕೇಂದ್ರಿಕೃತವಾಗಿದೆ. ಅದ್ದರಿಂದ ತಾವು ಈ ವಿಚಾರವನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದನ್ನು ಖಂಡಿತವಾಗಿ ತಾವು ತಳ್ಳಿಹಾಕಬಾರದು.

ಶ್ರೀ ಎಂ. ಎಸ್. ಕೃಷ್ಣನ್ : ಈ ವಿಚಾರ ಇಲ್ಲಿ ಮೊದಲೇ ಚರ್ಚೆಯಾಗಿದೆ. ಈಗ ಇದರ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಹೇಳಬೇಕಾಗಿದೆ. ಇದು ನಡೆದು ಈಗ್ಗೆ ಮೂರು ವರೆ ತಿಂಗಳಾದುವು. ಇದರ ವಿಚಾರವಾಗಿ ವಿವರವಾಗಿ ನನ್ನ ಮಿತ್ರರು ಈಗಾಗಲೇ ಹೇಳಿದ್ದಾರೆ. ಈ ಪ್ರಶ್ನೆ ಈಗ ಏನಾಗಿದೆಯೆಂದರೆ, ಬರೀ ಮೈಸೂರು ರಾಜ್ಯಕ್ಕೆ ಮಾತ್ರ ಇವತ್ತಿನ ದಿವಸ ಅನ್ವಯಿಸುವ ರೀತಿಯಲ್ಲಿದ್ದಿದ್ದರೆ, ಕೇವಲ ಇದು ಮೈಸೂರಿಗೆ ಮಾತ್ರ ಸೀಮಿತವಾಗಿದೆ, ನೋಡೋಣ, ಮುಂದೆ ಯೋಚನೆ ಮಾಡೋಣವೆನ್ನಬಹುದಾಗಿತ್ತು. ಆದರೆ ಇದು ಹಾಗಲ್ಲ. ಇವತ್ತು ಏನಾಗಿದೆಯೆಂದರೆ, ಈ ವಿಚಾರ ಮೈಸೂರು ರಾಜ್ಯದ ಗಡಿ ಬಿಟ್ಟು ದೇಶಾದ್ಯಂತ ಹರಡುತ್ತಿದೆ. ಆ ವಿಚಾರವನ್ನೂ ತಾವು ಓದಿದ್ದೀರಿ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಈ ವಿಚಾರದಲ್ಲಿ ಆಗಾಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಬರುತ್ತಾ ಇರತಕ್ಕ ವರದಿಗಳನ್ನು ನೋಡುತ್ತಿದ್ದರೆ ನನಗೆ ಒಂದು ಭಯಾನಕವಾದ ಚಿತ್ರ ನನ್ನ ಕಣ್ಣಮುಂದೆ ಬರುತ್ತಿದೆಯೆಂಬುದನ್ನು ತಾವು ಗಮನಿಸಬೇಕು. ಒಂದು ದೃಷ್ಟಾಂತ ಕೊಡುವುದಾದರೆ, ಬೊಂಬಾಯಿನಲ್ಲಿ ಜೂನ್ 1ರಂದು ಸುಮಿತ್ರಾ ದೇಸಾಯಿ ಅವರ ಡೈರಿ ಸಿಕ್ಕಿತ್ತು. ಅದು ಬೊಂಬಾಯಿನ ಪೋಲೀಸಿನವರ ಕೈಲಿ ಸೇರಿವೆ ಎಂದು ವರದಿ ಬಂದಿದೆ. ಅದರಲ್ಲಿ ಯಾರ್ಯಾರೋ ಮಂತ್ರಿಗಳ ಹೆಸರು ಇದೆಯಂತೆ, ಮಹಾರಾಷ್ಟ್ರದ ಮಂತ್ರಿಗಳ ಹೆಸರೂ ಇದೆ, ಕೇಂದ್ರ ಸರ್ಕಾರದ ಮಂತ್ರಿಗಳ ಹೆಸರೂ ಸಹ ಇವೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಇದರ ಜೊತೆಗೆ ಜೂನ್ 3ನೇ ತಾರೀಕಿನಲ್ಲಿ ಕಲ್ಕತ್ತಾದ ಅಮೃತ ಬಜಾರ್ ಪತ್ರಿಕೆಯೊಳಗೆ ಸುಮಿತ್ರಾ ದೇಸಾಯಿಯವರು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಎಡಿಟರಿಗೆ ಒಂದು ಕಾಗದ ಬರೆದಿರುವುದೂ ಕೂಡ ಬಂದಿದೆ, ಅದರಲ್ಲಿ ಅವರು ನನ್ನ ಮೇಲೆ ಸುಮ್ಮನೆ ಅಪಪ್ರಚಾರ ಮಾಡುತ್ತಿದ್ದಾರೆ, ನನ್ನ ಬಗ್ಗೆ ಈ ರೀತಿಯಾಗಿ ಹೇಳುವುದು ಸರಿಯಲ್ಲವೆಂದು ನಮೂದು ಮಾಡಿದೆ ಎಂಬುದಾಗಿ ಪತ್ರಿಕೆಯಲ್ಲಿ ತಿಳಿಸಿದ್ದಾರೆ. ಈ ವಿಚಾರ ಕಲ್ಕತ್ತ, ಮಹಾರಾಷ್ಟ್ರ, ಡೆಲ್ಲಿ, ಬೀರೂರು, ಅರಸೀಕೆರೆ ತಿಪಟೂರು-ಹೀಗೆ ಇನ್ನೂ ಅನೇಕ ಕಡೆಗಳಲ್ಲಿ ಹರಡಿದೆ ಈ ಪ್ರಶ್ನೆ ಇಲ್ಲಿಗೆ ಮಾತ್ರ ಸೀಮಿತವಾಗಿದ್ದರೆ ಈ ವಿಚಾರವನ್ನು ಇನ್ನೂ ಇತ್ಯರ್ಥಮಾಡಲು ನಿಧಾನ ಮಾಡಬಹುದಾಗಿತ್ತು. ಇದೇನೂ ಇಲ್ಲಿಗೇ ಸೀಮಿತವಾಗಿಲ್ಲ. ಆದ್ದರಿಂದ ಈ ವಿಚಾರವನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು, ಆದರೆ ವಿನಾ ಕಾರಣ ಮಾನ್ಯ ಶ್ರೀ ಕಿತ್ತೂರ್ ಅವರ ಮೇಲೆ ತಪ್ಪು ಹೊರಿಸಿ ಅವರನ್ನು ಮಂತ್ರಿ ಮಂಡಲದಿಂದ ಕಿತ್ತು ಹಾಕಬೇಕೆಂಬ ಅಭಿಪ್ರಾಯ ಯಾರಿಗಾದರೂ ಹಿಂದೆ ಬಂದಿದ್ದರೆ, ಅದು ನಿಜವಾಗಿ ಸರಿಯಲ್ಲ.

ಅಧ್ಯಕ್ಷರು : ಆ ರೀತಿಯಾಗಿ ತಾವು ಏಕೆ ಹೇಳುತ್ತಿದ್ದೀರಿ ಎಂಬುದು ನನಗೆ ಗೊತ್ತಿದೆ.

ಶ್ರೀ ಪಾಟಾಳ್ ನಾಗರಾಜ್: ಮಾನ್ಯ ಶ್ರೀ ಕಿತ್ತೂರ್ ಅವರು ತಮ್ಮ ಎದುರಿಗೇ ಕೂತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್: ನಮ್ಮಲ್ಲಿ ಒಂದು ಗಾದೆ ಇದೆ, ಗಾಣಗಿತ್ತಿ ಅಯ್ಯೋ ಅಂದರೆ ಮಗುವಿನ ತಲೆ ತಣ್ಣಗಾಯಿತೇ ಎಂದು. ಇಲ್ಲಿ ಆ ರೀತಿ ಯಾಗಿದೆ ಇವರು ಹೇಳುತ್ತಿರುವುದು.

ಶ್ರೀ ಎಂ. ಎಸ್. ಕೃಷ್ಣನ್; ನಾವೇನೂ ಗಾಣಗಿತ್ತಿಯಲ್ಲ. ನೀವು ಈಗ ಎಣ್ಣೆಗೂ ಬರಗಾಲವನ್ನು ತಂದಿದ್ದೀರಿ. ಮಾಸ್ತರ್ ಹಿರಣ್ಣಯ್ಯನವರು ಅವರ 'ನಡುಬೀದಿ ನಾರಾಯಣ' ನಾಟಕದಲ್ಲಿ ಇವರು ಮುಟ್ಟಿದ್ದೆಲ್ಲಾ ಹಾಳು ಎಂಬ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಏಕೆಂದರೆ ಸಕ್ಕರೆ, ಗೋಧಿ, ಅಕ್ಕಿ, ಎಣ್ಣೆ ಇವುಗಳಿಗೆ ಕಂಟ್ರೋಲ್ ತರುತ್ತೇವೆಂದು ಹೋಗಿ ಎಲ್ಲವೂ ಅಭಾವ ವಾಗಿದೆ, ಮಾಯವಾಗುತ್ತಿದೆ. ಬಡವರಿಗೆ ಸಾಕಷ್ಟು ಸುಲಭವಾಗಿ ಅವು ಸಿಗು ತ್ತಿಲ್ಲ. ಹಾಗೆಯೇ ಹೆಣ್ಣನ್ನು ಮುಟ್ಟಿದರೂ, ಅದೂ ಕೂಡ ಮಾಯವಾಯಿತು, ಇದು ಜನರಿಗೆ ನಗುಪಾಟಲಾಗಿದೆ ಈ ವಿಚಾರವಾಗಿ ಇಲ್ಲಿ ಚರ್ಚೆ ಬಂದಾಗ, ಎಲ್ಲಾ ಅಂಶಗಳನ್ನೂ ನಾನು ವಿವರವಾಗಿ ಹೇಳುತ್ತೇನೆ. ಮಿಸ್ ಸುಮಿತ್ರಾ ದೇಸಾಯಿ ಅವರ ವಿಷಯದಲ್ಲಿ ಟೈಮ್ಸ್ ಆಫ್ ಇಂಡಿಯಾದಲ್ಲಿ ಭಾರಿ ಡೀಟೇಲ್ಸ್ ಕೊಟ್ಟಿದ್ದಾರೆ. ನಾನು ಅದೆಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ಈ ರೀತಿ ಇದೆ:-"Miss Sumitra Desai meets high dignitaries"

Mr. Kittur is a teetotaller and father of five children who claimed that he was innocent. I shall face any enquiry and truth must be found out. I have resigned to safeguard the interest of the Congress and the Government".

It is a brave and correct statement

ಈ ವಿಚಾರ ನಡೆದು ಮೂರುವರೆ ತಿಂಗಳಾದರೂ ಈ ಕೇಸು ಇನ್ನೂ ಸಾಬೀತು ಆಗದೇ ಹೋದರೆ ಹೇಗೆ? ನನ್ನ ಮಿತ್ರರಾದ ಮಾನ್ಯ ಶ್ರೀ ಪಾಟಾಳ್ ನಾಗರಾಜ್ ಅವರು ಹೇಳಿದ್ದು ಸರಿ ಇರಬೇಕು. ಅವರು ಇವರನ್ನು ನಿರಪರಾಧಿ ಎಂದು ಹೇಳಿದರು. ಇವರು ನಿಜವಾಗಿ ತಪ್ಪುಮಾಡಿದ್ದರೆ, ಅದು ಪ್ರೂವ್ ಆದರೆ ಅವರು ಅಪರಾಧಿ ಎಂಬುದಾಗಿ ಹೇಳಬಹುದು. ಇವರು ಮಾತ್ರ ತಪ್ಪು ಮಾಡಿಲ್ಲ, ಇವರ ಜೊತೆಯಲ್ಲಿ ಇನ್ನೂ ಕೆಲವರು ಒಂದು ಜಾಯಿಂಟ್ ಸ್ಟಾಕ್ ಕಂಪೆನಿ ಇದ್ದ ಹಾಗೆ ಸೇರಿಕೊಂಡಿದ್ದಾರೆಂದು ಅನೇಕರು

ವೆಂದರೆ ಹೇಗೆ ? ಯಾರಿಗೆ ಕನ್ನಡ ಬರುವುದಿಲ್ಲವೋ ಅವರು ಅನಿವಾರ್ಯವಾಗಿ ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಪರವಾ ಇಲ್ಲ. ಕನ್ನಡ ತಿಳಿದವರು ಏಕೆ ಕನ್ನಡದಲ್ಲಿ ಮಾತನಾಡಬಾರದು ?

ಶ್ರೀ ಡಿ. ದೇವರಾಜ್ ಅರಸ್.—ಮಾತನಾಡಿದರೆ ಅದೇನೂ ರೂಲ್ಸ್‌ಗೆ ವಿರೋಧ ಅಲ್ಲ.

SRI B. BASAVALINGAPPA.—If any person is interested in that person, as per law under the Criminal procedure code, it was his duty to have lodged a complaint with the police. None of these friends have lodged a complaint so far. Those who are interested including Sri Vatal Nagaraj should have lodged a complaint in any of the police station as per law. Has anybody done so far? Now, some papers have published this incident for the purpose of propaganda. On the basis of press reports alone Sri Kittur was made to resign. The question arises how the hon. members can compel the Chief Minister or the Government to say what happened to Smt. Sumitra Desai. The Chief Minister has said that he is enquiring into this incident. Whether Smt. Sumitra Desai went to Sri Kuttur's house or not is a matter of conjecture and speculation. The C. B. I. has been entrusted with this matter and they have taken up the investigation. Let them go into it and throw some light. The fact remains that the Mysore police have not so far been successful in tracing this girl. What action should be taken against the police officers who have not been able to trace this girl so far is a matter which should be left to the Minister in charge of the portfolio. Under these circumstance, I cannot understand what makes my Learned Friends to raise this topic again and again, especially when the matter is being looked into by the Government. I would therefore request them not to depend upon conjectures and speculate on this incident. If there are any substantial points and facts, they can place them before the house and the house will take notice of them. Without placing facts, I do not think the house can take congnisance of such speculations and conjectures.

ಶ್ರೀಎಂ. ಎಸ್. ಕೃಷ್ಣನ್

ಮಾತನಾಡಿಕೊಳ್ಳುತ್ತಿದ್ದಾರೆ. ಅಂದ ಮೇಲೆ ಈ ಕೇಸಿನಲ್ಲಿ ಇನ್ನೂ ಯಾರ್ಯಾರು ಮಂತ್ರಿಗಳು ಇದ್ದಾರೋ ನನಗೆ ಗೊತ್ತಾಗಲಿಲ್ಲ ಯಾರೋ ಒಬ್ಬರು ಹೈಕೋರ್ಟಿನವರ ಹೆಸರೂ ಕೂಡ ಇದರಲ್ಲಿ ಬಂದಿದೆ.

ಅಧ್ಯಕ್ಷರು ಮಾನ್ಯ ಸದಸ್ಯರು ಹೇಳುತ್ತಿರುವುದೇನು ?

Sri B. Basavalingappa ; Madam Speaker, I have not heard of any unfair statement made by any hon. member of this house, than this. He tries to sermonise. Where is the complaint ? According to Criminal Procedure Code, first there must be a complaint.

ಶ್ರೀ ಎಸ್. ವೈ. ಪಾಟೀಲ್.—ನಾನು ಸಭಾಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಮಾತನಾಡಲು ನಮಗೂ ಸ್ವಲ್ಪ ಜವಾಬ್ದಾರಿ ಇದೆ.

ಶ್ರೀ ವಾಟಾಳ್ ನಾಗರಾಜ್.—ನಮ್ಮಲ್ಲಿ ಒಂದು ಗಾದೆ ಇದೆ, ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿ ಕೊಂಡನಂತೆ ' ಎನ್ನುವ ಹಾಗೆ ಮಾನ್ಯ ಶ್ರೀ ಬಸವಲಿಂಗಪ್ಪನವರು ಏಕೆ ಏಷ್ಟು ಉದ್ರೇಕ ಆಗಬೇಕು ? ಎಲ್ಲೋ ಇವರಿಗೆ ಈ ವಿಷಯ ಚೆನ್ನಾಗಿ ಗೊತ್ತಿರಬೇಕು.

ಶ್ರೀ ಎಸ್. ವೈ ಪಾಟೀಲ್.—ನಿಮಗೆ ಆ ವಿಷಯ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇ ಗೊತ್ತಿದೆ.

ಶ್ರೀ ಎಸ್. ವೈ. ಪಾಟೀಲ್.—ನಿಮ್ಮ ಮನೆಯಲ್ಲಿ ಯಾರಿಗಾದರೂ ಹೆಣ್ಣು ಮಗುವಿಗೆ ಈ ರೀತಿಯಾಗಿ ಅನಾಹುತವಾಗಿದ್ದರೆ, ನೀವು ಸುಮ್ಮನೆ ಇರುತ್ತಿದ್ದಿರಾ?

Sri B. Basavalingappa.—Madam Speaker, I cannot understand why the hon. members are attaching so much importance to a thing which is supposed to have happened sometime ago. If any person was aggrieved, it was her duty to have lodged a complaint with the police.

ಶ್ರೀ ಎಸ್ ವೈ. ಪಾಟೀಲ್ —ಎಲ್ಲರೂ ಶಕ್ಯವಾದಷ್ಟು ಕನ್ನಡದಲ್ಲಿಯೇ ಮಾತನಾಡಬೇಕು. ಕರ್ನಾಟಕದಲ್ಲಿ ಹುಟ್ಟಿ ಕನ್ನಡದಲ್ಲಿ ಮಾತನಾಡುವುದಿಲ್ಲ

ಶ್ರೀ ಎಂ.ಎಸ್. ಕೃಷ್ಣನ್.—ಈಗ ಪ್ರಶ್ನೆ ಏನೆಂದರೆ, ಮಾನ್ಯ ಬಸವಲಿಂಗಪ್ಪನವರು ಎರಡು ಮೂರು ಪ್ರಶ್ನೆಗಳನ್ನು ಎತ್ತಿದ್ದಾರೆ. ಒಂದನೆಯದು ಏನೆಂದರೆ, ಯಾರಾದರೂ ಸಹ ಇದರ ಬಗ್ಗೆ ಕೋರ್ಟಿಗೆ ಆಗಲಿ ಅಥವಾ ಪೋಲೀಸ್ ಸ್ಟೇಶನಿಗಾಗಲಿ ಕಂಪ್ಲೈಂಟ್ ಕೊಡಬಹುದಾಗಿತ್ತು ಎಂದು ಹೇಳಿದರು. ನನಗನಿಸುತ್ತದೆ ಈಗ ಇದರ ಬಗ್ಗೆ ಕಂಪ್ಲೈಂಟ್ ಕೊಡುವ ಪ್ರಶ್ನೆ ಬರುವುದಿಲ್ಲ. ಈ ಪ್ರಶ್ನೆ ಇವತ್ತು ಬೀದಿ ಮಾತಾಗಿದೆ. ಅಲ್ಲದೆ ಇದರ ಪರಿಣಾಮವಾಗಿ ಒಬ್ಬ ಮಂತ್ರಿಯವರು ಸಹ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಈಗ ಅದರ ಬಗ್ಗೆ ದೂರು ಕೊಡಬೇಕೆಂದು ಹೇಳುವುದು ಸರಿಯಾದ ಮಾತಲ್ಲ. ಅದಲ್ಲದೆ ಅದನ್ನು ಸಾಬೀತು ಮಾಡಬೇಕಾದರೆ ಬೇರೆ ರೀತಿಯಲ್ಲಿ ಮಾಡೋಣ. ಇನ್ನೊಂದು ವಿಚಾರವೇನೆಂದರೆ, ಇದರ ಬಗ್ಗೆ ಐ. ಜಿ ಪಿ. ಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ಮುಖ್ಯಮಂತ್ರಿಯವರು ಸಹ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದ್ದರಿಂದ ಆ ಐ.ಜಿ.ಪಿ. ಯವರ ರಿಪೋರ್ಟನ್ನು ಏಕೆ ಈ ಸಭೆಯ ಮುಂದೆ ಇಡಬಾರದು ? ಅದನ್ನು ಸಭೆಯ ಮುಂದಿಟ್ಟರೆ ಇದರಲ್ಲಿ ಯಾರು ತಪ್ಪಿತಸ್ಥರು ಎಂದು ಗೊತ್ತಾಗುತ್ತದೆ. ಅದನ್ನು ಇವರು ಏಕೆ ಮುಚ್ಚಿಟ್ಟುಕೊಳ್ಳಬೇಕು ? ಅದೇರೀತಿ ಮಾನ್ಯ ಕಿತ್ತೂರರವರು ಸಹ ಒಂದು ಸ್ಟೇಟ್‌ಮೆಂಟನ್ನು ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅವರು ಸಹ ಈ ಅಪಾದನೆಯಿಂದ ನಿರಪರಾಧಿಯಾಗಿದ್ದರೆ ವಿಮುಕ್ತರಾಗಬೇಕು ಅದನ್ನು ಕಂಡು ಹಿಡಿಯಬೇಕಾದರೆ, ಐ.ಜಿ.ಪಿ. ಯವರ ವರದಿಯನ್ನು ಈ ಸಭೆಯ ಮುಂದೆ ಇಡಬೇಕು, ಪರಿಸ್ಥಿತಿ ಹೀಗೆ ಇರುವಾಗ ಇದರ ಬಗ್ಗೆ ಕೋರ್ಟಿನಲ್ಲಿ ಕೇಸ್ ಹಾಕಬೇಕು, ಮತ್ತು ಪೊಲೀಸ್ ಸ್ಟೇಷನಿನಲ್ಲಿ ದೂರು ಕೊಡಬೇಕೆಂದು ಹೇಳುವುದು ಸರಿಯಾದುದಲ್ಲ; ಮತ್ತು ಅದು ಇವತ್ತಿನ ಪರಿಸ್ಥಿತಿಗನುಗುಣವಾಗಿಲ್ಲ. ಎರಡನೆಯದು ಏನೆಂದರೆ, ಆ ವರದಿಯನ್ನು ಸಭೆಯ ಮುಂದಿಟ್ಟು ಚರ್ಚೆಗೆ ಅವಕಾಶ ಮಾಡಬೇಕಾಗಿದೆ. ಈ ವಿಚಾರದಲ್ಲಿರುವ ಸುಮಿತ್ರಾ ದೇಸಾಯಿಯು ಏನಾಗಿದ್ದಾರೆಂದು ಮೂರುವರೆ ತಿಂಗಳಿನಿಂದ ಗೊತ್ತಿಲ್ಲ. ಸುಮಿತ್ರಾ ದೇಸಾಯಿ ಬದುಕಿದ್ದಾರೆಯೇ ಅಥವಾ ಅವರನ್ನು ಕೊಲೆ ಮಾಡಿದ್ದಾರೆಯೇ ಎಂದು ಗೊತ್ತಿಲ್ಲ. ಪರಿಸ್ಥಿತಿ ಹೀಗಿರುವಾಗ ಸದಸ್ಯರು ಏಕೆ ಇದರಲ್ಲಿ ಆತುರತೆಯನ್ನು ತೋರಿಸುತ್ತಿದ್ದಾರೆಂದು ಕೇಳಿದರೇ ಹೇಗೆ ? ಸರಕಾರದವರು ಸುಮಿತ್ರಾ ದೇಸಾಯಿಯವರನ್ನು ಜೀವಂತವಾಗಿ ಪ್ರೊಡ್ಯೂಸ್ ಮಾಡಬೇಕು ಇಲ್ಲವೇ ಅವರ ಮರ್ಡರ್ ಆಗಿದ್ದರೆ, ಮರ್ಡರ್ ಯಾರು ಮಾಡಿದ್ದಾರೆ ಅವರನ್ನು ಪತ್ತೆ ಮಾಡಬೇಕು. ಇದರಲ್ಲಿ ಅಪರಾಧಿ ಯಾರಿದ್ದಾರೆ ಅವರನ್ನು ಪತ್ತೆ ಮಾಡುವುದು ಪೋಲೀಸ್ ಇಲಾಖೆಯ ಕೆಲಸ. ಆದ್ದರಿಂದ ಇದು ಬಹಳ ಮುಖ್ಯವಾದ ವಿಷಯವಾಗಿರುವುದರಿಂದ ಅಲ್ಲದೆ ರಾಷ್ಟ್ರೀಯ ಪ್ರಶ್ನೆಯಾಗಿರುವುದರಿಂದ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

*ಶ್ರೀ ಎಸ್. ಬಂಗಾರಪ್ಪ (ಸೊರಬ) ಮಾನ್ಯ ಅಧ್ಯಕ್ಷರೆ, ರಾಜ್ಯಸರಕಾರದ ಪೋಲೀಸ್ ಖಾತೆಯು ಸುಮಿತ್ರ ದೇಸಾಯಿಯವರನ್ನು ಹುಡುಕಿ ಪತ್ತೆ ಹಚ್ಚುವ ಕಾರ್ಯದಲ್ಲಿ ಸಂಪೂರ್ಣವಾಗಿ ವಿಫಲರಾಗಿ ಇದನ್ನು ಸಿ ಬಿ ಐ ಗೆ ವಹಿಸಿ ಕೊಟ್ಟಿದ್ದಾರೆ. ಇವರು ಇದನ್ನು ಸಿ ಬಿ. ಐ. ಗೆ ವಹಿಸಿ ಕೊಡುವ ಪ್ರಮೇಯವಾದರೂ ಏನು? ರಾಜ್ಯದಲ್ಲಿ ಇಂಥ ಅನೇಕ ಪ್ರಕರಣಗಳು ನಡೆದು ಅದನ್ನು ಪತ್ತೆ ಹಚ್ಚಲಿಲ್ಲವೇ? ಇದನ್ನು ಮಾತ್ರ ಸಿ.ಬಿ.ಐ. ಗೆ ವಹಿಸಿ ಕೊಡುವ ಪ್ರಮೇಯವೇನು ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಇವತ್ತು ಗೃಹ ಖಾತೆಯು ಮುಖ್ಯ ಮಂತ್ರಿಯವರ ಕೈಕೆಳಗೆ ಇದೆ. ಮುಖ್ಯ ಮಂತ್ರಿಯವರಿಗೆ ಶಕ್ತಿ ಇದ್ದರೆ, ಸುಮಿತ್ರ ದೇಸಾಯಿಯವರನ್ನು ಏಕೆ ಪತ್ತೆ ಹಚ್ಚಿಲ್ಲ? ಸುಮಿತ್ರ ದೇಸಾಯಿ ಕಣ್ಮರೆಯಾದ ಎರಡು ಮೂರು ದಿವಸಗಳಲ್ಲಿ ಈ ವಿಚಾರ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ಆದರೂ ಪೋಲೀಸ್ ಇಲಾಖೆಯವರು ಇವರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಯಶಸ್ವಿಯಾಗಲಿಲ್ಲ ಏಕೆ ಎಂದು ಕೇಳುತ್ತೇನೆ. ಇದರಲ್ಲಿ ರಾಜ್ಯ ಸರಕಾರ ವಿಫಲರಾಗಿರುವುದರಿಂದ ದಯವಿಟ್ಟು ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಮುಖ್ಯಮಂತ್ರಿಯವರ ಪೋಲೀಸ್ ಇಲಾಖೆ ಇದರಲ್ಲಿ ನಿಸ್ಸಹಾಯಕರಾಗಿರುವುದರಿಂದ ಇದನ್ನು ಸಿ. ಬಿ. ಐ. ಗೆ ವಹಿಸಿ ಕೊಟ್ಟಿರುತ್ತಾರೆ. ಆದ್ದರಿಂದ ಮುಖ್ಯಮಂತ್ರಿಯವರು ರಾಜಿನಾಮೆಯನ್ನು ಕೊಡಬೇಕೆಂದು ನಾವು ಒತ್ತಾಯ ಮಾಡಬೇಕಾಗಿದೆ. ಅಲ್ಲದೆ ಈ ಮನೆಯಲ್ಲಿ ಈ ವಿಚಾರವನ್ನು ಸಿ. ಬಿ. ಐ. ಗೆ ವಹಿಸಿದ ಕಾರಣ, ಐ. ಜಿ. ಪಿ. ರಿಪೋರ್ಟು ಮತ್ತು ಇದಕ್ಕೆ ಸಂಬಂಧಪಟ್ಟ ಇತರ ವರದಿಗಳನ್ನು ಇಟ್ಟು ಇದರಲ್ಲಿ ಸಂಪೂರ್ಣವಾದ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):—ಇದರಲ್ಲಿ ಏನಾಗಿದೆ ಎಂದರೆ ಅನೇಕ ಸಂಶಯಗಳು ಈ ಒಂದು ಪ್ರಕರಣದಿಂದ ಪ್ರಾರಂಭವಾಗಿದೆ. ಶ್ರೀಮಾನ್ ಕೃಷ್ಣನ್ ಅವರು ಹೇಳಿದ ಹಾಗೆ ಇದರಲ್ಲಿ ಶ್ರೀಮಾನ್ ಕಿತ್ತೂರ್ ಅವರು ಎಷ್ಟರ ಮಟ್ಟಿಗೆ ಜವಾಬ್ದಾರರಾಗಿದ್ದಾರೆ ಎನ್ನುವುದನ್ನು ನಾವು ಈ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ಏತಕ್ಕೆಂದರೆ ಶ್ರೀಮಾನ್ ಕಿತ್ತೂರ್ ಅವರು ಹಿಂದೆ ರಾಜ್ಯ ಸಚಿವರಾಗಿದ್ದರು. ಈಗಲೂ ಕೂಡ ಅವರು ಈ ಸದನದ ಸದಸ್ಯರಾಗಿದ್ದಾರೆ. ಅವರು ಈ ಬಗ್ಗೆ ಒಂದು ಹೇಳಿಕೆಯನ್ನು ಈ ಸದನದಲ್ಲಿ ಮಾಡುವುದಕ್ಕೆ ಅವಕಾಶವಾಗಿಲ್ಲ. ಕಾರಣವೇನೆಂದರೆ ಶ್ರೀಮಾನ್ ಕಿತ್ತೂರ್ ಅವರು ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟ ನಂತರ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟು ಈ ಒಂದು ಪ್ರಸಂಗವನ್ನು ತನಿಖೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಬಗ್ಗೆ ಸರ್ಕಾರ ಹೆಚ್ಚು ಬೆಳಕು ಚೆಲ್ಲುವುದಕ್ಕೆ ಸಾಧ್ಯವಿದೆ ಎಂದು ನಾವು ಕಾತುರರಾಗಿದ್ದೆವು. ಆದರೆ ಅದು ಆಗಲಿಲ್ಲ. ಇದರ ಜೊತೆಗೆ ಇತ್ತೀಚೆಗೆ ತಿಳಿದಿರುವ ಹಾಗೆ ಇದರಲ್ಲಿ ಹಲವಾರು ವಿಚಾರಗಳು ಇವೆ.

(ಶ್ರೀ ಕಾಗೋಡು ತಿಮ್ಮಪ್ಪ)

ಅವುಗಳನ್ನು ಬಹಿರಂಗಪಡಿಸತಕ್ಕ ಅಗತ್ಯವಿಲ್ಲ. ಈ ವಿಷಯ ಇಲ್ಲಿ ಚರ್ಚೆಗೆ ಬಂದ ನಂತರ ಅವುಗಳನ್ನು ಬಹಿರಂಗ ಮಾಡಬಹುದು. ಪ್ರಮುಖವಾಗಿ ಇದರಲ್ಲಿ ಕೆಲವು ಉನ್ನತ ಪೋಲೀಸ್ ಅಧಿಕಾರಿಗಳು ಷರೀಕಾಗಿದ್ದಾರೆ ಎನ್ನುವುದು ಸರ್ವೇಸಾಧಾರಣವಾಗಿ ಎದ್ದು ಕಾಣುತ್ತದೆ. ಯಾರು ಯಾರು ಅಧಿಕಾರಿಗಳು ಮತ್ತು ಯಾವ ಯಾವ ರಾಜಕಾರಣಿಗಳು ಇದರಲ್ಲಿ ಆಸಕ್ತಿಯನ್ನು ವಹಿಸಿದ್ದಾರೆ ಎನ್ನುವುದನ್ನು ಈ ಸದನದಲ್ಲಿ ಚರ್ಚೆಗೆ ಬಂದಾಗ ಮಾತ್ರ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ವಿಷಯ ಈ ಸದನದಲ್ಲಿ ಚರ್ಚೆಯಾಗಬೇಕು. ಇದರಲ್ಲಿ ಶ್ರೀಮಾನ್ ಕಿತ್ತೂರ್ ಅವರ ಗೌರವ ಪ್ರತಿಷ್ಠೆಗಳೂ ಅಡಕವಾಗಿವೆ. ಶ್ರೀಮಾನ್ ಬಸವಲಿಂಗಪ್ಪನವರು ಸರ್ಕಾರ ಇದನ್ನು ತನಿಖೆ ಮಾಡುವುದಕ್ಕೆ ಆಗದೇ ಇದ್ದುದರಿಂದ ಇದನ್ನು ಸಿ. ಬಿ ಐ. ಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಇದರಲ್ಲಿ ಯಾರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದರು, ಯಾರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ ಎನ್ನುವುದು ಇತ್ಯರ್ಥವಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡುವಾಗ ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಚಲನವಲನವನ್ನು ನೋಡುತ್ತಾ ಇರಬೇಕು ಎಂದು ಗೃಹಶಾಖೆಯ ರಾಜ್ಯ ಸಚಿವರಾಗಿದ್ದ ಶ್ರೀಮಾನ್ ಕಿತ್ತೂರ್ ಅವರು ಪೋಲೀಸ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದರು ಎಂದು ಹೇಳಿದ್ದರು. ಅವರ ಸೂಚನೆಯ ಪ್ರಕಾರ ಪೋಲೀಸ್ ಅಧಿಕಾರಿಗಳು ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಚಲನವಲನದ ಮೇಲೆ ಕಣ್ಣಿಟ್ಟು ಗಮನಿಸಿದ್ದರೆ ಇಲ್ಲಿಯವರೆಗೂ ಅದು ಒಂದು ದೊಡ್ಡ ಸಮಸ್ಯೆಯ ಪರಿಣಾಮವಾಗಿ ಆಗುತ್ತಾ ಇರಲಿಲ್ಲ. ಮಾನ್ಯ ಕಿತ್ತೂರ್ ಅವರು ಪೋಲೀಸ್ ಅಧಿಕಾರಿಗಳಿಗೆ ಏನು ಸೂಚನೆಯನ್ನು ಕೊಟ್ಟಿದ್ದರೂ ಅದನ್ನು ಅವರು ಪರಿಪಾಲನೆ ಮಾಡಿಲ್ಲ. ಈ ಪ್ರಕರಣ ಹೆಚ್ಚು ಬೆಳೆಯುವುದಕ್ಕೆ ಪೋಲೀಸ್ ಅಧಿಕಾರಿಗಳು ಕಾರಣರಾಗಿದ್ದಾರೆ. ಇದಕ್ಕೆ ಯಾರು ಹೊಣೆಗಾರರು ಎಂಬುದನ್ನು ಸರ್ಕಾರ ಯೋಚನೆ ಮಾಡಿಲ್ಲ. ಈ ವಿಷಯದಲ್ಲಿ ವಿಶೇಷವಾದ ತನಿಖೆ ನಡೆಯಲಿಲ್ಲ. ಶ್ರೀಮತಿ ಸುಮಿತ್ರಾ ದೇಸಾಯಿ ಅವರು ಬೀರೂರಿನಲ್ಲಿ ಕಂಡರು, ಅಲ್ಲಿ ಕಂಡರು, ಇಲ್ಲಿ ಕಂಡರು ಎಂದು ಹೇಳಿ ಪೋಲೀಸಿನವರು ಅವರ ಫೋಟೋವನ್ನು ಬಿಡುಗಡೆ ಮಾಡಿದರು. ಆ ಮೇಲೆ ಅದನ್ನು ಮತ್ತೆ ವಾಪಸ್ಸು ಪಡೆದರು ಈ ಸದನ ಮುಂದುವರಿದ ಮೇಲೆ ಈ ವಿಚಾರದಲ್ಲಿ ಪೋಲೀಸರ ಬಗ್ಗೆ ಸಂಶಯಕ್ಕೆ ಅವಕಾಶ ಮಾಡಿದೆ. ಸರ್ಕಾರದವರು ಈ ಒಂದು ವಿಚಾರವನ್ನು ತನಿಖೆ ಮಾಡಿ ಹೊಸ ವಿಷಯಗಳು ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದರೆ ಇದರಲ್ಲಿ ಹೆಚ್ಚು ಚರ್ಚೆ ಮಾಡುವುದಕ್ಕೆ ಅವಕಾಶವಾಗಲೀ ಅಗತ್ಯವಾಗಲೀ ಇರಲಿಲ್ಲ. ಪೋಲೀಸಿನವರು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಈ ವಿಷಯದಲ್ಲಿ ವರದಿಯನ್ನು ಕೊಡತಕ್ಕಂಥಾ ಮತ್ತು ಆ ಮಾತನ್ನು ವಾಪಸ್ಸು

ಪಡೆಯುವುದನ್ನು ಮಾಡಿದ್ದಾರೆ. ಪ್ರಮುಖವಾಗಿ ಕೆಲವು ಪೋಲೀಸ್ ಅಧಿಕಾರಿಗಳು ಇದರಲ್ಲಿ ಷರೀಕಾಗಿ ಕೆಲವು ಮಂತ್ರಿಗಳನ್ನು ಮಂತ್ರಿಪದವಿಯಿಂದ ತೆಗೆಯಬೇಕು ಎಂದು ಕೆಲವು ವಿಷಯಗಳನ್ನು ಮುಚ್ಚಿ ಹಾಕಿದ್ದಾರೆ. ಇದನ್ನು ಬೇಕಾದರೆ ನಾವು ಚರ್ಚೆಯಲ್ಲಿ ತೋರಿಸುತ್ತೇವೆ. ಇದನ್ನು ಕೇವಲ ಬರೀ ಮೈಸೂರು ರಾಜ್ಯದಲ್ಲೇ ಅಲ್ಲ ಇಡೀ ರಾಷ್ಟ್ರದಲ್ಲೇ ಪ್ರಮುಖ ಪತ್ರಿಕೆಗಳವರು ಅಗ್ರ ಲೇಖನಗಳನ್ನು ಬರೆದಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿದರೆ ಇದರಲ್ಲಿ ಯಾರು ತಪ್ಪಿತಸ್ಥರು ಯಾರು ತಪ್ಪಿತಸ್ಥರಲ್ಲ ಎಂಬುದು ಈ ಸದನದಲ್ಲಿ ತೀರ್ಮಾನವಾಗುತ್ತದೆ. ಈ ದೃಷ್ಟಿಯಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ :—ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ವಿವರವಾಗಿ ಈಗಾಗಲೇ ಹೇಳಿದ್ದಾರೆ. ಈ ಪ್ರಕರಣದಲ್ಲಿ ಶ್ರೀಮಾನ್ ಕಿತ್ತೂರ್ ಅವರ ಜೊತೆಗೆ ಅನೇಕ ಸಹೋದ್ಯೋಗಿಗಳು ಭಾಗಸ್ಥರಿದ್ದಾರೆ ಎನ್ನುವ ಅಂಶ ಇದೆ. ಇದರಲ್ಲಿ ಕೋತಿ ಮೊಸರನ್ನವನ್ನು ತಿಂದು ಮೇಕೆ ಬಾಯಿಗೆ ಸವರಿದ ಹಾಗೆ ಶ್ರೀಮಾನ್ ಕಿತ್ತೂರ್ ಅವರು ಇದಕ್ಕೆ ಬಲಿಯಾಗಿದ್ದಾರೆ. ಅದರಿಂದಾಗಿ ಶ್ರೀಮಾನ್ ಕಿತ್ತೂರ್ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಈ ವಿಷಯ ಈ ಸದನದಲ್ಲಿ ಚರ್ಚೆಯಾದರೆ ಆಗ ಯಾರು ತಪ್ಪಿತಸ್ಥರು ಎಂಬುದು ಗೊತ್ತಾಗುತ್ತದೆ. ಈಗ ಬೀದಿ ಬೀದಿಯಲ್ಲಿಯೂ ಕೂಡ ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಸಮಾಚಾರ ಏನಾಯಿತು ಎಂದು ಸಾಮಾನ್ಯ ಪ್ರಶ್ನೆಗಳು ಕೇಳುತ್ತಾರೆ. ಈ ವಿಷಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವುದು ಪ್ರೆಸ್ಟೇಜ್ ಪ್ರಶ್ನೆ ಅಲ್ಲ. ಸದಸ್ಯರ ಒಂದು ಮಾನಾವಮಾನದ ಪ್ರಶ್ನೆ. ಆದ್ದರಿಂದ ಈ ವಿಷಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ನಿಜಾಂಶವನ್ನು ಹೊರಗೆಡಹಿದರೆ ಶ್ರೀಮತಿ ಸುಮಿತ್ರಾ ದೇಸಾಯಿ ಅವರು ಇದ್ದಾರೆಯೇ ಅಥವಾ ಇಲ್ಲವೇ, ಅವರನ್ನು ಪತ್ತೆ ಮಾಡುವ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ವಿಷಯವನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಅದು ಬಿಟ್ಟು ವಿಷಯವನ್ನು ಬಚ್ಚಿಟ್ಟು ತಿಪ್ಪೆ ಸಾರಿಸುವ ಕೆಲಸ ಮಾಡಿದರೆ ಸರಿ ಹೋಗುವುದಿಲ್ಲ. ಈ ದೃಷ್ಟಿಯಿಂದ ಈ ವಿಷಯದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

*ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ):— ಮಾನ್ಯ ಅಧ್ಯಕ್ಷಿಣಿಯವರೇ ಈ ಸುಮಿತ್ರಾ ದೇಸಾಯಿ ಅವರ ಪ್ರಕರಣದ ಬಗ್ಗೆ ಚರ್ಚೆ ಮಾಡುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡಬೇಕು ಎಂದರೆ ಇದರಲ್ಲಿ ಕೆಲವು ಮಂತ್ರಿಗಳು ಒಳಗಾಗಿದ್ದಾರೆ ಎಂದು ನಾವು ಮಾತ್ರ ಹೇಳುತ್ತಿಲ್ಲ. ನಿಮ್ಮ ಕಾಂಗ್ರೆಸ್ ಪಕ್ಷದವರೇ ಆದ

ಶ್ರೀ ಬಿ. ಪುಟ್ಟಸ್ವಾಮಯ್ಯ

ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹನುಮಂತಯ್ಯನವರು ಈ ವಿಷಯವನ್ನು ಲೋಕ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಶ್ರೀಮತಿ ಸುಮಿತ್ರಾ ದೇಸಾಯಿ ಅವರ ಕಣ್ಮರೆಯಾಗಿರತಕ್ಕ ಒಂದು ಶಂಕೆ ಈ ಒಂದು ಪ್ರಕರಣ ಏನಿದೆ ಇದರಲ್ಲಿ ಮೈಸೂರು ರಾಜ್ಯದ ಕೆಲವು ಮಂತ್ರಿಗಳು ಒಳಗಾಗಿದ್ದಾರೆ ಎಂದು ಅವರು ಹೇಳಿದ್ದಾರೆ. ಇಂಥಾ ಅಪಾದನೆಗೆ ಒಳಗಾಗಿರತಕ್ಕ ಕೆಲವು ಮಂತ್ರಿಗಳು ಮೈಸೂರು ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡು ನಡೆಸುತ್ತಾ ಇರುವಾಗ ಈ ಮಾನ್ಯ ಸಭೆಯ ಸದಸ್ಯರಾಗಿ ನಾವು ಹೇಗೆ ಸುಮ್ಮನೆ ಹೇಗೆ ಕುಳಿತುಕೊಳ್ಳುವುದು ? ಈ ಪಾಪಾಗ್ನಿಯಲ್ಲಿ ಒಳಗಾಗಿರುವವರು ಯಾರು ಯಾರು ಇದ್ದಾರೆ ಎನ್ನತಕ್ಕಂಥಾದ್ದು ಈ ರಾಜ್ಯಕ್ಕೆ ಮಾತ್ರವಲ್ಲ, ಈ ರಾಷ್ಟ್ರಕ್ಕೆ, ಗೊತ್ತಾಗಬೇಕು. ಮೈಸೂರು ರಾಜ್ಯದ ನ್ಯಾಯ, ಧರ್ಮ, ಘನತೆ, ಗೌರವ ಮತ್ತು ಹಿರಿಮೆ ಉಳಿಯಬೇಕಾದರೆ ಈ ವಿಷಯ ಈ ಸದನದಲ್ಲಿ ಬಿಚ್ಚು ಮನಸ್ಸಿನಿಂದ ಚರ್ಚೆಯಾಗಬೇಕು. ಈ ಅಮೃತ ಕೊಳದಲ್ಲಿ ಏನೇನು ಮುಖ್ಯ ಅಂಶಗಳು ಇವೆ ಎಂಬುವನ್ನು ಕೇಳಬೇಕು ಎನ್ನುವ ಕಾತುರತೆ ಇದೆ. ಈ ಸುಮಿತ್ರಾ ದೇಸಾಯಿ ಅವರ ಪತ್ತೆಯ ತರದೂದಿನಲ್ಲಿ ಪೋಲೀಸ್ ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಪ್ರಕರಣದಲ್ಲಿ ಒಳಗಾಗಿದ್ದವರನ್ನು ಪತ್ತೆ ಮಾಡಲು ಪೋಲೀಸ್ ನಾಯಿಗಳು ಹುಡುಕಿಕೊಂಡು ಹೋದಾಗ ಈ ಪೋಲೀಸ್ ನಾಯಿಗಳು ಕೆಲವು ಮಂತ್ರಿಗಳನ್ನು ನೆಕ್ಕಿದವು. ಇದು ರಾಷ್ಟ್ರಕ್ಕೆ ಗೊತ್ತಾಗಬೇಕು. ಇದನ್ನು ಪತ್ತೆ ಮಾಡುವುದಕ್ಕೆ ಎಷ್ಟು ಜನ ಪೋಲೀಸ್ ಅಧಿಕಾರಿಗಳನ್ನು ಬಿಟ್ಟಿದ್ದರು, ಈ ಪ್ರಕರಣವನ್ನು ಪತ್ತೆ ಮಾಡುವುದಕ್ಕೆ ಎಷ್ಟು ಪೋಲೀಸ್ ನಾಯಿಗಳನ್ನು ಬಿಟ್ಟಿದ್ದರು ಇವುಗಳೆಲ್ಲವನ್ನೂ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ತಿಳಿಸಬೇಕು. ಕೆಲವು ಮಂತ್ರಿಗಳು ಈ ಪ್ರಕರಣದಲ್ಲಿ ಒಳಗಾಗಿದ್ದಾರೆ ಎಂದು ನಿಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯರಾದ ಶ್ರೀಮಾನ್ ಕೆ. ಹನುಮಂತಯ್ಯನವರು ಲೋಕಸಭೆಯಲ್ಲಿ ಹೇಳಿದ್ದಾರೆ. ಅವರ ಹೇಳಿಕೆಯನ್ನು ಪ್ರತಿಭಟನೆ ಮಾಡಿ ಯಾವ ಮಂತ್ರಿಗಳೂ ಹೇಳಿಲ್ಲ. ಆದ್ದರಿಂದ ಶ್ರೀಮಾನ್ ಕೆ. ಹನುಮಂತಯ್ಯನವರು ಹೇಳಿದ್ದರಲ್ಲಿ ಸತ್ಯ ಇದೆ ಎಂಬ ಅಂಶ ಭಾಸವಾಗುತ್ತದೆ. ಈ ಮನೆಯ ಗೌರವ ಮತ್ತು ಈ ಮನೆಯ ಸದಸ್ಯರ ಮಾನ ಮರ್ಯಾದೆ ಬೆಳೆಯಬೇಕು, ಉಳಿಯಬೇಕು ಎಂಬ ಅಂಶ ಇದ್ದರೆ ಈ ಪ್ರಕರಣದ ವಿಷಯದಲ್ಲಿ ತೀವ್ರವಾಗಿ ಚರ್ಚೆ ಮಾಡುವುದಕ್ಕೆ ತಾವು ಸಮ್ಮತಿ ಕೊಡಬೇಕು. ಈ ವಿಷಯದಲ್ಲಿ ಬಿಚ್ಚು ಮನಸ್ಸಿನ ಪ್ರಸ್ತಾಪ ಅತ್ಯವಶ್ಯಕವಾಗಿದೆ. ಆದ್ದರಿಂದ ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

2-30 P.M.

ಶ್ರೀ ಎಸ್. ವೈ. ಪಾಟೀಲ್: (ಸಿಂದಗಿ) ಮಾನ್ಯ ಸಭಾಧ್ಯಕ್ಷಿಣಿಯವರೇ, ಕೇವಲ ಸರ್ಕಾರವನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಇದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಾವು ಕೇಳುತ್ತಿಲ್ಲ. ಆಕೆ ಇಂದು ಸತ್ತಿದ್ದಾಳೆಯೋ ಅಥವಾ ಬದುಕಿದ್ದಾಳೆಯೋ ಎಂಬುದು ಪ್ರಶ್ನೆ. ಆಕೆ ಬೆಂಗಳೂರಿಗೆ ಬಂದು ಮಾನ್ಯ ಕಿತ್ತೂರ ಅವರ ಮನೆಗೆ ಹೋದಳು. ನಂತರ ಅಲ್ಲಿಂದ ಯಾವುದೋ ಆಶ್ರಮಕ್ಕೆ ಹೋದಳು. ಅಲ್ಲಿಂದ ಮತ್ತೆಲ್ಲಿಗೆ ಹೋಗಿದ್ದಾಳೆಂಬುದು ಯಾರಿಗೂ ಗೊತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಸರ್ವೇಸಾಮಾನ್ಯವಾಗಿ ಎಲ್ಲರ ಬಾಯಲ್ಲಿಯೂ ಸಹ ಇದೇ ಮಾತು ಕೇಳಿ ಬರುತ್ತಿದೆ. ಇದರಿಂದ ಕರ್ನಾಟಕ ರಾಜ್ಯಕ್ಕೇ ಅಪಮಾನ ಎಂದು ಹೇಳುತ್ತೇನೆ. ಈ ಸರ್ಕಾರ ನಮ್ಮದು, ಈ ಮಂತ್ರಿ ಮಂಡಲ ನಮ್ಮದು, ಆದಕಾರಣ ಸರ್ಕಾರ ಮತ್ತು ಮಂತ್ರಿಮಂಡಲದ ಗೌರವ ಹೋದರೆ ನಮ್ಮ ಗೌರವವೂ ಸಹ ಹೋದಂತೆ. ಆದಕಾರಣ ನಾನು ತಮ್ಮಲ್ಲಿ ಹಾಗೂ ಸರ್ಕಾರದವರಲ್ಲಿ ಅತಿ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಆಕೆ ಎಲ್ಲಿದ್ದಾಳೆಂಬುದನ್ನು ಪತ್ತೆ ಹಚ್ಚಬೇಕು. ಇಂತಹ ಒಂದು ಸಣ್ಣ ಕೇಸನ್ನು ತಪಾಸು ಮಾಡಲು ಇಷ್ಟೊಂದು ಸಮಯ ಬೇಕೇ ಎಂದು ನಾನು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಹೃದಯ ದೊಡ್ಡದು. ಮಾನ್ಯ ಕಿತ್ತೂರ ಅವರು ನಿರಪರಾಧಿಗಳು ಎಂದು ಮಾತನಾಡುವುದು ಸರಿಯಲ್ಲ. ಆ ರೀತಿ ಹೇಳುವುದರಿಂದ ಅಪರಾಧ ಸಿದ್ಧವಾಗುವುದಿಲ್ಲ. ಮೊದಲು ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಆಗ ಅಪರಾಧಿಗಳು ಯಾರು ಎಂಬುದು ತಿಳಿಯುತ್ತದೆ. ಚರ್ಚೆಯ ನಂತರ ಅಪರಾಧಿಗಳು ಯಾರು ಎಂದು ಗೊತ್ತಾಗುತ್ತದೋ, ಅವರಿಗೆ ಶಿಕ್ಷೆಯಾಗಲಿ. ಈ ಕಳಂಕದಿಂದ ನಮ್ಮ ನಾಡಿನಲ್ಲಿಯೇ ಏಕೆ, ಡೀ ಭಾರತದೇಶದಲ್ಲಿಯೇ ನಮಗೆ ಮೋರೆ ತೋರಿಸಲಾರದ ಪರಿಸ್ಥಿತಿ ಬಂದಿದೆ. ಆದಕಾರಣ ಈ ಕಳಂಕ ನಿವಾರಣೆಯಾಗಬೇಕಾಗಿದೆ. ನಮ್ಮ ರಾಜ್ಯ ಘಟನೆಯಲ್ಲಿ ಪ್ರತಿಯೊಬ್ಬರಿಗೂ ಪ್ರಾಣದ ರಕ್ಷಣೆ ಕೊಡಬೇಕೆಂದು ಹೇಳಿದೆ. ಆದರೆ ಇಂದು ಒಬ್ಬ ಕುಲೀನ ಹೆಣ್ಣು ಮಗಳು ಜೀವ ಸಹಿತ ಇದ್ದಾಳೆಯೋ ಅಥವಾ ಇಲ್ಲವೋ ಎಂದು ಧೈರ್ಯವಾಗಿ ಹೇಳುವುದಕ್ಕೆ ನಿಮಗೆ ಸಾಧ್ಯವಿಲ್ಲವಾಗಿದೆ. ನಿಮಗೆ ಈ ವಿಚಾರದಲ್ಲಿ ಏನು ಅನಿಸುತ್ತದೋ ನನಗೆ ಗೊತ್ತಿಲ್ಲ, ಆದರೆ ನಮಗೆ ಮಾತ್ರ ಆಕೆಯ ವಿಚಾರದಲ್ಲಿ ದುಃಖವಾಗಿದೆ. ಆಕೆಯ ಬಗ್ಗೆ ಏನು ಸಂಶಯ ನಮಗೆ ಬಂದಿದೆ ಅದು ಹೋಗಬೇಕಾದರೆ, ಆಕೆಯೇ ಬಂದು ಈ ಪ್ರಕರಣದಲ್ಲಿ ಯಾರು ಯಾರು ಒಳಗೊಂಡಿದ್ದಾರೆ, ಯಾರು ಯಾರು ಇಲ್ಲಿ ಎಂಬುದನ್ನು ಹೇಳಬೇಕು, ಮತ್ತು ಇದರ ಬಗ್ಗೆ ಪೂರ್ಣವಾದ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ನಮ್ರತೆಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : (ವೇಮಗಲ್) ಮೊನ್ನೆ ಗುಲ್ಬರ್ಗದಲ್ಲಿ ವಿದ್ಯಾರ್ಥಿಗಳು ಫೀ ವಿಚಾರದಲ್ಲಿ ಸ್ಟ್ರೈಕು ಮಾಡಿದಾಗ ಪೋಲೀಸಿನವರು ವಿದ್ಯಾರ್ಥಿಗಳಿಗೆ ಹೊಡೆದರು. ಅವರ ಮನೆಗಳಿಗೆ ಮತ್ತು ರೂಮುಗಳಿಗೆ ಹೋಗಿ ಹೊಡೆದರು. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಾಗ ಅವರು ಕಾನೂನು ಭಂಗ ಮಾಡಿದವರು ಯಾರೇ ಆಗಿರಲಿ, ಅವರು ಎಲ್ಲಿಯೇ ಇರಲಿ, ಅವರನ್ನು ಶಿಕ್ಷಿಸುತ್ತೇವೆಂದು ಹೇಳಿದರು. ಲಾ-ಅಂಡ್ ಆರ್ಡರ ಎಲ್ಲರಿಗೂ ಅನ್ವಯವಾಗುತ್ತದೆಂದು ಹೇಳುವಾಗ, ನಮ್ಮ ರಾಜ್ಯದಲ್ಲಿ ಒಬ್ಬ ಮಹಿಳೆ ಪತ್ತೆಯಿಲ್ಲ ಎಂದರೆ, ಇದೂ ಸಹ ಲಾ-ಅಂಡ ಆರ್ಡರು ಪ್ರಾಬ್ಲಮ್ ಆಗುವುದಿಲ್ಲವೇ ಎಂದು ಕೇಳುತ್ತೇನೆ. ಒಬ್ಬ ಮಹಿಳೆಯನ್ನು ಪತ್ತೆ ಹಚ್ಚುವುದರಲ್ಲಿ ಸರ್ಕಾರದವರು ವಿಫಲವಾಗಿದ್ದಾರೆಂದು ಕಂಡು ಬಂದಾಗ, ಸರ್ಕಾರದ ಅಸ್ತಿತ್ವಕ್ಕೆ ಧಕ್ಕೆ ಬಂದಂತೆ ಆಗುವುದಿಲ್ಲವೇ ? ಈ ಎಲ್ಲ ಕಾರಣಗಳಿಂದ ಇದರ ಬಗ್ಗೆ ಪೂರ್ಣವಾದ ಚರ್ಚೆಗೆ ತಾವು ಅವಕಾಶ ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗಾಗಲೇ 80 ಪರ್ಸೆಂಟ್‌ವರೆಗೆ ಚರ್ಚೆಯಾಗಿ ಹೋಯಿತು

ಶ್ರೀ ಡಿ. ದೇವರಾಜ ಅರಸ್ : (ಮುಖ್ಯ ಮಂತ್ರಿಗಳು) : ಇಲ್ಲಿಯ ವರೆಗೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದನ್ನು ಕೇಳಿದ್ದೇನೆ. ಎಲ್ಲರ ಮಾತಿನಲ್ಲಿಯೂ ಎದ್ದು ಕಾಣುವುದೇನೆಂದರೆ, ಶ್ರೀಮ್ವಾನ್ ಕಿತ್ತೂರ ಅವರ ಬಗ್ಗೆ ಎಲ್ಲಾ ಸದಸ್ಯರಿಗೂ ಬಹಳ ಪ್ರೀತಿಯಿದೆ, ಅನುಕಂಪವಿದೆ ಎಂಬುದನ್ನು ತೋರಿಸುತ್ತಿದ್ದಾರೆ. ಅಷ್ಟೊಂದು ಅನುಕಂಪವಿರುವುದಕ್ಕಾಗಿ ನನ್ನ ಧನ್ಯವಾದಗಳು. ಆದರೆ ನಿಮ್ಮ ಒಂದು ಅನುಕಂಪ ಬಹಳ ಅತಿರೇಕಕ್ಕೆ ಹೋಗುತ್ತಿದೆ. ನಾನು ಒಂದು ಕಡೆ ಓದಿದ್ದು ಜ್ಞಾಪಕಕ್ಕೆ ಬರುತ್ತದೆ. ಮನುಷ್ಯನನ್ನು ಕೊಲ್ಲುವುದು ಎರಡು ತರಹ. ಒಂದು ಕತ್ತಿಯಿಂದ ಕೊಲ್ಲುವುದು, ಇನ್ನೊಂದು ಬಹಳ ಪ್ರೀತಿಯಿಂದ ಕೊಲ್ಲುವುದು. They are killing kindness or love or affection which they are exhibiting so much.

SRI M. S. KRISHNAN.—You have already killed him. Where is the question of our killing him?

SRI D. DEVARAJA URS.—You are trying to beat a dead horse. If he is already killed, you are trying to kill the dead body. Is is not? You are trying to take out the dead body from the grave and making a ghost of it,

SRI S. BANGARAPPA.—We cannot kill a dead body. We can only kill a living person.

ಶ್ರೀ ಡಿ. ದೇವರಾಜ ಅರಸ್: ಎರಡನೆಯದು ಏನೆಂದರೆ, ನಮ್ಮ ಕರ್ನಾಟಕ ರಾಜ್ಯಕ್ಕೆ ಕಳಂಕ ತಂದಿರುವುದನ್ನು ಅಳಿಸುವುದಕ್ಕೆ ಕಾತುರರಾಗಿದ್ದಾರೆಂದು ಮಾನ್ಯ ಸದಸ್ಯರುಗಳು ಇಲ್ಲಿಯವರೆಗೆ ಮಾತನಾಡಿದ್ದರಲ್ಲಿ ತಿಳಿದು ಬಂತು. ಇಷ್ಟೊಂದು ಕಾತುರವನ್ನು ತೋರಿಸುತ್ತಿರುವ ಮಾನ್ಯ ಸದಸ್ಯರಲ್ಲಿ ನನ್ನ ಒಂದು ಚಿಕ್ಕ ಮನವಿ ಏನೆಂದರೆ, ಅದೇ ಕಾತುರವನ್ನು ಕೃತಿಯಲ್ಲಿ ತೋರಿಸಿ ಎಂದು ನನ್ನ ವಿನಂತಿ. ಮತ್ತು ಈ ಬಗ್ಗೆ ಮಾನ್ಯ ಸದಸ್ಯರಲ್ಲಿ ಇಷ್ಟೊಂದು ಕಳಕಳಿ ಇದ್ದ ಮೇಲೆ ಇದರ ವಿಚಾರವನ್ನು ಸ್ವಲ್ಪ ಗಂಭೀರವಾಗಿ ಪ್ರಸ್ತಾಪ ಮಾಡುವುದು ಯುಕ್ತ. ಆ ಹೆಣ್ಣು ಮಗಳ ಮೇಲೆ ಬಹಳವಾದಂಥ ಗೌರವ ವಾತ್ಸಲ್ಯ ಮಾನ್ಯ ಸದಸ್ಯರಿಗೆ ಇದ್ದಂತೆ ಕಾಣುತ್ತವೆ. ಅಷ್ಟೊಂದು ವಾತ್ಸಲ್ಯ ಮತ್ತು ಗೌರವ ಆ ಹೆಣ್ಣು ಮಗಳ ಮೇಲೆ ಇದ್ದರೆ, ಈ ಪ್ರಶ್ನೆಯನ್ನು ನೋಡುವ ದೃಷ್ಟಿಯೂ ಕೂಡ ಬಹಳ ಗಂಭೀರವಾಗಿ ಇರಬೇಕಾದುದು ಅವಶ್ಯಕ. ನೀವೆಲ್ಲಾ ಮಾತನಾಡುವ ಧಾಟಿಯನ್ನು ನಾನು ನೋಡಿದೆ. ಇದೇ ರೀತಿ ನಮ್ಮ ಮನೆಯ ಮಕ್ಕಳ ವಿಚಾರ ದಲ್ಲಿಯೂ ಮಾತನಾಡಿದರೆ ಅವರಿಗೆ ಏನು ನೋವಾಗುತ್ತಿತ್ತು ಎಂಬುದನ್ನು ಗಮನದಲ್ಲಿಟ್ಟುಕೊಂಡು ಇನ್ನೊಬ್ಬ ವ್ಯಕ್ತಿಯ ಬಗ್ಗೆ ಮಾತನಾಡುವಾಗಲೂ ಸಹ ಅದೇ ರೀತಿ ನೋವಾಗುತ್ತದೆಂದು ತಿಳಿದುಕೊಂಡು ಮಾತನಾಡುವುದು ಯುಕ್ತ. ಆಕೆ ಇಂದು ಎಲ್ಲಿದ್ದಾರೆಂಬುದು ಯಾರಿಗೂ ಗೊತ್ತಿಲ್ಲ. ಇದರ ವಿಚಾರದಲ್ಲಿ ನಾನು ಹೋದ ಅಸೆಂಬ್ಲಿ ಅಧಿವೇಶನದಲ್ಲಿ ಒಂದು ಹೇಳಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದೆ.

ತದನಂತರ ಈ ಮಧ್ಯದಲ್ಲಿ ನಮ್ಮ ಸರಕಾರದ ವತಿಯಿಂದ ಹಾಗೂ ಪೋಲೀಸು ಇಲಾಖೆಯ ವತಿಯಿಂದ ಇವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನಗಳಾದವು ಮತ್ತು ಬೇರೆ ಪ್ರಯತ್ನಗಳೂ ನಡೆಯಿತು. ಈಗ ಅವರು ಪತ್ತೆ ಇಲ್ಲದ ಕಾರಣ ದಿಂದಲೇನೇ ನಾವು ಅಪರಾಧಿಗಳೋ ಏನೋ ಎನ್ನುವಂತೆ ಇದರ ಬಗ್ಗೆ ಬರೀ ಊಹಾಪೋಹಗಳನ್ನು ಇಟ್ಟುಕೊಂಡು ಇಲ್ಲಿ ಹೇಳುವುದು ಕಷ್ಟವೇ. ನೇರವಾದ ಯಾವ ವಿಚಾರಗಳೂ ಇದರಲಿಲ್ಲ. ಇದರಲ್ಲೇನೂ ಮರೆ ಮಾಚುವುದಕ್ಕಾಗಿ ಹಾಗೂ ಕರ್ನಾಟಕ ರಾಜ್ಯಕ್ಕೆ ಕಳಂಕ ತರುವ ರೀತಿಯಲ್ಲಿ ಸರಕಾರ ಮಾಡುತ್ತಿದೆ. ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇಂತಹ ಒಂದು ವಿಚಾರದಲ್ಲಿ ಸಭೆಯ ಮುಂದೆ ಹೇಳುವಾಗ ಸಷ್ಟವಾಗಿ ಹೇಳಬೇಕಾಗುತ್ತದೆ. ಯಾವ ರಾಜ್ಯದಲ್ಲೂ ಇಂತಹ ಕಳಂಕ ಬಂದಿರಲಿಲ್ಲ ಎಂದು ಹಾಗೂ ನಮ್ಮ ದೇಶಕ್ಕೆ ಕಳಂಕ ಬರುತ್ತದೆ ಎಂದು....

ಶ್ರೀ ಎಸ್. ವೈ. ಪಾಟೀಲ್ : ಕಳಂಕ ಬರದೇ ಇನ್ನೇನಾಗುತ್ತದೆ?

ಶ್ರೀ ಡಿ. ದೇವರಾಜ ಅರಸ್: ಇದರ ಬಗ್ಗೆ ಇನ್ನೂ ತನಿಖೆ ಮಾಡಬೇಕೆನ್ನುವ ವಿಚಾರ ಇರುವಾಗ ಇದರಲ್ಲಿ ಕಳಂಕವೇನು ಬರುತ್ತದೆ?

ಶ್ರೀ ಕೆ. ಹೆಚ್. ಹನುಮೇಗೌಡ: ರಾಜ್ಯದ ಪೋಲೀಸು ಇಲಾಖೆಯವರ ವಶಕ್ಕೆ ಇವರನ್ನು ಒಪ್ಪಿಸಿರಲಿಲ್ಲವೇ ಮತ್ತು ಇದೇ ಇಲಾಖೆಯವರು ಜೀಪಿನಲ್ಲಿ ಇವರನ್ನು ಫೋರ್ಸಿಬಲ್ ಆಗಿ ಕಳುಹಿಸಿರಲಿಲ್ಲವೇ?

ಶ್ರೀ ಡಿ. ದೇವರಾಜ ಅರಸ್: ಅವರನ್ನು ಪೋಲೀಸರ ವಶಕ್ಕೆ ಕೊಡಲು ಅವರೇನೂ ಕಳ್ಳರಲಿಲ್ಲ. ತಾವೇನಾದರೂ ಅವರ ಪರ ಲಾಯರಾದರೆ ಆಗ ಅವರ ಬಗ್ಗೆ ತಾವು ವಕಾಲತ್ತು ವಹಿಸಬಹುದು. ಅವರನ್ನು ಏಕೆ ಕಳುಹಿಸಿದರು ಎನ್ನುವುದನ್ನೆಲ್ಲಾ ಅಲ್ಲಿ ಹೇಳಬಹುದ. ನಿಮಗೆ ಪ್ರಪಂಚವೇ ಭೂತಾಕಾರವಾಗಿ ಕಾಣುತ್ತದೆ. ಇದಕ್ಕಾಗಿ ಸರಕಾರ ಇದರಲ್ಲಿ ದೊಡ್ಡ ತಪ್ಪು ಮಾಡಿದೆಯೇನೋ ಎನ್ನುವಂತೆ ಕಾಣಿಸುತ್ತದೆ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಭೂತಕಾರವಾಗಿತ್ತೋ ಇಲ್ಲವೋ ಅದು ನಮಗೆ ಗೊತ್ತಿಲ್ಲ. ಪತ್ತೆ ಹಚ್ಚಲು ಇನ್ನೂ ಆಗಲಿಲ್ಲ ಇದರಿಂದ ಕರ್ಣಾಟಕ ರಾಜ್ಯದವರೇ ಅಲ್ಲದ ಒಬ್ಬ ಹೆಣ್ಣು ಮಗಳು ಎಂದಾದರೂ ಬೇರೆ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಬಂದರೆ ನಮ್ಮ ಸರಕಾರಕ್ಕೆ ಕಳಂಕವಲ್ಲದೆ ಬೇರೇನಾಗುತ್ತದೆ? ಇದನ್ನು ಅವರೇ ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್: ನಮ್ಮ ರಾಜ್ಯಕ್ಕೇನೂ ಕಳಂಕ ಇಲ್ಲ. ಆದರೆ ನಿಮ್ಮ ದೃಷ್ಟಿಯಲ್ಲಿ ಕಳಂಕವಾಗುತ್ತದೆ. ಬೇರೆಯವರ ದೃಷ್ಟಿ ಒಂದು ರೀತಿ ಇರುತ್ತೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ದೃಷ್ಟಿ ಸರಿಯಿಲ್ಲ. ನಿಮ್ಮ ಮನಸ್ಸಿನಲ್ಲಿ ಏನಿದೆ ಅದು ಇಡೀ ದೇಶಕ್ಕೆ ಗೊತ್ತಾಗಬೇಕು.

ಶ್ರೀ ಡಿ. ದೇವರಾಜ ಅರಸ್: ನಮ್ಮ ದೃಷ್ಟಿ ಸರಿಯಿಲ್ಲ ಎನ್ನುತ್ತಾರೆ. ಆದರೆ ಅದನ್ನು ನಾವು ಒಪ್ಪಲು ತಯಾರಿಲ್ಲ. ನೀವು ಹರಿಕಥೆ ಏನು ಮಾಡುತ್ತೀರಿ ಅದನ್ನು ಕೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ನಾವೇನೂ ಇಲ್ಲಿ ಹರಿಕಥೆ ಮಾಡುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್: ಮೊನ್ನೆ ಮುಖ್ಯ ಮಂತ್ರಿಗಳು ಹೇಳುತ್ತಿರುವುದು ನೋಡಿ ನಮಗೆ ಬಹಳ ಖೇದವುಂಟಾಗುತ್ತದೆ.

SRI S. BANGARAPPA : I request you to consider this aspect. The Chief Minister has made a definite allegation „ಕಾಣಿಸುತ್ತದೆ''. It is a serious allegation. ನಮಗೂ ಮುಖ್ಯ ಮಂತ್ರಿಗಳ ವಿರಾಡ್ರೂಪ ಏನು ಎನ್ನುವುದು ಗೊತ್ತಾಗಿದೆ.

ಶ್ರೀ ಡಿ. ದೇವರಾಜ ಅರಸ್ : ನೀವು ಹೇಳುವುದನ್ನೆಲ್ಲಾ ಹೇಳಿದ್ದೀರಿ. ನಾನು ಹೇಳುವುದನ್ನೂ ತಾವು ಸ್ವಲ್ಪ ಸಾವಧಾನದಿಂದ ಕೇಳಬೇಕು.

ಶ್ರೀ ಎಸ್. ಬಂಗಾರಪ್ಪ : ನಾನೇನೂ ಇವರಂತೆ ಹೋಂ ಪೋರ್ಟ್‌ಫೋಲಿಯೋ ಇಟ್ಟುಕೊಂಡಿರುವ ಮಂತ್ರಿಯಲ್ಲ.

ಶ್ರೀ ಡಿ. ದೇವರಾಜ ಅರಸ್ : ನಿಮಗೇನೂ ಸದ್ಯಕ್ಕೆ ಹೋಂ ಪೋರ್ಟ್‌ಫೋಲಿಯೋ ಸಿಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ : ನಾನೇನಾದರೂ ಮುಖ್ಯ ಮಂತ್ರಿಯಾಗಿದ್ದರೆ ಇದರಲ್ಲಿ ಒಳಗಾಗಿರುವ ಎಷ್ಟೋ ಜನರನ್ನು ಮನೆಗೆ ಕಳುಹಿಸುತ್ತಿದ್ದೆ.

ಶ್ರೀ ಡಿ. ದೇವರಾಜ ಅರಸ್ : ಪ್ರಜಾಪ್ರಭುತ್ವದಲ್ಲಿ ನಿಮಗೂ ಮಂತ್ರಿಗಳಾಗುವುದಕ್ಕೆ ಅವಕಾಶ ಸಿಗುತ್ತದೆ. ಆಗ ತಾವು ಮಾತನಾಡಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ : ಏನೋ ಶ್ರೀ ವಾಟಾಳ್ ನಾಗರಾಜರವರಿಗೆ ಆಸೆ ಇರುವ ಹಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಸಂಸ್ಥಾ ಕಾಂಗ್ರೆಸ್ಸಿನವರು ಸೇರುವಂತೆ ಸೇರಲು ನನಗೆ ಯಾವ ಆಸೆಯೂ ಇಲ್ಲ.

ಅಧ್ಯಕ್ಷರು : ಸದಸ್ಯರು ಹೀಗೆ ಮೇಲಿಂದ ಮೇಲೆ ಎದ್ದು ಸರಕಾರದ ಉತ್ತರ ಕೇಳಲು ಅಡಚಣೆ ಮಾಡುವುದು ಸರಿಯಲ್ಲ. ಮತ್ತು ಮುಖ್ಯಮಂತ್ರಿಗಳು ಯಿಲ್ಲದಾಗದೇ ಇರುವಾಗ ತಾವು ಮಧ್ಯದಲ್ಲಿ ಎದ್ದು ನಿಂತು ಮಾತಾಡಲು ಹೋದರೆ ಅದು ಯಾವುದು ಪ್ರೊಸೀಡಿಂಗ್ಸ್‌ನಲ್ಲಿ ರಿಕಾರ್ಡಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ : ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳುವಾಗ ಕೆಲವು ಮಾತುಗಳನ್ನು ಹೇಳುತಾ ಇವೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿವೆ ಅದನ್ನು ನೋಡಬಹುದು ಎಂದು ಹೇಳಿದರೆ ಅದನ್ನು ನಾವು ಪ್ರತಿಭಟನೆ ಮಾಡಬೇಕಾಗಿ ಬರುತ್ತದೆ. ಇದರಿಂದ ದೇಶಕ್ಕೆ ಕಳಂಕ ಬಂದಂತಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್ : ಮಾನ್ಯ ಸದಸ್ಯರಾದ ಶ್ರೀ ಕೃಷ್ಣನ್‌ರವರು ಇಂಟರ್‌ನ್ಯಾಷನಲ್ ಫೀಲ್ಡ್‌ನಲ್ಲಿ ಫೇಮಸ್ ಆಗಬೇಕೆಂದು ಇಲ್ಲಿ ಹೇಳಬಹುದು. ಅವರು ಹೇಳುವುದನ್ನು ಕೇಳಿದ್ದೇನೆ. ಜನರು ಏನು ಹೇಳುತ್ತಿದ್ದಾರೆನ್ನುವುದನ್ನು ಕೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ : ಮಾನ್ಯ ಮಂತ್ರಿಗಳು ಬೆಂಗಳೂರು ನಗರದ ಬೀದಿಗಳಲ್ಲಿ ಬನ್ನಿ ಜನ ಏನು ಹೇಳುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ : ಬೆಂಗಳೂರು ನಗರದಲ್ಲಿ ಜನ ಏನು ಹೇಳುತ್ತಿದ್ದಾರೆ. ಅದನ್ನೂ ಕೇಳಿದ್ದೇನೆ ಮತ್ತು ಅದರ ಬಗ್ಗೆ ನನಗೂ ಸ್ವಲ್ಪ ಗೊತ್ತಾಗಿದೆ. ತಾವು ಅದನ್ನೆಲ್ಲಾ ಇಲ್ಲೇ ಆಗಲೇ ಹೇಳಿದ್ದೀರಿ. ನಾನು ಈಗ ಹೇಳುವುದನ್ನೇಕೆ ಸ್ವಲ್ಪ ಕೇಳಬಾರದು? ಇದರಲ್ಲಿ ಯಾರನ್ನೋ ತೋರಿಸಿ ಹೇಳುತ್ತಿದ್ದಾರೋ ಏನೋ ಎನ್ನುವಂತೆ ಕಾಣುತ್ತದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ : ತಾವು ಹೇಳುವ ಈ ಮಾತಿಗೆ ನಮ್ಮ ಪ್ರತಿಭಟನೆ ಇದೆ. ಯಾರ ಮೇಲೋ ಹೇಳುವಂತೆ ಹೇಳುವುದು ಅದು ಅಕ್ಷಮ್ಯ ಅಪರಾಧವಾಗುತ್ತದೆ. ಅಧಿಕಾರ ನಿಮ್ಮ ಕೈಯಲ್ಲಿರುವಾಗ ಅವರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುವುದು ತಮಗೆ ಸೇರಿದ್ದು.

ಶ್ರೀ ಎಸ್. ಬಂಗಾರಪ್ಪ : ತಾವು ಗುರುತರವಾದ ಅಪಾದನೆ ಮಾಡುತ್ತಿದ್ದೀರಿ. ಆ ರೀತಿ ಮಾಡುವುದು ಸರಿಯಲ್ಲ.

ಶ್ರೀ ಜಿ. ಪುಟ್ಟಸ್ವಾಮಯ್ಯ :—ಇಲ್ಲಿ ಯಾರನ್ನೊ ಮುಚ್ಚಿಟ್ಟುಕೊಂಡು ಹೇಳುತ್ತಿರುವಂತೆ ಭಾಸವಾಗುತ್ತದೆ ಎಂದರೆ ತಾವು ಗೃಹ ಶಾಖೆಯನ್ನು ಇಟ್ಟುಕೊಂಡಿರುವುದರಿಂದ ಇದರ ಬಗ್ಗೆ ಪತ್ತೆ ಮಾಡುವುದು ನಿಮಗೆ ಸೇರಿದ್ದು. ಇಡೀ ದೇಶದ ಪಾಲನೆ ನಿಮಗೆ ಸೇರಿರುವುದರಿಂದ ತಾವು ಇದನ್ನು ಮಾಡಬೇಕು. ವಿರೋಧ ಪಕ್ಷದವರಿಗೇನು ಗೊತ್ತಾಗುತ್ತದೆ. ಈ ರೀತಿ ಹೇಳಿದರೆ ಅದನ್ನು ನಾವು ಪ್ರತಿಭಟಿಸಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :—ವಿರೋಧ ಪಕ್ಷದವರು ಹೇಳುವುದರಿಂದ ಇದು ಭಾಸವಾಗುತ್ತದೆ ಎಂದು ಹೇಳಿದರು. ನಾವು ಯಾರೂ ಅದನ್ನು ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ನೀವು ಬೇಕಾದಷ್ಟು ಹೇಳಿದ್ದೀರಿ, ನಾವು ಕೇಳಿದ್ದೇವೆ. ಮತ್ತು ನಾವು ಹೇಳುವಾಗ ಸ್ವಲ್ಪ ಸಾವಧಾನದಿಂದ ಕೇಳಿ ಸ್ವಾಮಿ

ಅಪ್ಪರೊಳಗೇಕೆ ಇಷ್ಟು ಅಸಮಾಧಾನ ಮಾಡಿಕೊಳ್ಳಬೇಕು ? ಪೋಲೀಸು ಇಲಾಖೆಯವರು ಇವರನ್ನು ಹಿಡಿಯುವುದರಲ್ಲಿ ವಿಫಲರಾಗಿದ್ದಾರೆ, ಆದುದರಿಂದ ಇಡೀ ರಾಜ್ಯದ ಪೋಲೀಸು ಇಲಾಖೆ ಹೊಂದಿರುವ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳಿದ್ದರಿಂದ ಇಲ್ಲಿ ಒಂದು ಮಾತು ಹೇಳಿದರು. ನಾನು ಇದರ ಬಗ್ಗೆ ಮೊದಲೇ ಅರಿಕೆ ಮಾಡಿಕೊಂಡೆ. ಇದನ್ನು ಪೋಲೀಸು ಇಲಾಖೆಯವರು ಹಿಡಿಯುವುದಕ್ಕಾಗಲಿಲ್ಲ ಎಂದು ಹೇಳಬಹುದು. ಮೊದಲನೇದಾಗಿ ಇದನ್ನು ಯಾರು ಮಾಡಿದ್ದಾರೆನ್ನುವುದು, ಇದನ್ನು ನಾವು ಕಾನೂನು ಹಾಗೂ ರಾಜ್ಯದ ನ್ಯಾಯ ದೃಷ್ಟಿಯಿಂದ ನೋಡುವುದಾದರೆ ಅವರು ನಮ್ಮ ಎದುರಿಗೆ ಬರಬೇಕು ಎನ್ನುವ ಅಗತ್ಯವೇನೂ ಇಲ್ಲ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಎಲ್ಲಿಯವರೆಗೆ ಯಾವ ಒಂದು ವ್ಯಕ್ತಿಯ ಮೇಲೆ ಆಪಾದನೆ ಇಲ್ಲವೋ ಕಾನೂನು ರೀತ್ಯ ಅವರ ಮೇಲೆ ಜಾರಿ ಮಾಡತಕ್ಕ ವಿಚಾರವಿಲ್ಲವೋ ಅಲ್ಲಿಯವರೆಗೆ ಅವರು ಪೋಲೀಸರಿಗೆ ಸಿಕ್ಕಬಹುದು, ಇನ್ನೊಬ್ಬರಿಗೆ ಸಿಕ್ಕಬಹುದು, ಸಿಕ್ಕದೆ ಇರಲೂ ಬಹುದು. ಅವರನ್ನು ಹುಡುಕಬೇಕಾದ್ದು ಏಕೆ ಎಂದು ಒಂದಾವರ್ತಿಯಲ್ಲ, ಎರಡಾವರ್ತಿಯಲ್ಲ, ಅನೇಕ ಸಲ ಹೇಳಿದ್ದೇನೆ. ಅವರನ್ನು ಹುಡುಕಬೇಕು ಎಂದರೆ ಏನೋ ಪೋಲೀಸಿನವರು ಒಬ್ಬ ಅಪರಾಧಿಯನ್ನು ಹುಡುಕುವ ದೃಷ್ಟಿಯಿಂದ ಹುಡುಕುವುದಕ್ಕೆ ಸಾಧ್ಯವೇ ಇಲ್ಲ. ಆ ದೃಷ್ಟಿಯಿಂದ ಹುಡುಕುವುದು ಅಪ್ರಕೃತ ಮತ್ತು ಕಾನೂನುಬಾಹಿರವಾದ ವಿಚಾರ. ನಾವು ಏತಕ್ಕಾಗಿ ಅವರನ್ನು ಹುಡಕಬೇಕು ಎಂದು ಹೇಳಿದ್ದೇನೆಂದರೆ ಶ್ರೀಮಾನ್ ಕಿತ್ತೂರ್ ಅವರು ಈ ಒಂದು ಪ್ರಶ್ನೆಯಲ್ಲಿ ರಾಜೀನಾಮೆ ಕೊಟ್ಟರು. ಆ ರಾಜೀನಾಮೆಯನ್ನು ತೆಗೆದುಕೊಳ್ಳುವ ಕಾಲದಲ್ಲಿ ಅವರು ನಿರಪರಾಧಿ ಎಂದು ಈ ಸಭೆಯಲ್ಲಿ ಹೇಳಿದೆ. ಆದಾದಮೇಲೆ ಪೋಲೀಸಿನವರು ಒಂದು ವರದಿ ಮಾಡಿದ ಕೆಲವು ದಿವಸಗಳ ನಂತರ, ವಿಶೇಷ ಮಾಹಿತಿ ಎಷ್ಟು ಪಡೆಯುವುದಕ್ಕೆ ಸಾಧ್ಯವಾಯಿತು. ಅಷ್ಟನ್ನೂ ಪಡೆದ ನಂತರ ಅದೇ ಮಾತನ್ನು ಪತ್ರಿಕೆಗಳ ಮೂಲಕ ಹೇಳಿದ್ದೇನೆ. ಇಂದೂ ಅದೇ ಅಭಿಪ್ರಾಯದವನು ನಾನಾಗಿದ್ದೇನೆ. ಇದರಲ್ಲಿ ಒಂದು ಸೂಕ್ಷ್ಮ ವಿಚಾರವಿದೆ. ಆ ಸೂಕ್ಷ್ಮ ವಿಚಾರವೆಂದರೆ ನಾನು ಶ್ರೀ ಕಿತ್ತೂರ್ ಅವರು ನಿರಪರಾಧಿ ಎಂದು ನಾನು ಹೇಳಿದರೂ ಕೂಡ ಲೋಕಾಪವಾದದಲ್ಲಿ, ಲೋಕದ ದೃಷ್ಟಿಯಿಂದ, ಅವರನ್ನು ನಿರಪರಾಧಿ ಎಂದು ಇವರು ಹೇಳಿದರು, ಇವರು ಮುಖ್ಯ ಮಂತ್ರಿಗಳಾಗಿ ತಮ್ಮ ಮಂತ್ರಿ ಮಂಡಲದಲ್ಲಿರತಕ್ಕವರ ಬಗ್ಗೆ ಅವರ ಪರ ವಹಿಸಿ ಹೇಳಿರಬಹುದೇನೋ ಎನ್ನತಕ್ಕ ಶಂಕೆ ಜನರ ಮನಸ್ಸಿನಲ್ಲಿ ಕೆಲವರಲ್ಲಾದರೂ ಉಳಿದೇ ಉಳಿಯುತ್ತದೆ. ಆ ಶಂಕೆಯನ್ನು ದೂರ ಮಾಡಬೇಕಾದರೆ ಆ ವ್ಯಕ್ತಿ ನಮಗೆ ಸಿಕ್ಕದಾಗ ಅವರಿಂದಲೇ ನೇರವಾಗಿ ಆ ವಿಷಯದ ಬಗ್ಗೆ ಇದೇನು ವಿಚಾರ, ಯಾವ ರೀತಿಯಾಗಿ ಶ್ರೀ ಕಿತ್ತೂರ್ ಅವರಿಂದಾಗಲೀ ಅಥವಾ ಇತರೆ ಯಾರಿಂದಲಾದರೂ

(ಶ್ರೀ ಡಿ. ದೇವರಾಜ ಅರಸ್)

ಆಗಲೀ ಅಪಚಾರವೇನಾದರೂ ಆಗಿದೆಯೇ ಎನ್ನುವುದನ್ನು ಅವರಿಂದಲೇ ತಿಳಿಯಬೇಕು. ಎನ್ನುವ ದೃಷ್ಟಿಯಿಂದ ಮಾತ್ರ ನಾನು ಆಕೆಯನ್ನು ಹುಡುಕಿಸುವ ಪ್ರಯತ್ನದಲ್ಲಿದ್ದೇನೆಯೇ ಹೊರತು ಹಾಗಿಲ್ಲದೆ ಹೋದರೆ ಕಾನೂನು ರೀತ್ಯೆ ಅವರನ್ನು ಹುಡುಕುವ ಪ್ರಯತ್ನ ಮಾಡಬೇಕಾಗಿಲ್ಲ. ಶ್ರೀಮಾನ್ ಬಸವಲಿಂಗಪ್ಪನವರು ಹೇಳಿದ ಹಾಗೆ ಅವರ ಸಂಬಂಧಿಗಳಾಗಲೀ, ತಂದೆ ತಾಯಿಗಳಾಗಲೀ, ಸ್ನೇಹಿತರಾಗಲೀ, ಅವರ ಯೋಗ ಕ್ಷೇಮದ ಬಗ್ಗೆ ಚಿಂತನೆ ಇರುವವರು ಯಾರೇ ಆಗಲೀ ಎಲ್ಲಿಯಾದರೂ ದೂರು ಕೊಟ್ಟಿದ್ದ ಪಕ್ಷದಲ್ಲಿ ನಾವು ಅವರನ್ನು ಹುಡುಕಬೇಕು. ಅದು ನಮ್ಮ ಜವಾಬ್ದಾರಿ. ಆದರೆ ಮಾನ್ಯ ಸದಸ್ಯರು ಅವರನ್ನು ಹುಡುಕದೆ ಇರುವುದು ಸರಿಯಲ್ಲ, ಮುಂತಾಗಿ ಏನೇನು ಹೇಳುತ್ತಿದ್ದಾರೆ. ಅದರಲ್ಲಿ ಅರ್ಥವಿಲ್ಲ ಎಂದು ನಾನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಾಗಲೀ, ಬೇರೆ ಕಡೆಯಾಗಲೀ, ಈ ಬಗ್ಗೆ ಯಾರೂ ದೂರು ಕೊಟ್ಟಿಲ್ಲ. ಹೀಗಿರಬೇಕಾದರೆ ನಾವು ನಮ್ಮ ರಾಜ್ಯದಲ್ಲಿ ಇಲ್ಲದೆ ಇರತಕ್ಕವರನ್ನು ಹುಡುಕುವುದು ಹೇಗೆ ? ಎಲ್ಲಿದ್ದಾರೆ ಎನ್ನುವ ಅನುಮಾನ ನಮಗೆ ಬಂದಿದ್ದರೆ ನಾನೇ ಹೇಳುತ್ತಿದ್ದೆ. ನನಗೆ ತಿಳಿದ ಮಟ್ಟಿಗೆ ಆ ವ್ಯಕ್ತಿ ನಮ್ಮ ರಾಜ್ಯದಲ್ಲಿಲ್ಲ. ಬೇರೆ ಎಲ್ಲಿದ್ದಾರೆಯೋ ಗೊತ್ತಿಲ್ಲ. ನಮ್ಮ ಕಣ್ಣಿಗೆ ಕಾಣದೆ ಇದ್ದ ಮಾತ್ರಕ್ಕೆ ಅವರು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಎಲ್ಲಿಯೋ ಇದ್ದಾರೆ. ಇಲ್ಲಿಯೇ ಇದ್ದಾರೆ ಎಂದು ಮಾನ್ಯ ಸದಸ್ಯರಿಗೆ ಅನುಮಾನವಿದ್ದರೆ ಅವರ ಮನಸ್ಸಿಗೆ ಧೃಡಪಡತಕ್ಕ ಎವಿಡೆನ್ಸ್ ಏನಾದರೂ ಇದ್ದರೆ ದಯಮಾಡಿ ಕೊಡಲಿ ಎಂದು ನಾನು ಕೇಳುತ್ತಿದ್ದೇನೆ. ಅದನ್ನು ಆಧಾರವಾಗಿಟ್ಟುಕೊಂಡು ಅವರು ಎಲ್ಲಿದ್ದಾರೆ ಎಂದು ತಿಳಿಯುವುದಕ್ಕೆ ಪ್ರಯತ್ನಪಡೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಮುಖ್ಯಮಂತ್ರಿಗಳ ಮೇಲೆ ಅಪಾದನೆಗಳಿರುವಾಗ ಫಿರ್ಯಾದನ್ನು ಅವರಿಗೇ ಹೇಗೆ ಕೊಡುವುದಕ್ಕಾಗುತ್ತದೆ?

ಶ್ರೀ ಡಿ. ದೇವರಾಜ ಅರಸ್ :—ನನ್ನ ಮೇಲೆ ಅಪಾದನೆ ಇದ್ದರೆ ನನಗೆ ಕೊಡಬೇಕಾಗಿಲ್ಲ ಬೇರೆ ಯಾರಿಗೆ ಬೇಕೋ ಅವರಿಗೇ ಕೊಡಲಿ. ಅವರ ಹತ್ತಿರ ಬಂಡವಾಳವಿಲ್ಲದೆ ಇರುವುದಕ್ಕೆ ಹೀಗೆಲ್ಲ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ನಮ್ಮ ಹತ್ತಿರ ಬಂಡವಾಳವಿಲ್ಲವೆಂದು ಹೇಳತಕ್ಕ ಮಾತು ಸರಿಯಲ್ಲ. ನಮ್ಮ ಹತ್ತಿರ ಸಾಕಷ್ಟು ವಿಷಯಗಳಿವೆ. ಇದರ ಮೇಲೆ ಚರ್ಚೆಗೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ಅಧ್ಯಕ್ಷರು:—ಮಾನ್ಯ ಸದಸ್ಯರ ಹತ್ತಿರ ಏನಾದರೂ ವಿಷಯಗಳಿದ್ದರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡಬಹುದು.

ಶ್ರೀ ಡಿ. ದೇವರಾಜ ಅರಸ್ :—ಆ ವ್ಯಕ್ತಿಯ ಮೇಲೆ ಬಹಳ ಅನುಕಂಪ ಇರುವವರು, ಮಂತ್ರಿಗಳ ಮೇಲೆ ತುಂಬ ಅನುಕಂಪವಿರುವವರು ಎಂದು ಮಾನ್ಯ ಬಂಗಾರಪ್ಪನವರೂ ಮತ್ತು ಇತರರೂ ಹೇಳುತ್ತಿದ್ದಾರೆ. ಆದರೆ ಏನೂ ವಿಚಾರ ಗಳನ್ನು ಹೇಳಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :– ನ್ಯಾಯಾಂಗ ವಿಚಾರಣೆಯನ್ನು ಮಾಡಿದರೆ ಎಲ್ಲ ವಿಚಾರಗಳನ್ನೂ ನಾವು ಹೇಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್ ; ಮಾನ್ಯ ಮುಖ್ಯ ಮಂತ್ರಿಗಳು ಬಂಡವಾಳ ವಿಲ್ಲವೆಂದು ಹೇಳಿದರು. ಎಷ್ಟೋ ವಿಷಯಗಳನ್ನು ಈ ಹೊತ್ತು ಹೇಳಿಲ್ಲ. ಐ.ಜಿ.ಪಿ. ಅವರಿಂದ ಮಾನ್ಯ ಮುಖ್ಯ ಮಂತ್ರಿಯವರಿಗೆ ವರದಿ ಬರುತ್ತದೆ, ನಮ್ಮ ಹತ್ತಿರ ಬರುವುದಿಲ್ಲ. ಶ್ರೀ ಕಿತ್ತೂರ್ ಅವರು ಕೂಡ ಅವರಿಗೇ ಬರೆದು ತಿಳಿಸಿ ದ್ದಾರೆ. ನಮಗೆ ಏನೂ ಕೊಟ್ಟಿಲ್ಲ. ಆದರೆ ನಮಗೆ ಬಂದಿರುವ ವರದಿಗಳ ಪ್ರಕಾರ, ಕೆಲವು ವಿಚಾರಗಳು ನಮಗೆ ಗೊತ್ತಾಗಿವೆ. ಮಾನ್ಯ ಮುಖ್ಯ ಮಂತ್ರಿ ಗಳಿಗೆ ಬಂದಿರುವ ವಿಚಾರಗಳನ್ನು ಸಭೆಯ ಮುಂದೆ ಇಟ್ಟರೆ ಯಾವುದು ಸರಿ, ಯಾವುದು ಸರಿಯಿಲ್ಲ ಎಂದು ತಿಳಿದುಕೊಳ್ಳಬಹುದು.

ಶ್ರೀ ಡಿ. ದೇವರಾಜ ಅರಸ್ :— ನಿಮ್ಮ ಹತ್ತಿರ ಇದ್ದರೆ ಕೊಡಿ

ಶ್ರೀ ಎಂ ಎಸ್. ಕೃಷ್ಣನ್ :— ಈ ಸಭೆಯಲ್ಲಿ ಚರ್ಚೆಗೆ ಅವಕಾಶ ಕೊಟ್ಟಾಗ ಕೊಡುತ್ತೇವೆ.

3-00 P.M.

ಶ್ರೀ ಡಿ. ದೇವರಾಜ್ ಅರಸ್ :— ಮಾತನಾಡುವುದು, ಬಿಡುವುದು ಬೇರೆ ವಿಚಾರ, ನಿಮ್ಮ ಹತ್ತಿರ ಏನು ಬಂಡವಾಳ ಇದೆಯೋ ಅದು ಬೇರೆ ವಿಚಾರ. ಈ ವಿಚಾರದಲ್ಲಿ ಶ್ರೀಮಾನ್ ಕಿತ್ತೂರ್‌ರವರ ಮೇಲಿರತಕ್ಕ ಪ್ರೇಮ ಮತ್ತು ಅನುಕಂಪ ಬಹಳಷ್ಟು ಪ್ರದರ್ಶನ ಮಾಡಿದ್ದೀರಿ. ಅವರ ಮೇಲೆ ಅಷ್ಟೊಂದು ಅಭಿಮಾನ ಇದ್ದರೆ. ಈಗಲೂ ಕೇಳಿಕೊಳ್ಳುತ್ತೇನೆ. ನಿಮ್ಮ ಅಭಿಮಾನ ನಿಜ ವಾಗಿದ್ದರೆ ಅವರು ಎಲ್ಲಿ ಇದ್ದಾರೆ ಎಂದು ತಿಳಿಯುವುದಕ್ಕೆ ಸಹಾಯಕವಾಗುವಂಥ ವರದಿ ಮಾಹಿತಿ ನಿಮ್ಮಲ್ಲಿ ಇದ್ದರೆ ದಯಮಾಡಿ ಕೊಡಿ. ಇದು ಬರೀ ಅಭಿಮಾನವನ್ನು ತೋರಿಸುವ ಪ್ರಯತ್ನವೇ ಏನು ? ಒಂದು ಕಡೆ ಮಾಹಿತಿ ಇದೆ ಎಂದು ಹೇಳು ತ್ತೀರಿ, ಒಂದು ಕಡೆ ಕೊಡುವುದಿಲ್ಲ ಎಂದು ಹೇಳುತ್ತೀರಿ, ಒಂದು ಕಡೆ ಅವರ

(ಶ್ರೀ ಡಿ. ದೇವರಾಜ್ ಅರಸ್)

ಮೇಲೆ ಬಹಳ ಅಭಿಮಾನವಿದೆ ಎಂದು ಹೇಳುತ್ತೀರಿ ಹೀಗೆ ಒಂದಕ್ಕೊಂದಕ್ಕೂ ಸಂಬಂಧವಿಲ್ಲದ ಮಾತುಗಳನ್ನು ಆಡುತ್ತೀರಿ ವಿರೋಧ ಪಕ್ಷದ ಸದಸ್ಯರಲ್ಲಿ ಏನು ಮಾಹಿತಿ ಇದೆ ಎಂದು ಹೇಳುತ್ತಿದ್ದಾರೆ. ಆ ರೀತಿ ಅವರಲ್ಲಿ ಮಾಹಿತಿ ಇದ್ದರೆ ಅದನ್ನು ನನ್ನ ಮೇಲೆ ಅನುಮಾನ ಇದ್ದರೆ ನನಗೆ ಕೊಡುವುದು ಬೇಡ. ಅವರು ಸಿ. ಬಿ ಐ. ಗೆ ಕಳುಹಿಸಿಕೊಡಲಿ ಅದು ಕೇಂದ್ರ ಸರಕಾರಕ್ಕೆ ಸಂಭಂದಪಟ್ಟ ಹಾಗೆ ಇಲಾಖೆ ಇದು. ಈ ವಿಷಯದಲ್ಲಿ ನಾವು ಪತ್ತೇದಾರಿ ಮಾಡಬೇಕೆಂದರೆ ನಮ್ಮ ರಾಜ್ಯದಲ್ಲಿ ಇದ್ದು ಮಾಡದೇ ಹೋದರೆ ಒಂದು ವಿಚಾರ. ನಮ್ಮ ರಾಜ್ಯದ ಹೊರಗಡೆ ಇದ್ದವರನ್ನು ಅಲ್ಲಿ ಒಂದು ವೇಳೆ ಇದ್ದರೆ ಅಲ್ಲಿಗೆ ಹೋಗಿ ನಾವು ಪತ್ತೇದಾರಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಒಂದು ಸ್ಟೇಟಿನಿಂದ ಇನ್ನೊಂದು ಸ್ಟೇಟಿಗೆ ನಾವು ಹೋಗಿ ಹುಡುಕುವುದಕ್ಕೆ ಸಾಧ್ಯವಿಲ್ಲ. ಅವರ ಸಹಾಯ ಪಡೆಯಬೇಕು. ಸಿ.ಬಿ.ಐ. ಅವರ ವ್ಯಾಪ್ತಿಗೆ ಇಡೀ ಭಾರತ ದೇಶಕ್ಕೆ ಇರುವುದರಿಂದ ಅವರಿಗೆ ನಾವು ತಿಳಿಸಿದ್ದೇವೆ. ಶ್ರೀಮಾನ್ ಪುಟ್ಟಸ್ವಾಮಿಯವರಿಗೆ ನನ್ನ ಮೇಲೆ ವಿಶ್ವಾಸವಿದೆ ಎಂದು ನಾನು ನಂಬುತ್ತೇನೆ. ನನ್ನ ಮೇಲೆ ವಿಶ್ವಾಸ ಇಲ್ಲದೇ ಹೋದರೆ ನಂಬಿಕೆ ಇಲ್ಲದೆ ಇದ್ದವರನ್ನು ಕಂಪಲ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ ;— ತಮ್ಮಲ್ಲಿ ಗೌರವವಿದೆ. ಆದರೆ ನಿಮ್ಮ ಆಡಳಿತ ನಡೆಸುತ್ತಾ ಇರತಕ್ಕ ವೈಖರಿ ಬಗ್ಗೆ ನನಗೆ ಒಬ್ಬನಿಗೇ ಅಲ್ಲ ರಾಜ್ಯದಲ್ಲೇ ಶಂಕೆ ಬಂದು ಕೂತಿದೆ ಪ್ರಾಮುಖ್ಯವಾಗಿ ಶ್ರೀಮತಿ ಸುಮಿತ್ರಾ ದೇಸಾಯಿ ಪ್ರಕರಣದಲ್ಲಿ ನೀವು ಹೇಳುವುದನ್ನು ನಾವು ಕೇಳಿಕೊಂಡು ಕೂತುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ :— ಅಷ್ಟೊಂದು ಅಭಿಮಾನವಿರುವಾಗ ನಾನು ಒತ್ತಿ ಒತ್ತಿ ಹೇಳುತ್ತೇನೆ. ನನಗೆ ಮಾಹಿತಿ ಕಳುಹಿಸುವುದಕ್ಕೆ ಇಷ್ಟ ಇಲ್ಲದೇ ಹೋದರೆ ಸಿ. ಬಿ. ಐ.ಗೆ ಕಳುಹಿಸಿಕೊಡಿ. ಅದು ಅವರಿಗೆ ಸಹಾಯಕವಾಗುತ್ತದೆ. ಈ ಕಾರಣದಿಂದಲೇ ಕೆಲವಾರು ದಿವಸಗಳಿಂದ ನಾವು ರಾಜ್ಯದಲ್ಲಿ ಸಾಕಷ್ಟು ಪ್ರಯತ್ನ ಮಾಡಿ ಹುಡುಕಿದಾಗ್ಯೂ ಅವರು ಸಿಕ್ಕಿಲ್ಲದಿರುವುದರಿಂದ ಹೊರಗಡೆಯ ರಾಜ್ಯದಲ್ಲೂ ಕೂಡ ಕೆಲವು ಸಂದರ್ಭಗಳಲ್ಲಿ ಲೋಕಲ್ ಪೋಲೀಸರ ಸಹಾಯವನ್ನು ತೆಗೆದು ಕೊಂಡು ಹುಡುಕುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :— ಮುಖ್ಯವಾಗಿ ಇಲ್ಲೇ ಇರುವುದು, ಆಡಳಿತಗಾರರ ಭದ್ರವಾದ ಅರಮನೆಯಂಥ ಮನೆಯಲ್ಲಿ ಸುಭದ್ರವಾಗಿ ಗ್ರೊಶ್ವಾಗೆಡ್ಡ

ಹಾಗೆ ಇಟ್ಟಿದ್ದಾರೆ ಎಂದು ಅನುಮಾನ ಬಂದಿದೆ ಅದನ್ನು ಸ್ಪಷ್ಟವಾಗಿ ವಿಚಾರಣೆ ಮಾಡಬೇಕೆಂದು ನಾವು ಹೇಳುವುದು.

ಶ್ರೀ ಡಿ. ದೇವರಾಜ್ ಅರಸ್ :— ಸ್ವಲ್ಪ ಹೊತ್ತು ಯೋಚನೆ ಮಾಡಿ ನಾನು ಹೇಳಿದ ಮೇಲೆ ನಿಮ್ಮ ತಲೆಗೆ ಬಂತು !

ಶ್ರೀ ಬಿ. ಪುಟ್ಟಸ್ವಾಮಯ್ಯ :— ನಾನು ಲಾಯರ್ ಅಲ್ಲ, ವ್ಯವಸಾಯಗಾರನ ಮಗ, ಮಾನ್ಯ ಬಸವಲಿಂಗಪ್ಪನವರಂಥ ಕಾನೂನು ಪಂಡಿತನಲ್ಲ ಅವರು ಹೇಳುವುದನ್ನು ಹಿಂಬಾಲಿಸಿಕೊಂಡು ಹೇಳುವುದು ಅಷ್ಟೇ.

ಶ್ರೀ ಡಿ. ದೇವರಾಜ್ ಅರಸ್ :— ಬೊಂಬಾಯಿ, ಶಿರಡಿ, ಪೂನಾ, ವಜ್ರೇಶ್ವರಿ, ಉಡವಾಡ್, ಮೌಂಟ್ ಅಬು, ಲಕ್ನೋ, ಡೆಲ್ಲಿ, ಜೈಪುರ, ಅಹಮ್ಮದಾಬಾದ್, ಬನಾರಿಸ್, ರುಷಿಕೇಷ್, ಹರಿದ್ವಾರ್, ಪಾಂಡಿಚೇರಿ, ತಿರುವಣಾಮಲೈ, ಕೃಷ್ಣಗಿರಿ, ಗೋವ, ಮರ್ಮಗೋವ, ಹುಬ್ಬಳ್ಳಿ, ಬೆಳಗಾಂ, ಬೆಂಗಳೂರು, ನಂದಿ, ಮುಂತಾದ ಕಡೆ ನಾವು ಆಕೆಯನ್ನು ಹುಡುಕುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ತಾವು ಈಗ ಹೇಳುತ್ತಿರುವುದು ಹೇಗಿದೆ ಎಂದರೆ, ನಾವು ಚಿಕ್ಕ ಮಕ್ಕಳು ಆಗಿದ್ದಾಗ, 3 ಕಾಸು ಕೊಟ್ಟು ಮದ್ರಾಸ್ ನೋಡು, ಬೊಂಬಾಯಿ ನೋಡು ಎಂದು ಹೇಳಿದ ಹಾಗೆ ಇದೆ. ಮುಖ್ಯಮಂತ್ರಿಗಳೇ ಮದ್ರಾಸ್, ಬೊಂಬಾಯಿ ತೋರಿಸಬೇಡಿ ಸುಮಿತ್ರಾ ದೇಸಾಯಿ ತೋರಿಸಿ.

ಶ್ರೀ ಡಿ. ದೇವರಾಜ್ ಅರಸ್ : ಸುಮಿತ್ರ ದೇಸಾಯಿ ಫೋಟೋ ತೋರಿಸಬೇಕು ಅಷ್ಟೆ. ಅಷ್ಟೊಂದು ಭ್ರಮೆ ನಿಮಗೆ ಆಗಿದ್ದರೆ ಆಕೆಯ ಒಂದು ಚಿತ್ರವನ್ನು ಭೂತ ಕನ್ನಡಿ ಮುಖೇನ ದೊಡ್ಡದಾಗಿ ತೋರಿಸುವುದಕ್ಕೆ ಏರ್ಪಾಡು ಮಾಡುತ್ತೇವೆ ಅದನ್ನು ನೋಡಿ ಸಂತೋಷಪಡಿ. ಹೀಗೆ ನಮ್ಮ ಪ್ರಯತ್ನ ನಡೆದರೂ ಕೂಡಾ ಅವರು ಎಲ್ಲಿ ಇದ್ದಾರೆ ಎಂದು ಗೊತ್ತಾಲಿಲ್ಲ ಈ ಕಾರಣದಿಂದ ಸಿ. ಬಿ. ಐ. ಗೆ ವಿಚಾರವನ್ನು ತಿಳಿಸಿದ್ದೇವೆ. ಅವರೂ ಹುಡುಕುತ್ತಿದ್ದಾರೆ. 3 ತಿಂಗಳೂ ಅಲ್ಲ, 3 ವರ್ಷ ಆದರೂ ಸಿಕ್ಕದೇ ಇರತಕ್ಕ ಪ್ರಸಂಗಗಳು ಇವೆ. ಆ ಒಂದು ಕಾರಣದಿಂದ ಬಂಗಾರಪ್ಪನವರು ತಮ್ಮ ಒಂದು ಕನ್‌ಕ್ಲೂಶನ್ ಇಟ್ಟುಕೊಂಡಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಅದು ನಾವು ಒಪ್ಪತಕ್ಕ ಮಾತು ಆಗುವುದಿಲ್ಲ. ಈಗ ಮೂರುವರೆ ತಿಂಗಳು ಆಯಿತು ಅವರು ಹುಡುಕುವುದರಲ್ಲಿ ಪೋಲೀಸರು ಅಧ್ಯಕ್ಷರು ಆಗಿದ್ದಾರೆ ಎಂದು ಹೇಳುವುದು ಯಾವ ತಿರಳೂ ಇಲ್ಲದ ವಾದ. ಮತ್ತೇ ಪೋಲೀಸ್ ಇಲಾಖೆಯವರು ಕೊಟ್ಟಿರತಕ್ಕ ರಿಪೋರ್ಟ್ ಮತ್ತು ಕಿತ್ತೂರ್ ರವರು ಹೇಳಿರತಕ್ಕ ಮಾತನ್ನು ನಮ್ಮ ಮುಂದೆ ಜಾತಕ್ಕೆ ಇಡಬಾರದು ಎಂದು

(ಶ್ರೀ ಡಿ. ದೇವರಾಜ್ ಅರಸ್)

ಒಂದು ಮಾತು ಹೇಳಿದ್ದಾರೆ. ಇತ್ತೀಚೆಗೆ ಏನೇನು ನಡೆದಿದೆ ಮತ್ತು ನಾವು ಮಾಡಿರತಕ್ಕ ಪ್ರಯತ್ನಗಳು ಏನು ಎನ್ನತಕ್ಕ ವಿಚಾರದಲ್ಲಿ ನಾನು ಇಲ್ಲಿ ಹೇಳಿಕೆ ಕೊಡುವುದಕ್ಕೆ ಸಿದ್ಧನಿದ್ದೇನೆ ಆ ಹೇಳಿಕೆಯನ್ನು ಕೊಡುವುದಕ್ಕೆ ಯಾವಾಗ ಅವಕಾಶ ಕೊಡುತ್ತೀರಿ ಆಗ ನಾನು ಓದುವುದಕ್ಕೆ ತಯಾರು. ಈಗ ನಮ್ಮ ಮುಂದಿರತಕ್ಕ ಪ್ರಸ್ತುತ ವಿಚಾರ ಏನು ಎಂದರೆ ಇದು ಜರೂರಾದ ಒಂದ ವಿಷಯ ಇಂದು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂಬುದು. ಇಷ್ಟು ಮಾತ್ರ ಹೇಳುತ್ತೇನೆ. ಇದು ಜರೂರು ಅಲ್ಲವೇ ಎನ್ನುವ ಬಗ್ಗೆ ನಮ್ಮ ಸಲಹೆ ತೆಗೆದುಕೊಂಡು ತಾವು ತೀರ್ಮಾನಕ್ಕೆ ಬರಬೇಕು ಎನ್ನುವ ದೃಷ್ಟಿಯಿಂದ ಈ ವಿಷಯ ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಎಂದು ನಾನು ತಿಳಿದಿದ್ದೇನೆ. ಅಸೆಂಬ್ಲಿಯ ಕಾಂಡಕ್ಟ್ ಮತ್ತು ಬಿಸಿನೆಸ್ ರೂಲ್ಸ್ ಪ್ರಕಾರ ನಮ್ಮ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಿ ಇದು ಈಗ ಜರೂರು ಆಗಿ ತೆಗೆದುಕೊಳ್ಳಬೇಕು ಎನ್ನುವ ವಿಷಯ ಯಾವರೀತಿಯಿಂದಲೂ ಆಗಲಾರದು ಎಂದು ನನ್ನ ಒಂದು ನಮ್ರ ವಿನಂತಿ. ಈ ವಿಚಾರ ಬಹಳ ದಿವಸಗಳಿಂದಲೂ ನಡೆಯುತ್ತಾ ಇದೆ. ರೀಸೆಂಟ್ ಅಕ್ಕರೆನ್ಸ್ ಅಲ್ಲ, ಇದು ಎಲ್ಲಾ ದೃಷ್ಟಿಯಿಂದ ಜರೂರಾಗಿ ತೆಗೆದುಕೊಳ್ಳತಕ್ಕ ವಿಚಾರವಲ್ಲ ಎಂದು ತಮ್ಮಲ್ಲಿ ಹೇಳುತ್ತೇನೆ.

ಶ್ರೀ ಎ. ಶರಣಪ್ಪ : ಸುಮಿತ್ರಾ ದೇಸಾಯಿ ಜೀವಂತವಾಗಿದ್ದಾಳೋ ಅಥವಾ ಸತ್ತಿದ್ದಾಳೋ ಎಂಬ ವಿಚಾರ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕ ಹೇಳಿಕೆಯ ಬಗ್ಗೆ ಒಂದು ಕ್ಲಾರಿಫಿಕೇಷನ್ ನಾವು ಹೇಳಬೇಕಾಗಿದೆ.

ಅಧ್ಯಕ್ಷರು : ತಾವು ಕ್ಲಾರಿಫಿಕೇಷನ್ ಬೇಕಾದರೆ ಬರೆದುಕೊಡಿ

ಶ್ರೀ ಎಂ. ಎಸ್. ಕೃಷ್ಣನ್ : ಅವರಿಂದ ಒಂದು ಕ್ಲಾರಿಫಿಕೇಷನ್ ಪಡೆಯಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಕೆಲವು ವಿಷಯಗಳಲ್ಲಿ ಸರ್ಕಾರದವರು ಕರ್ತವ್ಯ ಹೇಗೆ ನಿರ್ವಹಿಸಿದ್ದಾರೆ ಎನ್ನುವ ಬಗ್ಗೆ ಮುಖ್ಯ ಮಂತ್ರಿಗಳು ಸಮಜಾಯಿಸಿ ಕೊಡತಕ್ಕ ವಿಷಯ ಇದೆ. ಆದುದರಿಂದ ಈ ಸಭೆಯ ಎಲ್ಲಾ ಕಾರ್ಯಕ್ರಮಗಳನ್ನು ಮುಂದೂಡಿ ಇದನ್ನು ಚರ್ಚೆಗೆ ತಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು :- ನಿಮ್ಮ ಅಹವಾಲನ್ನು ಒಂದು ಗಂಟೆ ಕೇಳಿದ್ದೇನೆ. ಮುಖ್ಯ ಮಂತ್ರಿಗಳು ಅರ್ಧ ಗಂಟೆ ಹೇಳಿದ್ದನ್ನೂ ಕೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :-ರೂಲ್ 12ರ ಪ್ರಕಾರ ಮತ್ತು 59ರ ಪ್ರಕಾರ ಸೂಚನೆಗಳನ್ನು ಕೊಟ್ಟಿರುವುದು ಇದೆ. ಮೊನ್ನೆ ಮುಖ್ಯಮಂತ್ರಿಗಳು ರೂಲ್ 50ರ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ರೂಲ್ 59ರ ಪ್ರಕಾರ ಎರಡೂವರೆ ಗಂಟೆ ಚರ್ಚೆ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ.

ಶ್ರೀ ಎಂ. ಎಸ್. ಕೃಷ್ಣನ್ :. ಇದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆಂದು ಮೊನ್ನೆ ಮುಖ್ಯಮಂತ್ರಿಗಳು ಹೇಳಿದರು. ಆ ಹೇಳಿಕೆಯ ಬಗ್ಗೆ ಇನ್ನೂ ಸ್ಪಷ್ಟತೆ ಬೇಕು.

ಅಧ್ಯಕ್ಷರು :- ತಾವೆಲ್ಲರೂ ಹೇಳಿದ್ದನ್ನು ಕೇಳಿದೆ. ಮುಖ್ಯಮಂತ್ರಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಟೈಂ ಫಿಕ್ಸ್ ಮಾಡಿದ ದಿವಸ ವಿವರವಾಗಿ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಬರಲಿ, ಅದರ ಮೇಲೆ ತಮ್ಮ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡೋಣ. ಈಗ ಈ ವಿಷಯ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ ;- ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದಾರೆ. ನಾವು ಪ್ರಾರ್ಥನೆ ಮಾಡಿಕೊಂಡಿರುವುದು ಸ್ಟೇಟ್‌ಮೆಂಟ್ ಅಲ್ಲ. ಐ. ಜಿ. ಪಿ. ಕೊಟ್ಟಿರತಕ್ಕ ರಿಪೋರ್ಟ್ ಸಭೆಯ ಮುಂದೆ ಇಡಬೇಕು ಎಂದು ಕೇಳಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್ :- ತಾವು ವ್ಯವಹಾರ ಚೆನ್ನಾಗಿ ತಿಳಿದುಕೊಂಡರೆ, You will appriciate the position ಐ. ಜಿ. ಪಿ. ರಿಪೋರ್ಟನ್ನು ಯಾರೂ ತಂದು ಸಭೆಯ ಮುಂದೆ ಇಡುವುದಿಲ್ಲ That is how Government function.

ಶ್ರೀ ಕಾಗೋಡು ತಿಮ್ಮಪ್ಪ : ಅದು ನಮಗೆ ಬೇಕು. ನೀವು ಬಚ್ಚಿಡುವ ಉದ್ದೇಶದಿಂದ ಹೇಳುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್ : ತಾವು ರಾಜಕೀಯ ಉದ್ದೇಶದಿಂದ ಮಾತನಾಡುತ್ತಿದ್ದೀರಿ. ಆ ರಿಪೋರ್ಟನ್ನು ಯಾರೂ ಕೊಡುವುದಿಲ್ಲ. ಅದು

(ಶ್ರೀ ಡಿ. ದೇವರಾಜ್ ಅರಸ್)

ಕೊಡುವುದಕ್ಕೂ ಸಾಧ್ಯವಿಲ್ಲ. I have that responsiblity. *It* is not for you to say that.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಶ್ನೆ ಸಂಪೂರ್ಣವಾಗಿ ಚರ್ಚೆಗೆ ಬಂದಾಗ ಬೇಕಾದಷ್ಟು ಅಂಕಿಅಂಶ ಆಧಾರ ಇದೆ. ಆಗ ಅವನ್ನು ಹೇಳು ತ್ತೇನೆ. ಒಳಗಡೆ ಇರುವುದನ್ನು ಈಗ ಎಕ್ಸ್‌ಪ್ಲೈನ್ ಮಾಡಿಲ್ಲ. ಶ್ರೀಮಾನ್, ಹನುಮಂತಯ್ಯನವರು ಪಾರ್ಲಿಮೆಂಟಿನಲ್ಲಿ ಹೆಚ್ಚು ಬೆಳಕು ಚೆಲ್ಲಬೇಕು, ಎಂದೂ ರಾಜ್ಯ ಸರ್ಕಾರದವರು ಈ ವಿಷಯದಲ್ಲಿ ವಿಫಲರಾಗಿದ್ದಾರೆ, ಒಬ್ಬನೇ ಮಂತ್ರಿ ಯಲ್ಲ, ಇನ್ನೂ ಅನೇಕ ಮಂತ್ರಿಗಳಿದ್ದಾರೆ ಎಂದೂ ಹೇಳಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ. ನಾನು ಅರಿಕೆ ಮಾಡುವುದು ಇಷ್ಟೆ. ಚರ್ಚೆಗೆ ಇವತ್ತು ಅವಕಾಶವಾಗುವುದಿಲ್ಲವೆಂದರೆ, ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಿ ಈ ರೀತಿ ಚರ್ಚೆಗೆ ಅವಕಾಶ ಮಾಡುವುದರಿಂದ ಇದರ ಬಗ್ಗೆ ಹೆಚ್ಚು ಬೆಳಕು ಬರುತ್ತದೆ.

ಅಧ್ಯಕ್ಷರು : ಅವರು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಒಂದು ತಾರೀಖು ನಿಗದಿ ಮಾಡುತೇನೆ. ಇದಾದ ಮೇಲೆ ಕ್ಲಾರಿಫಿಕೇಷನ್‌ಗೆ ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮೈಸೂರು ಸರ್ಕಾರದ ಪೋಲೀಸರ ಹತ್ತಿರ ಸುಮಿತ್ರಾ ದೇಸಾಯಿಯವರ ಬಗ್ಗೆ ಬೇಕಾದಷ್ಟು ಆಧಾರಗಳಿವೆ. ರೈಲ್ವೆ ಸ್ಟೇಷನ್ ಹತ್ತಿರ ಸುಮಿತ್ರಾ ದೇಸಾಯಿಯವರನ್ನು ಅವರು ಕಂಡಿದ್ದಾರೆ ಎಂದು ಹೇಳುತ್ತೇನೆ. ಸುಮಿತ್ರಾ ದೇಸಾಯಿಯವರ ಎತ್ತರ, ಅವರ ವಯಸ್ಸು ಪ್ರತಿಯೊಂದನ್ನೂ ಪೋಲೀಸರು ಕೊಡಬೇಕಾದರೆ ಅವರಿಗೆ ಈ ವಿವರಗಳೆಲ್ಲ ಎಲ್ಲಿ ಸಿಕ್ಕಿತು ? ಬೆಂಗಳೂರು ಕಂಟೋನ್‌ಮೆಂಟ್ ಏರಿಯಾದಲ್ಲಿ ಸುಮಿತ್ರಾ ದೇಸಾಯಿ ಯವರನ್ನು ಪೋಲೀಸರೇ ಕಂಡಿದ್ದಾರೆಂದು ಹೇಳಿದ್ದಾರೆ. ಅಂಥಾದ್ದು ನೂರು ಎವಿಡೆನ್ಸ್ ಕೊಡುತ್ತೇನೆ. ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ. ದೇವರಾಜ್ ಅರಸ್ : ಮಾನ್ಯ ಸಭೆಯ ಗಮನಕ್ಕೆ ತಮ್ಮ ಮುಖಾಂತರ ತರುತ್ತೇನೆ. ಅವರ ಹತ್ತಿರ ಆಧಾರಗಳಿವೆ. ಅಂಕಿ ಅಂಶ ಇದ್ದರೆ ನಾನು ಹೇಳುತ್ತಾ ಇದ್ದೇನೆ, ಒತ್ತಿ ಒತ್ತಿ ಹೇಳುತ್ತಾ ಇದ್ದೇನೆ, ಅದನ್ನು ಸಿ. ಬಿ. ಐ. ಗೆ ಕಳುಹಿಸಿ ಕೊಡಬಹುದು. ಅದು ನೇರವಾಗಿ ನನ್ನ ಹತೋಟಿ ಯಲ್ಲಿರತಕ್ಕ ಇಲಾಖೆಯಲ್ಲ. ಕೇಂದ್ರ ಸರ್ಕಾರದ ಹತೋಟಿಯಲ್ಲಿರತಕ್ಕ ಇಲಾಖೆ. ಆದುದರಿಂದ ನಾನೇನಾದರೂ ಬಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು

ಅನುಮಾನ ಇದ್ದರೆ ದಯಮಾಡಿ ಅವರಿಗೆ ಎಲ್ಲಾ ವಿವರಗಳನ್ನು ಕಳುಹಿಸಿಕೊಡಿ. ಮಾನ್ಯ ಸದಸ್ಯರು ಇಲ್ಲಿಯಾಗಲಿ ಹೊರಗಡೆಯಾಗಲಿ ತಮ್ಮಲ್ಲಿರತಕ್ಕ ಅಂಶಗಳನ್ನು ಅವರಿಗೆ ತೋರಿಸುವುದಕ್ಕೆ ಮನಸ್ಸು ಇಲ್ಲದೆ ರಾಜಕೀಯವಾಗಿ ಈ ಮಾತು ಹೇಳುತ್ತಾ ಇದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್: ಒಂದು ವಿಷಯ ಮುಖ್ಯ ಮಂತ್ರಿಗಳು ಹೇಳಿದರು. ಐ. ಜಿ. ಪಿ. ವರದಿ ಸಭೆಯ ಮುಂದಿಡುವುದು ಸರ್ಕಾರದ ವ್ಯವಹಾರದಲ್ಲ, ಸರ್ಕಾರದ ವ್ಯವಹಾರ ಈ ರೀತಿ ನಡೆಯುವುದಿಲ್ಲ, ವರದಿ ಇಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇವತ್ತಿನ ದಿವಸ ಕಾನ್‌ಫಿಡೆನ್ಸಿಯಲ್ ಡಾಕ್ಯುಮೆಂಟ್ ಆಗಿದ್ದರೆ ಯಾರಿಗೂ ತಿಳಿಸ ಕೂಡದು ಎನ್ನುವ ಅಭಿಪ್ರಾಯವಾಗಿದ್ದರೆ, ಅದು ಬೇರೆ ಸಮಾಚಾರ. ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುವುದೇನೆಂದರೆ, ಹೋದ ಸಾರಿ ಈ ವಿಷಯ ಚರ್ಚೆಗೆ ಬಂದಾಗ ಏನು ಹೇಳಿದರು. ಘಟನೆ ಬೆಂಗಳೂರಿನಲ್ಲಿ ನಡೆಯಿತು, ಈ ಘಟನೆ ಬಗ್ಗೆ ಐ. ಜಿ. ಪಿ. ಯವರಿಗೆ ವರದಿ ಕೇಳಿದ್ದೇವೆ, ಕಳುಹಿಸಿದರು ಅದರ ಆಧಾರದ ಮೇಲೆ ಕಿತ್ತೂರ ಅವರು ರಾಜೀನಾಮೆ ಕೊಟ್ಟರು. ಈ ಘಟನೆ ನಡೆದಿದೆಯೋ ಇಲ್ಲವೋ ಎಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆ ವರದಿ ಇಡುವುದರಿಂದ ಅನುಕೂಲವಾಗುತ್ತದೆ. ಅನಾನುಕೂಲವಾಗುವುದಿಲ್ಲ, ಅದನ್ನು ಇಡುವುದಕ್ಕೆ ಹಿಂಜರಿಯಬಾರದು ಎಂದು ಕೇಳುವುದು.

ಶ್ರೀ ಡಿ. ದೇವರಾಜ ಅರಸ್: ನೀವು ಕೇಳುವುದಕ್ಕೂ ಕಾರಣವಿಲ್ಲ. ನಾನು ಹಿಂಜರಿಯುವುದಕ್ಕೂ ಕಾರಣವಿಲ್ಲ. ಆ ವರದಿಯ ಆಧಾರದಿಂದ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿರುವುದು.

ಶ್ರೀ ಹೆಚ್. ಎಸ್. ಸಿದ್ದಪ್ಪ :— ಈ ತಿಂಗಳು 23, 24, 25 ತಾರೀಖು ಆ ಕಡೆ ಪಕ್ಷದ ಒಬ್ಬರು ಸದಸ್ಯರಾದ ಶ್ರೀ ಗಟ್ಟಿ ಚಂದ್ರಶೇಖರವರೂ ನಾನು ಗೋವಾಕ್ಕೆ ಹೋಗಿದ್ದೆವು. ಇತ್ತೀಚೆಗೆ ಇದರ ಬಗ್ಗೆ ವಿಷಯುಗಳನ್ನು ಸಂಗ್ರಹಿಸಿದ್ದೇವೆ. ಚರ್ಚೆಗೆ ಅವಕಾಶ ಕೊಟ್ಟರೆ ಸಾಕಷ್ಟು ವಿಷಯ ಹೇಳುತ್ತೇವೆ. ನಾವು ಹೋದ ದಿವಸ ಮನಿಆರ್ಡರ್ ಕಳುಹಿಸಿದ್ದಾರೆ, ಆ ಅಮ್ಮನ ಲೆಕ್ಕಕ್ಕೆ. ಅದರ ಬಗ್ಗೆ ಹೇಳುವುದಕ್ಕೆ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಡಿ. ದೇವರಾಜ್ ಅರಸ್ :— ನಿಮ್ಮನ್ನು ಡಿಟೆಕ್ಟೀವಾಗಿ ಬೇಕಾದರೆ ಮಾಡಿಕೊಳ್ಳುವುದಕ್ಕೆ ತಯಾರಿದ್ದೇನೆ. ತಾವು ಡಿಟಕ್ಟೀವಾಗಿ ಆಕೆಯನ್ನು ಹುಡುಕಿ ಕೊಡಿ. I will be happy to appoint you as detective,

ಶ್ರೀ ಹೆಚ್. ಟಿ. ಕೃಷ್ಣಪ್ಪ :— ನಮ್ಮ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳಿ. ಮುಖ್ಯಮಂತ್ರಿಗಳು ತಮ್ಮ ಇರುವಿಕೆಯನ್ನು ಸಮರ್ಥಿಸಿಕೊಳ್ಳಬೇಕಾದರೆ, ಐ. ಜಿ. ಪಿ. ಯವರು ಏನು ಹೇಳಿದ್ದಾರೆ ಅದನ್ನು ಮುಚ್ಚುಮರೆ ಇಲ್ಲದೆ ಸಭೆಯ ಮುಂದೆ ಇಡಬೇಕು. ಇಲ್ಲದಿದ್ದರೆ ನಾವು ಸರಕಾರವನ್ನು ಕ್ಷಮಿಸುವುದಿಲ್ಲ, ಜನತೆ ಕ್ಷಮಿಸುವುದಿಲ್ಲ. ಅದನ್ನು ಹೇಳುವತನಕ ನಾವು ಸಭೆಯ ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ :— ಅವಕಾಶ ಕೊಡುವುದಿಲ್ಲ ಎಂದು ಏನು ತಾವು ಹೇಳುತ್ತಾ ಇದ್ದೀರಿ ಅದು it is highly an irresponsible statement coming from the leader of the Opposition.

Sri H. T. KRISHNAPPA :— The expression used by the Hon. Chief Minister is derogatory. He must take it back.

ಅಧ್ಯಕ್ಷರು : ಅದರ ಬಗ್ಗೆ ಮಾತನಾಡಲು ಅನುಮತಿ ಕೊಡುವುದಿಲ್ಲ ಎಂದು ಹೇಳಿದ್ದೇನೆ. ನಾನು ಅನುಮತಿ ಕೊಡುವುದಿಲ್ಲ ಎಂದು ಹೇಳಿದರೂ ಕೂಡ ಸದಸ್ಯರು ಮಾತನಾಡುವುದಾದರೆ, It amounts to highly an irresponsible statement

ಶ್ರೀ ಹೆಚ್. ಎಸ್. ಸಿದ್ದಪ್ಪ :— ತಾವು ಅವಕಾಶ ಕೊಡಲಿ ಎಂದು ನಾವು ಮಾತನಾಡಿದ್ದು.

ಅಧ್ಯಕ್ಷರು ;— ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ ಮೇಲೆ, ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕು.

Sri H T KRISHNAPPA :— I have a right to express my feelings. The Hon. Chief Minister has said that this chapter is to be closed and hereafter there is no question of reopening this subject........

MADAM SPEAKER : — The Hon. Member has not understood what he stated.

Sri D. DEVARAJ URS :— I am going to make a statement whenever the Speaker wants.

Sri H. T. KRISHNAPPA :— What is that the Hon. Chief Minister should place the IGPs report on the table of this House.

ಅಧ್ಯಕ್ಷರು :—ಅವರು ಈ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಅವರು ಹಾಗೆ ಹೇಳಿರುವಾಗ ಮತ್ತು ಆ ಬಗ್ಗೆ ಒಂದು ತಾರೀಖನ್ನು ನಿಗದಿ ಮಾಡುತ್ತೇನೆಂದು ನಾನು ಹೇಳಿರುವಾಗ ಮತ್ತೆ ಏತಕ್ಕೆ ಅದೇ ವಿಷಯವನ್ನು ಪುನಃ ಎತ್ತುತ್ತೀರಿ ?

Sri M. S. KRISHNAN :— What we want is that a date for making the statement should be fixed.

ಅಧ್ಯಕ್ಷರು :— ಆ ಬಗ್ಗೆ ಒಂದು ತಾರೀಖನ್ನು ನಿಗದಿ ಮಾಡುವ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳಿರುವಾಗ ಮತ್ತೇಕೆ ಈ ರೀತಿ ಪುನಃ ಕೇಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್ :- ಮಾನ್ಯ ಸದಸ್ಯರು ಉದ್ರೇಗದಲ್ಲಿರುವುದರಿಂದ ಆ ಮಾತನ್ನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ ಎಂದು ಕಾಣುತ್ತೆ.

MADAM SPEAKER :— Now, let us go to next item. Introduction of Bill by the Hon. Minister for Municipal Administration.

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರು ಈ ಬಗ್ಗೆ ಒಂದು ಹೇಳಿಕೆಯನ್ನು ಇಂಥಾ ದಿವಸ ಮಾಡುತ್ತಾರೆ ಎಂದು ಹೇಳಿ ಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು :—. ಆಗಬಹುದು, ಆ ಜವಾಬ್ದಾರಿಯನ್ನು ತೆಗೆದುಕೊಂಡು ನಾನು ಒಂದು ತಾರೀಖು ನಿಗದಿ ಮಾಡುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಸನ್ಮಾನ್ಯ ಅಧ್ಯಕ್ಷರೇ, ನನ್ನ ವಿನಂತಿ ಏನೆಂದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಹಾಗೆ ಹೇಳಿಕೆ ಕೊಡುವಂಥಾ ಕಾಲದಲ್ಲಿ ಐ. ಜಿ. ಪಿ.ಯವರು ಕೊಟ್ಟಂಥ ಹೇಳಿಕೆಯನ್ನು ಸಭೆಯ ಮುಂದೆ ಕೊಡುವುದಕ್ಕೆ ಸಾಧ್ಯವಿಲ್ಲ ಅಂತ ಒಂದು ವರದಿ ಈಗಾಗಲೇ ಸಭೆಯ ಮುಂದೆ ಓದಿದ್ದಾರೆ. ಆ ವರದಿಗೂ ಮತ್ತು ಈಗ ಇರತಕ್ಕಂಥ ಅಂಶಗಳಿಗೂ ಹೋಲಿಸಿ ಕೊಂಡರೆ ಅದರಲ್ಲಿ ಹೊಂದಾಣಿಕೆ ಬರುವುದಿಲ್ಲ. ಅಂಥಾ ವರದಿಗಳು ನಮ್ಮ ಮುಂದೆ ಓದಿದರೆ ಪ್ರಯೋಜನವಾಗುವುದಿಲ್ಲ. ತನಿಖಾಧಿಕಾರಿಗಳು ಏನು ವರದಿಕೊಟ್ಟಿದ್ದಾರೆ ಅವನ್ನು ಹೇಳಬೇಕು.

ಅಧ್ಯಕ್ಷರು ; — ತಾವು ದಯಮಾಡಿ ಕುಳಿತುಕೊಳ್ಳಿ. ಅವೊತ್ತು ಸಭೆಯ ಮುಂದೆ ಇಟ್ಟಿರುವ ಸ್ಟೇಟ್‌ಮೆಂಟೇ ಬೇರೆ, ಇತ್ತೀಚೆಗೆ ನಡೆದಂಥ ಸಂಗತಿಗಳ ಮೇಲೆ ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ. ಆದುದರಿಂದ ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್ : — ತಾವು ಇದಕ್ಕೆ ಒಂದು ತಾರೀಖನ್ನು ನಿಗದಿ ಮಾಡುತ್ತೀರಾ ?

ಅಧ್ಯಕ್ಷರು :— ನಿಗದಿ ಮಾಡುತ್ತೇನೆ ಎಂದು ಹೇಳಿದ್ದೇನೆ

ಶ್ರೀ ಹೆಚ್. ಟಿ. ಕೃಷ್ಣಪ್ಪ : ಈ ನಿರ್ಣಯವನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಯಾವತ್ತು ಸ್ಟೇಟ್‌ಮೆಂಟ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದಾಗಿತ್ತಲ್ಲಾ.

ಅಧ್ಯಕ್ಷರು : ನಿಮಗೆ ಸ್ಟೇಟ್‌ಮೆಂಟ್ ಮಾಡುವುದು ಬೇಕಾಗಿಲ್ಲ ಎಂದು ತೋರುತ್ತದೆ. ಇಷ್ಟು ಮಾತ್ರ ಬೇಕಾಗಿತ್ತು ಎನ್ನುವ ಹಾಗೆ ಆಯಿತು.

(ವಿರೋಧಪಕ್ಷದ ಅನೇಕ ಸದಸ್ಯರು ಸಭಾತ್ಯಾಗ ಮಾಡಿದರು)

Re : Sale of fine quality Rice in Janata Bazar etc.,

ಶ್ರೀ ಎಂ. ಎಸ್. ಕೃಷ್ಣನ್ : ಅಧ್ಯಕ್ಷರೇ ನಾನು ಬೇರೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಅದು ಬಹಳ ಮುಖ್ಯವಾದುದು. ಅದು ಏನೆಂದರೆ ಬೆಂಗಳೂರು ನಗರದಲ್ಲಿ ಜನತಾ ಬಜಾರ್‌ನಲ್ಲಿ ಮತ್ತು ಇನ್ನು 2-3 ಕಡೆಗಳಲ್ಲಿ ಫೈನ್ ರೈಸ್ ಒಂದು ಕಿಲೋಗೆ ರೂ. 1-45 ರಂತೆ ಕಡಿಮೆ ರೇಟಿನಲ್ಲಿ ಏನು ಮಾರುತ್ತಿದ್ದಾರೆ. ಆದು ಕೇವಲ ಕೆಲವೇ ಜಾಗದಲ್ಲಿ ಅಂದರೆ ನಾಲ್ಕು ಜಾಗ ದಲ್ಲಿ ಮಾತ್ರ ಮಾರುತ್ತಿದ್ದಾರೆ ಅದು ಇನ್ನೂ ಹೆಚ್ಚು ಜಾಗದಲ್ಲಿ ವಿತರಣೆ ಆಗು ವಂತೆ ಮಾಡಬೇಕು. ಈ ರೀತಿ ಲಕ್ಷಾಂತರ ಜನ ಇರುವ ಕಡೆ ಕೇವಲ ಕೆಲವು ಜಾಗಗಳಲ್ಲಿ ಮಾತ್ರ ಮಾರಿದರೆ ತುಂಬಾ ಗಲಾಟೆಯಾಗುತ್ತದೆ. ಮೊನ್ನೆ ದಿವಸ ರಾಜಾಜಿನಗರದ ಒಂದು ಸೊಸೈಟಿಯಲ್ಲಿ ಒಂದು ದೊಡ್ಡ ಗಲಾಟೆಯೇ ಆಯಿತು. ಆದುದರಿಂದ ಈ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಆಹಾರ ಸಚಿವೆಯರಾಗಲಿ ಕೊಟ್ಟರೇ ಒಳ್ಳೆಯದು. ಹೆಚ್ಚು ಜಾಗದಲ್ಲಿ ಕಡಿಮೆ ದರದ ಅಕ್ಕಿಯನ್ನು ಮಾರುವ ವ್ಯವಸ್ಥೆ ಮಾಡಿದರೆ ಜನಗಳಿಗೆ ಅನುಕೂಲ

ವಾಗುತ್ತದೆ. ಈವೊತ್ತು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಆಗದೇ ಹೋದರೆ ನಾಳೆ ಕೊಡಲಿ. ಸಂತೋಷ.

ಅಧ್ಯಕ್ಷರು : ತಾವು ಅಜೆಂಡಾ ನೋಡಿದ್ದೀರಾ. ಇದಕ್ಕೇನೇ ಒಂದು ದಿವಸ ಚರ್ಚೆ ಇಟ್ಟುಕೊಂಡಿದ್ದಾರೆ. ಮತ್ತೇಕೆ ಪುನಃ ಇದನ್ನು ಎತ್ತುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್ : ಆಹಾರ ದಿನಸಿ ಬಗ್ಗೆ ಚರ್ಚೆ ಇಟ್ಟುಕೊಂಡಿರುವುದು ಗೊತ್ತಿದೆ. ಆದರೆ ನನ್ನ ಪ್ರಶ್ನೆ ಏನೆಂದರೆ ಈ ವಿಷಯ ಬೆಂಗಳೂರು ನಗರಕ್ಕೆ ಮಾತ್ರ ಸಂಬಂಧ ಇರುವುದರಿಂದ ಈ ಬಗ್ಗೆ ಒಂದು ಹೇಳಿಕೆ ಕೊಡಬೇಕು ಎಂದು ನಾನು ಕೇಳುತ್ತಾ ಇದ್ದೇನೆ.

ಅಧ್ಯಕ್ಷರು : ಆ ಬಗ್ಗೆ ನಾನು ವಿಚಾರಿಸುತ್ತೇನೆ. ಅಲ್ಲಿಯುವರೆಗೆ ತಮಗೆ ಸಮಾಧಾನ ಇಲ್ಲವೇ ? ದಯಮಾಡಿ ಕೂತುಕೊಳ್ಳಿ.

MADAM SPEAKER: Next item, Introduction of Bill

MYSORE HOUSING BOARD (AMENDMENT) BILL 1973 INTRODUCTION

SRI B. BASAVALINGAPPA : (Minister for Municipal Administration) : I beg to introduce :

"The Mysore Housing Board (Amendment) Bill, 1973."

MADAM SPEAKER: The Bill is introduced. Now, Hon. Minister for Co-operation to reply.

MYSORE CO-OPERATIVE SOCIETIES (AMENDMENT) BILL 1973 MOTION TO CONSIDER

(Debate Contd)

ಶ್ರೀ ಎ. ಶಂಕರಅಳ್ವ (ಸಹಕಾರ ಶಾಖೆಯ ಮಂತ್ರಿಗಳು).—ಸಭಾಧ್ಯಕ್ಷರೇ, ಈ ಮನೆಯ ಸದಸ್ಯರು ಈ ಸಹಕಾರಿ ಇಲಾಖೆಯ ತಿದ್ದುಪಡಿ ಬಗ್ಗೆ ಕೆಲವು

Bill appended as Annexure to this volume

(ಶ್ರೀ ಎ. ಶಂಕರ ಆಳ್ವ)

ವಿಷಯಗಳನ್ನು ಸೂಚಿಸಿದ್ದಾರೆ. ಈ ಬಗ್ಗೆ ಮೊದಲು ಜವಾಬು ಕೊಟ್ಟಿದ್ದೇವೆ. ಮತ್ತು ನಿನ್ನೆ ದಿವಸ ಇದಕ್ಕೆ ವಿಳಂಬವಾದುದರಿಂದ ಆ ಚರ್ಚೆ ಈ ದಿನಕ್ಕೆ ಮುಂದು ವರೆಸಿದೆ. ಅದರ ಬಗ್ಗೆ ಅನೇಕ ಸದಸ್ಯರು ಈ ಸಹಕಾರಿ ಕೋ ಅಪರೇಟೀವ್ ಆಕ್ಟ್‌ನಲ್ಲಿ ಹೆಚ್ಚು ಬದಲಾವಣೆ ಮಾಡಬೇಕು ಎಂದು ಹೇಳಿದ್ದಾರೆ. ಮತ್ತು ಈಗ ಇರತಕ್ಕ ಕಾನೂನಿನಲ್ಲೇ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸಲಿಕ್ಕೆ ಆಗುವುದಿಲ್ಲ ಎಂಬುದಾಗಿಯೂ ಸಲಹೆಗಳನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಇದು ಯೋಗ್ಯ ವಾದ ಸಲಹೆಗಳು. ಅವುಗಳನ್ನು ನಾವು ಆಗಾಗ್ಗೆ ಪರಿಶೀಲಿಸುತ್ತಿದ್ದೇವೆ. ಮತ್ತು ಅವರು ಹೇಳಿದ ಹಲವು ವಿಷಯಗಳಲ್ಲಿ ಈಗ ಇದ್ದ ಕಾನೂನಿನ ತಿದ್ದುಪಡಿ ಪ್ರಕಾರವೇ ಸರ್ಕಾರದವರು ಆ ಸಮಸ್ಯೆಗಳನ್ನು ಬಗ್ಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ಎಂಬುದಾಗಿ ಈಗ ಇರತಕ್ಕಂಥ ತಿದ್ದುಪಡಿಯಲ್ಲೇ ಮುಖ್ಯವಾದ ಕೆಲವು ವಿಷಯಗಳನ್ನು ನಾವು ಕಾಣಿಸಿದ್ದೇವೆ. ಈಗ ಇರತಕ್ಕಂಥ ತಿದ್ದುಪಡಿಯನ್ನು ಜಾರಿಗೆ ತಂದಲ್ಲಿ ಸಹಕಾರಿ ಸಂಸ್ಥೆಗಳಲ್ಲಿರುವ ಕುಂದುಕೊರತೆಗಳನ್ನು ಬಹುಮಟ್ಟಿಗೆ ನೀಗಿಸಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಸರ್ಕಾರದವರು ಆ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡರೆ ಶೀಘ್ರದಲ್ಲೇ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಆ ವಿಷಯದಲ್ಲಿ ಅನೇಕ ಸದಸ್ಯರು ಕೆಲವು ವಿಷಯಗಳನ್ನು ಒತ್ತಿ ಹೇಳಿದರು. ಅದೇನೆಂದರೆ ಸರ್ಕಾರದವರು ಇದರಲ್ಲಿ ಹೆಚ್ಚು ಹಸ್ತಕ್ಷೇಪ ಮಾಡಕೂಡದು ಎಂದು ಮತ್ತು ಸರ್ಕಾರದವರು ನೇಮಿಸಿದ ಡೈರಕ್ಟರಲ್ಲಿ ಒಬ್ಬರಾದರೂ ಸಹ ಅದಕ್ಕೆ ವಿರುದ್ಧವಾಗಿ ನಿರ್ಣಯ ತಂದರೂ ಅದನ್ನು ಸರ್ಕಾರ ಮಂಜೂರು ಮಾಡಬಹುದು. ಅದರಿಂದ ಅಷ್ಟಕ್ಕೇನೆ ಸದಸ್ಯರು ಇದರಲ್ಲಿ ಕಠಿಣ ವಾಕ್ಯಗಳು ಇವೆ ಎಂದು ಹೇಳುವುದು ಸರಿಯಲ್ಲ. ಇದರಲ್ಲಿ ಕೊಟ್ಟಿರುವ ವಾಕ್ಯಗಳು ಸರಿಯಾಗಿದೆ. ಅದರಲ್ಲಿ ಏನು ಇದೆ ಎಂದರೆ ಅದರಲ್ಲಿ ಅರ್ಧದಷ್ಟು ಪಾಲು ಬಂಡವಾಳ ಇದ್ದರೆ ಅಥವಾ 5 ಲಕ್ಷ ರೂಪಾಯಿ ಸರ್ಕಾರದವರು ಷೇರು ಬಂಡವಾಳ ಕೊಟ್ಟಿದ್ದರೆ ಮೂರನೇ ಒಂದು ಭಾಗ ಇಲ್ಲವೇ 7 ಜನ ಸದಸ್ಯರನ್ನು ಡೈರೆಕ್ಟರನ್ನಾಗಿ ನೇಮಿಸಬಹುದು ಎಂದು. ಅದರ ಪೈಕಿ ಒಬ್ಬ ಡೈರೆಕ್ಟರು ಯಾರಾದರೂ ಅದಕ್ಕೆ ನಿರ್ಣಯ ಕೊಡದೇ ಇದ್ದರೂ ಅದನ್ನು ಸರ್ಕಾರದವರು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಸೆಕ್ಷನ್ 53 (ಬಿ) ನಲ್ಲಿ ಸ್ಪಷ್ಟವಾಗಿ ಕೊಟ್ಟಿದೆ.

3-30 P. M.

Mr. Deputy Speaker in the Chair:—

ಸೆಕ್ಷನ್ 53 (ಬಿ) ಅದು ಸ್ವಲ್ಪ ಆಲೋಚನೆ ಮಾಡಿದಾಗ ಸ್ವಲ್ಪ ಕಠಿಣ ಎಂದು ಕಾಣುತ್ತದೆ. ಆದುದರಿಂದ ಇದನ್ನು ಕೈಬಿಡುವ ಮಟ್ಟಿಗೆ ನಾನು ಒಂದು

ಅಮೆಂಡ್‌ಮೆಂಟ್ ಸಹಿತ ಸೂಚಿಸಿದ್ದೇನೆ. ಇನ್ನು ಒಂದು ವಿಚಾರ ಎಂದರೆ ಒಬ್ಬ ಸದಸ್ಯರು 6 ವರ್ಷಕ್ಕಿಂತ ಹೆಚ್ಚು ಅಧಿಕಾರಾವಧಿಯಲ್ಲಿ ಇರಲಿಕ್ಕೆ ಕೂಡದು ಎಂದು ಅದು ಡಿಸ್‌ಕ್ವಾಲಿಫಿಕೇಷನ್ ಆಗಿ ಪರಿಗಣಿಸಲ್ಪಡುತ್ತವೆ. ಅದು ಏತಕ್ಕೆ ಎಂದರೆ ಒಬ್ಬ ಪ್ರೆಸಿಡೆಂಟ್, ವೈಸ್‌ಪ್ರಸಿಡೆಂಟ್ ಅಥವಾ ಇನ್ನು ಯಾವುದೇ ರೀತಿ ಯಾದ ಅಧಿಕಾರಿ 6 ವರ್ಷಕ್ಕಿಂಥ ಜಾಸ್ತಿ ಮುಂದುವರಿದರೆ ಅದು ಒಳ್ಳೆಯದಲ್ಲ ಎಂದು ಕಾಣುತ್ತದೆ. ಆದುದರಿಂದ ಯಾವುದೇ ಒಂದು ಅಧಿಕಾರದಲ್ಲಿ ಅಂದರೆ ಅಧ್ಯಕ್ಷರು, ಉಪಾಧ್ಯಕ್ಷರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಟ್ರೆಷರರ್ ಆಗಿ ಅಥವಾ ಸೆಕ್ರೆಟರಿಯಾಗಿ ಮುಂದುವರಿಯುವುದು ಅದು ಕೆಲವೇ ಜನರಿಗೆ ಸೀಮಿತ ವಾಗಿ ಬಿಟ್ಟರೆ ಅದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲವೆಂದು ಹಲವರು ಅಭಿ ಪ್ರಾಯ ಪಟ್ಟಿದ್ದಾರೆ. 6 ವರ್ಷಗಳಿಗಿಂಥ ಜಾಸ್ತಿ 10—15 ವರ್ಷಗಳು ಅಧಿಕಾರ ದಲ್ಲಿದ್ದರೆ ಸೊಸೈಟಿಯಲ್ಲಿನ ಅವರ ಅಧಿಕಾರ ಕೈತಪ್ಪಿ ಹೋಗುವುದಕ್ಕೆ ಸಾಧ್ಯವಿಲ್ಲ. ಇದನ್ನು 3 ವರ್ಷಗಳಿಗೆ ಇಳಿಸಬೇಕು ಎಂದು ಅನೇಕರು ಸಲಹೆ ಕೊಟ್ಟಿದ್ದಾರೆ. ಹಾಗೇನೇ ಕೆಲವರು ಅನೇಕ ವರ್ಷಗಳಿಂದ ಒಂದೇ ಸಮನೆ ಅಧಿಕಾರದಲ್ಲಿ ಮುಂದುವರಿಯುತ್ತಿರುತ್ತಾರೆ. ಅವರಿಗೇ ಪುತ್ತೆ ಇನ್ನು 6 ವರ್ಷಗಳು ಕೊಡು ವುದು ಸೂಕ್ತವಲ್ಲ. ಅವರು ಅಧಿಕಾರಕ್ಕೆ ಬಂದು ಎರಡು ಮೂರು ವರ್ಷಗಳು ಆಗಿದ್ದರೆ ಇನ್ನು ಮೂರು ವರ್ಷಗಳು ಮುಂದೆ ಬರಲಿಕ್ಕೆ ಸಾಧ್ಯವಾಗುತ್ತದೆ. ಅವರು ಅಧಿಕಾರಕ್ಕೆ ಬಂದು 6 ವರ್ಷಗಳು ಆಗಿದ್ದರೆ ಮುಂದಿನ ಚುನಾವಣೆ ಕಾಲದವರೆಗೆ ಅವರು ಮುಂದುವರಿಯುವುದಕ್ಕೆ ಒಂದು ಅವಕಾಶ ಕೊಡಬೇಕೆಂದು ಒಂದು ನಿರ್ಧಾರಕ್ಕೆ ಬಂದು ಇದರ ಮಟ್ಟಿಗೆ ಒಂದು ಅಮೆಂಡ್‌ಮೆಂಟನ್ನು ಸಹಿತ ಕಳುಹಿಸುತ್ತಾ ಇದ್ದೇವೆ. ಮತ್ತೆ ಬಾಕಿ ಹೆಚ್ಚು ವಿಷಯ ಏನು ಕಾಣುವುದಿಲ್ಲ. ಸ್ವಲ್ಪ ಸಮಯವಿಲ್ಲದ ಕಾರಣ ನೆನ್ನೆ ಎಲ್ಲಾ ವಿಷಯಗಳನ್ನು ತಿಳಿಸಲಿಕ್ಕೆ ಆಗಲಿಲ್ಲ. ಈಗ ಮಾನ್ಯ ಸದಸ್ಯರ ಹೇಳಿಕೆಗೆ ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ. ಈ ತಿದ್ದುಪಡಿಯಲ್ಲಿ ಮುಖ್ಯವಾದ ಅಂಶಗಳನ್ನು ಅಮೆಂಡ್‌ಮೆಂಟ್ ಮಂಡಿಸುವ ಕಾಲಕ್ಕೆ ಹೇಳಿದ್ದೇನೆ, ಆದರೆ ಈಗ ಸಂಕ್ಷಿಪ್ತವಾಗಿ ವಿವರಿಸುತ್ತಿದ್ದೇನೆ. ಆದರೂ ಕೆಲವು ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚಿಗೆ ಹೇಳುವ ಪ್ರಮೇಯ ವಿಲ್ಲ. ಇನ್ನು ಸೆಕ್ಷನ್ 14 (ಎ ಮತ್ತು ಬಿ) ಹೊಸದಾಗಿ ಎರಡು ಕಾಲಮುಗಳನ್ನು ಸೇರಿಸಿದ್ದೇವೆ ಅದಕ್ಕೆ ಪೂರ್ವಭಾವಿಯಾಗಿ ಇದನ್ನು ಹೇಳಲಿಚ್ಛಿಸುತ್ತೇನೆ. ಶ್ರೀಮಾನ್ ಕೆ. ಎನ್. ವೀರಪ್ಪಗೌಡರು ಒಂದು ವಿಷಯವನ್ನು ಏನು ಹೇಳಿದ್ದಾ ರೆಂದರೆ ಎಲ್ಲಾ ಕಡೆಯಲ್ಲಿಯೂ ಸಣ್ಣ ಸಣ್ಣ ಸೊಸೈಟಿಗಳು ಇರುವ ಬದಲಿಗೆ ಒಂದು ದೊಡ್ಡ ಸೊಸೈಟಿಯನ್ನು ಮಾಡಿ ರೈತರಿಗೆ ಬೇಕಾದ ಎಲ್ಲಾ ತರದ ಸೌಲಭ್ಯಗಳನ್ನು ಒಂದೇ ಸೊಸೈಟಿಯಲ್ಲಿ ಸಿಕ್ಕುವಂತೆ ಮಾಡಿದರೆ ಅವರು ಅವರಿಗೆ ಬೇಕಾದ ಎಲ್ಲಾ ಪದಾರ್ಥಗಳನ್ನು ಒಂದೇ ಸೊಸೈಟಿಯಲ್ಲಿ ಪಡೆದುಕೊಳ್ಳಬಹುದು. ಆದುದರಿಂದ ಈ ಸಣ್ಣ ಸಣ್ಣ ಸೊಸೈಟಿಗಳು ಇದ್ದರೆ ಏನಾಗುತ್ತದೆ ಎಂದರೆ ರೈತನಿಗೆ ಬೇಕಾದ ಸಲಕರಣೆಗಳಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಹೋಗ

(ಶ್ರೀ ಎ. ಶಂಕರ ಆಳ್ವ)

ಬೇಕು. ಒಂದಕ್ಕೆ ಸರ್ವೀಸ್ ಕೋ-ಆಪರೇಟೀವ್ ಸೊಸೈಟಿಗೆ ಮತ್ತೊಂದಕ್ಕೆ ಇಂಡಸ್ಟ್ರೀಯಲ್ ಸೊಸೈಟಿಗೆ ಹೋಗಬೇಕು ಹೀಗೆ ಅನೇಕ ಸೊಸೈಟಿಗಳಿಗೆ ಹೋಗ ಬೇಕಾಗುತ್ತದೆ. ಅದಕ್ಕೆ ಬದಲಾಗಿ ತಾಲ್ಲೂಕು ಮಟ್ಟದಲ್ಲಿ ಅಲ್ಲ ಹೋಬಳಿ ಮಟ್ಟದಲ್ಲಿ ಒಂದು ದೊಡ್ಡ ಸೊಸೈಟಿ ಮಾಡಿದರೆ ಎಲ್ಲದಕ್ಕೂ ಸೌಕರ್ಯವಾಗು ತ್ತದೆ ಎಂದು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇನ್ನು ಅನೇಕ ಮಾನ್ಯ ಸದಸ್ಯರು ಒಳ್ಳೊಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ರಿಸರ್ವ್ ಬ್ಯಾಂಕಿನವರು ಸಣ್ಣ ಸಣ್ಣ ಸೊಸೈಟಿ ಇರುವ ಬದಲಿಗೆ 10–12 ಸಾವಿರ ಜನಸಂಖ್ಯೆ ಇರುವ ಕಡೆ ಒಂದು ದೊಡ್ಡ ಪ್ರಮಾಣದ ಸೊಸೈಟಿ ಮಾಡಿದರೆ ಆಗಬಹುದು, ಅದಲ್ಲದಿದ್ದರೆ ಸಣ್ಣ ಸೊಸೈಟಿಗಳು ಇದ್ದರೆ ಸರಿಯಾಗಿ ಲೆಕ್ಕಪತ್ರಗಳನ್ನು ಇಡು ವುದಕ್ಕೆ ಸಾಧ್ಯವಾಗುವುದಿಲ್ಲ, ಮತ್ತೆ ಸಿಬ್ಬಂಧಿಗಳನ್ನು ನೇಮಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಖರ್ಚು ಜಾಸ್ತಿಯಾಗುತ್ತದೆ. ಅದರಿಂದ ಒಂದು ದೊಡ್ಡ ಪ್ರಮಾಣದ ಸೊಸೈಟಿಗಳನ್ನು ಮಾಡುವುದು ಒಳ್ಳೆಯದು ಎಂದು ಒಂದು ರಿಪೋರ್ಟು ಸಹಿತ ಕೊಟ್ಟಿದ್ದಾರೆ. ಅದನ್ನು ಸರ್ಕಾರದವರು ಕೂಡ ಮನಗಂಡಿ ದ್ದಾರೆ. ಇನ್ನು 14 (ಎ ಮತ್ತು ಬಿ) ಯಲ್ಲಿ ತಿದ್ದುಪಡಿ ಏನು ಎಂದರೆ ಈಗ ಸಭೆಗೆ ತಿಳಿದಹಾಗೆ ಏನಾದರೂ ಒಂದು ಸಣ್ಣ ಸಣ್ಣ ಎರಡು ಸೊಸೈಟಿಗಳು ಇದ್ದರೆ ಅದನ್ನು ಒಂದು ಸೊಸೈಟಿಯನ್ನಾಗಿ ಮಾಡಬೇಕಾದರೆ ಅದರ ಸದಸ್ಯರು ಮೂರನೇ ಎರಡು ಭಾಗ ಅದನ್ನು ಒಪ್ಪಿಕೊಂಡರೆ ಅದನ್ನು ಒಂದನ್ನಾಗಿ ಪರಿವರ್ತಿಸಬಹುದು. ಆದರ ಜೊತೆಯಲ್ಲಿ ಸೇರಿಕೊಳ್ಳಬಹುದು ಆದರೆ ಈಗ ರಿಜಿಸ್ಟ್ರಾರ್‌ರವರಿಗೆ ಒಂದು ಅಮಾಲ್ಗಮೇಟ್ ಅಥವಾ ಟ್ರಾನ್ಸ್‌ಫರ್‌ಕೇಟ್ ಮಾಡುವುದಕ್ಕೆ ಅಧಿಕಾರ ಇರು ವುದಿಲ್ಲ. ಒಂದು ಸೊಸೈಟಿ ಇರುವುದನ್ನು ಎರಡು ಸೊಸೈಟಿಗಳಾಗಿ ಮಾರ್ಪಾಡು ಮಾಡಬೇಕಾದರೆ ರಿಜಿಸ್ಟ್ರಾರ್‌ರವರೂ ಆ ರೀತಿ ಅಭಿಪ್ರಾಯ ಪಟ್ಟರೆ ಅವರು ಪ್ರತಿಯೊಬ್ಬರಿಗೂ ನೋಟೀಸ್ ಕೊಟ್ಟು ಅದು ಇಷ್ಟೇ ಸಮಯದಲ್ಲಿ ಅವರಿಂದ ಉತ್ತರ ಬರಬೇಕೆಂದು ತಿಳಿಸಿರುತ್ತಾರೆ. ನಾಳೆ ನಿಮ್ಮ ಸೊಸೈಟಿ ಬೇಡ ಎಂದು ಹೇಳಿದರೆ ಆತನ ಷೇರು ಬಂಡವಾಳವನ್ನು ವಾಪಸ್ ಕೊಡಬೇಕು ಆ ಹಣಕ್ಕೆ ಏನಾ ದರೂ ಇಂಟರೆಸ್ಟ್ ಕೊಡಬೇಕೆಂದರೆ ಕೊಟ್ಟು ಅವನು ಹೊರಗಡೆ ಹೋಗಬಹುದು ಅದು ಒಳ್ಳೆಯ ಸೂಕ್ತವಾದ ಸಲಹೆ ಇದನ್ನು ಮಂಜೂರು ಮಾಡಬೇಕು. ಇನ್ನು ಸೆಕ್ಷನ್ (14-ಸಿ) ಇದರಲ್ಲಿ ಅಮಾಲ್ಗಮೇಷನ್ ಮಾಡಿಕೊಳ್ಳಬಹುದು ಅಮಾಲ್ಗ ಮೇಷನ್ ಮಾಡಿಕೊಳ್ಳಬೇಕಾದರೆ ಅದರಲ್ಲಿ ಮೂರನೇ ಎರಡು ಭಾಗದ ಜನರು ಅಂದರೆ ಮೆಜಾರಿಟಿ ಸದಸ್ಯರು ಪಾಸ್ ಮಾಡಬೇಕು. ಅದಕ್ಕೆ ರಿಜಿಸ್ಟ್ರಾರ್‌ರವರು ಒಪ್ಪಬೇಕು. ಅವರು ಮಾಡುವುದಿಲ್ಲ ಎಂದು ಹೇಳಿದರೆ ಅದನ್ನು ಬಲಾತ್ಕಾರವಾಗಿ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಎಲ್ಲರೂ ಒಪ್ಪಿ ಒಂದು ಒಳ್ಳೆಯ ತೀರ್ಮಾನಕ್ಕೆ ಬರಬೇಕು. ಬಲಾತ್ಕಾರವಾಗಿ ಆರ್ಡರ್ ಮಾಡಿ ಅಮಾಲ್ಗಮೇಟ್

ಮಾಡಿದರೆ ಅವರಿಗೆ ಎಲ್ಲರಿಗೂ ನೋಟೀಸ್ ಬರುತ್ತದೆ. ನೋಟೀಸ್ ಕೊಟ್ಟರೆ ಆಗ ಅದರಲ್ಲಿ ಯಾವನಾದರೂ ಸೊಸೈಟಿ ಅಮಾಲ್ಗಮೇಟ್ ಆದರೆ ಅಲ್ಲಿ ನಾನು ಇರುವು ದಿಲ್ಲ ಎಂದು ಹೇಳಿದರೆ ಅವನ ಹಣವನ್ನು ವಾಪಸ್ ಕೊಡಬೇಕು. ಆದುದರಿಂದ ಅದು ಸೂಕ್ತವಾದ ಸಲಹೆ ಅದರಲ್ಲಿ ಹೆಚ್ಚಿಗೆ ಏನೂ ತೊಂದರೆ ಬರಲಿಕ್ಕೆ ಸಾಧ್ಯವಿಲ್ಲ. ರಿಜಿಸ್ಟ್ರಾರ್ ಅವರಿಗೆ ಅದು ಸರಿಕಂಡು ಮತ್ತೆ ಅಲ್ಲಿಯ ಜನರೇ ಅವರವರೇ ಸೇರಿ ಕೊಳ್ಳುವುದಕ್ಕೆ ಇಷ್ಟವಿದ್ದರೆ ಅವರು ಅಮಾಲ್ಗಮೇಟ್ ಮಾಡಿಕೊಳ್ಳಬಹುದು. ಸೆಕ್ಷನ್ 29 ಎ, ಬಿ, ಸಿ ಯಲ್ಲಿ ಟರ್ಮ್ ಆಫ್ ಆಫೀಸ್ ಅದರಲ್ಲಿ ಯಾರಾದರೂ ಒಬ್ಬ ಅಧಿಕಾರಸ್ತನು ರಾಜೀನಾಮೆ ಕೊಟ್ಟರೆ ಅದನ್ನು ಆ ಸಂಸ್ಥೆಯಿಂದ ಮತ್ತೆ ಯಾವ ಕಾರಣಕ್ಕಾದರೂ ವಾಪಸ್ ಪಡೆಯುವುದಿದ್ದರೆ, 15 ದಿವಸಗಳೊಳಗಾಗಿ ಅದನ್ನು ವಾಪಸ್ ಪಡೆಯಬೇಕು ಇಲ್ಲದಿದ್ದರೆ ಅದನ್ನು ರಾಜೀನಾಮೆಯಾಗಿ ಪರಿಗಣಿಸಲಾಗುತ್ತದೆ. ಏತಕ್ಕೆಂದರೆ ಈಗ 6 ವರ್ಷಗಳು ಅವನೇ ಇದ್ದರೆ ಮಧ್ಯೆ ಈ ರೀತಿಯಾದರೆ ಬರುವ ಎಲೆಕ್ಷನ್‌ವರೆಗೆ ಅದು ಮುಂದುವರಿದುಕೊಂಡು ಹೋಗು ತ್ತದೆ. ಮುಂದೆ ವೈಸ್ ಪ್ರೆಸಿಡೆಂಟ್, ಅಥವಾ ಪ್ರೆಸಿಡೆಂಟ್ ಆದರೆ ಅವರು 6 ವರ್ಷಗಳಿಗಿಂತ ಇರುವುದಕ್ಕೆ ಸಾಧ್ಯವಿರುವುದಿಲ್ಲ.

ಸೆಕ್ಷನ್ 30-A ನಲ್ಲಿ Registrar's power to give direction in the public interest ಬಗ್ಗೆ ಹೇಳಿದೆ.

ರಿಜಿಸ್ಟ್ರಾರ್ ಅವರಿಗೆ ಸೂಪರ್‌ಸೀಡ್ ಮಾಡುವುದಕ್ಕೆ ಅಧಿಕಾರ ಉಂಟು. ಸೂಪರ್‌ಸೀಡ್ ಮಾಡಬೇಕಾದರೆ, ಸೊಸೈಟಿಯವರಿಗೆ ನೋಟೀಸ್ ಕೊಡಬೇಕು ನಂತರ ಸೂಪರ್‌ಸೀಡ್ ಮಾಡಬೇಕು. ರಿಸರ್ವ್ ಬ್ಯಾಂಕ್‌ನವರು ಇಂಥ ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕು ಎಂದು ಹೇಳಿದರೆ ಅದನ್ನು ನಾವು ಸೂಪರ್‌ಸೀಡ್ ಮಾಡಲೇಬೇಕಾಗುತ್ತದೆ. ಏಕೆಂದರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಬ್ಯಾಂಕಿನ ಮೇಲೆ ಸರ್ಕಾರದ ಹತೋಟಿ ಇರುವುದು ಅತ್ಯಗತ್ಯ. ರಿಸರ್ವ್ ಬ್ಯಾಂಕ್‌ನವರು ಕೆಲವು ಡಿ. ಸಿ. ಸಿ. ಬ್ಯಾಂಕ್‌ಗಳನ್ನು ಇನ್‌ಸ್ಪೆಕ್ಟ್ ಮಾಡುತ್ತಾರೆ. ಅವರಿಗೆ ಅನೇಕ ಸಲಹೆಗಳನ್ನು ಹೀಗೆ ಮಾಡಬೇಕು ಹಾಗೆ ಮಾಡಬೇಕು ಎಂದು ಆಗಾಗ್ಗೆ ಆದೇಶ ಕೊಡುತ್ತಾ ಇರುತ್ತಾರೆ. ಅವರು ಯಾವ ಒಂದು ಬ್ಯಾಂಕು ಸರಿಯಾಗಿಲ್ಲ, ಅದು ಸರಿಯಾಗಿ ತನ್ನ ವ್ಯವಹಾರವನ್ನು ನೋಡಿ ಕೊಳ್ಳುವುದಿಲ್ಲವೋ ಅದು ಉಳಿಯುವುದಿಲ್ಲ ಎನ್ನುವ ಅಭಿಪ್ರಾಯವನ್ನು ಅವರು ಮನಗಂಡು ಅಂಥಾದ್ದನ್ನು ಸೂಪರ್‌ಸೀಡ್ ಮಾಡಬೇಕು ಎಂದು ಹೇಳಿದರೆ ನಾವು ಮಾಡಲೇಬೇಕಾಗುತ್ತದೆ. ಆದರ ಮಟ್ಟಿಗೆ ಅಪೀಲು ಇಡಲಿಕ್ಕೆ ಕೂಡದು. ರಿಜಿಸ್ಟ್ರಾರ್ ಅವರು ಒಂದು ಹುಕುಂ ಕೊಟ್ಟರೆ ಅದರ ಮೇಲೆ ಅಪೀಲು ಹೋಗು ವುದಕ್ಕೆ ಅವಕಾಶವುಂಟು ಸರ್ಕಾರದವರು ಅದನ್ನು ರದ್ದು ಮಾಡಬಹುದು. ಕೆಲವು ಸಂದರ್ಭಗಳಲ್ಲಿ ಅಪೀಲು ಹೋಗುವುದಕ್ಕೆ ಅವಕಾಶವಿಲ್ಲ ಎಂದು ತೀರ್ಮಾನ

ಶ್ರೀ ಎ. ಶಂಕರಆಳ್ವ

ಮಾಡಿದ್ದೇವೆ. ಈಗ ರಿಸರ್ವ ಬ್ಯಾಂಕಿನವರು ಕೊಟ್ಟ ತೀರ್ಮಾನಕ್ಕೆ ಮಟ್ಟಿಗೆ ಅಪೀಲು ಹೋಗುವುದಕ್ಕ ಅವಕಾಶವಿಲ್ಲ. ಅದರೆ ರಿಜಿಸ್ಟ್ರಾರ್ ಕೊಟ್ಟ ತೀರ್ಮಾನದ ಬಗ್ಗೆ ನಾವು ಗಮನಿಸಬಹುದು.

ಇನ್ನು ಸೆಕ್ಷನ್ 53 (ಎ) ಮತ್ತು 53 (ಬಿ) ಗಳಲ್ಲಿ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದನ್ನು ಎರಡು ಉದ್ದೇಶದಿಂದ ತಂದಿದ್ದೇವೆ. ಒಂದು, ಈಗ ಇರುವ ಕಾನೂನು ಪ್ರಕಾರ ಮೂರು ಜನರನ್ನು ನಾಮಿನೇಟ್ ಮಾಡ ಬಹುದು ಎಂದು ಇದೆ. ಆದರೆ ಕೆಲವು ಸಂದರ್ಭಗಳಲ್ಲಿ ಜಾಸ್ತಿ ಜನರನ್ನು ಸೇರಿಸಿ ಕೊಳ್ಳಬಹುದು ಎಂದು ಈಗ ಸೇರಿಸಿದ್ದೇವೆ. ಸೆಕ್ಷನ್ 54ರ ಪ್ರಕಾರ, ಸೂಪರ್ ಸೀಡ್ ಮಾಡುವ ಬದಲು ಡೈರೆಕ್ಟರ್ಸ್ ಅನ್ನು ಇಟ್ಟುಕೊಂಡು ಬ್ಯಾಂಕನ್ನು ಹತೋಟಿಗೆ ತೆಗೆದುಕೊಳ್ಳಬಹುದು; ಅಥವಾ ಜಾಸ್ತಿ ಜನರನ್ನು ನೇಮಕ ಮಾಡಿ ಕೊಂಡು, ಅದರಲ್ಲಿ ಒಬ್ಬರನ್ನು ಚೇರ್ಮನ್ ಮಾಡಿಕೊಂಡು ಕಾರಭಾರ ನಡೆಸಿ ಕೊಳ್ಳಬಹುದು. ನಿಜವಾಗಿ ಒಂದು ಸೊಸೈಟಿ ನಡೆಯುತ್ತಾ ಇರುವಾಗ ಅದರಲ್ಲಿ ಒಂದೇ ಪಕ್ಷದವರು ಇದ್ದರೆ, ಅದು ಹಾಳಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಕೆಲವು ಕಡೆ ಎಲ್ಲರೂ ಒಟ್ಟಿಗೆ ಸೇರಿಕೊಂಡು ಸೊಸೈಟಿಗಳು ಹಾಳಾಗಿ ಹೋಗಿವೆ. ಅದರ ಬದಲಾಗಿ ಸೊಸೈಟಿಯ ವಿಷಯದಲ್ಲಿ ತಿಳುವಳಿಕೆಯುಳ್ಳವರು, ಇಲ್ಲದಿದ್ದರೆ ಸಹಕಾರ ಸಂಸ್ಥೆಯಲ್ಲಿ ದುಡಿದವರು ಅವರಿಗೆ ಡೈರೆಕ್ಟರ್ಸ್ ಆಗಿ ಬರುವುದಕ್ಕೆ ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಮತ್ತು ವೀಕರ್ ಸೆಕ್ಷನ್ಸ್‌ಗೆ ಅಲ್ಲಿ ಅವಕಾಶ ಕೂಡ ಸಿಕ್ಕುವುದಿಲ್ಲ. ಅಂತಹವರಿಗೆ ಎಲೆಕ್ಷನ್‌ನಲ್ಲಿ ಆರಿಸಿ ಬರುವುದು ಕಷ್ಟವಾಗುತ್ತದೆ. ಅಂಥವರಿಗೆ ಸಹಕಾರ ಸಂಸ್ಥೆಯಲ್ಲಿ ಒಂದು ಸ್ಥಾನವನ್ನು ಕೊಡಲಿಕ್ಕೆ ಇದರಿಂದ ಒಂದು ಅವಕಾಶವಾಗುತ್ತದೆ. ಅಲ್ಲಿ ಮೂರನೆಯ ಒಂದು ಭಾಗ ಮೆಜಾರಿಟಿ ಇರುವುದರಿಂದ ಸ್ವಲ್ಪಮಟ್ಟಿಗೆ ಸಂಸ್ಥೆಯಮೇಲೆ ಹತೋಟಿಯನ್ನು ಇಡಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ ;— ಈ ಒಂದು ಅವಕಾಶದಿಂದ ಸರ್ಕಾರಕ್ಕೆ ಯಾರು ಬಹಳ ಬೇಕಾದವರೋ ಅವರನ್ನು ಸಂಸ್ಥೆಯಲ್ಲಿ ಹಾಕುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎ. ಶಂಕರ ಆಳ್ವ :—ಸಂಸ್ಥೆಯಲ್ಲಿ ಯಾರಾದರೂ ಇರಲೇ ಬೇಕಾಗುತ್ತದೆ, ಸರ್ಕಾರ ಇರುವುದು ಅನ್ಯಾಯ ಮಾಡಬೇಕು ಎಂದಲ್ಲ. ಸರ್ಕಾರ

ನಿಜವಾಗಿಯೂ ಒಳ್ಳೆಯ ಕೆಲಸ ಮಾಡುತ್ತದೆ. ಯಾರಿಗೆ ಇದರಲ್ಲಿ ಸೇವೆ ಸಲ್ಲಿಸಬೇಕು ಎಂದು ಆಸಕ್ತಿ ಉಂಟೋ ಅವರಿಗೆ ಒಂದು ಅವಕಾಶ ಇದರಿಂದ ಕೊಟ್ಟಂತಾಗುತ್ತದೆ. ಮತ್ತು ಸೆಕ್ಷನ್ 53 (ಬಿ) ಅನ್ನು ನಾವು ಮುಂದುವರಿಸಿ ಕೊಂಡು ಹೋಗುವುದಿಲ್ಲ,

ಶ್ರೀ ಕಾಗೋಡು ತಿಮ್ಮಪ್ಪ :—ತಾವು ಮೂರನೆಯ ಒಂದು ಭಾಗವನ್ನು ನಾಮಿನೇಟ್ ಮಾಡುವ ಉದ್ದೇಶ ಏನು ?

ಶ್ರೀ ಎ. ಶಂಕರ್ ಆಳ್ವ :—ಸ್ಟೇಟ್ ಗವರ್ನಮೆಂಟಿನ 50 ಪರ್ಸೆಂಟ್ ಷೇರ್ ಎಲ್ಲಿದೆಯೋ ಅಲ್ಲಿ ಒಟ್ಟು ಮೆಂಬರ್‌ಸ್‌ನ ಮೂರನೆಯ ಒಂದು ಭಾಗ ಮೆಂಬರ್ಸ್ ನಾಮಿನೇಟ್ ಮಾಡುವುದಕ್ಕೆ ಅವಕಾಶ ಉಂಟು. ಸೆಕ್ಷನ್ 121ರ ಪ್ರಕಾರ ಎಷ್ಟು ಜನರನ್ನು ಬೇಕಾದರೂ ಸರ್ಕಾರ ನೇಮಕ ಮಾಡಬಹುದು. ಆದರೆ ಈಗ ಇದರ ಪ್ರಕಾರ ಮೂರು ಜನರನ್ನು ನಾಮಿನೇಟ್ ಮಾಡಬಹುದು. ಈಗ ಅವಕಾಶ ಮಾಡಿರುವ ಪ್ರಕಾರ ಸರ್ಕಾರದ ನಾಮಿನೇಷನ್ ಒಂದು ರೀತಿಯ ಸಬ್‌ಸ್ಟ್ಯಾನ್‌ಷಿಯಲ್ ಮೈನಾರಿಟಿ ಇದ್ದ ಹಾಗೆ.

ಸೆಕ್ಷನ್ 70 (ಎ) ನಲ್ಲಿ ಲಿಮಿಟೇಷನ್ ಅವಧಿಯ ಬಗ್ಗೆ ಹೇಳಿದೆ. ತಮಗೆ ಗೊತ್ತಿರುವ ಹಾಗೆ ಮಿಸ್ ಅಪ್ರೊಪ್ರಿಯೇಷನ್ ಆದ ತಾರೀಖಿನಿಂದ ಎರಡು ವರ್ಷದೊಳಗೆ ದಾವೆ ಹಾಕಬೇಕಾಗುತ್ತದೆ. ಈಗ ಏನಾಗಿದೆ ಎಂದರೆ ದಾವೆ ಮಾಡುವ ಮೊದಲು ಆಡಿಟ್ ಆಗುವುದಿಲ್ಲ. ಕೆಲವು ಸಂದರ್ಭದಲ್ಲಿ ಅದು ನಮ್ಮ ತಿಳುವಳಿಕೆಗೆ ಬರುವುದಿಲ್ಲ. ಕೆಲವು ಸಂದರ್ಭದಲ್ಲಿ ಇದು ಎರಡು ವರ್ಷ ದಾಟಿ ಹೋಗುತ್ತದೆ, ಇದರ ಬಗ್ಗೆ ಮಾನ್ಯ ಸದಸ್ಯರು ಸಭೆಯಲ್ಲಿ ಪ್ರಶ್ನೆಯನ್ನೂ ಕಳುಹಿಸಿದ್ದಾರೆ, ಒಂದೆರಡು ಸೊಸೈಟಿಯ ವಿಷಯ ನನಗೆ ನೆನಪು ಉಂಟು, ಇಷ್ಟು ಲಿಮಿಟೇಷನ್ ಪೀರಿಯಡ್ ಇರುವುದರಿಂದ ಸೊಸೈಟಿಯವರು ಕೊಟ್ಟ ಹಣ ವಸೂಲಾಗುವುದಿಲ್ಲ, ಆದ್ದರಿಂದ ಲಿಮಿಟೇಶನ್ ಪಿರಿಯಡ್ ಅನ್ನು ಆರು ವರ್ಷದ ಮಟ್ಟಿಗೆ ಮುಂದುವರಿಸಿಕೊಂಡು ಹೋಗಿದ್ದೇವೆ.

ಇನ್ನೊಂದು, ಸೆಕ್ಷನ್ 71 (ಎ) ನಲ್ಲಿ ಏನಾಗಿದೆ ಎಂದರೆ, ಇದರಲ್ಲಿ ಸದಸ್ಯರಿಗೆ ತಿಳಿದ ಹಾಗೆ ಕೆಲವು ಫಿನ್ಯಾನ್ಸಿಂಗ್ ಏಜೆನ್ಸೀಸ್‌ಗಳು ಸಹಕಾರ ಸಂಸ್ಥೆಗಳಿಗೆ ಸಾಲವನ್ನು ಕೊಡುತ್ತವೆ. ಅವರ ಹತ್ತಿರ ರೆಗ್ಯುಲರ್ ಆಗಿ ಹಣ ಕಟ್ಟಬೇಕು. ಫೈನಾನ್ಸಿಂಗ್ ಬ್ಯಾಂಕ್‌ಗೆ ಬರಬೇಕಾದ ಹಣದ ಬಗ್ಗೆ ಕ್ರಮ ತೆಗೆದುಕೊಳ್ಳಲು ಇದುವರೆಗೆ ಅವಕಾಶವಿರಲಿಲ್ಲ. ಈಗ ಅದಕ್ಕೆ ಅವಕಾಶ ಮಾಡಿದೆ.

(ಶ್ರೀ ಎ. ಶಂಕರ ಆಳ್ವ)

72-ಎ. ರಿಸರ್ವ್ ಬ್ಯಾಂಕು ತಿಳಿಸಿದರೆ ಯಾರಾದರೂ ಕೋ ಆಪರೇಟಿವ್ ಬ್ಯಾಂಕನ್ನು ವೈಂಡಪ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ರಿಸರ್ವ್ ಬ್ಯಾಂಕು ವರ್ಷ ವರ್ಷ ತನಿಖೆ ಮಾಡುವುದು. ಆಗ ಯಾವುದಾದರೂ ಬ್ಯಾಂಕನ್ನು ವೈಂಡಪ್ ಮಾಡಬೇಕೆಂದು ಅದು ತಿಳಿಸಿದರೆ ಮಾಡಲೇಬೇಕು, ವಿಳಂಬ ಮಾಡದೆ ಕೂಡಲೇ ರಿಜಿಸ್ಟ್ರಾರರು ಆ ಕೆಲಸ ಮಾಡಬೇಕು.

ಅಮೆಂಡ್‌ಮೆಂಟ್ ಟು ಸೆಕ್ಷನ್ 101. ಈಗ ಒಬ್ಬನ ಆಸ್ತಿಯನ್ನು ಜಫ್ತಿ ಮಾಡುವರು. ಅದು ಮೂರನೆಯವನದು ಎಂದು ಹೇಳಿದರೆ ತನಿಖೆಮಾಡಲು ಸಿವಿಲ್‌ಕೋರ್ಟಿಗೆ ಹೋಗಬೇಕಾಗುತ್ತಿತ್ತು. ಅದರ ಬದಲು ಬೇರೆ ವ್ಯವಸ್ಥೆ ಮಾಡಲಾಗಿದೆ. ಅಂಥಾದ್ದನ್ನು "ಸಮ್ಮರಿ" ರೀತಿಯಲ್ಲಿ ತನಿಖೆ ಮಾಡುವರು. ಯಾರಾದರು ಅಸಮಾಧಾನ ಸೂಚಿಸಿದರೆ, ಕ್ಲೈಮ್ ಹಾಕಿದರೆ 'ಸಮ್ಮರಿ' ಆರ್ಡರ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

105-ಎ ಸೆಕ್ಷನ್ನಿನ ತಿದ್ದುಪಡಿ ಮುಖ್ಯವಾದುದು ಈಗ ಅನೇಕ ದೂರುಗಳು ಬರುತ್ತವೆ ಕೆಲವರು ಸದಸ್ಯರಾಗಲು ಅರ್ಜಿ ಹಾಕಿದರೆ ಅವನ್ನು ವಜಾ ಮಾಡುತ್ತಾರೆ, ಸದಸ್ಯರಾಗಲು ಅರ್ಹರಾಗಿರುವವರು ಸದಸ್ಯತ್ವಕ್ಕಾಗಿ ಅರ್ಜಿ ಹಾಕಿದರೆ ಅವರಿಗೆ ಕೊಡಲೇಬೇಕು. ಸದಸ್ಯತ್ವ ಅವರಿಗೆ ಕೊಡುವುದಿಲ್ಲ ಎಂದು ಹೇಳವುದು ಸೊಸೈಟಿಗೆ ಅಧಿಕಾರವಿಲ್ಲ. ಕೆಲವು ಸಂದರ್ಭಗಳಲ್ಲಿ ಅರ್ಜಿಗಳನ್ನು ತಳ್ಳಿ ಹಾಕುವುದುಂಟು. ಆಗ ಅಪೀಲು ಮಾಡಬೇಕು. ಆದಷ್ಟು ಜಾಗ್ರತೆ ಅಂಥ ಸಂದರ್ಭಗಳಲ್ಲಿ ಅಪೀಲನ್ನು ಇತ್ಯರ್ಥಮಾಡಬೇಕು ಎಂದು ಉದ್ದೇಶಿಸಿದೆ. ಅಲ್ಲದೆ 5 ರೂ. ಕಟ್ಟಬೇಕು ಎಂದಿರುವುದು ಬಡವರಿಗೆ ತೊಂದರೆಯಾಗುವುದು. ಅರ್ಜಿ ಹಾಕಿದರೆ ತಿರಸ್ಕಾರಮಾಡುವುದುಂಟು, ಹಾಗೆ ಮಾಡಬಾರದು. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಆಫೀಸರುಗಳು ಸೇರಿ ಕೊಂಡು ತೊಂದರೆ ಮಾಡಲು ಅವಕಾಶವಿದೆ. ಆದುದರಿಂದ ಅಪೀಲನ್ನು ಜಾಗ್ರತೆ ಇತ್ಯರ್ಥ ಮಾಡಬೇಕೆಂದು ನಮೂದಿಸಲಾಗಿದೆ.

ಸೆಕ್ಷನ್ 108-ಎ. ಇದರಮಟ್ಟಿಗೆ ಅಪೀಲಿಗೆ ಅವಕಾಶವಿಲ್ಲ ಎಂದ ಸಿದ್ದಪ್ಪ ನವರು ಹೇಳಿದರು. ಇದೊಂದು ಸೆಕ್ಷನ್ ಮಟ್ಟಿಗೆ ಇಲ್ಲ; ಇತರ ಸಂದರ್ಭ ಗಳಲ್ಲಿ ಅವಕಾಶವುಂಟು. ಏಕೆಂದರೆ ನಿಧಾನವಾದರೆ ಬ್ಯಾಂಕು ಹಾಳಾಗುವುದು. ರಿಸರ್ವ್ ಬ್ಯಾಂಕು ತನಿಖೆಮಾಡಿ ನೋಡಿರಬಹುದು. ಯಾವ ರೀತಿ ಕೆಲಸ ಮಾಡು ವುದು, ಆದಾಯ ಮತ್ತು ಖರ್ಚೆಷ್ಟು, ಪರ್ಸಂಟೇಜ್ ಇದೆ ಎಂಬುದನ್ನು ನೋಡು ವರು. ಬ್ಯಾಂಕು ಒಳ್ಳೆಯ ರೀತಿಯಲ್ಲಿ ನಡೆಯಬೇಕಾದರೆ ಯಾರನ್ನು ನೇಮಕ

ಮಾಡಬೇಕು, ಸಾಲ ಸರಿಯಾಗಿ ವಸೂಲು ಮಾಡುವರೇ ಎಂಬುದನ್ನೆಲ್ಲಾ ವಿಚಾರಿಸುವರು. ವೀಕರ್ ಸೆಕ್ಷನ್ಸ್‌ಗೆ ಇಷ್ಟು ಸಾಲ ವಗೈರೆ ಕೊಡಬೇಕೆಂದಿದೆ. ಅದರಂತೆ ಕೊಡುವರೇ ಎಂಬುದನ್ನು ಪರಿಶೀಲಿಸಿ ನೋಡುವರು. ಕೆಲವು ಸಂದರ್ಭಗಳಲ್ಲಿ ಬ್ಯಾಂಕು ಸರಿಯಾಗಿ ಕೆಲಸ ಮಾಡದೆ ಹಾಳಾಗುವುದು. ಅದನ್ನು ಹಾಗೇ ಬಿಡುವುದು ಸರಿಯಲ್ಲ. ಆಗ ಅದನ್ನು ರಿಜಿಸ್ಟ್ರಾರರಿಗೆ ತಿಳಿಸಿದರೆ ಅಂಥ ಸಂದರ್ಭಗಳಲ್ಲಿ ವೈಂಡಪ್ ಮಾಡಿದರೆ ಅಪೀಲಿಗೆ ಅವಕಾಶವಿಲ್ಲ. ಕೆಲವು ಸಂದರ್ಭಗಳಲ್ಲಿ ಸ್ಟೇ ಮಾಡುವುದುಂಟು. ಆಗ ಅಸೆಟ್ ಪೂರ್ಣವಾಗಿ ನಾಶವಾಗುವುದು. ಹಾಗಾಗಬಾರದು. ಅಂಥ ಸಂದರ್ಭಗಳಲ್ಲಿ ಫೈನಾಲಿಟಿ ಇರಬೇಕು. ರಿಸರ್ವ್ ಬ್ಯಾಂಕಿನವರು ಹಣ ಒದಗಿಸುವರು, ಅವರು ಡೈರೆಕ್ಷನ್ ಕೊಡುವುದುಂಟು. ಅಂತಹ ಸಂದರ್ಭಗಳಲ್ಲಿ ಅಪೀಲಿಗೆ ಅವಕಾಶವಿರಬಾರದು ಎಂದು ಮಾಡಿದ್ದೇವೆ.

128-ಎ. ಇದು ನಿಜವಾಗಿಯೂ ಮುಖ್ಯವಾದ ತಿದ್ದುಪಡಿ. ಇದರ ಮಟ್ಟಿಗೆ ಅನೇಕ ಸದಸ್ಯರು ಉಪಯುಕ್ತವಾದ ಸಲಹೆ ಕೊಟ್ಟಿದ್ದಾರೆ. ಕೆಲವು ಸಂದರ್ಭದಲ್ಲಿ ಟ್ರೈನಿಂಗ್ ಇಲ್ಲದಿರುವವರು ಏನೂ ಗೊತ್ತಿಲ್ಲದವರು ಸೆಕ್ರೆಟರಿಯಾಗಿ ಕೆಲಸ ಮಾಡುವರು. ಅವರಿಗೆ ಹೇಗೆ ಲೆಕ್ಕ ಬರೆದಿಡಬೇಕೆಂಬುದು ಗೊತ್ತಿರುವುದಿಲ್ಲ. ಇದರಿಂದ ತೊಂದರೆಯಾಗುವುದು ಮತ್ತು ಹಣದ ದುರುಪಯೋಗವಾಗುವುದು. ಇದನ್ನು ಆಡಿಟ್ ಮಾಡಿ ತಡೆಯುವುದು ಕಷ್ಟವಾಗುವುದು. ಅದಕ್ಕೆ ಬದಲಾಗಿ ಉಪಯುಕ್ತ ಟ್ರೈನಿಂಗ್ ಕೊಡಲು ಅವಕಾಶ ಕಲ್ಪಿಸಿದೆ. ಜಿಲ್ಲೆಗಳಲ್ಲಿ ಆಡಿಟ್ ಯೂನಿಯನ್ನುಗಳುಂಟು, ಮಡಿಕೇರಿ ಮುಂತಾದ ಕಡೆ ಅಂಥ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ಸ್ ಇದೆ. ಅವಕ್ಕೆ ಗ್ರಾಂಟ್ ಕೊಡುವುದರಬಂದಿಗೆ ಸರಕಾರ ಸಹಾಯ ನೀಡುವುದು. ಅಂತಹ ತರಬೇತಿ ಕೇಂದ್ರಗಳಲ್ಲಿ ಎಲ್ಲಾ ವಿಷಯಗಳಲ್ಲೂ ಟ್ರೈನಿಂಗ್ ಕೊಡುವರು. ಟ್ರೈನಿಂಗಿಗೆ ಅವಕಾಶ ಕಲ್ಪಿಸಿ ಟ್ರೈನಿಂಗ್ ಆದವರೇ ಸೆಕ್ರೆಟರಿಯಾಗಬೇಕೆಂದು ಉದ್ದೇಶವಾಗಿದೆ. ಅನೇಕ ಸೊಸೈಟಿಗಳಲ್ಲಿ ಚಿಕ್ಕ ವಯಸ್ಸಿನವರು ಪದವೀಧರರು ಕೆಲಸಕ್ಕೆ ನೇಮಕ ಹೊಂದಿದ್ದಾರೆ

ಅವರಿಗೆ ಸ್ವಲ್ಪ ತರಬೇತಿ ಕೊಟ್ಟರೆ, ಅವರು ಆಕ್ಚುಯಲಾಗಿ ಪ್ರಾಕ್ಟಿಕಲ್ ಟ್ರೈನಿಂಗನ್ನು ದೊರಕಿಸಿ ಕೊಂಡರೆ, ಅವರಿಂದ ಬಹಳ ಉತ್ತಮವಾದ ಕೆಲಸವನ್ನು ಸಹಕಾರ ರಂಗದಲ್ಲಿ ಪಡೆಯುವುದಕ್ಕೆ ಸಾಧ್ಯವಾಗುತ್ತದೆ, ಅದರಿಂದ ಅನುಕೂಲವಾಗುತ್ತದೆಯೇ ವಿನಾ ಹಾಗೆ ಮಾಡದಿದ್ದರೆ ಅವರಿಂದ ಯಾವ ಒಂದು ಒಳ್ಳೆಯ ಕೆಲಸವನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗಲಾರದೆಂದು ಈ ಒಂದು ಕಲಮನ್ನು ಹಾಕಿದೆ.

(ಶ್ರೀ ಎ. ಶಂಕರ ಆಳ್ವ)

4-00 P.M.

ಹೀಗೆ ಈ ತಿದ್ದುಪಡಿಯಲ್ಲಿ ಇರತಕ್ಕ ಮುಖ್ಯಾಂಶಗಳೆಲ್ಲಾ ಇಷ್ಟೇ. ಈ ತಿದ್ದುಪಡಿ ಮಸೂದೆಯನ್ನು ದಯಮಾಡಿ ಎಲ್ಲಾ ಮಾನ್ಯ ಸದಸ್ಯರುಗಳೂ ಒಪ್ಪಿಕೊಂಡರೆ ಈ ಶಾಸನವನ್ನು ಬೇಗ ಜಾರಿಗೆ ತರುವುದಕ್ಕೆ ಅವಕಾಶವಾಗುತ್ತದೆ. ಈ ತಿದ್ದುಪಡಿಗಳಿಂದ ಸಹಕಾರ ಸಂಘಗಳಿಗೆ ಯಾವ ಅಡ್ಡಿ ಅಡಚಣೆಗಳೂ ಬರುವುದಿಲ್ಲ. ಅವುಗಳ ಬದಲಾಗಿ ಅಭಿವೃದ್ಧಿಗೆ ಇದು ಹೆಚ್ಚಿನ ಸಹಾಯವಾಗುತ್ತದೆ. ಈ ದಿವಸ ಆ ಡೆನ್ಮಾರ್ಕಿನಲ್ಲಿ ಅನೇಕ ಕೋಆಪರೇಟೀವ್ ಸೊಸೈಟಿಗಳಿವೆ. ಆದರೆ ಅವುಗಳಿಗೆ ಅಲ್ಲಿ ಯಾವ ಒಂದು ಇಲ್ಲಿನ ಹಾಗೆ ಕೋಆಪರೇಟೀವ್ ಲಾ ನೇ ಇರುವುದಿಲ್ಲ. ಅಲ್ಲಿ ಜನರು ತಮ್ಮ ಪಾಡಿಗೆ ತಾವೇ ಅವುಗಳ ಆಡಳಿತವನ್ನು ತಮಗೆ ಹೇಗೆ ಬೇಕೋ ಹಾಗೆ ನಡೆಸಿಕೊಂಡು ಹೋಗುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ :— ಅಧ್ಯಕ್ಷರೇ. ಆದರೆ ಆ ಡೆನ್ಮಾರ್ಕಿನಲ್ಲಿ ಇರತಕ್ಕ ಸಹಕಾರ ತತ್ವದ ಪದ್ಧತಿಯೇ ಒಂದು ನಮೂನೆ. ನಮ್ಮ ದೇಶದಲ್ಲಿರತಕ್ಕ ಸಹಕಾರ ಸಂಘಗಳ ಪದ್ಧತಿಯೇ ಒಂದು ರೀತಿ. ಅಲ್ಲಿ ಒಂದು ಸೊಸೈಟಿಯಲ್ಲಿ 30-40 ಜನರಿಗೆ ಜಾಸ್ತಿಯಾಗಿರುವುದಿಲ್ಲ. ಇಲ್ಲಾದರೋ ಸಾವಿರಾರು ಜನರಿರುತ್ತಾರೆ.

Sri A. SHANKAR ALVA : — They are so civilised and they have got such a good record.

Sri T. R. SHAMANNA :— Does it mean we are all uncivilised?

Sri A SHANKAR ALVA:— I am not at all deriding our people. What I meant was that they have got more training and they had a long run in the co-operatives.

Mr DEPUTY SPEAKER:— What the Hon. Minister meant was that the people of Denmark and some other western countries are civilised to protect their co-operative institutions and not to devour them.

Sri M. S. KRISHNAN;— The whole structure of the co-operative movement there is different from the structure in our country.

Sri A. SHANKAR ALVA :— Ours is of recent origin. They are so advanced that they could do away with the co-operative law. Each society can take enormous responsibility. Even small societies and village societies are doing so well without any faction. As a matter of fact, somebody must be induced to become the president of a society: there is no rivalry. They are conducting their affairs in a nice way without bickerings.

ಅಲ್ಲಿ ಒಬ್ಬರು ಅಧ್ಯಕ್ಷರಾಗಿ ಮೂರು ವರ್ಷಗಳು ಕೆಲಸ ಮಾಡಿದರೆ ಮತ್ತೆ ಆ ಜಾಗಕ್ಕೆ ಬೇರೆಯವರು ಬಂದು ಕೆಲಸ ಮಾಡಲೆಂದು ಅಲ್ಲಿಯ ಜನ ಹೇಳುತ್ತಿದ್ದಾರೆ. ಅಂಥಾ ಕೋ ಆಪರೇಟೀವ್ ಸೊಸೈಟಿಗಳು ಅಲ್ಲಿ ಬಹಳ ಉಂಟು. ಅಲ್ಲಿ ಅವು ಹೇಗೆ ಸುಗಮವಾಗಿ ಕೆಲಸ ಮಾಡುತ್ತಿವೆಯೋ ಅಂಥ ಒಂದು ಒಳ್ಳೆಯ ಸನ್ನಿವೇಶ ಇಲ್ಲಿಯೂ ಬರಲೆಂದು ಪ್ರಯತ್ನ ಮಾಡೋಣ. ಈ ಒಂದು ತಿದ್ದುಪಡಿ ಮಸೂದೆಯಿಂದ ಅನೇಕ ಅಡಚಣೆಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಮಾನ್ಯ ರುದ್ರಪ್ಪನವರು ಈ ಮಸೂದೆಗೆ ಸಂಬಂಧ ಪಡದಿದ್ದರೂ ರಾಜ್ಯದಲ್ಲಿ ಸ್ಥಾಪನೆಯಾಗತಕ್ಕ ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನೂ ಸಹಾ ಈ ಕೋ ಆಪರೇಟೀವ್ ಸೆಕ್ಟಾರಿನಲ್ಲೇ ಸ್ಥಾಪಿಸಬೇಕೆಂದು ಹೇಳಿದರು. ಈ ರಾಜ್ಯದಲ್ಲಿ ಒಟ್ಟು ಹತ್ತು ಕೋ ಆಪರೇಟೀವ್ ಸಕ್ಕರೆ ಕಾರ್ಖಾನೆಗಳನ್ನು ಈ ಸಹಕಾರ ತತ್ವದ ಮೇಲೆ ಸ್ಥಾಪಿಸಬೇಕೆಂಬ ಆಸೆ ಸರ್ಕಾರಕ್ಕಿದೆ. ಅದಕ್ಕೇನು ಪ್ರೋತ್ಸಾಹ ಕೊಡಬೇಕೋ ಅಷ್ಟನ್ನೂ ಕೊಡಲಾಗುತ್ತಿದೆ. ಆದರೆ ಮಾನ್ಯ ಸದಸ್ಯರು ಈ ಮಸೂದೆಯ ಬಗ್ಗೆ ಏನೇನು ಉತ್ತಮ ಸಲಹೆಗಳನ್ನು ನೀಡಿದ್ದಾರೋ ಅವುಗಳ ಬಗ್ಗೆ ರೂಲಿನಲ್ಲಿ ಸಾಧ್ಯವಾದ ಮಟ್ಟಿಗೂ ಅಡಕ ಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ. ಆದರೆ ಈ ತಿದ್ದುಪಡಿ ಮಸೂದೆ ಬಗ್ಗೆ ಕೆಲವು ಸರ್ಕಾರದ ಪರವಾದ ತಿದ್ದುಪಡಿಗಳಿರುವುದರಿಂದ ಈ ಮಸೂದೆಯ ಮುಂದಿನ ಅನುಮೋದನೆಯನ್ನು ನಾಳೆ ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಾನು ಈಗಾಗಲೇ ನನ್ನ ತಿದ್ದುಪಡಿಗಳೇನಿವೆ ಅವುಗಳನ್ನು ಮಾನ್ಯ ಅಧ್ಯಕ್ಷರ ಕಡೆಗೆ ಕಳುಹಿಸಿದ್ದೇನೆ.

MR. DEPUTY SPEAKER.—The question is :

"That the Mysore Co-operative Societies (Amendment Bill), 1973, be taken into consideration"

The motion was adopted.

MR. DEPUTY SPEAKER.—As the Hon. Minister for Co-operation has sent me a letter stating that he wants to move some amendments and that it would take some time, clause by clause consideration of the Bill will be taken up tomorrow.

SRI T. R. SHAMANNA. In the list of Business for today, it is stated that the Bill will not only be taken up for consideration but the Hon. Minister will also move for its passing.

MR. DEPUTY SPEAKER :—The Chair has got certain inherent powers. There are certain official amendments. May be, they will be brought just to satisfy the views expressed by the hon. members.

SRI T. R. SHAMANNA :—That means we can also send further amendments.

MR. DEPUTY SPEAKER : —They will be examined. Due consideration will be given to them.

SRI T. R. Shamanna:—We come prepared according to the programme circulated to us. If all on a sudden, the business is changed, it is difficult for us to adjust to the changed programme. The Constitutional Amendment Bill put next to the Co-operative Societies (Amendment) bill is a non-controversial bill. Why not we finish it ?

MR. DEPUTY SPEAKER :—This is not some thing which is done every day. On rare occasions it has to be done.

SRI T. R. SHAMANNA :—According to the programme, The Mysore Co-operative Societies [Amendment) Bill, is there and let it be taken up.

Sri M. S. KRISHNAN :—According to the list of business, after the Mysore Co-operative Societies (Amendment) Bill, comes the official resolution. Even before all these

Mr. Basavalingappa's Mysore Housing Board (Amendment) Bill is there. The official resolution and the Municipal Taxation (Mysore Extension) Bill come last.

MUNICIPAL TAXATION (Mysore Extension) BILL 1973

MOTION TO CONSIDER [DEBATE CONTD]

MR. DEPUTY SPEAKER : The official resolution will be taken up afterwards. About the Municipal Taxation (Mysore Extension) Bill, the general discussion is already over. It has to be put to vote. I will now put the motion to the House.

The question is :

"That the Municipal Taxation (Mysore Extension) Bill, 1973, be taken into consideration."

The motion was adopted

Clauses 2 and 3

There are no amendments. I will straight away put Clauses 2 and 3 to the vote of the House.

The question is :
That clauses 2 and 3 do stand part of the Bill.

The motion was adopted

Clauses 2 and 3 were added to the Bill

SRI T. R. SHAMANNA : I have sent an Amendment this morning.

MR. DEPUTY SPEAKER : I have not received it. Clauses 2 and 3 are already put to the vote of the House. The hon. member will please resque his seat. I am going to explain it.

SRI T. R. SHAMANNA : I have given the amendment in time. I have taken an acknowledgement also

MR. DEPUTY SPEAKER.—When I just mentioned that the general discussion is over and that I will take up this Bill for consideration, the member could have said that he has sent an amendment. When I said I will take up Clause by Clause consideration, at least, the hon. member could have stood up and said that he had an amendment. If he had done so, I could have taken an oral amendment, if necessary.

SRI M. S. KRISHNAN : Technically, you are correct. There is another technical matter........

SRI KAGODU THIMMAPPA.—When the member has given a notice of amendment to the office, where has it gone ?

MR. DEPUTY SPEAKER :—I have made it very clear when I said it has been taken up I said 'motion is adopted and I will take up Clause by Clause,' If he had then stood up and said that he had an amendment, I would have asked him to send it to me.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಶ್ರೀ ಶಾಮಣ್ಣನವರು ಎದ್ದು ಹೇಳಲಿಲ್ಲವೆಂಬ ಕಾರಣಕ್ಕಾಗಿಯೇ ಅವರ ತಿದ್ದುಪಡಿಯನ್ನು ಈಗ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದರೆ ಹೇಗೆ ? ಆ ರೀತಿಯಾಗಿ ಮಾಡುವುದಕ್ಕಾಗುದಿಲ್ಲ. ಅವರ ತಿದ್ದುಪಡಿಯನ್ನು ಈಗ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ತಮ್ಮ ತಿದ್ದುಪಡಿ ನಮ್ಮ ಕಡೆಗೆ ಬಂದಿಲ್ಲ

SRI T. R. SHAMANNA.—I gave it at 11-30 in the Record Room and taken an acknowledgment.

MR. DEPUTY SPEAKER —Our office also tells me that it has not reached them so far. Mr. Shamanna knows the Hon. Speaker and the Secretary of the Legislature. We are here from one O'Clock. He could have sent a copy to any of us. It has not reached us.

SRI M. S. KRISHNAN.—My request is : Let him be allowed to move the amendment as per Rule 86.

MR. DEPUTY SPEAKER.—Hon. member Sri Shamanna may send a copy of his amendment to the Hon. Minister.

Hon. Member Sri T. R. Shamanna has given a notice of an amendment. He seeks to insert a new clause. I have already put clauses 2 and 3 to vote and they have been adopted. I have not put Clause 1 and Preamble and Title to the vote of the House. We have to scrupulously observe the Rules of Procedure. What the hon. member desires is to insert a new clause. If it has the consent of the House, I would permit the hon member to move his amendment. I will have to seek the consent of the House.

SRI M. S. KRISHNAN :—Even according to the rules you are well within your powers to suspend the rule.

MR. DEPUTY SPEAKER : If the house has no objection I would request Mr. Shamanna to move his amendment.

Hon'ble Member's : Yes

SRI T. R. SHAMANNA :—"After clause 2, the following shall be inserted, namely :—

2 A. AMENDMENT OF SECTION 5 OF THE CENTRAL ACT 11 OF 1881.

To Section 5 of the Municipal Taxation Act, 1881 (Central Act 11 of 1881), the following provison shall be added, namely :

'Provided that the sum so determined shall not be less than the tax which the State Government would have otherwise been liable to pay."

MR. DEPUTY SPEAKAR : Amendment moved;

"After clause 2, the following shall be inserted, namely :

2A. AMENDMET OF SEC. 5 OF THE CENTRAL ACT 11 OF 1881:

To Section 5 of the Municipal Taxation Act, 1881 (Central Act 11 of 1881), the following proviso shall be added, namely :—

'Provided that the sum so determined shall not be less than the tax which the State Government would have otherwise been liable to pay."

MR. T. R. SHAMANNA :— This is a non-controversial Bill. This is a Bill where it is specified that the Military personnel who occupy a property in the Municipal area shall have to be given exemption in paying tax and the Central Government shall have to compensate it. But as far the State Government is concerned it has to pay the tax to the Municipalities on behalf of these military personnel. Of course the Local Bodies are getting assistance from the State Government. But the resources of the local bodies are very much limited. In Bangalore City, a number of houses are there where the military personnel are living. The Municipality is giving service to them as they are giving to other citizens. For the service rendered by the Municipality, tax has to be paid by the citizens. As far as this military personnel if concerned, the State Government has to pay the tax on behalf of these personnel. I am not objecting to the relief giving to the Military Personnel in service. The interests of the Municipality should also be safeguarded. Therefore, according to the Central Act, the State Government may pay an reasonable amount that they may fix for these military personnel. The Central Government will make good to the State Government. Therefore whatever that is due to the City Corporation will have to be paid by the

State Government in the interest of the local body. The Hon. Minister Sri Basavalingappa will certainly agree with me as he is having so much of interest in the affairs of the Municipalities and help the Municipality to augment its funds. I am quite sure he will accept my amendment.

SRI B. BASAVALINGAPPA :—A series of representations have been made to the Government of Mysore for taking necessary steps to make applicable the provisions of Municipal Central Act 11 of 1881 to areas of former 'B' State merged with our State. That is why this Bill has been brought forth and this is the purpose of this Bill. This Act has been in force in other areas of the Mysore State except the former 'B' State *i e.*, the old Mysore area. The purpose of this Bill is to extend the operation of the Central Act to the old area of 'B' State. Nothing beyond this.

Items liable for tax particularly in respect of these Military authorities are: (1) Salary of the personnel (2) Other Taxes for service Officers (3) Tax on animals or Vehicles 3(a) Any animal which is required to be kept by a service personnel, 3(b) Any vehicle that is provided to be kept in lieu of the animal. If these items are taxed, and the Municipality attach any property, the milltary personnel will have to attend the Courts and all that for getting his legitimate duties. Therefore special exemption in favour of these military personnel has been given by the Central Government. But we are not giving all facilities free. Instead of collecting the tax direct from them, we make a bill of whatever amount in the way of tax due to the Municipality by these personnel and send it on to the Central Government for recovery. This is the purpose of this Bill. Now it has been brought before the House to extend the operation of Bill to the former Part 'B' State *i.e.*, the old Mysore area. Unde these circumstances, I do not think the amendment of Sri T. R. Shamanna can be accepted.

SRI T. R. SHAMANNA.— I want to make a definite clarification. Here, the Hon. Minister for Municipal Administration has not read the provisions of the Central Act properly.

MR. DEPUTY SPEAKER :—I am not concerned with that.

SRI T. R. SHAMANNA.— I have gone through the original Act this morning. What the Hon. Minister says is quite different from the Original Act.

MR DEPUTY SPEAKER.— I am not concerned with that. I have understood the point.

SRI T. R. SHAMANNA.—There is no provision to pass this Bill unless he clarifies my point. The Hon. Minister has not understood the provisions of the Original Act.

MR. DEPUTY SPEAKER.—I am not concerned with that I am concerned with putting the amendment and the Bill to the vote of the House.

SRI T. R. SHAMANNA.— You cannot curb me like that. The provisions of the Act are entirely different from what the Hon Minister has stated.

MR. DEPUTY SPEAKER.--I have not got so much power to scrutinise all sorts of things which are yet to be said here. It is not necessary for me. I shall put the amendment as it is to the vote of the House. It is not within my powers to say who is right and who is wrong and to correct somebody's wrong; I am not here as a judge. I need not be enlightened on this matter.

4-00 P. M.

SRI T. R. SHAMANNA.—When a law is passed against the principles of the main Act, we have to oppose it.

SRI M. S. KRISHNAN.—If a law is passed against the very purpose or the principle of the main Act, then we have to point out to you Sir.

MR. DEPUTY SPEAKER.—The law will take care of itself. It is not my concern to probe into all those matters. I have only to put the amendment of Sri Shamanna to the vote of the House.

SRI T. R. SHAMANNA.—I am seeking justice from you when a law of that kind is proposed to be passed.

MR. DEPUTY SPEAKER.—I have understood the confusion in his mind.

SRI T. R. SHAMANNA.—It is not I who is confused but others are confused.

MR. DEPUTY SPEAKER : Hon. member should note that I am not sitting here as a judge to say which is a better law and which is a better way of interpreting things and all that. The Bill has reached the stage of passing and the Hon. Member has given an amendment to the Bill. He has spoken in defence of his amendment. The Hon. Minister has already replied and has stated that he is not in a position to accept the amendment. Now it is my turn to put the amendment to the vote of the House as per the rules. I have not got powers to correct others. If I had powers, I would have done it.

I will put the amendment to the vote of the House. The question is :

"After clause 2, the following shall be inserted, namely :

"2A. Amendment of Section 5 of the Central Act II of 1881.—To Section 5 of the Municipal Taxation Act, 1881 (Central Act II of 1881 the following proviso shall, be added, namely :—

'Provided that the sum so determined shall not be less than the tax which the State Government would have otherwise been liable to pay."

The amendment was negatived

Clause 1 etc.,

MR. DEPUTY SPEAKER.— The Question is : "That clause 1, long Title Preamble and Enacting formula do stand part of the Bill."

The motion was adopted

Clause 1, Long Title, Preamble and Enacting formula were added to the Bill

MOTION TO PASS

SRI BASAVALINGAPPA (Minister for Municipal Administration).— I beg to move "that the Municipal Taxation (Mysore Extension) Bill, 1973 be passed.'

MR. DEPUTY SPEAKER.—The question is : "That the Municipal Taxation (Mysore Extension) Bill, 1973, be passed."

The motion was adopted and the Bill was passed
Mysore urban water supply and Drainage Board Bill 1973.
Motion to consider (Debate contd.)

MR. DEPUTY SPEAKER —Now I shall go to the other Bill *viz.*, the Mysore Urban Water Supply and Drainage Board Bill, 1973. This Bill was under discussion during the last session. The Hon, Member Sri Vatal Nagaraj is to continue his speech on this Bill.

SRI M. S. KRISHNAN.—This Bill may be taken up tomorrow for discussion. We can take up the official resolution which is slated for today's discussion.

MR. DEPUTY SPEAKER :—Sri Vatal Nagaraj is not here. We can take up the Official Resolution.

OFFICIAL RESOLUTION

Re: Ratification to the amendments to the constitution of India by the constitution of India 31st Amendment Bill 1973

SRI D. K. NAIKAR (Minister for Law and Parliamentary Affairs).—I beg to move :

"That this house ratifies the amendments to the constitution of India falling within purview of the proviso to clause (2) of article 368 thereof; proposed to be made by the constitution (Thirty-first Amendment) Bill, 1973, as passed by the two houses of Parliament."

MR. DEPUTY SPEAKER.—Resolution moved

"That this house ratifies the amendments to the constitution of India falling within the purview of the proviso to clause (2) of article 368 thereof, proposed to be made by the constitution (Thirtyfirst Amendment) Bill, 1973, as passed by the two houses of Parliament."

ಶ್ರೀ ಡಿ. ಕೆ. ನಾಯ್ಕರ್ :—(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :—ಮಾನ್ಯ ಅಧ್ಯಕ್ಷರೇ ಈ ತಿದ್ದುಪಡಿಗೆ ನಮ್ಮ ರಾಜ್ಯ ಘಟನೆಯು ಆರ್ಟಿಕಲ್ 368 ಕ್ಲಾಸ್ 2 ರಲ್ಲಿ ರ್ಯಾಟಿಫಿಕೇಷನ್ ಮಾಡಬೇಕು ಎಂದು ಇದೆ. ನಮಗೆ ಅಂದರೆ ಈ ಸದನಕ್ಕೆ ಇರುವ ಅಧಿಕಾರ ಕೇವಲ ರ್ಯಾಟಿಫೈ ಮಾಡುವ ಬಗ್ಗೆ ಮಾತ್ರ. ಈ ಬಿಲ್ಲಿನಲ್ಲಿ ಅಡಕವಾಗಿರುವ ವಿಷಯವನ್ನು ಈ ಬಿಲ್ಲಿನ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಸವಿಸ್ತಾರವಾಗಿ ಹೇಳಿದ್ದಾರೆ. 82 ನೇ ಆರ್ಟಿಕಲ್ ಪ್ರಕಾರ ಪ್ರತಿ ಸೆನ್‌ಸಸ್ ಆದ ಕೂಡಲೇ ಲೋಕ ಸಭೆಯ ಸೀಟುಗಳನ್ನು ಕಾನ್‌ಸ್ಟಿಟ್ಯೂಯೆನ್ಸಿಗಳನ್ನೂ ರೀ ಅಡ್ಜಸ್ಟ್ ಮಾಡುವ ಬಗ್ಗೆ ಪ್ರಾವಿಜನ್ ಇದೆ. ಈ ಪ್ರಕಾರ 1971ನೇ ಇಸವಿಯಲ್ಲಿ ಸೆನ್‌ಸೆಸ್ ಆಗಿದೆ. ಆದ್ದರಿಂದ 1972 ನೇ ಇಸವಿಯಲ್ಲಿ ಡಿ ಅಮಿಟೇಶನ್ ಆಕ್ಟ್ ಕೂಡ ಪಾಸು ಮಾಡಿದ್ದಾರೆ. ನಂತರ ಡಿ ಲಿಮಿಟೇಷನ್ ಕಮಿಷನ್ ನೇಮಿಸಿ ಆ ಕಮಿಷನ್ನಿನವರು ಸೀಟ್ಸ್ ಅಂಡ್ ಕಾನ್‌ಸ್ಟಿಟ್ಯೂಯೆನ್ಸಿಗಳನ್ನು ರೀ ಅಡ್ಜಸ್ಟ್ ಮಾಡುವ ಬಗ್ಗೆ ಶಿಫಾರಸ್ಸು ಮಾಡಿದ

(ಶ್ರೀ ಡಿ. ಕೆ. ನಾಯ್ಕರ್)

ನಂತರ ಸೀಟುಗಳನ್ನು ಮತ್ತು ಕಾನ್‌ಸ್ಟಿಟ್ಯೂಯೆನ್ಸಿಗಳನ್ನು ರೀ ಅಡ್ಜಸ್ಟ್ ಮಾಡು ವಾಗ ಈಗ ಲೋಕಸಭೆಯಲ್ಲಿದ್ದ ಸೀಟುಗಳ ಬಗ್ಗೆ ಎಫೆಕ್ಟ್ ಆಗುವ ಕಾರಣ ಇದೆ. ಅದೇನೆಂದರೆ 81 ನೇ ಆರ್ಟಿಕಲ್ ಪ್ರಕಾರ ಈಗ ಲೋಕಸಬೆಯಲ್ಲಿದ್ದ ಸೀಟುಗಳ ಸಂಖ್ಯೆ 500 ಮತ್ತು 25 ಸೀಟುಗಳು ಯೂನಿಯನ್ ಟೆರಿಟೋರಿಯಲ್‌ಗೆ ಇರ ಬೇಕು. ಆದ್ದರಿಂದ ಇದರಲ್ಲಿ ಬರುವಂತಹ ಕೆಲವು ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಪಾರ್ಲಿಮೆಂಟಿನಲ್ಲಿ ಈ ಬಿಲ್ಲನ್ನು ಡಿ ಲಿಮಿಟೇಷನ್ ಮಾಡಿದ್ದಾರೆ. ಲೋಕಸಭೆಯಲ್ಲಿ 500 ಸೀಟುಗಳು ಇದ್ದದನ್ನು 525 ಸೀಟುಗಳನ್ನು ಮಾಡಿದ್ದಾರೆ. ಇದರಲ್ಲಿ ಯೂನಿಯನ್ ಟೆರಿಟೋರಿಯಲ್‌ಗೆ 25 ಸೀಟುಗಳು ಏನಿದ್ದವು. ಅದರಲ್ಲಿ 5 ಸೀಟುಗಳನ್ನು ಕಡಿಮೆ ಮಾಡಿ 20 ಸೀಟುಗಳನ್ನು ಮಿನಿಮಮ್ ಮಾಡಿದ್ದಾರೆ. ಆದ್ದರಿಂದ ಈ ಬಿಲ್ಲಿನಲ್ಲಿ ಅರ್ಟಕಲ್ 330 ಮತ್ತು 332 ರಲ್ಲಿ ಕೂಡ ಕೆಲವೊಂದು ಬದಲಾವಣೆಯನ್ನು ಮಾಡಿದ್ದಾರೆ. ಈ ಬದಲಾವಣೆ ನಾಗಾಲ್ಯಾಂಡ್, ಅರಣಾಚಲಂ, ಮೇಘಾಲಯ, ಅಸ್ಸಾಂ ಮುಂತಾದ ಟ್ರೈಬಲ್ ಏರಿಯಾದಲ್ಲಿ ಕೆಲವು ರಿಜರ್ವೇಷನ್ ಏನಿದೆ ಅದಕ್ಕೆ ಇದು ಅಪ್ಲಿಕಬಲ್ ಆಗ ಬಾರದು ಎನ್ನುವ ರೀತಿಯಲ್ಲಿ ಕೆಲವು ಪ್ರಾವಿಜನ್ಸ್ ಮಾಡಿದ್ದಾರೆ. ಈ ಪ್ರಾವಿಜನ್ ಬಗ್ಗೆ ಸೆಂಟ್ರಲ್ ಪಾರ್ಲಿಮೆಂಟಿನಲ್ಲಿ ಎರಡೂ ಸದನಗಳಲ್ಲಿ ಸಾಕಷ್ಟು ಚರ್ಚೆ ಯಾಗಿ ಇದನ್ನು ಅಲ್ಲಿ ಪಾಸು ಮಾಡಿದ್ದಾರೆ. ಆದ್ದರಿಂದ ನಾನು ಈಗ ಈ ಸಭೆಯ ಮುಂದೆ ತಂದಿರುವ ಅಫಿಷಿಯಲ್ ರೆಜಲ್ಯೂಷನ್ನಿಗೆ ಮಾನ್ಯ ಸದಸ್ಯರು ಸರ್ವಾನು ಮತದ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳು ಈಗ ನಮ್ಮ ಮುಂದೆ ಇಟ್ಟಿರತಕ್ಕಂಥ ರಾಜ್ಯಾಂಗದ 31ನೇ ಅಮೆಂಡ್‌ಮೆಂಟ್ ಬಿಲ್ ಏನಿದೆ, ಇದನ್ನು ಕೆಲವಾರು ಕಾರಣಗಳ ಮೇಲೆ ಒಪ್ಪುವುದಕ್ಕೆ ಮನಸ್ಸು ಇದ್ದರೂ ಕೂಡ, ಬೇರೆ ಕೆಲವು ಕಾರಣಗಳಿಂದ ವಿರೋಧ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಲೋಕಸಭೆಯಲ್ಲಿ ಈಗಇರತಕ್ಕಂಥ ಸಂಖ್ಯೆ ಯನ್ನು ಜಾಸ್ತಿ ಮಾಡುವುದಕ್ಕೆ, ಮತ್ತು ಕೆಲವು ರಾಜ್ಯಗಳಲ್ಲಿ ಈಗ ಇರತಕ್ಕಂಥ ಸಂಖ್ಯೆ ಯನ್ನು ಕಡಿಮೆ ಮಾಡುವುದಕ್ಕಾಗಿ ಈ ಅಮೆಂಡ್‌ಮೆಂಟ್ ಬಿಲ್‌ನ್ನು ತರಲಾಗಿದೆ ಯೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಹಲವಾರು ರಾಜ್ಯಗಳು ಹೊಸ ದಾಗಿ ಉದಯವಾದ್ದರಿಂದ, ಅಂದರೆ ರಾಜ್ಯಗಳ ಪುನರ್ವಿಂಗಡಣೆಯಾದ್ದರಿಂದ ಕೆಲವು ರಾಜ್ಯಗಳಲ್ಲಿರುವ ಲೋಕಸಭಾ ಕ್ಷೇತ್ರಗಳನ್ನು ಸಹಜವಾಗಿಯೇ ಕಡಿಮೆ ಮಾಡಬೇಕಾಗಿ ಬರುತ್ತದೆ. ಆದರೆ 1971ನೇ ಸೆನ್‌ಸಸ್ ಪ್ರಕಾರ ಅಂದರೆ ಜನಸಂಖ್ಯೆಯ ಆಧಾರದಮೇಲೆ ಸ್ಥಾನಗಳ ಸಂಖ್ಯೆಯನ್ನು ಜಾಸ್ತಿ ಮಾಡ ಬೇಕಾಗುತ್ತದೆಂಬ ಮಾತನ್ನು ನಾವು ಸಹಜವಾಗಿ ಒಪ್ಪಿಕೊಂಡರೂ ಸಹ ಮತ್ತು

ಇನ್ನೂ ಅನೇಕ ಜನರಿಗೆ ಲೋಕಸಭೆಯಲ್ಲಿ ಪ್ರತಿನಿಧಿಸುವ ಅವಕಾಶ ಸಿಗುತ್ತದೆ ಎನ್ನುವ ಮಾತನ್ನು ಒಪ್ಪುವುದಾದರೂ ಸಹ, ಈ ಸ್ಥಾನಗಳನ್ನು ಹೆಚ್ಚು ಮಾಡುವ ಸಮಯದಲ್ಲಿ ಡೀಲಿಮಿಟೇಷನ್ ಕಮಿಟಿಯವರು ಈಗಿರತಕ್ಕಂಥ ಕ್ಷೇತ್ರಗಳನ್ನು ಸಕಾರಣದ ರೂಪು ಕೊಟ್ಟು ಅದಲುಬದಲು ಮಾಡುವುದಕ್ಕೆ ಅವಕಾಶವಿದೆ ಯೆಂಬತಕ್ಕಂಥ ಶಂಕೆಯನ್ನು ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಅಲ್ಲಿಯ ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಅಲ್ಲಿಯೂ ಕೂಡ ಇದರ ಬಗ್ಗೆ ಪರ ಮತ್ತು ವಿರೋಧದ ಅಭಿಪ್ರಾಯಗಳು ಬಂದಿವೆ. ಈ ತಿದ್ದುಪಡಿಯ ಹಿನ್ನೆಲೆಯನ್ನು ನಾವು ಸ್ವಲ್ಪ ಗಮನವಿಟ್ಟು ನೋಡಿದಾಗ ಹಲವಾರು ವಿಷಯಗಳು ನಮಗೆ ಗೊತ್ತಾಗುತ್ತವೆ. ಕೆಲವು ರಾಜ್ಯಗಳಲ್ಲಿ ಈಗಿರುವ ಸಂಖ್ಯೆಯನ್ನು ಕಡಿಮೆ ಮಾಡುವುದನ್ನು ನಾವು ಒಪ್ಪಿದರೂ ಸಹ, ಜಾಸ್ತಿ ಮಾಡತಕ್ಕಂಥ ಸಂದರ್ಭದಲ್ಲಿ ಡೀ-ಲಿಮಿಟೇಷನ್ ಕಮಿಟಿಯವರು ಏನು ಅನ್ಯಾಯ ಮಾಡಬಹುದೆಂಬುದಕ್ಕೆ ಲೋಕಸಭೆಯಲ್ಲಿ ಇದರ ಬಗ್ಗೆ ಚರ್ಚೆ ಮಾಡುವ ಸಮಯದಲ್ಲಿ ಕೆಲವು ಮಾನ್ಯ ಸದಸ್ಯರು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕಾನ್ಪುರದ ಈಗಿನ ಲೋಕಸಭಾ ಕ್ಷೇತ್ರ ಏನಿದೆ, ಆ ಕ್ಷೇತ್ರವನ್ನು ಒಡೆದು, ಅದಕ್ಕೆ ರೂರಲ್ ಏರಿಯಾ ಎಂದು ಹೆಸರು ಕೊಟ್ಟಿದ್ದಾರೆ. ಕಾನ್ಪುರದಲ್ಲಿ ಹಲವಾರು ಕಾಲೇಜುಗಳು, ಸ್ಕೂಲುಗಳು, ಕಾರ್ಖಾನೆಗಳು, ಆರ್ಡಿನೆನ್ಸ್ ಫ್ಯಾಕ್ಟರಿಗಳು ಇದ್ದರೂ ಸಹ ರೂರಲ್ ಏರಿಯಾ ಎಂದು ಟ್ರೀಟ್ ಮಾಡಿಬಿಟ್ಟಿದ್ದಾರೆ. ಕಾನ್ಪುರ ಪಟ್ಟಣದಲ್ಲಿ ರೆಸಿಡೆನ್ಷಿಯಲ್ ಕ್ವಾರ್ಟರ್ಸ್ ಇದ್ದರೂ ಸಹ ಈ ಒಂದು ತೀರ್ಮಾನಕ್ಕೆ ಬಂದಿದ್ದಾರೆ ಈ ರೀತಿ ಬದಲಾವಣೆ ಮಾಡುವುದಕ್ಕೆ ಕಾರಣವೇನೆಂದರೆ, ಇಲ್ಲಿಯವರೆಗೆ ಆ ಕ್ಷೇತ್ರದಲ್ಲಿ ಯಾರು ಹೆಚ್ಚಿನ ಜನರ ಬೆಂಬಲ ಪಡೆದಿದ್ದರೋ, ಆ ಒಂದು ಜನರ ಬೆಂಬಲವನ್ನು ಒಡೆದುಹಾಕಬೇಕು, ಛಿದ್ರಛಿದ್ರ ಮಾಡಬೇಕು ಎಂಬುದೇ ಮುಖ್ಯ ಕಾರಣ ಇದೇ ರೀತಿಯಲ್ಲಿ ಬೇರೆ ಕಡೆಗಳಲ್ಲಿಯೂ ಮಾಡಬಹುದೆಂಬ ಶಂಕೆಯನ್ನು ಅಲ್ಲಿಯ ಸದಸ್ಯರು ವ್ಯಕ್ತಪಡಿಸಿದ್ದಾರೆ ತಮ್ಮ ಕ್ಷೇತ್ರದ ಉದಾಹರಣೆಯನ್ನೇ ಶ್ರೀ ಎಸ್. ಎಂ. ಬ್ಯಾನರ್ಜಿಯವರು ಕೊಟ್ಟು ತಮ್ಮ ತೀವ್ರವಾದ ಶಂಕೆಯನ್ನು ಲೋಕಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಲೋಕಸಭೆಯ ಸಂಖ್ಯೆಯನ್ನು ಜಾಸ್ತಿ ಮಾಡುವುದರಿಂದ ಎಲ್ಲ ವರ್ಗದ ಜನರಿಗೂ ಸಾಕಷ್ಟು ಪ್ರಮಾಣಲ್ಲಿ ಸ್ಥಾನಗಳು ಸಿಗುತ್ತವೆ ಎಂಬುದನ್ನು ನಾವು ಒಪ್ಪಿಕೊಂಡರು ಸಹ, ಡೀ-ಲಿಮಿಟೇಷನ್ ಕಮಿಟಿಯವರು ಸಾಕಷ್ಟು ಪ್ರಮಾಣದಲ್ಲಿ ಅನ್ಯಾಯಗಳನ್ನು ಮಾಡುತ್ತಾರೆಂಬುದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಈ ಒಂದು ಆತಂಕವನ್ನು ರಾಜ್ಯಸಭೆಯಲ್ಲಿ ಮತ್ತು ಲೋಕಸಭೆಯಲ್ಲಿ ಅಲ್ಲಿಯ ಸದಸ್ಯರುಗಳು ವ್ಯಕ್ತಪಡಿಸಿದ್ದಾರೆ. ಈ ಒಂದು ತಿದ್ದುಪಡಿಯ ಕಾರಣದಿಂದ ನಮ್ಮ ರಾಜ್ಯದಲ್ಲಿಯೂ ಸಹ ಎರಡು ಮೂರು ಲೋಕಸಭಾಸ್ಥಾನಗಳು ಜಾಸ್ತಿಯಾಗಬಹುದು. ಎಲಕ್ಷನ್ ಕಮಿಷನರ್ ಅವರು ಮಾಡಿರುವ ರೆಕಮೆಂಡೇಷನ್

(ಶ್ರೀ ಎಸ್. ಬಂಗಾರಪ್ಪ)

ಆಧಾರದ ಮೇಲೆ ಈ ತಿದ್ದುಪಡಿಯನ್ನು ತರಲಾಗಿದೆ ಎಂದು ತಾವು ಹೇಳುತ್ತಿದ್ದೀರಿ. ಈ ಒಂದು ತಿದ್ದುಪಡಿಯ ಜೊತೆಗೆ ಇನ್ನೂ ಹಲವಾರು ತಿದ್ದುಪಡಿಗಳನ್ನು ಇಂದು ಮಾಡುವುದು ಅವಶ್ಯಕವಿದೆ. ಉದಾಹರಣೆಗೆ ಹೇಳುವುದಾದರೆ, ಚುನಾವಣೆಯ ಸಮಯದಲ್ಲಿ ಅಭ್ಯರ್ಥಿಗಳಾದವರು ಖರ್ಚು ಮಾಡ ತಕ್ಕಂಥ ಹಣದ ಮಿತಿ ಎನಿದೆ ಅದನ್ನು ಬಹಳ ಹಿಂದೆ ತೀರ್ಮಾನ ಮಾಡಿದ್ದು. ಈಗ ಎಲ್ಲ ಬೆಲೆಗಳು ಹೆಚ್ಚಾಗಿವೆ. ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ. ಈ ಕಾರಣದಿಂದ ಮಿತಿಯೊಳಗೇ ಖರ್ಚು ಮಾಡುವುದಕ್ಕೆ ಸಾಧ್ಯವಾಗದೆ ಸತ್ಯಕ್ಕೆ ದೂರವಾದ ಲೆಕ್ಕವನ್ನು ಕೊಡುವ ಪರಿಸ್ಥಿತಿ ಬಂದಿದೆ. ಇದನ್ನು ತಪ್ಪಿಸಲು, ಇದಕ್ಕೂ ಕೂಡ ಒಂದು ತಿದ್ದುಪಡಿ ತರುವುದು ಒಳ್ಳೆಯದೆಂದು ಹೇಳುತ್ತೇನೆ. ಎಲಕ್ಷನ್ ಕಮೀಷನರ್ ಅವರು ಹಲವಾರು ಪರಿಣಾಮಕಾರಿಯಾದಂಥ ರೆಕಮೆಂಡೇಷನ್‌ಗಳನ್ನು ಸರ್ಕಾರಕ್ಕೆ ಕಳಿಸಿದ್ದರೂ ಸಹ, ಈಗ ತಂದಿರುವ ತಿದ್ದುಪಡಿ ಎನಿದೆ, ಇದರಿಂದ ಡೀ-ಲಿಮಿಟೇಷನ್ ಕಮಿಟಿಯಲ್ಲಿ ನಾನಾ ರೀತಿಯ ಅನ್ಯಾಯವಾಗಬಹುದೆಂಬ ಕಾರಣದಿಂದ ಇದನ್ನು ವಿರೋಧ ಮಾಡಬೇಕಾಗಿದೆ. 1971ನೇ ಇಸವಿಯ ಸೆನ್‌ಸಸ್‌ನ ಆಧಾರದ ಮೇಲೆ ಸೀಟ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಲಾಗುತ್ತಿದೆ ಎಂದು ತಾವು ಹೇಳುವುದಾದರೆ ಇದೇ ರೀತಿ ಪ್ರತಿ ಹತ್ತು ವರ್ಷಗಳಿಗೆ ಒಂದು ಸಲ ಹೆಚ್ಚು ಮಾಡುತ್ತಾ ಹೋಗಬೇಕಾಗುತ್ತದೆ. ಆಗ ಸೀಟಿಂಗ್ ಅರೇಂಜ್‌ಮೆಂಟಿಗೆ ಏನು ವ್ಯವಸ್ಥೆ ಮಾಡುತ್ತೀರಿ? ಈ ಅಸೆಂಬ್ಲಿಯಲ್ಲಿರುವ ಸೀಟ್‌ಗಳೆಲ್ಲಾ ಭರ್ತಿಯಾಗಿಬಿಟ್ಟರೆ ನಾಳೆದಿವಸ ಬೇರೆ ಅಸೆಂಬ್ಲಿ ಹಾಲನ್ನು ಕಟ್ಟಬೇಕಾಗಿ ಬರಬಹುದು. ಪಾರ್ಲಿಮೆಂಟ್ ಭವನವನ್ನೇ ಉದಾಹರಣೆಗೆ ತೆಗೆದುಕೊಂಡರೆ ಅದು ಬಹಳ ಹಿಂದೆ ಬ್ರಿಟೀಷರ ಕಾಲದಲ್ಲಿ ಕಟ್ಟಿಸಿದ್ದು. ಅಲ್ಲಿ ಈಗಲೇ ಕುಳಿತುಕೊಳ್ಳುವುದಕ್ಕೆ ಸಾಕಷ್ಟು ಸ್ಥಳಾವಕಾಶವಿಲ್ಲ. ಶಾಲೆಗಳಲ್ಲಿ ಮಕ್ಕಳು ಬೆಂಚ್‌ಮೇಲೆ ಕುಳಿತು ಕೊಳ್ಳುವಂತೆ ಅಲ್ಲಿ ಸದಸ್ಯರು ಕುಳಿತು ಕೊಳ್ಳುತ್ತಾರೆ. ಪ್ರತಿ ಸದಸ್ಯರಿಗೂ ಮೈಕ್ ಅರೇಂಜ್‌ಮೆಂಟ್ ಇಲ್ಲದಿರುವುದರಿಂದ ಗಲಾಟೆ ಸಮಯದಲ್ಲಿ ಒಬ್ಬರು ಮಾತನಾಡುತ್ತಿರುವಾಗಲೇ ಅವರ ಮೈಕನ್ನು ಇನ್ನೊಬ್ಬರು ಕಸಿದುಕೊಂಡು ಮಾತನಾಡುತ್ತಾರೆ. ಅಂಥ ವ್ಯವಸ್ಥೆ ಸರಿಯಾಗಿ ಮಾಡದೆ ಇದ್ದರೆ ಒಬ್ಬರ ಮೈಮೇಲೆ ಒಬ್ಬರು ಬೀಳುವ ಪರಿಸ್ಥಿತಿ ಬರಬಹುದು. ಪಾರ್ಲಿಮೆಂಟ್ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡುವುದರಿಂದ ಅಂಥ ವ್ಯವಸ್ಥೆ ಯಾವ ರೀತಿ ಮಾಡುತ್ತೀರಾ ಎಂದು ಈಗಾಗಲೇ ಲೋಕಸಭೆಯಲ್ಲಿ ಅಲ್ಲಿಯ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿ ಕೇಳಿದ್ದಾರೆ. ಇದಕ್ಕಾಗಿ ಇಲ್ಲಿ ಬದಲಾವಣೆಗಳನ್ನು ಮಾಡಬೇಕೆಂದು ಮತ್ತು ಕೆಲವು ಹೆಚ್ಚು ಸ್ಥಾನಗಳನ್ನು ಪಡೆಯಬೇಕೆಂದು ತರುವ ಈ ನಿರ್ಣಯವನ್ನು ನಾನು

ವಿರೋಧ ಮಾಡಬೇಕಾಗಿದೆ ಮತ್ತು ಇವೆಲ್ಲಾ ದೃಷ್ಟಿಗಳಿಂದ ಈ ಕಾನೂನನ್ನೂ ವಿರೋಧ ಮಾಡುತ್ತೇನೆ. ಇದಕ್ಕಾಗಿ ಕಾನೂನು ಸಚಿವರು ಹೇಳಿರುವ ವಿವರಣೆಗಳನ್ನು ನಾವು ಒಪ್ಪಲು ಸಾಧ್ಯವಿಲ್ಲ ಮತ್ತು ಈ ಅಮೆಂಡ್‌ಮೆಂಟು ಬಿಲ್ಲನ್ನು ವಿರೋಧ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್ ಶಾಮಣ್ಣ (ಕೋಟೆ) : ಮಾನ್ಯ ಅಧ್ಯಕ್ಷರೇ,

ನಮ್ಮ ಕಾನ್‌ಸ್ಟಿಟ್ಯೂಷನ್ ಜಾರಿಗೆ ಬಂದು ಸುಮಾರು ಇಪ್ಪತ್ತೈದು ವರ್ಷಗಳಾದವು. ಈಗಾಗಲೇ ಇಲ್ಲಿಯುವರೆಗೆ 31 ತಿದ್ದುಪಡಿಗಳು ಜಾರಿಗೆ ಬಂದಿವೆ. ಈ ರೀತಿ ಪದೇ ಪದೇ ತಿದ್ದುಪಡಿಗಳನ್ನು ತಂದು ಬದಲಾವಣೆ ಮಾಡುವುದಕ್ಕಿಂತ ಈಗಿರುವ ಕಾನ್‌ಸ್ಟಿಟ್ಯೂಟನನ್ನೇ ಏಕೆ ಬದಲಾವಣೆ ಮಾಡಬಾರದು ಎಂದು ನಾವು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಮೊದಲನೇದಾಗಿ 1971 ರಲ್ಲಿ ಜನಗಣತಿಯಾದಾಗ ಜನಸಂಖ್ಯೆ ಹೆಚ್ಚು ಕಡಿಮೆಯಾಯಿತು. ಅದರಂತೆ ಈಗಲೂ ಜನಗಣತಿಯ ಆಧಾರದ ಮೇಲೆ ಜನಸಂಖ್ಯೆ ಹೆಚ್ಚು ಕಡಿಮೆಯಾಗಿದೆ ಎನ್ನುವ ಒಂದು ಕಾರಣದ ಮೇಲೆ ಇದನ್ನು ತಂದಿದ್ದೇವೆಂದು ಹೇಳಿದರು. ಪಾರ್ಲಿಮೆಂಟಿನಲ್ಲಿ ಸುಮಾರು 500 ಜನ ಸದಸ್ಯರಿದ್ದಾಗ ಜನಸಂಖ್ಯೆ 30 ಕೋಟಿ ಇತ್ತು. ಈಗ ಇದು 30 ಕೋಟಿಯಿಂದ 40 ಕೋಟಿಯಷ್ಟು ಹೆಚ್ಚಾಗಿದೆ ಎಂದು ಈ ಪಾಪ್ಯುಲೇಷನ್ ಆಧಾರದ ಮೇಲೆ ಪಾರ್ಲಿಮೆಂಟಿನ ಸದಸ್ಯರುಗಳ ಸಂಖ್ಯೆಯೂ ಹೆಚ್ಚು ಮಾಡಬೇಕಾಗಿ ಬರುತ್ತದೆ ಎಂದು ಹೇಳಬಹುದು. ಈ ರೀತಿ ಜನಸಂಖ್ಯೆ ಹೆಚ್ಚುತ್ತ ಹೋದರೆ ಮುಂದೆ ಪಾರ್ಲಿಮೆಂಟಿನಲ್ಲಿ ಒಂದು ಸಾವಿರ ಜನ ಸದಸ್ಯರುಗಳು ಇರುವ ಕಾಲವೂ ಬರಬಹುದು ಎಂದು ಈಗಾಗಲೇ ಇದರ ಬಗ್ಗೆ ಹೇಳಿದ್ದಾರೆ. ನಮ್ಮ ರಾಜ್ಯಕ್ಕೆ ಸ್ವತಂತ್ರ ಬಂದು ಎರಡು ವಿಚಾರಗಳಲ್ಲಿ ಸಂಪೂರ್ಣವಾಗಿ ನಮ್ಮ ಜನರ ಸೌಖ್ಯವನ್ನು ನಾಶಮಾಡಿದ್ದಾರೆ ಎಂದು ಹೇಳಬಹುದು ಮೊದಲನೇದಾಗಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ಮುನ್ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಫ್ಯಾಮಿಲಿ ಪ್ಲಾನಿಂಗಿಗಾಗಿ ಖರ್ಚು ಮಾಡಿದರು. ಕಳೆದ ಹತ್ತು ವರ್ಷಗಳಿಂದ ಜನಸಂಖ್ಯೆ ಜಾಸ್ತಿಯಾಗಿದೆಯೇ ವಿನಾ ಕಡಿಮೆಯಾಗಲಿಲ್ಲ. ಸುಮಾರು ಐದು ಮಿಲಿಯನ್ನಿನಷ್ಟು ಪಾಪ್ಯುಲೇಷನ್ ಜಾಸ್ತಿಯಾಗಿದೆ. ಹೀಗೆ ಸರಕಾರ ಮುನ್ನೂರು ಕೋಟಿಯಷ್ಟು ಹಣ ಫ್ಯಾಮಿಲಿ ಪ್ಲಾನಿಂಗಿಗಾಗಿ ಖರ್ಚು ಮಾಡಿದರೂ ಈ ಯೋಜನೆ ವಿಫಲವಾಗಿದೆ, ಇದರ ಜೊತೆಗೆ ರಾಜ್ಯದಲ್ಲಿ ಪ್ರೊಡಕ್ಷನ್ ಹೆಚ್ಚಾಗಿದೆಯೇ ಎಂದು ನೋಡಿದರೆ ಅದು ಕೂಡ ಆಗುತ್ತಿಲ್ಲ. ಪ್ರೊಡಕ್ಷನ್ ಜಾಸ್ತಿ ಮಾಡಿ ಪಾಪುಲೇಷನ್ ಕಡಿಮೆ ಮಾಡಿದ್ದರೆ ಅದರಿಂದ ಜನತೆಗೆ ಅನುಕೂಲವಾಗುತ್ತಿತ್ತು. ಇಲ್ಲಿ ತಂದಿರುವ ನಿರ್ಣಯದಲ್ಲಿ ನಮಗೇನು ಕಾಣು

(ಶ್ರೀ ಟಿ. ಆರ್. ಶಾಮಣ್ಣ)

ತ್ತಿದೆ ಎಂದರೆ ಈಗ ಇರುವ ಪಾರ್ಲಿಮೆಂಟು ಸದಸ್ಯರ ಸಂಖ್ಯೆ 506 ಇರುವುದನ್ನು 546ರ ವರೆಗೆ ಹೆಚ್ಚು ಮಾಡಬೇಕಾಗಿ ಬರುತ್ತದೆ ಎಂದು. ಇದರಲ್ಲಿ ಬರೀ ತಮ್ಮ ಬಲವನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ಪಾರ್ಲಿಮೆಂಟ್‌ನಲ್ಲಿ ಹಾಗೂ ಅಸೆಂಬ್ಲಿಗಳಲ್ಲಿ ಮಾಡುವುದು ನೋಡಿದರೆ ಇದರಲ್ಲೇನೋ ಒಂದು ರೀತಿಯಾದ ಪೊಲಿಟಿಕಲ್ ಮೋಟೀವ್ ಇರುವಂತೆ ಕಾಣುತ್ತದೆ. ಇಂದು ನಮ್ಮ ಈ ಸಭೆಯಲ್ಲೇ ತಾವು ನೋಡುವುದಾದರೆ ಆಡಳಿತ ಪಕ್ಷದ ಸದಸ್ಯರು ಕುಳಿತು ಕೊಳ್ಳುವ ಜಾಗಗಳೆಲ್ಲಾ ಖಾಲಿಯಾಗಿವೆ. ಇವರಿಗೆಲ್ಲಾ ಲೆಜಸ್ಲೇಚರು ಬಿಸಿನೆಸ್‌ನಲ್ಲಿ ಯಾವ ರೀತಿ ಆಸಕ್ತಿ ಇದೆ ಎನ್ನುವುದು ಗೊತ್ತಾಗುತ್ತದೆ. ಸುಮ್ಮನೆ ಅಸೆಂಬ್ಲಿಗೆ ಬರುವುದು ಒಂದು ಅಟೆಂಡೆನ್ಸ್‌ಗೆ ರುಜು ಹಾಕಿ ಹೋಗುವುದು ಮಾಡುತ್ತಿದ್ದಾರೆ. ಇದರಿಂದಾಗಿ ಇಲ್ಲಿರುವ ಸೀಟುಗಳೆಲ್ಲಾ ಖಾಲಿಯಾಗಿವೆ. ಇದನ್ನು ನಾವು ದಿನ ನಿತ್ಯ ನೋಡಬಹುದು. ಪಾರ್ಲಿಮೆಂಟಿನಲ್ಲಿ ಕೂಡ ಎಷ್ಟೋ ಸರಿ ಕೋರಂ ಬೆಲ್ ಬಾರಿಸಿರುವುದನ್ನು ನಾವು ಕೇಳಿದ್ದೇವೆ. ಅದರಂತೆ ಇಲ್ಲೂ ಕೋರಂಗಾಗಿ ಬೆಲ್‌ಗಳನ್ನು ಬಾರಿಸಿರುವುದನ್ನೂ ನಾವು ನೋಡುತ್ತಿದ್ದೇವೆ.

MR. DEPUTY SPEAKER.—It applies to both the sides.

SRI T. R. SHAMANNA. The ruling party which is running the Government has to be more responsible and attentive to hear what the opposition says.

MR. DEPUTY SPEAKER.—In my view all the Members are responsible.

SRI T. R. SHAMANNA.—The opposition members had staged a walk-out just sometime back and those who are interested in this matter are present here But we have seen in the Parliament also, on many occasions, quorum bell has been rung. When such is the position where is the urgency of increasing the number of Members in Parliament? The Government has utterly failed to check the increase in population. I am of the definite view that this increase in the number of members has been done with political motivation. In certain states like Tamilnadu they have successfuly implemented the family planning and the population there has come down.

But why not in Mysore also, when we have an able Minister like Mr. Siddaveerappa take steps to see that the population is reduced or when the productive Minister like Mr. K. H. Patil is capable of producing more should not increase production ?

The question now is that apart from the consideration of the question of increasing the seats in the Parliament we will have to take the question of increasing the number of seats to the State Assemblies also. Another feature that has been stressed here is that they are going to retain the representation to the respective States. Of course that may be necessary and it may be done. But if population alone were to be the criteria naturally bigger States where population has increased will be benefitted to certain extent. The Election Commission has made several recommendations to see that fair and just elections are conducted. But the Government has slept over the matter and has not taken any decision to that effect so far. At the same time they are making the courts and election Commission as committed bodies, to see that they do what the party in power wants them to do. Under the constitution they are supposed to be independent but in practice it is quite different.

5-00 P. M.

According to the constitution, roughly one million people will have to be represented by one representative. But the strength of the Lok Sabha is fixed as 545 and it has not been explained either in the Act or in the Minister's reply in the Parliament how this number is fixed. I am sure the number fixed is quite arbitrary. When this resolution is passed, I am sure delimitation of constituencies will take place. It has been our experience that these delimitations are done not at the places where they ought to take place but in the congress offices.

MR. DEPUTY SPEAKER.—For delimitation there is a commission.

SRI T. R. SHAMANNA.—I know that the practice has been to do it in the congress offices with a view to see how their candidates will win and to suit their conveniences. I know this because I was in close contact with the congress office. In order to be fair and do justice, delimitation should be done not in the interest of any party but in the general interest. At least the State Government should not interfere in the delimitation. Elections, nowadays, are based on consideration of caste, money and pulls and pressures. The candidates for election are elected on that basis. This increase of membership by 25 will naturally increase the election expenses. Nowadays election means money. If any merited candidates wants to come through election, he must have either money or belong to particular caste or he must have the backing of any party, particularly the party in power. Further, even with the present number you are finding it difficult to give five minutes to each member to speak. By increasing the strength it will be still more difficult to find time.

MR. DEPUTY SPEAKER.—That argument is completely fallacious. Hon-member can verify from records how much time he has taken already.

SRI H. SIDDAVEERAPPA.—He has taken a lion's share. The hon. member said that caste plays an important part. Will he show at least one instance where a particular member has been elected only because his caste is in majority? For example he has been elected from a constituency where Brahmins are not in a majority. May be a particular caste people happen to be in a larger number but no one has come mesrely by the fact of his community.

SRI T. R. SHAMANNA :— I know I have got more votes from other communities than the brahmin community to which I belong. What I am concerned about is, your own party sends list distributing the seats according to caste basis. You say the muslim population is so much in a particular constituency and there fore, so and so is selected; in another constituency lingayats are in majority and so such and such a person is selected. Like that you have done. I have read the memorandum sent to the Prime Minister. I have a copy of it.

SRI H. SIDDAVEERAPPA : That is social justice

SRI T. R. SHAMANNA : What I am concerned is, we are thinking of economy. Increasing the number will cost the State more and also the people who want to stand for elections. Therefore instead of seeing that some more members are added, please see fair and free elections take place.

Another suggestion that I wish to make is, while delimiting the constituency you should take into account not only the population but also the area to be covered. In a city like Bangalore, the area can be covered but in other cases a candidate will have to cover a huge area. So, while dividing the constituencies, I suggest not only population but the area to be covered also should be taken into account. This constitution Amendment Bill has come before us for ratification. According to the constitution, they have to consult the various assemblies. Whether we oppose it or not, it is going to become law. My appeal therefore is that, as far as delimitation of constituencies is concerned, let it not be done on a partisan and party basis ; let it be done in a fair and equitable manner.

† ಶ್ರೀ ಎಂ. ಎಸ್. ಕೃಷ್ಣನ್, (ಮಲ್ಲೇಶ್ವರಂ):—ಸನ್ಮಾನ್ಯ ಸಭಾಪತಿಗಳೇ, ಈ 31 ನೇ ತಿದ್ದುಪಡಿ ಬಗ್ಗೆ ನಿರ್ಣಯವನ್ನು ಏನು ತೆಗೆದುಕೊಂಡು ಬಂದಿದ್ದಾರೆ

(ಶ್ರೀ ಎಂ. ಎಸ್. ಕೃಷ್ಣನ್)

ಅದನ್ನು ನಾನು ಸ್ವಾಗತಿಸುತ್ತೇನೆ. ಸ್ವಾಗತಿಸುತ್ತೇನೆ ಎಂದರೆ ಅದರಲ್ಲಿರುವ ಎಲ್ಲಾ ವಿಷಯಗಳನ್ನು ಒಪ್ಪಿಕೊಳ್ಳುತ್ತೇನೆ ಎಂದು ಅಲ್ಲ. ಅದರಲ್ಲಿರುವ ಕೆಲವು ವಿಷಯಗಳ ಬಗ್ಗೆ ನಮ್ಮ ಅಭಿಪ್ರಾಯವನ್ನು ಈ ದಿನ ವ್ಯಕ್ತಪಡಿಸಬೇಕಾಗಿದೆ.

ಮೊದಲನೆಯ ಪ್ರಶ್ನೆ ಏನು ಬರುತ್ತದೆಂದರೆ ಈ ತಿದ್ದುಪಡಿ ಮಸೂದೆ ಬಂದಿರುವುದು ಎಷ್ಟು ಜನ ಲೋಕಸಭೆಯಲ್ಲಿ ಇರಬೇಕು ಎಂಬುದರ ಬಗ್ಗೆ, 525 ಜನ ಇರುವುದನ್ನು 545 ಮಾಡಿದ್ದಾರೆ ಅಂದರೆ 20 ಜನ ಜಾಸ್ತಿ ಮಾಡಿದ್ದಾರೆ. 20 ಜಾಸ್ತಿ ಮಾಡಿರುವುದು ಸರಿಯೇ ತಪ್ಪೇ ಈ ರೀತಿ ಮಾಡುವುದು ಸಮಂಜಸವೇ ಅದು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿದೆಯೇ ಅದು ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿದೆಯೇ ಎನ್ನುವುದರ ಬಗ್ಗೆ ವಿಪುಲವಾದ ಚರ್ಚೆ ಲೋಕ ಸಭೆಯಲ್ಲಿ ನಡೆದಿದೆ. ರಾಜ್ಯ ಸಭೆಯಲ್ಲಿ ನಡೆದಿದೆ. ಈಗ ಸಹ ಮಾನ್ಯ ಮಿತ್ರರಾದ ಶ್ಯಾಮಣ್ಣನವರು ಮಾತನಾಡುತ್ತಾ ಈ ತರಹ ದೊಡ್ಡ ಸಭೆ ಮಾಡುವುದು ಸರಿಯಲ್ಲ, ಅದಷ್ಟು ಕಡಿಮೆ ಜನ ಇರಬೇಕು ಎಂದು ಅವರು ಹೇಳಿದರು ಅದೇ ಸಮಯಕ್ಕೆ ಇನ್ನೊಂದು ಮಾತು ಹೇಳಿದರು. ಈ ಕ್ಷೇತ್ರಗಳನ್ನು ವಿಂಗಡಣೆ ಮಾಡುವಾಗ ಎಷ್ಟು ಜನ ಇದ್ದಾರೆ ಎಂದು ನೋಡುವುದು ಅಲ್ಲ. ಆ ಪ್ರದೇಶದ ವಿಸ್ತೀರ್ಣ ಕೂಡ ನೋಡಬೇಕೆಂದು ಹೇಳಿದರು. ಅವರು ಹೇಳಿದ ಪ್ರಕಾರ ಸ್ವಲ್ಪ ಮಟ್ಟಿಗೆ ಕಡಿಮೆ ಓಟು ಇದ್ದ ಕ್ಷೇತ್ರಗಳನ್ನು ಮಾಡಿ ಅವರಿಗೂ ಸಹ ಅವಕಾಶ ಕೊಡಬೇಕು ಎಂದು ಹೇಳಿದ ಹಾಗಾಯಿತು. ಅವರ ಅಭಿಪ್ರಾಯ ಅದು ಇಲ್ಲದೇ ಹೋದರೂ ಸಹ ಆ ರೀತಿ ಅಭಿಪ್ರಾಯ ಇದ್ದರೆ ಮೊದಲನೆಯ ಅಭಿಪ್ರಾಯಕ್ಕೂ ವಿರೋಧಾಭಾಸವಾಗುತ್ತದೆ. ಕಡಿಮೆ ಜನ ಮತದಾರರು ಇರುವ ಕ್ಷೇತ್ರಗಳನ್ನು ಮಾಡಿದರೆ ಹೆಚ್ಚು ಜನ ಲೋಕಸಭೆಗೆ ಬಂದೇ ಬರಬೇಕಾಗುತ್ತದೆ ಹೆಚ್ಚು ಮತದಾರರು ಇರುವ ಕ್ಷೇತ್ರದಿಂದ ಚುನಾವಣೆ ಮಾಡಿದರೆ ಕಡಿಮೆ ಜನ ಲೋಕಸಭೆಗೆ ಬರುತ್ತಾರೆ. ಬಹಳ ಜಾಸ್ತಿ ಜನ ಇದ್ದರೆ, ಚರ್ಚೆ ಸರಿಯಾಗಿ ನಡೆಯುವುದಿಲ್ಲ, ಪ್ರಜಾಪ್ರಭುತ್ವ ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಬರುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯ ಏನು ಇದೆ. ಅದು ಸರಿಯಾದದ್ದು ಅಲ್ಲ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತದೆ. ಈ ದಿನ ನಿಮಗೆ ಬೇಕಾಗಿರುವುದು ಹೆಚ್ಚು ಜನ ಇರಬೇಕೇ ಕಡಿಮೆ ಜನ ಇರಬೇಕೆ ಎಂಬುದು. 10 ಲಕ್ಷಕ್ಕೆ ಒಬ್ಬರಂತೆ ಮಾಡಿದ್ದಾರೆ. ಲೋಕಸಭೆಗೆ 10 ಲಕ್ಷಕ್ಕೆ ಒಬ್ಬರಂತೆ ಮಾಡಿರುವುದು ಬಹಳ ದೊಡ್ಡ ಪ್ರಮಾಣ ಎಂದು ನನ್ನ ಅಭಿಪ್ರಾಯ. ಇದನ್ನು ಕಡಿಮೆ ಮಾಡಬೇಕು. ಸರ್ವೇ ಸಾಧಾರಣವಾಗಿ ನನಗೆ ತಿಳಿದ ಮಟ್ಟಿಗೆ ಎಲೆಕ್ಷನ್ ಕಮಿಷನ್ ರವರು ಮತ್ತಿತರ ತಜ್ಞರು ಮತ್ತು ಪ್ರಜಾಪ್ರಭುತ್ವವಾದಿಗಳೆಲ್ಲರೂ ಸಹ ಇದರ ಬಗ್ಗೆ ಮಾತನಾಡಿದ್ದಾರೆ. ಇದರಲ್ಲಿ ಇನ್ನೊಂದು ಅಂಶವನ್ನು ಗಣನೆಗೆ ತೆಗೆದು

ಕೊಳ್ಳಬೇಕಾಗುತ್ತದೆ. ಬೇರೆ ದೇಶದಲ್ಲಿ ಯಾವ ರೀತಿ ಪರಿಸ್ಥಿತಿ ಇದೆ ಎಂಬುದನ್ನು ನೋಡಬೇಕು. ಬಂಡವಾಳ ಶಾಹಿ ರಾಷ್ಟ್ರಗಳಾಗಿರತಕ್ಕ ಅಮೇರಿಕಾ ಆಗಲೀ, ಯು. ಕೆ. ಆಗಲೀ ಅಲ್ಲಿ ಇವತ್ತಿನ ದಿವಸ ನನಗೆ ತಿಳಿದ ಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ಮತದಾರರು ಇದ್ದು ಹೆಚ್ಚು ಪ್ರಮಾಣದಲ್ಲಿ ಕ್ಷೇತ್ರಗಳನ್ನು ಇಟ್ಟಿದ್ದಾರೆ. ನಮ್ಮ ದೇಶದಲ್ಲಿರುವ ರೀತಿ 10 ಲಕ್ಷಕ್ಕೆ ಒಬ್ಬರು ಪ್ರತಿನಿಧಿಯನ್ನು ಅವರು ಒಪ್ಪಿಕೊಂಡಿಲ್ಲ, ಕಡಿಮೆ ಆಗಬೇಕೆನ್ನುವ ಅಭಿಪ್ರಾಯವನ್ನು ಅವರು ಇಟ್ಟುಕೊಂಡಿದ್ದಾರೆ. ಇದು ಒಳ್ಳೆಯ ಅಭಿಪ್ರಾಯ ಎಂದು ನನಗೆ ಕಾಣುತ್ತದೆ. ಸಮತವಾದಿ ರಾಷ್ಟ್ರವಾದ ಸೋವಿಯತ್ ರಷ್ಯಾವನ್ನು ತೆಗೆದುಕೊಂಡು ಅಲ್ಲೂ ಸಹ ನನಗೆ ತಿಳಿದ ಮಟ್ಟಿಗೆ ಪ್ರತಿನಿಧಿಗಳು ಜಾಸ್ತಿ ಇರಬೇಕು. ಪ್ರಜಾಪ್ರಭುತ್ವದಲ್ಲಿ ಜಾಸ್ತಿ ಜನ ಪ್ರತಿನಿಧಿಸಬೇಕು ಎಂದು ಅವರು ತಿಳಿದುಕೊಂಡಿದ್ದಾರೆ. ಸೀಟುಗಳನ್ನು ಜಾಸ್ತಿ ಮಾಡಿದರೆ ಸೀಟುಗಳನ್ನು ಎಲ್ಲಿಂದ ತೆಗೆದುಕೊಂಡು ಬಂದು ಹಾಕುತ್ತಾರೆ ಎಂದು ಸದಸ್ಯರು ಪ್ರಶ್ನಿಸಿದರು. 500 ಇದ್ದುದನ್ನು 2000 ಮಾಡಿದರೂ ದೊಡ್ಡದೇನಿಲ್ಲ. ಸುಪ್ರಿಂ ಸೋವಿಯಟ್‌ನಲ್ಲಿ 6 ಸಾವಿರ ಜನ ಕೂತುಕೊಂಡು ಚರ್ಚೆ ಮಾಡುವಂಥ ವ್ಯವಸ್ಥೆ ಮಾಡಿದ್ದಾರೆ. ಈ ರೀತಿ ವಾದ ಏನು ಇದೆ ಕಡಿಮೆ ಜನ ಇದ್ದರೆ ಚೆನ್ನಾಗಿ ನಡೆಯುತ್ತದೆ ಜಾಸ್ತಿ ಜನ ಇದ್ದರೆ ಚೆನ್ನಾಗಿ ನಡೆಯುವುದಿಲ್ಲ ಎನ್ನುವುದು ಅದನ್ನು ನಾನು ಒಪ್ಪುವುದಿಲ್ಲ. ಆದುದರಿಂದ ಲೋಕ ಸಭೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಸದಸ್ಯರು ಇರಬೇಕು ಮತ್ತೆ ಅದಕ್ಕೆ ಪ್ರಾತಿನಿಧ್ಯ ಜಾಸ್ತಿ ಇರಬೇಕೆಂಬುದು ನನ್ನ ಅಭಿಪ್ರಾಯ. ಇನ್ನೊಂದು ಯಾವ ವರ್ಗದ ಜನ ಪ್ರತಿಬಿಂಬಿಸುತ್ತಾರೆ ಎಂದು ನೋಡಬೇಕು. ದುರಾದೃಷ್ಟವಶಾತ್ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಮ್ಮ ದೇಶದಲ್ಲಿ, ಲೋಕಸಭೆಯಲ್ಲಿ ಮತ್ತು ಅನೇಕ ರಾಜ್ಯಗಳ ಸಭೆಗಳಲ್ಲಿ ಸಹ ಗುತ್ತೇದಾರರು ಬಂಡವಾಳಗಾರರು, ಭೂ ಮಾಲೀಕರು ಮತ್ತು ರಾಜ ಮಹಾರಾಜರುಗಳನ್ನು ಪ್ರತಿಬಿಂಬಿಸುವಂಥವರು ಬಹಳ ಜನ ಇದ್ದಾರೆ ಎನ್ನುವುದು ಹೆಚ್ಚು ಹೆಚ್ಚಾಗಿ ಶಾಸನಗಳು ಬರುವಾಗ ಅವರ ಧೋರಣೆಗಳಿಂದ ಮತ್ತು ಅವರು ಪ್ರತಿಪಾದಿಸುವ ನೀತಿಗಳಿಂದ ಗೊತ್ತಾಗುತ್ತದೆ. ಬಹಳ ಮಟ್ಟಿಗೆ 1970ನೇ ಇಸವಿ ಆದ ಮೇಲೆ ಸ್ವಲ್ಪ ಮಟ್ಟಿಗೆ ಬದಲಾವಣೆಗಳನ್ನು ಪ್ರಯತ್ನಗಳು ನಡೆಯುತ್ತಿವೆ. ಫಂಡಮೆಂಟಲ್ ರೈಟ್ಸು ಟು ಪ್ರಾಪರ್ಟಿ ತಿದ್ದುಪಡಿ ತಂದರು, ಬ್ಯಾಂಕ್ ರಾಷ್ಟ್ರೀಕರಣ ಮಾಡಿದರು, ರಾಜಮಹಾರಾಜರುಗಳನ್ನು ರದ್ದಿಯಾತಿ ಮಾಡಿದರು ಸಂತೋಷ. ಆ ರೀತಿಯಾಗಿ ಕೆಲವು ತಿದ್ದುಪಡಿಗಳನ್ನು ತಂದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ದೇಶದಲ್ಲಿ ಸಮತಾವಾದ ತರಬೇಕು ಎಂದು ಹೇಳುತ್ತಾರೆ. ಅದರಲ್ಲಿ ಇದು ಒಂದು ಹೆಜ್ಜೆ ಎಂದು ಹೇಳಬಹುದು.

MR DEPUTY SPEAKER:—The Hon. Member went from Soviet Russia to the abolition of hereditary rights of Rajas and Maharajas and the abolition of property rights. So far as representation is concerned I allowed it.

ಶ್ರೀ ಎಂ. ಎಸ್. ಕೃಷ್ಣನ್ :—ಇದನ್ನು ಯಾತಕ್ಕೆ ನಾನು ಹೇಳಿದೆ ಎಂದರೆ ಇದು ಹೆಚ್ಚು ಜನರ ಪ್ರಶ್ನೆಯಲ್ಲ, ಇರುವವರು ಯಾರನ್ನು ಪ್ರತಿಬಿಂಬಿಸುತ್ತಾರೆ ಎಂಬುದಕ್ಕೆ ಹೇಳಿದೆ.

MR. DEPUTY SPEAKER :—It must be within the scope of the discussion

ಶ್ರೀ ಎಂ. ಎಸ್. ಕೃಷ್ಣನ್ :—ನಾನು ಮೊದಲೇ ಹೇಳಿದ್ದರೆ ಚೆನ್ನಾಗಿತ್ತು

MR. DEPUTY SPEAKER :—So far as representation in respective bodies is concerned, it is all right But how can the hon. member bring all other things here?

ಶ್ರೀ. ಎಂ. ಎಸ್. ಕೃಷ್ಣನ್ :—ಬರೇ ಡಿಲಿಮಿಟೇಷನ್ ಗಮನದಲ್ಲಿಟ್ಟು ಕೊಂಡು ಈ ರೀತಿ ತಿದ್ದುಪಡಿ ತಂದಿದ್ದಾರೆ. ಎಲೆಕ್ಷನ್ ಕಮಿಷನ್ನಿನವರ ವರದಿ ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಮಾಡಿದ್ದಾರೆ, ಅದು ಸಮಗ್ರವಾಗಿ ಆಗಿರುವುದು ಎಂದು ನನ್ನ ಅಭಿಪ್ರಾಯ. ಎಲೆಕ್ಷನ್ ಕಮಿಷನ್‌ಗೆ ಸಂಬಂಧ ಪಟ್ಟ ಹಾಗೆ ಕೆಲವು ವಿಷಯ ಹೇಳಿದೆ.

ಉಪಾಧ್ಯಕ್ಷರು :—ಬ್ಯಾಂಕ್ ರಾಷ್ಟ್ರೀಕರಣ, ಅಬಾಲಿಷನ್ ಆಫ್ ಫಂಡ ಮೆಂಟಲ್ ರೈಟ್ಸ್ ಅವು ಇಲ್ಲಿ ಹೇಗೆ ಬಂತು ?

ಶ್ರೀ ಎಂ. ಎಸ್. ಕೃಷ್ಣನ್: ಅದನ್ನು ನಾನು ವಿಶದೀಕರಿಸುವುದಕ್ಕೆ ಹೋಗುವು ದಿಲ್ಲ ನಮ್ಮ ಕ್ವಾಲಿಟಿ ಆ ರೀತಿ ಇರಬೇಕು, ಕ್ಲಾಸ್ ಕ್ಯಾರಕ್ಟರ್ ಈ ರೀತಿ ಇರಬೇಕು ಎಂದು ಹೇಳುತ್ತಿದ್ದೇವೆ. ಲೋಕಸಭೆಯ ಮತ್ತು ರಾಜ್ಯ ಸಭೆಗಳಿಗೆ ಒಂದು ಸಮಗ್ರವಾದಯೋಜನೆ ಮಾಡಿ ಡೀಲಿಮಿಟೇಷನ್ ಕಮಿಷನ್ ಮತ್ತು ಎಲೆಕ್ಷನ್ ಕಮಿಷನ್ ವರದಿಗಳನ್ನು ಗಮನಕ್ಕೆ ತೆಗೆದುಕೊಂಡು ಅವುಗಳ ಆಧಾರದ ಮೇಲೆ ಒಂದು ಬಿಲ್ಲನ್ನು ತೆಗೆದುಕೊಂಡು ಬಂದಿದ್ದರೆ ಅದು ಸೂಕ್ತವಾಗುತ್ತಿತ್ತು. ಇದೇ ರೀತಿ ಬೇರೆಯವರು ಟೀಕೆ ಮಾಡಿದ್ದಾರೆ. ಬರೇ ಡಿಲಿಮಿಟೇಷನ್ ಕಮಿಷನ್ ವರದಿ ಮಾತ್ರ ಗಮನಕ್ಕೆ ತೆಗೆದುಕೊಂಡು ತಿದುಪಡಿ ಬಂದಿರುವುದು ಸಮಂಜಸ ವಲ್ಲ, ಇದರಿಂದ ತೊಡಕುಗಳು ಜಾಸ್ತಿಯಾಗುತ್ತದೆ. ಒಂದು ಹೆಜ್ಜೆ ಮುಂದೆ ಇಟ್ಟರೂ ಸಹ ತೇಪೆ ಹಾಕುವ ರೀತಿಯಲ್ಲಿ ಆಗುತ್ತದೆ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಇಲ್ಲದೇ ಹೋದರೆ ಶಾಮಣ್ಣನವರು ಹೇಳಿದಂತೆ ಎಲೆಕ್ಷನ್‌ಗೆ ಎಷ್ಟು ಖರ್ಚು ಮಾಡುತ್ತಾರೆ, ಎಷ್ಟು ಖರ್ಚು ಮಾಡುವುದಿಲ್ಲ ಎನ್ನುವುದು ಬಹಳ ಮುಖ್ಯವಾದ ಅಂಶ. ಎಲೆಕ್ಷನ್ ಕಮಿಷನರು ಇವತ್ತಿನ ದಿವಸ ಎಲೆಕ್ಷನ್ ಖರ್ಚನ್ನು ಫಿಕ್ಸ್ ಮಾಡಬೇಕು. ಈ ಬಗ್ಗೆ ಚರ್ಚೆ ದೇಶದಲ್ಲಿ ಇವತ್ತು ನಡೆಯುತ್ತಾ ಇದೆ. ದೇಶದಲ್ಲಿ ಓಟಿಂಗ್ ಹಕ್ಕು ಯಾವ ರೀತಿ ಇರಬೇಕು ಎನ್ನುವ ಬಗ್ಗೆ ಚರ್ಚೆ ನಡೆಯುತ್ತಾ ಇದೆ. ಈಗ 21 ವರ್ಷ ಇದೆ, 18 ವರ್ಷ ಮಾಡಬೇಕು. ಶ್ರೀ ಗುಂಡೂರಾಯರಂತಹ ಯುವಕರು ಮತ್ತು ಯೂತ್ ಕಾಂಗ್ರೆಸನವರು, ಯೂತ್ ಫೆಡರೇಷನ್‌ನವರು ಕೇಳುತ್ತಿದ್ದಾರೆ. ಇದು ಬಹಳ ಮುಖ್ಯವಾದ ವಿಷಯ. ಈಗ ಪ್ರಶ್ನೆ ಏನೆಂದರೆ, 18 ವರ್ಷ ವಯಸ್ಸಿಗೆ ಚುನಾವಣೆಗೆ ನಿಲ್ಲುವುದಕ್ಕೆ ಹಕ್ಕು ಇರಬೇಕು. ಅದು ಎಲೆಕ್ಷನ್ ಕಮಿಷನ್‌ಗೆ ಸಂಬಂಧಪಟ್ಟಿರುವುದು. 18 ವರ್ಷ ವಯಸ್ಸಿನವರಿಗೆ ಓಟಿಂಗ್ ಹಕ್ಕು ಕೊಡಬೇಕು, ಇದು ಬಹಳ ಮುಖ್ಯವಾದ ವಿಷಯ. ರೆಪ್ರಸೆಂಟೇಷನ್ ಯಾವ ರೀತಿ ಕೊಡಬೇಕು ಎಂದರೆ, ಪ್ರಪೋರ್ಷನಲ್ ರಿಪ್ರಸೆಂಟೇಷನ್ ಇರಬೇಕೇ, ಸಿಂಗಲ್ ಟ್ರಾನ್ಸ್‌ಫರಬಲ್ ಓಟ್ ಇರಬೇಕೇ, ಸಿಂಗಲ್ ಮೆಥೆಡ್ ಆಫ್ ಓಟಿಂಗ್ ಇರಬೇಕೇ ಎನ್ನುವ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಾ ಇದೆ. ನಮ್ಮ ಅಭಿಪ್ರಾಯದಲ್ಲಿ ಪ್ರಪೋಷನಲ್ ರೆಪ್ರಸೆಂಟೇಷನ್ ಇರಬೇಕು. ಇದು ನಿಜವಾದ ಪ್ರಜಾಪ್ರಭುತ್ವವನ್ನು ಪ್ರತಿಬಿಂಬಿಸುತ್ತದೆ. ಯಾವ ಯಾವ ಪಕ್ಷಕ್ಕೆ ಎಷ್ಟೆಷ್ಟು ಬೆಂಬಲ ಇರುತ್ತದೋ, ಆ ರೀತಿ ಚುನಾವಣೆಗಳು ನಡೆದರೆ ಒಳ್ಳೆಯದು ಆಗ 50 ಪರ್ಸೆಂಟ್ ತೆಗೆದುಕೊಂಡವರು ಗೆಲ್ಲುತ್ತಾರೆ, 49 ಪರ್ಸೆಂಟ್ ತೆಗೆದುಕೊಂಡವರು ಫೈಲಾಗುತ್ತಾರೆ. ಪಕ್ಷದ ಧ್ಯೇಯ ಧೋರಣೆಯಿಂದ ಎಷ್ಟು ಜನ ಪಾರ್ಲಿಮೆಂಟಿನಲ್ಲಿ ಇರಬೇಕೋ, ಅಷ್ಟು ಜನ ಇರುತ್ತಾರೆ, ಫ್ರಾನ್ಸ್‌ನಲ್ಲಿ ಅದೇ ರೀತಿ ಇದೆ. ಪಾಶ್ಚಿಮಾತ್ಯ ದೇಶಗಳಲ್ಲೂ ಇದೇ ರೀತಿ ಇದೆ. ನಮ್ಮಲ್ಲೂ ಈ ರೀತಿಯಾದ ಪದ್ಧತಿ ಬರಬೇಕು. ಮುಂದೆಯಾದರೂ ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ. 25 ಜನಗಳನ್ನು ಇಲ್ಲಿ ಜಾಸ್ತಿ ಮಾಡಿದ್ದಾರೆ ಇದರ ಬಗ್ಗೆ ನಮಗೆ ಏನೂ ಭಿನ್ನಾಭಿಪ್ರಾಯವಿಲ್ಲ. ಒಂದು ತೊಂದರೆ ಏನೆಂದರೆ, ಮಾಡುವುದರಲ್ಲಿ ಸರಿಯಾದ ರ್‍ಯಾಷನಲೈಸೇಷನ್ ಮಾಡಿಲ್ಲ ಎಂದು ಒಂದು ಟೀಕೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ಆ ಟೀಕೆ ಸಮಂಜಸವಾದುದು. ರ್‍ಯಾಷನಲೈಸೇಷನ್ 10 ಲಕ್ಷ ಜನ ಇದ್ದರೆ ಒಬ್ಬ ಪ್ರತಿನಿಧಿ ಇರಬೇಕು ಎಂದು ಇದೆ. ಈ ರೀತಿ ತೆಗೆದುಕೊಂಡರೆ, ಕೆಲವು ಸಂಸ್ಥಾನಗಳನ್ನು ತೆಗೆದುಕೊಂಡರೆ, ಎಷ್ಟು ಸಿಗಬೇಕೋ ಅದಕ್ಕಿಂತ ಜಾಸ್ತಿ ಸಿಕ್ಕಿದೆ. ಉದಾಹರಣೆಗೆ ಜಮ್ಮು ಮತ್ತು ಕಾಶ್ಮೀರದಲ್ಲಿ 10 ಲಕ್ಷ ಜನಸಂಖ್ಯೆ ಪ್ರಕಾರ ಆದರೆ ಅವರಿಗೆ 6 ಜನಕ್ಕೆ ಇವತ್ತಿನ ದಿವಸ ಕೊಟ್ಟಿದ್ದಾರೆ ಹಿಮಾಚಲ ಪ್ರದೇಶದಲ್ಲಿ 3 ಜನಕ್ಕೆ 4 ಜನ ಕೊಟ್ಟಿದ್ದಾರೆ. ತ್ರಿಪುರದಲ್ಲಿ ಒಬ್ಬರು ಇರಬೇಕು, 2 ಜನ ಕೊಟ್ಟಿದ್ದಾರೆ. ಮಣಿಪುರದಲ್ಲಿ ಒಬ್ಬರು ಇರಬೇಕು 2 ಜನ ಕೊಟ್ಟಿದ್ದಾರೆ ಮೇಘಾಲಯದಲ್ಲಿ ಒಬ್ಬರು

(ಶ್ರೀ ಎಂ. ಎಸ್ ಕೃಷ್ಣನ್)

ಇರಬೇಕು ಅಲ್ಲೂ 2 ಕೊಟ್ಟಿದ್ದಾರೆ ಡೆಲ್ಲಿಯಲ್ಲಿ 4 ಜನ ಪ್ರತಿನಿಧಿಗಳು ಇರಬೇಕು, 7 ಜನ ಕೊಟ್ಟಿದ್ದಾರೆ. ಗೋವಾ, ಡಯ್ಯು, ಡಾಮನ್‌ಗಳಲ್ಲಿ ಒಬ್ಬರು ಇರಬೇಕು, ಎರಡು ಜನ ಕೊಟ್ಟಿದ್ದಾರೆ. ಎಲ್ಲೂ ರ್‍ಯಾಷನಲೈಸೇಷನ್ ಸರಿಯಾಗಿ ಮಾಡಿಲ್ಲ. ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಟೀಕೆಯನ್ನು ಅನೇಕರು ಮಾಡಿದ್ದಾರೆ. ಇದನ್ನು ಈಗ ತಿದ್ದುಪಡಿ ಮಾಡುವುದಕ್ಕಾಗುವುದಿಲ್ಲ. ತಮಗೆ ಗೊತ್ತಿರುವ ಹಾಗೆ ಇದು ಅಲ್ಲಿ ಪಾಸಾಗಿದೆ. ನಾವು ಹೇಳಿದ್ದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದನ್ನು ಮುಂದೆಯಾದರೂ ಗಣನೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದು ಬಹಳ ಮುಖ್ಯವಾದ ಅಂಶ. ಇಲ್ಲದೇ ಹೋದರೆ ಒಂದೊಂದು ಕಡೆ ಒಂದೊಂದು ರೀತಿ ಆಗುತ್ತದೆ. ಅಡೀಷನಲ್ ಆಗಿ ಕೊಡಬೇಕೇ ವಿನಾ ಕಡಿಮೆ ಮಾಡಕೂಡದು ಎಂದು ಸೂಚನೆ ತಂದಿದ್ದೀರಿ. ಹಿಂದೆ ಇರುವಂಥ ಸಂಸ್ಥಾನಗಳಿಗೆ ಇವುಗಳನ್ನು ಕಡಿಮೆ ಮಾಡಿ, ಇರುವ ಸ್ಥಾನವನ್ನು ಉಳಿಸಬೇಕು ಎಂದು ಹೇಳಿರುವುದು ಸಮಂಜಸವಾದುದು. ಇಷ್ಟು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ : (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಯಿದೆ ಸಚಿವರು ಏನು ಸಂವಿಧಾನದ 31ನೇ ತಿದ್ದುಪಡಿ ವಿಧೇಯಕವನ್ನು ಮಂಡಿಸಿದ್ದಾರೆ, ಅದನ್ನು ನಾನು ಅನಿವಾರ್ಯವಾಗಿ ವಿರೋಧಿಸಿ ನಾಲ್ಕು ಮಾತುಗಳನ್ನು ಆಡುವುದಕ್ಕೆ ನಿಂತಿದ್ದೇನೆ. ಏತಕ್ಕೆ ವಿರೋಧಿಸುತ್ತೇನೆಂದರೆ, ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿರತಕ್ಕ ಕೇಂದ್ರ ಮತ್ತು ರಾಜ್ಯದಲ್ಲಿರತಕ್ಕ ಸರ್ಕಾರಗಳು ಸಮಾನತೆಯ ಹೆಸರಿನಲ್ಲಿ ಅದರ ಅಪಭ್ರಂಶವನ್ನು ಆಚರಿಸುತ್ತಾ ಇದ್ದಾರೆ ಅದಕ್ಕೆ ಒಂದು ಸಾಕ್ಷಿಯಾಗಿ ಈ ತಿದ್ದುಪಡಿ ಇದೆ. ಯಾವುದೇ ದೃಷ್ಟಿಯಿಂದಲೂ ಸಮಾನತೆಯನ್ನು ನಾವು ಇಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲ. ಸಂವಿಧಾನದ 14ನೇ ಕಲಮಿನಲ್ಲೂ ಕೂಡಾ, ಕಾನೂನು ಕೊನೆಯಲ್ಲಿ ಸರ್ವರೂ ಸಮಾನರು ಎಂದು ಇದೆ. ಆದರೆ ಈ ತಿದ್ದುಪಡಿ ಮೂಲಕ 14ನೇ ಆರ್ಟಿಕಲ್ ಏನಿದೆ ಅದರ ಹತ್ಯೆ ಕೂಡಾ ಇಲ್ಲಿ ನಡೆದಿದೆ. ಏತಕ್ಕೆಂದರೆ, ಸಮಾನತೆಯ ಯಾವುದೇ ರೀತಿಯ ಒಂದು ಅಂಶವನ್ನು ನಾವು ಈ ತಿದ್ದುಪಡಿಯಲ್ಲಿ ಕಾಣಲಿಕ್ಕೆ ಆಗುವುದಿಲ್ಲ. ಮತದಾರರ ಸಂಖ್ಯೆ ಬಗ್ಗೆ ಲೋಕಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೆಲವು ಕಡೆ ಮೂರೂವರೆ ಲಕ್ಷ ಜನರಿಗೆ ಲೋಕಸಭಾ ಸದಸ್ಯಸ್ಥಾನ ಇದೆ. ಇನ್ನೊಂದು ಕಡೆ 15 ಲಕ್ಷ, 14 ಲಕ್ಷ 10 ಲಕ್ಷ ಜನರಿಗೆ ಇದೆ. ಆದುದರಿಂದ ಈ ರೀತಿ ಅಜಗಜಾಂತರ ವ್ಯತ್ಯಾಸ ಇದ್ದಮೇಲೆ ಲೋಕಸಭಾ ಸದಸ್ಯತ್ವವನ್ನು ಮೀಸಲಾಗಿಡುವುದು ಸಮಾನತೆಯ ಯುಕ್ತವಾದುದಲ್ಲ. ಈ ಒಂದು ವಿಚಾರವನ್ನು ತಮ್ಮ ಮುಂದೆ ಮಂಡಿಸಲಿಕ್ಕೆ ಅಪೇಕ್ಷೆ ಪಡುತ್ತೇನೆ. ಸಮಗ್ರವಾದ ಜನಸಂಖ್ಯೆ

ಯನ್ನು ತೆಗೆದುಕೊಂಡು, 10 ಲಕ್ಷ, 5 ಲಕ್ಷ ಎಷ್ಟು ಜನ ಬರುತ್ತಾರೋ ಅಷ್ಟು ಜನಕ್ಕೆ ಸಮಾನವಾಗಿ ಹಂಚಿಕೆಮಾಡಿ, ಆ ಹಂಚಿಕೆಯ ಆಧಾರದ ಮೇಲೆ ಲೋಕ ಸಭೆಯ ಸ್ಥಾನವನ್ನು ಮೀಸಲಾಗಿಡಬೇಕು ; ಲೋಕಸಭೆಯ ಸ್ಥಾನಮಾನಗಳನ್ನು ರಚಿಸಬೇಕು ಎಂದು ನಮ್ಮ ಈ ವಿಚಾರವನ್ನು ಇಡುತ್ತೇನೆ. ಇವತ್ತು ಹಾಗಾಗಿಲ್ಲ. ಕಳೆದ 25 ವರ್ಷಗಳಿಂದಲೂ ಕೂಡಾ ಅಸಮಾನತೆಯನ್ನು ಹೆಚ್ಚು ಮಾಡಿಕೊಂಡು ಬರುತ್ತಾ ಇದ್ದೇವೆ. ಕೇವಲ 25 ಸೀಟುಗಳನ್ನು ಹೆಚ್ಚು ಮಾಡಿದ ಮಾತ್ರಕ್ಕೆ ಸಮಾನತೆ ಬರುವುದಿಲ್ಲ. ಮಾನ್ಯ ಸದಸ್ಯರಾದಂಥ ಕೃಷ್ಣನ್‌ರವರು ಕೂಡಾ ಅನೇಕ ರಾಜ್ಯಗಳ ಹೆಸರುಗಳನ್ನು ಹೇಳಿ, ಅಲ್ಲಿ ಪ್ರಾತಿನಿಧತ್ವ ಬಗ್ಗೆ ಆಗಿರುವ ಏರುಪೇರು ಗಳನ್ನೂ ಹೇಳಿದ್ದಾರೆ. ಅದು ನಿಜ. ಇಂತಹ ಅಸಮಾನತೆಯನ್ನು ಅಂಗೀಕರಿಸಿ, ಅದರ ಆಧಾರದ ಮೇಲೆ ಪುನಃ ಲೋಕಸಭೆ ಸ್ಥಾನಗಳನ್ನು ಹೆಚ್ಚು ಮಾಡುವುದಕ್ಕೆ ಏನು ಕೇಳಿದ್ದಾರೆ, ಇದರಿಂದ ಸಮಾನತೆಯ ತತ್ವಕ್ಕೆ ತಿಲಾಂಜಲಿ ಇತ್ತಿದ್ದಾರೆ. ಸಾಮಾನ್ಯವಾಗಿ 10-20 ಲಕ್ಷಕ್ಕೆ ಎಷ್ಟು ಬೇಕೋ ಅಷ್ಟು ನಿರ್ಧಾರಮಾಡಿ ಅಷ್ಟು ಲಕ್ಷಕ್ಕೆ ಒಬ್ಬ ಲೋಕಸಭಾ ಸದಸ್ಯರನ್ನು ಆರಿಸತಕ್ಕ ವ್ಯವಸ್ಥೆ ಮಾಡಬೇಕು. ಆಗ ಸರಿಯಾದಂಥ ಪ್ರಾತಿನಿಧ್ಯ ದೊರಕುತ್ತದೆ. ಇಲ್ಲದೇ ಹೋದರೆ, ಇವತ್ತು ದೊಡ್ಡ ರಾಜ್ಯಗಳೇನಿವೆ, ಆ ದೊಡ್ಡ ರಾಜ್ಯಗಳಿಗೆ ಹೆಚ್ಚಿನ ಸ್ಥಾನಗಳು ದೊರಕುತ್ತವೆ. ಅದೇ ಸಣ್ಣ ಜನಸಂಖ್ಯೆ ಇರುವ ರಾಜ್ಯಗಳಿಗೆ, ಆ ರಾಜ್ಯದ ವ್ಯಾಪ್ತಿಗೆ ಸಂಬಂಧ ಪಟ್ಟಂತೆ ಕಡಿಮೆ ಸ್ಥಾನಗಳು ಸಿಗುತ್ತವೆ. ಈ ತಾರತಮ್ಯವನ್ನು ನಿವಾರಿಸುವುದಕ್ಕೆ ಒಂದು ಸಲಹೆ ಕೊಡುತ್ತೇನೆ. ಮುಖ್ಯವಾಗಿ ರಾಜ್ಯಸಭೆ ಏನಿದೆ, ಆ ರಾಜ್ಯ ಸಭೆಯಲಿ ಸಣ್ಣ ರಾಜ್ಯಗಳಿಗೆ ಹೆಚ್ಚು ಪ್ರಾತಿನಿಧ್ಯ ಕೊಟ್ಟು, ದೊಡ್ಡ ರಾಜ್ಯಗಳಿಗೆ ಸ್ವಲ್ಪ ಕಡಿಮೆ ಪ್ರಾತಿನಿಧ್ಯತ್ವವನ್ನು ಕೊಡಬೇಕು. ಲೋಕಸಭೆಯಲ್ಲಿ ಜನಸಂಖ್ಯೆ ಆಧಾರದ ಮೇಲೆ ಸಮಾನವಾದ ರೀತಿಯೊಳಗೆ ಹಂಚಿಕೆ ಮಾಡಬೇಕು. ಉತ್ತರ ಪ್ರದೇಶ ರಾಜ್ಯ, ಬಿಹಾರ ರಾಜ್ಯಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗಳಿಸುತ್ತಾರೆ. ಇದು ಅನಿವಾರ್ಯವಾಗುತ್ತದೆ. ಅದೇರೀತಿ ಬೇರೆ ಸಣ್ಣ ರಾಜ್ಯಗಳಿಗೆ ಹೆಚ್ಚು ಪ್ರಾತಿ ನಿಧ್ಯ ಇಲ್ಲದೇ ಇರುವುದರಿಂದ ಅವರ ಮಾತುಗಳನ್ನು ಹೆಚ್ಚು ಶಕ್ತಿಯುತವಾಗಿ ಪ್ರತಿಪಾದಿಸಲು ಮತ್ತು ಯಾವುದಾದರೂ ಅವರಿಗೆ ಸಂಬಂಧಪಟ್ಟ ವಿಷಯವನ್ನು ಅದೇ ಸರ್ಕಾರದವರಿಗೆ ಪರಿಣಾಮಕಾರಿಯಾಗಿ ಹೇಳುವುದಕ್ಕೆ ಸಾಕಷ್ಟು ಅವಕಾಶ ಇಲ್ಲದಂಥ ಸ್ಥಿತಿಯಲ್ಲಿರುತ್ತಾರೆ. ಆ ದೃಷ್ಟಿಯಿಂದ ಸಣ್ಣ ರಾಜ್ಯಗಳಿಗೆ ಅಧಿಕ ಪ್ರಾತಿನಿಧ್ಯ ಕೊಟ್ಟು ಲೋಕಸಭೆಯಲ್ಲಿ ಸಮಾನವಾದ ಜನಸಂಖ್ಯೆ ಆಧಾರದಮೇಲೆ ಸಮಾನವಾಗಿ ಪ್ರಾತಿನಿಧ್ಯ ಕೊಡುವಂಥ ವ್ಯವಸ್ಥೆಯನ್ನು ತಾವು ತರಬೇಕು. ನಮಗೆ ಗೊತ್ತಿದೆ. ನಾವು ಈಗ ಏನು ಸಲಹೆ ಕೊಟ್ಟರೂ ಭೂತ ಬಹುಮತ ಇರತಕ್ಕ ಕಾಂಗ್ರೆಸ್ ಸರ್ಕಾರ ತನಗೆ ತೋಚಿದ ಒಂದು ನೀತಿಯನ್ನು ಅನುಸರಿಸಿಕೊಂಡು ಹೋಗುತ್ತದೆ. ಮುಂದೆಯಾದರೂ ಅವರ ಸಂಖ್ಯೆ ಕಡಿಮೆಯಾಗಿ, ಆ ಭೂತ ಬಹುಮತ ಕಡಿಮೆಯಾದರೆ, ನಾವು ಆ ಸ್ಥಾನಕ್ಕೆ ಬಂದರೆ............

ಉಪಾಧ್ಯಕ್ಷರು :—ಅಮೆಂಡ್‌ಮೆಂಟಿನಲ್ಲಿ ಭೂತವೂ ಇಲ್ಲ, ಪಕ್ಷವೂ ಇಲ್ಲ

ಶ್ರೀ ಕೋಣಂದೂರು ಲಿಂಗಪ್ಪ :— ನಾವು ರಚನಾತ್ಮಕವಾದ ಸಲಹೆ ಕೊಟ್ಟರೂ ಕೂಡ ತಮಗೆ ಬಹುಮತವಿರುವುದರಿಂದ ಅದನ್ನು ಆಗು ಮಾಡುವುದಿಲ್ಲ. ಯಾವುದೇ ಸಿದ್ಧಾಂತವಿಲ್ಲದ, ಸಿದ್ಧಾಂತ ರಹಿತವಾದ ತಿದ್ದುಪಡಿಯನ್ನು ತಂದಿರುವುದಕ್ಕಾಗಿ ಮೊದಲು ವಿಷಾದ ವ್ಯಕ್ತಪಡಿಸುತ್ತೇನೆ. ಈ ತಿದ್ದುಪಡಿಯಲ್ಲಿ ಯಾವ ಸಿದ್ಧಾಂತವೂ ಇಲ್ಲದೇ ಇರುವುದರಿಂದ ಇದನ್ನು ನಾನು ವಿಶಾದದಿಂದ ವ್ಯಕ್ತಪಡಿಸಬೇಕಾಗಿದೆ. ಜನಸಂಖ್ಯೆ ಹೆಚ್ಚಿದ್ದರಿಂದ ಸೀಟು ಗಳ ಸಂಖ್ಯೆ ಹೆಚ್ಚಾಗಬೇಕು ಎಂದು ಕೊಟ್ಟಿದ್ದಾರೆ. ಆದರೆ ಯಾವ ಕಾರಣದಿಂದ ಹೆಚ್ಚಿಸಬೇಕು ಎನ್ನುವುದು ಕೊಟ್ಟಿಲ್ಲ. ಇನ್ನೂ 25 ಸೀಟುಗಳು ಬೇಕು ಎಂದು ಹೇಳಿದ್ದಾರೆ. ಇದಕ್ಕೆ ಯಾವ ಕಾರಣವನ್ನೂ ಕೊಡದೇ ಇರುವುದರಿಂದ ಮತ್ತು ಇದರಲ್ಲಿ ಯಾವ ಸಿದ್ಧಾಂತವೂ ಇಲ್ಲದೇ ಇದ್ದುದರಿಂದ ಇದು ಅವಸರದ ತಿದ್ದು ಪಡಿಯಾಗಿದೆ ಎಂದು ಹೇಳುತ್ತೇನೆ. ನಮ್ಮ ನಾಯಕರು ಈ ಬಗ್ಗೆ ಲೋಕ ಸಭೆ ಯಲ್ಲಿ ಹೇಳಿದ್ದಾರೆ. ಲೋಕ ಸಭೆಯನ್ನು ರಾಷ್ಟ್ರ ಪಂಚಾಯಿತಿ ಎಂದು ನಮ್ಮ ಸೋಷಲಿಸ್ಟ್ ಪಾರ್ಟಿಯವರು ಕರೆಯುತ್ತಾರೆ. ಆದುದರಿಂದ ಈ ರಾಷ್ಟ್ರ ಪಂಚಾ ಯಿತಿ ನಿಜವಾಗಿಯೂ ಒಂದು ಸಮಾನತೆಯ ಆಧಾರದ ಮೇಲೆ ಆಗದೇ ಹೋದಲ್ಲಿ ನಾವು ಹೇಳಿದಂಥ ರೀತಿಯೊಳಗೆ ಅಧಿಕಾರ ನಡೆಯುತ್ತದೆ ಎನ್ನುವುದರಲ್ಲಿ ವಿಶ್ವಾಸ ವಿಲ್ಲ. ಅದೇ ರೀತಿ ಸಣ್ಣ ರಾಜ್ಯ ಸಭೆಗೂ ಹೆಚ್ಚು ಹೆಚ್ಚು ಪ್ರಾತಿನಿಧ್ಯ ಸಿಗಬೇಕು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಇದರಲ್ಲಿ ರಾಜ್ಯ ಸಭೆ ಪ್ರಶ್ನೆ ಬರುವುದಿಲ್ಲ

ಶ್ರೀ ಕೋಣಂದೂರು ಲಿಂಗಪ್ಪ : ನಮ್ಮ ಒಂದು ವಾಡಿಕೆ ಒಳಗೆ ಇದ ರಲ್ಲಿ ರಾಜ್ಯ ಸಭೆಯೂ ಸೇರುತ್ತದೆ. ಸಾಮಾನ್ಯವಾಗಿ ಜನರಿಗೆ ಏನಾಗಿದೆ ಎಂದರೆ ಲೋಕ ಸಭೆ ಬೇರೆ, ರಾಜ್ಯ ಸಭೆ ಬೇರೆ ಎಂದು ಹೇಳುವುದಿಲ್ಲ. ಆದುದರಿಂದ ಸಣ್ಣ ರಾಜ್ಯ ಸಭೆಯಲ್ಲೂ ಕೂಡ ಸಮಾನವಾದಂಥ ಪ್ರಾತಿನಿಧ್ಯ ದೊರಕಿಸಿ ಕೊಡ ಬೇಕು; ಎಂದು ಹೇಳುತ್ತೇನೆ. ಇದರಲ್ಲಿ ರಾಜ್ಯ ಸಭೆಯ ಪ್ರಶ್ನೆ ಡೈರೆಕ್ಟ್‌ಆಗಿ ಬರದೇ ಇದ್ದರೂ ಕೂಡ ಇನ್‌ಡೈರೆಕ್ಟ್ ಆಗಿಯಾದರೂ ಹೇಳಬೇಕಾಗುತ್ತದೆ. ಆದುದರಿಂದ ಈ ವಿಷಯ ಹೇಳಿದ್ದೇನೆ.

ಉಪಾಧ್ಯಕ್ಷರು : ಆ ಬಗ್ಗೆ ಹೇಳುವುದಕ್ಕೆ ಇದರಲ್ಲಿ ಬರುವುದಿಲ್ಲ

ಶ್ರೀ ಕೋಣಂದೂರು ಲಿಂಗಪ್ಪ : ಆ ಪ್ರಶ್ನೆ ಇಲ್ಲಿ ಬರುವುದಿಲ್ಲ ಅನ್ನು ವುದು ಗೊತ್ತಿದೆ. ಆದರೆ ಈ ಲೋಕಸಭೆಯ ಸೀಟುಗಳ ಬಗ್ಗೆ ಹೇಳುವಾಗ ನಾವು ಅವರ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇನ್ನು ಲೋಕಸಭಾ

ಸದಸ್ಯರ ಬಗ್ಗೆ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಸಾಮಾನ್ಯವಾಗಿ ಲೋಕ ಸಭಾ ಸದಸ್ಯರಿಗೆ ಹೆಚ್ಚು ಕೆಲಸ ಇರುತ್ತದೆ. ಈ ದೃಷ್ಟಿಯಿಂದ ಲೋಕ ಸಭಾ ಸದಸ್ಯರುಗಳು ಸಮರ್ಪಕವಾಗಿ ಜನತೆಯ ಸೇವೆ ಸಲ್ಲಿಸುವುದಕ್ಕೆ ಅವರಿಗೆ ಬೇಕಾಗಿರತಕ್ಕಂಥ ಆಫೀಸಿನ ಸವಲತ್ತುಗಳನ್ನು ಒದಗಿಸಿಕೊಡಬೇಕು. ಆದುದರಿಂದ ಇದರಲ್ಲಿ ಲೋಕ ಸಭಾ ಸದಸ್ಯರ ವಿಷಯ ಮಾತನಾಡಲು ಬರುತ್ತದೆ. ಅವರಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಿದರೆ ಅವರು ಇನ್ನೂ ಹೆಚ್ಚಿನ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಅವರು ಯೋಚನೆ ಮಾಡಬೇಕು. ಇದನ್ನೆಲ್ಲಾ ಯೋಚನೆ ಮಾಡದೇ ಈ ತಿದ್ದುಪಡಿ ತಂದಿರುವುದರಿಂದ ಇದು ಅವಸರದ ತಿದ್ದುಪಡಿಯಾಗಿದೆ ಎಂದು ಹೇಳುತ್ತೇನೆ. ಅಲ್ಲದೆ ಈ ತಿದ್ದುಪಡಿ ಯಾವ ಸಮಾನತೆಯ ಸಿದ್ಧಾಂತಕ್ಕೂ ಆಧಾರ ಇಲ್ಲದೇ ಇರುವುದರಿಂದ ಅದಕ್ಕೆ ತಿಲಾಂಜಲಿ ಕೊಟ್ಟಿರುವುದರಿಂದ ಇದನ್ನು ನಾವು ವಿಷಾದದಿಂದ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ) :— ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು :—ತಮ್ಮ ಮುಂದೆ ಈ ವಿಷಯದ ಬಗ್ಗೆ ಬಿಲ್ ಇಲ್ಲ. ತಾವು ಯಾವುದರ ಮೇಲೆ ಮಾತನಾಡುತ್ತೀರಿ ?

ಶ್ರೀ ಎಸ್. ವೈ. ಪಾಟೀಲ್ :—ನಾನು ಅಸೆಂಬ್ಲಿ ಮೆಂಬರ್ ಎಂದು ತಮಗೆ ನೆನಪು ಇದೆಯೋ ಇಲ್ಲವೋ ಎಂದು ನನಗೆ ಅನಿಸುತ್ತದೆ. ಈ ತರಹ ಅಪಮಾನ ಮಾಡಬೇಡಿ. ಬುದ್ಧಿವಂತ ವಕೀಲನಿಗೆ ಯಾವ ತರಹ ಬಿಲ್ ಬೇಕಾಗಿಲ್ಲ. ತಾವು ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಹೇಳಿದರೆ ಅದು ನಮಗೆ ಅಪಮಾನ ಮಾಡಿದಂತಾಗುತ್ತದೆ.

ಉಪಾಧ್ಯಕ್ಷರು : ತಮ್ಮ ಮುಂದೆ ಬಿಲ್ ಇಲ್ಲ, ಅದುದರಿಂದ ತಮಗೆ ಸಹಾಯ ಮಾಡಲಿಕ್ಕೆ ನಾನು ಹೇಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :—ನನಗೆ ಅದರ ಸ್ಪಿರಿಟ್ ಗೊತ್ತಿದೆ. ಇದೇನೂ ಡಾ. ಅಂಬೇಡ್ಕರ್ ಬರೆದಂಥ ಒಂದು ದೊಡ್ಡ ಮಹತ್ವವಾದ ಕಾನೂನು ಪುಸ್ತಕವಲ್ಲ. ಇದರಲ್ಲಿರುವುದು ಲೋಕಸಭೆಗೆ ಸೀಟು ಹೆಚ್ಚು ಮಾಡುವ ವಿಷಯ ಅಷ್ಟೆ. ಇದು ಸೂಕ್ತ ಉಂಟೋ, ಇಲ್ಲವೋ ಅನ್ನುವ ಬಗ್ಗೆ ಲೋಕಸಭೆಗೆ ನಮ್ಮ ಅಭಿಪ್ರಾಯ ಕೊಡತಕ್ಕದ್ದರ ಬಗ್ಗೆ ನಮ್ಮ ಮುಂದೆ ನಿರ್ಣಯ ಬಂದಿದೆ. ಇದು ಯೋಗ್ಯವೋ, ಅಯೋಗ್ಯವೋ ಅನ್ನುವ ಅಭಿಪ್ರಾಯ ಹೇಳಬೇಕಾಗಿದೆ. ಆದುದರಿಂದ ಮಾನ್ಯ ಅಧ್ಯಕ್ಷರಲ್ಲಿ ನಾನು ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ ಒಬ್ಬ ಅಸೆಂಬ್ಲಿ ಮೆಂಬರ್ ಹೆಚ್ಚೆಚ್ಚು ಒತ್ತಿದರೂ ಸಹ ಅವನು ಹೇಗೆ

(ಶ್ರೀ ಎಸ್. ವೈ. ಪಾಟೀಲ್.)

ಮಾತನಾಡಬೇಕು ಎನ್ನುವುದು ಗೊತ್ತಿದೆ, ಅವನು ಹಾಗೆ ಮಾತನಾಡಬೇಕು, ಹೀಗೆ ಮಾತನಾಡಬೇಕು ಎಂದು ಹೇಳುವುದಕ್ಕೆ ಇದು ಸ್ಕೂಲ್ ಅಲ್ಲ, ಕಾಲೇಜು ಅಲ್ಲ, ರಾಜ್ಯಾಂಗದ ಪ್ರಕಾರ ಡಿಲಿಮಿಟೇಷನ್ ಪ್ರಕಾರ ನಾವು ಈ ಅಸೆಂಬ್ಲಿಗೆ ಆರಿಸಿ ಬಂದಿದ್ದೇವೆ, ಈ ಬಗ್ಗೆ ನಾವು ಏನು ಮಾತನಾಡಬೇಕೆಂಬುದು ನಮ್ಮ ಕಕ್ಷೆ ಒಳಗೆ ಬರುತ್ತದೆ.

ಈ ಬಗ್ಗೆ ಮುಂದುವರೆದು ಹೇಳುವುದಾದರೆ ಈಗ ಲೋಕಸಭೆಗೆ 20 ಸೀಟು ಗಳು ಹೆಚ್ಚು ಮಾಡುವ ಉದ್ದೇಶ ಏನು ಇದೆ ಅದು ಸ್ವಾಗತಾರ್ಹವಾದುದು. ಆದರೆ ಈ ಪ್ರಜಾಪ್ರಭುತ್ವದಲ್ಲಿ ತಾವು ಆ ರೀತಿ ಮಾತನಾಡತಕ್ಕಂಥಾದ್ದು ಈ ಕಕ್ಷೆ ಒಳಗೆ ಬರುವುದಿಲ್ಲ. ಈವೊತ್ತಿನ ಈ ಪ್ರಜಾಪ್ರಭುತ್ವದಲ್ಲಿ ಒಬ್ಬ ಮೆಂಬರ್ ಮಾತನಾಡಬೇಕಾದರೆ ಅವನು ಪರಿಪೂರ್ಣವಾದ ಅಂಶವನ್ನು ತಿಳಿದು ಕೊಂಡಿರುತ್ತಾರೆ. ಅದು ತನ್ನಷ್ಟಕ್ಕೆ ತಾನೇ ಬರುತ್ತದೆ. ಆದುದರಿಂದ ಈಗ ಲೋಕಸಭೆಗೆ ಸೀಟುಗಳನ್ನು ಹೆಚ್ಚು ಮಾಡಬೇಕೆಂಬ ಮೂಲ ಉದ್ದೇಶ ಏನು ಇದೆ, ಅದರ ಸ್ಪಿರಿಟ್ ಏನು ಇದೆ ಅದು ಯೋಗ್ಯವಾದುದು ಮತ್ತು ಸೂಕ್ತವಾದುದು ಎಂದು ಹೇಳುತ್ತೇನೆ. ಈ ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆ ಹೆಚ್ಚಾದಂತೆ ಅವರ ಅಭಿಪ್ರಾಯ ವ್ಯಕ್ತ ಮಾಡುವುದಕ್ಕೆ ಈ ರೀತಿಯ ಒಂದು ಅನುಕೂಲತೆ ಇರ ತಕ್ಕಂಥಾದ್ದು ಸ್ವಾಗತಾರ್ಹವಾದುದು. ಇದರಲ್ಲಿ ಮುಖ್ಯವಾದುದು ಏನೆಂದರೆ ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದಂತೆ ಇದರಲ್ಲಿ ರಾಜ್ಯ ಸಭೆ ಪ್ರಶ್ನೆ ಬಾರದೇ ಇದ್ದರೂ ಸಹ ಪಾರ್ಲಿಮೆಂಟಿಗೆ 10 ಲಕ್ಷಕ್ಕೆ ಒಬ್ಬ ಪ್ರತಿನಿಧಿ ಇರ ಬೇಕು ಎಂದು ಏನು ಹೇಳುತ್ತಿರೋ ಅದೇರೀತಿ ರಾಜ್ಯ ಸಭೆಗೂ ಹೆಚ್ಚು ಪ್ರಾತಿನಿಧ್ಯ ಕೊಡಿ ಎಂದು ಹೇಳುತ್ತೇನೆ. ಮತ್ತು ಹಾಗೆ ಮಾಡಿದರೆ ರಾಜ್ಯ ಸಭೆಯಲ್ಲೂ ಕೂಡ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡಲಿಕ್ಕೆ ಅನುಕೂಲ ವಾಗುತ್ತದೆ. ಎಂದು ಹೇಳುತ್ತೇನೆ.

MR. DEPUTY SPEAKER.—I am the servant of the House. On account of the good will of the members I am here. I want disccussion to be within the limits of the subject not away from the subject. I am trying to help the Hon. member by pointing it out. But he is unnecessarily getting angry with me for nothing. I will send the papers relating to the Resolution.

ಶ್ರೀ ಎಸ್. ವೈ. ಪಾಟೀಲ್ :—ನೀವು ಏನಾದರೂ ಮಾತನಾಡಿದರೆ ನಮಗೆ ಬಹಳ ಅನುತಾಪವಾಗುತ್ತದೆ ನಮಗೆ ನಿಮ್ಮ ಸಹಾಯ ಏನೂ

ಬೇಕಾಗಿಲ್ಲ. ನಿಮ್ಮ ಸಹಾಯ ನಮಗೆ ಏನಾದರೂ ಬೇಕಾಗಿದ್ದರೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇವೆ. ನಾನು ಈ ಬಗ್ಗೆ ಒಂದೇ ಒಂದು ವಿಷಯ ಹೇಳ ಬೇಕಾಗಿದೆ. ಇದನ್ನು ಸಮರ್ಥನೆ ಮಾಡುತ್ತ ಮುಖ್ಯವಾಗಿ ಹೇಳುವುದಾದರೆ ಈಗ ಜನಸಂಖ್ಯೆ ಪ್ರಮಾಣದ ಮೇಲೆ 10 ಲಕ್ಷಕ್ಕೆ ಒಬ್ಬ ಪ್ರತಿನಿಧಿಯಂತೆ ಚುನಾವಣೆಯಲ್ಲಿ ಆರಿಸಿ ಲೋಕಸಭೆಗೆ ಕಳುಹಿಸುತ್ತಾರೆ

ಇದರ ಜೊತೆಗೆ ಟ್ರೈಬಲ್ ಏರಿಯಾದ್ದು ಹೆಚ್ಚಿನ ಸೀಟುಗಳನ್ನು ರಿಸರ್ವೇಷನ್ ಸೀಟುಗಳನ್ನಾಗಿ ಮಾಡಿ ಲೋಕಸಭೆಗೆ ಇನ್ನಷ್ಟು ಹೆಚ್ಚು ಸ್ಥಾನಗಳನ್ನು ಕೊಡಲಿಕ್ಕೆ ಅವಕಾಶ ಮಾಡಿದ್ದೀರಿ. ಅದರಂತೆ ಆ ಭಾಗದ ಜನತೆಯಲ್ಲಿ ಒಂದು ಕಲ್ಯಾಣವಾಗುವುದಕ್ಕೆ ಅವಕಾಶವಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸಿಸತ್ತೇನೆ.

†ಶ್ರೀ ಸಿ. ಬೈರೇಗೌಡ—ಮಾನ್ಯ ಅಧ್ಯಕ್ಷರೇ, ರಾಜ್ಯಾಂಗದ 31ನೇ ತಿದ್ದುಪಡಿಯನ್ನು ಸ್ವಾಗತಿಸಬೇಕೆಂದು ಇದ್ದರೂ ಕೂಡ ಇದರ ಹಿನ್ನೆಲೆಯಲ್ಲಿ ಆಡಳಿತ ನಡೆಸಿಕೊಂಡು ಬರತಕ್ಕಂಥ ಪಕ್ಷ ಯಾವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೋ ಆ ಉದ್ದೇಶ ಆ ಪಕ್ಷಕ್ಕೆ ನಿಜವಾಗಿಯೂ ಇಲ್ಲ ಎಂದು ಹೇಳುತ್ತೇನೆ. ಈ ದೇಶದ ಆಗುಹೋಗುಗಳನ್ನು ತೀರ್ಮಾನ ಮಾಡುವುದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಆ ಪ್ರಜಾ ಪ್ರತಿನಿಧಿಗಳನ್ನು ಆರಿಸಲು ಅದಕ್ಕೆ ಚುನಾವಣೆ ನಡೆಯಬೇಕು ಎಂದು ಲೋಕಸಭೆಗೂ ಮತ್ತು ಶಾಸನ ಸಭೆಗಳಿಗೂ ಚುನಾವಣೆಗಳು ನಡೆಯುತ್ತವೆ ಆದರೆ ಇವೊತ್ತಿನದಿವಸ ಪಶ್ಚಿಮ ಬಂಗಾಳದಲ್ಲಿ ಯಾವ ಪಕ್ಷ ಈ ರಾಜ್ಯದ ಆಡಳಿತವನ್ನು ನಡೆಸುತ್ತಾ ಇದೆ ಆ ಪಕ್ಷಕ್ಕೆ ಸೇರಿದ ಪಕ್ಷ ಇಲ್ಲಿಯೂ ಅಧಿಕಾರದಲ್ಲಿದೆ. ಆದೇ ಪಕ್ಷ ಈ ಅಮೆಂಡ್‌ಮೆಂಟನ್ನು ತಂದಿದೆ. ಈ ಸರ್ಕಾರ ಯಾವ ಪಕ್ಷದಿಂದ ನಡೆಸುತ್ತಿದೆ ಅದೇ ಪಕ್ಷ ಪಶ್ಚಿಮ ಬಂಗಾಳದಲ್ಲಿ ಚುನಾವಣೆಯನ್ನು ನಡೆಸಿದ್ದು ಅಲ್ಲಿಯ ವಿರೋಧಪಕ್ಷಗಳನ್ನು ತಲೆಯೆತ್ತದಂತೆ ಆ ಕ್ಷೇತ್ರದಿಂದ ಓಡಿಸಿ ಚುನಾವಣೆ ಕಾಲಕ್ಕೆ ಆ ತರಹದ ಪೋಲೀಸ್ ಪಡೆಗಳನ್ನು ಉಪಯೋಗಿಸಿಕೊಂಡು ಅಲ್ಲಿನ ವಿರೋಧ ಪಕ್ಷಗಳವರನ್ನು ಬೊಗ್ಗುಬಡಿದು ಆಡಳಿತ ನಡೆಸುತ್ತಿದ್ದಾರೆ. ಇದರಲ್ಲಿ ಏನಾದರೂ ಒಂದು ನೈತಿಕ ಹೊಣೆಯನ್ನು ಇವರು ಹೊಂದಿದ್ದಾರೆಯೋ ಎಂದು ನಾನು ಕೇಳುತ್ತೇನೆ. ಇವರಿಗೆ ಯಾವ ರೀತಿಯಾದ ಒಂದು ನೈತಿಕದೃಷ್ಟಿಯಿಲ್ಲವೆಂದು ಹೇಳುತ್ತೇನೆ.

ಉಪಾಧ್ಯಕ್ಷರು.- ಶ್ರೀ ಮಾನ್ ಬೈರೇಗೌಡರೇ ಆ ವಿಷಯ ಈ ಅಮೆಂಡ್‌ಮೆಂಟನಲ್ಲಿ ಬರುವುದಿಲ್ಲ ತಾವು ದಯಮಾಡಿಟ್ಟು ಅಮೆಂಡ್‌ಮೆಂಟ್‌ಬಗ್ಗೆ ಮಾತನಾಡಿ. ನಾನು ಏನಾದರೂ ಹೇಳಿದರೆ ತಮಗೆ ಕೋಪ ಬರುತ್ತದೆ.

ಶ್ರೀ ಸಿ ಬೈರೇಗೌಡ.—ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಶ್ರೀ ಪಾಟೀಲರ ಹಾಗೆ ಕೋಪ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳು ನಡೆಯುವಾಗ ಒಂದು ರೀತಿಯಲ್ಲಿ ಕಾನ್ಸ್‌ಟಿಟ್ಯೂಷನ್ ಪ್ರಕಾರ ನಡೆಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ. ಆ ರೀತಿ ಚುನಾವಣೆ ನಡೆಸದೆ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸತಕ್ಕಂಥ ಆಡಳಿತ ಪಕ್ಷ ವಿರೋಧ ಪಕ್ಷಗಳನ್ನು ದಮನ ಮಾಡಿಕೊಂಡು ಅದರ ನೈತಿಕ ಹೊಣೆಯನ್ನು ಅರಿತಿಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ.

MR. DEPUTY SPEAKER.—I cannot allow all sorts of things. Your talk should be within the scope of the subject. I have my responsibility to see that it is within the scope of the subject.

ಶ್ರೀ ಸಿ. ಬೈರೇಗೌಡ.—ಇವೊತ್ತಿನದಿವಸ ನಮ್ಮ ದೇಶದ ರಾಷ್ಟ್ರಾಧ್ಯಕ್ಷರ ಚುನಾವಣೆಯನ್ನು ನಡೆಸಬೇಕು ಮತ್ತು ಇವೊತ್ತಿನದಿವಸ ಮೈಸೂರು ರಾಜ್ಯದಿಂದ ಅನೇಕ ಸದಸ್ಯರು ಪಾರ್ಲಿಮೆಂಟ್ ಸದಸ್ಯರಾಗಿದ್ದಾರೆ, ಉತ್ತರ ಪ್ರದೇಶದಿಂದಲೂ ಪಾರ್ಲಿಮೆಂಟಿಗೆ ಸದಸ್ಯರಾಗಿ ಹೋಗಿದ್ದಾರೆ ಆದರೆ ಈ ರಾಜ್ಯದಿಂದ ಆರಿಸಿ ಹೋದ ಸದಸ್ಯರಿಗೆ ಆ ಗೌರವ ಘನತೆಯಿಲ್ಲವೆಂದು ಹೇಳಿದರೆ ಇದು ಯಾವ ರೀತಿಯಾದ ಸಮಾನತೆ ತೋರಿದಂತೆ ಆಗುತ್ತದೆ ಎಂದು ನಾನು ಕೇಳುತ್ತೇನೆ. ಉತ್ತರ ಪ್ರದೇಶದಲ್ಲಿ ಇರತಕ್ಕಂಥ ಜನರಿಗೆ ಎಷ್ಟು ಘನತೆ ಗೌರವ ಇದೆಯೋ ಅದೇ ರೀತಿ ಮೈಸೂರು ರಾಜ್ಯದ ಜನತೆಗೂ ಘನತೆ ಗೌರವ ಇದೆ ಎಂದು ತಿಳಿದುಕೊಳ್ಳಬೇಕು. ಇದು ಯಾವ ರೀತಿ ಮಾಡುತ್ತಿದ್ದಾರೆಂದು ನೋಡಿದರೆ ನಿಜವಾಗಿಯೂ ಎಲ್ಲರೂ ಸಮಾನವಾಗಿ ಓಟನ್ನು ಪಡೆದು ಚುನಾಯಿತರಾಗಿ ಬಂದಮೇಲೆ ಸಮಾನವಾದ ಹಕ್ಕು ಸಮಾನವಾದ ಗೌರವ ಮತ್ತು ಸ್ಥಾನಗಳು ಇರಬೇಕು. ಮೈಸೂರಿನಿಂದ ಹೋದ ಸದಸ್ಯರು, ಆಂಧ್ರದಿಂದ ಹೋದಂಥ ಸದಸ್ಯರಿಗೆ ಎಷ್ಟು ಅನುಕೂಲತೆ ಸಿಕ್ಕುತ್ತದೆ ಅಷ್ಟೇ ಅನುಕೂಲತೆಗಳನ್ನು ಕೊಡಬೇಕು. ಅದರಲ್ಲಿ ಯಾವ ಭೇದಭಾವ ಇರಕೂಡದು ಎಂದು ಹೇಳುತ್ತೇನೆ. ಇನ್ನೊಂದು ನಾಳೆ ನಮ್ಮ ರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಯುವ ಸಂಭವ ಇದೆ ಎಲ್ಲಾ ದೇಶದಲ್ಲಿಯೂ ಕೂಡ ಅದೇರೀತಿ ನಡೆಯುತ್ತಿರುತ್ತದೆ ಇದನ್ನು ಸರಿಪಡಿಸುವಂತಹ ಒಂದು ಅಮೆಂಡ್‌ಮೆಂಟ್ ತಂದಿದ್ದಲ್ಲಿ ಖಂಡಿತವಾಗಿ ನಾನು ಆಡಳಿತ ಪಕ್ಷದವರನ್ನು ಮೆಚ್ಚಿಕೊಳ್ಳುತ್ತಿದೆ. ಆದರೆ ಅವರು ತರುವ ಅಮೆಂಡ್‌ಮೆಂಟ್‌ಗಳೆಲ್ಲಾ ಅವರ ಮೂಗಿಗೆ ನೇರವಾಗಿ ಇರುವುದನ್ನೇ ತಂದು ಗೆದ್ದು ಬರುವುದು. ಆದರಿಂದ ಕ್ಷೇತ್ರಗಳನ್ನು ವಿಂಗಡಣೆ ಮಾಡುವಾಗ ಅವರಿಗೆ ಅನುಕೂಲವಾಗುವಂತೆ ಮಾಡಿದ್ದಾರೆ. ಉದಾಹರಣೆ ತೆಗೆದು ಕೊಳ್ಳುವುದಾದರೆ ನಮ್ಮ ಜಿಲ್ಲೆಯನ್ನು ತೆಗೆದು

ಕೊಳ್ಳಬಹುದು ಮಾಲೂರು ತಾಲ್ಲೂಕು ನಮ್ಮ ಜಿಲ್ಲೆಗೆ ಸಂಬಂಧಪಟ್ಟದ್ದು ಅದನ್ನು ನ್ಯಾಯವಾಗಿ ಸೇರಿಸಬೇಕಾಗಿದ್ದರೆ ಅದನ್ನು ಕೋಲಾರಕ್ಕೆ ಸೇರಿಸಬೇಕಾಗಿತ್ತು. ಆದರೆ ಅದನ್ನು ಹೊಸಕೋಟೆಗೆ ಸೇರಿಸಿದ್ದಾರೆ. ಆಡಳಿತ ಪಕ್ಷಕ್ಕೆ ಯಾವುದು ಅನುಕೂಲವೋ ಆ ರೀತಿ ಲೋಕಸಭಾಕ್ಷೇತ್ರಕ್ಕೆ ಮಾಲೂರು ಸೇರಿಸಿದ್ದಾರೆ. ಇವರ ಮೂಗಿಗೆ ನೇರವಾಗಿ ಡಿ ಲಿಮಿಟೇಷನ್ ತಂದಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇವರಿಗೆ ನಂಬಿಕೆಯಿಲ್ಲ ಆದ್ದರಿಂದ ಅವರು ಮೂಗಿಗೆ ನೇರವಾಗಿ ಅವರ ಆಡಳಿತ ವನ್ನು ನಡೆಸುತ್ತಿದ್ದಾರೆಂದು ಹೇಳುತ್ತೇನೆ

ಶ್ರೀ ಡಿ. ಕೆ ನಾಯ್ಕರ್ :—ಮಾನ್ಯ ಅಧ್ಯಕ್ಷರೇ, ಈ ಮೊದಲು ಈ ಬಿಲ್ಲಿನ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಮಾನ್ಯ ಸದಸ್ಯರು ಈ ಸದನದಲ್ಲಿ ಈ ಬಿಲ್ಲಿನ ಬಗ್ಗೆ ಮಾನಾಡುತ್ತಾ ಕೆಲವು ಉಪಯುಕ್ತವಾದ ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ಮೊದಲೇ ತಿಳಿಸಿದ್ದೇನೆ. ಇದರ ಸ್ಕೋಪು ಬಹಳ ಲಿಮಿಟೆಡ್ ಆಗಿದೆ. ಅದಕ್ಕನುಗುಣವಾಗಿ ಇದರಲ್ಲಿ ತಾವು ಭಾಗವಹಿಸಬೇಕೆಂದು ಕೇಳಿಕೊಂಡಿದ್ದೇನೆ. ಮಾನ್ಯ ಸದಸ್ಯರು ಮಾಡಿದ ಕೆಲವು ಸೂಚನೆಗಳು ಕನ್ ಸ್ಟ್ರಕ್ಟೀವ್ ಆಗಿವೆ. ಪಾರ್ಲಿಮೆಂಟಿನಲ್ಲಿ ಈ ಪರಿಸ್ಥಿತಿ ಇದ್ದಾಗ ಇವುಗಳಿಂದ ಎಷ್ಟೋ ಮಟ್ಟಿಗೆ ಉಪಯೋಗ ಬೀಳಬಹುದು. ಮಾನ್ಯ ಸದಸ್ಯರು ಇಲ್ಲಿ ಯಾವ ರೀತಿಯು ಕನ್‌ಸ್ಟ್ರಕ್ಟೀವ್ ಕ್ರಿಟಿಸಿಷಮ್ಸ್ ಮಾಡಿದ್ದಾರೋ ಅದೇ ರೀತಿ ಅಲ್ಲಿ ಪಾರ್ಲಿಮೆಂಟಿನಲ್ಲಿಯೂ ಕೂಡ ಮಾಡಿದ್ದಾರೆ. ಆದರೆ ಆ ಕಾಮೆಂಟನ್ನು ಮತ್ತೆ ಇಲ್ಲಿ ಇನ್ ಕ್ಲೂಡ್ ಮಾಡಿಲ್ಲ. ಅದಕ್ಕೋಸ್ಕರ ಎಲೆಕ್ಷನ್ ಕಮಿಷನ್‌ನವರು ಕೆಲವು ಸೂಚನೆಗಳನ್ನು ಕೊಟ್ಟಿದ್ದುದನ್ನು ಈ ಬಿಲ್ಲಿನಲ್ಲಿ ಸೇರಿಸಿಲ್ಲ. ಮಾನ್ಯ ಸದಸ್ಯರು ಈ ಬಿಲ್ಲನ್ನು ಈಗ ಯಾವ ರೂಪದಲ್ಲಿ ತರಬಹುದಾಗಿದೆ ಎಂದು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಶ್ರೀ ಮಾನ್ ಬಂಗಾರಪ್ಪನವರು ತಮ್ಮ ಭಾಷಣದಲ್ಲಿ ಈಗ ತಂದಿರುವ ಬಿಲ್ಲನ್ನು ಸ್ವಾಗತಿಸುತ್ತೇನೆ. ಇದರ ಹಿಂದೆ ರಾಜಕೀಯ ಇದೆಯೆಂದು ಇದನ್ನು ವಿರೋಧಿಸಬೇಕಾಗುತ್ತದೆ ಇದು ಅರ್ಬಿಟ್ರೇಟರಿ ಆಗಿದೆಯೆಂದು ಹೇಳಿದ್ದಾರೆ. Article 82 gives certain powers to the Parliament to read just the seats alloted, after the completion of census. The census has been completed in 1971 and in the 1972 Delimitation Commission has been constituted. Readjustment may be possible aft r the recommendation of the Delimitation Commission. If this readjustment takes place after the recommendation of the Delimitation Commission, then there will be an alteration in the ratio. In order to maintain that and to maintain the present existing seats in each State, this amendment is necessary. That was the intention of the Parliament.

(ಶ್ರೀ ಡಿ. ಕೆ. ನಾಯಕರ್)

ಆದ್ದರಿಂದ ಅದು ಇರಬಾರದು ಎಂದಲ್ಲ. ಸ್ಪಷ್ಟವಾಗಿ ನಾನು ಹೇಳುವುದಾದರೆ, ಆರ್ಟಿಕಲ್ 81 ರ ಪ್ರಕಾರ ಜನಸಂಖ್ಯೆಗೆ ಅನ ಗುಣವಾಗಿ 8 ಲಕ್ಷಕ್ಕೆ ಒಂದ ಸೀಟು ಆದರೆ, ಈಗಿನ ಪ್ರಮೋಷನ್ ಪ್ರಕಾರ ಸೀಟುಗಳು ಹೆಚ್ಚಾಗುವ ಸಂಭವ ಇದೆ. ಡಿಲಿಮಿಟೇಷನ್ ಕಮಿಟಿಯ ರಿಪೋರ್ಟ್ ಏನು ಬರುತ್ತದೆ ಎನ್ನುವುದನ್ನು ನೋಡುವುದು ಬೇರೆ ವಿಷಯ. ಎಲೆಕ್ಷನ್ ಕಮಿಷನ್‌ನವರು ಕಾನೂನನ್ನು ಮಾಡುವುದು ಇನ್ನೊಂದು ವಿಷಯ. ಆದ್ದರಿಂದ ಆದಕ್ಕೂ ಡಿಲಿಮಿಟೇಷನ್, ರೀ-ಅಡ್ಜಸ್ಟ್‌ಮೆಂಟಿಗೂ ವ್ಯತ್ಯಾಸ ಇದೆಯೆಂದು ನನ್ನ ಅಭಿಪ್ರಾಯ. The bill seeks only amendment to Articles 1, 330 and 332. You must consider whether your subject will come within the scope of the amendment, and that is a most important question.

ಶ್ರೀ ಕೋಣಂದೂರು ಲಿಂಗಪ್ಪ :—ಈಗ 500 ಸೀಟುಗಳು ಇದ್ದುದನ್ನು 525 ಸೀಟು ಎಂದು ಹೆಚ್ಚು ಮಾಡುತ್ತಿದ್ದಾರೆ. ಏತಕ್ಕೆ ಹೀಗೆ ಮಾಡುತ್ತಾರೆ? ಏನು ಕಾರಣ?

ಶ್ರೀ ಡಿ. ಕೆ. ನಾಯ್ಕರ್ :—ನಾನು ಅದನ್ನೇ ಹೇಳಿದೆ, ಪಾಪ್ಯುಲೇಷನ್ ಮೇಲೆ ಸೀಟು ಮತ್ತು ಕಾನ್‌ಸ್ಟಿಟ್ಯೂಯನ್ಸಿ ನಂಬರ್ ಪ್ರಮಾಣ ಏನು ಇದೆ, ಅದು ಪ್ರತಿಯೊಂದು ಸ್ಟೇಟಿನಲ್ಲಿಯೂ ಒಂದೇ ಇರಬೇಕು ಎಂದು ಇದೆ. ನಾರ್ತ್ ಈಸ್ಟರ್ನ್ ಏರಿಯಾಸ್ ರೀ-ಆರ್ಗನೈಸೇಷನ್ ಆಕ್ಟ್ ಆದಮೇಲೆ ಸೀಟ್ಸ್ 500 ಇದ್ದುದು 506 ಆಗುವ ಪ್ರಸಂಗ ಬಂತು. ಮತ್ತು ಯೂನಿಯನ್ ಟೆರಿಟರೀಸ್‌ನ್ನು ಕೆಲವು ಕಡಿಮೆ ಪಾಪ್ಯುಲೇಷನ್ ಇರುವ ಸ್ಟೇಟುಗಳು ಇವೆ. ಅದ್ದರಿಂದ ಈಗ ಮಾಡಿರುವಂತೆ Ratio between that number.............. ಮತ್ತು ಜನಸಂಖ್ಯೆಯ ಆಧಾರದ ಮೇಲೆ 525 ಸರಿ ಹೋಗುತ್ತದೆ ಎಂದು ಮಾಡಿದ್ದಾರೆ. ಈ ಬಗ್ಗೆ ಪಾರ್ಲಿಮೆಂಟ್ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ಅವಲೋಕನ ಮಾಡಿ ಪಾರ್ಲಿಮೆಂಟಿನಲ್ಲಿ ಬಿಲ್ಲನ್ನು ಪಾಸ್ ಮಾಡಿದ್ದಾರೆ. ಇಲ್ಲಿ ಮಾನ್ಯ ಸದಸ್ಯರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅವರೆಲ್ಲರಿಗೂ ನನ್ನ ವಂದನೆಗಳನ್ನು ಸಲ್ಲಿಸಿ, ಎಲ್ಲರೂ ಇದನ್ನು ಸಂಪೂರ್ಣವಾಗಿ ಬೆಂಬಲಿಸಬೇಕು ಎಂದು ಪ್ರಾರ್ಥಿಸುತ್ತೇನೆ.

MR. DEPUTY SPEAKER The question is :—

"That this House ratifies the amendments to the Constitution of India falling within the purview

of the proviso to clause (2) of Article 368 thereof, proposed to be made by the Constitution (Thirty-first Amendment) Bill, 1973, as passed by the two Houses of Parliament."

The motion was adopted.

MR. DEPUTY SPEAKER: The House stands adjourned to meet tomorrow at 1 P.M.

The House adjourned at Fifty-Five minutes past Five of the lock to meet again at one of the clock on Wednesday, the 29th August 1973.)

ANNEXURE

THE MYSORE HOUSING BOARD (AMENDMENT) BILL, 1973.

(L. A. Bill No. 41 of 1973)

A BILL TO AMEND THE MYSORE HOUSING BOARD ACT, 1962.

WHEREAS it is expedient to amend the Mysore Housing Board Act, 1962 (Mysore Act 10 of 1963) for the purposes hereinafter appearing,

BE it enacted by the Mysore State Legislature in the Twenty-fourth Year of the Republic of India as follows :--

1. SHORT TITLE AND COMMENCEMENT :—(1) This Act may be called the Mysore Housing Board (Amendment) Act, 1973.

(2) It shall come into force at once

2. AMENDMENT OF SECTION-2. – In section 2 of the Mysore Housing Board Act, 1962 Mysore Act 10 of 1963) (hereinafter referred to as the principal Act , after clause g) the following clause shall be inserted namely :—

"(G-i) Housing Commissioner" means the officer appointed under section 16 ,"

3. AMENDMENT OF SECTION 3.— In section 3 of the principal Act,—

(1) in sub-section (2) for the word "twelve", the word "fifteen" shall be substituted ;

(2) in sub-section (3), after the word "Board", the words "including the Chairman" shall be inserted.

4. SUBSTITUTION OF NEW SECTION FOR SECTION .— For section 6 of the principal Act, the following section shall be substituted, namely :—

"6. TERM OF OFFICE AND CONDITIONS OF SERVICE.— (1) The Chairman and every other member shall hold office during the pleasure of the State Government.

(2) Subject to the provisions of sub-section (1), the term of office of the Chairman and every other member shall ordinarily be for three years, but they shall be eligible for re-appointment.

(3) The Chairman and every other member shall receive such allowances as may be prescribed.

(4) The allowances to the Chairman and the other members shall be paid from the funds of the Board and such allowances and other conditions of service shall be such as may be prescribed."

5. AMENDMENT OF SECTION 7.—In section 7 of the principal Act,—

(1) for the words "If a member", the words "If the Chairman or any other member" shall be substituted;

(2) for the words "cease to be a member" the words "cease to be the Chairman or a member" shall be substituted;

6. AMENDMENT OF SECTION 8.—In sub-section (1) of Section 8 of the principal Act, for the words "Any vacancy of a member of the Board" the words "Any vacancy in the office of the Chairman or of a member" shall be substituted.

7. AMENDMENT OF SECTION 10.—In section 10 of the principal Act.—

(i) in sub-section (1), for the words "a Housing Commissioner, one or more Assistant Commissioner and such other officers", the words "and other officers", shall be substituted;

(ii) sub-section (2) shall be omitted

8. AMENDMENT OF SECTION 15.—In section 15 of the principal Act, in sub-sections (1) and (3), for the word "Chairman" the words "Housing Commissioner" shall be substituted.

9. OMISSION OF SECTION 16.—Section 16 of the principal Act shall be omitted.

10. INSERTION OF NEW CHAPTER IIA.—After Chapter II of the principal Act, the following Chapter and sections shall be inserted, namely:—

"CHAPTER III—A.

APPOINTMENT AND POWERS OF HOUSING COMMISSIONER

16. HOUSING COMMISSIONER—The State Government shall appoint an officer not below the rank of a Deputy Commissioner to be the Housing Commissioner for the Board.

(2) The Housing Commissioner shall have all the powers of a major Head of the Department of the State Government under the Mysore Civil Services Rules for the time being in force as respect the officers and servants of the Board.

16A. SALARY OF THE HOUSING COMMISSIONER—The Housing Commissioner shall receive such monthly salary and other allowances payable wholly by the Board as the State Government may from time to time determine.

16B. POWERS OF THE HOUSING COMMISSIONER.—The Housing Commissioner shall exercise such powers as are conferred on him by or under this Act or under any other law for the time being in force.

16C. LEAVE OF ABSENCE.—(1) The State Government may from time to time, in consultation with the Board, grant leave of absence for such period as it thinks fit to the Housing Commissioner.

(2) During any absence on leave or other temporary vacancy in the office of the Housing Commissioner the State Government may appoint a suitable person to act as Housing Commissioner. Every person so appointed shall exercise the powers and perform the duties conferred and imposed by or under this Act or by any other enactment for the time being in force on the Housing Commissioner and shall be subject to the same liabilities, restrictions and conditions to which the said officer is liable.

16 D. CONTRIBUTIONS FROM THE BOARD TOWARDS PENSION AND LEAVE ALLOWANCE OF HOUSING COMMISSIONER —The Board shall, unless specially exempted by the State Government, wholly or in part, contribute towards the pension and leave allowance of the Housing Commissioner to the extent directed by the State Government".

11. INSERTION OF NEW SECTION 70-A.—After section 70 of the principal Act, the following section shall be inserted, namely :—

"70-A. POWER OF BOARD TO REQUIRE RETURNS, REPORTS PRODUCTION OF DOCUMENTS.—(1) The Board may require the Housing Commissioner to furnish it with:—

(a) any return, statement, estimate, statistics or other information regarding any matter appertaining to the administration of this Act;

(b) a report on any such matter; and

(c) a copy of any document in his charge.

(2) The Housing Commissioner shall comply with every requisition without unreasonable delay."

12. AMENDMENT OF SECTION 71.—In section 71 of the principal Act, for the words "The Chairman or any person either generally or specially authorised by the Chairman", the words "The Housing Commissioner or any person either generally or specially authorised by him or the Board" shall be substituted.

1 . AMENDMENT OF SECTION 72. -In secton 72 of the principal Act.

(i) after the words "against the Board", a comma and the words "Housing Commissioner" shall be inserted, and

(ii) after the words "giving the Board", a comma and the words "Housing Commissioner" shall be inserted.

14. AMENDMENT OF SECTION 74.—In section 74 of the principal Act, in clause (a) sub-section (2), for the words ' of members" the words " of the chairman and other members " shall be substituted.

15 AMENDMENT OF SECTION 81.—In section 81 of the principal Act, after the words " all members", the words " the Housing Commissioner " shall be inserted.

16. INSERTION OF NEW SECTION 83A.—After section 83 of the principal Act, the following section shall be inserted, namely :—

"83A. DELEGATION OF POWERS.—(1) The State Government may, by notification, delegate to the Housing Commissioner, such of the powers of the Board under this Act except the power to make regulations under section 76 or bye-laws under section 77, subject to such restrictions and conditions, as may be specified in the notification."

17. SUBSTITUTION OF NEW SECTION FOR SECTION 85.—For section 85 of the principal Act, the following section shall be substituted, namely :—

"85. REVISION BY THE STATE GOVERNMENT.—The State Government may call for the records of any proceedings of the Board, the Housing Commissioner or any officer subordinate to the Board, for the purpose of satisfying itself as to the correctness, legality or propriety of any order or proceeding and may pass such order with respect thereto as it thinks fit."

STATEMENT OF OBJECTS AND REASONS

In order to ensure better implementation of Mysore Housing Board Act, 1962, it is considered necessary to amend the Act, providing that—

(i) the number of members of the Board be increased to 15 from 12,

(ii the Chairman and other members shall hold office during the pleasure of the State Government instead of for three years;

(iii) the Housing Commissioner be appointed by the State Government instead of by the Board and invested with the powers of a Major Head of Department;

(iv) the Board's powers may be delegated to him, and

(v) investing revisional powers with the State Government in respect of certain matters.

Hence this Bill.

FINANCIAL MEMORANDUM

1. The allowances of the Chairman and other members of the Mysore Housing Board and also the salary of the Housing Commissioner are payable out of the funds of the Board.

2 The Bill does not involve any expenditure from the Consolidated Fund of the State.

MEMORANDUM REGARDING DELEGATED LEGISLATION.

CLAUSE 4.—Sub-sections (3) and (4) of the proposed section 6 empowers the State Government to prescribe by rules, the allowances payable to the Chairman and other members of the Board and also the conditions of service of the Chairman and other members.

CLAUSE 15.—Section 83A Sought to be inserted by this clause empowers the State Government to delegate by notification to the Housing Commissioner such of the powers of the Board under the Act except the power to make Regulations under section 76 or the by-laws under section 77, subject to such restriction and conditions as may be specified in the said notification.

The proposed delegation of legislative power is of a normal character.

B. BASAVALINGAPPA,

TE. HANUMANTAPPA
Secretary

WD 4 – GBPC – 550 – 26-4-74.

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 29th August 1973 Bhadrapada 7, 1895-S.E.

The House met in the Assembly Chamber, Vidhana Soudha, at one of the Clock.

MADAM SPEAKER (Smt. K. S. Nagarathnamma) in the Chair.

OBITUARY REFERENCE

MADAM SPEAKER.—*Re : Demise of Sri B. Y. Neele Gowda* :—I regret to make a reference to the sad demise of Sri B. Y. Neele Gowda, a former member of this House on 26th August 1973.

I am sure the house will join me in expressing our sense of sorrow on the passing away of Sri B. Y. Neele Gowda.

I request the members to stand in silence for a minute as a mark of respect to the deceased.

(The members stood in silence for a minute as a mark of respect to the departed soul).

Starred Questions

(TO WHICH ORAL ANSWERS WERE GIVEN)

TESTING OF CLAY FOUND IN HOSANAGAR FOR INDUSTRIAL USE

6. SRI S. M. SHEERNALY CHANDRASHEKHAR (Hosanagar.)—

Will the Minister for Industries be pleased to state :—

(*a*) whether the Joint Director of the Rural Industries Project visited 'Hosanagar' along with some officials during 1972 ;

(Sri S. M. Sheeranaly Chandrasekhar)

(*b*) whether he had collected clay sample from the area ;

(*c*) whether he has submitted any report to the Government ;

(*d*) whether the clay sample was sent to any laboratory for testing ;

(*e*) if so, the result of testing the clay sample ?

(SRI S. M. KRISHNA).—(MINISTER FOR INDUSTRIES)

(*a*) Yes
(*b*) Yes
(*c*) No

(*d*) The clay was sent to the Ceramic Chemist of the Department by the Joint Director.

(*e*) The Ceramic Chemist has later informed that the clay is not suitable for any industrial use.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : ತಾವು ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಶಾಸಕರ ಕೋರಿಕೆ ಮೇರೆಗೆ ಅವರು ಬಂದು ಅಲ್ಲಿ ನೋಡಿದಾಗ ಆ ಬಗ್ಗೆ ಶಾಸಕರಿಗೂ ಮತ್ತು ಸರ್ಕಾರಕ್ಕೂ ಮಾನ್ಯ ಸಚಿವರು ಪತ್ರ ಬರೆಯುತಕ್ಕಂಥಾದ್ದು ಸತ್ ಸಂಪ್ರದಾಯವಲ್ಲವೇ ಸ್ವಾಮಿ ?

‡ಶ್ರೀ ಎಸ್. ಎಂ. ಕೃಷ್ಣ : ಶಾಸಕರು ಪತ್ರಗಳನ್ನು ಸಚಿವರಿಗೆ ಏನಾದರೂ ಬರೆದರೆ ಅದಕ್ಕೆ ಉತ್ತರಗಳನ್ನು ಒದಗಿಸುವುದು ಸತ್ ಸಂಪ್ರದಾಯ. ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಹೇಳುವುದಾದರೆ 9-6-1972ರಲ್ಲಿ ಜಾಯಿಂಟ್ ಡೈರೆಕ್ಟರ್‌ರವರು ಹೊಸನಗರಕ್ಕೆ ಹೋಗಿ ಅಲ್ಲಿಯ ಟೌನ್ ಮುನಿಸಿಪಲ್ ಅಧ್ಯಕ್ಷರು ಮತ್ತು ಇತರರೊಂದಿಗೆ ಬೇಟಿ ಮಾಡಿ ಅಲ್ಲಿ ಸಿಗತಕ್ಕಂಥ ಕ್ಲೇಯು ಯಾವುದಾದರೂ ಒಂದು ಉದ್ಯಮಗಳಿಗೆ ಉಪಯೋಗಿಸಲಿಕ್ಕೆ ಬರುತ್ತದೆಯೇ ಅನ್ನುವ ವಿಚಾರದಲ್ಲಿ ಅವರೊಂದಿಗೆ ಚರ್ಚೆ ಮಾಡಿದ್ದಾರೆ. ಅನಂತರ ಸರ್ಕಾರಕ್ಕೆ ಒಂದು ವರದಿಯನ್ನೂ ಸಹ ಕೊಟ್ಟಿದ್ದಾರೆ. ಸೆರಮಿಕ್ ಕೆಮಿಸ್ಟ್‌ರವರ ಮಾಡಿರತಕ್ಕಂಥ ಪರೀಕ್ಷೆ ಮತ್ತು ಸಂಶೋಧನೆಗಳ ಪ್ರಕಾರ ಅಲ್ಲಿ ಸಿಗತಕ್ಕಂಥ ಕ್ಲೇ ಯಾವ ಉದ್ಯಮಕ್ಕೂ ಉಪಯೋಗಿಸಲಿಕ್ಕೆ ಸಾಧ್ಯವಿಲ್ಲ ಎಂದು ಅಭಿಪ್ರಾಯ ಕೊಟ್ಟಿದ್ದಾರೆ.

‡ Asterisk indicate that remarks or speeches have not been revised by the member Concerned.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : ಅದರ ನಂತರ ವಿಜಯನಗರ ಸ್ಟೀಲ್ ಪ್ಲಾಂಟ್ ಎಕ್ಸ್‌ಪರ್ಟ್ ಅದ ಶ್ರೀ ಅಯ್ಯರ್‌ರವರು ಪುನಃ ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ಸಿಗತಕ್ಕಂಥ ಕ್ಲೇ ಮತ್ತು ಖನಿಜಗಳು ವಿಜಯನಗರ ಸ್ಟೀಲ್ ಪ್ಲಾಂಟ್‌ಗೆ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಅ ವರದಿ ಏನಾದರೂ ತಮಗೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರು ಕಳೆದ ಅಧಿವೇಶನದಲ್ಲಿ ಈ ಪ್ರಶ್ನೆ ಹಾಕಿದ ಮೇಲೆ ನಾವು ಮತ್ತೊಬ್ಬ ಎಕ್ಸ್‌ಪರ್ಟ್ ಅನ್ನು ಅಲ್ಲಿಗೆ ಕಳುಹಿಸಿದ್ದೇವೆ. ಅವರ ವರದಿ ಇನ್ನೂ ಸರಕಾರವನ್ನು ಮುಟ್ಟಿಲ್ಲ.

SHIFTING OF BANGALORE RACE COURSE TO JAKKUR

SRI K. R. SRINIVASULU NAYUDU (Shanthinagar).—

23. (19) Will the Minister for Finance be pleased to state :—

(*a*) whether the proposal to shift the present Bangalore Race Course to Jakkur has been sanctioned by Government ; if not the reasons for the delay ;

(*b*) whether there is any plan or a proposal to construct a Super market on the model of the Cannaught Circle in New Delhi in Bangalore Race Course ground after shifting as the present City market and Russel market are small or un-hygienic and congested ?

SRI M. Y. GHORPADE.—Minister for Finance

(*a*) The proposal was sanctioned in 1968, but was dropped, on reconsideration in 1970.

(*b*) Does not arise

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು : ಸ್ವಾಮಿ, (ಅ) ಗೆ ಉತ್ತರವಾಗಿ "The proposal was sanctioned in 1968, but was dropped, on reconsideration in 1970" ಎಂದು ಹೇಳಿದ್ದೀರಿ. ಹಿಂದೆ 1968 ರಲ್ಲಿ ಇದು ಯಾವ ಕಾರಣದಿಂದ ಸ್ಯಾಂಕ್ಷನ್ ಆಗಿತ್ತು ? ಮತ್ತೆ 1970 ರಲ್ಲಿ ಇದನ್ನು ಯಾವ ಕಾರಣದಿಂದ ನೀವು ಕ್ಯಾನ್ಸಲ್ ಮಾಡಿದ್ದೀರಾ ? ಇದರ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ:—ರೇಸ್‌ಕೋರ್ಸ್ ಶಿಫ್ಟ್ ಮಾಡುವ ವಿಚಾರ 1964ರಲ್ಲಿ ಬಂತು. ಆ ಕಾಲಕ್ಕೆ ಒಂದು ಕಮಿಟಿ ಮಾಡಿ ಅದಕ್ಕೆ ಫೈನಾನ್ಸ್ ಮಿನಿಸ್ಟರು ಚೇರ್‌ಮನ್ ಆಗಿದ್ದರು, ಆ ಕಮಿಟಿಯವರು ಕೂಲಂಕುಷವಾಗಿ ವಿಚಾರ ಮಾಡಿ ಅದರಲ್ಲಿ ಫೈನಾನ್ಸಿಯಲ್ ಇಂಪ್ಲಿಕೇಷನ್ಸ್ ಏನು ಬರುತ್ತದೆ ಎಂದು ವರದಿ ಕೊಡಬೇಕೆಂದು ಮಾಡಿದ್ದರು ಅದಾದ ಮೇಲೆ 1968ರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಹಣಕಾಸಿನ ಮಂತ್ರಿಗಳಾಗಿದ್ದಾಗ ಇನ್ನೊಂದು ಕಮಿಟಿ ಮಾಡಿದರು. ಆ ಕಮಿಟಿಯವರು ರೇಸ್‌ಕೋರ್ಸನ್ನು ಶಿಫ್ಟ್ ಮಾಡಬೇಕು. ರೇಸ್‌ಕೋರ್ಸನ್ನು ಶಿಫ್ಟ್ ಮಾಡಬೇಕಾದರೆ ಜಕ್ಕೂರಿನಲ್ಲಿ ಇರತಕ್ಕ ಫ್ಲೈಯಿಂಗ್ ಸ್ಕೂಲನ್ನು ಈಗ ಬೆಂಗಳೂರು ಯೂನಿವರ್ಸಿಟಿಯಿರುವ ಕಡೆಗೆ ಶಿಫ್ಟ್ ಮಾಡಬೇಕೆಂದು 1968ರಲ್ಲಿ ಅಭಿಪ್ರಾಯ ಕೊಟ್ಟರು. ಆದರೆ ಇದು 5 ವರ್ಷಗಳಲ್ಲಿ ಮಾಡಬೇಕೆಂದು ಅಭಿಪ್ರಾಯಪಟ್ಟರು. ಅನಂತರ ಇದು ಕೇಂದ್ರ ಸರ್ಕಾರದ ಮುಂದೆ ಹೋಗಬೇಕೆಂದು ಹೇಳಿದಾಗ ಆಗ ಕೇಂದ್ರ ಸರಕಾರದವರು ಇದನ್ನು ಶಿಫ್ಟ್ ಮಾಡಬೇಕಾದರೆ ಜಾಸ್ತಿ ಖರ್ಚು ಮಾಡಬೇಕೆಂದು ಕಾಣುತ್ತದೆ ಎಂದು ಸೂಚನೆ ಕೊಟ್ಟರು ಎಂದು ಕಾಣುತ್ತದೆ. ಏನೇ ಆಗಲಿ 1969ರಲ್ಲಿ ಪುನಃ ಪರಿಶೀಲನೆ ಮಾಡಿ ಅದನ್ನು ಹಾಗೆಯೇ ಕೈಬಿಟ್ಟರು. ಇದಕ್ಕೆ ಕಾರಣವಾದರೂ ಇಷ್ಟೆ. ಇದನ್ನು ಶಿಫ್ಟ್ ಮಾಡುವುದರಿಂದ ಜಾಸ್ತಿ ಖರ್ಚಾಗುತ್ತದೆ. ಚಕ್ಕೂರಿನಿಂದ ಫ್ಲೈಯಿಂಗ್ ಸ್ಕೂಲ್ ಶಿಫ್ಟ್ ಮಾಡಬೇಕಾದರೆ 2 ಕೋಟಿ ರೂಪಾಯಿ ಬೇಕಾಗುತ್ತದೆ ಮತ್ತೆ ಖರ್ಚುಗಳೆಲ್ಲಾ ಸೇರಿ ಸುಮಾರು ಎರಡೂವರೆ ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಈ ಸಮಯದಲ್ಲಿ ಇಷ್ಟು ಖರ್ಚು ಮಾಡುವುದು ಸರಿಯಲ್ಲವೆಂದು 1968ರಲ್ಲಿ ಆ ತೀರ್ಮಾನವನ್ನು ಕೈಬಿಟ್ಟರು. ಮುಖ್ಯವಾಗಿ ಹಣಕಾಸಿನ ದೃಷ್ಟಿಯಿಂದ ಜಾಸ್ತಿ ಖರ್ಚು ಆಗುತ್ತದೆ ಎಂದು ಮತ್ತು ಓಪನ್‌ಸ್ಪೇಸ್ ಇರಲಿ ಎಂದು ಇದನ್ನು ಕೈಬಿಟ್ಟರು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು: ಸ್ವಾಮಿ ನನಗೆ ಗೊತ್ತಿದ್ದ ಹಾಗೆ ಈ ಶಿಫ್ಟ್ ಮಾಡುವ ವಿಚಾರ ಹಣಕಾಸಿನ ವಿಷಯಕ್ಕಾಗಿ ಅಲ್ಲ, ಕೇವಲ ಪ್ರೆಷರ್ ಒಂದುದರಿಂದ ಇದನ್ನು ಕೈಬಿಟ್ಟಿರುವುದು ಎಂದು ಹೇಳುತ್ತೇನೆ. ಈಗ ಡೆಲ್ಲಿಯಲ್ಲಿರುವಂತೆ ಕನ್ನಾಟ್ ಸರ್ಕಲ್‌ನ ಮಾದರಿಯಂತೆ ಒಂದು ಮಾರ್ಕೆಟನ್ನು ಮಾಡಿದರೆ ಹೆಚ್ಚು ಹಣ ಬರುತ್ತದೆ, ಬಹಳ ಆದರ್ಶವಾಗಿ ನಡೆಸಬಹುದೆಂದು ಹೇಳುತ್ತೇನೆ. ಈ ರೇಸ್‌ಕೋರ್ಸ್ ನಗರದ ಮಧ್ಯೆಯಿರುವುದರಿಂದ ಅನೇಕ ಜನ ಅವರು ತಮ್ಮ ಜೀವಮಾನವನ್ನು ಹಾಳು ಮಾಡಿಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ಯಾವ ರೀತಿ ಕಮಿಟಿ ಮಾಡಿದ್ದರು ಅದೇ ರೀತಿ ತಾವು ಒಂದು ಕಮಿಟಿ ಮಾಡಿ ಈ ರೇಸ್‌ಕೋರ್ಸನ್ನು ಶಿಫ್ಟ್ ಮಾಡುವ ವಿಷಯದಲ್ಲಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಇದನ್ನು ಶಿಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇದಕ್ಕೆ ತಮ್ಮ ಅಭಿಪ್ರಾಯವೇನು ಹೇಳಬೇಕು.?

ಶ್ರೀ ಎಂ. ವೈ. ಘೋರ್ಪಡೆ: ಇದು ಸಣ್ಣ ವಿಷಯವಲ್ಲ. ರೇಸ್ ಕೋರ್ಸ್ ಷಿಫ್ಟ್ ಮಾಡುವ ವಿಚಾರ ಸರ್ಕಾರದ ಮುಂದೆ ಸದ್ಯಕ್ಕೆ ಇಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು, ಕೆಲವು ಅಂಶಗಳನ್ನು ಗಮನಿಸಬೇಕು ಎಂದು ಮಾನ್ಯ ಸದಸ್ಯರಿಗೆಲ್ಲಾ ಅಭಿಪ್ರಾಯ ಇದ್ದರೆ ಇದನ್ನು ಚರ್ಚೆ ಮಾಡೋಣ ಇಷ್ಟೊಂದು ದುಡ್ಡು ಖರ್ಚು ಮಾಡಿ ಇದನ್ನು ಷಿಫ್ಟ್ ಮಾಡುವ ಯೋಚನೆ ಸದ್ಯಕ್ಕೆ ಸರಕಾರದ ಮುಂದೆ ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಮ್ಮ ಸರ್ಕಾರದ ನೀತಿ ಬಹಳ ಕ್ರಾಂತಿ ಕಾರಕವಾದ ನೀತಿ. ಆದುದರಿಂದ ತಾವು ಕೇಂದ್ರ ಸರ್ಕಾರದ ಮೇಲೆ ನಿಮ್ಮ ಪ್ರತಾಪಬೀರಿ ಈ ರೇಸ್‌ಕೋರ್ಸ್‌ನ್ನು ಜಕ್ಕೂರಿಗೆ ಷಿಫ್ಟ್ ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ : ರೇಸ್‌ಕೋರ್ಸ್ ಷಿಫ್ಟ್ ಮಾಡುವುದಕ್ಕೂ ನಮ್ಮ ಕ್ರಾಂತಿಕಾರಕವಾದ ನೀತಿಗೂ ಏನು ಸಂಬಂಧವಿಲ್ಲ.

ಶ್ರೀ ಬಿ. ಬೈರಪ್ಪಾಜಿ ; ಶ್ರೀಮಾನ್ ಶ್ರೀನಿವಾಸಲು ನಾಯಿಡುರವರು ಹೇಳುವುದು ಏನು ಎಂದರೆ ಇದು ಪಟ್ಟಣದ ಮಧ್ಯೆ ಇರುವುದರಿಂದ ಜನಗಳಿಗೆ ಹತ್ತಿರವಾಗುವುದರಿಂದ ಪ್ರತಿಯೊಬ್ಬರೂ ಈ ಕುದುರೆ ಜೂಜಿಗೆ ಹೋಗಲು ಅನು ಕೂಲವಿರುವುದರಿಂದ ಜನಗಳು ಹಾಳಾಗುತ್ತಾರೆ ಎಂದು ಒಳ್ಳೆಯ ಅಭಿಪ್ರಾಯ ದಿಂದ ಈ ಸಲಹೆಯನ್ನು ಕೊಟ್ಟಿದ್ದಾರೆ. ಇದನ್ನು ಸಕಾಲದಲ್ಲಿ ಯೋಚನೆ ಮಾಡಿ ಇದನ್ನು ಷಿಫ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಈಗಲೂ ಕೂಡ ಇದನ್ನು ಪುನರ್‌ವಿಮರ್ಶೆ ಮಾಡಿ ಇದನ್ನು ಬೇರೆ ಕಡೆಗೆ ಬದಲಾಯಿಸುವುದಕ್ಕೆ ಸಾಧ್ಯವಾಗುವ ರೀತಿ ಯೋಚನೆ ಮಾಡಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ —ಇದನ್ನು ಷಿಫ್ಟ್ ಮಾಡಬೇಕೆಂದು ಹೇಳಿದರೆ ರೇಸ್‌ಕೋರ್ಸ್‌ನವರು ಮತ್ತೆ ಪುನಃ ಗೌರ್ನಮೆಂಟ್ ಗ್ಯಾರಂಟಿ ಕೇಳುವುದಕ್ಕೆ ಬರುತ್ತಾರೆ. ಇದನ್ನು ಷಿಫ್ಟ್ ಮಾಡಬೇಕೆಂದು ಹಿಂದೆ ಯೋಚನೆ ಮಾಡಿದಾಗ ಎರಡೂವರೆ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಅಂದಾಜು ಮಾಡಿದ್ದರು. ಈಗ ಆದರೆ ಅದರ ಜೊತೆಗೆ ಮತ್ತೆ ಮೂರು ನಾಲ್ಕು ಲಕ್ಷವಾದರೂ ಬೇಕಾಗುತ್ತದೆ. ಇವೊತ್ತಿನ ದಿವಸದ ಪರಿಸ್ಥಿತಿಯಲ್ಲಿ ಅವಶ್ಯಕವಾದ ಕೆಲಸ ಕಾರ್ಯಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಹಣದ ಮುಗ್ಗಟ್ಟು ಇರುವುದರಿಂದ ಇಂಥ ಒಂದು ಸನ್ನಿವೇಶದಲ್ಲಿ ಮಾನ್ಯ ಸದಸ್ಯರೇ ಇದನ್ನು ಒಪ್ಪಲಿಕ್ಕಿಲ್ಲ

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು:—ಮಾನ್ಯ ಮಂತ್ರಿಗಳು ಹಣಕಾಸಿನ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದಾರೆ. ಆದ್ದರಿಂದ ಇದಕ್ಕೆ ಒಂದು ಕಮಿಟಿ ಮಾಡಿ ಅದರಲ್ಲಿ ಒಂದು ಸಬ್ ಕಮಿಟಿಯನ್ನು ಅಪಾಯಿಂಟ್ ಮಾಡಿ ಇಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಮಾಡಿದರೆ ಸರ್ಕಾರಕ್ಕೆ 10 ಕೋಟಿ ರೂಪಾಯಿ ಆದಾಯ ಬರುತ್ತದೆ. ಇಂತಹ ಒಂದು ಮಾರ್ಕೆಟ್ ಪಟ್ಟಣದ ಮಧ್ಯದಲ್ಲಿ ಇರಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

SRI M. Y. GHORPADE.—As I said the Government is prepared to consider any suggestions in this regard. The proposal involves financial outlay and this is the question standing before the Government as an important question.

ಶ್ರೀ ಎ. ವಿ. ಮುನಿಸ್ವಾಮಿ.—ರೇಸ್‌ಕೋರ್ಸ್‌ನ್ನು ಷಿಫ್ಟ್ ಮಾಡಿ ಅದು ನಗರಕ್ಕೆ ದೂರವಾದರೆ ಬಡಬಗ್ಗರಿಗೆ ಅಲ್ಲಿಗೆ ಹೋಗುವುದಕ್ಕೆ ಟ್ರಾನ್ಸ್‌ಪೋರ್ಟು ಇನ್ನು ಇತರ ಖರ್ಚುಗಳು ಜಾಸ್ತಿಯಾಗುತ್ತವೆ, ಇದರಿಂದ ಬಡವರಿಗೆ ಸಹಾಯ ಮಾಡಿದಂತಾಗುವುದಿಲ್ಲ, ಆದರಿಂದ ಇನ್ನೂ ತೊಂದರೆಯೇ ಹೊರತು ಅನುಕೂಲ ವಾಗುವುದಿಲ್ಲ ಅಲ್ಲವೇ ಸ್ವಾಮಿ?

ಶ್ರೀ ಎಂ. ವೈ. ಘೋರ್ಪಡೆ : ಇದನ್ನು ದೂರ ಷಿಫ್ಟ್ ಮಾಡಿದರೆ ಟ್ರಾನ್ಸ್‌ಪೋರ್ಟ್ ಖರ್ಚು ಜಾಸ್ತಿಯಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳುವುದು ಒಂದು ವಿಚಾರ ಮಾಡಬೇಕಾದ ಅಂಶವಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ. —ಈ ಜೂಜು ಕಟ್ಟೆಯನ್ನು ತೆಗೆದು ಸ್ವಲ್ಪಕಾಲ ನಿವೇಶವನ್ನು ಪಟ್ಟಣದ ಮಧ್ಯೆ ಇಡುವುದಕ್ಕೆ ಪ್ರಯತ್ನ ಪಡುತ್ತೀರಾ?

ಶ್ರೀ ಎಂ. ವೈ. ಘೋರ್ಪಡೆ : ಇದು ಮುಖ್ಯವಾದ ವಿಷಯ. We should preserve this area as a lung space and this is one of the important factors.

DEVELOPMENT OF TOURISM

20. SRI K.R. SRINIVASULU NAYUDU (Shanthinagar).—

Will the Minister for Labour be pleased to state:—

(*a*) the details of the scheme and the future programme before the Government for the Development of Tourism in the State;

(b) the amount of revenue the State is getting from Tourism;

(c) whether any attractive literature has been published by Government in this connection ;

(d) if so, whether detailed information about the same would be placed on the Table ;

(e) whether there is any proposal before Government for constructing a Modern Tourist Hotels at Halebid and Belur for the benefit of tourists as there are no facilities there ;

(f) whether it has come to notice of the Government that the Temple at Halebid has not been provided with electricity inside the temple, with the result that lot of inconvenience is caused to the tourist to see the granite carvings inside the Temple ?

SRI AZEEZ SAIT (Minister for Labour).—

(a) Please see Statement I placed on the Table of the House.†

(b) Revenue from Tourism is realised in more than one way and by more than one Department. Therefore it is not possible to give the particulars of Revenue earned on account of Tourism in the State.

(c) Yes

(d) Details are given in Statement II placed on the Table of the House The publications are available with the Department of Information and Tourism. They are made available to Tourists, Home and Foreign.

(e) No
(f) Yes

---

† Copy placed in the Mysore Legislative Library vide No. 4/ dated 29-8-'73.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು : ನನ್ನ ಪ್ರಶ್ನೆಗೆ ಉತ್ತರ ಹೇಳುವಾಗ ಒಂದು ಇಲಾಖೆಯಲ್ಲಿ ಎಷ್ಟು ಆದಾಯ ಮತ್ತು ಖರ್ಚು ಎಷ್ಟು ಆಗುತ್ತಾ ಇದೆ ಎಂದು ಹೇಳುವುದಕ್ಕೆ ಪ್ರವಾಸೋದ್ಯಮದಿಂದಾಗಿ ಒಂದು ಅಥವಾ ಹೆಚ್ಚು ಸಂಖ್ಯೆಯ ಬಾಬುಗಳಿರುವುದರಿಂದ, ಒಂದಕ್ಕಿಂತ ಹೆಚ್ಚು ಇಲಾಖೆಗಳಿಂದ ಸರ್ಕಾರದವರಿಗೆ ಆದಾಯ ಸಂದಾಯವಾಗುವುದರಿಂದ ಅದನ್ನು ಎಷ್ಟು ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ್ದೀರಿ ಆದ್ದರಿಂದ ಒಂದು ಇಲಾಖೆಯಲ್ಲಿ ಎಷ್ಟು ಆದಾಯ ಮತ್ತು ಎಷ್ಟು ಖರ್ಚು ಎಂದು ಹೇಳುವುದಕ್ಕೆ ಗೊತ್ತಾಗದೆ ಇದ್ದರೆ ಹೇಗೆ ಸ್ವಾಮಿ ?

ಶ್ರೀ ಅಜೀಜ್ ಸೇಟ್ : ನಾನು ನಿಜವಾಗಿ ಹೇಳುವುದಾದರೆ ಟೂರಿಸಮ್ ಡಿಪಾರ್ಟ್‌ಮೆಂಟ್ ಬಗ್ಗೆ ನನಗೂ ಸಮಾಧಾನವಾದ ಅಭಿಪ್ರಾಯವಿಲ್ಲ ಎರಡು ಮೂರು ಇಲಾಖೆಗಳಿಂದ ಈ ಟೂರಿಸಮ್ ಕಾರ್ಯಗಳನ್ನು ನಡೆಸುತ್ತಿದ್ದಾರೆ ಒಂದು ಟೂರಿಸಮ್ ಡಿಪಾರ್ಟ್‌ಮೆಂಟ್, ಮತ್ತೆ ಇನ್ನೊಂದು ಫಾರೆಸ್ಟ್ ಇಲಾಖೆಯವರು ಟೂರಿಸ್ಟ್ ಹೋಂ ಎಂದು ಅವರು ನೋಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಯಾವ ಇಲಾಖೆಯಿಂದ ಎಷ್ಟೆಷ್ಟು ರೆವಿನ್ಯೂ ಬರುತ್ತದೆ ಎಂದು ನಿಗದಿಯಾಗಿ ಹೇಳುವುದಕ್ಕೆ ಬರುವುದಿಲ್ಲ.

ಆದ್ದರಿಂದ ಟೂರಿಸ್ಟ್ ಡಿಪಾರ್ಟ್‌ಮೆಂಟ್ ಅನ್ನು ಬೈಫರ್ಕೇಟ್ ಮಾಡಬೇಕು ಎನ್ನುವ ನಿರ್ಣಯವನ್ನು ನಾವು ತೆಗೆದು ಕೊಂಡಿದ್ದೇವೆ. ಈಗ ಅದು ಕ್ಯಾಬಿನೆಟ್ ಮುಂದೆಯು ಇದೆ. ಟೂರಿಸ್ಟ್ ಡಿಪಾರ್ಟ್‌ಮೆಂಟ್ ಬೇರೆ ಆಗಿದ್ದರೆ, ತಾವು ಕೇಳಿದ ಪ್ರಶ್ನೆಗೆ ತಕ್ಷಣ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು : ಟೂರಿಸಂನಿಂದ ಫಾರಿನ್ ಎಕ್ಸ್‌ಚೇಂಜ್ ಬಹಳ ಬರುತ್ತದೆ. ನಮ್ಮ ಸಂಸ್ಥಾನದಲ್ಲಿ ಇದರ ಅಭಿವೃದ್ಧಿಗೋಸ್ಕರ ಏನಾದರೂ ಯೋಜನೆ ಇದೆಯೇ ? ಮತ್ತು ಇದರ ಬಗ್ಗೆ ಡಿಪ್ಲಮೋ ಕೋರ್ಸನ್ನು ಪ್ರಾರಂಭ ಮಾಡುವ ಆಲೋಚನೆ ಏನಾದರೂ ಇದೆಯೇ ?

ಶ್ರೀ ಅಜೀಜ್ ಸೇಟ್ : ನಿನ್ನೆ ಮೊನ್ನೆ ಪತ್ರಿಕೆಯಲ್ಲಿ ತಾವು ನೋಡಿರಬಹುದು, ಇಂಟರ್‌ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಟೂರಿಸಂ ಅನ್ನು ನಮ್ಮ ರಾಜ್ಯದಲ್ಲಿ ಇಡಬೇಕು ಎಂದು ಕೇಂದ್ರ ಸರ್ಕಾರದ ಮಂತ್ರಿಗಳಾದ ಡಾ. ಕರಣ್‌ಸಿಂಗ್ ಅವರು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇಂಟರ್‌ನ್ಯಾಷನಲ್ ಟೂರಿಸಂ ಇನ್ಸ್‌ಟಿಟ್ಯೂಟ್ ನಮ್ಮ ಬೆಂಗಳೂರಿಗೆ ಬಂದರೆ, ಅದರಿಂದ ಡಿಪ್ಲಮೋ ಇನ್ ಟೂರಿಸಂ ಪಡೆಯುವುದಕ್ಕೆ ಅವಕಾಶವಾಗುತ್ತದೆ ಮತ್ತು that would be first of its kind in the whole of Asia.

SRI K. R. SRINIVASALU NAIDU :- There is ample scope for the development of tourism in a model State like Mysore,

ಸತತ ಪ್ರಯತ್ನವನ್ನು ಇದರ ಬಗ್ಗೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೀರಾ?

ಶ್ರೀ ಅಜೀಜ್‌ಸೇಟ್: ನಾವು ಪ್ರಯತ್ನ ಪಡುವಂಥ ವಿಷಯ ಇದರಲ್ಲಿ ಏನೂ ಇಲ್ಲ. ಎಲ್ಲಾ ಪ್ರಯತ್ನ ಮಾಡಿ ಮುಗಿದಿದೆ. ಇಂಟರ್‌ನ್ಯಾಷನ್ ಇನ್‌ಸ್ಟಿಟ್ಯೂಟ್ ಆಫ್ ಟೂರಿಸಂ ಇಲ್ಲಿಗೆ ಬರಬೇಕು ಎಂದು ತೀರ್ಮಾನವಾಗಿದೆ, ಸರ್ಕಾರದವರು ಇದಕ್ಕೆ 15 ಎಕರೆ ಜಮೀನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅವರು ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ಜಾಗ ಕೊಡ ಬೇಕು ಎಂದು ಕೇಳಿದ್ದಾರೆ. ಅದನ್ನು ಸರ್ಕಾರ ಆಲೋಚನೆ ಮಾಡುತ್ತಿದೆ.

INDUSTRIAL ESTATE IN HOSPET

106. SRI B. SATHYANARAYANA SINGH (Hospet):—
Will the Minister for Industries be pleased to state:—

(*a*) whether it is a fact that an Industrial Estate had been sanctioned to Hospet in 1964;

(*b*) if so, the reasons for not starting the work of the Industrial Estate so far;

(*c*) when the work of the above Industrial Estate will be started;

(*d*) the number of sheds proposed to be constructed in the above Estate?

SRI S. M. KRISHNA, MINISTER FOR INDUSTRIES :—

(*a*) Yes

(*b*) As the land originally proposed for Industrial Estate was taken over by the Tungabhadra Steel Project for their expansion programme, an alternative site had to be selected and acquired. Hence the delay.

(Sri S. M. Krishna)

(*c*) The acquisition proceedings for 1.5 acres of land have been completed recently and action is being taken to take possession of the land. Action. will be taken to start the work soon after possession of the land is taken.

(*d*) Depending on the demand for sheds, it is proposed to take up the construction of 6 to 10 sheds this year.

(ಸಿ) ನಲ್ಲಿ ಕೊಟ್ಟಿರುವ 1.5 ಎಕರೆ ಭೂಮಿ ಎನ್ನುವುದಕ್ಕೆ 15.6 ಎಕರೆ ಎಂದು ತಿದ್ದಿಕೊಳ್ಳಬೇಕು.

ಶ್ರೀ ಬಿ. ಸತ್ಯನಾರಾಯಣ ಸಿಂಗ್ : ನನ್ನ ಪ್ರಶ್ನೆಯ (ಅ) ಮತ್ತು (ಇ) ಗೆ ತಾವು ನಿರ್ಧಿಷ್ಟವಾದ ಉತ್ತರವನ್ನು ಕೊಟ್ಟಿಲ್ಲ. ಈ ವಿಷಯ ಕಳೆದ 9 ವರ್ಷದಿಂದ ಪೆಂಡಿಂಗ್ ಇದೆ. ಈ ಕೆಲಸವನ್ನು ನಿರ್ಧಿಷ್ಟವಾಗಿ ಯಾವಾಗ ಶುರು ಮಾಡುತ್ತೀರಿ ಎಂದು ಕೇಳಿದರೆ, ಅಕ್ವಿಜಿಷನ್ ಕೆಲಸ ಮುಗಿದ ಮೇಲೆ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ, ಈ ವರ್ಷದಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುವ ಸಾಧ್ಯತೆ ಇದೆಯೇ?

ಶ್ರೀ ಎಸ್. ಎಂ. ಕೃಷ್ಣ : ಈ ವರ್ಷದಲ್ಲಿಯೇ ಪ್ರಾರಂಭ ಮಾಡತಕ್ಕಂಥ ಸಾಧ್ಯತೆ ಇದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ : ಈ ಸಾಲಿನಲ್ಲಿ 6-10 ಷೆಡ್ಡುಗಳನ್ನು ಕಟ್ಟುತ್ತೇವೆಂದು ಹೇಳಿದ್ದೀರಿ, ಷೆಡ್ಡುಗಳನ್ನು ಅಸೆಸ್ ಮಾಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಇದರ ಬಗ್ಗೆ ಏನಾದರೂ ಪ್ರಚಾರ ಮಾಡಿದ್ದೀರಾ, ಮತ್ತು ಅರ್ಜಿಗಳನ್ನು ಹಾಕುವುದಕ್ಕೆ ಏನಾದರೂ ಅವಕಾಶ ಮಾಡಿಕೊಟ್ಟಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ: ವಿಜಯನಗರ ಉಕ್ಕಿನ ಕಾರ್ಖಾನೆಯ ದೆಸೆಯಿಂದ ಹೊಸಪೇಟೆ ತಾಲ್ಲೂಕಿನಲ್ಲಿ ಎಷ್ಟು ಇಂಡಸ್ಟ್ರಿಯಲ್ ಷೆಡ್ ಗಳನ್ನು ನಿರ್ಮಾಣ ಮಾಡಬೇಕು ಎನ್ನತಕ್ಕಂಥಾದ್ದು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ. ಈಗ ಅಲ್ಲಿ ಹಾಕತಕ್ಕಂಥ 6-10 ಷೆಡ್ಡುಗಳಿಂದ ಮುಂದೆ ಆಗತಕ್ಕ ಬೆಳವಣಿಗೆಯ ದೃಷ್ಟಿಯಿಂದ ಅದು ಸಮಂಜಸವಾಗಿರುವುದಿಲ್ಲ ಎಂದು ನನ್ನ ಅಭಿಪ್ರಾಯ. ಆದ್ದರಿಂದ ಸರ್ಕಾರದವರು ಇದನ್ನು ತೀವ್ರವಾಗಿ ಪರಿಶೀಲನೆ

ಮಾಡುತ್ತಾರೆ. ಈಗಲೇ ಇಷ್ಟು ಷೆಡ್ಡುಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್ : ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ತಾವು ಹೇಳುತ್ತಿದ್ದೀರಿ, ಈಗಿನ ಒಂದು ಪರಿಸ್ಥಿತಿಯಲ್ಲಿ, ಕಾರ್ಖಾನೆಯು ಆರನೆಯ ಯೋಜನೆಯ ಕೊನೆಗೆ ಬರುವ ಸಂದರ್ಭ ಇದೆ. ಐದನೆಯ ಯೋಜನೆಯಲ್ಲಿ ಸಾಧ್ಯವೇ ಇಲ್ಲ ಎಂದು ಅನೇಕ ಕಡೆ ಕೇಳಿಬರುತ್ತಿದೆ. 10 ವರ್ಷಗಳಿಂದ ಇದನ್ನು ಕಾದು ನೋಡಿದ್ದು ಆಯಿತು. ಇನ್ನೂ 10 ವರ್ಷ ಆಗಿ ಇದನ್ನು ಕೈ ಬಿಟ್ಟರೆ ದೇಶದ ಕೈಗಾರಿಕಾ ಪ್ರಗತಿಗೆ ಧಕ್ಕೆ ಮಾಡಿದಂತಾಗುತ್ತದೆ. ಮೊದಲು ಮಾಡಿದಂಥ ಕಾರ್ಯಕ್ರಮದ ಪ್ರಕಾರ ಕಾರ್ಖಾನೆಯನ್ನು ಕೂಡಲೇ ಪ್ರಾರಂಭ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :—ಮಾನ್ಯ ಸದಸ್ಯರ ನಿರಾಶೆಯನ್ನು ನಾನು ಹಂಚಿಕೊಳ್ಳುವುದಕ್ಕೆ ತಯಾರಾಗಿಲ್ಲ. ಈಗ ತಾನೆ ಕೇಂದ್ರ ಸರ್ಕಾರದವರು ಮತ್ತೆ 40 ಲಕ್ಷ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಜಿಷನ್‌ಗೋಸ್ಕರ ರಿಲೀಸ್ ಮಾಡಿದ್ದಾರೆ. ಅವರು ಈಗಾಗಲೇ ನಮಗೆ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಾಲ್ಕೂವರೆ ಸಾವಿರ ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದೇವೆ. ವಿಜಯನಗರ ಉಕ್ಕಿನ ಕಾರ್ಖಾನೆಗೆ ಸಂಬಂಧಿಸಿದಂತೆ ಈಗ ಲ್ಯಾಂಡ್ ಅಕ್ವಿಜಿಷನ್‌ಗೋಸ್ಕರ 40 ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಒಟ್ಟು ಒಂದು ಕೋಟಿ ರೂಪಾಯಿಗಳನ್ನು ಅಕ್ವಿಜಿಷನ್‌ಗೋಸ್ಕರ ಖರ್ಚು ಮಾಡಿದ್ದೇವೆ ಆದ್ದರಿಂದ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಯ ಕೆಲಸ ಕಾರ್ಯಗಳು ಪ್ರಾರಂಭವಾಗುತ್ತವೆ, ಎನ್ನುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವ ಸಂಶಯವೂ ಇಲ್ಲ

FELLING OF FOREST IN SAGAR DIVISION

125. SRI KAGODU THIMMAPPA (Sagar) :—

Will the Minister for Agriculture and Forests be pleased to state :—

(*a*) the extent of State forest felling in Sagar Division during 1972-73 for raising new plantations ;

(*b*) the estimated quantum of timber and firewood of various categories in the felling area ;

(Sri Kagodu Thimmappa)

(c) whether it is a fact that timber and firewood worth about Rs. lakhs have been destroyed due to fire in the forest area and the number of places where such fire occured ;

(d) if so, the reason for such destruction ; whether it has come to the notice of the Government that the loss is due to non-transportation of the same in right time ?

SRI K. H. PATIL: MINISTER FOR AGRICULTURE AND FORESTS :—

(a) clear felling has been done over 1150 acres for raising plantations during 1973 rains.

Timber logging has been done over 1247 acres for raising the plantations during 1974.

(b) in the area clear felled for 1973 plantations :—

Timber	—	780 Cmtr.
Firewood	....	4300 Tonnes.
Charcoal	....	88000 Bags.

In the 1974 Regeneration area :—

Timber	....	2682 Cmtr.

(c) due to fire on 30th March 1973 in the regeneration areas at two centres (Karadibetta State Forest and Malandur State Forest) 100 logs valued at Rs. 20,000 were lost.

(d) Tenders called for 4 times for the transportation of converted timber were not successful even after wide publicity. Steps were taken to fire trace the timber logs and to post Watchers and Kamagari Guards.

Inspite of the best of efforts 100 logs were lost due to the fire. There has been no loss in the case of the various other regeneration areas

ಶ್ರೀ ಕಾಗೋಡು ತಿಮ್ಮಪ್ಪ : ತಾವು 1974 ನೇ ಸಾಲಿನಲ್ಲಿ ಕಾಡನ್ನು ಬೆಳೆಸುವ ಸಲುವಾಗಿ 1150 ಎಕರೆ ಕಾಡನ್ನು ಕಡಿಯುಲಾಗಿದ್ದಿತು, ಮತ್ತು 1973ನೇ ಸಾಲಿನಲ್ಲಿ 1247 ಎಕರೆ ಕಾಡನ್ನು ಕಡಿಯಲಾಗಿದೆ ಎಂದು ಹೇಳಿದ್ದೀರಿ, ಇದರಲ್ಲಿ ಎಷ್ಟೆಷ್ಟು ಪ್ರದೇಶದಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಲಿಕ್ಕೆ ತಾವು ಆಲೋಚನೆ ಮಾಡಿದ್ದೀರಿ? ಎಷ್ಟು ಪ್ರದೇಶದಲ್ಲಿ ಬೇರೆ ಕಾಡನ್ನು ಬೆಳೆಸಲಿಕ್ಕೆ ಆಲೋಚನೆ ಮಾಡಿದ್ದೀರಿ?

ಶ್ರೀ ಕೆ ಹೆಚ್. ಪಾಟೀಲ್ :—ಎಷ್ಟೆಷ್ಟು ಪ್ರದೇಶದಲ್ಲಿ ಯಾವ ಯಾವ ತರಹದ ಗಿಡಗಳನ್ನು ಹಚ್ಚಲಾಗಿದೆ ಎನ್ನುವ ಬಗ್ಗೆ ಅಂಕೆ ಸಂಖ್ಯೆಗಳು ನನ್ನ ಹತ್ತಿರ ಇಲ್ಲ. ಎರಡು ವರ್ಷದೊಳಗೆ ಗಿಡಗಳನ್ನು ಹಚ್ಚಬೇಕು ಎಂದು ಇದ್ದೇವೆ. ಈ ದೃಷ್ಟಿಯಿಂದ ಅಲ್ಲಿ ನೀಲಗಿರಿ ಗಿಡಗಳನ್ನು ಹಚ್ಚಿದೆ ಎಂದು ಹೇಳಬಲ್ಲೆ.

ಶ್ರೀ ಕಾಗೋಡು ತಿಮ್ಮಪ್ಪ :—ಹೊಸ ಕಾಡನ್ನು ಮಾಡುವ ಉದ್ದೇಶದಿಂದ ಹೇರಳವಾಗಿ ಕಾಡನ್ನು ಕಡಿದಿದ್ದೀರಿ, ಹೊಸ ಕಾಡನ್ನು ಮಾಡುವುದಕ್ಕೆ, ಪ್ರತ್ಯೇಕವಾಗಿ ಕಾಡು ಇಲ್ಲದೆ ಇರತಕ್ಕ ಪ್ರದೇಶ ನಿಮಗ ಸಿಕ್ಕಲಿಲ್ಲವೇ? ಅತ್ಯಂತ ಉತ್ಕೃಷ್ಟವಾದ ಕಾಡನ್ನು ಕಡಿದು ಹೊಸ ಕಾಡನ್ನು ಅಲ್ಲಿ ಬೆಳೆಸುವ ಉದ್ದೇಶ ಏನು ಇತ್ತು?

ಶ್ರೀ ಕೆ. ಹೆಚ್. ಪಾಟೀಲ್ :—ನಮ್ಮ ಪ್ಲಾನ್ ಪ್ರಕಾರ ಪ್ರತಿವರ್ಷ ಇಷ್ಟು ಕಾಡನ್ನು ಉರುವಲಿಗೆ, ಇದ್ದಿಲು ಮಾಡಲಿಕ್ಕೆ ಉಪಯೋಗಿಸಬೇಕು ಎಂದು ಇರುತ್ತದೆ. ಮತ್ತು ಅರಣ್ಯ ಸಂಪತ್ತನ್ನು ಸ್ಟೇಟ್ ಫಿನಾನ್ಸಿನ ಸಲುವಾಗಿ ದೊರಕಿಸಬೇಕು ಎಂದು ಇರುತ್ತದೆ. ಎಲ್ಲೆಲ್ಲಿ ಎಷ್ಟೆಷ್ಟು ಕಾಡನ್ನು ಕಡಿಯಬೇಕು ಎಂಬೂ ಇರುತ್ತದೆ. ಆದರ ಪ್ರಕಾರ ಕಾಡನ್ನು ಕಡಿಯುತ್ತೇವೆ. ಆ ಪ್ರದೇಶದಲ್ಲಿ ಸ್ಯಾಂಡಲ್ ವುಡ್ ಮತ್ತು ನೀಲಗಿರಿ ಗಿಡಗಳನ್ನು ಹಚ್ಚಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :—ಕರಡಿ ಬೆಟ್ಟದ ಕಾಡು, ಮತ್ತು ಮಲಂದೂರು ಕಾಡು ಅತ್ಯಂತ ಎವರ್‌ಗ್ರೀನ್ ಕಾಡುಗಳು. ಕೇವಲ ನೀಲಗಿರಿ ಗಿಡಗಳನ್ನು ಬೆಳೆಸಲು ಕಾಡನ್ನು ಕಡಿಯಲು ಕಾರಣ ಇರಲಿಲ್ಲ. ಇಂಥ ಕಾಡನ್ನು ಕಡಿಯಬೇಕಾದರೆ ಬೇರೆ ಏನೋ ಕಾರಣ ಇರಬಹುದು ಅಲ್ಲವೇ?

ಶ್ರೀ ಕೆ. ಹೆಚ್. ಪಾಟೀಲ್ :— ನಾವು ಅಲ್ಲಿ ಕೇವಲ ದಟ್ಟವಾದ ಕಾಡು ಇದೆಯೆಂದು ಅದನ್ನು ಹಾಗೆ ಬಿಡುವುದಕ್ಕಾಗುವುದಿಲ್ಲ. ಅಲ್ಲಿ ನೀಲಗಿರಿ ಗಿಡ ಒಂದೇ ಹಚ್ಚಿಲ್ಲ, ಟೀಕ್ ಸಾಫ್ಟ್‌ವುಡ್‌ಗಳನ್ನೂ ಹಚ್ಚಲಾಗಿದೆ. ಅಲ್ಲಿ ನಮ್ಮ ಪ್ಲಾನ್ ಪ್ರಕಾರ ಗಿಡಗಳನ್ನು ಹಚ್ಚಲಾಗಿದೆಯೇ ವಿನಹ ಅದರಲ್ಲಿ ಯಾವ ಬದಲಾವಣೆಯನ್ನೂ ಮಾಡಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಈ ರೀತಿ ದಟ್ಟವಾದ ಅರಣ್ಯವನ್ನು ನಾಶಮಾಡುವುದರಿಂದ ಮಲೆನಾಡಿನ ಅರಣ್ಯ ಸಂಪತ್ ಸಂಪೂರ್ಣವಾಗಿ ನಾಶವಾಗಿ ಮಳೆ ಕಡಿಮೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ನೀಲಗಿರಿ ಗಿಡಗಳನ್ನು ಹಚ್ಚುವುದರಿಂದ ಭೂಮಿಯ ಒಳಗಡೆ ಇರತಕ್ಕ ಜಲ ಇಂಗಿ ಹೋಗುತ್ತದೆ ಎಂದು ಜನ ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಹೆಚ್. ಪಾಟೀಲ್ :—ಅರಣ್ಯವನ್ನು ದಟ್ಟವಾಗಿ ಅಭಿವೃದ್ಧಿಗೊಳಿಸುವಂಥ ಯೋಜನೆ ನಮ್ಮಲ್ಲಿದೆ. ಆ ಪ್ರದೇಶದಲ್ಲಿ ಅರಣ್ಯ ನಾಶವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅರಣ್ಯದಿಂದ ಅನೇಕ ತರಹ ಉತ್ಪನ್ನ ಪಡೆಯಲಿಕ್ಕೆ ಈಗಿನ ಸರ್ಕಾರ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ ಮತ್ತು ತಮ್ಮ ಸಹಕಾರವನ್ನು ಇದರಲ್ಲಿ ಬೇಡುತ್ತದೆ.

1.30 P. M.

ಶ್ರೀ ಕೆ ಎನ್. ವೀರಪ್ಪಗೌಡ :--ಮಲೆನಾಡಿನಲ್ಲಿ ಬಹಳ ಕಾಲದಿಂದ ಬೆಳೆದಿದ್ದ ಬಲ್ಗಿ, ಸಾಫ್ಟ್‌ವುಡ್ ಮುಂತಾದ ಗಿಡಗಳನ್ನು ಬಹಳವಾಗಿ ಕಡಿಯುತ್ತಿರುವುದರಿಂದ ಕಾಡು ಕಡಮೆಯಾಗಿ ಅಣೆಕಟ್ಟುಗಳಿಗೆ ನೀರು ಬರುವುದು ಕಡಿಮೆಯಾಗುತ್ತಿರುವುದು ಜೊತೆಗೆ ನೀಲಗಿರಿ ಗಿಡಗಳನ್ನು ಬೆಳೆಸುವುದರಿಂದ ನೀರಿನ ಅಂಶ ಕಡಮೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಚ್. ಪಾಟೀಲ್ :—ಈಗಾಗಲೆ ದಟ್ಟವಾಗಿರುವ ಕಾಡು ನಾಶವಾಗದಂತೆ ಪ್ಲಾನ್ ಮಾಡಲಾಗಿದೆ. ಅರಣ್ಯವನ್ನು ಬೆಳೆಸಿ ಉತ್ಪತ್ತಿ ಬರುವಂತೆ ಕ್ರಮ ಕೈಕೊಳ್ಳುತ್ತಿದ್ದೇವೆ. ವರ್ಷೇವರ್ಷ ಬೇಕಾಗುವ ಫೈರ್ ವುಡ್, ಇದ್ದಿಲು ಮುಂತಾದುವುಗಳಿಗೆ ಅನುಕೂಲವಾಗುವಂತೆ ತಕ್ಕ ಗಿಡಗಳನ್ನು ಬೆಳೆಸಲು ವ್ಯವಸ್ಥೆ ಮಾಡಿದೆ. ನೀಲಗಿರಿ ಗಿಡಗಳನ್ನು ನೆಡುವುದು ಈಗ ಕಡಿಮೆಯಾಗಿದೆ. ಮೊದಲು ಹೆಚ್ಚಾಗಿ ಅದನ್ನು ನೆಡುತ್ತಿದ್ದರು, ಈ ಸರಕಾರ ಬಂದಮೇಲೆ ಅದನ್ನು ಕಡಿಮೆ ಮಾಡಲಾಗಿದೆ. ಈಗ ಪ್ರಗತಿಗೆ ಬೇಕಾದ ಗಿಡಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಶಾಸ್ತ್ರೋಕ್ತವಾದ ಪರಿಶೀಲನೆಯಿಂದ ನೀಲಗಿರಿ ಮರ

ಗಳಿಂದ ನೀರಿನ ಉತ್ಪತ್ತಿ ಕಡಿಮೆಯಾಗುವುದೆಂದು ತಿಳಿದು ಬಂದಿಲ್ಲ. ಆದರೂ ಕೂಡ ಜನರ ಸಮಾಧಾನಕ್ಕಾಗಿ ನೀಲಗಿರಿ ಮರಗಳನ್ನು ಬೆಳೆಸುವುದನ್ನು ಕಡಿಮೆ ಮಾಡಲಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಪ್ರತಿ ವರ್ಷ ಬೆಂಕಿಬಿದ್ದು ಅರಣ್ಯ ನಾಶ ವಾಗುತ್ತಿದೆ. ಅದಕ್ಕೆ ಅವಕಾಶವಿಲ್ಲದಂತೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಆ ಬಗ್ಗೆ ಸೂಕ್ತಕ್ರಮ ತೆಗೆದುಕೊಂಡಿದ್ದೇವೆ

ಶ್ರೀ ಹೆಚ್. ಎಸ್. ಸಿದ್ದಪ್ಪ :—ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳು ಶಾಮೀಲಾಗಿ ಕಂಟ್ರಾಕ್ಟರುಗಳಿಗೆ ಲಾಭದಾಯಕ ವಾಗುವಂತೆ ಪ್ರತಿ ವರ್ಷ ಅರಣ್ಯಕ್ಕೆ ಬೆಂಕಿ ಇಡುತ್ತಿರುವುದು ಗಮನಕ್ಕೆ ಬಂದಿದೆಯೇ ? ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಈಗ ಗಮನಕ್ಕೆ ಈ ವಿಚಾರವನ್ನು ತಂದಿದ್ದೀರಿ. ನಿರ್ದಿಷ್ಟವಾಗಿ ಅಂಥ ನಿದರ್ಶನಗಳಿದ್ದರೆ ತಿಳಿಸಿದರೆ ಆದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊರಗೆ ಹಾಕುತ್ತೇವೆ.

SRI J. P. SARWESH :—May I know whether the Government have anything like a Fire Brigade to extinguish the fire in the Forests?

SRI K. H. PATIL ;—It will be borne in mind

ಶ್ರೀ ವಿ. ಎನ್. ಪಾಟೀಲ್ :—ಲಾಭದಾಯಕವಾದ ಯಾವ ಮರಗಳನ್ನು ಹೊಸವಾಗಿ ಬೆಳೆಸುತ್ತಿದ್ದೀರಿ.

ಶ್ರೀ ಕೆ. ಹೆಚ್. ಪಾಟೀಲ್ :—ಟೀಕ್ ಗಂಧದಮರ ಮುಂತಾದುವುಗಳನ್ನು ಬೆಳೆಸಲಾಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ :—ಅರಣ್ಯದಲ್ಲಿ ಬೆಂಕಿಬಿದ್ದು ನಷ್ಟವಾಗುವುದಕ್ಕೆ ಕಾರಣ ಸಕಾಲದಲ್ಲಿ ಮರ, ಸೌದೆ ಮುಂತಾದ್ದನ್ನು ಹೊರಗಡೆಗೆ ಸಾಗಿಸದಿರುವುದು, ಇದು ಗಮನಕ್ಕೆ ಬಂದಿದೆಯೇ ? ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿ ತನದಿಂದ ಈ ರೀತಿ ನಷ್ಟವಾಗುತ್ತಿದೆ ಎಂಬುದನ್ನು ಪರಿಶೀಲಿಸಿ ಸೂಕ್ತಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಕೆ. ಎಚ್. ಪಾಟೀಲ್ :—ಜಾಗ್ರತೆ ಸಾಗಿಸಲಿಲ್ಲವೆಂಬುದನ್ನು ಒಪ್ಪಿದೆ ಆದರೆ ಏಕೆ ಬೇಗ ಸಾಗಿಸಲಿಲ್ಲವೆಂದರೆ 4 ಸಲ ಟೆಂಡರು ಕರೆದರೂ ಯಾರೂ ಮುಂದೆ ಬರಲಿಲ್ಲ. ತ್ವರಿತವಾಗಿ ಕೆಲಸಮಾಡಿದರೆ ಅಕ್ರಮವಾಯಿತೆಂದು ಹೇಳಬಹುದು. ಟೆಂಡರುದಾರರು ಯಾರೂ ಬಾರದೆ ಇದ್ದುದರಿಂದ ಇಲಾಖೆಯ ವಾಹನಗಳಿಂದ ಸಾಗಿಸಲು ತಡವಾಗಿದೆ.

SUPPLY OF FIREWOOD AND COAL TO M. I. S. L

126. SRI KAGODU THIMMAPPA Sagar).—

Will the Minister for Agriculture and Forests be pleased to State :—

(*a*) the quantum of firewood and coal obtained by Iron and Steel Factory, Bhadravathi from the forest department;

(*b*) the extent of forest area being cut every year for obtaining the said firewood and coal;

(*c*) whether it has come to the notice of the Government that the forest area is being destroyed for supplying the firewood and coal mentioned above, if so action taken to prevent it ?

SRI K. H. PATIL (Minister for Agriculture and Forests).—

(*a*) On an average 7 lakhs bags of charcoal and 10,000 tons of firewood.

(*b*) About 7,000 acres

(*c*) No damages done. Clearance is taken up only in the submersion area under the Sharavathi Valley Hydro-Electric Project and in the areas taken up by the depertment for raising its plantations.

ಶ್ರೀ ಕಾಗೋಡು ತಿಮ್ಮಪ್ಪ.—ಸುಮಾರು 7 ಲಕ್ಷ ಮೂಟೆ ಇದ್ದಿಲು ಮತ್ತು 10 ಸಾವಿರ ಟನ್ನು ಸೌದೆ ಭದ್ರಾವತಿ ಕಾರ್ಖಾನೆಗೆ ಪ್ರತಿ ವರ್ಷ ಒದಗಿಸುವುದರಿಂದ ಇಲಾಖೆಗೆ ಎಷ್ಟು ಆದಾಯ ಬರುವುದು ?

ಶ್ರೀ ಕೆ. ಹೆಚ್. ಪಾಟೀಲ್.—ಆ ಅಂಕಿಅಂಶ ನನ್ನಲ್ಲಿಲ್ಲ, ತರಿಸುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತಿ ವರ್ಷ 7 ಸಾವಿರ ಎಕರೆ ಪ್ರದೇಶದ ಅರಣ್ಯ ಕಡಿದರೆ ಸುಮಾರು ೬0 ವರ್ಷಗಳಲ್ಲಿ ಮಲೆನಾಡು ಪ್ರದೇಶದ ಅರಣ್ಯವೆಲ್ಲಾ ನಷ್ಟವಾಗುವುದು. ಆದ.ದರಿಂದ ಈ ಕಾರ್ಖಾನೆಗೆ ಬೇಕಾದ ಸೌದೆ ಮತ್ತು ಇದ್ದಿಲಿಗಾಗಿ ಪ್ರತ್ಯೇಕ ಪ್ರದೇಶವನ್ನು ರಿಸರ್ವ ಇಡುವಿರಾ ?

ಶ್ರೀ ಕೆ.. ಹೆಚ್. ಪಾಟೀಲ್.—ಒಂದು ಕಡೆ ಕಡಿದರೆ ಇನ್ನೊಂದು ಕಡೆ ಬೆಳೆಸಲಾಗುವುದು. ಇದರ ಬಗ್ಗೆ ಈಗಾಗಲೇ ಇಂಡಸ್ಟ್ರಿಯಲ್ ಇಲಾಖೆ ಮಂತ್ರಿಗಳೊಡನೆ ಮಾತನಾಡಿ ಇತರ ಮಾರ್ಗಗಳಿಂದ ಈ ಕಾರ್ಖಾನೆಯಲ್ಲಿ ಸೌದೆ ಉಪಯೋಗ ಕಡಿಮೆ ಮಾಡಲು ಸಾಧ್ಯವೇ ಎಂದು ಪರಿಶೀಲಿಸಲಾಗುತ್ತಿದೆ. ಕೈಗಾರಿಕಾ ಸಚಿವರು ಈ ವಿಚಾರವನ್ನು ಪರಿಶೀಲಿಸುವರೆಂದು ನಾನು ಭಾವಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಭದ್ರಾವತಿ ಕಾರ್ಖಾನೆಯವರಿಗೆ 30 ಸಾವಿರ ಎಕರೆ ಪ್ರದೇಶ ಕೊಟ್ಟು ಆ ಕಾರ್ಖಾನೆಯವರೇ ಆ ಪ್ರದೇಶದಲ್ಲಿ ಸೌದೆಗೆ ಮತ್ತು ಇದ್ದಲಿಗೆ ಬೇಕಾದ ಗಿಡಗಳನ್ನು ಬೆಳೆಸಿ ಅವುಗಳ ಉಪಯೋಗ ಪಡೆಯುವಂತೆ ಏಕೆ ಮಾಡಬಾರದು ? ಅವರಲ್ಲಿ ಅದಕ್ಕೆ ಬೇಕಾದ ಹಣದ ಸೌಲಭ್ಯವಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಎರಡೂ ಒಂದೇ ಆಗುವುದು. ಈಗ ಸರಕಾರ ವ್ಯವಸ್ಥೆ ಮಾಡಿದೆ, ನಂತರ ಕಾರ್ಖಾನೆ ಮಾಡಿಕೊಳ್ಳಬಹುದು. ಮಾನ್ಯ ಸದಸ್ಯರು ಹೇಳಿದಂತೆ ಮಾಡಿದರೆ ಕೈ ಬದಲಾವಣೆಯಾಗುವುದು, ಅಷ್ಟೇ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರ ಸಲಹೆಯಂತೆ ರಿಸರ್ವ ಪ್ರದೇಶ ಗೊತ್ತು ಮಾಡದಿದ್ದರೆ ಅರಣ್ಯವೆಲ್ಲಾ ನಾಶವಾಗುವುದು. ಆದುದರಿಂದ 20 ಸಾವಿರ ಎಕರೆ ಸೌದೆಗಾಗಿ ಮೀಸಲಾಗಿಡುವಂತೆ ವ್ಯವಸ್ಥೆ ಮಾಡಿದರೆ ಕಾರ್ಖಾನೆಯವರು ಕಡಿದರೆ ಹೆಚ್ಚು ನಷ್ಟವಾಗುವುದಿಲ್ಲ ಆದುದರಿಂದ ಸೌದೆಯ ಉಪಯೋಗಕ್ಕಾಗಿ ಬೇರೆ ಪ್ರದೇಶ ಮೀಸಲಾಗಿಡುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೆ ಭದ್ರಾವತಿಯ ಸುತ್ತುಮುತ್ತಲಿನ ಪ್ರದೇಶದಲ್ಲಿ ಉರುವಲಿಗೆ ಬೇಕಾಗದ ಮರಗಳನ್ನು ಬೆಳೆಸಲಾಗುತ್ತಿದೆ. ಆದುದರಿಂದ ಇದಕ್ಕೇ ಬೇರೆ ಪ್ರದೇಶ ಮೀಸಲಾಗಿಡಬೇಕಾಗಿಲ್ಲ.

SRI SUBHASH ASTURE.—What is the ratio between cutting and plantation? How much you are cutting and how much you are planting?

SRI K. H. PATIL.—If you take the ratio of five years, the plantation will be more than that of cutting.

ಶ್ರೀ ಕೆ. ಹೆಚ್. ಪಾಟೀಲ್.—ಎಲ್ಲಾ ಡಿವಿಜನ್ನುಗಳಲ್ಲೂ ಕೂಡ ಹೊಸದಾಗಿ ಮರಗಳನ್ನು ಬೆಳೆಸಲಾಗುತ್ತಿದೆಯೇ?

ಶ್ರೀ ಕೆ. ಹೆಚ್. ಪಾಟೀಲ್.—ಕೆಲವು ಡಿವಿಜನ್ನುಗಳಲ್ಲಿ ಬೆಳೆಸುತ್ತಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗ ಅರಣ್ಯ ಸಂಪತ್ತು ಕಡಿಮೆಯಾಗುತ್ತಿದೆ. ನ್ಯಾಷನಲ್ ಆವರೇಜ್ 23 ಪರ್ಸೆಂಟ್ ಇರುವಾಗ 'ನಮ್ಮ ಮೈಸೂರು ದೇಶದಲ್ಲಿ ಶೇಕಡ ಹದಿಮೂರೂವರೆ ಇದೆ. ಆದುದರಿಂದ ಕಾಡನ್ನು ಕಡಿಯುವುದನ್ನು ನಿಲ್ಲಿಸುತ್ತೀರಾ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಬೆಂಬಲಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇನ್ನುಮೇಲೆ ನಮಗೆ ಶರಾವತಿ ಯೋಜನೆ ಪ್ರದೇಶ ಸಿಕ್ಕುವುದಿಲ್ಲ. ಪ್ರತಿ ವರ್ಷ 7 ಸಾವಿರ ಎಕರೆ ಅರಣ್ಯ ಪ್ರದೇಶ ಕಾರ್ಖಾನೆಯ ಸಾದೆಗೆ ಬೇಕು. ಈ 7 ಸಾವಿರ ಎಕರೆ ಪ್ರದೇಶವನ್ನು ಯಾವ ತಾಲ್ಲೂಕಿನಲ್ಲಿ ಗೊತ್ತುಮಾಡಲಾಗಿದೆ? ಇದನ್ನು ನಿಗದಿಮಾಡಿದ್ದೀರಾ?

ಶ್ರೀ ಕೆ. ಹೆಚ್. ಪಾಟೀಲ್.—ಆ ವಿವರ ಈಗ ನನ್ನಲ್ಲಿಲ್ಲ. ಆದರೆ ಆ ಉದ್ದಿಮೆಯ ಸುತ್ತಮುತ್ತಲಿನ ಪ್ರದೇಶವನ್ನು ಈಗ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ.

LOANS TAKEN BY DIRECTORS OF D.C.C. BANK, GULBARGA

254. SRI J. P. SARWESH (Sedam).—

Will the Minister for Co-operation be pleased to state :—

the names of the Directors of the D.C.C. Bank, Gulbarga who have taken loan from suspense accounts?

SRI A. SHANKARA ALVA.—(Minister for Co-operation)

The following Directors have taken loans from the Suspense Accounts.

Sriyuths :

1. Bapu Gouda
2. Jagadish Patil
3. M. Y. Patil
4. R. Mallanna
5. Basavant Reddy

Sri J. P. SARWESH : — May I know the amount each Director has taken along with the date and the years ?

Sri A. SHANKAR ALVA :— Sri Bapu Gowda has taken Rs. 420-00 on 11-1-1968; Sri Jagadish Patil has taken Rs. 800-00 on 21-1-1970; Sri M.Y. Patil has taken Rs. 615-42 on 27-10-1971; Sri R Mallanna has taken Rs. 457-74 on 23-12-1972; and Sri Basavant Reddy has taken Rs 135-00 on 17-1 -1971.

Sri J. P. SARWESH ;— What other loans are outstanding against their names ?

ಶ್ರೀ ಎ. ಶಂಕರ ಆಳ್ವ : ಅದಕ್ಕೆ ತಾವು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿ ಕೊಟ್ಟರೆ ಉತ್ತರವನ್ನು ತರಿಸಿ ಕೊಡಲಾಗುತ್ತದೆ.

Sri J. P. SARWESH :— Whether Government has taken any action to recover the amounts due from these Directors?

ಶ್ರೀ ಎ. ಶಂಕರ ಆಳ್ವ ,— ಇಲ್ಲಿ ಎಷ್ಟು ಜನ ಡೈರೆಕ್ಟರು ಸಾಲ ತೆಗೆದು ಕೊಂಡು ಇದ್ದಾರೆ ಎಂದು ಪ್ರಶ್ನೆ ಕೇಳಿದ್ದರಿಂದ ಅಷ್ಟಕ್ಕೆ ಮಾತ್ರ ಉತ್ತರವನ್ನು ತರಿಸಿ ಕೊಡಲಾಗಿದೆ, ಬೇರೆ ಜನಕ್ಕೆ ಇದರಿಂದ ಸಾಲ ಕೊಟ್ಟಿದ್ದಾರೆಯೋ ಇಲ್ಲವೋ ತಿಳಿಯದು. ಹಣವನ್ನು ವಸೂಲ್ಮಾಡುವುದಕ್ಕೆ ಸಂಬಂಧಪಟ್ಟವರಿಗೆ ನೋಟೀಸು ಗಳನ್ನು ಕೊಟ್ಟಿದೆ.

Sri BAPURAO ANANDARAO :— Whether these loans were granted from borrowed money or whether there were sufficient funds to grant loans ; and whether it is allowed in law ?

Sri A. SHANKAR ALVA :— I will examine the matter

ಶ್ರೀ ಹೆಚ್. ಎಸ್. ಸಿದ್ದಪ್ಪ :— ಡೈರೆಕ್ಟರುಗಳಿಗೆ ಸಾಲ ಕೊಡಬಹುದೆಂದು ರೂಲ್ಸಿನಲ್ಲೇ ಹೇಳಿದ್ದರೂ ಮಾನ್ಯ ಸಹಕಾರ ಖಾತೆ ಸಚಿವರು ಸಹಕಾರ ಬಾಬಿನ ಎಲ್ಲಾ ಕಾನೂನುಗಳನ್ನೂ ಬಲ್ಲವರಾಗಿದ್ದುಕೊಂಡು, ಇದನ್ನು ಮತ್ತೆ ಪರಿಶೀಲನೆ ಮಾಡಲಾಗುತ್ತದೆಂದು ಹೇಳುವುದು ಅಭಾಸವಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ :— ನಾನು ಕ್ರಮ ತೆಗೆದುಕೊಳ್ಳತಕ್ಕ ವಿಚಾರ ಹೇಳಿದೆನೇ ವಿನಾ ಕಾನೂನಿನ ವಿಚಾರ ಹೇಳಲಿಲ್ಲ.

Sri KAGODU THIMMAPPA :— Whether that borrowing is within the purview of the law or not had to be examined by the concerned department and that has not been done.

ಆದುದರಿಂದ ಆ ಭಾಗಕ್ಕೆ ಕೊಟ್ಟಿರುವ ಉತ್ತರ ಅಪೂರ್ಣವಲ್ಲವೇ ?

ಶ್ರೀ ಎ. ಶಂಕರ ಆಳ್ವ :— ಕಾನೂನು ಬಗ್ಗೆ ಇಲ್ಲಿ ಉತ್ತರ ಹೇಳುವುದಕ್ಕೆ ಅವಕಾಶವಿಲ್ಲ. ಆದರೆ ಅವರಿಗೆ ಹಾಗೆ ಸಾಲ ಕೊಡುವುದಕ್ಕೆ ಅಧಿಕಾರವುಂಟೋ ಇಲ್ಲವೋ ಅದನ್ನು ವಿಚಾರ ಮಾಡಬೇಕು.

ಶ್ರೀ ಪಿ. ಎಂ. ಭಂಗಿ :— ಸಸ್‌ಪೆನ್ಸ್ ಅಕೌಂಟಿನಲ್ಲಿ ಸಾಲ ತೆಗೆದು ಕೊಳ್ಳುವುದಕ್ಕೇನು ಕಾರಣ ?

ಶ್ರೀ ಎ. ಶಂಕರ ಆಳ್ವ :— ಸಾಲ ಕೊಟ್ಟಾಗಿದೆ. ಅವನ್ನು ವಸೂಲ್ಮಾಡುವುದಕ್ಕೆ ಸರಕಾರ ಅಧಿಕಾರವನ್ನು ತೆಗೆದುಕೊಂಡ ಮೇಲೆ ಅವರಿಗೆಲ್ಲಾ ನೋಟೀಸನ್ನು ಕೊಡಲಾಗಿದೆ.

ಶ್ರೀ ವಿ. ಎನ್. ಪಾಟೀಲ್ :— ಅನ್‌ಸೆಕ್ಯೂರ್ಡ್ ಲೋನುಗಳನ್ನು ಕೊಡುವುದರಿಂದ ಈ ಸಹಕಾರ ಸಂಸ್ಥೆಗಳು ಬಹಳ ಬೇಗ ಲಿಕ್ವಿಡೇಟಾಗುವುದಕ್ಕೆ ಅವಕಾಶವಾಗುತ್ತಿರುವುದರಿಂದ ಇದನ್ನು ಕೊಡದಂತೆ ತಡೆಗಟ್ಟುವುದಕೆ ಸರಕಾರ ಒಂದು ಶಾಸನವನ್ನು ತರುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ :— ಇದನ್ನು ವಿಚಾರ ಮಾಡೋಣ

ಶ್ರೀ ಹೆಚ್. ಎಸ್. ಸಿದ್ದಪ್ಪ :— ಸಸ್‌ಪೆನ್ಸ್ ಅಕೌಂಟ್ ಎಂದರೇನು ? ಒಂದು ಡಿ.ಸಿ.ಸಿ. ಬ್ಯಾಂಕಿನಲ್ಲಿ ಇದನ್ನು ಯಾವ ಮಟ್ಟದವರಗೆ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ ?

ಶ್ರೀ ಎ. ಶಂಕರ ಆಳ್ವ :— ಮಾನ್ಯ ಸದಸ್ಯರ ಪ್ರಶ್ನೆ ಇಲ್ಲಿ ಉದ್ಭವಿಸುದಿಲ್ಲ

ಶ್ರೀ ಹೆಚ್ ಎಸ್. ಸಿದ್ದಪ್ಪ :— ಸಸ್‌ಪೆನ್ಸ್ ಅಕೌಂಟ್ ಎಂದರೆ ?

ಅಧ್ಯಕ್ಷರು :— ಸಸ್‌ಪೆನ್ಸ್ ಅಕೌಂಟ್ ಎಂದರೆ—ಸಸ್‌ಪೆನ್ಸ್ ಅಕೌಂಟ ಅಷ್ಟೇ.

Sri J. P. SARWESH :— Will the Government assure the House that it will enquire into the facts that these Directors have taken large amounts under different heads from Service co-operative Societies etc. ?

ಶ್ರೀ ಎ. ಶಂಕರ ಆಳ್ವ :— ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳುಹಿಸಿಕೊಟ್ಟರೆ ಮಾಹಿತಿ ತರಿಸಿಕೊಡಲಾಗುತ್ತದೆ.

ಅಧ್ಯಕ್ಷರು ;— ಶ್ರೀ ಬೆಟ್ಟಸ್ವಾಮಿ ಗೌಡರ ಪ್ರಶ್ನೆಯನ್ನು ಹಾಕುವುದಕ್ಕೆ ಶ್ರೀ ಕೆ. ಲಿಂಗಪ್ಪ ಅವರಿಗೆ ನಾನು ಅನುಮತಿ ಕೊಟ್ಟಿದ್ದೇನೆ.

CONSTRUCTION OF PRIMARY SCHOOL BUILDINGS IN MAGADI TALUK

18. SRI KONANDUR LINGAPPA (Thirthahalli) on behalf of SRI BETTASWAMY GOWDA (Kudur) :— Will the

(SRI KONANDUR LINGAPPA)

*M*inister for Education be pleased to state :—

(*a*) the number of primary schools in Magadi Taluk ;

(*b*) out of them, the number of schools having their buildings ;

(*c*) the period within which the Government propose to construct the buildings to the schools which have no buildings ?

SRI A. *R.* BADARINARAYANA. (Minister for Education):

(*a*) 268.

(*b*) 243.

(*c*) For want of finance it was not possible to solve this problem completely. Efforts will be made to construct as many buildings as possible from the resources available during Fifth Five year plan.

ಶ್ರೀ ಕೋಣಂದೂರು ಲಿಂಗಪ್ಪ :— ಈ ಶಾಲಾಕಟ್ಟಡಗಳ ಅಭಾವದ ಪ್ರಶ್ನೆಯನ್ನು ಯಾವ ಕಾಲಕ್ಕೆ ನೀಗಲು ಸರ್ಕಾರಕ್ಕೆ ಸಾಧ್ಯವಾದೀತು ?

ಶ್ರೀ ಎ. ಆರ್. ಬದ್ರಿನಾರಾಯಣ್ :—ಗ್ರಾಮಾಂತರ ಪ್ರದೇಶಗಳಲ್ಲಿ ಈ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಒಂದು ಪತ್ಯೇಕವಾದ ಪ್ಯಾಟ್ರನ್ನೇ ಇದೆ. ಅದಕ್ಕೆ ಸರ್ಕಾರದದರು 2 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಸಾಲದೆ ಬಂದುದಕ್ಕೆ ಅಲ್ಲಿನ ಜನರು ಮತ್ತು ತಾಲ್ಲೂಕು ಬೋರ್ಡಿನವರು ಹಾಕಿ ಅವುಗಳನ್ನು ಕಟ್ಟಿಸಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ .— ಹಾಗಾದರೆ ಈ ವಿಚಾರದಲ್ಲಿ ಸರ್ಕಾರಕ್ಕೆ ಸಾರ್ವಜನಿಕರಿಂದ ವಂತಿಕೆ ಬಂದರೆ ಅಲ್ಲಿಯ ಉಳಿದ ಕಟ್ಟಡಗಳನ್ನು ಇದೇ ವರ್ಷದಲ್ಲಿ ಪೂರ್ಣಮಾಡಿಸಿ ಕೊಡುತ್ತೀರಾ ?

ಶ್ರೀ ಎ.ಆರ್. ಬದ್ರಿನಾರಾಯಣ್ :—ಹಾಗಾದರೆ ಮಾಡಿಸಿ ಕೊಡುತ್ತೇವೆ.

ಶ್ರೀ ಎಚ್. ಜಿ. ಚನ್ನಪ್ಪ :— ಒಂದು ತಾಲ್ಲೂಕಿನಲ್ಲಿ ಎಷ್ಟು ರೂಮ್‌ಗಳನ್ನು ಬೇಕಾದರೂ ಕಟ್ಟಿಸಿಕೊಳ್ಳಲು ಹೀಗೆ ಹಣವನ್ನು ಕೊಡುತ್ತೀರಾ ?

ಶ್ರೀ ಎ. ಆರ್. ಬದ್ರಿನಾರಾಯಣ್ :—ಇದಕ್ಕೆ ಇಡೀ ರಾಜ್ಯಕ್ಕೆ ಮೀಸಲಾಗಿಟ್ಟಿರತಕ್ಕ ಹಣವನ್ನು ತಾಲ್ಲೂಕ್‌ವಾರ್ ವಿಲೇವಾರಿ ಮಾಡಿದಾಗ ಒಂದು ತಾಲ್ಲೂಕಿಗೆಷ್ಟು ಸಿಕ್ಕುತ್ತೋ ಅಷ್ಟನ್ನು ಕೊಡಬಹುದು.

ಶ್ರೀ ಹೆಚ್. ಎಸ್. ಸಿದ್ದಪ್ಪ :— 243 ಶಾಲೆಗಳಿಗೆ ಕಟ್ಟಡಗಳಿವೆ ಎಂದು ಹೇಳಿದೆ. ಇವುಗಳಲ್ಲಿ ಗುಡಿಸಲುಗಳ ಸಂಖ್ಯೆ ಎಷ್ಟೆಂಬುದನ್ನು ತಿಳಿಸುತ್ತೀರಾ?

ಶ್ರೀ ಎ. ಆರ್. ಬದ್ರಿನಾರಾಯಣ್ :—ಗುಡಿಸಲು ಯಾವುದೂ ಇಲ್ಲ.

ಶ್ರೀ ಹೆಚ್. ಜಿ. ಚನ್ನಪ್ಪ :—ಒಂದು ತಾಲ್ಲೂಕಿಗೆ ವರ್ಷಕ್ಕೆ ಐದು ರೂಮುಗಳಿಗೆ ಅವಕಾಶ ಮಾಡಿಕೊಟ್ಟರೆ, ಎಂದಿಗೆ ಈ ಶಾಲಾಕಟ್ಟಡಗಳನ್ನು ಕಟ್ಟಿಸಿ ಮುಗಿಸುವುದು? ಆದುದರಿಂದ ಇದಕ್ಕೆ ಇನ್ನೂ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸುವುದಕ್ಕಾಗುವುದಿಲ್ಲವೇ?

ಶ್ರೀ ಎ. ಆರ್. ಬದ್ರಿನಾರಾಯಣ್ :—ಮಾನ್ಯ ಸದಸ್ಯರ ತಾಲ್ಲೂಕು ಬಹಳ ಎಂಟರ್‌ಪ್ರೈಸಿಂಗ್ ತಾಲ್ಲೂಕ್. ಜನರಿಂದ ಹೆಚ್ಚಿನ ಪ್ರೋತ್ಸಾಹ ಬಂದರೆ ಬಹಳ ಒಳ್ಳೆಯದು.

MADAM SPEAKER :—Now Questions are over.

QUESTIONS FOR ANSWERS ON THE DAY

(BUT NOT TAKEN UP)

DEVELOPMENT OF CHIKHALE AND HOLDA VILLAGES

79. SRI N. B. SIRDESAI (Khanapur).—
Will the Minister for Community Development and Social Welfare be pleased to state:—

(a) whether Government of Maharashtra or the Government of Goa have transferred any funds to Government of Mysore for the Development of Chikhale and Holda villages in Khanapur Taluka under the name of Chikhale and Holda funds, as compensation to these villages after 1956;

(b) whether the amount of this compensation fund has been credited to the P.D. Accounts of the Deputy Commissioner, Belgaum, if so on what date;

(c) whether any amount out of the principal funds and interest thereon has been so far transferred to Taluk Development Board, Khanapur for the development of these two villages, if so on what dates and what works, have been taken up out of these amounts',

(d) whether the villagers of the two villages have so far represented to the Government of Mysore through the Deputy Commissioner, Belgaum and the Taluk Board, Khanapur in this matter ?

SRI M. MALLIKARJUNASWAMY (Minister for Community Development and Social Welfare).—

(*a*) No

(*b*) Does not arise in view of reply to clause (*a*) above.

(*c*) Yes

Rs. 637.50 on 30-4-1960

Rs. 288.00 on 15-2-1962

for construction of a drinking water well at Chikkale

(*d*) No

IRON ORE PROCESSING UNIT IN CHIKKANAYAKANAHALLI TALUK

99. SRI N. BASAVAIAH (Chikkanaikanahalli) :—
Will the Minister for Industries be pleased to state :—

(*a*) whether it has come to the notice of the Government that several representations were given by the Public for the sanction of the iron ore processing unit in Chikkanaikanahalli Taluk;

(*b*) if so, is there any proposal before the Government to establish an iron ore processing unit in Chikkanaikanahalli Taluk ?

SRI S. M. KRISHNA (Minister for Industries).—

(*a*) No

(*b*) Does not arise in view of reply to clause (a).

NOTICE OF ADJOURNMENT MOTION

Re: Death of a person at M.P.C.C. Meeting on 25-8-1973

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ):—ಮಾನ್ಯ ಅಧ್ಯಕ್ಷರೇ ನಾನು ಒಂದು ನಿಲುವಳಿ ಸೂಚನೆಯನ್ನು ಇದೇ ನಗರದಲ್ಲಿ ತಾಃ 25-8-1973ರಲ್ಲಿ ನಡೆದ ಅಂದರೆ ಮೈಸೂರು ಪ್ರದೇಶ ಕಾಂಗ್ರೆಸ್ ಭವನದಲ್ಲಿ ನಡೆದಂಥ ಒಂದು....

ಅಧ್ಯಕ್ಷರು :—ಮಾನ್ಯ ಸದಸ್ಯರ ನಿಲುವಳಿ ಸೂಚನೆಯ ಬಗ್ಗೆ ಆ ವಿಷಯ ವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ ಎಂದು ನಮ್ಮ ಆಫೀಸಿನಿಂದ ಉತ್ತರವನ್ನು ಕಳುಹಿಸಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ :—'ತಡೆಹಿಡಿಯಲಾಗಿದೆ' ಎಂದು ಅದರಲ್ಲಿ ಹೇಳಿದೆ, ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಅದರಲ್ಲಿ ಖಚಿತವಾಗಿ ಹೇಳಿಲ್ಲ. 'ತಡೆಹಿಡಿಯಲಾಗಿದೆ' ಎಂದರೆ ಅವಕಾಶ ಕೊಡುವುದನ್ನು ಸ್ವಲ್ಪ ತಡೆ ಹಿಡಿಯಲಾಗಿದೆ ಎಂದು ಮಾತ್ರ ಅರ್ಥವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ಅಧಕ್ಷರೇ ತಾವು ದಯಮಾಡಿ ಸ್ವಲ್ಪ ಕುಳಿತುಕೊಳ್ಳಬೇಕು....

ಅಧ್ಯಕ್ಷರು ;—ನಾನು ನಿಂತಿರುವಾಗ ಮಾನ್ಯ ಸದಸ್ಯರುಗಳು ಯಾರೂ ಏಳಬಾರದು, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ನಾನು ಈ ವಿಚಾರವಾಗಿ ರೂಲ್ಸನ್ನು ನೋಡಿರುವ ಪ್ರಕಾರ ಇದರಲ್ಲಿ ಸರ್ಕಾರದ ಜವಾಬ್ದಾರಿ ಏನೇನೂ ಇಲ್ಲ. ನೀವು ನಿಲುವಳಿ ಸೂಚನೆಯನ್ನು ಕಳು ಹಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ರೂಲ್ಸ್ ಇದೆ. ಅದರಂತೆ ಕೊಟ್ಟಿದ್ದೀರಿ. ಈ ವಿಚಾರದಲ್ಲಿ ನಾನು ತಮ್ಮಲ್ಲಿ ಅನೇಕರನ್ನು ವಿಚಾರ ಮಾಡಿದ್ದೇನೆ, ಸರಕಾರ ದವರಲ್ಲಿಯೂ ನಾನು ಇದರ ಬಗೆ ವಿಚಾರ ಮಾಡಿದ್ದೇನೆ. ರೂಲ್ಸನ್ನೂ ಸಹ ನೋಡಿದ್ದೇನೆ. ಇಷ್ಟೆಲ್ಲಾ ಆದಮೇಲೆ ತಮಗೆ ಉತ್ತರವನ್ನೂ ಸಹ ಕೊಟ್ಟು

(ಅಧ್ಯಕ್ಷರು)

ಇದಕ್ಕೆ ಇಲ್ಲಿ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ,ಮತ್ತೆ ಈಗ ಅದರ ಬಗ್ಗೆ ಚರ್ಚೆಮಾಡಲು ಒಂದು ನಿಮಿಷ ಕೊಡಿ, ಕಾಲು ನಿಮಿಷ ಕೊಡಿ, 5 ಸೆಕೆಂಡು ಅವಕಾಶ ಕೊಡಿ ಎಂದರೆ, ಆ ರೀತಿ ಅವಕಾಶ ಕೊಡುವುದಕ್ಕೆ ಖಂಡಿತ ಸಾಧ್ಯವಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ ; — ಇದರ ಬಗ್ಗೆ ಚರ್ಚೆಮಾಡಲು ನಮಗೆ ಸ್ವಲ್ಪ ಹೊತ್ತು ಕಾಲಾವಕಾಶ ಮಾಡಿಕೊಡಿ ಎಂಬುದಾಗಿ ನಾವು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು :— ಅದಕ್ಕೆ ಅವಕಾಶ ಕೊಡುವುದಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ :- ಇದರಲ್ಲಿ ಕೆಲವು ಇನ್‌ಗ್ರೀಡಿಯನ್ಸ್ ಇವೆ. ಅವುಗಳ ಬಗ್ಗೆ ನಮ್ಮ ನಿಲುವಳಿಸೂಚನೆಗೆ ತಮ್ಮ ಒಪ್ಪಿಗೆಯನ್ನು ಕೊಡಿಸುವುದಕ್ಕೆ ಅವಕಾಶವಿದೆ. ರೂಲ್ 52ರ ಪ್ರಕಾರ ನಮ್ಮ ನಿಲುವಳಿ ಸೂಚನೆಗೆ ತಮ್ಮನ್ನು ಸಮಾಧಾನಪಡಿಸುವುದಕ್ಕೆ ನಮಗೆ ಅವಕಾಶವಿದೆ. ಅದನ್ನು ಪುನಃ ತಾವು ನೋಡಿ ನಮಗೆ ಇದರ ಬಗ್ಗೆ ಚರ್ಚೆಮಾಡಲು ಇಲ್ಲಿ ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ವಿಷಯು ಪಬ್ಲಿಕ್ ಇಂಪಾರ್ಟೆನ್ಸ್ ಎನ್ನುವುದಕ್ಕೆ ನಮ್ಮ ನಿಲುವಳಿ ಸೂಚನೆಯಲ್ಲಿ ಸಕಾರಣಗಳು ಬಹಳವಾಗಿವೆ. ಸಾರ್ವಜನಿಕತ ದೃಷ್ಟಿಯಿಂದ ಇದು ಬಹಳ ಪ್ರಾಮುಖ್ಯವಾದ ವಿಷಯ ಎನ್ನುವುದಕ್ಕೆ ಸಾಕಷ್ಟು ಸಲಕರಣೆಗಳಿವೆ. ಏಕೆಂದರೆ ಈ ವಿಷಯ ಈಗಾಗಲೇ ಬಹಿರಂಗವಾಗಿದೆ.

ಅಧ್ಯಕ್ಷರು :- ಇದರ ಬಗ್ಗೆ ನಾನು ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲ. ನನ್ನ ಪತ್ರದಲ್ಲಿ ತಡೆಹಿಡಿದಿದೆ ಎಂದು ಹೇಳಿರುವ ಪದಕ್ಕೆ ತಾವು ವ್ಯಾಖ್ಯಾನ ಮಾಡಿದರೂ, ಈ ವಿಚಾರವನ್ನು ಇಲ್ಲ ಚರ್ಚೆಮಾಡಲು ನಾವು ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ ; ... ನೀವು ತಡೆಹಿಡಿದಿದೆ ಎಂಬುದಾಗಿ ನಿಮ್ಮ ಉತ್ತರದಲ್ಲಿ ಹೇಳಿದ್ದರೂ ಇದನ್ನು ಹಾಗೇಯೇ ನಿಲ್ಲಿಸಿ ಬಿಡಬೇಡಿ. ಅದಕ್ಕೆ ಅವಕಾಶ ಮಾಡಿಕೊಡಿ.ನಿಮಗೆ ಇಂಗ್ಲೀಷ್ ಬರುವುದಿಲ್ಲವೆಂದು ನನ್ನ ಅಭಿಪ್ರಾಯವಲ್ಲ ನನಗೂ ಇಂಗ್ಲಿಷ್ ತಿಳಿಯುವುದಿಲ್ಲವೆಂದು ತಾವೂ ತಿಳಿಯಬಾರದು. ಇದನ್ನು ಇಲ್ಲಿ ಚರ್ಚೆಮಾಡಲು ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ಇದಕ್ಕೆ ನನ್ನ ಒಪ್ಪಿಗೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ನಾನು ಮೊದಲೇ ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ ಇಲ್ಲಿ ಸರ್ಕಾರದ ಜವಾಬ್ದಾರಿ ಏನೇನೂ ಇಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ : ಯಾವುದಾದರೂ ಒಂದು ಮೀಟಿಂಗಿನಲ್ಲಿ ಒಬ್ಬ ವ್ಯಕ್ತಿ ಸತ್ತರೆ ಅದಕ್ಕೆ ಸರ್ಕಾರದ ಜವಾಬ್ದಾರಿ ಇಲ್ಲವೇ?

ಅಧ್ಯಕ್ಷರು : ಯಾರಾದರೂ ಎಲ್ಲಿಯಾದರೂ ಸತ್ತರೆ, ಅದಕ್ಕೆಲ್ಲಾ ಸರ್ಕಾರ ಜವಾಬ್ದಾರಿ ಆಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಆ ಸಭೆಯಲ್ಲಿ ಆ ರೀತಿಯಾಗಿ ಸತ್ತಿದ್ದಕ್ಕೆ ಕಾರಣಕರ್ತರು ಯಾರು ?

ಅಧ್ಯಕ್ಷರು : ನಾನೂ ಸಹ ತಮ್ಮ ಹಾಗೆ ಪತ್ರಿಕೆಗಳಲ್ಲಿ ಆ ವಿಚಾರವನ್ನು ನೋಡಿದ್ದೇನೆ ಆದರೆ ಈ ವಿಚಾರದಲ್ಲಿ ಅವರ ಮನೆಯವರಾಗಲೀ ಅಥವಾ ಅವರ ಮಕ್ಕಳಾಗಲೀ ಯಾರೂ ಏನೂ ದೂರು ಕೊಟ್ಟಿಲ್ಲ. ಅದ್ದರಿಂದ ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಈಗ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಾವು ಈಗಾಗಲೇ ಒಂದುಸಾರಿ ತೀರ್ಮಾನವನ್ನು ಪುನರ್ಪರಿಶೀಲನೆ ಮಾಡುವುದಕ್ಕೆ ತಮಗೆ ಅವಕಾಶವಿದೆ. I appeal to you to reconsider your decision.

ಅಧ್ಯಕ್ಷರು ; ಈ ವಿಚಾರವನ್ನು ನಾನು ಪುನರ್ಪರಿಶೀಲನೆ ಮಾಡುವ ಅಗತ್ಯ ಏನೇನೂ ಇಲ್ಲ, ರೂಲ್ಸನ್ನು ನಾನು ಚೆನ್ನಾಗಿ ಓದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇದನ್ನು ಪುನರ್ಪರಿಶೀಲನೆ ಮಾಡುವುದಕ್ಕೆ ತಮಗೆ ಅವಕಾಶವಿದೆ ತಮಗೆ ಸಮಾಧಾನವಿದ್ದರೆ, ಇದನ್ನು ಪುನರ್ ಪರಿಶೀಲನೆ ಮಾಡಿ.

ಅಧ್ಯಕ್ಷರು : ನಾನು ರೂಲ್ಸನ್ನು ಪೂರ್ತಿಯಾಗಿ ಎರಡೆರಡು ಸಾರಿ ಓದಿದ್ದೇನೆ. ಅನೇಕರಲ್ಲಿ ವಿಚಾರ ಮಾಡಿದ್ದೇನೆ. ಸರ್ಕಾರದಲ್ಲಿಯೂ ನಾನು ವಿಚಾರ ಮಾಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಹಿಂದೆ ಅನೇಕ ಬಾರಿ ಇಂತಹ ಸಂದರ್ಭಗಳಲ್ಲಿ ತಮಗೆ ಅಪೀಲು ಮಾಡಿದಾಗ ಕೊನೆಯ ಗಳಿಗೆಯಲ್ಲಿ ತಮ್ಮ ಮನಸ್ಸನ್ನು ಒಲಿಸಿಕೊಂಡು ಪುನರ್ಪರಿಶೀಲನೆ ಮಾಡಿರುವ ಘಟನೆಗಳು ಬೇಕಾದಷ್ಟಿವೆ.

ಅಧ್ಯಕ್ಷರು : ಇರಬಹುದು. ಆದರೆ ಈ ಬಗ್ಗೆ ಪುನರ್ಪರಿಶೀಲನೆ ಮಾಡುವ ಅವಕಾಶವೇನೂ ಇಲ್ಲ. ಅಂತಹ ಕಾರಣವೇನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ತಮಗೆ. ಬೇಕಾದರೆ ಹಿಂದೆ ನಡೆದಂತಹ ಸನ್ನಿವೇಶವನ್ನು ತೋರಿಸುತ್ತೇನೆ.

ಅಧ್ಯಕ್ಷರು : ನನಗೆ ಇದು ಸಂಪೂರ್ಣವಾಗಿ ಮನದಟ್ಟಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಇದರಲ್ಲಿ ಏನು ಸಂದರ್ಭ ಇದೆಯೆಂಬುದನ್ನು ತಮಗೆ ತೋರಿಸಿಕೊಡುತ್ತೇನೆ. ತಮ್ಮ ಮನಸ್ಸಿಗೆ ತೃಪ್ತಿ ಇದ್ದರೆ ನಮಗೆ ಇದರ ಬಗ್ಗೆ ಮಾತನಾಡಲು ಅವಕಾಶಕೊಡಿ. ಇಲ್ಲದಿದ್ದರೆ ಕೊಡಬೇಡಿ.

ಅಧ್ಯಕ್ಷರು : ಈಗ ಇದಕ್ಕೆ ಅವಕಾಶವಿಲ್ಲ

SRI *M*. MALLAPPA : I rise to a point of order. The ruling of the Chair must be respected. They cannot defy the ruling.

MADAM SPEAKER : They are not disobeying my ruling.

ಶ್ರೀ ಕೋಣಂದೂರು ಲಿಂಗಪ್ಪ : ಆಡಳಿದ ಪಕ್ಷದ ವಿಪ್ ಅವರು ನಮ್ಮ ಹಕ್ಕುಬಾಧ್ಯತೆಗಳನ್ನು ಮೊಟಕು ಮಾಡಿ ರೂಲ್ಸನ್ನು ಉಲ್ಲಂಘನೆ ಮಾಡಿದರೆ, **ನಾವು** ಅವರ ಮೇಲೆ ಪ್ರಿವಿಲೇಜ್ ಮೋಷನನ್ನು ಕಳುಹಿಸಬೇಕಾಗುತ್ತದೆ.

ಅಧ್ಯಕ್ಷರು : ಇದರಲ್ಲಿ ಸರ್ಕಾರದ ಜವಾಬ್ದಾರಿ ಏನೇನೂ ಇಲ್ಲವೆಂದು ನನಗೆ ಈಗಾಗಲೇ ಮನದಟ್ಟಾಗಿದೆ. ಆದ್ದರಿಂದ ಇದಕ್ಕೆ ಇಲ್ಲಿ ಚರ್ಚೆ ಮಾಡಲು ಅವಕಾಶಕೊಡುವುದಕ್ಕೆ ನನಗೆ ಸಾಧ್ಯವಿಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ : ಈ ನಿಲುವಳಿ ಸೂಚನೆಗೆ ತಮ್ಮ ಅನುಮತಿಯನ್ನು ಪಡೆದು ಚರ್ಚೆ ಮಾಡಲು ಅವಕಾಶ ಕೊಡಬೇಕು. ಏಕೆಂದರೆ ಸಾರ್ವಜನಿಕ ದೃಷ್ಟಿಯಲ್ಲಿ ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು : ತಮಗೆ ಎಲ್ಲವೂ ಪ್ರಾಮುಖ್ಯವಾದ ವಿಷಯವೇ ಆಗಿರುತ್ತದೆ. ನಾನು ಈ ಬಗ್ಗೆ ನನ್ನ ಅನುಮತಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ನಿಲುವಳಿ ಸೂಚನೆಯನ್ನು ಈಗ್ಗಾಗಲೇ ತಳ್ಳಿಹಾಕಿದ್ದೇನೆ. ಆದ್ದರಿಂದ ಪುನಃಪುನಃ ಈ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ.

2:00 P. M.

ಶ್ರೀ ಎಚ್. ಟಿ. ಕೃಷ್ಣಪ್ಪ :....ಈಗ ತಾವು ಬಹುಶ: ಯಾವ ಹಿನ್ನಲೆಯಲ್ಲಿ ಈ ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಶಂಕೆ ಇದೆ. ಆದ್ದರಿಂದ ತಾವು ತೆಗೆದುಕೊಂಡಂತಹ ತೀರ್ಮಾನವನ್ನು ಪುರಸ್ಕರಿಸುವುದಕ್ಕೆ ತಮಗೆ ಅಧಿಕಾರ ಇದೆ. ಏಕೆಂದರೆ ಇದು ಕಾಂಗ್ರೆಸ್ ಸಂಸ್ಥೆಯ ಆಂತರಿಕ ವಿಷಯವಲ್ಲ. ಒಬ್ಬ ದೇಶದ ಪ್ರಜೆ ಆಕಸ್ಮಿಕವಾಗಿ ಅಥವಾ ಅಸ್ವಾಭಾವಿಕವಾಗಿ ದುರ್ಮರಣಕ್ಕೆ ತುತ್ತಾದಾಗ ಅದರ ಬಗ್ಗೆ ವಿಚಾರಣೆ ನಡೆಯಲೇ ಬೇಕು. ಹಾಗೆ ವಿಚಾರಣೆ ನಡೆದಾಗ ಎಲ್ಲವೂ ಹೊರಗೆ ಬರುತ್ತದೆ. ಇದರಲ್ಲಿ ಬಹಳ ಗುಮಾನಿಗೆ ಒಳಗಾದ ಅಂಶವೆಂದರೆ ಆ ಮನುಷ್ಯ ಹಠಾತ್ತನೆ ತೀರಿ ಹೋಗಿದ್ದರೂ ವೈದ್ಯರು ಅತನ ಶವವನ್ನು ಸಹ ಪರೀಕ್ಷೆ ಮಾಡಿಲ್ಲ. ಇದು ಸೆಕ್ಷನ್ 302 ಐ ಪಿ ಸಿ ಪ್ರಕಾರ ಅಪರಾಧವಾಗದೆ ಇರಬಹುದು. ಆದರೆ ಐ ಪಿ ಸಿ ಸೆಕ್ಷನ್ 304, ಅಥವಾ 326 ಅಥವಾ 307ರ ಪ್ರಕಾರ ಅಪರಾಧವಾಗಬಹುದು. ಆದ್ದರಿಂದ ಇಂಥ ಒಂದು ಗಹನವಾದ ವಿಚಾರವನ್ನು ತಾವು ಪ್ರಾಮುಖ್ಯವಾದ ವಿಚಾರವಲ್ಲವೆಂದು ಹೇಳುವುದು ಸರಿಯಲ್ಲ. ಆದ ಕಾರಣ ತಾವು ತಮ್ಮ ತೀರ್ಮಾನವನ್ನು ಪುನರ್‌ಪರಿಶೀಲನೆಮಾಡುವುದು ಅವಶ್ಯಕವೆಂದು ಹೇಳುತ್ತೇನೆ. ಮತ್ತು ಹಾಗೆ ಮಾಡುವುದರಿಂದ ನಿಜ ಸಂಗತಿಯನ್ನು ನಾವು ತಿಳಿಯುವುದಕ್ಕೆ ಅವಕಾಶವಾಗುತ್ತದೆ.

(ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ವಾಟಾಳ್ ನಾಗರಾಜರವರು ಎದ್ದು ನಿಂತು ಮಾತನಾಡಲು ಪ್ರಯತ್ನ ಮಾಡಿದರು)

ಅಧ್ಯಕ್ಷರು :....ನಾನು ಆಗಲೇ ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದೇನೆ ಇದರ ಬಗ್ಗೆ ಬೇಕಾದಷ್ಟು ರೂಲಿಂಗ್‌ಗಳು ಇವೆ. ತಾವು ಹಾಗೆ ಏನಾದರೂ ನನ್ನನ್ನು ಕನವಿನ್ಸ್ ಮಾಡುವುದಕ್ಕೆ ಸಾಧ್ಯವಾಗುವುದಾದರೆ ನನ್ನನ್ನು ಚೇಂಬರಿನಲ್ಲಿ ಬಂದು ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ :—ತಮ್ಮ ಚೇಂಬರಿನಲ್ಲಿ ಬಂದು ನಾನು ತಮ್ಮನ್ನು ಒಪ್ಪಿಸುತ್ತೇನೆ. ಆದರೆ ನಾವು ಎಲ್ಲಿಯಾದರೂ ಒಂದು ಗುಪ್ತವಾಗಿ ಕೊಲೆಯಾಗಿರುವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಾ ಇಲ್ಲ. ಹತ್ತು ಜನ ಸೇರಿರುವ ಒಂದು ಮುಖ್ಯ ಸಭೆಯಲ್ಲಿ ನಡೆದಿರುವಂತಹ ಘಟನೆ ಇದು. ಇದರ

(ಶ್ರೀ ಕಾಗೋಡು ತಿಮ್ಮಪ್ಪ)

ಬಗ್ಗೆ ಯಾವ ಒಂದು ತನಿಖೆಯೂ ನಡೆದಿಲ್ಲ, ಪೋಲೀಸರು ಹೋಗಿ ವಿಚಾರಣೆಯೂ ಮಾಡಿಲ್ಲ ಮತ್ತು ಆತನ ಶವ ಪರೀಕ್ಷೆಯನ್ನು ಸಹ ಮಾಡಿಸಿಲ್ಲ. ಅಂದರೆ ದೇಶದಲ್ಲಿ ಲಾ ಅಂಡ್ ಆರ್ಡರ್ ಯಾವ ರೀತಿಯಲ್ಲಿದೆ ಎಂದು ಇದರಿಂದ ಅರ್ಥವಾಗುತ್ತದೆ.

ಅಧ್ಯಕ್ಷರು :—ನಾನು ಆಗಲೇ ಹೇಳಿದ್ದೇನೆ. ನೀವು ನನ್ನ ಚೇಂಬರಿನಲ್ಲಿ ಒಂದು ನೋಡಿ. ಇನ್ನು ಹೆಚ್ಚು ಇದರ ಬಗ್ಗೆ ಪ್ರಸ್ತಾಪ ಇಲ್ಲಿ ಮಾಡುವುದು ಬೇಡ ದಯವಿಟ್ಟು ಕೂತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :—ಇದನ್ನು ತಾವು ಬಹು ಲಘುವಾಗಿ ತಿಳಿದು ಕೊಳ್ಳತಕ್ಕದ್ದಲ್ಲ

X X X X

ಶ್ರೀ ಎಚ್. ಎಸ್. ಸಿದ್ದಪ್ಪ :—ಆ ವ್ಯಕ್ತಿ ಸತ್ತ ಬಗ್ಗೆ ಅವರ ಪತ್ನಿ ದೂರು ಕೊಟ್ಟಿಲ್ಲ. ಅವರು ಮನೆಯವರೂ ದೂರು ಕೊಟ್ಟಿಲ್ಲ. ಆ ರೀತಿ ಅವರು ದೂರು ಕೊಡದೇ ಇರುವುದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತೇವೆ. ಈ ಸಭೆಗೆ ಅರ್ಧಗಂಟೆ ಬಿಡುವು ಕೊಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ :—ತಮ್ಮ ತೀರ್ಪನ್ನು ಪ್ರಶ್ನೆ ಮಾಡಬೇಕು ಎಂಬುದು ನಮ್ಮ ಉದ್ದೇಶ ಅಲ್ಲ. ತಮ್ಮ ತೀರ್ಪನ್ನು ಪರಿಷ್ಕರಣ ಮಾಡಿ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :—ತಾವು ನನ್ನನ್ನು ಕನ್‌ವಿನ್ಸ್ ಮಾಡಿ ನಾನು ಇದಕ್ಕೆ ಒಪ್ಪಿಗೆ ಕೊಟ್ಟರೆ ಇದನ್ನು ನಾಳೆಯೇ ತೆಗೆದುಕೊಳ್ಳೋಣ. ಅದರೆ ಈಗ ಈ ಸಭೆಯಲ್ಲಿ ತಾವು ನನ್ನನ್ನು ಕನ್‌ವಿನ್ಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ತಾವು ತಮ್ಮ ಉತ್ತರದಲ್ಲಿ 'As no responsibility of the Government is involved in the matter proposed to be raised' ಎಂದು ಹಾಕಿದ್ದೀರಿ. ಈ ವಿಚಾರ ರೂಲ್ 52 ರಲ್ಲಿ ಎಲ್ಲಿದೆ? ಅಲ್ಲಿ ಅದು ನಮೂದಾಗಿಲ್ಲ. ತಮ್ಮ ಅಧಿಕಾರವನ್ನು ಚಲಾಯಿಸ ಬೇಕಾದರೆ ರೂಲ್ 50 ರಿಂದ 52 ರವರೆಗೂ ಮಾಡಬೇಕಾಗುತ್ತದೆ. ಆದ್ದರಿಂದ ಎಲ್ಲೂ ಇದರಲ್ಲಿ ರೆಸ್ಪಾನ್ಸಿಬಿಲಿಟಿ ಆಫ್ ದಿ ಗೌರ್ನಮೆಂಟ್ ಬರುವುದಿಲ್ಲ ಎಂದು ಇಲ್ಲವೇ ಇಲ್ಲ. ಆದ್ದರಿಂದ ಇದನ್ನು ಪುನರ್ಪರಿಶೀಲನೆ ಮಾಡಬೇಕು. If you want to exercise jurisdiction under rule 52 you must confine yourself to the ingredient mentioned there

xxxx Matter not recorded as ordered by the chair

ಇದರಲ್ಲಿ ಸರ್ಕಾರದ ನೇರವಾದ ಪ್ರವೇಶವಿದೆ ಮತ್ತು ಸರ್ಕಾರ ಇನ್‌ವಾಲ್ವ್ ಆಗಿದೆ. ಆದಕಾರಣ ತಾವು ಕೊಟ್ಟಿರುವ ರೂಲಿಂಗನ್ನು ಪುನರ್ಪರಿಶೀಲನೆ ಮಾಡು ವುದಕ್ಕೆ ತಮಗೆ ಸಂಪೂರ್ಣವಾದ ಅಧಿಕಾರವಿದೆ.

ಅಧ್ಯಕ್ಷರು:ಸರ್ಕಾರದ ಜವಾಬ್ದಾರಿ ಇಲ್ಲದಿದ್ದರೂ ತಮ್ಮ ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೇ ? ರೂಲ್ 52ರಲ್ಲಿ ಹೇಳಿರುವ ಪ್ರಕಾರ ಸರ್ಕಾರದ ಜವಾ ಬ್ದಾರಿ ಇದರಲ್ಲಿ ಇಲ್ಲವೇ ಇಲ್ಲ. ಒಂದು ಪಕ್ಷ ನನಗೆ ಈಗ ಇದ್ದಕ್ಕಿದ್ದಂತೆ ಹಾರ್ಟ್ ಫೈಲ್ಯೂರು ಆದರೆ ಅದಕ್ಕೆ ಸರ್ಕಾರ ಜವಾಬ್ದಾರಿ ಆಗುವುದಕ್ಕಾಗುತ್ತದೆಯೇ ?

ಶ್ರೀ ಹೆಚ್. ಎಸ್. ಸಿದ್ದಪ್ಪ.—ತಾವು ಆ ಮಾತನ್ನು ಹೇಳಬೇಡಿ

ಅಧ್ಯಕ್ಷರು : ಎಲ್ಲರೂ ಒಂದು ದಿನ ಸಾಯಲೇಬೇಕು. ಯಾರೂ ಶಾಶ್ವತವಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇಲ್ಲಿ ಸರಕಾರ ಮತ್ತು ಪಕ್ಷ ಒಂದೇ ಆಗಿರುವುದರಿಂದ, ಸರ್ಕಾರ ಅಪರಾಧಿಯಾಗಿರಬೇಕು ಇಲ್ಲವೇ ಸಾಕ್ಷಿಯಾಗಿರ ಬೇಕು. ಇವೆರಡನ್ನು ಬಿಟ್ಟು ಬೇರೆಯಾಗಿರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಿಲುವಳಿ ಸೂಚನೆಗಳ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಸಂಪ್ರದಾಯಗಳನ್ನು ಈ ಹಿಂದಿನವರು ನಮಗೆ ಹಾಕಿಕೊಟ್ಟು ಹೋಗಿದ್ದಾರೆ. ತಾವು ಈಗಾಗಲೇ ತಮ್ಮ ತೀರ್ಮಾನ ವನ್ನು ಕೊಟ್ಟಿದ್ದೀರಿ. ಆದರೂ ಸಹ ಈ ಮಾನ್ಯ ಸಭೆಯ ವಿರೋಧ ಪಕ್ಷದ ಸನ್ಮಾನ್ಯ ಸದಸ್ಯರು ಈ ವಿಚಾರದಲ್ಲಿ ಬಹಳ ತೀವ್ರತೆಯನ್ನು ವ್ಯಕ್ತಪಡಿಸು ತ್ತಿದ್ದಾರೆ. ಇದು ಏನೂ ಹೊಸದಲ್ಲ. ಇಂತಹ ವಿಚಾರಗಳು ಲೋಕಸಭೆಯಲ್ಲಾ ಗಲೀ, ರಾಜ್ಯಸಭೆಯಲ್ಲಾಗಲೀ, ವಿಧಾನ ಪರಿಷತ್ತುಗಳಲ್ಲಾಗಲೀ ಬಂದಾಗ ಅಧ್ಯಕ್ಷರು ಅಥವಾ ಸಭಾಪತಿಯವರು, ಯಾವ ಸದಸ್ಯರುಗಳು ಬಹಳ ತೀವ್ರತೆ ಯನ್ನು ವ್ಯಕ್ತಪಡಿಸುತ್ತಾರೋ ಅಂತಹವರನ್ನು ತಮ್ಮ ಛೇಂಬರಿಗೆ ಕರೆಸಿಕೊಂಡು ವಿಚಾರ ವಿನಿಮಯ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರುವುದು ಒಂದು ಸಂಪ್ರದಾಯವಾಗಿದೆ. ಅದೇ ರೀತಿ ತಾವು ಸಹ ತಮ್ಮ ಛೇಂಬರಿಗೆ ಒಂದು ಮಾತನಾಡಬಹುದೆಂದು ಹೇಳಿದರೂ ಸಹ ಮಾನ್ಯ ಸದಸ್ಯರು ಮತ್ತೆ ಮತ್ತೆ ಅದೇ ವಿಚಾರವನ್ನು ತಮಗೆ ತೋರಿದ ರೀತಿಯಲ್ಲಿ ವ್ಯಾಖ್ಯಾನ ಮಾಡಿಕೊಂಡು, ಇನ್ನೊಂದು ರಾಜಕೀಯ ಪಕ್ಷದ ಬಗ್ಗೆ ನಾನಾ ವಿಧವಾದ ಮಾತುಗಳನ್ನು ಆಡುವುದು ನ್ಯಾಯವಲ್ಲ ಎಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿ ಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಇನ್ನೊಂದು ಪಕ್ಷದ ಬಗ್ಗೆ ನಾವು ಮಾತ ನಾಡುತ್ತಿಲ್ಲ: ನಡೆದಿರುವ ಘಟನೆಯ ಬಗ್ಗೆ ಹೇಳುತ್ತಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ವಿರೋಧ ಪಕ್ಷದ ಸಹೋದ್ಯೋಗಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇ ನೆಂದರೆ, ತಾವು ಈಗ ಕೊಟ್ಟಿರುವ ನಿರ್ದೇಶನದ ಪ್ರಕಾರ ಅವರೆಲ್ಲರೂ ತಮ್ಮ ಜೊತೆಯಲ್ಲಿ ಚರ್ಚೆ ಮಾಡಿ ಅನಂತರ ಇದಕ್ಕೆ ಯಾವುದಾದರೂ ಒಂದು ಪರಿಹಾರ ಕಂಡು ಹಿಡಿಯುವುದು ನ್ಯಾಯವಾದುದು, ಅದನ್ನು ತಾವು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಚಿವರು ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿದವರು ಮತ್ತು ಲೋಕಸಭಾ ಸದಸ್ಯರಾಗಿಯೂ ಅನುಭವ ಪಡೆದವರಾ ಗಿದ್ದಾರೆ. ಅವರ ಒಂದು ಅನುಭವ ಹೇಳುವಾಗ ಮತ್ತು ಹಿಂದಿನ ಸಂಪ್ರದಾಯ ಗಳನ್ನು ಈ ಸದನದಲ್ಲಿ ಎತ್ತಿ ತೋರಿಸುವಾಗ ಅವರು ಹಿಂದಿನ ಇತಿಹಾಸವನ್ನು ಸಂಪೂರ್ಣವಾಗಿ ನೋಡಲಿಲ್ಲವೆಂದು ನನಗನ್ನಿಸುತ್ತದೆ. ಅವರು ಒಂದು ಮಾತನ್ನು ಹೇಳಿದರು : ಏನೆಂದರೆ, ಯಾವುದೋ ಒಂದು ಸನ್ನಿವೇಶವನ್ನು ನಾವು ಕಲ್ಪಿಸಿ ಕೊಂಡು ಇನ್ನೊಂದು ರಾಜಕೀಯ ಪಕ್ಷವನ್ನು ಹಳಿಯುವುದಕ್ಕೆ ಪ್ರಯತ್ನ ಮಾಡಿ ದ್ದೇವೆನ್ನುವ ವಿಷಯವನ್ನು ಅವರು ಪ್ರಸ್ತಾಪ ಮಾಡಿದರು.

ಅಧ್ಯಕ್ಷರು.—ತಾವು ವಿಪರೀತ ಭಾವನೆ ಮಾಡಿಕೊಳ್ಳುತ್ತೀರಾ, ಅವರು ಆ ರೀತಿ ಎಲ್ಲಿ ಹೇಳಿದರು ?

ಶ್ರೀ ಕಾಗೋಡು ತಿಮ್ಮಪ್ಪ.—ಅವರ ಒಂದು ಮಾತಿನಿಂದ ಆ ಭಾವನೆ ಬರುವುದಕ್ಕೆ ಸಾಧ್ಯವಿದೆ. ನಾವು ಅವರ ಪಕ್ಷವನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಏನು ಒಂದು ಘಟನೆ ಆ ಒಂದು ಸಂದರ್ಭದಲ್ಲಿ ನಡೆದಿದೆ ಅದು ಔಚಿತ್ಯಪೂರ್ಣವಾಗಿದೆಯೋ ಅಥವಾ ಔಚಿತ್ಯಪೂರ್ಣ ಮೀರಿ ಹೋಗಿದೆಯೋ ಎಂಬುದು ಇಲ್ಲಿರುವ ಪ್ರಶ್ನೆ. ಇಡೀ ಸರ್ಕಾರ ಮತ್ತು ಇಡೀ ಸಮೂಹವೇ ಅಲ್ಲಿ ಸೇರಿರತಕ್ಕ ಸಂದರ್ಭದಲ್ಲಿ ಇಂತಹ ಒಂದು ಘಟನೆ ನಡೆದ ಮೇಲೆ, ಅದರ ಬಗ್ಗೆ ಏನೂ ತನಿಕೆ ನಡೆಯಲಿಲ್ಲ ಎಂದರೆ, ಸಾರ್ವಜನಿಕರು ಅದರ ಬಗ್ಗೆ ಏನು ಭಾವಿಸ ಬೇಕು ? ಆದಕಾರಣ ಸರ್ಕಾರ ತನ್ನ ಕರ್ತವ್ಯವನ್ನು ಮಾಡುವುದರಲ್ಲಿ ವಿಫಲ ವಾಗಿದೆ ಎಂದು ನಾವು ಹೇಳುತ್ತಿರುವುದು. ಇದರಲ್ಲಿ ಸರ್ಕಾರದ ಲೋಪವಿದೆ.

ಅಧ್ಯಕ್ಷರು : ಇದರಲ್ಲಿ ಸರ್ಕಾರದ ಲೋಪವೇನೂ ನಡೆದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ ; ನಡೆದಿದೆ ಎಂದು ನಾವು ತೋರಿಸಿಕೊಟ್ಟರೆ ಬಹುಶಃ ನಾವು ಹೇಳುವ ಮಾತನ್ನು ತಾವು ಸಂಪೂರ್ಣವಾಗಿ ಒಪ್ಪುತ್ತೀರಾ ?

ಅಧ್ಯಕ್ಷರು : ನಾನು ಶುದ್ಧವಾದ ಕನ್ನಡದಲ್ಲಿ ಹೇಳುತ್ತಿದ್ದೇನೆ, ನನ್ನ ಚೇಂಬರಿಗೆ ಬಂದು ನನ್ನನ್ನು ಒಪ್ಪಿಸಿ, ನನಗೇನಾದರೂ ಒಪ್ಪಿಗೆಯಾದರೆ ನಾಳೆ ದಿವಸ ಅದನ್ನು ತೆಗೆದುಕೊಳ್ಳೋಣ ಎಂದು. ಆದರೂ ತಾವು ಹಿಂದಕ್ಕೇ ಹೋಗುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಮತ್ತು ನಿಮ್ಮ ನಡುವೆ ನಡೆಯುತ್ತಿರುವ ವಾದವಿವಾದ ಏನಿದೆ, ವಿಚಾರಗಳು ಏನಿವೆ, ಆ ಬಗ್ಗೆ ನಾವು ಮತ್ತು ನೀವು ಬಹಳ ಹತ್ತಿರದಲ್ಲಿಯೇ ಇದ್ದೇವೆ. ಈ ಒಂದು ಘಟನೆಯಲ್ಲಿ ಸರ್ಕಾರ ತನ್ನ ಕರ್ತವ್ಯದಲ್ಲಿ ವಿಮುಖವಾಗಿದೆ ಮತ್ತು ವಿಫಲವಾಗಿದೆ.

ಅಧ್ಯಕ್ಷರು : ನಾನು ತಿಳಿದುಕೊಂಡಿರುವ ಪ್ರಕಾರ, ನಾನು ಓದಿರುವ ಪ್ರಕಾರ ಇದು ನಿಲುವಳಿ ಸೂಚನೆ ಆಗುವುದಿಲ್ಲ, ಅದಕ್ಕಾಗಿ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಬಹುಶಃ ನಾವು ಇದರ ಬಗ್ಗೆ ವಿವರವಾಗಿ ಹೇಳಿದರೆ ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಬಹುದು.

ಅಧ್ಯಕ್ಷರು : ಆ ವಿವರಗಳನ್ನೆಲ್ಲಾ ನನ್ನ ಚೇಂಬರಿಗೆ ಬಂದು ಹೇಳಿ ; ಇಲ್ಲಿ ಮಾತ್ರ ಹೇಳುವುದು ಬೇಡ.

ಶ್ರೀ ಹೆಚ್. ಟಿ. ಕೃಷ್ಣಪ್ಪ ; ತಮ್ಮನ್ನು ಒಪ್ಪಿಸಬೇಕೆಂದು ನಮ್ಮ ಶಕ್ತಿಯನ್ನೆಲ್ಲಾ ಮೀರಿ ಪ್ರಯತ್ನ ಮಾಡಿದರೂ ತಾವು ಒಪ್ಪುತ್ತಿಲ್ಲ. ಇದು ಸಾರ್ವಜನಿಕರ ಆಸಕ್ತಿಯನ್ನು ಕೆರಳಿಸಿದೆ. ಅಂದಿನ ಸಭೆಯಲ್ಲಿ ಪತ್ರಿಕೆಯವರಾಗಲೀ, ಪೋಲೀಸಿನವರಾಗಲೀ ಇರಲಿಲ್ಲ; ಅಲ್ಲಿ ಒಂದೇ ಪಕ್ಷದವರು ಇದ್ದರು. ಆ ಸಂದರ್ಭದಲ್ಲಿ ಆಕಸ್ಮಿಕವಾದ ಮರಣ ಸಂಭವಿಸಿದೆ. ಇದು ಆಕಸ್ಮಿಕ ಮರಣವಾದ ಕಾರಣ ಮರಣೋತ್ತರ ತಪಾಸಣೆ ನಡೆಯಬೇಕಾಗಿತ್ತು, ಆದರೆ ನಡೆದಿಲ್ಲ.

ಅಧ್ಯಕ್ಷರು : ಅಕಸ್ಮಿಕ ಮರಣವಾದರೆ, ಹಾರ್ಟ್‌ಫೈಲ್ಯೂರ್ ಆದರೆ, ತಪಾಸಣೆ ಮಾಡುವುದು ಏನಿದೆ?

ಶ್ರೀ ಹೆಚ್. ಟಿ. ಕೃಷ್ಣಪ್ಪ : ಇದು ಅನುಮಾನಕ್ಕೆ ಆಸ್ಪದವಾಗಿದೆ

ಶ್ರೀ ಡಿ. ದೇವರಾಜ ಅರಸ್ : ಇದು ಅನುಮಾನಾಸ್ಪದ ಎಂದು ಯಾರು ಹೇಳಿದ್ದಾರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ : ತಾವು ವಿಚಾರಣೆ ನಡೆಸಿ. ನಾವು ರುಜುವಾತು ಮಾಡಿಕೊಡುತ್ತೇವೆ

ಶ್ರೀ ಡಿ. ದೇವರಾಜ ಅರಸ್ : ಆ ರೀತಿ ಅನುಮಾನ ಇದ್ದರೆ ಒಂದು ಅರ್ಜಿ ಕೊಡಿ, ವಿಚಾರ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ಪ್ರತಿಯೊಂದಕ್ಕೂ ಕೊಡುವುದಕ್ಕಾಗುತ್ತದೆಯೇ ?

SRI D. DEVARAJ URS.—Why are they so much agitated? Is it out of political motive ? It is politically motivated and they want to make political capital out of it.

SRI K. H. Hanumegowda : It is a murder case.

ಶ್ರೀ ವಾಟಾಳ್ ನಾಗರಾಜ : ಜವಾಬ್ದಾರಿ ಸ್ಥಾನದಲ್ಲಿರುವ ಮುಖ್ಯ ಮಂತ್ರಿಗಳು ಈ ರೀತಿಯಾಗಿ ಬೇಜವಾಬ್ದಾರಿಯಿಂದ ಇಲ್ಲಿ ಹೇಳುವುದು ಸರಿಯಾದುದಲ್ಲ. It is a case of murder.

ಅಧ್ಯಕ್ಷರು : ಮಾನ್ಯ ಸದಸ್ಯರು ಹೀಗೆ ಎದ್ದು ಹೇಳುವುದು ಸರಿಯಾಗಿರುತ್ತದೆಯೆ? ರೂಲಿಂಗ್ ಕೊಟ್ಟಾಗಿದ್ದರೂ ನೀವೇನು ಹೀಗೆ ಮಾತನಾಡುತ್ತಿದ್ದೀರಿ ?

SRI D. DEVARAJ URS :—If it was a case of murder, then the members of his family would have filed a Police complaint.

ಶ್ರೀ ವಾಟಾಳ್ ನಾಗರಾಜ : ಈ ರೀತಿಯಾಗಿ ಬೇಜವಾಬ್ದಾರಿಂದ ಈ ಸಭೆಯಲ್ಲಿ ಮುಖ್ಯ ಮುಂತ್ರಿಗಳು ಮಾತನಾಡುವುದು ಸರಿಯಲ್ಲ.

SRI K. H. PATIL.—There should be a limit to the use of his long tongue.

ಶ್ರೀ ಡಿ. ದೇವರಾಜ ಅರಸ್ : ನಮ್ಮ ಮಾನ್ಯ ಸ್ನೇಹಿತರು ಸೌಜನ್ಯದಿಂದ ಇರಬೇಕು. ಅಧ್ಯಕ್ಷರು ಒಂದು ಸಾರಿ ರೂಲಿಂಗು ಕೊಟ್ಟಾದ ಮೇಲೆ ಪುನಃ ಪುನಃ ಅದೇ ವಿಚಾರದಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ. ಮತ್ತು ಸಭೆಯ ಕಾರ್ಯಕಲಾಪಗಳನ್ನು ಈ ರೀತಿ ಪ್ರಸ್ತಾಪಮಾಡಿ ವೃಥಾ ಕಾಲ ಹರಣ ಮಾಡುವುದೂ ಸರಿಯಲ್ಲ. ನಾನು ಆಗಲೇ ಇದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಅದನ್ನು ನೋಡುತ್ತೇವೆ ಎಂದು ಹೇಳಿದ್ದೇನೆ. ಅದರಲ್ಲೂ ನಮ್ಮ ಸಭೆಯ ರೂಲ್ಸುಗಳು ಹಾಗೂ ಪ್ರೊಸೀಜರುಗಳನ್ನು ತಿಳಿದಿರುವಂತಹ ಹಿರಿಯ ಸದಸ್ಯರಾದ

ಶ್ರೀ ಕಾಗೋಡು ತಿಮ್ಮಪ್ಪನವರೂ ಈ ರೀತಿ ಮಾಡುತ್ತಿರುವುದನ್ನು ನೋಡಿ ನನಗೆ ತುಂಬಾ ವ್ಯಸನಕರವಾಗಿದೆ.

ಅಧ್ಯಕ್ಷರು : ಪುನಃ ಅದೇ ಪ್ರಸ್ತಾಪ ಮಾಡುವುದಾಗಿದ್ದರೆ ಅದಕ್ಕೆ ಅವಕಾಶ ಕೊಡಲಾಗುವುದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ : ನಾವು ಮನವಿ ಮಾಡಬೇಕಾಗಿದೆ. ಎಷ್ಟು ಸಾರಿ ಮನವಿ ಮಾಡಿದರೂ ತಾವು ಗಮನ ಕೊಡಲಿಲ್ಲ. ತಮ್ಮಲ್ಲಿ ಕೇಳಿಕೊಳ್ಳ ಬೇಕಾದರೆ ನಾವು ಮನವಿ ಮಾಡಲೇ ಬೇಕಾಗುತ್ತದೆ. ತಾವು ತಮ್ಮ ಆಜ್ಞೆ ಗಳನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು : ಎಷ್ಟು ಸಾರಿ ಹೇಳುವುದು ? ಇದಕ್ಕಾಗಿ ಈಗಾಗಲೇ ಸುಮಾರು ಒಂದೂವರೆಗಂಟೆಕಾಲ ಆಗಿ ಹೋಯಿತು.

ಶ್ರೀ ಜಿ. ಪುಟ್ಟಸ್ವಾಮಯ್ಯ : ಸಮಾಧಾನ ನಮಗೆ ಆಗುವವರೆಗೆ ತಮ್ಮಲ್ಲಿ ನಾವು ಮನವಿ ಮಾಡಿಕೊಳ್ಳಬೇಕಾಗಿ ಬರುತ್ತದೆ.

ಅಧ್ಯಕ್ಷರು : ನನಗೆ ಸಮಾಧಾನವಾಗುವಂತೆ ತಿಳಿಸಲು ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ, ಅದರಂತೆ ಶ್ರೀ ತಿಮ್ಮಪ್ಪನವರು ಬರುತ್ತೇನೆಂದು ಹೇಳಿದ್ದಾರೆ. ನೀವೇಕೆ ಹೀಗೆ ಹಠ ಮಾಡುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ ; ಮಾನ್ಯ ಮುಖ್ಯ ಮಂತ್ರಿಗಳು ಉದ್ವೇಗ ಪೂರಿತವಾಗಿ, ಆವೇಶಪೂರಿತವಾಗಿ ಇಲ್ಲಿ ಹೇಳುತ್ತಿರುವ ಮಾತುಗಳು ಈ ಸಭೆಯ ಸದಸ್ಯರ ಹಕ್ಕಿಗೆ ಧಕ್ಕೆ ಬರುವ ರೀತಿಯಲ್ಲಿದೆ. ಆ ರೀತಿ ಅವರು ಹೇಳಬಾರದು.

ಶ್ರೀ ಹೆಚ್. ಟಿ. ಕೃಷ್ಣಪ್ಪ : ತಮ್ಮ ಪಕ್ಷದ ಬಗ್ಗೆ ನಾವು ಹೇಳಲು ಹೋಗುತ್ತಿಲ್ಲ.

MYSORE LAND REVENUE (AMENDMENT) BILL 1973

INTRODUCTION

MADAM SPEAKER :-The Hon. Minister for Revenue will introduce the Bill.

SRI N. HUTCHMASTHY GOWDA :-(Minister for Revenue). I beg to introduce the Mysore Land Revenue (Amendment) Bill, 1973.

MADAM SPEAKER :-The Mysore Land Revenue (Amendment) Bill, 1973 is introduced.

MYSORE COMPULSORY PRIMARY EDUCATION AMENDMENT BILL 1973

INTRODUCTION

SRI A. R. BADARINARAYAN (Minister for Education:- I beg to introduce the Mysore Compulsory Primary Education (Amendment) Bill, 1973.

MADAM SPEAKER :- The Mysore Compulsory Primary Education (Amendment) Bill, 1973 is introduced.

INDUSTRIAL EMPLOYMENT (STANDING ORDERS) MYSORE AMENDMENT BILL 1973

INTRODUCTION

SRI AZEEZ SAIT (Minister for Labour):- I beg to introduce the Industrial Employment (Standing Orders) Mysore Amendment Bill, 1973.

MADAM SPEAKER :- The Industrial Employment (Standing Orders) Mysore Amendment Bill, 1973 is introduced.

MYSORE CO-OPERATIVE SOCIETIES (AMENDMENT) BILL 1973

(Debate Cont'd)

CONSIDERATION OF CLAUSES

MADAM SPEAKER :- I will now take up clause by clause consideration of The Mysore Co-operative Societies (Amendment) Bill, 1973,since there are no amendments to clauses 2 to 4, I will put them to vote. The question is :

CLAUSESS 2 to 4

"That clauses 2 to 4 both inclusive do stand part of the Bill."

The motion was adopted

Clauses 2 to 4 both inclusive, were added to the Bill.

DHERNA BY MEMBERS:

ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರೂ ಹಾಗೂ ಇನ್ನಿತರ ಸದಸ್ಯರು ಸಭಾಧ್ಯಕ್ಷರ ಮುಂದೆ ಧರಣಿ ಮಾಡಿ ಕುಳಿತರು:

ಧರಣಿ ಮಾಡಿದ ಸದಸ್ಯರುಗಳು:

1. ಶ್ರೀ ಹೆಚ್. ಟಿ. ಕೃಷ್ಣಪ್ಪ
2. ಎಂ. ರಾಜಶೇಖರಮೂರ್ತಿ
3. ಕೆ. ಮೊದೇಗೌಡ
4. ಎಸ್. ವೈ. ಪಾಟೀಲ್
5. ಹೆಚ್. ಎಸ್. ಸಿದ್ದಪ್ಪ
6. ಎಸ್. ಬಂಗಾರಪ್ಪ
7. ಕೊಣಂದೂರು ಲಿಂಗಪ್ಪ
8. ವಾಟಾಳ್ ನಾಗರಾಜ್
9. ಆರ್. ವೀರಣ್ಣ
10. ಕಾಗೋಡು ತಿಮ್ಮಪ್ಪ
11. ಬಿ. ಪುಟ್ಟಸ್ವಾಮಯ್ಯ
12. ಕೆ. ಹೆಚ್. ಹನುಮೇಗೌಡ
13. ಎನ್. ಎಸ್. ಗುರುಸಿದ್ದಪ್ಪ
14. ವಿ. ಬಿ, ನೂಲಿ
15. ಎಂ. ಕೆ. ಕುಲಕರ್ಣಿ
16. ಪಿ. ಬಿ. ಪಾಟೀಲ್

---

*Bills appended as annexure

ಶ್ರೀ ಡಿ. ದೇವರಾಜ ಅರಸ್.—ನಮ್ಮ ಮಾನ್ಯ ಸ್ನೇಹಿತರು ಈ ಮನೆಯ ಕಾರ್ಯಕಲಾಪಗಳಿಗೆ ಧಕ್ಕೆ ತರುತ್ತಿದ್ದಾರೆ ಮತ್ತು ಇದರಲ್ಲಿ ರಾಜಕೀಯ ಮಾಡಲು ಹೊರಟಂತೆ ಕಾಣುತ್ತೆ. ಇದು ಈ ಸಭೆಯ ಘನತೆ ಹಾಗೂ ಗೌರವಕ್ಕೆ ಧಕ್ಕೆ ತರುತ್ತದೆ ಮತ್ತು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತದೆ. ಆದುದರಿಂದ ಇವರನ್ನು ಇಂದಿನ ಸಭೆಗೆ ಸಸ್‌ಪೆಂಡ್ ಮಾಡಬಹುದು ಎಂದು ಸೂಚನೆ ಮಾಡುತ್ತೇನೆ.

MADAM SPEAKER.—I request all the members to go to their seats.

(*The members did not resume their seats*)

MADAM SPEAKER.—I name all the members who are sitting in the aisle.

SUSPENSION OF MEMBERS

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ ಈಗ ಕೆಳಗಡೆ ಕುಳಿತಿರತಕ್ಕ ಮಾನ್ಯ ಸದಸ್ಯರುಗಳು ಅಧ್ಯಕ್ಷರಿಗೆ ಅಗೌರವ ಪಡಿಸುತ್ತಿದ್ದಾರೆ, ಪ್ರಜಾಪ್ರಭುತ್ವಕ್ಕೆ ಅಗೌರವ ತರುತ್ತಿದ್ದಾರೆ. ಆದುದರಿಂದ ರೂಲ್ 309 ಪ್ರಕಾರ ಅವರೆಲ್ಲರನ್ನೂ ಈ ದಿವಸದ ಕಾರ್ಯಕಲಾಪದಲ್ಲಿ ಭಾಗವಹಿಸದಂತೆ ಹೊರಗೆಹಾಕಬೇಕೆಂದು ಸೂಚಿಸುತ್ತೇನೆ.

MADAM SPEAKER.—The question is :

"That all the 16 members who are sitting in the aisle be from the services of the assembly to-day."

The motion was adopted

MADAM SPEAKER.—All the members who are suspended will kindly withdraw.

Please withdraw

(*The suspended members did not withdraw*)

MADAM SPEAKER.—The house stands adjourned for 15 minutes.

The house adjourned at Forty-two minutes past two of the Clock and reassembled ten minutes past four of the Clock.

MADAM SPEAKER.—In the chair

MADAM SPEAKER.—I adjourned the house and it will meet again at 1 P. M. on Monday the 3rd September 1973.

The House adjourned at Ten minutes past four of the Clock to meet again at one of the Clock on Monday the 3rd September 1973.)

ANNEXURE--A

THE MYSORE LAND REVENUE (AMENDMENT) BILL, 1973.

(L. A. Bill No. 42 of 1973)

A BILL further to amend the Mysore Land Revenue Act, 1964.

WHEREAS it is expedient further to amend the Mysore Land Revenue Act, 1964 (Mysore Act No. 12 of 1964);

BE it enacted by the Mysore State Legislature in the Twenty-fourth year of the Republic of India as follows :—

1. SHORT TITLE AND COMMENCEMENT.—(1) This Act may be called the Mysore Land Revenue (Amendment) Act. 1973.

(2) It shall come into force at once

2. AMENDMENT OF SECTION 2.—In Scetion 2 of the Mysore Land Revenue Act, 1964 (Mysore Act 12 of 1964) (hereinafter referred to as the principal Act), to clause, (27)

the following further proviso shall be and shall be deemed always to have been added, namely :—

"Provided further that with reference to garden lands in which areca is grown, the standard rate shall be the value of two per cent of the average yield of crop per acre on the land in that class of one hundred per cent classification value."

3. INSERTION OF NEW SECTION 116A.— After Section 116 of the principal Act, the following Section shall be and shall be deemed always to have been inserted, namely:--

"116A. LIMIT OF ENHANCEMENT OF ASSESSMENT.— Notwithstanding anything contained in Section 116, in respect of lands classified as dry but not having any irrigation facilities from any source of water which is the property of the State Government the existing assessment of such lands shall not be increased at a settlement by more than one hundred per cent."

4. AMENDMENT OF SECTION 194.—In Section 194 of the principal Act, after sub-section (2), the following sub-section shall be and shall be deemed always to have been inserted, namely :—

"(3) Where the collection of land revenue is suspended or the payment thereof is remitted under sub-section (1), the collection or payment of all cesses levied on the land revenue by any law in force shall, notwithstanding anything contained in such law, be suspended or remitted to the extent to which the collection or payment of land revenue in suspended or remitted, as the case may be."

5. REPEAL OF MYSORE ORDINANCE NO. 3 OF 1973.— The Mysore Land Revenue(Amendment) Ordinance(Mysore Ordinary No. 3 of 1973) is hereby repealed.

Provided that anything done or any action taken under the principal Act as amended by the said Ordinance shall be deemed to have been done or taken under the principal Act as amended by this Act.

STATEMENT OF OBJECTS AND REASONS

At present the land revenue assessment on areca gardens is fixed at 4 per cent of the gross produce as per clause (27) of Section 2 of the Mysore Land Revenue Act. Representations have been received from some areca garden owners for reduction of this assessment. Areca gardens are similar to plantations in that they require heavy capital investment and a long gestation period before they begin yielding regular crops. It is therefore considered necessary to reduce the standard rate in respect of areca gardens from 4 per cent to 2 per cent by amending clause (27) of Section 2.

It is considered necessary to impose a suitable ceiling on increase in assessment at a settlement in respect of dry lands which have no irrigation facilities from any Government source of water. Hence a new Section 116A is proposed to be inserted for this purpose.

Different cesses are collected at certion percentages of the land revenue. Therefore when land revenue is suspended or remitted, it is but proper that cesses levied on the basis of land revenue are similary suspended or remitted But there is no provision for this purpose in the Act. It is therefore proposed to amend to amend Section 194 to provide for suspension or remission of cesses in such cases.

EXPLANATORY STATEMENT REGARDING REPLACEMENT OF ORDINANCE No. 3 OF 1973 BY A BILL.

[Vide Rule 70(1) of the Rules of Procedure and Conduct of Business in Mysore Legislative Assembly]

It was proposed to introduce a Bill to effect a number of amendments to the Mysore Land Revenue Act. 1964. But the Bill could not be finalised before the close of the last Session of the State Legislature. A few of the amendments proposed required to be given effect to immediately to provide urgently needed relief to the landholders in respect of assessment and cesses recoverable from them. Hence an Ordinance was issued for that purposes. The present Bill is meant to replace the Ordinance and thereby continue the enforcement of the amendments.

N. HUTCHAMASTHY GOWDA

Te. HANUMANTHAPPA,
Secretary.

ANNEXURE--B

THE MYSORE COMPULSORY PRIMARY EDUCATION (AMENDMENT) BILL, 1973.

(L. A. BILL NO. 44 OF 1973)

A BILL FURTHER TO AMEND THE MYSORE COMPULSORY PRIMARY EDUCATION ACT, 1961.

Whereas it is expedient further to amend the Mysore Compulsory Primary Education Act. 1961 (Mysore Act 9 of 1961):

Be it enacted by the Mysore State Legislature in the Twenty-fourth year of the Republic of India as follows:—

1. SHORT TITLE AND COMMENCEMENT.—(1) This Act may be called the Mysore Compulsory Primary Education Amendment) Act, 1973.

(2) It shall be deemed to have come into force on the 21st day of May 1969.

2. INSERTION OF NEW SECTION 17A.—After Section 17 of the Mysore Compulsory Primary Education Act, 1961) (Mysore Act 9 of 1961). the following Section shall be

inserted, namely :—

" 17A. LOCAL AUTHORITIES ENTITLED TO COST OF COLLECTION OF EDUCATION CESS.—where the education cess under this Act is recovered by a local authority, such local authority shall be entitled to deduct ten per cent of the amount recovered as the cost of collection and the balance shall be paid to the State Government. "

STATEMENT OF OBJECTS AND REASONS

The Mysore Compulsory Primary Education Act, 1961 does not contain any provision which enables a local authority to retain the deduction of collection charges from out of the amount of education cess recovered. It is considered necessary that provision should be made enabling local authorities to retain ten per cent of education cess recovered as collection charges.

Hence this Bill

FINANCIAL MEMORANDUM

New Section 17-A of the Act proposed to be inserted by clause 2 of the Bill entitles the local authority which collects the education cess to retain ten per cent of the collection towards cost of collection. Due to introduction of this Section, the State Government will have to forgo nearly a recurring sum of Rs. 4.70 lakhs per annum from the Consolidated Fund of the State.

A. R. BADARINARAYANA,

Te. HANUMANTHAPPA,
Secretary

ANNEXURE--C

THE INDUSTRIAL EMPLOYMENT (STANDING ORDERS) (MYSORE AMENDMENT) BILL 1973

(L. A. Bill No. 43 of 1973)

A BILL TO AMEND THE INDUSTRIAL EMPLOYMENT (STANDING ORDERS) ACT. 1946 IN ITS APPLICATION TO THE STATE OF MYSORE.

Whereas it is expedient to amend the Industrial Employment (Standing Orders) Act, 1946 (Central Act 20 of 1946) in its application to the State of Mysore;

BE it enacted by the Mysore State Legislature in the Twenty-fourth Year of the Republic of India as follows:—

1. SHORT TITLE AND COMMENCEMENT.—(1) This Act may be called the Industrial Employment (Standing Orders) (Mysore Amendment) Act 1973.

(2) It shall come into force on such date as the State Government may, by notification in the official *Gazette* appoint.

2. AMENDMENT OF SUB-SECTION (3) OF SECTION 1.—In Section 1 of the Industrial Employment (Standing Orders) Act, 1946 (Central Act 20 of 1946) in its application to the State of Mysore, for the words "one hundred" occuring in sub-section (3) and in the proviso to it, the word "fifty" shall be substituted.

STATEMENT OF OBJECTS AND REASONS

The Industrial Employment (Standing Orders) Act. 1946. provides that employers in industrial establishments should define with sufficient precision the conditions of employment under them and to make the said conditions known to the workmen employed by them.

The Act applies to every industrial establishment wherein 100 or more workmen are employed or were employed on any day of the preceding 12 months.

There are a large number of industrial establishments which employ 50 or more workers but less than 100, where it is felt necessary that the conditions of employment should be specifically laid down so that the incidence of industrial disputes and unrest be minimised.

Hence this Bill

AZEEZ SAIT,

Te. HANUMANTHAPPA,
Secretary

WD 5—GBPC—550—29-4-74.

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, the 3rd September 1973 Bhadrapada 12,1895 S.E.

The House met in the Assembly Chamber, Vidhana Soudha, at one of the Clock.

MADAM SPEAKER : (*Smt. K. S. Nagarathnamma*) in the Chair

STARRED QUESTIONS

(To Which Oral Answers were Given)

GRANT OF OLD-AGE PENSION IN RAICHUR DISTRICT

1. SRI M. VIRUPAKSHAPPA (Koppal)

Will the Minister for Finance be pleased to state.—

(*a*) the number of applications for "Old-age Pension" received in Raichur District, Talukwise during the last three years upto the latest convenient date;

(*b*) of them, the number sanctioned and the number pending and the reasons for pendency ?

SRI K. H. PATIL (Minister for Agriculture and Forests).—On behelf of

SRI M. Y. GHORPADE (Minister for Finance).—

(*a*) and (*b*) *Vide* Statement placed on the Table of the House. *

* Copy placed in the Mysore Legislative Labrary Vide No.5 dated 3-9-73.

ಶ್ರೀ ಎಂ. ವಿರೂಪಾಕ್ಷಪ್ಪ :—ರಾಯಚೂರು ಜಿಲ್ಲೆಯಲ್ಲಿ ವೃದ್ಧಾಪ್ಯ ವೇತನ ಕೊಡುವ ಕೆಲಸ ಕಾರ್ಯಗಳು ಬಹಳ ಮಂದಗತಿಯಿಂದ ನಡೆಯುತ್ತಿವೆ ಎನ್ನುವ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಕೆ. ಎಚ್. ಪಾಟೀಲ್ :—ನಿಜ.

ಶ್ರೀ ಎಂ. ವಿರೂಪಾಕ್ಷಪ್ಪ :—ಹಾಗಾದರೆ ಅದನ್ನು ತೀವ್ರಗತಿಯಿಂದ ಕಾರ್ಯಗತಗೊಳಿಸಲು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಎಚ್. ಪಾಟೀಲ್ : ಅದನ್ನು ತೀವ್ರಗತಿಯಿಂದ ಕಾರ್ಯಗತ ಗೊಳಿಸಲು ಸರ್ಕಾರದಿಂದ ನಿಗದಿಯಾದ ಸಮಯದೊಳಗೆ ಕೊಡುವುದಕ್ಕೆ ಸಾಧ್ಯ ವಾಗದೆ ತೊಂದರೆಯಾಗಬಹುದು ಎಂದು ಕೆಲವು ಸಂಧರ್ಭಗಳಲ್ಲಿ ಡೆಪ್ಯುಟಿ ಕಮಿಷ ನರ್‌ಗೆ ಕೊಡಲು ಅದೇಶ ಕೊಡಲಾಗಿದೆ. ಇನ್ನು ಸೆಕ್ರೆಟೆರಿಯಟ್‌ನಲ್ಲಿಯೂ ಕೂಡ ತೀವ್ರಗತಿಯಿಂದ ಕೆಲಸ ಮಾಡುತ್ತಿದ್ದಾರೆ.

ಶ್ರೀ ಮಾರ್ಗದ ಮಲ್ಲಪ್ಪ :—ಇಂತಿಷ್ಟು ಕಾಲದಲ್ಲಿ ವೃದ್ಧಾಪ್ಯ ವೇತನ ಗಳನ್ನು ಮಂಜೂರು ಮಾಡಬೇಕೆಂದು ನಿಗದಿ ಮಾಡಿ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲವೇ, ಸ್ವಾಮಿ ?

ಶ್ರೀ ಕೆ. ಎಚ್. ಪಾಟೀಲ್ :—ಆದಷ್ಟು ಜನರಿಗೆ ತೊಂದರೆಯಾಗದಂತೆ ಕೊಡಲು ದಿನಾಂಕ 1-4-1970 ರಂದು ಸರ್ಕಾರ ಒಂದು ಆರ್ಡರ್ ಸಹಿತ ಮಾಡಿದೆ. ಡೆಪ್ಯುಟಿ ಕಮಿಷನರ್ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಆರ್ಡರ್ ಹೊರಡಿಸಿದ ಮೇಲೆ ಇದರ ಬಗ್ಗೆ ಅನೇಕ ಗಂಡಾಂತರಗಳು ಒದಗುತ್ತಿವೆ. ಅವು ಏನೆಂದರೆ ಇದಕ್ಕೆ ಬೇಕಾದ ಮಾಹಿತಿ ಗಳನ್ನು ಅವರು ಕೊಡುವುದಿಲ್ಲ. ತೀವ್ರವಾದ ರೀತಿಯಲ್ಲಿ ಈ ತೊಡಕುಗಳನ್ನೆಲ್ಲಾ ನೀಗಲಿಕ್ಕೆ ಸರಿಯಾದ ಮಾರ್ಗವನ್ನು ಕಂಡು ಹಿಡಿದು, ಆದಷ್ಟು ಬೇಗ ಈ ವೇತನ ಗಳನ್ನು ಕೊಡುವುದಕ್ಕೆ ತಿಳಿಸುತ್ತೇನೆ.

ಶ್ರೀ ಕೆ ಎಚ್. ಹನುಮೇಗೌಡ :—ವೃದ್ಧಾಪ್ಯವೇತನ ಪಡೆಯಲು ಕೆಲವು ತೊಂದರೆಗಳು ಇವೆ. ಅವು ಏನೆಂದರೆ ಫೋಟೋ ತೆಗಿಸಿಕೊಡಬೇಕು. ಫೋಟೋ ತೆಗೆಸಿ ಕೊಡಬೇಕಾದರೆ ಅದಕ್ಕೆ 4-5 ರೂಪಾಯಿಗಳು ಖರ್ಚು ಮಾಡಬೇಕಾಗು ತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ

ಆ ಫೋಟೋವನ್ನು ಒದಗಿಸಿಕೊಡಲು 4-5 ರೂಪಾಯಿ ಖರ್ಚು ಮಾಡಲು ಕೂಡ ಕೆಲವು ನಿರ್ಗತಿಕರಿಗೆ ಸಾಧ್ಯವಾಗುವುದಿಲ್ಲ. ಅದರಿಂದ ಬಹುಶಃ ಈ ವೃದ್ಧಾಪ್ಯವೇತನ ಪಡೆಯಲು ನಿಧಾನವಾಗುತ್ತದೆ. ಆದ್ದರಿಂದ ಸರ್ಕಾರದವರು ಮಾನವೀಯ ದೃಷ್ಟಿಯಿಂದ ಅವರಿಗೆ ಲಂಪ್‌ಸಂ ಹಣವನ್ನು ಸಂಬಂಧಪಟ್ಟ ತಹಸೀಲ್ದಾರ್ ಅಥವಾ ಡೆಪ್ಯುಟಿಕಮಿಷನರ್ ಅವರ ಕಡೆಗೆ ಕೊಟ್ಟು ಫೋಟೋ ಬಾಬತ್ತು ಅವರಿಗೆ ಎಷ್ಟು ಖರ್ಚು ಬೀಳುತ್ತದೆ ಅದನ್ನು ಅವರಿಗೆ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್ :—ಮಾನ್ಯ ಸದಸ್ಯರು ಹೇಳಿದ ರೀತಿ ಫೋಟೋ ಕೇಳುವುದರಿಂದ ಈ ತೊಂದರೆಯಾಗಿದೆ. ಎನ್ನುವ ಒಂದೇ ಒಂದು ಕೇಸು ಕೂಡ ಈ ತನಕ ಸರ್ಕಾರದ ಗಮನಕ್ಕೆ ಬಂದಿಲ್ಲ. ಓಲ್ಡ್-ಏಜ್ ಪೆನ್‌ಷನ್ ತೆಗೆದು ಕೊಳ್ಳಬೇಕಾದರೆ ಕೆಲವರು ಸುಳ್ಳು ಹೇಳಿ ಸರ್ಕಾರಕ್ಕೆ ಮೋಸ ಮಾಡಿ ತೆಗೆದು ಕೊಳ್ಳುತ್ತಿದ್ದುದನ್ನು ನೋಡಿ ಈ ರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಮೊದಲು ಅವರಿಗೆ 70 ವರ್ಷ ವಯಸ್ಸಾಗಿದೆಯೇ ಎನ್ನುವ ಸರ್ಟಿಫಿಕೇಟ್ ಕೊಡ ಬೇಕಾಗುತ್ತದೆ, ಇನ್ನೊಂದು ಆತನಿಗೆ ಬೇರೆ ಯಾವುದಾದರೂ ರೀತಿಯಿಂದ ಜೀವನ ಮಾಡಲು ಉತ್ಪನ್ನವಿದೆಯೇ ಅಥವಾ ಇಲ್ಲವೇ ಎಂಬುದಕ್ಕೆ ಮತ್ತು ಆತನನ್ನು ರಕ್ಷಣೆ ಮಾಡಲಿಕ್ಕೆ ಮಕ್ಕಳಾಗಲಿ, ಅಣ್ಣ ತಮ್ಮಂದಿರಾಗಲಿ ಇದ್ದಾರೆಯೇ ಎಂಬು ದನ್ನು ತಿಳಿದು ಆದಷ್ಟು ಬೇಗ ನಿಧಾನವಾಗದಂತೆ ಕೊಡಲು ತಿಳಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :—ಏನೂ ಸೌಲಭ್ಯವಿಲ್ಲದೆ ಇರತಕ್ಕಂಥ ಹಳ್ಳಿ ಯಲ್ಲಿರುವ ಅಜ್ಞಾನಿ ಜನರು ವೃದ್ಧಾಪ್ಯ ವೇತನದ ಅನುಕೂಲ ಪಡೆಯಲು ಅರ್ಹತೆ ಇರತಕ್ಕಂಥವರ ಒಂದು ಲಿಸ್ಟ್ ಸರಕಾರದವರೇ ಮಾಡಿ ಅವರಿಗೆ ಈ ಅನುಕೂಲ ಮಾಡಿಕೊಡಲು ಸಾಧ್ಯವಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್ :— ಅಜ್ಞಾನಿ ಜನರು ಯಾರು ಅಥವಾ ಸುಜ್ಞಾನಿ ಜನರು ಯಾರು ಯಾರಿಗೆ ಸರಕಾರದ ಈ ಸೌಲಭ್ಯಗಳನ್ನು ಕೊಡಬೇಕು. ಎಂಬುದನ್ನು ತೀರ್ಮಾನ ಮಾಡಲು ಮಾನ್ಯ ಸದಸ್ಯರು ಆಗಲಿ, ಸರ್ಕಾರದ ಅಧಿ ಕಾರಿಗಳು ಆಗಲಿ ಅಥವಾ ಸಾರ್ವಜನಿಕ ಕಾರ್ಯಕರ್ತರುಗಳು ಆಗಲಿ, ಯಾರೇ ಆಗಲಿ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಆ ರೀತಿ ಮಾಡಲು ಹೋದರೆ ಅದು ದುಷ್ಪರಿಣಾಮವಾಗಿ ಪರಿಣಮಿಸುತ್ತದೆ. ಆದ್ದರಿಂದ ವೃದ್ಧಾಪ್ಯ ವೇತನ ಪಡೆಯಲು ಬಯಸುವವರು ಯಾರೇ ಆಗಲಿ ಅರ್ಜಿ ಹಾಕಿ ದರೆ ಅವು ಸೂಕ್ತವಾಗಿವೆ ಅಥವಾ ಸೂಕ್ತವಾಗಿಲ್ಲ ಎನ್ನುವ ಅಭಿಪ್ರಾಯಕ್ಕೆ ಬರ ಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ನಿರ್ಗತಿಕರಾದವರು ಜೀವನಕ್ಕೆ ಬೇರೆ ಮಾರ್ಗವಿಲ್ಲದೆ ಭಿಕ್ಷೆಬೇಡಿ ಜೀವನ ಮಾಡುತ್ತಾರೆ. ಅಂಥವರಿಗೆ ಅವರು ನಿರ್ಗತಿಕರಾದಂಥ ಸಂದರ್ಭದಲ್ಲಿ ಅವರಿಗೆ ವೃದ್ಧಾಪ್ಯ ವೇತನವನ್ನು ಕೊಡುವುದಿಲ್ಲ, ಆದ್ದರಿಂದ ನಿಮ್ಮ ನಿಯಮವನ್ನು ಸಡಿಲಿಸಿ ಅವರಿಗೆ ವೃದ್ಧಾಪ್ಯ ವೇತನವನ್ನು ಕೊಟ್ಟರೆ ಅವರು ಭಿಕ್ಷೆ ಬೇಡಲಿಕ್ಕೆ ಹೋಗುವುದಿಲ್ಲವಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್:—ಭಿಕ್ಷೆ ಬೇಡುತ್ತಾ ಇರತಕ್ಕಂಥವರಲ್ಲಿ 70 ವರ್ಷ ವಯಸ್ಸಾಗಿ ಅವರು ಯಾವ ರೀತಿಯಾಗಿಯೂ ದುಡಿದು ಜೀವನ ಮಾಡಲು ಸಾಧ್ಯವಿಲ್ಲವೆಂದು ಕಂಡು ಬಂದಲ್ಲಿ, ಅಂಥವರಿಗೆ ಮಾತ್ರ ವೃದ್ಧಾಪ್ಯ ವೇತನವನ್ನು ಕೊಡುತ್ತೇವೆಯೇ ಹೊರತು ಉಳಿದ ಭಿಕ್ಷೆ ಬೇಡುವವರಿಗೆಲ್ಲಾ ಕೊಡುವುದಿಲ್ಲ.

ಶ್ರೀ ಕೆ. ಬಿ. ಶಿವಯ್ಯ :—ವಯೋಮಿತಿಯನ್ನು ಮೊದಲು 70 ವರ್ಷಗಳೆಂದು ಮಾಡಿದ್ದರು, ಮತ್ತೆ 65 ವರ್ಷಗಳೆಂದು ಮಾಡಬೇಕೆಂದು ಸಲಹೆ ಮಾಡಿದ್ದರು ಅದಕ್ಕೋಸ್ಕರ ಸರ್ಕಾರದವರು ಅದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡರು.

ಶ್ರೀ ಕೆ. ಎಚ್. ಪಾಟೀಲ್.— ನಮ್ಮ ಸರ್ಕಾರದ ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಂಡು 30 ರೂ. ಗಳನ್ನು ಕೊಡಬೇಕೆಂದು ಮಾಡಿದ್ದಾರೆ. ವಯಸ್ಸನ್ನು ಇಳಿಸುವ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮುಂದೆ ಯೋಚನೆ ಮಾಡೋಣ.

FILLING UP THE POSTS OF GRAMASEVAKAS IN RAICHUR DISTRICT

2. SRI M. VIRUPAKSHAPPA (Koppal).—

Will the Minister for Agriculture and Forests be pleased to state :—

(*a*) the number of applications received for the post of Gramasevaks in Raichur District in 1972-1973;

(*b*) the number of candidates interviewed ;

(*c*) the number of candidates selected ;

(*d*) the number of posts required for Raichur Division (Talukwise, Districtwise applications received, interviewed and selected to be furnished) ?

SRI K. H. PATIL (Minister for Agriculture and Forests).—

(*a*) 457.

(*b*) 172.

(*c*) 25 (in Raichur District only)

(*d*) 170

The talukwise, districtwise information with regard to applications received, interviewed and selected is as per Statement appended.

STATEMENT

Showing the number of candidates (Talukwise) applied : interviewed and selected for the posts of Grama Sevaks during 1972-73 in Raichur Division.

Name of the Taluks		Total No. of applications received.	No. of candidates actually interviewed.	No. of candidates selected	Remarks.
1		2	3	4	5
1 *Bellary District* : ..					
(i) Bellary	—	73	22	4	
(ii) Harapanahalli	...	37	17	2	
(iii) Huvinahadagali	—	30	13	2	
(iv) Shiraguppa	—	30	6	—	
(v) Hospet	—	23	8	1	
(vi) Koodalgi	—	27	8	1	
(vii) Sondur	—	11	3	—	
Total	—	231	77	10	

(SRI K. H. PATIL)

2. *Gulbarga District*:—

(i) Gulbarga	—	304	152	29
(ii) Shorapur	—	46	17	2
(iii) Yadgir	—	60	14	2
(iv) Aland	—	138	43	10
(v) Chincholi	—	94	28	3
(vi) Sedam	—	47	24	1
(vii) Afzalpur	—	51	11	3
(viii) Chittapur	—	49	15	6
(ix) Jewargi	—	74	23	4
(x) Shabhapur	...	33	8	3
Total	...	896	335	63

1		2	3	4	5
3. *Bidar District*:—					
(i) Bidar	—	166	58	11	
(ii) Humnabad	—	88	26	10	
(iii) Bhalki	—	81	20	1	
(iv) B. Kalyan	—	69	14	3	
(v) Ourad	—	24	4	—	
Total	...	418	122	25	
4. *Raichur District*:—					
(i) Koppal	...	42	12	1	
(ii) Gangavathi	—	47	15	3	
(iii) Yelburga	—	59	18	4	
(iv) Kustagi	—	58	23	5	
(v) Sindhanoor	...	20	8	3	
(vi) Lingasugur	—	43	16	3	
(vii) Manvi	...	34	16	...	
(viii) Deodurg	—	33	15	1	
(ix) Raichur	...	121	49	5	
Total	—	457	172	25	

ಶ್ರೀ ಎಂ. ವಿರೂಪಾಕ್ಷಪ್ಪ.—ರಾಯಚೂರು ಜಿಲ್ಲೆಯಲ್ಲಿ 25 ಜನ ಗ್ರಾಮ ಸೇವಕರನ್ನು ತೆಗೆದುಕೊಂಡಿದ್ದಾರೆ. ಬೇರೆ ಜಿಲ್ಲೆಗಳ ಅಂಕಿಸಂಖ್ಯೆಗಳನ್ನು ಹೋಲಿಸಿ ನೋಡಿದರೆ ಇದು ತುಂಬಾ ಕಡಿಮೆಯಾಗುತ್ತದೆ ಇದಕ್ಕೆ ಕಾರಣವೇನು ?

ಶ್ರೀ ಕೆ. ಹೆಚ್. ಪಾಟೀಲ್.—ಕೆಲವು ಜಿಲ್ಲೆಗಳ ಅಂಕಿಸಂಖ್ಯೆಗಳನ್ನು ನೋಡಿದರೆ ಇದು ಕಡಿಮೆಯೆಂದಾಗುತ್ತದೆ, ಇನ್ನು ಕೆಲವು ಜಿಲ್ಲೆಗಳ ಅಂಕಿಸಂಖ್ಯೆಗಳನ್ನು ನೋಡಿದರೆ ಇದು ಜಾಸ್ತಿ ಎಂದು ಕಾಣುತ್ತದೆ. ಸೆಲೆಕ್ಟ್ ಮಾಡುವಾಗ ಜಿಲ್ಲೆಯ ಆಧಾರವನ್ನು ತೆಗೆದುಕೊಂಡು ಮಾಡುವುದಕ್ಕಾಗುವುದಿಲ್ಲ. ಅವರವರ ಯೋಗ್ಯತೆ ಮತ್ತು ಕ್ವಾಲಿಫಿಕೇಷನ್‌ಗಳನ್ನು ನೋಡಿ ಇಂಟರ್‌ವ್ಯೂನಲ್ಲಿ ಎಷ್ಟು ಮಾರ್ಕ್ಸ್ ತೆಗೆದುಕೊಳ್ಳುತ್ತಾರೆ ಅದರ ಮೇಲೆ ಸೆಲೆಕ್ಟ್ ಮಾಡಿರುತ್ತಾರೆ.

ಶ್ರೀ ಎಂ. ವಿರುಪಾಕ್ಷಪ್ಪ.—ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆಯಾಗಿರುವುದರಿಂದ ಅದನ್ನು ಗಮನಿಸಿ ಗ್ರಾಮಸೇವಕರ ನೇಮಕಗಳನ್ನು ಮಾಡಬೇಕಾಗಿತ್ತು. ಆದ್ದರಿಂದ ಈಗ ಸೆಲೆಕ್ಟ್ ಮಾಡಿರುವ ಪ್ರಕಾರ ಆ ಜಿಲ್ಲೆಗೆ ಸರಿಯಾದ ಪ್ರಾತಿನಿಧ್ಯವನ್ನು ಕೊಟ್ಟಿಲ್ಲವೆನ್ನುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಅದು ಜಿಲ್ಲೆಯ ಆಧಾರದ ಮೇಲೆ ಅಥವಾ ಇನ್ನಾವುದೇ ರೀತಿಯ ಆಧಾರದ ಮೇಲೆ ಮಾಡಲು ಸಾಧ್ಯವಿಲ್ಲ. ಅವರವರ ಮೆರಿಟ್ ಮತ್ತು ಯೋಗ್ಯತೆಗಳ ಮೇಲೆ ಆರಿಸುವಾಗ ಜಿಲ್ಲೆಯ ಪ್ರಾತಿನಿಧ್ಯತೆಯನ್ನು ಗಮನಿಸಿ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅರ್ಜಿಗಳು ಸರ್ಕಾರಕ್ಕೆ ಬಂದಿರುವ ಸಂಖ್ಯೆಯನ್ನು ನೋಡಿದರೆ 457 ಅದರಲ್ಲಿ ಸಂದರ್ಶಿಸಲಾದ ಅಭ್ಯರ್ಥಿಗಳ ಸಂಖ್ಯೆ 172. ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆಯನ್ನು ನೋಡಿದರೆ ಕೇವಲ ಇಪ್ಪತ್ತೈದು ಮಾತ್ರ. ರಾಯಚೂರು ಜಿಲ್ಲೆಗೆ ಬೇಕಾದ ಅಭ್ಯರ್ಥಿಗಳು 170. ಆದ್ದರಿಂದ ಆದ್ದರಿಂದ ತಾವು ಸಂದರ್ಶನ ಮಾಡಿದ್ದ ಉದ್ದಿಶ್ಯವಾದರೂ ಏನು ? ಇನ್ನು ರಾಯಚೂರು ಜಿಲ್ಲೆಗೆ ಬೇಕಾದ ಅಭ್ಯರ್ಥಿಗಳನ್ನು ಉಳಿದ ಅಭ್ಯರ್ಥಿಗಳಲ್ಲ ಆರಿಸಿಕೊಳ್ಳಲು ತೊಂದರೆಯೇನಿತ್ತು ?

ಶ್ರೀ ಕೆ. ಹೆಚ್. ಪಾಟೀಲ್.—ಅರ್ಜಿ ಕರೆಯುವಾಗ ಮಿನಿಮಂ ಕ್ವಾಲಿಫಿಕೇಷನ್ ಇಷ್ಟು ಇರಬೇಕೆಂದು ನಿಗದಿ ಮಾಡಿ ನೂರು ಹುದ್ದೆಗಳಿಗೆ ಅರ್ಜಿಯನ್ನು ಕರೆಯುತ್ತೇವೆ. ಅದಕ್ಕೆ ಸುಮಾರು ಆರು ಸಾವಿರ ಅರ್ಜಿಗಳು ಬರುತ್ತವೆ. ಒಂದು ಹುದ್ದೆಗೆ ಆರು ಜನರಂತೆ ನಿಗದಿ ಮಾಡಿ ಅವರ ಯೋಗ್ಯತೆ ಮತ್ತು ಮಾರ್ಕ್ಸ್‌ಗಳನ್ನು ನೋಡಿ ಅವರಲ್ಲಿ ಯಾರು ಹೆಚ್ಚಿನ ಮಾರ್ಕ್ಸ್‌ಗಳನ್ನು ಪಡೆದಿದ್ದಾರೆ ಅದನ್ನೆಲ್ಲಾ ಪರಿಗಣನೆಗೆ ತೆಗೆದುಕೊಂಡು ಇಂಟರ್‌ವ್ಯೂಗೆ ಕರೆಯುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಿನಿಮಂ ಕ್ವಾಲಿಫಿಕೇಷನ್ ನಿಗದಿ ಮಾಡಿದ್ದೀರಿ. 172 ಜನ ಇಂಟರ್‌ವ್ಯೂಗೆ ಬಂದಿದ್ದಾರೆ. ಅದರಲ್ಲಿ ತಮಗೆ ಬೇಕಾದದ್ದು 170 ಹುದ್ದೆಗಳು. ಅದರಲ್ಲಿ ಕೇವಲ 25 ಜನರನ್ನು ಸೆಲೆಕ್ಟ್ ಮಾಡಿರುವುದು ಏತಕ್ಕೆ ?

ಶ್ರೀ ಕೆ. ಹೆಚ್. ಪಾಟೀಲ್.—ನಮಗೆ ಬೇಕಾಗಿರುವುದು ಸುಮಾರು 7–8 ನೂರು ಜನರು. ಅದರಲ್ಲಿ 457 ಜನರಿಂದ ಅರ್ಜಿಗಳು ಬಂದಿರುವುದು ಅದು ಕೇವಲ ಒಂದು ಜಿಲ್ಲೆಗೆ ಮಾತ್ರ. ಎಲ್ಲಾ ಜಿಲ್ಲೆಗೆ ಸುಮಾರು 20—30 ಸಾವಿರ ಅರ್ಜಿಗಳು ಸಂಗ್ರಹವಾಗಿವೆ. ಅದರಲ್ಲಿ ಒಂದು ಹುದ್ದೆಗೆ ಆರು ಮಂದಿಯಂತೆ ಅವರವರ ಮಾರ್ಕ್ಸ್ ಸ್ಟ್ಯಾಂಡರ್ಡ್ ನೋಡಿ ಇಂಟರ್‌ವ್ಯೂಗೆ ಕರೆಯುತ್ತಾರೆ. ಇಂಟರ್‌ವ್ಯೂ ಮಾಡಬೇಕಾದರೆ ಅದಕ್ಕೆ ಒಂದು ಕಮಿಟಿ ಇರುತ್ತದೆ. ಅವರು ಇಂಟರ್‌ವ್ಯೂ ಮಾಡಿ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ಎಫ್. ಎಸ್. ತಾವರೆ.—ಗ್ರಾಮಸೇವಕರ ಹುದ್ದೆಗೂ ಕೂಡ ತಾವು ಮೆರಿಟ್ ಅನ್ನು ಇಟ್ಟುಕೊಂಡಿರುವುದರಿಂದ ರೈತರ ಮಕ್ಕಳಿಗೆ ಈ ಒಂದು ಅವಕಾಶ ಸಿಕ್ಕದೆ ಷಹರದವರ ಮಕ್ಕಳೇ ಇದರಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಆ ಬಗ್ಗೆ ನಾವು ಪರೀಕ್ಷೆ ಮಾಡಿಲ್ಲ. ಆ ರೀತಿ ಏನಾದರೂ ಬಂದಿದ್ದರೆ ಅದು ಅನಿವಾರ್ಯ. ಗ್ರಾಮಸೇವಕರ ಹುದ್ದೆಗೆ ಬರೀ ಹಳ್ಳಿಯವರೇ ಇರಬೇಕು ಎಂದು ಸಭೆ ಒಪ್ಪುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

RURAL INDUSTRIAL PROJECT

4 SRI S.M. SHEERANALY CHANDRASEKHAR (Hosanagar).-

Will the Minister for Industries be pleased to state :-

(*a*) whether there is any project by name Rural Industrial project in the Industries Department ;

(*b*) if so, the items included in the said project ;

(*c*) the number of Joint Directors, Deputy Directors and Assistant Directors attached to the said project and nature of their duties and functions ;

(*d*) the number of Directors and Assistant Directors working in Shimoga District under the said project;

(*e*) whether these officers have taken up investigation of any project in the district; if so, the result of their investigation with details?

SRI S. M KRISHNA.—(Minister for Industries)

(*a*) Yes

(*b*) The important activities of this project are:

(1) training of rural artisans

(2) supply of improved tools and equipments at subsidised rates.

(3) conducting study tours for the benefits of artisans and entrepreneurs.

(4) starting of common facility centres for the benefit of rural artisans and

(5) starting of small scale industries with Government assistance and taking up commercial schemes etc.

(*c*) Joint Director	....	1
Deputy Director-cum-Project Officer	....	7

Assistant Directors :—

ಶ್ರೀ ಪಿ ಎಂ. ಬಂಗಿ (ಜಮಖಂಡಿ) :—ಸಹಕಾರಿ ರಂಗದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಇದೆ. ಪ್ರೆಸಿಡೆಂಟ್, ವೈಸ್‌ಪ್ರೆಸಿಡೆಂಟ್, ಮ್ಯಾನೇಜಿಂಗ್ ಡೈರೆಕ್ಟರ್ ಸ್ಥಾನಗಳನ್ನು ವಂಶಪಾರಂಪರ್ಯವಾಗಿ ಗಾದಿ ಮಾಡಿಕೊಂಡಿದ್ದಾರೆ. ತಂದೆ ಸತ್ತ ನಂತರ ಮಗನಾದವನೇ ಯಾವತ್ತಿಗೂ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್, ಚೇರ್‌ಮನ್ ಈ ಈ ಪ್ರಕಾರವಾಗಿ ಆಗುವಂಥ ಪದ್ಧತಿ ಇದೆ. ಇದು ತಪ್ಪು, ಇದನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕಾಗಿದೆ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು 6 ವರ್ಷ ಕಾಲ ಎನ್ನುವದನ್ನು ಹಾಕಿದ್ದಾರೆ. ನಿರಂತರವಾಗಿ ಅವರು ಆ ಸ್ಥಾನಗಳಿಗೆ ಬರಬಾರದು ಎನ್ನುವ ಪ್ರಕಾರ ಹಾಕಿದ್ದರೆ ಸಮಾಧಾನವಾಗುತ್ತಿತ್ತು. ಆದಾಗ್ಯೂ ಕೂಡ ಪ್ರಥಮ ಹೆಜ್ಜೆಯಾಗಿ ಆರು ವರ್ಷ ಎಂದು ಹಾಕಿರುವುದು ಸರಿ ಇದೆ. ಮಾನ್ಯ ಸದಸ್ಯರಾದ ಶಾಮಣ್ಣನವರು ಹೇಳುವಂತೆ ಮೂರು ವರ್ಷ ಮಾಡಿದರೆ ಏನಾದರೂ ಮ್ಯಾನೋವರ್ ಮಾಡಿ ಅಧಿಕಾರಕ್ಕೆ ಬರುವ ಸಂಭವವಿದೆ. ಆ ದೃಷ್ಟಿಯಿಂದ ಆರು ವರ್ಷ ಎಂದು ಹಾಕಿರುವುದು ಸರಿ ಇದೆ. ಮಾನ್ಯ ಮಂತ್ರಿಗಳು ತಂದಿರುವ ತಿದ್ದುಪಡಿಯನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ.

† SRI A SHANKAR ALVA :—As regards the apprehension expressed by Mr. Shamanna, actually my amendment is really very drastic. It reads :

" Provided that persons who have completed or who complete the said period of six years on the date of coming into force of the Mysore Co-operative Societies (Amendment) Act, 1973, shall be entitled to continue until elections are held for the first time after the said date,"

The member also expressed a doubt whether any of the office-bearers can inter-change. They cannot do that, because: "A person who has continued as President, *Vice*, President, Managing Director, Treasurer or Secretary of a co-operative society for six consecutive years shall not be eligible for election or appointment to any of the said offices of such co-operative society till the expiry of six years after he has ceased to hold any of the said offices." It is clear in amendment 21 (2). So, there is no scope for one office-bearer to become office-bearer in the next election.

SRI T. R. SHAMANNA :—But he can continue as a Director.

SRI K. PUTTASWAMY :—You say 'six consecutive years'. If he resigns his presidentship before that period, there will be break in continuity.

SRI SHANKAR ALVA :—If he is such a popular man and they want him, why should anybody come in the way? It is a voluntary organisation People must have the choice and they can say so and so must be our president. He will resign for one year and then again they can elect him as a new president. If all people want a particular person, who can help it?

ಶ್ರೀ ಕೆ. ಪುಟ್ಟಸ್ವಾಮಿ : 15 ಬೋರ್ಡ್ಸ್ ಆಫ್ ಡೈರೆಕ್ಟರ್ಸ್ ಇರುತ್ತಾರೆ, ಅವರಿಂದ ಒಬ್ಬ ಪ್ರೆಸಿಡೆಂಟ್ ಆಗಿ ಚುನಾಯಿತನಾಗುತ್ತಾನೆ. ಆರು ವರ್ಷವಾಗುವುದಕ್ಕೆ ಮೊದಲು ತಾನು ರಾಜಿನಾಮೆ ಕೊಟ್ಟು ಇನ್ನೊಬ್ಬರನ್ನು ಒಂದು ತಿಂಗಳಿಗೆ ಚುನಾವಣೆಮಾಡುತ್ತಾರೆ. ಒಂದು ತಿಂಗಳಾದ ಮೇಲೆ ಅವನು ರಾಜಿನಾಮೆ ಕೊಡುತ್ತಾನೆ ಮತ್ತು ಮೊದಲು ಪ್ರೆಸಿಡೆಂಟ್ ಆಗಿದ್ದವನೇ ಪುನಃ ಬಂದು ಕುಳಿತುಕೊಳ್ಳುತ್ತಾನೆ ಇದರಿಂದ ಮಾನ್ಯ ಮಂತ್ರಿಗಳ ಉದ್ದೇಶ ಸಫಲವಾಗುತ್ತದೆಯೇ? ಅದನ್ನು ತಪ್ಪಿಸುವುದಕ್ಕೆ ಏನೂ ಮಾರ್ಗವಿಲ್ಲವೇ ?

Sri A. SHANKAR ALVA.—There is the General Body. They have to see that they do not come in as Directors.

Madam Speaker. —I will now put amendments moved by Sri T. R. Shamanna to the vote of the House.

The question is :

"In the proposed Section 29(D) after the words "Managing Director" wherever they accur, the word "Director" shall be inserted.

In the proposed Section 29 D, line 5 for the word "six" the word "three" shall be substituted.

In the proposed Section 29 D, after sub-section (1) and before the explanation the following proviso shall be inserted, namely;

Provided that the office bearers and Directors mentioned above are eligible for standing for election as President, Vice President, Managing Director or Director after a break of a period of one year.

In the proposed Section 29 D, in the explanation for the word "six" wherever it occurs, the word "three" shall be substituted.

In the proposed Section 29 D, sub-section (2, line 1, for the word 'six' the word "three" shall be substituted."

The amendments were negatived.—

Madam Speaker :—I will put the Amendment of the Hon. Minister to the vote :—

The question is:—

That in the proposed Section 29 C in clause (c) of sub-section (1), after the words "by such co-operative society", the words "or by a co-operative society is a member" shall be inserted."

"That in the proposed Section 29 D, for the words "or other officer" wherever they occur, a comma and the words "Treasurer or Secretary" shall be substituted."

In the proposed Section 29D, sub section (1) before the explanation, the following proviso shall be inserted, namely:

"Provided that persons who have completed or who complete the said period of six years on the date of coming into force of the Mysore Co-operative Societies (Amendment) Act, 1973, shall be entitled to continue until elections are held for the first time after the said date.

In the proposed Section 29 D, for sub-section (2) the following sub-section shall be substituted, namely:

"(2) A person who has continued as President, Vice-President, Managing Director, Treasurer or Secretary of a Co-operative Society for six consecutive years shall not be eligible for election or appointement to any of the said offices of such co-operative Society till the expiry of six years after he has ceased to hold any of the said offices."

The Amendments were Adopted :

MADAM SPEAKER :— I will now put clause 8 as amended to the vote of the House.

The question is :

"That clause 8 as amended, do stand part of the Bill."

The motion was adopted :

(Madam Speaker)

Clause 8 as amended was added to the Bill

CLAUSE 9 to 11

MADAM SPEAKER :—As there are no amendments, I will now put clauses 9 to 11 to the vote of the House.

The question is :

" That clauses 9 to 11 both inclusive, do stand part of the Bill."

The motion was adopted :

Clauses 9 to 11 both inclusive, were added to the Bill.

CLAUSE 12

MADAM SPEAKER :—There is an amendment to clause 12 given notice by the Hon. Minister.

SRI A. SHANKAR ALVA :—I move the following amendment to clause 12.

That for clause 12, the following clause shall be substituted, namely,

" 12. *Insertion of new Section 53 A.*—After Section 53 of the principal Act, the following Section shall be inserted, namely :—

"*53A. Nomination of members of committee by State Government in certain cases* :— (1) Notwithstanding anything contained in Section 29, where the State Government has subscribed to the share capital of a co-operative society to the extent of not less than—

(i) 50 per cent of the total share capital, or

(ii) five lakhs of rupees

the State Government shall have the right to nominate as its representatives one-third of the total number of members of the committee of the co-operative society.

(2) A person nominated as a member of a committee of a co-operative society under sub-section (1) (hereinafter in this Section referred to as 'nominated member') shall hold office as such member during the pleasure of the State Government.

(3) Subject to the provisions of sub-section (2), a nominated member shall hold office as such member for such period as the State Government may by order specify.

(4) Where an officer of the State Government is nominated as member of a committee under sub-section (1) such officer may be nominated by virtue of his office, and when any such nomination is made, such officer may, if unable to be present himself at any meeting of the committee, depute a subordinate officer to the meeting as his representative and such subordinate officer shall be deemed to be the person nominated as a representative of the State Government for purposes of such meeting."

MADAM SPEAKER :—Motion moved

"That for clause 12, the following clause shall be substituted, namely :—

"12. *Insertion of new Section 53A*:—After Section 53 of the principal Act, the following Section shall be inserted, namely :—

(MADAM SPEAKER)

"53A. *Nomination of members of committee by State Government in certain cases* :— (1) Notwithstanding anything contained in Section 29, where the State Government has subscribed to the share capital of a co-operative society to the extent of not less than—

(i) 50 per cent of the total share capital, or

(ii) five lakhs of rupees

the State Government shall have the right to nominate as its representatives one-third of the total number of members of the committee of the co-operative society.

(2) A person nominated as a member of a committee of a co-operative Society under sub section (1) herein after in this Section referred to as ('nominated member') shall hold office as such member during the pleasure of the State Government.

(3) Subject to the provisions of sub-section (2), a nominated member shall hold office as such member for such period as the State Government may by order specify.

(4) Where an officer of the State Government is nominated as member of a committee under sub-section (1) such officer may be nominated by virtue of his office, and when any such nomination is made, such officer may, if unable to be present himself at any meeting of the committee, depute a subordinate officer to the meeting as his representative and such subordinate officer shall be deemed to be the person nominated as a representative of the State Government for purposes of such meeting."

ಶ್ರೀ ಎ. ಶಂಕರ ಅಳ್ವ; ತಿದ್ದುಪಡಿ ಮಸೂದೆಯಲ್ಲಿದ್ದ ಸೆಕ್ಷನ್ 53 (ಬಿ) ತೆಗೆದು ಹಾಕಿದ್ದೇವೆ. ಸರ್ಕಾರದ ನಾಮಿನೀಸ್ ಯಾರು ಇರುತ್ತಾರೆ ಅವರಲ್ಲಿ

ಯಾರಾದರೂ ಒಬ್ಬರು ಒಂದು ಠರಾವಿಗೆ ತನ್ನ ಒಪ್ಪಿಗೆಯನ್ನು ಕೊಡದೆ ಇದ್ದರೆ, ಅದು ಜಾರಿಯಾಗುವುದಕ್ಕೆ ಅವಕಾಶವಿಲ್ಲ, ಅದು ಸರ್ಕಾರಕ್ಕೆ ಬರಬೇಕು ಎನ್ನುವ ವಿಚಾರ ಅದರಲ್ಲಿತ್ತು. ಈ ರೀತಿ ಮಾಡುವುದು ಬಹಳ ಉಗ್ರ ಆಗುತ್ತದೆ ಎಂದು ಅನೇಕ ಸದಸ್ಯರು ಸದನದಲ್ಲಿ ಹೇಳಿದರು. ಅದಕ್ಕನುಗುಣವಾಗಿ ಅದನ್ನು ತೆಗೆದು ಹಾಕಿದ್ದೇವೆ.

2-30 p. m.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಅಧ್ಯಕ್ಷರೇ, ತಾವು ಅಧಿಕಾರ ವರ್ಗಕ್ಕೆ ಆಡಳಿತ ಮಂಡಳಿಯಲ್ಲಿ 1/3 ಭಾಗದವರೆಗೆ ಸರ್ಕಾರದ ವತಿಯಿಂದ ಪ್ರತಿನಿಧಿಗಳನ್ನು ಇಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೀರಿ. ಸಹಕಾರ ಸಂಘಗಳಲ್ಲಿ ಸಹಕಾರದ ಹಣ ಹಾಕಿದಾಗ, ಸರ್ಕಾರದ ಹಿತ ರಕ್ಷಣೆ ಮಾಡುವ ಉದ್ದೇಶದಿಂದ ಇದನ್ನು ತಂದಿದ್ದೀರಿ. ಒಬ್ಬ ಪ್ರತಿನಿಧಿ ಇದ್ದರೂ ಕೂಡ ಸರ್ಕಾರದ ಹಿತವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನೀವು ಯಾವ ದೃಷ್ಟಿಕೋನದಿಂದ ಪ್ರತಿನಿಧಿಯನ್ನು ಸಹಕಾರ ಸಂಘದಲ್ಲಿ ಇಡಬೇಕು ಎಂದು ಈ ತಿದ್ದುಪಡಿಯನ್ನು ತಂದಿದ್ದಾರೊ ಆ ಉದ್ದೇಶವನ್ನು ಸರ್ಕಾರದ ವತಿಯಿಂದ ಒಬ್ಬನೇ ಇದ್ದರೂ, ಆ ಉದ್ದೇಶವನ್ನು ಸಾರ್ಥಕ ಗೊಳಿಸುವುದಕ್ಕೆ ಸಾಧ್ಯವಾಗುತ್ತದೆ. ಕಾರಣವಾದರೂ ಇಷ್ಟೆ ಸಹಕಾರ ಸಂಘಗಳಲ್ಲಿ ಈಗಿರತಕ್ಕ ಕಾನೂನು ವ್ಯವಸ್ಥೆಯಲ್ಲಿ ಸಾಕಷ್ಟು ಹಿಡಿತ ಇದೆ. ಸರ್ಕಾರ ಮನಸ್ಸು ಮಾಡಿದರೆ ಸಹಕಾರ ಸಂಘಗಳಲ್ಲಿ ಅಲ್ಲಿಯ ವ್ಯವಹಾರವನ್ನು, ತಾನೆಲ್ಲ ವಹಿಸಿಕೊಳ್ಳತಕ್ಕ ಸಾಧ್ಯತೆ ಇದೆ. ನಿಮ್ಮ ಪ್ರತಿನಿಧಿ ಒಬ್ಬ ಇದ್ದರೆ ಸಹಕಾರ ಸಂಘದಲ್ಲಿ ದುರುದ್ದೇಶದಿಂದ ನಡೆಯುತ್ತಿದ್ದರೆ, ಅವ್ಯವಹಾರ ನಡೆಯುತ್ತಿದ್ದರೆ; ಅಥವಾ ತನ್ನ ಕಾರ್ಯಕ್ರಮಕ್ಕೆ ವಿರುದ್ಧವಾಗಿ, ಸಾರ್ವಜನಿಕ ಹಿತರಕ್ಷಣೆಯ ವಿರುದ್ಧವಾಗಿ, ಸರ್ಕಾರದ ಬಂಡವಾಳದ ವಿರುದ್ಧ ನಡೆಯುತ್ತಿದ್ದರೆ, ಸರ್ಕಾರದ ಹಣ ಹಾಳಾಗುತ್ತಿದ್ದರೆ, ಸಾರ್ವಜನಿಕ ಹಣ ಹಾಳಾಗುತ್ತಿದ್ದರೆ, ಆಗ ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಆ ವರದಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಸಂಪೂರ್ಣವಾಗಿ ಅಧಿಕಾರವಿದೆ. ಹಾಗಿದ್ದರೂ ಕೂಡ 1/3 ಭಾಗದವರೆಗೆ ಆಡಳಿತ ಮಂಡಳಿಯಲ್ಲಿ ನಿಮ್ಮ ಪ್ರತಿನಿಧಿ ಇಡುವುದು ಅರ್ಥಹೀನವಾದೀತು: ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಸೊಸೈಟಿಯಲ್ಲಿ ಜನರಲ್‌ಬಾಡಿಯಲ್ಲಿ ಡೈರೆಕ್ಟರ್‌ಗಳ ಚುನಾವಣೆ ಮಾಡುತ್ತೇವೆಂದು ಹೇಳಿದರೂ ಕೂಡ ಅದು ಹೆಚ್ಚು ಕಡಿಮೆ ಸರ್ಕಾರದ ಪ್ರತಿನಿಧಿಗಳು ಹೇಳಿದಂತೆ ನಡೆಯಬೇಕಾದ ಸಂದರ್ಭ ಬರುತ್ತದೆ. ಒಂದು ಸನ್ನಿವೇಶ ಹೇಳುವುದಾದರೆ ಹೌಸಿಂಗ್ ಬೋರ್ಡ್ ಸಂಸ್ಥೆ ಇದೆ. ಅಲ್ಲಿ ಇರತಕ್ಕ ಮಂಡಳಿಯ ಸದಸ್ಯರು ಆಗಲೀ ಅಧ್ಯಕ್ಷರು ಆಗಲೀ ಸರ್ಕಾರದ ವರ್ಚಸ್ಸಿಗೆ ಬೀಳಲಿಲ್ಲವೆಂದು, ತನ್ನ ವರ್ಚಸ್ಸನ್ನು

(ಶ್ರೀ ಕಾಗೋಡು ತಿಮ್ಮಪ್ಪ)

ಉಳಿಸಿಕೊಳ್ಳಬೇಕಾದರೆ ಅಲ್ಲಿರತಕ್ಕ ಸದಸ್ಯರ ಸಂಖ್ಯೆ ಹೆಚ್ಚಿಸಿಕೊಳ್ಳಬೇಕೆನ್ನುವ ಕಾರಣದಿಂದ ಸರ್ಕಾರ ನಾಮಿನೇಷನ್ ಮಾಡುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಸಹಕಾರ ಸಂಘಗಳಲ್ಲಿ ಅಧ್ಯಕ್ಷರು ಅಥವಾ ಆಡಳಿತ ಮಂಡಳಿಯವರು ಸಹಕಾರ ಸಂಘಗಳ ಉದ್ದೇಶ ಸಾಧನೆ ಮಾಡುವುದಕ್ಕೆ ತೀರ್ಮಾನ ತೆಗೆದುಕೊಂಡರೆ ಅದು ಆಗಬಾರದು, ಸರ್ಕಾರದ ಪರವಾಗಿ ಇಲ್ಲದೇ ಇರತಕ್ಕ ಜನರು ಅಧಿಕಾರದಲ್ಲಿ ಇದ್ದಾರೆ ಎಂದು ಸರ್ಕಾರಕ್ಕೆ ಗೊತ್ತಾದರೆ ಆಗ 1/3 ಭಾಗ ಸರ್ಕಾರ ಸದಸ್ಯರ ಸಂಖ್ಯೆ ಏರಿಸುವುದಕ್ಕೆ ಅವಕಾಶವಾಗುತ್ತದೆ, ಆಗ ಸಹಕಾರ ಸಂಘದ ಸಂಪೂರ್ಣ ಅಧಿಕಾರವನ್ನು ನೀವೇ ಕೈಗೆ ತೆಗೆದುಕೊಂಡ ಹಾಗಾಗುತ್ತದೆ. ದಯವಿಟ್ಟು ಇದಕ್ಕೆ ಅವಕಾಶ ಮಾಡಿ ಕೊಡಬೇಡಿ. ಸಾರ್ವಜನಿಕರ ಹಿತಾಸಕ್ತಿ ಉಳಿಸಬಹುದು, ಸರ್ಕಾರದ ಹಿತ ರಕ್ಷಣೆ ಆಗಬಹುದು. ಉದ್ದೇಶ ಸಾಧನೆ ಮಾಡುವುದಕ್ಕೆ ಒಬ್ಬ ಪ್ರತಿನಿಧಿ ಇದ್ದರೆ ಸಾಧನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಒಬ್ಬ ಪ್ರತಿನಿಧಿ ಸರ್ಕಾರಕ್ಕೆ ಬೇಕಾದ ಮಾಹಿತಿ ಕೊಡುತ್ತಾನೆ, ಸರ್ಕಾರ ಯಾವ ಸಂದರ್ಭದಲ್ಲಿ ಬೇಕಾದರೂ ಸೂಪರ್‌ಸೀಡ್ ಮಾಡುವುದಕ್ಕೆ ಆಗುತ್ತದೆ, ಮ್ಯಾನೇಜ್‌ಮೆಂಟ್ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಆಡಳಿತಮಂಡಲಿಯಲ್ಲಿ 1/3 ಭಾಗದ ಹಿತ ರಕ್ಷಣೆ ಬಂದಿರುವುದು ಏನಿದೆ ಇದು ಕೇವಲ ಪೂರ್ಣ ಆಡಳಿತವನ್ನು ನೀವೇ ವಹಿಸಿ ಕೊಳ್ಳಬೇಕು, ನಿಮ್ಮ ಪಕ್ಷದ ಪ್ರತಿನಿಧಿ ಆಡಳಿತ ಮಂಡಲಿಯಲ್ಲಿ ಇರಬೇಕು. ಅದು ನಿಮ್ಮ ಹಿಡಿತದಲ್ಲಿ ಇರಬೇಕು ಎನ್ನುವ ಒಂದೇ ಕಾರಣದಿಂದ ಹೊರತು ಇನ್ನು ಯಾವುದೇ ಕಾರಣದಿಂದಲ್ಲ. ಆದುದರಿಂದ ದಯವಿಟ್ಟು 1/3 ಭಾಗಕ್ಕೆ ಬದಲಾಗಿ ಒಬ್ಬನೇ ಇದ್ದರೆ ಸಾಕು. ಸಹಕಾರ ಸಂಘಗಳು ಎಂದರೆ ನಿಜವಾದ ಪ್ರತಿನಿಧಿಗಳ ಆರಿಸಿ ಬಂದು ಅಧಿಕಾರ ನಡೆಯಿಸತಕ್ಕ ಸಂಸ್ಥೆ. ದಯವಿಟ್ಟು ಈ ಸಹಕಾರ ಸಂಘಗಳ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಹೋಗಬೇಕು. ಆದುದರಿಂದ ಈ ತಿದ್ದುಪಡಿಯನ್ನು ವಾಪಸ್ಸು ಪಡೆದು ಒಬ್ಬ ಸದಸ್ಯರು ಇರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಟಿ ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ವಿಚಾರದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅವರು ತಿಳಿಸಿದ ಪ್ರಕಾರ ಕೇವಲ ಒಬ್ಬ ಡೈರೆಕ್ಟರ್ ಸರ್ಕಾರದ ವತಿಯಿಂದ ಇದ್ದರೂ ಸಹ ಸರ್ಕಾರದ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ. ಒಂದು ವೇಳೆ ಒಬ್ಬರೇ ಸಾಲದು ಮೂರನೇ ಒಂದು ಭಾಗ ಸದಸ್ಯರು ಅಲ್ಲಿ ಇರಬೇಕು ಎನ್ನುವುದರಲ್ಲಿ ಅದಕ್ಕೆ ಪ್ರೇರಕವಾದಂಥ ಒಂದು ಸ್ಪರ್ಧೆ ಅಥವಾ ರಾಜಕೀಯ ಕಾರಣ ಉದ್ದೇಶ ಇಲ್ಲದೆ ಬೇರೆ ಇಲ್ಲವೇ ಇಲ್ಲ.

ಕೆಲವು ಸಹಕಾರ ಸಂಘಗಳನ್ನು ತಮ್ಮ ರಾಜಕೀಯ ಕಾರಣಕ್ಕೆ ಬಳಸಿಕೊಳ್ಳುವುದ ಕೋಸ್ಕರ ಒಂದು ತಿದ್ದುಪಡಿಯನ್ನು ತಾವು ತಂದಿದ್ದೀರಿ ಎಂದು ಘಂಟಾಘೋಷ ವಗಿ ಹೇಳುತ್ತೇನೆ. ನೀವು ಹೂಡಿದ ಬಂಡವಾಳ ರಕ್ಷಣೆ ಮಾಡುವುದಕ್ಕೆ ಬೇರೆ ವಿಧಾನಗಳು ನಿಮ್ಮ ಕೈಯಲ್ಲಿರುವಾಗ ಅವುಗಳನ್ನು ಬಿಟ್ಟು ಸರ್ಕಾರ ಮೂರನೇ ಒಂದು ಭಾಗ ಡೈರೆಕ್ಟರ್‌ಗಳನ್ನು ನೇಮಕ ಮಾಡತಕ್ಕ ವ್ಯಾರ್ಗ ರಾಜಕೀಯದಿಂದ ಪ್ರೇರೇಪಿತವಾಗಿರುವುದೇ ಹೊರತು ಇನ್ನು ಯಾವ ಸದುದ್ದೇಶದಿಂದ ಅಲ್ಲ ಎಂದ ಹೇಳುತ್ತೇನೆ. ಆದುದರಿಂದ ಈ ವಾದ ಚಿಲ್ಲರೆ ರಾಜಕೀಯ ಕಾರಣಕ್ಕೋಸ್ಕರ ಸಹಕಾರ ಸಂಘಗಳನ್ನು ಬಳಸಿಕೊಳ್ಳುವುದು ಸಹಕಾರಿ ತತ್ವಕ್ಕೆ ಮಾರಕದ ರೀತಿ ನೀತಿ ಆಗಿರುವುದರಿಂದ ಇದನ್ನು ಕೈ ಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :— ಈಗ ನನ್ನ ಮಿತ್ರರಾದಂಥ ಕಾಗೋಡು ತಿಮ್ಮಪ್ಪನವರು, ಮತ್ತು ಕೃಷ್ಣಪ್ಪನವರು ಹೇಳಿದ ಅಭಿಪ್ರಾಯ ಗಳನ್ನು ಸಮರ್ಥಿಸುತ್ತೇನೆ

ಈಗ ಅನೇಕ ಸಂದರ್ಭಗಳಲ್ಲಿ ಎಲೆಕ್ಷನ್ ಆಗುವಾಗ ಗವರ್ನಮೆಂಟ್ ನಾಮಿ ನೀಸ್‌ಗೆ ಡೈರೆಕ್ಷನ್ ಕೊಟ್ಟು ಇಂಥವನಿಗೆ ಓಟು ಕೊಡಬೇಕು ಎನ್ನುವ ಅಭಿಪ್ರಾಯ ರೂಢಿಯಾಗಿ ಬಂದಿರತಕ್ಕದ್ದು ನಿಮ್ಮೆಲ್ಲರಿಗೂ ಗೊತ್ತಿದೆ. ಚಾಮರಾಜ ಪೇಟೆ ಯಲ್ಲಿ ಪ್ರಾರಂಭವಾದ ಜನತಾ ಬಜಾರನ್ನು ಮುಚ್ಚುವ ಸ್ಥಿತಿ ಬಂದಿದೆ. ಇಂಥ ಸ್ಥಿತಿಯಲ್ಲಿ ಸರ್ಕಾರದ ಹಸ್ತಕ್ಷೇಪ ನಡೆಯುವುದು. ತಮಗೆ ಬೇಕಾದವರನ್ನು ಅಲ್ಲಿ ತರಿಸುವುದಕ್ಕೋಸ್ಕರ ನಾಮಿನೇಟ್ ಮಾಡಿ, ಫೈನಲ್ ಡೈರೆಕ್ಷನ್ ಡೈರೆಕ್ಟರ್‌ಗಳಿಗೆ ಕೊಟ್ಟು ಇಂಥವರಿಗೇ ಓಟು ಮಾಡಬೇಕು ಎಂದು ಒತ್ತಾಯ ಮಾಡುವ ಪರಿಸ್ಥಿತಿ ಬಂದಿದೆ. ಸರ್ಕಾರದ ಆದೇಶದ ವಿರುದ್ಧವಾಗಿ ಮಾಡುವುದಕ್ಕೆ ಆಗುವುದಿಲ್ಲ. ಅನೇಕ ಆಫೀಸರುಗಳಿಗೆ ಅದು ಅನ್ಯಾಯವೆಂದು ಕಂಡು ಬಂದರೂ ಕೂಡ ಅವರೂ ಕೈ ಎತ್ತುವ ಸಂದರ್ಭ ಬಂದಿದೆ. ಈಗ ಸರ್ಕಾರಕ್ಕೆ ಸಾಕಷ್ಟು ವಿಧಿನಿಯಮಗಳು ಇವೆ. ಸರ್ಕಾರದ ಹಣ ಇರುವಾಗ ತತ್‌ಕ್ಷಣ ಸೂಪರ್‌ಸಿಡ್ ಮಾಡಿ ಅಧಿಕಾರ ವನ್ನು ತಮ್ಮ ಕೈಗೆ ತೆಗೆದುಕೊಳ್ಳಬಹುದು. ಡೈರೆಕ್ಟರ್ಸ್‌ಗೆ ಎಕ್ಸ್‌ಟೇನ್‌ಷನ್ ತೆಗದು ಕೊಳ್ಳಬಹುದು. ಈ ರೀತಿ ಅವರ ಹಿತವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ತಿಮ್ಮಪ್ಪನವರು ಹೇಳಿದ ಹಾಗೆ ಒಬ್ಬ ಪ್ರತಿನಿಧಿ ಇದ್ದರೆ ಸಾಕಾಗುತ್ತದೆ. ಸಂಖ್ಯಾ ಬಲ ಬೆಳೆಸಿಕೊಂಡು ಪಾರ್ಟಿ ದೃಷ್ಟಿಯಿಂದ ಕೆಲಸ ಮಾಡಬೇಕು, ಅದಕ್ಕೋಸ್ಕರ ಸಹಕಾರ ಸಂಘಗಳಲ್ಲಿ ತಮ್ಮ ಹಿಡಿತ ಇಟ್ಟುಕೊಳ್ಳಬೇಕು ಎಂದು ಮಾಡಿದ್ದು ಆಗಿದೆ. ತಮ್ಮ ಕಡೆಯಿಂದ ಎಲೆಕ್ಟ್ ಆಗಿ ಬಂದಿರುವವರಿಗೆ ಮೆಜಾರಿಟಿ ಇಲ್ಲದೇ ಇದ್ದಾಗ ಸರ್ಕಾರದ ವತಿಯಿಂದ ಬಂದಂಥ ಮೂರನೇ ಒಂದು ಭಾಗ ಡೈರೆಕ್ಟರ್ ಹಿತ ತೆಗೆದುಕೊಂಡು ರಾಜಕೀಯ ಪ್ರಭಾವವನ್ನು ಬೀರುವುದಕ್ಕೆ ಮತ್ತು ಬೆಳೆಸಿ ಕೊಳ್ಳುವುದಕ್ಕೆ ತಂದಂಥ ತಿದ್ದುಪಡಿಯೇ ಹೊರತು, ಸೊಸೈಟಿ ಅಥವಾ ಸರ್ಕಾರದ

(ಟಿ. ಆರ್. ಶಾಮಣ್ಣ)

ಹಣದ ಒಂದು ಹಿತ ದೃಷ್ಟಿಯಿಂದ ತಂದದ್ದು ಅಲ್ಲ. ಸೊಸೈಟಿಯಲ್ಲಿ ಸರಿಯಾಗಿ ಕೆಲಸ ಮಾಡದಿದ್ದರೆ ಅದನ್ನು ತಮ್ಮ ಹಿಡಿತದಲ್ಲಿ ತೆಗೆದುಕೊಳ್ಳಬೇಕು ಎಂದರೂ ಆಗ ಸರ್ಕಾರಕ್ಕೆ ಸಂಪೂರ್ಣವಾದ ಅಧಿಕಾರವಿದೆ. ಅಲ್ಲಿ ಮೂರನೇ ಒಂದು ಭಾಗ ಜನರು ಇದ್ದು ಬಿಟ್ಟರೆ ಅವರು ಒಳ್ಳೆಯವರು ಆಗದೇ ಹೋಗಿದ್ದರೆ ಅಂಥವ ರಿಂದ ಪ್ರಯೋಜನವಿಲ್ಲ. ಸಹಕಾರ ತತ್ವದ ಗಂಧ ಅಲ್ಲದೇ ಇರುವವರನ್ನು ಪುಡಾರಿಗಳನ್ನು ತೆಗೆದುಕೊಂಡು ಬಂದು ಹಾಕಿದರೆ, ಸೊಸೈಟಿಯಲ್ಲಿ ಗೊಂದಲ ಉಂಟು ಮಾಡುವುದಕ್ಕೆ ಅದರಿಂದ ಅನುಕೂಲವಾಗುತ್ತದೆಯೇ ಹೊರತು ಅದರಿಂದ ಬೇರೆ ಏನೂ ಒಳ್ಳೆಯದು ಆಗುವುದಿಲ್ಲ. ಈಗ ಸರ್ಕಾರಕ್ಕೆ ಸಾಕಷ್ಟು ಅಧಿಕಾರವಿರುವುದರಿಂದ ಮೂರನೇ ಒಂದು ಭಾಗ ಜನರಲ್ಲಿ ಹಾಕತಕ್ಕದ್ದು, ಕೋ-ಆಪರೇಟೀವ್ ಮೂವ್‌ಮೆಂಟ್ ಹಿತದೃಷ್ಟಿಯಿಂದ ಒಳ್ಳೆಯದು ಅಲ್ಲ ಎಂದು ನಾನು ತಿದ್ದುಪಡಿಯನ್ನು ವಿರೋಧಿಸಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :— ನಾನು ಸಹ 63 (ಎ) ಕ್ಲಾಸ್ ಏನು ಇದೆ ಅದನ್ನು ಪೂರ್ಣವಾಗಿ ವಿರೋಧಿಸುತ್ತೇನೆ. ಮಾನ್ಯ ಮಿತ್ರರು ಆದ ತಿಮ್ಮಪ್ಪನವರು, ಕೃಷ್ಣಪ್ಪನವರು ಮತ್ತು ಶಾಮಣ್ಣನವರು ಕಾರಣಗಳನ್ನು ಕೊಟ್ಟಿದ್ದಾರೆ. ಯಾತಕ್ಕೋಸ್ಕರ ಈ ರೀತಿ ತಿದ್ದುಪಡಿ ತಂದಿದ್ದಾರೆಂದು ನನಗೆ ಆಶ್ಚರ್ಯವಾಗುತ್ತದೆ. ನನ್ನ ಅನುಭವಕ್ಕೆ ಬಂದಿರವ ಹಾಗೆ ಬಿಜಾಪುರ, ಗುಲ್ಬರ್ಗ ಮತ್ತಿತರ ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ನಮ್ಮ ಸರ್ಕಾರದವರು ಸೊಸೈಟಿಗಳನ್ನು ವಶಪಡಿಸಿಕೊಂಡಿದ್ದಾರೆ. ಇನ್ನು ಮೂರನೇ ಒಂದು ಭಾಗ ನಾಮಿನೇಟ್ ಮಾಡುವುದರಿಂದ ಒಳ್ಳೆಯ ಕಾನೂನು ಬರುತ್ತದೆಂದು ಯೋಚನೆ ಮಾಡಿದರೆ ಅದನ್ನು ಒಪ್ಪತಕ್ಕದ್ದು ಅಲ್ಲ. ಈಗಾಗಲೇ ಒಳ್ಳೆಯ ಕಾನೂನು ನಿಮ್ಮ ಕೈಯಲ್ಲಿ ಇದೆ. ಕೆಲಸ ಸುಸೂತ್ರವಾಗಿ ನಡೆಯಿಸಿ ಅನುಕೂಲವಾಗುತ್ತದೆ. ಮೂರನೇ ಒಂದು ಭಾಗ ನಾಮಿನೇಟ್ ಮಾಡಬೇಡಿ ಎಂದು ಹೇಳುವುದು ಅದು ಕೂಡ ಸಮಂಜಸವಾಗಲಾರದು. ಯಾರು ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಇದ್ದಾರೆ: ಯಾರು ಕಾರ್ಯಕರ್ತರು ಇದ್ದಾರೆ, ಯಾರು ಸೇವೆ ಮಾಡಬೇಕೆಂದಿ ದ್ದಾರೆ ಅಂಥವರು ಸೊಸೈಟಿ ಆಡಳಿತ ಮಂಡಳಿಯಲ್ಲಿ ಬರಬಹುದು. ಸರಿಯಾಗಿ ನಡೆಯಬೇಕು ಎಂಬುದು ತಮ್ಮ ಅಭಿಲಾಷೆ ಇರಬಹುದು. ಮೂರನೇ ಒಂದು ಭಾಗ ನಾಮಿನೇಟ್ ಮಾಡುವುದು ನ್ಯಾಯ ಅನ್ನಿಸುವುದಿಲ್ಲ. ಇಷ್ಟೆ ಅಲ್ಲ ಸಬ್ ಕ್ಲಾಸ್ 2-3-4 ಕೂಡ ಅಭಾಸವಾಗಿದೆ.

ಸಬ್ ಕ್ಲಾಸ್ (2) ರಲ್ಲಿ ಹೀಗೆ ಹೇಳಿದ್ದೀರಿ :

(2) "A person nominated as a member of a committee of a co-operative society under sub-section (1) (hereinafter in this Section referred to as 'nominated member') shall hold office as such member during the pleasure of the State Government".

ಸಬ್ ಕ್ಲಾಸ್ (2) ರಲ್ಲಿ ಹೀಗೆ ಹೇಳಿದ್ದೀರಿ :

"Subject to the provisions of sub-section (2) a nominated member shall hold office as such member for such period as the State Government may by order specify."

ಎಂದು ಹೇಳಿದ್ದೀರಿ. ಇವೆರಡೂ ಸರಿಯಾದುದಲ್ಲ. ಕೋಅಪರೇಟೀವ್ ಸೊಸೈಟಿಗಳಲ್ಲಿ ವರ್ಷಕ್ಕೆ ಒಂದು ಸಲ ಚುನಾವಣೆ ನಡೆಯಬೇಕು ಎಂದು ಹೇಳುತ್ತೀರಿ. ಅವರಿಗೆ ಒಂದು ರೂಲ್ ಇಟ್ಟುಕೊಂಡು ನಾಮಿನೇಟ್ ಮಾಡಿದ ಮೂರನೇ ಒಂದು ಭಾಗದ ಜನಕ್ಕೆ 'at your will, they may continue for any length of time' ಎಂದು ಹೇಳುವುದು ಸಮಂಜಸವಾದುದು ಅಲ್ಲ. ಅಂಥವರಿಗೂ ಕ್ಲುಪ್ತಕಾಲ ಇರಬೇಕು ಎಂದು ಅನ್ನಿಸುತ್ತದೆ. ಅವರು ಮೊದಲು ಆಡಳಿತ ಮಂಡಲಿಯಲ್ಲಿ ಇರಲಿಕ್ಕೇ ಕೂಡದು. ಒಂದು ವೇಳೆ ಇದ್ದರೂ ಕೂಡ ಕ್ಲುಪ್ತಕಾಲ ಇರಬೇಕು ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಪ್ರಜಾಪ್ರಭುತ್ವ ತತ್ವಗಳಿಗೆ ಪೂರ್ಣವಾಗಿ ತಿಲಾಂಜಲಿ ಕೊಡುವ ರೀತಿಯಲ್ಲಿ ಈ ತಿದ್ದುಪಡಿ ಇದೆ. ಸಬ್‌ಕ್ಲಾಸ್ 4 ರಲ್ಲಿ ಈ ರೀತಿ ಹೇಳಿದೆ :—

53. (4) "Where an officer of the State Government is nominated as member of Committee under sub-section (1) such officer may be nominated by virtue of his office, and when any such nomination is made, such officer may, if unable to be persent himself at any meeting of the committee, depute a subordinate officer to the meeting as his representative and such subordinate officer shall be deemed to be the person nominated as a representative of the State Government for purposes of such meeting."

(ಶ್ರೀ ಎಂ. ಎಸ್. ಕೃಷ್ಣನ್)

ಒಬ್ಬ ಆಫೀಸರು ಮೀಟಿಂಗಿಗೆ ಪ್ರೆಸೆಂಟ್ ಆಗದೇ ಇದ್ದರೆ, ಆ ಮೀಟಿಂಗಿಗೆ ಬೇರೆ ಯಾರು ಬೇಕಾದರೂ ಬರಬಹುದು ಎಂದು ಇದೆ. ಅದರ ಪ್ರಕಾರ ಸಬಾರ್ಡಿನೇಟ್ ಆಫೀಸರನ್ನು ನಾಮೀನೇಟ್ ಮಾಡಬೇಕು ಎಂದು ಆಗುತ್ತದೆ. ಯಾವುದೋ ಒಂದು ಮೀಟಿಂಗಿಗೆ ಒಬ್ಬ ಆಫೀಸರು ಬರದೇ ಹೋದರೆ ಇನ್ನೊಬ್ಬ ಆಫೀಸರನ್ನು ಕಳುಹಿಸಬಹುದು ಎಂದರೆ, ಮೊದಲನೆಯದಾಗಿ, It contradicts clause 53(A). ಅವರೇ ಹೋಗಬೇಕು, ಅವರನ್ನು ಬಿಟ್ಟು ಬೇರೆ ಯಾರಾದರೂ ಹೋಗಬಹುದು ಎನ್ನುವುದು ಕಾನೂನಿಗೆ ವಿರೋಧವಾಗಿದೆ, ತತ್ವಗಳಿಗೆ ವಿರೋಧವಾಗಿದೆ ಎಂದು ನನ್ನ ಅಭಿಪ್ರಾಯ. ಈ 4 ಅಂಶಗಳನ್ನು ತಾವು ಯೋಚನೆ ಮಾಡಿ ಕೋಅಪರೇಟೀವ್ ಮೂವ್‌ಮೆಂಟ್ ಹಿತದೃಷ್ಟಿಯಿಂದ ಕೈಬಿಡಬೇಕು ಎಂದು ಹೇಳುತ್ತೇನೆ.

ಶ್ರೀ ಪಿ. ಎಂ. ಬಂಗಿ :- (ಜಮಖಂಡಿ) ಮಾನ್ಯ ಮಂತ್ರಿಗಳು 53 (ಎ) ಕ್ಲಾಸಿಗೆ ಅಮೆಂಡ್‌ಮೆಂಟ್ ತಂದು ಅವರು ಏನು 50 ಪರ್ಸೆಂಟ್ ಟೋಟಲ್ ಶೇರ್ ಕ್ಯಾಪಿಟಲ್ ಅಥವಾ 5 ಲಕ್ಷ ರೂಪಾಯಿಗಳು ಎಂದು ಎರಡು ಷರತ್ತುಗಳನ್ನು ಹಾಕಿದ್ದಾರೆ, ಅವು ಸರಿಯಾಗಿವೆ. 50 ಪರ್ಸೆಂಟ್‌ಗೆ ಕಡಿಮೆ ಷೇರ್ ಕ್ಯಾಪಿಟಲ್ ಇದ್ದ ಮತ್ತು 5 ಲಕ್ಷಕ್ಕಿಂತಲೂ ಕಡಿಮೆ ಹಣ ಹಾಕಿದ್ದ ಸೊಸೈಟಿಗಳ ವಿಚಾರದಲ್ಲಿ ಯಾವ ಪ್ರಿಕಾಷನ್ಸ್ ತೆಗೆದುಕೊಂಡಿಲ್ಲ. ಆ ದೃಷ್ಟಿಯಿಂದ ಪುನರಪಿ ವಿಚಾರ ಮಾಡಿ ಕಡಿಮೆ ಬಂಡವಾಳವಾಗಲಿ, ಷೇರ್ ಕ್ಯಾಪಿಟಲ್ ಆಗಲಿ ಇದ್ದ ಮಿಕ್ಕ ಸೊಸೈಟಿಗಳಿಗೆ ನಿರ್ಬಂಧ ಹಾಕಬೇಕು ಎಂದು ನನ್ನ ಅಭಿಪ್ರಾಯ ಇದೆ. ಕೊಅಪರೇಟೀವ್ ಸೊಸೈಟಿ ವರ್ಕಿಂಗ್ ನೋಡಿದರೆ, ಕೊ ಅಪರೇಟೀವ್ ಸೊಸೈಟಿ ಮೂವ್‌ಮೆಂಟ್ ಫೈಲ್ ಆಗಲಿಕ್ಕೆ ಹತ್ತಿದೆ. ಎಷ್ಟೋ ಹಣ ಪೋಲಾಗಿದೆ. ಅವುಗಳಿಗೆ ಯಾವ ದೃಷ್ಟಿಯಿಂದಲೂ ನಿರ್ಬಂಧವಿಲ್ಲ. ಸೆಕ್ಷನ್ 30, ಸೆಕ್ಷನ್ 69 ಸೆಕ್ಷನ್ 72 ಇವೆಲ್ಲ ಲಿಕ್ವಿಡೇಷನ್ ಪ್ರೊಸೀಡಿಂಗ್ಸ್‌ಗೆ ಸಂಬಂಧಪಟ್ಟವು. ಅವುಗಳ ಮೇಲೆ ಸೆಕ್ಷನ್ 30ರ ಪ್ರಕಾರ ಕ್ರಮ ತೆಗೆದುಕೊಂಡರೂ, ಹಣ ಪೋಲಾದ ಬಗ್ಗೆ ನಾವು ಏನು ಮಾಡಿದರೂ ಅದರಿಂದ ಉಪಯೋಗವಾಗುವುದಿಲ್ಲ. ಆ ದೃಷ್ಟಿಯಿಂದ ಮುಂಚಿತವಾಗಿ ಸರ್ಕಾರ ಪ್ರಿಕಾಷನ್ಸ್ ತೆಗೆದುಕೊಂಡು ಮೂರನೇ ಒಂದು ಭಾಗ ಡೈರೆಕ್ಟರ್ಸ್‌ನ್ನು ನೇಮಿಸುವ ಅಧಿಕಾರ ಈ ಅಮೆಂಡ್‌ಮೆಂಟಿನಿಂದ ತೆಗೆದುಕೊಂಡಿರುವುದು ಸರಿ ಇದೆ. ಷೇರ್ ಕ್ಯಾಪಿಟಲ್ 50 ಪರ್ಸೆಂಟ್ ಕಡಿಮೆ ಅಥವಾ 5 ಲಕ್ಷಕ್ಕಿಂತ ಕಡಿಮೆ ಸರ್ಕಾರದ ಬಂಡವಾಳ ಇದ್ದ ಕಡೆ ಕೂಡ ಸರ್ಕಾರದವರು ಕೆಲವು ನಾಮಿನೇಷನ್ ಮಾಡಿ ಸರ್ಕಾರದ ಹಣ ಅಷ್ಟೇ ಅಲ್ಲ, ಸಾರ್ವಜನಿಕರ ಹಣವನ್ನು ರಕ್ಷಣೆ ಮಾಡುವ ಭಾರ ಸರ್ಕಾರದ ಮೇಲೆ ಇದೆ. ಈಗ ಸರ್ಕಾರ ತಂದಿರುವ ಸೂಚನೆ ಯೋಗ್ಯವಾಗಿದೆ. ಕಡಿಮೆ ಬಂಡವಾಳ,

ಕಡಿಮೆ ಷೇರ್ ಕ್ಯಾಪಿಟಲ್ ಇರುವ ಸೊಸೈಟಿಗಳಲ್ಲಿ ಕೂಡ ನಾಮಿನೇಷನ್ ಮಾಡಿ ಷೇರ್ ಹೋಲ್ಡರ್ಸ್ ಹಣ ಮತ್ತು ಸರ್ಕಾರದ ಹಣ ಸಂರಕ್ಷಣೆ ಮಾಡುವ ಕರ್ತವ್ಯ ಸರ್ಕಾರದ ಮೇಲೆ ಇದೆ. ಆ ದೃಷ್ಟಿಯಿಂದ ಸರ್ಕಾರ ಈಗ ತಂದಿರುವ ಸೂಚನೆಗೆ ಸಪೋರ್ಟ್ ಮಾಡುತ್ತೇನೆ, ಮತ್ತು ಅದಕ್ಕೆ ಬೆಂಬಲ ಕೊಡಬೇಕು ಎಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ: (ವೇಮಗಲ್): ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೆಲವು ಸಹಕಾರ ಸಂಘಗಳಲ್ಲಿ ಅರ್ಧಕ್ಕಿಂತ ಹೆಚ್ಚು ಷೇರ್ ಬಂಡವಾಳ ಅಥವಾ 5 ಲಕ್ಷಕ್ಕಿಂತ ಹೆಚ್ಚು ಸರ್ಕಾರದ ಬಂಡವಾಳ ಕೊಟ್ಟಿರತಕ್ಕ ಸೊಸೈಟಿಗಳಿಗೆ ಮೂರನೇ ಒಂದು ಭಾಗ ಪ್ರತಿನಿಧಿಗಳನ್ನು ನಾಮಿನೇಷನ್ ಮಾಡಬೇಕು ಎಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರ ಬಗ್ಗೆ ಮಾನ್ಯ ಮಿತ್ರರಾದ ತಿಮ್ಮಪ್ಪ ನವರೂ, ಕೃಷ್ಣಪ್ಪನವರೂ ವಿವರವಾಗಿ ಹೇಳಿದ್ದಾರೆ ಈಗ 6 ವರ್ಷದ ಮಿತಿ ಹಾಕಿ ಸಹಕಾರ ಸಂಘಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿ ಯಿಂದ ಇದನ್ನು ತಂದಿದ್ದಾರೆ. ಬಹಳ ಸಂತೋಷ. ಈಗ ಸರ್ಕಾರದವರು ಸಹಕಾರ ಸಂಘಗಳ ಹಿತಾಸಕ್ತಿಯಿಂದ 3-4 ಜನ ಡೈರಕ್ಟರ್ಸನ್ನು ನಾಮಕರಣ ಮಾಡುವ ಪರಿಸ್ಥಿತಿ ಇದೆ. ಸರ್ಕಾರದವರು ಈಗ ಅನೇಕ ಸಮಿತಿಗಳನ್ನು ರಾಜ್ಯದಲ್ಲಿ ನಾಮಿನೇಷನ್ ಮಾಡಿದ್ದಾರೆ. ಉದಾಹರಣೆಗೆ, ಲ್ಯಾಂಡ್ ಗ್ರಾಂಟ್ಸ್ ಕಮಿಟಿ ಮಾಡಿದ್ದಾರೆ, ಫುಡ್ ಕಮಿಟೀಸ್ ಮಾಡಿದ್ದಾರೆ. ಅದರಲ್ಲಿ ಇವತ್ತಿನ ದಿವಸ ಯಾರಿದ್ದಾರೆ ಎಂದರೆ, ಆಡಳಿತ ಪಕ್ಷದವರು ಬಿಟ್ಟರೆ ಮತ್ತೊಬ್ಬರು ಇಲ್ಲ. ಒಂದೇ ಪಕ್ಷದ ಹಿತಾಸಕ್ತಿಯನ್ನು, ಆಡಳಿತ ಪಕ್ಷದ ಹಿತಾ ಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ಈ ಅಮೆಂಡ್‌ಮೆಂಟನ್ನು ತಂದಿದ್ದಾರೆ. ಯಾವ ಉದ್ದೇಶದಿಂದ ಈ ಅಮೆಂಡ್ ಮೆಂಟನ್ನು ತಂದಿದ್ದಾರೋ, ಆ ಉದ್ದೇಶಕ್ಕೆ ಸರ್ಕಾರದವರು ತಿಲಾಂಜಲಿ ಕೊಡುತ್ತಿದ್ದಾರೆ. ಸಬಾರ್ಡಿನೇಟ್ ಆಫೀಸರನ್ನು ಕೂಡ ನಾಮಿನೇಟೆಡ್ ಮಾಡಬೇಕು ಎಂದು ಇದೆ. ಇದರಲ್ಲಿ ಕೂಡ ಒಂದು ದುರುದ್ದೇಶ ಇದೆ. ನನ್ನ ಅನುಭವದ ಪ್ರಕಾರ ಒಂದು ಸಹಕಾರ ಸಂಘದಲ್ಲಿ ಒಬ್ಬ ಬಹಳ ಚೆನ್ನಾಗಿ ಕೆಲಸಮಾಡತಕ್ಕ ಅಥವಾ ಸತ್ಯದಿಂದ ಕೆಲಸ ಮಾಡತಕ್ಕ ಅಧಿಕಾರಿ, ಸರ್ಕಾರ ಕೊಟ್ಟ ನಿರ್ದೇಶನವನ್ನು ಪಾಲನೆ ಮಾಡುವುದಿಲ್ಲ ಎಂದು ಕಂಡುಬಂದರೆ, ಅವರು ಕಂಪಲ್ಸರಿ ಯಾಗಿ ರಜಾ ಹಾಕಿ, ಆ ಮೀಟಿಂಗಿಗೆ ಹೋಗಬಾರದು ಎಂದು ಸರ್ಕಾರ ಒತ್ತಾಯಮಾಡಿ, ಅವರಿಂದ ರಜಾ ಹಾಕಿಸಿ, ತಮ್ಮ ಮೂಗಿಗೆ ನೇರವಾಗಿ ಕುಣಿಯು ತಕ್ಕ ಅಧಿಕಾರಿ ಬರುವಂತೆ ಮಾಡಿ, ಅವರ ಪಕ್ಷದ ಹಿತಾಸಕ್ತಿಯನ್ನು ಕಾಪಾಡಿರುವ ನಿದರ್ಶನ ಕೋಲಾರ ಜಿಲ್ಲಾ ಸಹಕಾರಿ ಬ್ಯಾಂಕಿನಲ್ಲಿ ನಡೆದಿದೆ. ಈ ರೀತಿ ದುರುದ್ದೇಶದಿಂದ ಈ ಅಮೆಂಡ್‌ಮೆಂಟನ್ನು ತಂದಿದ್ದೀರಿ. ತಮ್ಮ ಸಹಕಾರಿ ತತ್ವಕ್ಕೆ ತಿಲಾಂಜಲಿ ಕೊಡುವ ಏರ್ಪಾಡು ಈ ಅಮೆಂಡ್‌ಮೆಂಟಿನಲ್ಲಿ

(ಶ್ರೀ ಸಿ. ಬೈರೇಗೌಡ)

ಕಾಣುತ್ತಾ ಇದೆ. ದಯವಿಟ್ಟು ಸರ್ಕಾರ ಇದನ್ನು ವಾಪಸ್ ಪಡೆಯಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಶ್ರೀ ಎ. ಶಂಕರ ಆಳ್ವ (ಪುತ್ತೂರು): ಶ್ರೀಮಾನ್ ಬಂಗಿಯವರು ಇದಕ್ಕೆ ಷೇರ್ ಕ್ಯಾಪಿಟಲ್ ಅರ್ಧ ಹಾಗೂ 5 ಲಕ್ಷಕ್ಕಿಂತ ಕಡಿಮೆ ಸರ್ಕಾರದ ಬಂಡವಾಳ ಇದ್ದಂಥ ಸೊಸೈಟಿಗಳಿಗೂ ಸಹ ಇದು ಅನ್ವಯಿಸಬೇಕು ಎಂದು ಹೇಳಿದ್ದಾರೆ. ಇಷ್ಟು ಉಗ್ರವಾಗಿ ಮಾಡುವುದು ಬೇಡ ಎಂದು, ಸ್ವಲ್ಪ ಮಿತಿ ಇಟ್ಟಿದ್ದೇವೆ. ಇನ್ನು ಶ್ರೀಮಾನ್ ತಿಮ್ಮಪ್ಪನವರು ಒಬ್ಬ ಗವರ್ನಮೆಂಟ್ ಡೈರೆಕ್ಟರ್ ಇದ್ದರೆ ಸಾಕು ಎಂದು ಹೇಳಿದ್ದಾರೆ. ಈಗ ಇದ್ದ ಪ್ರಕಾರ, ಸೆಕ್ಷನ್ 29ರ ಪ್ರಕಾರ 3 ಜನರ ನೇಮಕಕ್ಕೆ ಅಧಿಕಾರ ಉಂಟು. 52(ಎ) ಅಮೆಂಡ್ ಮಾಡಿ, 53(ಬಿ) ಅಮೆಂಡ್‌ಮೆಂಟನ್ನು ತೆಗೆದು ಹಾಕಿ ಡ್ರಾಫ್ ಮಾಡಿದ್ದೇವೆ. ಇದರ ಉದ್ದೇಶವಾದರೂ ಸರ್ಕಾರದ ಹತೋಟಿ ಅದರಲ್ಲಿ ಇರಕೂಡದು, ಇದ್ದರೂ ಅದಷ್ಟು ಕಡಿಮೆ ಮಾಡಬೇಕು ಎನ್ನುವ ಇರಾದೆಯಿಂದ ಈ ಸೆಕ್ಷನನ್ನು ತಂದಿದ್ದೇನೆ. ಎರಡು ರೀತಿಯಲ್ಲಿ ಸೊಸೈಟಿಗಳ ಅಧಿಕಾರವನ್ನು ತೆಗೆದುಕೊಳ್ಳಬಹುದು. ಸೆಕ್ಷನ್ 54 ಪ್ರಕಾರ, ಕಮಿಟಿ ಡೈರಕ್ಟರ್ಸ್ ಇದ್ದುಕೊಂಡು, ನಾವು ಜಾಸ್ತಿ ಜನ ಹಾಕಿಕೊಂಡು ಅಧಿಕಾರ ತಗೆದುಕೊಳ್ಳಬಹುದು. ಅದಕ್ಕಿಂತ ಮೋರ್‌ಡ್ರಾಸ್ಟಿಕ್ ಆಗಿರುವುದು ಸೆಕ್ಷನ್ 30. ಅದರ ಪ್ರಕಾರ ಕಮಿಟಿಯನ್ನು ವಜಾ ಮಾಡಬೇಕು. ಕೆಲವು ಸಂದರ್ಭಗಳಲ್ಲಿ, ದೊಡ್ಡ ಸೊಸೈಟಿಗಳಲ್ಲಿ ಸ್ವಲ್ಪ ಡೈರೆಕ್ಟರ್ಸ್‌ನ್ನು ಜಾಸ್ತಿ ಹಾಕಿಬಿಟ್ಟರೆ ತಾತ್ಕಾಲಿಕವಾಗಿ ತೊಂದರೆಗಳನ್ನು ನಿವೃತ್ತಿ ಮಾಡಲಿಕ್ಕೆ ಸಾಧ್ಯವಾದೀತು. ಸೆಕ್ಷನ್ 54 ಆಗಲಿ, ಸೆಕ್ಷನ್ 30 ಆಗಲಿ ಇನ್‌ವೋಕ್ ಮಾಡುವ ಅವಕಾಶ ಬಹಳವಾಗಿರುವುದಿಲ್ಲ. ಕಡ್ಡಾಯವಾಗಿ ಸರ್ಕಾರದ ಪ್ರತಿನಿಧಿಗಳನ್ನು ಹಾಕಲೇಬೇಕು ಎಂದು ಇಲ್ಲ, ಸರ್ಕಾರ ಅಧಿಕಾರ ಇಟ್ಟುಕೊಳ್ಳುತ್ತದೆ ಅಷ್ಟೆ. ಏನಾದರೂ ದೊಡ್ಡ ಸೊಸೈಟಿಗಳಲ್ಲಿ ಗವರ್ನ್‌ಮೆಂಟ್ ನಾಮಿನೇಷನ್ಸ್‌ನ ಪರಿಣಾಮ ಸಾಕಾಗುವುದಿಲ್ಲ ಅಂದರೆ, 2-3 ಜನ ಜಾಸ್ತಿ ಹಾಕಿದರೆ ಸ್ವಲ್ಪ ಮಟ್ಟಿಗೆ ಅದು ಹತೋಟಿಯಲ್ಲಿ ಬರಲಿಕ್ಕೆ ಸಾಧ್ಯವಾದೀತು, ಹಣವೂ ದುರುಪಯೋಗವಾಗುವುದು ಕಡಿಮೆ ಮಾಡುವುದಕ್ಕೆ ಸಾಧ್ಯವಾದೀತು ಎನ್ನುವ ಉದ್ದೇಶದಿಂದ ತಂದಿದ್ದೇನೆ. ಯಾವಾಗಬೇಕಾದರೂ ಈ ಡೈರಕ್ಟರ್ಸ್‌ನ್ನು ವಾಪಸ್ ತೆಗೆದುಕೊಳ್ಳಬಹುದು ಇಷ್ಟೇ ಸಮಯಕ್ಕೆ ಮಾತ್ರ ಎಂದು ಇಲ್ಲ. 6 ತಿಂಗಳು, ಒಂದು ವರ್ಷ ಇಡಬೇಕು, ಎಷ್ಟು ಸಮಯಬೇಕೋ ಅಷ್ಟು ಸಮಯ ಇಡಬಹುದು. ಆದಷ್ಟು ಸೆಕ್ಷನ್ 54 ಆಗಲಿ, ಸೆಕ್ಷನ್ 30 ಆಗಲಿ ಉಪಯೋಗ ಮಾಡಕೂಡದು, ಸೊಸೈಟಿ ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕೆ ಅನುಕೂಲವಾಗಲಿ ಎನ್ನುವ ಕಾರಣದಿಂದ ಕೆಲವು ಸಂದರ್ಭಗಳಲ್ಲಿ ಹತೋಟಿ ಇಟ್ಟುಕೊಳ್ಳುವ ಉದ್ದೇಶವೇ

ಹೊರತು, ಆವುಗಳ ಆಡಳಿತವನ್ನು ಕುಂಠಿತಗೊಳಿಸಬೇಕು ಎಂದು ಇಲ್ಲ. ಯಾವಾಗಲೂ ಹತೋಟಿ ತೆಗೆದುಕೊಳ್ಳಬೇಕು ಎಂದರೆ ಸೆಕ್ಷನ್ 54 ಉಂಟು, ಸೆಕ್ಷನ್ 30 ಉಂಟು. ಆದು ಬರಲಿಕ್ಕೆ ಕೂಡದು ಎನ್ನುವುದು ಸರ್ಕಾರದ ಉದ್ದೇಶ. ಕೊ ಆಪರೇಟೀವ್ ಸೊಸೈಟಿ ಒಳ್ಳೆಯ ರೀತಿಯಲ್ಲಿ ಮುಂದೆ ಬರಬೇಕು ಎನ್ನುವ ಉದ್ದೇಶದಿಂದ, ಮತ್ತು ಅದರಲ್ಲಿ ಏನಾದರೂ ಹತೋಟಿ ತಪ್ಪಿ ಹೋದರೆ ಜಾಸ್ತಿ ಜನ ಹಾಕಿ ಮತ್ತೆ ಸರಿಯಾಗಿ ಅದು ಕೆಲಸ ಮಾಡುವಂತೆ ಆಗಲಿ ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇನೆ. ಸೆಕ್ಷನ್ 53 ಎ ನಲ್ಲಿ ಒಬ್ಬ ಆಫೀಸರಿಗೆ ಆಡಳಿತಮಂಡಲಿಯಲ್ಲಿ ಪಾಸಾದ ಠರಾವನ್ನು ವಿಟೋ ಮಾಡುವ ಅಧಿಕಾರ ಇರುವುದು ಸರಿಯಾದುದಲ್ಲ ಎಂದು ಅದನ್ನು ತೆಗೆದು ಹಾಕಿದ್ದೇವೆ. 53-ಎ ಸೂಕ್ತವಾದುದು, ಸಭೆ ಒಪ್ಪಿಕೊಳ್ಳಲಿ ಎಂದು ಹೇಳುತ್ತೇನೆ.

MADAM SPEAKER : The question is :

12. "That for clause 12, the following clause shall be substituted, namely :—Insertion of new Section 53A.— After Section 53 of the principal Act, the following Section shall be inserted, namely —

"53A. *Nomination of members of committee by State Government in certain cases.*—(1) Notwithstanding anything contained in Section 29, where the State Government has subscribed to the share capital of a co-operative society to the extent of not less than -

(i) 50 per cent of the total share capital, or

(ii) five lakhs of rupees

the State Government shall have the right to nominate as its representatives one-third of the total number of members of the committee of the co-operative society.

(2) A person nominated as a member of a committee of a co-operative society under sub-section (1) hereinafter in this Section referred to as 'nominated member' shall hold office as such member during the pleasure of the State Government.

(MADAM SPEAKER)

(3) Subject to the provisions of sub-section (2), a nominated member shall hold office as such member for such period as the State Government may by order specity.

(4) Where an officer of the State Government is nominated as member of a committee under sub-section (1) such officer may be nominated by virtue of his office, and when any such nomination is made, such officer may, if unable to be present bimself at any meeting of the committee, depute a subordinate officer to the meeting as his representative and such subordinate officer shall be deemed to be the person nominated as a representative of the State Government for purposes of such meeting."

The Motion was adopted

Clause 12 was substituted

Clause 13

MADAM SPEAKER :—The question is :

" That clause 13 do stand part of the Bill"

The Motion was adopted

Clause 13 was added to the Bill

Clause 14

MADAM SPEAKER.—There is an amendment to clause 14, given notice of by Sri T. R. Shamanna which may be moved by the member.

SRI T. R. SHAMANNA.—I beg to move

" That in the proposed section 70A sub-section (1) for the word " six " the word " three " shall be substituted."

MADAM SPEAKER :—Amendment moved

" That in the proposed Section 70-A sub-section (1) or the word " six " the word " three " shall be ubstituted."

SRI T. R SHAMANNA:—ನಮ್ಮ ಮುಂದೆ ಇರತಕ್ಕ ಸೆಕ್ಷನ್ ಪ್ರಕಾರ "No dispute under Section 70 shall be entertained unless it is referred to the Registrar within six years from the date of the cause of action" ಎಂದು ಈ ರೀತಿ ಇದೆ. ಈ ಬಗ್ಗೆ ಹೇಳುವುದಾದರೆ 6 ವರ್ಷಗಳ ಕಾಲ ಇದರ ಬಗ್ಗೆ ಏನಾದರೂ ತಕರಾರು ಇದ್ದಲ್ಲಿ ರಿಜಿಸ್ಟ್ರಾರ್‌ರವರ ಗಮನಕ್ಕೆ ತರಬೇಕೆಂದು ಇದೆ. ಈಗಾಗಲೇ ಅನೇಕ ಸೊಸೈಟಿಗಳಲ್ಲಿ ಬಾಕಿ ವಸೂಲಿಗಳು ನಿಂತು ಹೋಗಿ 25-30 ಪರ್ಸೆಂಟ್ ಅಷ್ಟು ಸಹ ವಸೂಲಾಗುತ್ತಾ ಇಲ್ಲ ಈಗ ಇದಕ್ಕೆ 6 ವರ್ಷ ಟೈಂ ಒದಗಿಸಿಕೊಟ್ಟಲ್ಲಿ ಇದರ ಬಗ್ಗೆ ತೀರ್ಮಾನವಾಗುವುದಕ್ಕೆ ಪುನಃ 3 ವರ್ಷ ಬೇಕಾಗುತ್ತದೆ. ಹೀಗಾಗಿ ವಸೂಲಾಗುವುದಕ್ಕೆ ಅನೇಕ ವರ್ಷಗಳು ತಳ್ಳಿದರೆ ಸೊಸೈಟಿಯ ಪ್ರಗತಿಗೆ ತೊಂದರೆಯಾಗುತ್ತದೆ ಮತ್ತು ಹಣ ವಸೂಲ್ಮಾಡುವುದಕ್ಕೆ ತೊಂದರೆಯೂಗುತ್ತದೆ. ಆದುದರಿಂದ ಇದಕ್ಕೆ 6 ವರ್ಷ ಟೈಂ ಇಟ್ಟಿರುವುದು ತಪ್ಪು. ಇದನ್ನು 3 ವರ್ಷಕ್ಕೆ ಇಳಿಸಿದರೆ ಶೀಘ್ರವಾಗಿ ಬಾಕಿ ಹಣವನ್ನು ವಸೂಲ್ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಇದರ ಜೊತೆಗೆ ಟ್ರಿಬ್ಯೂನಲ್‌ಗೆ ತಮಗೆ ಬೇಕಾದವರನ್ನು ಹಾಕಿ ಅನೇಕ ಸೊಸೈಟಿಗಳಲ್ಲಿ ದುರುಪಯೋಗವಾಗುತ್ತದೆ. ಆದುದರಿಂದ ಈ ಬಗ್ಗೆ ಬರತಕ್ಕಂಥ ಡಿಸಪ್ಯೂಟ್‌ನ್ನು ಬೇಗ ತೀರ್ಮಾನ ಮಾಡಬೇಕಾದರೆ ಈಗ 6 ವರ್ಷ ಇಟ್ಟಿರತಕ್ಕಂಥ ಟೈಂ ಅನ್ನು 3 ವರ್ಷಕ್ಕೆ ಇಳಿಸಿದರೆ ಅನುಕೂಲವಾಗುತ್ತದೆ. ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎ. ಶಂಕರಆಳ್ವ : ಇದರಲ್ಲಿ 6 ವರ್ಷ ಟೈಂ ಇರಬೇಕು ಎಂದು ಹೇಳುವುದಿಲ್ಲ. 6 ವರ್ಷದವರೆಗೂ ಕಾಯಬೇಕು ಅಂತಲ್ಲ 2 ವರ್ಷದಲ್ಲಾದರೂ ತೀರ್ಪು ಕೊಡಬಹುದು. ಇದರಲ್ಲಿ ಮುಖ್ಯವಾದ ಉದ್ದೇಶ. ಏನೆಂದರೆ ವಿಳಂಬವಿಲ್ಲದೆ, ಒಡನೆಯೇ ವಸೂಲಾಗಬೇಕು ಮತ್ತು ಒಂದು ಲಿಮಿಟೇಷನ್ ಲಾಸ್ಟ್ ಡೇಟ್ ಏನು ಇದೆ ಅದು ಹಾಗೆಯೇ ಇರಬೇಕು ಅಂತ ಅಷ್ಟೆ, ಇನ್ನೇನೂ ಅಲ್ಲ.

MADAM SPEAKER.—The question is :

"That in the proposed Section 70 A sub-section (1) for the word "six" the word "three" shall be substituted".

The Motion was Negatived

MADAM SPEAKER :—The question is :

"That clause 14 do stand part of the Bill"

(MADAM SPEAKER)

The motion was adopted

Clause 14 was added to the Bill

Clause 15 to 23

MADAM SPEAKER :—The question is :

" That clauses 15 to 23 both inclusive do stand part of the Bill. "

The motion was adopted

Clauses 15 to 23 both inclusive were added to the Bill.

Clause 24

MADAM SPEAKER :—There is an amendment to clause 24 given notice of by Sri T. R. Shamanna, The Hon. member may move his amendment.

SRI. T. R. SHAMANNA :—I beg to move

" That the proposed Section 108A shall be deleted. "

MADAM SPEAKER :—Amendment moved :

" That the proposed section 108A shall be deleted."

ಶ್ರೀ ಟಿ. ಆರ್. ಶಾಮಣ್ಣ :—ಈಗ ಹೊಸದಾಗಿ 108(ಎ) ಅನ್ನುವ ಒಂದು ಹೊಸ ಕ್ಲಾಸನ್ನು ತಂದಿದ್ದಾರೆ. ಅದರಲ್ಲಿ ಈ ರೀತಿ ಇದೆ :—

" No appeal or revision in certain cases :....Notwithstanding anything contained in this Act, where with the previous sanction in writing or on the requisition of the Reserve Bank ;—

V-, 31'IV73
IV 74-21-1-7
(13) 48898

(i) a co-operative bank has been ordered to be wound up; or

(ii) a scheme of amalgamation or reorganisation of a co-operative bank is given effect to; or

(iii) an order for the removal of the committee and the appointment of an Administrator in respect of a Co-perative Bank, has been made, there shall be no appeal or revision against such order or action and the sanction or requisition of the Reserve Bank shall not be liable to be called in question in any court of law.'' ಈ ಬಗ್ಗೆ ಹೇಳುವುದಾದರೆ ಕೋರ್ಟಿಗೆ ಇರತಕ್ಕ ಅಧಿಕಾರವನ್ನು ಇಟ್ಟುಕೊಂಡು ನ್ಯಾಯವಾದ ರೀತಿಯಲ್ಲಿ ಜನಗಳಿಗೆ ಅನುಕೂಲ ಒದಗಿಸಿಕೊಡಬೇಕು. ಹಾಗಿಲ್ಲದೇ ಇದ್ದ ಪಕ್ಷದಲ್ಲಿ ಕೋರ್ಟುಗಳಿಗೆ ಇರತಕ್ಕಂಥ ಅಧಿಕಾರವನ್ನು ಒಂದೇ ಸಾರಿ ಕಿತ್ತು ಹಾಕಿಬಿಟ್ಟು ಅಲ್ಲಿರತಕ್ಕ ಎಕ್ಸಿಕ್ಯೂಟೀವ್ ಪವರ್ಸ್ ಮತ್ತು ಜುಡಿಷಿಯಲ್ ಪವರ್ಸ್ ಎಲ್ಲವನ್ನೂ ನಿಮ್ಮ ಹತ್ತಿರ ಇಟ್ಟುಕೊಂಡು ಬಿಟ್ಟರೆ ಬಹಳ ಅನುಕೂಲವಾಗುತ್ತದೆ. ಇದಕ್ಕಿಂತಲೂ ಹೆಚ್ಚಾಗಿ ಈ ಬಗ್ಗೆ ಹೇಳುವುದಾದರೆ ಈಗ ಅನೇಕ ಸೊಸೈಟಿಗಳಿಗೆ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿದ್ದೀರಾ. ರಾಜಕೀಯ ಕಾರಣಗಳಿಂದ ಅನೇಕ ಸೊಸೈಟಿಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅನೇಕ ಕಮಿಟಿಗಳನ್ನು ಸೂಪರ್‌ಸೀಡ್ ಮಾಡಿದ್ದೀರಾ. ಅನೇಕ ಸಂದರ್ಭಗಳಲ್ಲಿ ಹೈಕೋರ್ಟಿನವರು ಸ್ಟೇ ಕೊಟ್ಟಿದ್ದಾರೆ. ಮತ್ತು ಇದರ ಜೊತೆಗೆ ಇಂಥಾದ್ದರಲ್ಲಿ ತಪ್ಪು ಇದೆ ಎಂದು ಹೇಳಿದ್ದಾರೆ. ಹೀಗೆ ಪ್ರಜೆಗಳಿಗೆ ನ್ಯಾಯ ದೊರಕಿಸಿ ಕೊಡತಕ್ಕಂಥ ಫಂಡ್‌ಮೆಂಟಲ್ ರೈಟ್ಸ್ ಏನು ಇದೆ ಅದನ್ನು ಕಿತ್ತುಕೊಳ್ಳತಕ್ಕಂಥಾದ್ದು ನ್ಯಾಯವಾದುದಲ್ಲ. ಆದುದರಿಂದ ಈಗ ತಂದಿರತಕ್ಕಂಥ ಸೆಕ್ಷನ್ ಏನು ಇದೆ ಅದು ನ್ಯಾಯವಾದುದಲ್ಲ ಎಂದು ಹೇಳುತ್ತೇನೆ ಮತ್ತು ಈ ಸೆಕ್ಷನ್‌ನಿಂದ ಪ್ರಜೆಗಳಿಗೆ ನ್ಯಾಯ ಒದಗಿಸಿಕೊಡುತ್ತೇವೆ ಎಂದು ಹೇಳಿದರೆ ಅದರಿಂದ ಅನುಕೂಲವಾಗುವುದಿಲ್ಲ ಎಂದು ಹೇಳುತ್ತೇನೆ. ಪ್ರತಿಯೊಂದರಲ್ಲೂ ಕೂಡ ಸಾರ್ವಜನಿಕರಿಗೆ ಇರತಕ್ಕಂಥ ಅಧಿಕಾರವನ್ನು ಮೊಟಕು ಮಾಡುತ್ತಾ ಇರುವುದು ಸರಿಯಲ್ಲ. ಮತ್ತು ಇಂತಹ ಕೋರ್ಟುಗಳನ್ನು ಕಿತ್ತು ಹಾಕುವುದರಿಂದ ಅನೇಕ ವಕೀಲರು ರಾಜಕೀಯಕ್ಕೆ ಇಳಿಯುವದಕ್ಕೆ ಅನುಕೂಲವಾಗುತ್ತದೆ ಮತ್ತು ಅನೇಕ ಜಡ್ಜುಗಳನ್ನು ನಾಮಕರಣಮಾಡತಕ್ಕಂಥ ಪ್ರಶ್ನೆಯೂ ಹೋಗುತ್ತದೆ. ಆದುದರಿಂಧ ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಪೀಸ್‌ಮೀಲ್ ಆಗಿ ಕೋಅಪರೇಟಿವ್ ಸೊಸೈಟಿಯ ಮೇಲೂ ಇಂತಹ ಒಂದು ಅಮೆಂಡ್‌ಮೆಂಟನ್ನು ತೆಗೆದುಕೊಂಡು ಬಂದರೆ ನ್ಯಾಯ ಸರಿಯಾಗಿ ದೊರಕುವುದಿಲ್ಲ. ನಿಜವಾಗಿಯೂ ಇದು ಡೆಮಾಕ್ರಟಿಕ್ ಸೆಟ್‌ಅಪ್‌ಗೆ ಸರಿ

(ಶ್ರೀ ಟಿ. ಆರ್. ಶಾಮಣ್ಣ)

ಯಾದುದಲ್ಲ. ಮತ್ತು ಇದು ಕೋರ್ಟಿಗೆ ಹೋದರೂ ನಿಷ್ಪಕ್ಷಪಾತವಾಗಿ ನಡೆಯು ವುದಿಲ್ಲ. ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ಮಾಡಕ್ಕ ರಾಜಕೀಯ ಕಾರಣಗಳಿಗೆ ತಮ್ಮ ಪಕ್ಷದ ಪ್ರಭಾವವನ್ನು ಬೀರಿ ಅನೇಕ ಸೊಸೈಟಿಗಳನ್ನು ಸೂಪ ರ್‌ಸೀಡ್ ಮಾಡಿರತಕ್ಕಂಥಾದ್ದು ಸರಿಯಲ್ಲ. ಈ ರೀತಿ ಬಸವನ ಗುಡಿ ಕೋ-ಅಪ ರೇಟಿವ್ ಸೊಸೈಟಿಯನ್ನೂ ಕೂಡ ಸೂಪರ್‌ಸೀಡ್ ಮಾಡಿ, ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿದ್ದೀರಾ. ಹೀಗಾಗಿ ಅನೇಕ ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ ಮತ್ತು ಇನ್ನೊಂದು ಉದಾಹರಣೆ ಹೇಳುವುದಾದರೆ ಚಾಮರಾಜಪೇಟೆಯಲ್ಲಿರುವ ಸೆಂಟ್ರಲ್ ಕೋಅಪರೇಟಿವ್ ಬ್ಯಾಂಕು ಬಗ್ಗೆಯೂ ಬೇಕಾದಷ್ಟು ದೂರುಗಳನ್ನು ಕೊಟ್ಟಿದ್ದಾರೆ. ಮತ್ತು ರಿಸರ್ವ್ ಬ್ಯಾಂಕಿನವರು ಕೂಡ ಅದಕ್ಕೆ ಬೇಕಾದಷ್ಟು ಅಬ್ಜಕ್ಷನ್ ಹಾಕಿದ್ದಾರೆ. ಅಲ್ಲಿಗೆ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿ ಎಂದು ಅನೇಕ ಸಾರಿ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

3.00 P. M.

ಚೆನ್ನಾಗಿ ನಡೆಯುತ್ತಿರುವ ಸೊಸೈಟಿಗಳಿಗೆ ಮತ್ತು ಬ್ಯಾಂಕುಗಳಿಗೆ ಸರ್ಕಾರ ದವರು ಅಡ್ಮಿನಿಸ್ಟ್ರೇಟರನ್ನು ತಂದು ಹಾಕಿ ಕಮಿಟಿಗಳಿಗೆ ಸರ್ಕಾರದಿಂದ ನಾಮಿನೇಟ್ ಮಾಡಿ ಅದರಲ್ಲಿ ಏನಾದರೂ ಅನ್ಯಾಯ ನಡೆದರೆ ಅಂತಹ ಸಂದರ್ಭದಲ್ಲಿ ಕೋರ್ಟಿನಲ್ಲಿ ನ್ಯಾಯ ದೊರಕಿಸಿಕೊಳ್ಳಬೇಕಾದರೆ ಅದಕ್ಕೆ ಅವಕಾಶವಿಲ್ಲದಂತೆ ಮಾಡುವುದು ಸಾಧುವಾದ ಕ್ರಮವಲ್ಲ, ಅದು ನ್ಯಾಯವಾದುದಲ್ಲ. ಆ ರೀತಿ ಮಾಡಿ ಸಾಮಾನ್ಯ ಮನುಷ್ಯನ ಫಂಡಮೆಂಟಲ್ ರೈಟ್ಸ್ ಏನು ಇದೆ ಅದನ್ನು ಸರ್ಕಾರ ತೆಗೆದುಕೊಳ್ಳತಕ್ಕಂಥದ್ದು ನ್ಯಾಯವಾದುದಲ್ಲ. ಆದ್ದರಿಂದ ಕೋಅಪ ರೇಟಿವ್ ಮೂವ್‌ಮೆಂಟಿನ ಹಿತದೃಷ್ಟಿಯಿಂದ ಈ ಕಾಯಿದೆಯನ್ನು ತಂದಿರುವುದು ಸರಿಯಾದುದ್ದಲ್ಲವೆಂದು ಹೇಳಿ ಈಗ ತಂದಿರುವ ತಿದ್ದುಪಡಿಯನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಬಂಗಿ.—ಮಾನ್ಯ ಶಾಮಣ್ಣನವರು ತಂದಿರತಕ್ಕ ತಿದ್ದುಪಡಿ ಯನ್ನು ತೀವ್ರವಾಗಿ ವಿರೋಧ ಮಾಡುತ್ತೇನೆ. ಈಗ ನಮ್ಮ ಮಂತ್ರಿಯವರು ತಂದಿರತಕ್ಕ ಕಾಯಿದೆಗೆ ತಿದ್ದುಪಡಿ ತಂದು ಅಪೀಲು ಹೋಗುವುದು ಮತ್ತು ರಿವಿಜನ್‌ಗೆ ಅವಕಾಶ ಕೊಡತಕ್ಕಂಥ ಕಾಯಿದೆ ಇರಬೇಕೆಂದು ಮಾನ್ಯ ಶಾಮಣ್ಣ ನವರು ಹೇಳಿರುವುದನ್ನು ನೋಡಿದರೆ ಇಂಥ ತಿದ್ದುಪಡಿ ಯಾವ ರೀತಿ ಕೋಅಪ ರೇಟಿವ್ ಮೂವ್‌ಮೆಂಟಿಗೆ ಅನುಕೂಲವಾಗುತ್ತದೆ ಎಂಬುದು ನನಗೆ ಅರ್ಥವಾಗು ವುದಿಲ್ಲ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಯಾವುದು? ಸಿವಿಲ್ ಕೋರ್ಟಿಗೆ ಹೋಗಲು ಕೋಅಪರೇಟೀವ್ ಕಾಯಿದೆ ಪ್ರಕಾರ ಬರುವುದಿಲ್ಲ. ರಿಟ್ ಪಿಟಿಷನ್

ಹಾಕಲು ಪ್ರತಿಯೊಬ್ಬರಿಗೂ ಓಪನ್ ಆಗಿ ಇರುತ್ತದೆ. ಆದುದರಿಂದ ಹೈಕೋರ್ಟಿಗೆ ರಿಟ್ ಪಿಟಿಷನ್ ಹಾಕಬೇಕಾದರೆ ಯಾರಿಗೂ ಇದರಿಂದ ಧಕ್ಕೆಯಾಗುವುದಿಲ್ಲ. ಪ್ರತಿಯೊಂದಕ್ಕೂ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ಹುಕುಂನ ಮೇಲೆ ಮುಂದೆ ಕೇಸ್ ಹಾಕಬೇಕಾದರೆ ರಿವಿಜನ್ ಮತ್ತು ಅಪೀಲು ಹೋಗುವುದಕ್ಕೆ ಸಾಮಾನ್ಯವಾಗಿ ಈಗ ತಂದಿರುವ ಕಾಯಿದೆಯಲ್ಲಿ ಅವಕಾಶವಿಲ್ಲವೆಂದು ಶ್ರೀಮಾನ್ ಶಾಮಣ್ಣನವರು ಹೇಳುತ್ತಾರೆ. ಆದರೆ ಪ್ರತಿಯೊಂದಕ್ಕೂ ಪ್ರತಿಯೊಬ್ಬರೂ ಅಪೀಲ್ ಮಾಡುತ್ತಾ ಮತ್ತು ರಿವಿಜನ್ ಕೇಳುತ್ತಾ ಹೋದರೆ ಸೊಸೈಟಿಗಳ ವ್ಯವಹಾರವನ್ನು ನಡೆಸಲು ಸಾಧ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಸರ್ಕಾರದವರು ಈ ಕಾಯಿದೆಯನ್ನು ತಂದಿರುತ್ತಾರೆ ಇದು ಎಲ್ಲಾ ರೀತಿಯಿಂದಲೂ ಸರಿಯಾಗಿದೆ ಎನ್ನುವುದೇ ನನ್ನ ಅಭಿಪ್ರಾಯ. ಈ ರೀತಿ ಕಾಯಿದೆ ಇಲ್ಲದೆ ಹೋದರೆ ಯಾವುದೇ ಆರ್ಡರ್ ಮಾಡಿದರೂ ಅದಕ್ಕೆ ಅಪೀಲು ಮಾಡುತ್ತಾ ರಿವಿಜನ್ ಮಾಡಿ ತಡೇ ಆಜ್ಞೆ ಕೇಳುತ್ತಾ ಹೋದರೆ ಹದಗೆಟ್ಟ ಸೊಸೈಟಿಗಳನ್ನು ಲಿಕ್ವಿಡೇಷನ್ ಮತ್ತು ಯಾವುದೇ ಇನ್ನಿತರ ಕ್ರಮಗಳಿಗೆ ಒಳಪಡಿಸಲು ಬರಲಾರದು. ಸೆಕ್ಷನ್ 30 ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಉಳಿಯುವುದಿಲ್ಲ. ಇಂಥ ವಿಷಯಗಳಲ್ಲಿ ಅಪೀಲು ಮತ್ತು ರಿವಿಜನ್ ಮತ್ತು ಸ್ಟೇ ದೊರಕಿಸುತ್ತದೆ. ಮುಂದುವರಿದರೆ ಆಡಳಿತ ಕೆಡುತ್ತಾ ಹೋಗಿ ಯಾವ ಸಂಸ್ಥೆಗಳು ಯಾವ ದೃಷ್ಟಿಯಿಂದಲೂ ಕೋ ಅಪರೇಟೀವ್ ಮೂವ್‌ಮೆಂಟ್ ಸಾಧನೆ ಮಾಡಲಿಕ್ಕೆ ಮತ್ತು ಉಳಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಕಾಯಿದೆ ತಿದ್ದುಪಡಿಯಲ್ಲಿ ಯಾವ ರೀತಿಯಿಂದಲೂ ರಾಜಕೀಯ ಪ್ರಶ್ನೆ ಉದ್ಭವವಾಗುವುದಿಲ್ಲ. ಕೋ ಆಪರೇಟಿವ್ ಆಕ್ಟ್ ಪ್ರಕಾರ ಯಾವ ಹಿತದೃಷ್ಟಿಯಿಂದಲೂ ಅಕ್ರಮ ವ್ಯವಹಾರ ನಡೆಯದಿರಲು ಈ ತಿದ್ದುಪಡಿ ಮಾಡುವ ಸಂಬಂಧವಾಗಿ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ರವರು ಹುಕುಂ ಮಾಡುತ್ತಾ ಇರುತ್ತಾರೆ. ಆದ್ದರಿಂದ ಸರಿಯಾದ ಆರ್ಡರ್ ಮಾಡದಿದ್ದರೆ ರಿಟ್ ಹಾಕಿ ಸ್ಟೇ ಆರ್ಡರ್ ತರುವುದಕ್ಕೆ ಆಗಲಿ ಯಾವುದಕ್ಕೆ ಆಗಲಿ ಈ ಕಾಯಿದೆ ಯಾವ ದೃಷ್ಟಿಯಿಂದಲೂ ಯಾರಿಗೂ ತೊಂದರೆ ಇರುವುದಿಲ್ಲ. ಇದು ಎಲ್ಲಾ ರೀತಿಯಿಂದಲೂ ಸರಿ ಇದೆ. ಆದ್ದರಿಂದ ಇದನ್ನು ಎಲ್ಲರೂ ಸಮರ್ಥನೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀ ಎ. ಶಂಕರ ಆಳ್ವ :— ಅಧ್ಯಕ್ಷರೇ, 108 A ನಲ್ಲಿರುವ ಪ್ರಕಾರ 'No appeal or revision in certain cases: Not withstanding anything contained in this Act, where with the previous sanction in writing or on the requisition of the Reserve Pank ..' ಎಂದು ಇದೆ.

ಶ್ರೀ ಎ. ಶಂಕರ ಆಳ್ವ

ರಿಜರ್ವ್ ಬ್ಯಾಂಕಿನವರು ಒಂದು ರಿಕ್ವಿಷನ್ ಕೊಟ್ಟರೆ ಅದಕ್ಕೆ ಪರ್ಮಿಷನ್ ಕೊಡುತ್ತಾರೆ. ರಿಸರ್ವ್ ಬ್ಯಾಂಕಿನವರು ಬ್ಯಾಂಕಿನ ಕಾಯಿದೆಯಲ್ಲಿ ಇರುವಂತೆ ಯಾವುದೂ ಮಾಡುವುದಿಲ್ಲ, ಯಾವ ಸಂದರ್ಭದಲ್ಲಿ ಸೂಪರ್‌ಸೀಡ್ ಮತ್ತು ವೈಂಡ ಅಪ್ ಮಾಡಬೇಕಾಗುತ್ತದೆ, ಅಂಥ ಅನೇಕ ಸಂದರ್ಭಗಳು ಬಂದಾಗ ಅಪೀಲ್ ಪೆಟಿಷನ್ ಮತ್ತು ರಿವಿಜನ್ ಪೆಟಿಷನ್‌ಗಳನ್ನು ಹಾಕಿಕೊಂಡು ಹೋದರೆ ಸಹಕಾರ ಸಂಸ್ಥೆಗಳು ನಡೆಯುವುದಿಲ್ಲ. ಎಷ್ಟು ದೊಡ್ಡ ತಪ್ಪು ಮಾಡಿದರೂ ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈ ಪ್ರಕಾರ ಪ್ರತಿಯೊಂದಕ್ಕೂ ಅಪೀಲ್‌ಗೆ ಅವಕಾಶ ಬೇಕು, ರಿವಿಜನ್‌ಗೆ ಅವಕಾಶಬೇಕು ಎಂದು ಹೇಳಿದರೆ ವ್ಯವಹಾರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಂದಕ್ಕೂ ಫೈನಾಲಿಟಿ ಇರಬೇಕಾಗುತ್ತದೆ ಇಲ್ಲದೆ ಹೋದರೆ ಯಾವ ಸಂಸ್ಥೆಗಳನ್ನಾಗಲಿ ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲವೆಂದು ಈ ಕಾಯಿದೆಯನ್ನು ತಂದಿದ್ದೇವೆಯೇ ಹೊರತು ಬೇರೆ ಯಾವ ಕಾರಣದಿಂದಲೂ ಇದನ್ನು ಸರ್ಕಾರ ತಂದಿಲ್ಲವೆಂದು ಇಷ್ಟು ಹೇಳುತ್ತೇನೆ. ಕೆಲವು ಸಾರಿ ರಿಸರ್ವ್ ಬ್ಯಾಂಕಿನವರು ಯಾವುದೇ ಬ್ಯಾಂಕಿನಲ್ಲಿ ವ್ಯವಹಾರ ಸರಿಯಾಗಿ ನಡೆಯದೆ ಹೋದರೆ ನಾವು ಲೈಸೆನ್ಸ್ ವಿತ್‌ಡ್ರಾ ಮಾಡುತ್ತೇವೆಂದು ಹೇಳುತ್ತಾರೆ ಅಂಥ ಅಧಿಕಾರ ಅವರಿಗೆ ಇರಬೇಕಾದರೆ ಅದನ್ನು ಹತೋಟಿಯಲ್ಲಿ ತೆಗೆದುಕೊಳ್ಳ ಬೇಕಾಗುತ್ತದೆ ಎಂದು ಇದನ್ನು ಮಂಡಿಸಿದ್ದೇನೆ. ಇದನ್ನು ದಯಮಾಡಿ ಎಲ್ಲರೂ ಒಪ್ಪಬೇಕು.

MADAM SPEAKER :—The question is:—

"That the proposed Section 108 A shall be deleted."

The motion was negatived :—

MADAM SPEAKER :—The question is.—

"That clause 24 do stand part of the Bill."

The motion was adopted :—

Clause 24 was added to the Bill

CLAUSE 25

SRI T. R. SHAMANNA :– I beg to move the following amendments to Clause 25.

"that in the proposed Section 128A the word 'recruitment' shall be deleted."

"that in the proposed Section 128A, after sub-section (1), the following proviso shall be substituted namely :—

"provided that the societies concerned may, for the purposes of recruitment of employees, shall call a list of qualified persons for the required posts and make appointments."

"that in the proposed Section 128 A, after sub section (2) the following sub-section shall be inserted, namely :—

"(3) the authorities constituted under sub-section shall have the power to examine, verify the management and working of erring societies and make recommendations to the Registrar to take speedy action to bring to order the defective working of the society."

MADAM SPEAKER :—Amendments moved

" that in the proposed Section 128A the word 'recruitment' shall be deleted."

"that in the proposed Section 128A, after sub-section (1), the following proviso shall be substituted namely : —

"provided that the Societies concerned may, for the purposes of recruitment of employees, shall call a list of qualified persons for the required posts and make appointments."

" that in the proposed Section 128A, after sub-section (2) the following sub-section shall be inserted, namely :—

(Madam Speaker)

"(3) the authorities constituted under sub-section shall have the power to examine, verify the management and working of erring societies and make recommendations to the Registrar to take speedy action to bring order the defective working of the society."

SRI M. S. KRISHNAN :—I beg to move:

"that for the proposed Section 128A the following Section shall be substituted namely :

"128 : Constitution of authority for recsuitment, training etc. of employees of co-operative societies ;

"the State Government may constitute an authority or authorities, in such manner as may be prescribed for the recruitment and training of the employees of such co-operative societies to which the State Government has given financial aid by way of subscription to its share capital or otherwise and may require such authority or authorities to frame regulations regarding recruitment and training, however in respect of disciplinary control and conditions of service of the employees including emoluments, promotions, etc., the provisions of the Industrial Disputes Act 1947 shall apply to all such employees of the co-operative societies."

MADAM SPEAKER : Amendment moved :

"that for the proposed Section 128A the following Section shall be substituted namely :

"128A : constitution of authority for recruitment, training etc. of employees of Co-operative societies:

"the State Government may constitute an authority or authorities, in such manner as may be prescribed for the recruitment and training of the employees of such co-operative societies to which the State Government has given financial aid by way of subscription to its share capital or otherwise and may require such authority or authorities to frame regulations regarding recruitment and training, however in respect of disciplinary control and conditions of service of the employees including emoluments, promotions, etc., the provisions of the Industrial Disputes Act 1947 shall apply to all such employees of the co-operative societies."

ಶ್ರೀ ಟಿ. ಆರ್. ಶಾಮಣ್ಣ .—ನಾನು ಅನೇಕ ಸಾರಿ ಹೇಳಿರುವ ಹಾಗೆ ಸರ್ಕಾರದವರು ಈ ಸಹಕಾರ ಸಂಘಗಳನ್ನು ಸರ್ಕಾರದ ಇಲಾಖೆಯ ಒಂದು ಭಾಗ ಎಂದು ಮಾಡಿಕೊಳ್ಳುವುದು ಒಂದು ಶೋಚನೀಯವಾದ ವಿಚಾರ. ಈ ಒಂದು ಸೊಸೈಟಿ ಚೆನ್ನಾಗಿ ಕೆಲಸ ಮಾಡಬೇಕಾದರೆ ಅಲ್ಲಿ ಕೆಲಸ ಮಾಡ ತಕ್ಕಂಥ ಕೆಲಸಗಾರರು ಅವರು ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಾರೆಯೇ ಸರಿಯಾದಂಥ ಅರ್ಹತೆ ಇದೆಯೇ ಎಂದು ವಿಚಾರ ಮಾಡುವುದಕ್ಕೆ ಯಾರು ಅವರಿಂದ ಕೆಲಸ ತೆಗೆದುಕೊಳ್ಳತಕ್ಕಂಥವರು ಇದ್ದಾರೆ ಅವರು ಅದನ್ನು ನೋಡುವುದು ನ್ಯಾಯ.

ಈಗ ಪ್ರತಿಯೊಂದು ಕೋ-ಆಪರೇಟಿವ್ ಸೊಸೈಟಿಯಲ್ಲಿಯೂ ಕೂಡ ಸರ್ಕಾರದ ಷೇರ್ ಕ್ಯಾಪಿಟಲ್ ಒಂದು ಭಾಗ ಇದೇ. ಆದ್ದರಿಂದ ಪ್ರತಿಯೊಂದು ಸೊಸೈಟಿಯಲ್ಲಿಯೂ ಒಬ್ಬರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಸರ್ಕಾರದವರು ಗೊತ್ತುಮಾಡಿರತಕ್ಕ ಅಥಾರಿಟೀಸ್ ಮುಖಾಂತರ ಅವರನ್ನು ತೆಗೆದುಕೊಳ್ಳಬೇಕು ಎಂದು ಮಾಡಿದರೆ ಇನ್ನು ಅವರಿಗೆ ಏನು ಉಳಿದಿದೆ ? ಒಂದು ಕಡೆ, ಡೈರೆಕ್ಟರ್ಸ್ ಮೂರನೆಯ ಒಂದು ಭಾಗ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಿ, ಇನ್ನೊಂದು ಕಡೆ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುತ್ತೀರಿ. ಹೀಗೆ ಮಾಡಿ ಪ್ರತಿ ಯೊಂದು ಕೋ-ಆಪರೇಟಿವ್ ಪ್ರಿನ್ಸಿಪಲ್ಸ್‌ನ ಅಧಿಕಾರವನ್ನು ಕಿತ್ತುಕೊಳ್ಳ ತಕ್ಕಂಥಾದ್ದನ್ನು ಖಂಡಿಸಬೇಕಾಗಿದೆ. ಏಕೆಂದರೆ, ಕೋ-ಆಪರೇಟಿವ್ ಇನ್‌ಸ್ಟಿ ಟ್ಯೂಷನ್ಸ್ ಯಾವತ್ತೂ ಕೂಡ ಸಾರ್ವಜನಿಕ ಸಂಸ್ಥೆಗಳು, ಡೆನ್ಮಾರ್ಕ್, ಹಾಲೆಂಡ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಸರ್ಕಾರ ಯಾವ ವಿಧದಲ್ಲಿಯೂ ಕೈಹಾಕುವುದಿಲ್ಲ. ದೇಶದಲ್ಲಿ ಈಗ ಏನಾಗಿದೆ ಎಂದರೆ,

(ಶ್ರೀ ಟಿ. ಆರ್ ಶಾಮಣ್ಣ)

ಸರ್ಕಾರ ಯಾವುದರಲ್ಲಿ ಕೈಹಾಕುವುದಿಲ್ಲ ಎನ್ನುವುದನ್ನು ಹುಡುಕಬೇಕಾಗಿದೆ. ಹಾಲೆಂಡ್ ಮುಂತಾದ ಹೊರದೇಶಗಳಲ್ಲಿ ಯಾವರೀತಿ ಇದೆಯೆನ್ನುವ ಬಗ್ಗೆ ನಾನು ಕೇಳಿದ್ದೇನೆ. ಅಲ್ಲಿ ಸರ್ಕಾರಕ್ಕೂ ಮತ್ತು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್‌ಗೂ ಸಂಬಂಧವಿಲ್ಲ ಎಂದು ನಾನು ಕೇಳಿದ್ದೇನೆ. ಅಲ್ಲಿ ಏನು ಮಾಡಿದ್ದಾರೆ ಎಂದರೆ, ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್ ಅನ್ನು ಒಂದು ಅಂಗ ಸಂಸ್ಥೆ ಎಂದು ಮಾಡಿಕೊಂಡಿದ್ದಾರೆ. ಈಗ ಇಲ್ಲಿ ಸರ್ಕಾರ ಈ ರೀತಿಯಾಗಿ ತನ್ನ ಆಡಳಿತವನ್ನು ಮತ್ತು ಹಸ್ತಕ್ಷೇಪವನ್ನು ಪದೇ ಪದೇ ಹಾಕಿ ನೂರಾರು ಸೊಸೈಟಿಗಳು ಲಿಕ್ವಿಡೇಷನ್ ಆಗುವ ಸ್ಥಿತಿಗೆ ಬಂದಿವೆ.

ಸೊಸೈಟಿಗಳಿಗೆ ಅಪಾಯಿಂಟ್ ಮಾಡತಕ್ಕ ಕೆಲಸಕ್ಕೆ ಬೇರೆ ಯಾವುದಾದರೂ ಅಥಾರಿಟಿ ಬಂದರೆ ಅದು ಖಂಡಿತಾ ಸರಿಹೋಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ತಮಗೆ ಬೇಕಾದವರನ್ನೇ ನೇಮಕ ಮಾಡಿಕೊಳ್ಳುತ್ತಾರೆನ್ನುವ ದೂರುಗಳು ಕೆಲವು ಇರಬಹುದು. ಆದರೂ ಕೂಡ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಕೆಲಸಗಾರರ ಈಗಿನ ಹಕ್ಕನ್ನು ಕಿತ್ತುಕೊಳ್ಳುವುದು ಎಂದರೆ ಅವರು ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಅಧಿಕಾರವನ್ನು ಕೂಡ ಹೊಸದಾಗಿ ಕಾನ್‌ಸ್ಟಿಟ್ಯೂಟ್ ಮಾಡಿದಂಥ ಅಥಾರಿಟಿಗೆ ಕೊಡುತ್ತಿದ್ದೀರಿ. ಯಾವುದಾದರೂ ಎರ್ರಿಂಗ್ ಸೊಸೈಟಿ ಇದ್ದರೆ, ಅದರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದರ ಬಗ್ಗೆ ಅಡ್ಡಿ ಮಾಡುವುದಿಲ್ಲ. ಆದರೆ ಸಂಬಳ ಕೊಡತಕ್ಕ ಸೊಸೈಟಿಗಳವರಿಗೆ ತಮಗೆ ಬೇಕಾದವರನ್ನು ನೇಮಿಸಿಕೊಳ್ಳುವುದಕ್ಕೆ ಅಧಿಕಾರವಿಲ್ಲದಿದ್ದರೆ ಹೇಗೆ ? ಈ ಒಂದು ಅನುಕೂಲವನ್ನು ಅವರಿಗೆ ಮಾಡಿಕೊಡಬೇಕು. ಕಾನ್‌ಸ್ಟಿಟ್ಯೂಟ್ ಮಾಡಿದಂಥ ಸೊಸೈಟಿಗೆ ರೆಕ್ರೂಟ್‌ಮೆಂಟ್ ಪವರ್ ಕೊಡುವುದನ್ನು ಬಿಡಬೇಕು. ಆದ್ದರಿಂದ ನಾನು ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇನೆ. That is "Provided that the societies concerned may, for the purposes of recruitment of employees, shall call a list of qualified persons for the required posts and make appointments". ಸೊಸೈಟಿಯವರು ಸ್ವೇಚ್ಛೆಯಾಗಿ ಅಪಾಯಿಂಟ್‌ಮೆಂಟ್ಸ್ ಮಾಡುವುದಕ್ಕೆ ಬದಲಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಒಂದು ಲಿಸ್ಟನ್ನು ತರಿಸಿಕೊಂಡು ಯಾರಿಗೆ ಅರ್ಹತೆ ಇದೆಯೋ ಅಂಥವರನ್ನು ನೇಮಕ ಮಾಡಬೇಕು ಎನ್ನುವ ಉದ್ದೇಶ ಇದರಲ್ಲಿದೆ.

ಮುಖ್ಯವಾಗಿ ಸೊಸೈಟಿಯವರು ಸರಿಯಾಗಿ ಕೆಲಸವನ್ನು ಮಾಡದೇ ಹೋದ ಪಕ್ಷದಲ್ಲಿ, ಅಂಥ ಸೊಸೈಟಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನನ್ನ

ಅಡ್ಡಿ ಇಲ್ಲದಿದ್ದರೂ, ಸೊಸೈಟಿಗಳು ತಪ್ಪನ್ನು ತಿದ್ದಿಕೊಳ್ಳುವಂತೆ ಏರ್ಪಾಡು ಮಾಡಬೇಕು ಎನ್ನುವುದಕ್ಕೆ ಮತ್ತೊಂದು ಪ್ರಾವಿಷನ್ ಇದೆ.

> "the authorities constituted under sub-section shall have the power to examine, verify the management and working of erring societies and make recommendations to the Registrar to take speedy action to bring to order the defective working of the Society".

ಯಾವುದಾದರೂ ಎರ್ರಿಂಗ್ ಸೊಸೈಟಿ ಇದ್ದರೆ, ಅದನ್ನು ಎಕ್ಸಾಮಿನ್ ಮಾಡಿ, ರಿಪೋರ್ಟ್ ತರಿಸಿಕೊಂಡು ಸೊಸೈಟಿಯನ್ನು ಸರಿಯಾದಂಥ ರೀತಿಯಲ್ಲಿ ನೋಡಿ ಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡಬೇಕು; ಎನ್ನುವುದಕ್ಕೆ ಈ ಪ್ರಾವಿಷನ್ ಅನ್ನು ತೆಗೆದುಕೊಂಡು ಬಂದಿದ್ದೇನೆ. ಒಟ್ಟು ಈ ಮೂರು ತಿದ್ದುಪಡಿಗಳನ್ನು 1. ಅಪಾಯಿಂಟ್‌ಮೆಂಟ್ ಮಾಡತಕ್ಕ ಅಧಿಕಾರವನ್ನು ಅಥಾರಿಟಿ ಕೊಡದೆ ಇರುವುದು. 2. ಟ್ರೈನಿಂಗ್ ಆದ ಮತ್ತು ಅರ್ಹತೆಯುಳ್ಳವರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ತರಿಸಿಕೊಂಡು ಅವರನ್ನು ಚುನಾವಣೆ ಮಾಡುವುದು, 3. ಸೊಸೈಟಿಯು ಸರಿಯಾಗಿ ಕೆಲಸ ಮಾಡದೆ ಹೋದರೆ, ಅದನ್ನು ಎಕ್ಸಾಮಿನ್ ಮಾಡಿ ರಿಪೋರ್ಟ್ ತರಿಸಿಕೊಂಡು ರಿಜಿಸ್ಟ್ರಾರ್ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಅನುಕೂಲಮಾಡಿಕೊಡುವುದು ಎಂದು ತಂದಿದ್ದೇನೆ. ಈ ಮೂರು ತಿದ್ದುಪಡಿ ಗಳನ್ನು ತಾವು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಂಡು ನನ್ನ ನಾಲ್ಕು ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸಭಾಧ್ಯಕ್ಷರೇ, ನಾನು ತೆಗೆದುಕೊಂಡು ಬಂದಿರುವಂಥ ತಿದ್ದುಪಡಿಯಲ್ಲಿ ಒಂದು ಮುಖ್ಯವಾದಂಥ ಅಂಶ ಅಡಗಿದೆ. ಕೋ-ಆಪರೇಟಿವ್ ಸೊಸೈಟಿಗಳ ನೌಕರರ ಬಗ್ಗೆ ತಾವು ಕೊಟ್ಟಿರುವಂಥ ಅಮೆಂಡ್ ಮೆಂಟ್‌ನಲ್ಲಿ :

"Constitution of authority for recruitment, training, etc., of employees of co-operative societies." ಎಂದು ಹೇಳಿ ದ್ದೀರಿ ಇದರಲ್ಲಿ ನಾವು ಎರಡು ವಿಭಾಗಗಳನ್ನು ಮಾಡಬೇಕಾಗಿದೆ. ತಾವು ತಂದಿರುವ ತಿದ್ದುಪಡಿಯಲ್ಲಿ ಈ ರೀತಿ ಇದೆ.—

(Sri M. S. Krishnan)

"The State Government may constitute an authority or authorities, in such manner as may be prescribed, for the recruitment, training and disciplinary control of the prescribed classes of employees of the prescribed co-operative societies to which the State Government has given financial aid by way of subscription to its share capital or otherwise and may require such authority or authorities to frame regulations regarding recruitment, emoluments, terms and conditions of service including disciplinary control of such employees"

So, the whole understanding in moving this amendment appears to be that the employees of the co-operative societies must have training and recruitment for which I have no objection. But then it is also stated that for disciplinary control of the employees, their emoluments and terms and conditions of service, etc., which means the Hon. Minister wants to bring them under the control or purview of the Co-operative Societies Act. This in my opinion is thoroughly wrong, unjustified and illegal because of the reason that it violates the provisions of the Industrial Disputes Act. We are of the opinion that these employees must come under the purview of the Industrial Disputes Act. There are already large number of cases pending before the courts and even the High Court has given a decision that these employees come under the purview of the Industrial Disputes Act. Now the Hon. Minister is taking away that right which occures to the employees through this amending bill. I had myself brought a bill during the last session requesting that these employees must all come under the purview of the Industrial Disputes Act which was unceremoniously rejected by the Hon. Minister. If by virtue of the amendment bill if the rights of the employees are to be taken away it will not speak well of the Government and its policies of socialism

which are preached by them. Even the courts have held that these employees should come under the purview of the Industrial Disputes Act. I hope you will accept the amendment I have moved whereby the problem of thousands of employees who have gone to the court fo litigation could be solved and there will also be smooth relations between the employees and the co-operative societies. It will avoid confusions and it will be a good augury for the co-operative movement. I would therefore request you to accept the amendment.

SRI A. SHANKAR ALVA.—If my hon. friend reads the clause carefully he will find that we have yet to classify which class of societies will come under this clause and who are the servants of the societies that would be governed by the authority. Here it is said:

> "the State Government may constitute an authority or authorities in such a manner as may be prescribed for recruitment, training and disciplinary control of the prescribed class of employees, prescribed Co-operative Societies for which the State Government has given financial aid".

The Societies have to be prescribed and the officers have to be prescribed. This does not apply to all and sundry. When authorities are constituted they will find out which are the Societies that have to come under this. So, there cannot be any objection for this clause.

There is no need for the amendment given notice of by the hon. member Sri T. R. Shamanna because it is only an enabling clause. No body will dispute that there should be a proper authority to recall them and to give them training, punishment, etc. I do not know how anybody can object to this. As a matter of fact in several societies people without any training have been there. In fact under this Bill an authority has to be

(Sri A Shankar Alva.)

constituted and they have to say which are the societies that should come under this clause.

SRI M.S. KRISHNAN.—There is already a Central Act. There is already an authority prescribed under the Industrial Disputes Act. It says that it will apply to certain classes of workmen and it will not apply to the officers drawing more than Rs. 500, there is no need for having another authority under the Act. You are creating dual authority, one under the Industrial Disputes Act and another under this Act. I think you will be well advised if you consult the Law Department. I understand that it has not gone to the Minister for Labour also. He has not been consulted.

SRI A. SHANKAR ALVA.—You need not bother about it. The Law Department and the Labour Department have been consulted.

MADAM SPEAKER.—I will put the amendments of Sri T. R. Shamanna to the vote of the House. The question is:

"That in the proposed Section 128A the word recruitment shall be deleted.

"That in the proposed Section 128A, after sub-Section (1), the following proviso shall be substituted, namely.

"provided that the Societies concerned may, for the purposes of recruitment of employees, shall call a list of qualified persons for the required posts and make appointments."

"That in the proposed Section 128A, after sub-Section (2) the following sub-Section shall be inserted, namely.—

" (3) the authorities constituted under sub-Section shall have the power to examine, verify the management and working of erring Societies and make recommendations to the Registrar to take speedy action to bring to order the defective working of the Society "

The motion was negatived

MADAM SPEAKER.—Now I will put the amendment of Sri M. S. Krishnan. The question is :

That for the proposed Section 128A the following Section shall be substituted namely :

" 128A. Constitution of authority for recruitment, training etc. of employees of co-operative Societies :

The State Government may constitute an authority, or authorities, in such manner as may be prescribed for the recruitment and training of the employees of such Co-operative Societies to which the State Government has given financial aid by way of subscription to its share capital or otherwise and may require such authority or authorities to frame regulations regarding recruitment and training, however in respect of disciplinary control and conditions of service of the employees including emoluments, promotions, etc., the provisions of the Industrial Disputes Act 1947 shall apply to all such employees of the Co-operative Societies ".

The motion was negatived

MADAM SPEAKER.—The question is :

That clause 25 do stand part of the Bill

The motion was adopted

Clause 25 was added to the Bill

Clause 26, to 28

MADAM SPEAKER.—As there are no amendments I will put the clauses to the vote of the House. The question is:

"That clauses 26 to 28, both inclusive do stand part of the Bill".

The motion was adopted

Clauses 26 to 28, both inclusive, were added to the Bill

Clause 19th

MADAM SPEAKER.—The question is :

That clause 1, the long Title the Preamble and the Enacting formule do stand part of the Bill.

The motion was adopted

Clause 1, he long title the preamble and the enacting formule add to the bill.

SRI A. SHANKAR ALVA.—I move that Motion to pass the Mysore Co-operative Societies (Amendment) Bill, as amended be passed.

MADAM SPEAKER : The question is :

"That the Mysore Co-operative Societies(Amendment) Bill, 1973, as amended, be passed."

The motion was adopted and the Bill as amended was passed.

Sri AZEEZ SAIT : Madam Speaker, I requst that the Motor Vehicles (Mysore Amendment) Bill, 1973, be taken up. It is put down in the Agenda.

ಶ್ರೀ ಎಂ. ಎಸ್. ಕೃಷ್ಣನ್ ; ಮಾನ್ಯ ಸದಸ್ಯರು ಈಗ ಅಜೆಂಡಾ ಪ್ರಕಾರ ತೆಗೆದುಕೊಳ್ಳಬೇಕಾಗಿರುವ ಮೈಸೂರು ಅರ್ಬನ್ ವಾಟರ್ ಸಪ್ಲೈ ಅಂಡ್ ಡ್ರೈನೇಜ್

ಬೋರ್ಡ್ ಬಿಲ್ ವಿಚಾರದಲ್ಲಿ ಮಾತನಾಡಲು ಸಿದ್ಧವಾಗಿದ್ದಾರೆ, ಲಿಸ್ಟ್ ಆಫ್ ಬಿಸಿನೆಸ್ ಪ್ರಕಾರ ಅದನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಈಗ ಬೇರೆ ಬಿಲ್ಲನ್ನು ತೆಗೆದುಕೊಂಡರೆ ತೊಂದರೆಯಾಗುವುದು.

ಅಧ್ಯಕ್ಷರು : ಅರ್ಬನ್ ವಾಟರ್ ಸಪ್ಲೈ ಡ್ರೈನೇಜ್ ಬಿಲ್‌ನ ಬಗ್ಗೆ ಈಗ ಸ್ವಲ್ಪ ಹೊತ್ತಿನಲ್ಲಿ ಕೆಲವು ತಿದ್ದುಪಡಿಗಳನ್ನು ಕಳಿಸಿದ್ದಾರೆ. ಅವನ್ನು ಸೈಕ್ಲೋಸ್ಟೈಲ್ ಮಾಡಿ ಸದಸ್ಯರಿಗೆ ಹಂಚಲು ಕಾಲಾವಕಾಶ ಬೇಕು. ಆದುದರಿಂದ ಮಾನ್ಯ ಸದಸ್ಯರ ಅಕ್ಷೇಪವಿಲ್ಲದಿದ್ದರೆ ಈಗ ಕಾರ್ಮಿಕ ಮಂತ್ರಿಗಳ ಬಿಲ್ಲನ್ನು ತೆಗೆದುಕೊಳ್ಳಬಹುದು.

3.00 P. M.

MOTOR VEHICLES (MYSORE AMENDMENT) BILL, 1973.

MOTION TO CONSIDER

SRI AZEEZ SAIT (Minister For Labour) : Madam, I beg to move.

"That the Motor Vehicles (Mysore Amendment) Bill, 1973, be taken into Consideration."

MADAM SPEAKER : Motion moved

"That that Motor Vehicles (Mysore Amendment) Bill, 1973, be taken into consideration."

*Sri AZEEZ SAIT : Madam, according to the provision under Section 44 of the Motor Vehicles Act, 1939, the Regional Transport Authority for the Bangalore District has been constituted. There is no provision under the said Act for the constitution of another R. T. A. exclusively for the city of Bangalore The present R. T. A. is in charge of issuing the driving licences, and permits to all types of motor vehicles operating both in the city and rural districts of Bangalore,

(Sri Azeez Sait)

The number of motor vehicles in Bangalore City are considerably increasing day by day which has resulted in a number of accidents and offences under the Motor Vehicles Act and Rules. In view of the enormous increase in the number of Vehicles, the present R. T. A. is unable to cope up with the increased work. In order to have better control over the public service vehicles regarding the issue of driving licences and permits and to take departmental action particularly against autorickshaws and taxies and to lessen the work of the present R.T.A. of Bangalore District and to ensure quick disposal of cases, it is found necessary to constitute a separate R. T. A. exclusively for Bangalore City as in the case of Madras.

In accordance with the provision under Section 45 of the Motor Vehicles Act, the R.T.As. are empowered to grant all types of permits to the motor vehicles including the contract carriages.

It was found that the R. T. As under the powers vested in them were granting contract carriage permits indiscriminately. These contract carriages were indulging in picking up and setting down passengers en route on nationalised routes and operating on fixed routes in violation of the conditions of the permits and in actual practice they were plying as regular stage carriages. These clandestine operations by the contract carriages have severely affected the revenues of the Mysore State Road Transport Corporation and this might ultimately nullify the schemes of nationalisation.

Since the measures including the penal provisions had no desired effect in preventing these clandestine operations by contract carriages, it was considered necessary to take away the powers of R. T. As in granting contract carriage permits for two or more regions and to

vest them in the S. T. A. to ensure better control over contract carriges by amending Section 45 of the Motor Vehicles Act.

Coming to amendment of Section 60 of the Motor Vehicles Act, it provides for the cancellation and suspension of the permit in cases of the violation of the conditions of permit by the holder of the permit. As the penal provisions under the Act and Rules had not deterred the contract carriage operators from violating the conditions of permits an amendment to Section 60 of the M. V. Act was considered necessary to provide for deterrent penalities. In accordance with the new provision, the second breach of the conditions of the permit will result in suspension of the permit and the third breach will result in concellation of the permit. Keeping this in view, the Motor Vehicles (Mysore Amendment) Ordinance, 1970 was promulgated by the Governor of Mysore on 29th October 1970 amending Sections 45 and 60 of the M. V. Act. A Bill to replace the Ordinance was published for being introduced in the Legislative Assembly on 23-12-1970. Since the Bill could not be introduced in the Assembly owing to the dissolution of the L. A., the Ordinance ceased to be operative after the expiry of six weeks from 23-12-1970.

Coming to the new Section 114 A to the M. V. Act. it provides for penalties for the offences committed by persons for obtaining driving licence and Conductor licence fraudulently. Today even in the case of small offences the persons have to be prosecuted before a Magistrate Court, and there is no provision for compounding of such offences under the Act. This section, seeks to give the power to compound small offences.

These are the three or four amendments. It is a very small amending Bill and I request the Hon. Members to lend their support to it.

MR. DEPUTY SPEAKER IN THE CHAIR

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :— ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ಒಂದು ತಿದ್ದುಪಡಿ ಮಸೂದೆಯಲ್ಲಿ ನಾನು ಕೇವಲ ಒಂದು ಅಂಶವನ್ನು ಮಾತ್ರ ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ, ಬೆಂಗಳೂರಿನಲ್ಲಿ ಮೋಟಾರು ವೆಹಿಕಲ್ಸ್‌ಗೆ ಸಂಬಂಧಪಟ್ಟ ರಿಜಿಸ್ಟ್ರೇಷನ್ ಮತ್ತು ಇತರ ವ್ಯವಹಾರಗಳಲ್ಲಿ ಅರ್ಧ ಭಾಗ ಕೇವಲ ಬೆಂಗಳೂರಿನಲ್ಲಿ ನಡೆಯುತ್ತಿರುವುದರಿಂದ ಬೆಂಗಳೂರು ನಗರಕ್ಕೇ ಬೇರೊಂದು ವಿಭಾಗವನ್ನು ಮಾಡಿರತಕ್ಕದ್ದು, ಸ್ವಲ್ಪ ಮುಂದೆ ಅನುಕೂಲವಾಗಬಹುದೆಂದು ನಾನು ಅಂದುಕೊಂಡಿದ್ದೇನೆ. ಆದರೆ ಇವರು ಎಷ್ಟೇ ತಿದ್ದುಪಡಿಗಳನ್ನು ತಂದರೂ ಕೂಡ ಕಾಂಟ್ರಾಕ್ಟ್ ಕ್ಯಾರೇಜಸ್ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವುಗಳ ಬಗ್ಗೆ ಇವರು ಎಷ್ಟೇ ತಿದ್ದುಪಡಿಗಳನ್ನು ತಂದರೂ ಹಾಗೂ ಅಡ್ಡಿಅಡಚಣೆಗಳನ್ನು ತಂದರೂ ಅಲ್ಲಿ ಲಂಚರುಷುವತ್ತು ಹೆಚ್ಚಿಗೆ ಆಗುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕ ಸಂದರ್ಭಗಳಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್‌ಗಳ ವ್ಯವಸ್ಥೆಯನ್ನು ತಪ್ಪಿಸುವುದಕ್ಕೆ ಸರ್ಕಾರ ನಿಸ್ಸಹಾಯವಾಗಿದೆಯೆಂದು ಹೇಳಿದರೆ ಸರ್ಕಾರ ಅದನ್ನು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ಯಾವ ಮೂಲೆಯಲ್ಲಿ ನೋಡಿದರೂ ಕಾಂಟ್ರಾಕ್ಟ್ ಕ್ಯಾರೇಜಸ್ ಇದ್ದೇ ಇರುತ್ತವೆ. ನಾನು ನೋಡಿದ್ದರಲ್ಲಿ, ಈ ಎಂ. ಎಸ್. ಆರ್. ಟಿ. ಸಿ. ಬಸ್ಸುಗಳು ಎಷ್ಟು ಪ್ಯಾಸೆಂಜರುಗಳನ್ನು ತಗೆದುಕೊಂಡು ಹೋಗುತ್ತವೋ ಅದಕ್ಕಿಂತಲೂ ಹೆಚ್ಚಿಗೆ ಈಗ ಕಾಂಟ್ರಾಕ್ಟ್ ಕ್ಯಾರೇಜಸ್‌ಗಳು ಈ ರಾಜ್ಯದಲ್ಲಿ ಓಡಾಡುತ್ತಾ ಹೆಚ್ಚಿಗೆ ಪ್ಯಾಸೆಂಜರುಗಳನ್ನು ತೆಗೆದುಕೊಂಡು ಹೋಗುತ್ತಿವೆ. ಅಂದಮೇಲೆ ನಮ್ಮ ಸರ್ಕಾರದ ಬಸ್ಸುಗಳಿಗಿಂತ ಖಾಸಗಿ ಬಸ್ಸುಗಳೇ ಜಾಸ್ತಿಯಾಗಿ ಓಡಾಡುತ್ತಿವೆಯೆಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಅನೇಕ ಪ್ರಯಾಣಿಕರು ಇತ್ತೀಚೆಗೆ ಪ್ರತಿಯೊಂದು ಊರಿನಲ್ಲಿಯೂ ಈ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳನ್ನು ಬಿಟ್ಟು ಕಾಂಟ್ರಾಕ್ಟ್ ಕ್ಯಾರೇಜಸ್‌ಗಳಲ್ಲಿ ಹೋಗುತ್ತಾರೆ. ಈ ಸರ್ಕಾರದ ಬಸ್ಸುಗಳು ಸರಿಯಾಗಿ ಓಡಾಡಿದರೆ, ಯಾರೂ ಕೂಡ ಖಾಸಗಿಬಸ್ಸುಗಳಲ್ಲಿ ಓಡಾಡುವುದಕ್ಕೆ ಇಷ್ಟಪಡುವುದಿಲ್ಲ. ಸರ್ಕಾರದ ಬಸ್ಸುಗಳು ಟೈಂಗೆ ಸರಿಯಾಗಿ ಬರುವುದಿಲ್ಲ, ಹೋಗುವುದಿಲ್ಲ, ಅಲ್ಲಿ ಸರಿಯಾಗಿ ಜಾಗವೂ ಸಹ ಸಿಗುವುದಿಲ್ಲ. ಈ ಬಸ್ಸುಗಳು ಯಾವ ಕಡೆ ಹೋಗಬೇಕೋ ಆ ಕಡೆಗೆ ಹೋಗದೆ ಇರುತ್ತವೆ. ಆದರಿಂದಲೇ ಖಾಸಗೀ ಬಸ್ಸುಗಳಲ್ಲಿ ಜನಗಳು ಹೆಚ್ಚಿಗೆ ಹೋಗುತ್ತಾರೆ. ಕಾಂಟ್ರಾಕ್ಟ್ ಕ್ಯಾರೇಜಿಸ್ಸಿಗೆ ಹೋಗುತ್ತಾರೆ. ಸರ್ಕಾರದಲ್ಲಿ ಬಸ್ಸುಗಳಲ್ಲಿ ಹೆಚ್ಚಿನ ಸೌಲಭ್ಯಗಳಿದ್ದರೆ, ಅಲ್ಲಿಗೆ ಜನರು ಏಕೆ ಹೋಗಬೇಕು, ಖಾಸಗೀ ಜನಗಳು ಕಾಂಟ್ರಾಕ್ಟ್ ಕ್ಯಾರೇಜಸ್ಸನ್ನು ಏಕೆ ನಡೆಸಬೇಕು, ಅವರು ಏಕೆ ಲಾಭ ಮಾಡಬೇಕೆಂಬುದನ್ನು ಸರ್ಕಾರ ಮೂಲಭೂತ

ವಾಗಿ ನೋಡಬೇಕಾಗಿದೆ. ಈ ತಿದ್ದುಪಡಿ ಮಸೂದೆಯಲ್ಲಿ ಸೆಂಟ್ರಲ್ ಕಾಯಿದೆ ಬದಲಾವಣೆಯಾಗುವ ತನಕ ಈ ಕಾಂಟ್ರಾಕ್ಟ್ ಕ್ಯಾರೇಜಸ್ಸನ್ನು ತೆಗೆಯು ವುದಕ್ಕಾಗುವುದಿಲ್ಲವೆಂಬುದಾಗಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಈಗ ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ಮಾತ್ರ ತರುತ್ತಿದ್ದೇನೆ. ಸರ್ಕಾರದ ಬೊಕ್ಕಸವನ್ನು ಕಡಿಮೆಮಾಡಿ ಖಾಸಗೀ ಜನರನ್ನು ಸಾಹುಕಾರರನ್ನಾಗಿ ಮಾಡಬೇಕೆಂಬ ಉದ್ದೇಶ ಯಾರಿಗೂ ಇಲ್ಲ. ರೋಡ್ ಟ್ರಾನ್ಸಪೋರ್ಟ ಕಾರ್ಪೊರೇಷನ್ನಿನವರು ಪ್ರಯಾಣಿಕರಿಗೆ ಸಾಕಾದಷ್ಟು ಸೌಲಭ್ಯಗಳನ್ನು ಒದಗಿಸದೇ ಇರುವುದೇ ಕಾಂಟ್ರಾಕ್ಟ್ ಕ್ಯಾರೇಜಸ್ಸಿಗೆ ಅಷ್ಟಾಗಿ ಬೇಡಿಕೆ ಇರುವುದು ಎಂಬುದಾಗಿ ನನ್ನ ಖಚಿತವಾದ ಅಭಿಪ್ರಾಯವಾಗಿದೆ. ನಾನು ನೋಡಿದ ಹಾಗೆ ಅನೇಕ ಕಡೆಗಳಲ್ಲಿ ಎಂ. ಎಸ್. ಆರ್. ಟಿ. ಸಿ. ಬಸ್ಸುಗಳು ಕಾಲಕಾಲಕ್ಕೆ ಸರಿಯಾಗಿ ಓಡಾಡುತ್ತಾ ಇಲ್ಲ. ಅವುಗಳಲ್ಲಿ ಮಧ್ಯೆಮಧ್ಯೆ ಅಲ್ಲಲ್ಲಿ ನಿಂತಿರುವ ಜನಗಳಿಗೆ ಜಾಗವೇ ಸಿಗುವುದಿಲ್ಲ. ಪ್ರಯಾಣಿಕರು ಅಲ್ಲಲ್ಲಿ ಗಂಟೆ ಗಟ್ಟಲೆ ಕಾದರೂ ಜಾಗ ಸಿಗುತ್ತಿಲ್ಲ. ಖಾಸಗೀ ಬಸ್ಸುಗಳಲ್ಲಿ ಆ ರೀತಿ ಇಲ್ಲ. ಅನೇಕ ಸಂದರ್ಭಗಳಲ್ಲಿ ಜಾಗ ಅಲ್ಲಿ ಸಿಗುತ್ತದೆಂಬ ಖಾತರಿಯಾದರೂ ಇರುತ್ತದೆ. ಹೇಗೋ ಅಲ್ಲಿ ಜಾಗವನ್ನು ಪ್ರಯಾಣಿಕರಿಗೆ ಒದಗಿಸಿಕೊಡುತ್ತಾರೆ. ನಮ್ಮ ಸರ್ಕಾರದ ಬಸ್ಸುಗಳಲ್ಲಿ ಸಾಕಷ್ಟು ಸೌಕರ್ಯಗಳು ಇಲ್ಲವೇ ಇಲ್ಲ. ಕಾಂಟ್ರಾಕ್ಟ ಕ್ಯಾರೇಜಸ್‌ಗಳಲ್ಲಿ ಹೆಚ್ಚಿಗೆ ಸೌಕರ್ಯಗಳು ಇರುವುದರಿಂದ ಹೆಚ್ಚು ಜನರು ಅಲ್ಲಿಗೇ ಹೋಗುತ್ತಾರೆ ಆದ್ದರಿಂದ ಈಗ ನೀವು ಕಾಂಟ್ರಾಕ್ಟ್ ಕ್ಯಾರೇಜಸ್‌ಗಳ ಹಾವಳಿಯನ್ನು ತಪ್ಪಿಸುವುದಕ್ಕೋಸ್ಕರ ಕೇವಲ ಇಂತಹ ಕಾಯಿದೆ ಗಳನ್ನು ಮಾಡುವುದಕ್ಕಿಂತ ರೋಡ್ ಟ್ರಾನ್ಸಪೋರ್ಟ ವ್ಯವಸ್ಥೆಯನ್ನು ಸರಿಪಡಿಸಿ, ಅದರ ಆಡಳಿತದ ಬಗ್ಗೆ ಹೆಚ್ಚಿನ ಮುತವರ್ಜಿ ವಹಿಸಿಕೊಂಡು ಹೆಚ್ಚಿಗೆ ಜನರ ಸೇವೆ ಯನ್ನು ಮಾಡುವುದಕ್ಕೆ ತಕ್ಕ ಸೌಕರ್ಯಗಳನ್ನು ಒದಗಿಸಿದರೆ ಒಳ್ಳೆಯದು. ಇಲ್ಲದೆ ಹೋದರೆ, ಸುಮ್ಮನೆ ಇಂತಹ ಕಾಯಿದೆಗಳನ್ನು ಮಾಡುತ್ತಾ ಹೋದರೆ ಕೇವಲ ಲಂಚರುಷುವತ್ತುಗಳು ಜಾಸ್ತಿಯಾಗುತ್ತವೆ. ಇದು ಸಮರ್ಪಕವಾಗಿ ಇರುವುದಿಲ್ಲ ಆದ್ದರಿಂದ ನನ್ನ ಮನವಿಯೇನೆಂದರೆ, ಸರ್ಕಾರ ಮೊಟ್ಟಮೊದಲ ನೆಯದಾಗಿ ಜನಗಳ ಸೌಕರ್ಯದ ಬಗ್ಗೆ ಪಯಾಣಿಕರ ಸೌಲಭ್ಯಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಕಾಂಟ್ರಾಕ್ಟ್ ಕ್ಯಾರೇಜಸ್ಸನ್ನು ತೆಗೆಯುವುದಾದರೆ, ಪೂರ್ತಿಯಾಗಿ ನಾಗರೀಕರಿಗೆ ಸರ್ಕಾರದ ಬಸ್ಸುಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು. ಅದನ್ನು ಮಾಡದೆ ಸುಮ್ಮನೆ ಚಾಸಿಸ್ ಸಿಗುವುದಿಲ್ಲ. ಸ್ಪೇರ್ ಪಾರ್ಟ್ಸ್ ಸಿಗುವುದಿಲ್ಲ, ಬಸ್ಸು ರಿಪೇರಿಯಾಗುತ್ತದೆ ಎಂಬುದಾಗಿ ಸಬೂಬು ಹೇಳುವುದನ್ನು ಬಿಟ್ಟು ರೋಡ್‌ಗಟ್ರಾನ್ಸ್‌ಪೋರ್ಟ್ ಆಡಳಿತವನ್ನು ಸಮರ್ಪಕವಾಗಿ ನಡೆಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡುವುದು ಒಳ್ಳೆಯದು. ಮೊಟ್ಟಮೊದಲನೆಯದಾಗಿ ನಿಮ್ಮ ಸಾರಿಗೆ ಇಲಾಖೆಯ ಆಡಳಿತ ವನ್ನು ಸಮರ್ಪಕವಾಗಿ ಮಾಡಿ. ಅನಂತರ ಕಾಂಟ್ರಾಕ್ಟ್ ಕ್ಯಾರೇಜ್‌ಗಳನ್ನು ಕಿತ್ತು

(ಶ್ರೀ ಟಿ. ಆರ್. ಶಾಮಣ್ಣ)

ಹಾಕಿ. ನಾನು ಹೇಳಿದ ಹಾಗೆ ಪ್ರಯಾಣಿಕರು ಇತ್ತೀಚೆಗೆ ಹೆಚ್ಚಿಗೆ ಕಾಂಟ್ರಾಕ್ಟ್ ಕ್ಯಾರೇಜ್‌ಗಳಲ್ಲಿ ಪ್ರಯಾಣ ಮಾಡುತ್ತಿರುವುದರಿಂದ, ನೀವು ಪ್ರಯಾಣಿಕರಿಗೆ ನಿಮ್ಮ ರೋಡ್‌ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಕೊಡಿ. ಆ ಮೇಲೆ ಬೇಕಾದರೆ ಆ ಕಾಂಟ್ರಾಕ್ಟ್ ಕ್ಯಾರೇಜ್‌ಗಳನ್ನು ಕಿತ್ತುಹಾಕಿ. ನಾವೇನೂ ಬೇಡ ಎಂಬುದಾಗಿ ಹೇಳುವುದಿಲ್ಲ. ಆ ರೀತಿ ಮಾಡದೆ ಸುಮ್ಮನೆ ಈ ಕಾಯಿದೆಗಳನ್ನು ತರುವುದರಿಂದ ಬರೀ ಲಂಚರುಷುವತ್ತುಗಳು ಮಾತ್ರ ಜಾಸ್ತಿಯಾಗುತ್ತವೆ. ಇಂತಹ ಕಾಯಿದೆಗಳಿಂದ ಜನಗಳಿಗೆ ಏನೂ ಪ್ರಯೋಜನವಾಗುವುದಿಲ್ಲ. ನಾನು ಬಸ್ ರಾಷ್ಟ್ರೀಕರಣವನ್ನು ವಿರೋಧ ಮಾಡುತ್ತಾ ಇಲ್ಲ. ಬಸ್ ರಾಷ್ಟ್ರೀಕರಣ ಮಾಡುವಾಗ ಜನಗಳ ಸೌಕರ್ಯಗಳ ಕಡೆಗೆ ಸರ್ಕಾರ ಹೆಚ್ಚಿಗೆ ಗಮನ ಕೊಡಬೇಕೆಂದಿರುವಾಗ, ಮತ್ತು ಸಾರ್ವಜನಿಕರಿಂದ ಬರತಕ್ಕ ಬೊಕ್ಕಸದ ಹಣವನ್ನು ಖಾಸಗೀ ಜನಗಳಿಗೆ ಹೋಗುವುದನ್ನು ತಪ್ಪಿಸಬೇಕೆಂಬ ದೃಷ್ಟಿ ಸರ್ಕಾರಕ್ಕೆ ಇರುವಾಗ, ಖಾಸಗೀ ಜನಗಳ ಹಣವನ್ನು ಕಾಂಟ್ರಾಕ್ಟ್ ಕ್ಯಾರೇಜಸ್ಸಿನವರು ಲೂಟಿ ಮಾಡದೇ ಇರುವಂತೆ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳಲ್ಲಿ ಜನಗಳಿಗೆ ಹಾಗೂ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕಾದುದು ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ನಾನು ಮೊದಲೇ ಹೇಳಿದ ಹಾಗೆ ಮೂರು ಅಂಶಗಳನ್ನು ಸರ್ಕಾರದವರು ಗಮನದಲ್ಲಿಡಬೇಕು. ಸರ್ಕಾರದ ಬಸ್ಸುಗಳು ಮಧ್ಯೆ ಮಧ್ಯೆ ನಿಂತಿರತಕ್ಕ ಪ್ಯಾಸೆಂಜರುಗಳನ್ನು ಕರೆದುಕೊಂಡು ಹೋಗಬೇಕು. ಏಕೆಂದರೆ ಈ ಬಸ್ಸುಗಳು ಮಧ್ಯೆ ಮಧ್ಯೆ ಅಲ್ಲಲ್ಲಿ ನಿಂತಿರುವವರನ್ನು ಕರೆದುಕೊಂಡು ಹೋಗಲು ನಿಲ್ಲುವುದೇ ಇಲ್ಲ. ಬೇರೆ ಕಡೆಗಳಿಗೆ ಸಂಪರ್ಕವೇ ಇರುವುದಿಲ್ಲ. ನೀವು ಪ್ರಯಾಣಿಕರಿಗೆ ಎಲ್ಲ ಸೌಲಭ್ಯಗಳನ್ನು ಕೊಟ್ಟ ಮೇಲೆ ಈ ಕಾಂಟ್ರಾಕ್ಟ್ ಕ್ಯಾರೇಜಸ್‌ಗಳನ್ನು ತೆಗೆದುಹಾಕುವುದಕ್ಕೆ ಮತ್ತು ಅದರ ಬಗ್ಗೆ ಸರ್ಕಾರ ಏನೊಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವ ಬಗ್ಗೆ ನನ್ನ ಅಡ್ಡಿಯೇನೂ ಇಲ್ಲ. ಬಹು ಮುಖ್ಯವಾಗಿ ಈ ಇಲಾಖೆಯಲ್ಲಿ ನಡೆಯತಕ್ಕ ಲಂಚರುಷುವತ್ತು ಹೋಗಬೇಕು. ಬೇರೊಂದು ಡಿವಿಜನ್ ಈಗ ಮಾಡಿದ್ದರಿಂದ ಈ ಇಲಾಖೆಯಲ್ಲಿ ಈಗ ಜನಗಳಿಂದ ಆಗುತ್ತಿರುವ ಒತ್ತಡ ಕಡಿಮೆಯಾಗುತ್ತದೆ. ಲಂಚರುಷುವತ್ತೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತದೆಂದು ನಾನು ತಿಳಿದಿದ್ದೇನೆ ಅದನ್ನು ನಾನು ಒಪ್ಪುತ್ತೇನೆ. ಇದರಿಂದ ಲೈಸನ್ಸ್ ಕೊಡುವುದು ಮತ್ತು ರಿನ್ಯೂಯಲ್ ಇವೆಲ್ಲಾ ಸುಲಭವಾಗಿ ಆಗುತ್ತದೆ. ಬೆಂಗಳೂರಿನಲ್ಲಿ ವಿಪರೀತವಾಗಿ ವೆಹಿಕಲ್ಸ್ ಲೈಸನ್ಸ್ ರೆನ್ಯೂ ಆಗುತ್ತಿರುವುದರಿಂದ ಬೆಂಗಳೂರಿಗೆ ಒಂದು ಪ್ರತ್ಯೇಕ ವಿಭಾಗವೊಂದನ್ನು ತೆರೆಯುತ್ತಿರುವುದನ್ನು ನಾನು ವೆಲ್‌ಕಂ ಮಾಡುತ್ತೇನೆ. ಈಗ ಇರತಕ್ಕ ತಮ್ಮ ಆರ್. ಟಿ. ಒ. ಆಫೀಸ್ ಸ್ವಲ್ಪವೂ ಕೂಡ ಸರಿಯಾದ ಜಾಗದಲ್ಲಿಲ್ಲ. ಅನುಕೂಲವಾದ ಸ್ಥಳದಲ್ಲಿಲ್ಲ. ಅಲ್ಲಿನ ರಿಕಾರ್ಡ್ಸ್‌ಗಳೇ ಸರಿಯಾಗಿ ಪತ್ತೆ ಇರುವುದಿಲ್ಲ.

ಸಿಬ್ಬಂದಿಗೂ ಸಾಕಷ್ಟು ಸ್ಥಳಾವಕಾಶವಿಲ್ಲ, ವೆಹಿಕಲ್ಸ್ ಬಂದರೆ ಅವು ಸರಿಯಾದ ಜಾಗದಲ್ಲಿ ನಿಲ್ಲುವುದಕ್ಕೆ ಸಾಕಷ್ಟು ಅವಕಾಶವಿಲ್ಲ. ಸರ್ಕಾರದವರು ಈಗ ಒಂದು ಪ್ರತ್ಯೇಕ ವಿಭಾಗವನ್ನು ಮಾಡುತ್ತಾ ಇರುವುದರಿಂದ, ಅದು ಕೂಡ ಒಂದು ಸರಿಯಾದ ಸ್ಥಳದಲ್ಲಿ ನಿರ್ಮಾಣವಾಗಬೇಕು. ಅದು ಉತ್ತಮವಾದ ಆಫೀಸು ಆಗಬೇಕು. ಅಲ್ಲಿಗೆ ಬರತಕ್ಕ ವೆಹಿಕಲ್ಸ್ ಮಾಲೀಕರಿಗೆ ತಕ್ಕ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ನನ್ನ ಅಭಿಪ್ರಾಯವೇನೆಂದರೆ, ಸರ್ಕಾರದವರು ಈಗ ಕಾಂಟ್ರ್ಯಾಕ್ಟ್ ಕ್ಯಾರೇಜಸ್ಸನ್ನು ತೆಗೆಯುವುದಕ್ಕೆ ಮುಂಚೆ ಪ್ರಯಾಣಿಕರಿಗೆ ಸರ್ಕಾರದ ಬಸ್ಸುಗಳಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಅನಂತರ ಈ ಕಾಂಟ್ರ್ಯಾಕ್ಟ್ ಕ್ಯಾರೇಜಸ್ಸನ್ನು ತೆಗೆಯುವ ಬಗ್ಗೆ ಯಾವ ತರಹ ಕ್ರಮವನ್ನು ಸರ್ಕಾರ ತೆಗೆದುಕೊಂಡರೂ ನನ್ನ ಅಡ್ಡಿ ಇಲ್ಲ. ಆದರೆ ಪ್ರಯಾಣಿಕರಿಗೆ ಸರ್ಕಾರದ ಬಸ್ಸುಗಳಲ್ಲಿ ಅಸೌಕರ್ಯಗಳನ್ನು ಮಾಡಕೂಡದೆಂದು ನಾನು ಒತ್ತಾಯಪೂರ್ವಕವಾಗಿ ಹೇಳಿ, ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಸಾರಿಗೆ ಸಚಿವರು ತಂದಿರತಕ್ಕ ಈ ತಿದ್ದುಪಡಿ ಮಸೂದೆ ಏನಿದೆಯೋ ಇದರ ಬಗ್ಗೆ ನಾನು ಒಂದು ಮಾತು ಹೇಳುವುದಾದರೆ, ಅವರು ಈ ಒಂದು ತಿದ್ದುಪಡಿ ಮಸೂದೆಯನ್ನು ತಂದು ಅಧಿಕೃತವಾಗಿ ಲಂಚವನ್ನು ಹೊಡೆಯುತಕ್ಕ ಒಂದು ಹೊಸ ವರ್ಗವನ್ನು ಸೃಷ್ಟಿಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದಾರೆಂಬುದಾಗಿ ನನಗೆ ಭಾಸವಾಗುತ್ತಿದೆ. ಮೊದಲನೆಯದಾಗಿ ಹೇಳುವುದಾದರೆ, ಈಗ ಕಾಂಪೌಂಡಿಂಗ್ ಅಫೆನ್ಸಸ್ ಬಗ್ಗೆ ಅಧಿಕಾರಿ ವರ್ಗದವರು ಅಲ್ಲಿಯೇ ತಪ್ಪುಗಳನ್ನು ಕಂಡುಹಿಡಿದು ಫೈನ್ ಹಾಕುವ ಕ್ರಮ ಹಾಗೂ ಅದನ್ನು ವಸೂಲು ಮಾಡುವ ರೀತಿನೀತಿ ಖಂಡಿತವಾಗಿ ಸರಿಯಲ್ಲ. ಏಕೆಂದರೆ ಅವರು ಫೈನ್ ಎಂಬುದಾಗಿ 10 ರೂ. ಗಳನ್ನು ಹಾಕಿದರೆ, ಲೆಕ್ಕದಲ್ಲಿ ಕೇವಲ ಒಂದು ರೂ. ಯನ್ನು ಮಾತ್ರ ತೋರಿಸುತ್ತಾರೆ. ಇನ್ನುಳಿದ 9 ರೂ. ಗಳನ್ನು ಅಧಿಕಾರಿಗಳೇ ಕಸಿದುಕೊಂಡು ಬಿಡುತ್ತಾರೆ. ಇದರಿಂದ ಬಹಳ ಅನ್ಯಾಯವಾಗುತ್ತಿದೆ. ಇನ್ನು ಈ ಸಾರಿಗೆ ಇಲಾಖೆಯೆಂಬುದಾಗಿ ಏನಿದೆ ಇದರಲ್ಲಿರತಕ್ಕ ವಹಿಕಲ್ಸ್ ಜನಗಳನ್ನು ಹೊತ್ತುಕೊಂಡು ಹೋಗುವುದಕ್ಕೆ ಬದಲಾಗಿ ಲಂಚವನ್ನೇ ಹೊತ್ತುಕೊಂಡು ತಿರುಗುತ್ತಾ ಇದೆಯೆಂಬುದಾಗಿ ನನಗೆ ಕಂಡುಬರುತ್ತಾ ಇದೆ.

ಈ ಹೊಸ ಮಂತ್ರಿ ಮಂಡಲ ಬಂದ ಮೇಲೆ ಅವರ ದಕ್ಷತೆಯ ಪ್ರತೀಕವಾಗಿ ಹೋದ ಕಡೆಯಲ್ಲೆಲ್ಲಾ ಯಾವ ಬೀದಿಯಲ್ಲಿ ನೋಡಿದರೂ ಕೂಡ ಸರ್ಕಾರಿ ಬಸ್ಸುಗಳು ಕೆಟ್ಟು ನಿಂತಿರುತ್ತವೆ. ಅ ಬಸ್ಸಗಳಿಗೆ ಬ್ರೇಕಿಲ್ಲ ಮತ್ತೊಂದಿಲ್ಲ, ಬೀದಿಯಲ್ಲಿ ಪಾಪಿ ಪರದೇಶಿಗಳು ತಿರುಗಾಡುವ ಹಾಗಿಲ್ಲ. ಸರ್ಕಾರಿ ಬಸ್ಸುಗಳಲ್ಲಿ ಕೆಲಸ ಮಾಡತಕ್ಕ ಡ್ರೈವರು ಮತ್ತು ಕಂಡಕ್ಟರುಗಳಿಗೆ ಯಾರಿಗೂ ಸಮಾಧಾನ ಇಲ್ಲ.

(ಶ್ರೀ ಕೋಣಂದೂರು ಲಿಂಗಪ್ಪ)

ಅವರಿಗೆ ಯಾವುದೇ ಸವಲತ್ತು ಕೊಟ್ಟಿಲ್ಲ. ಅವರಿಗೆ ಒಳ್ಳೆಯ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೀರಿ. ಅವರಿಗೆ ಯಾವ ತರಹ ಚೆಕಿಂಗೂ ಕೂಡ ಇಲ್ಲ. ಬಸ್ಸುಗಳ ಎಂಜಿನ್ ಚೆಕ್ ಮಾಡುವುದಿಲ್ಲ, ಅಲ್ಲಿ ನಡೆಯತಕ್ಕ ವ್ಯವಹಾರವನ್ನು ಚೆಕ್ ಮಾಡುವುದಿಲ್ಲ, ಅಲ್ಲಿ ಹೇಳುವವರೂ ಕೇಳುವವರೂ ಯಾರೂ ಇಲ್ಲ. ಏತಕ್ಕೆಂದರೆ ಹೇಳುವವರಿಗೆ ಕೇಳುವವರಿಗೆ ಎಲ್ಲರಿಗೂ ಹಿಸ್ಸೆ ಇದೆ. ನಿನ್ನೆ ನಾನು ಮತ್ತು ಶ್ರೀಮಾನ್ ಚಿಕ್ಕನಾಯಕನ ಹಳ್ಳಿಯ ಕ್ಷೇತ್ರದ ಬಸವಯ್ಯನವರೂ ಸರ್ಕಾರಿ ಬಸ್ಸಿನಲ್ಲಿ ಬಂದೆವು. ಅಲ್ಲಿ ಹೇಳುವವರೂ ಕೇಳುವವರೂ ಯಾರೂ ಇಲ್ಲ.

ಶ್ರೀ ಅಜೀಜ್‌ಸೇಟ್ :—ನವ್ಮ ಸ್ಟೇಟಿನಲ್ಲಿ ಎಂ. ಎಸ್. ಆರ್. ಟಿ. ಸಿ. ಬಸ್ಸಿನಲ್ಲಿ ಓಡಾಡುವುದಕ್ಕೆ ಒಂದು ಪಾಸನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದಾರೆ. ಅವರು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಒಂದುವೇಳೆ ಕಂಡಕ್ಟರು ಮಾನ್ಯ ಸದಸ್ಯರ ಕಣ್ಣೆದುರಿನಲ್ಲಿ ಲಂಚವನ್ನು ಹೊಂದಿದ್ದರೆ ಅವರು ಅದನ್ನು ನೋಡಿ ಸುಮ್ಮನೆ ಕುಳಿತುಕೊಂಡಿದ್ದರೆ ?

ಶ್ರೀ ಕಾಗೋಡು ತಿಮ್ಮಪ್ಪ :—ಬೆಂಗಳೂರಿನಿಂದ ಕಾರವಾರಕ್ಕೆ ಹೋಗುವ ಒಂದು ಲಗ್ಜುರಿ ಬಸ್ಸಿನಲ್ಲಿ ನಾನು ಪ್ರಯಾಣ ಮಾಡುತ್ತಿದ್ದಾಗ ನಡೆದಂತಹ 3 ಕೇಸುಗಳನ್ನು ಹಿಡಿದು ಕ್ರಮತೆಗೆದುಕೊಳ್ಳಲು, ಮಾನ್ಯ ಮಂತ್ರಿಗಳಿಗೆ ನಾನು ಒಂದು ಪತ್ರವನ್ನು ಬರೆದಿದ್ದೆ. ಆದಕ್ಕೆ ಪತ್ರ ತಲುಪಿದೆ ಎಂಬ ಉತ್ತರ ಬಿಟ್ಟರೆ ಬೇರೆ ಆ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ಕೈಗೊಂಡಿದ್ದಾರೆ ಎಂಬ ಬಗ್ಗೆ ಇದುವರೆಗೂ ಅವರಿಂದ ಉತ್ತರ ಬಂದಿಲ್ಲ.

Sri AZEEZ SAIT :—My friend Mr. Thimmappa should appreciate, within a fraction of a second, I have acknowledged his letter. I have already ordered for an enquiry. The matter has been enquired into and immediate action is taken. He will be intimated of it in due course. Not only in the case of an MLA's letter, even if any other person travelling, if he wirtes to me, I have noted the matter and taken a action. I am proud to say that mal-practices have come down in my Department. The Hon. Member should be charitable enough when speaking not speak for the sake of opposition.

ಶ್ರೀ ಕೋಣಂದೂರು ಲಿಂಗಪ್ಪ :—ಮಾನ್ಯ ಮಂತ್ರಿಗಳು ನಿಮ್ಮ ಕಣ್ಣೆದುರಿನಲ್ಲಿ ಯಾರಾದರೂ ಕಂಡಕ್ಟರು ಲಂಚವನ್ನು ತೆಗೆದುಕೊಂಡಿದ್ದರೆ ಆಗ ಸುಮ್ಮನೆ

ಕುಳಿತುಕೊಂಡಿದ್ದೀರಾ ಎಂದು ಕೇಳಿದರು. ಆ ರೀತಿ ನಮ್ಮ ಕಣ್ಣೆದುರಿನಲ್ಲಿ ಯಾರಾದರೂ ಲಂಚವನ್ನು ತೆಗೆದುಕೊಂಡಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಮಂತ್ರಿಗಳು, ಅಧಿಕಾರದಲ್ಲಿರತಕ್ಕವರು, ಕಾಂಗ್ರೆಸ್ಸಿನಲ್ಲಿರವವರು ಸುಮ್ಮನೆ ಕುಳಿತುಕೊಳ್ಳಬಹುದು. ಆದರೆ ನಾವು ಆ ರೀತಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಲಂಚ ತೆಗೆದುಕೊಳ್ಳುವವರನ್ನು ಕಂಡರೆ ಅವರನ್ನು ಹಿಡಿದು ಕೊಡುತ್ತೇವೆ. ಬೇಲಿಯೇ ಎದ್ದು ಹೊಲ ಮೇಯುವಾಗ ನಾವು ಯಾರಿಗೆ ಹಿಡಿದು ಕೊಡಬೇಕು. ಬುಡದಿಂದ ತುದಿಯವರೆಗೂ ಪರಿಶುದ್ಧವಾದ ಆಡಳಿತವನ್ನು ನಡೆಸುವ ಒಬ್ಬ ವ್ಯಕ್ತಿಯುನ್ನಾದರೂ ನೋಡೋಣ ಎಂದರೆ ಯಾರೂ ಸಿಕ್ಕುತ್ತಿಲ್ಲ. ನಾವು ಮಂತ್ರಿಗಳಿಗೆ ಕಾಗದ ಬರೆದರೆ ಅದಕ್ಕೆ ಉತ್ತರವೇನೋ ಬರುತ್ತದೆ, ಆದರೆ ಆ ಬಗ್ಗೆ ಮುಂದೆ ಏನಾಯಿತು ಎಂಬುದು ಒಂದು ಅಕ್ಷರವೂ ನಮಗೆ ಗೊತ್ತಿರುವುದಿಲ್ಲ. ಜನ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕಿಂತ ಪ್ರೈವೇಟ್ ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕೆ ಅಪೇಕ್ಷೆ ಮಾಡುತ್ತಾರೆ. ಅದಕ್ಕೆ ಕಾರಣವೇನೆಂಬುದನ್ನು ಮಾನ್ಯ ಸಚಿವರು ಒಂದು ಕನ್ನಡಿಯನ್ನು ತೆಗೆದುಕೊಂಡು ತಮ್ಮ ಮುಖವನ್ನು ನೋಡಿಕೊಳ್ಳಬೇಕು. ಓಬೀರಾಯನ ಕಾಲದಲ್ಲಿದ್ದ ಬಸ್ಸುಗಳೇ ಈಗಲೂ ಇವೆ. ಹಿಂದೆ ಇದ್ದಂತಹ ಬಸ್ಸುಗಳಿಗೆ ಏನು ಬಣ್ಣ, ಏನು ಗುಣ, ಏನು ರೂಪ, ಯಾವ ತರಹ ಸೀಟುಗಳು ಇದ್ದವೋ ಅದೇ ತರಹ ಈಗಿನ ಬಸ್ಸುಗಳಿಗೂ ಇದೆ. ಅವೆಲ್ಲವೂ ಬಹಳ ಅದ್ಭುತವಾಗಿವೆ. ಆ ಬಸ್ಸುಗಳಲ್ಲಿ ಕುಳಿತುಕೊಂಡರೆ ಹೇಗಿರುತ್ತದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಬಸ್ಸಿನ ಸೀಟುಗಳಲ್ಲಿ ತಿಗಣೆಗಳ ರಾಶಿ ರಾಶಿಯೇ ಇರುತ್ತದೆ. ಸರ್ಕಾರಿ ಬಸ್ಸುಗಳಲ್ಲಿ ಯಾವ ಮಾರ್ಪಾಡನ್ನು ಮಾಡದೇ ಇರುವುದರಿಂದ, ಯಾವ ಸೌಕರ್ಯವನ್ನು ಒದಗಿಸಿ ಕೊಡದೇ ಇರುವುದರಿಂದ ಜನ ಸರ್ಕಾರಿ ಬಸ್ಸನ್ನು ಬಿಟ್ಟು ಖಾಸಗೀ ಬಸ್ಸುಗಳಿಗೇ ಹೋಗುತ್ತಾರೆ. ಖಾಸಗೀ ಬಸ್ಸುಗಳು ಟೈಮಿಗೆ ಸರಿಯಾಗಿ ಹೋಗುತ್ತವೆ. ಎಷ್ಟು ಸೀಟುಗಳನ್ನು ಹಾಕಬೇಕೋ ಅಷ್ಟೇ ಸೀಟುಗಳನ್ನು ಹಾಕುತ್ತಾರೆ. ಆದ್ದರಿಂದ ಜನಗಳು ಆ ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕೆ ಅಪೇಕ್ಷೆ ಮಾಡುತ್ತಾರೆ. ಇವೊತ್ತು ಪ್ರೈವೇಟ್ ಬಸ್ಸುಗಳಿಗೆ ಎಷ್ಟು ಬಸ್ಸುಗಳಿಗೆ ಪರ್ಮಿಟ್ ಕೊಟ್ಟಿದ್ದಾರೆ ಎಂದರೆ ಶಿವಮೊಗ್ಗದಿಂದ ಬೆಂಗಳೂರಿಗೆ 13 ಪ್ರೈವೇಟ್ ಬಸ್ಸುಗಳು ತಿರುಗಾಡುತ್ತವೆ. ಅದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಈಗ ಕೋಣಂದೂರು ಎಕ್ಸ್‌ಪ್ರೆಸ್ ಎನ್ನುವ ಒಂದು ಬಸ್ಸಿಗೆ ಪರ್ಮಿಟ್ ಕೊಟ್ಟಿದ್ದರೆ ಅದೇ ಹೆಸರಿನಲ್ಲ 4 ಬಸ್ಸುಗಳು ತಿರುಗಾಡುತ್ತಿವೆ. ಒಂದು ಪ್ರೈವೇಟ್ ಬಸ್ಸನ್ನು ಓಡಿಸುವುದಕ್ಕೆ ಒಂದು ತಿಂಗಳಿಗೆ 6 ಸಾವಿರ 8 ಸಾವಿರ ರೂಪಾಯಿಗಳು ಬಟವಾಡೆಯಾಗಬೇಕು. ಬೆಂಗಳೂರಿನಿಂದ ಹಿಡಿದು ಶಿವಮೊಗ್ಗದ ತುದಿಯವರೆಗೂ ಸಂಬಂಧಪಟ್ಟವರೆಲ್ಲರಿಗೂ ಯಥಾ ಶಕ್ತಿ ಹಣ ಬಟವಾಡೆಯಾಗಬೇಕು. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳಿಗೂ ಕೂಡಾ ದುಡ್ಡನ್ನು ಕೊಡುತ್ತೇವೆ ಎಂದು ಬಸ್ ಮಾಲೀಕರು ಹೇಳುತ್ತಾರೆ. ಈ ಎಂ. ಎಸ್. ಆರ್. ಟಿ. ಸಿ. ಡಿಪಾರ್ಟ್‌ಮೆಂಟಿನಲ್ಲಿ ಏನು ಅನೀತಿ, ಅವ್ಯವ

(ಶ್ರೀ ಕೋಣಂದೂರು ಲಿಂಗಪ್ಪ)

ಹಾರ, ನಡವಳಿಕೆಗಳು ನಡೆಯುತ್ತವೆ, ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಈ ಎಂ. ಎಸ್. ಆರ್. ಟಿ. ಸಿ. ಗೆ ಒಂದು ತರಹ ಹುಳು ಮುತ್ತಿದೆ. ಇದನ್ನು ನಾಶ ಮಾಡಬೇಕು. ಒಂದು ಹೊಸ ವ್ಯವಸ್ಥೆಯನ್ನು ತರಬೇಕು. ಇದಕ್ಕೆ ಒಂದು ಹೊಸ ಚೇತನ ತರಬೇಕು. ಅದನ್ನು ಮಾಡದಿದ್ದರೆ ಇದನ್ನು ಯಾವ ರೂಪದಲ್ಲಿಯೂ ತಿದ್ದುವುದಕ್ಕೆ ಸಾಧ್ಯವಿಲ್ಲ. ಕಳ್ಳನ ಕೈಯಲ್ಲಿ ಗಂಟು ಹೊರಿಸುವುದು ಒಳ್ಳೆಯದು. ನಮಗೆ ಬರತಕ್ಕ ಆದಾಯವೆಲ್ಲವೂ ಸೋರಿ ಹೋಗುವ ಬದಲು ಯಾರು ಕಳ್ಳತನ ಮಾಡುತ್ತಾರೆ ಎಂದು ಹೇಳುತ್ತಾರೆ. ಅವರಿಗೇ ಇದರ ಜವಾಬ್ದಾರಿಯನ್ನು ವಹಿಸುವುದು ಒಳ್ಳೆಯದು. ಮೊನ್ನೆ ಮಂಗಳೂರಿನಲ್ಲಿ ಮಾನ್ಯ ರೋಡ್ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರಲ್ಲಿ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಏನಿದ್ದಾರೆ ಅವರಿಗೆ ಒಂದು ಬಸ್ಸು ಕೊಡುತ್ತೇವೆ. ಅವರು ಅದನ್ನು ಕೋ-ಆಪರೇಟೀವ್ ಬೇಸಿಸ್ ಮೇಲೆ ನಡೆಸಿಕೊಂಡು ಹೋಗಬಹುದು ಎಂದು ಹೇಳಿದ್ದಾರೆ.

4 P.M.

ಯಾರು ದುಡಿಮೆಗಾರರಿದ್ದಾರೆ ಅವರ ಒಂದು ಸಂಘದ ಮೂಲಕ ಈ ಬಸ್‌ಗಳನ್ನು ಓಡಿಸುವುದಕ್ಕೆ ವ್ಯವಸ್ಥೆ ಮಾಡಿದರೆ, ಆಗ ಅವರು ತಮ್ಮದು ಎಂಬ ಅಭಿಮಾನದಿಂದ ಈ ಬಸ್‌ಗಳನ್ನು ಚೆನ್ನಾಗಿ ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆಗ ಎಲ್ಲವೂ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ಡ್ರೈವರ್ಸ್, ಕಂಡಕ್ಟರ್ಸ್ ಮತ್ತು ಕಾರ್ಮಿಕರು ಏನಿದ್ದಾರೆ, ಇವರೆಲ್ಲರನ್ನೂ ಸೇರಿಸಿ, ಅವರ ಜವಾಬ್ದಾರಿಗೆ ಈ ಬಸ್‌ಗಳನ್ನು ಕೊಟ್ಟರೆ, ಯಾರು ಹಣ ಕದಿಯುವುದಕ್ಕೆ ಅವಕಾಶ ವಿರುವುದಿಲ್ಲ. ಯಾರಾದರೂ ಕದ್ದರೆ ಅವರೇ ಹಿಡಿದುಕೊಡುತ್ತಾರೆ. ಈ ದೃಷ್ಟಿಯಿಂದ ಕಾರ್ಮಿಕರೇ ಬಸ್‌ಗಳನ್ನು ನಡೆಸತಕ್ಕ ವ್ಯವಸ್ಥೆ ಜಾರಿಗೆ ತರಬೇಕು. ಸಮಾಜವಾದಿ ಸಮಾಜವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುವ ನೀವು ನಿಮ್ಮ ಇಲಾಖೆಯೊಳಗೆ ಯಾವ ಒಂದು ಕಾರ್ಯಕ್ರಮವನ್ನು ಜಾರಿಗೆ ತೆಗೆದುಕೊಂಡು ಬಂದಿದ್ದೀರಿ ಎಂದು ಕೇಳುತ್ತೇನೆ. ಇನ್ನು ಮುಂದಾದರೂ ಸಹ ತಮ್ಮ ಇಲಾಖೆಯೊಳಗೆ ಸಮಾಜವಾದಿ ಸಿದ್ಧಾಂತವನ್ನು ಜಾರಿಗೆ ತರಲು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ಕಾರ್ಮಿಕರಿಗೆ ಪಾಲುಗಾರಿಕೆ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು, ಕಾರ್ಮಿಕರು ಸ್ವತಂತ್ರವಾಗಿ ವ್ಯವಹಾರ ಮಾಡುವ ಹಾಗೆ ಮತ್ತು ಅದರಿಂದ ಬರುವ ಆದಾಯದಲ್ಲಿ ಅವರಿಗೂ ಪಾಲು ಸಿಕ್ಕುವ ಹಾಗೆ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ಹೇಳುತ್ತೇನೆ. ಪರ್ಮಿಟ್ ಕೊಡುವ

ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇಂದು ಯಾರಲ್ಲಿ ಹೆಚ್ಚು ಹಣವಿರುತ್ತದೋ ಅವರಿಗೆ ಮಾತ್ರ ಪರ್ಮಿಟ್ ಸಿಕ್ಕುತ್ತದೆ. ಇವೊತ್ತು ಆರ್. ಟಿ. ಎ. ಮೆಂಬರ್ ಆಗುವುದಕ್ಕಾಗಿ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡುತ್ತಾರೆ.

ಉಪಾಧ್ಯಕ್ಷರು :—ಅದೆಲ್ಲಾ ಇದರ ಕಕ್ಷೆಯಲ್ಲಿ ಬರುವುದಿಲ್ಲ

ಶ್ರೀ ಕೋಣಂದೂರು ಲಿಂಗಪ್ಪ :—ಕೇವಲ ಸೀಟ್ ಬಗ್ಗೆ ಹೇಳುವುದಕ್ಕೆ ಬರುವುದಿಲ್ಲ. ಎಲ್ಲವನ್ನೂ ಹೇಳಬೇಕಾಗುತ್ತದೆ. ಮುಖ್ಯವಾಗಿ ಇವೊತ್ತು ಪ್ರೈವೇಟ್. ಕ್ಯಾರೇಜಸ್‌ನ್ನು ರಿಸ್ಟ್ರಿಕ್ಟ್ ಮಾಡುವುದಕ್ಕಾಗುವುದಿಲ್ಲ, ಅದು ಇಂಡಿಯಾ ಸರ್ಕಾರದ ಆಧೀನದಲ್ಲಿರತಕ್ಕಂಥ ಆಕ್ಟ್ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಬಗ್ಗೆ ಅಧಿಕಾರವನ್ನು ಡೀ-ಸೆಂಟ್ರಲೈಜ್ ಮಾಡುವುದಕ್ಕೆ ತಾವು ವಿಚಾರ ಮಾಡಬೇಕು. ಪ್ರೈವೇಟ್ ಕ್ಯಾರೇಜಸ್‌ಗೆ ಪರ್ಮಿಟ್ ಕೊಡುವುದು ಅಥವಾ ಬಿಡುವುದು ನಮಗೆ ಸಂಬಂಧಪಟ್ಟದ್ದು. ಈ ಬಗ್ಗೆ ಯಾವುದೇ ರಿಸ್ಟ್ರಿಕ್ಷನ್ ಬೇರೆ ಕಡೆಯಿಂದ ಬರಬಾರದು. ಈ ಅಂಶವನ್ನು ಕೇಂದ್ರದವರಿಗೆ ಕಟ್ಟುನಿಟ್ಟಾಗಿ ತಾವು ಹೇಳಬೇಕು. ಎಲ್ಲ ಅಧಿಕಾರವನ್ನು ಕೇಂದ್ರಕ್ಕೆ ವಹಿಸಿ, ನಮಗೇನೂ ಅಧಿಕಾರವಿಲ್ಲವೆಂದು ತಾವು ಸುಮ್ಮನೆ ಕೂರುವುದು ಬೇಡ. ಈಗ ಕೇಂದ್ರದಲ್ಲಿರತಕ್ಕಂಥ ಅಧಿಕಾರವನ್ನು ರಾಜ್ಯಸರ್ಕಾರಕ್ಕೆ ತೆಗೆದುಕೊಂಡು, ಜಿಲ್ಲಾಮಟ್ಟದ ವರೆಗೂ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ತಮ್ಮ ಒಂದು ಅಧಿಕಾರದ ಅವಧಿಯಲ್ಲಿ ಎಷ್ಟು ಬಸ್‌ಗಳನ್ನು ಹೆಚ್ಚು ಮಾಡಿದ್ದೀರಿ ? ಎಷ್ಟು ಬಸ್‌ಗಳಿಗೆ ಹೊಸ ರೂಪ ಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ನಮಗೆ ಮಾಹಿತಿ ಕೊಡಬೇಕು. ತಮ್ಮ ಒಂದು ಇಲಾಖೆಯಲ್ಲಿ ಏನೇನು ಹೊಸ ಹೊಸ ವ್ಯವಸ್ಥೆ ಮಾಡಿದ್ದೀರಿ ಎನ್ನುವುದರ ಬಗ್ಗೆ 6 ತಿಂಗಳಿಗೆ ಅಥವಾ ಒಂದು ವರ್ಷಕ್ಕೆ ಒಂದು ಸಲ ಒಂದು ಕೈಪಿಡಿಯನ್ನು ಕನ್ನಡದಲ್ಲಿ ಅಥವಾ ಉರ್ದು ಭಾಷೆಯಲ್ಲಿ ಅಚ್ಚು ಹಾಕಿಸಿ ನಮಗೆ ಒದಗಿಸಬೇಕು. ಆದರೆ ಗುಲಾಮಿ ಭಾಷೆಯಾದ ಇಂಗ್ಲೀಷ್ ಮಾತ್ರ ಬೇಡ.

ಉಪಾಧ್ಯಕ್ಷರು : ಹಿಂದೀ ಭಾಷೆಯಲ್ಲಿ ಕೊಟ್ಟರೆ ಆಗಬಹುದೋ ?

ಶ್ರೀ ಕೋಣಂದೂರು ಲಿಂಗಪ್ಪ :—ಆ ಬಾಷೆಯೂ ಸಹ ಆಗಬಹುದು. ತಾವು ಈ ಇಲಾಖೆಯ ಆಡಳಿತವನ್ನು ವಹಿಸಿಕೊಂಡ ಮೇಲೆ ಈ ಇಲಾಖೆಗೆ ಹೊಸ ಚೇತನವನ್ನು ತುಂಬುತ್ತೀರಾ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ತಾವು ಅಧಿಕಾರಕ್ಕೆ ಬಂದಮೇಲೆ ಅನೇಕ ಬಸ್‌ಗಳ ಬ್ರೇಕ್ ಹೋಗಿದೆ, ಅನೇಕ

(ಶ್ರೀ ಕೋಣಂದೂರು ಲಿಂಗಪ್ಪ)

ಬಸ್‌ಗಳ ಗೇರ್ ಹೋಗಿದೆ. ನಿಮ್ಮ ಗೋಡನ್‌ನಲ್ಲಿರತಕ್ಕ ಟೈರ್‌ಗಳು ಕಳ್ಳತನ ವಾಗುತ್ತಿರುವುದು ನಿಮಗೆ ಗೊತ್ತಿದೆಯೇ ? ಶಾಸನಸಭಾ ಸದಸ್ಯರಾಗಲೀ, ಲೋಕ ಸಭಾ ಸದಸ್ಯರಾಗಲೀ ಕಳ್ಳತನವನ್ನು ಪತ್ತೆ ಹಚ್ಚಿದಾಗ ಕಳ್ಳತನ ಮಾಡಿದವರಿಗೆ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿಕೊಡಬೇಕು. ಮುಖ್ಯವಾಗಿ ಜನತಾ ನ್ಯಾಯಾಲಯಗಳು ನಿರ್ಮಾಣ ವಾಗಬೇಕು ಆಗ ಮಾತ್ರ ಲಂಚ ರುಷುವತ್ತುಗಳನ್ನು ಕೊನೆಗಾಣುವುದಕ್ಕೆ ಅವಕಾಶವಿರುತ್ತದೆ. ಅದು ಬಿಟ್ಟು ಕಳ್ಳತನ ಮಾಡಿದವರನ್ನು ಪೋಲಿಸರ ವಶಕ್ಕೆ ಕೊಟ್ಟರೆ ಯಾವ ಪ್ರಯೋಜನವೂ ಆಗುವುದಿಲ್ಲ. ಏಕೆಂದರೆ ಅವರು ಸಹ ರಿವಾಜ್ ಪ್ರಕಾರ ಹಣ ಹಂಚಿಕೊಳ್ಳುವು ದರಿಂದ, ಪೋಲೀಸಿನವರು ಹಿಡಿದು ಕೊಟ್ಟವರ ಮೇಲೆಯೇ ಕೇಸ್ ಹಾಕಿ ಬಿಡು ತ್ತಾರೆ. ಸಾಕ್ಷತ್ ಮಂತ್ರಿಗಳೇ ಬಸ್‌ನಲ್ಲಿ ಪ್ರಯಾಣ ಮಾಡುವಾಗ ಏನಾದರು ಅಕ್ರಮಗಳನ್ನು ನಡೆದರೆ ಆಗ ಅವರು ನೋಡಿದರೂ ನೋಡದ ಹಾಗೆ ಇದ್ದರೆ ನಾವಾದರೂ ಸಹ ಏನು ಮಾಡುವುದಕ್ಕಾಗುತ್ತದೆ?

ಇನ್ನು ಈ ಇಲಾಖೆಯಲ್ಲಿ ನಡೆಯುತಕ್ಕ ಅಪಾಯಿಂಟ್‌ಮೆಂಟ್ಸ್ ಬಗ್ಗೆ ನಾನು ಹೇಳಲೇ ಬೇಕಾಗಿದೆ.

ಉಪಾಧ್ಯಕ್ಷರು :— ಅದೆಲ್ಲಾ ಇದರಲ್ಲಿ ಬರುವುದಿಲ್ಲ

ಶ್ರೀ ಅಜೀಜ್‌ಸೇಟ್ :—ಈ ಬಿಲ್‌ಗೂ ರೆಕ್ರೂಟ್‌ಮೆಂಟಿಗೂ ಏನೇನೂ ಸಂಬಂಧವಿಲ್ಲ. ಆದರೂ ಮಾನ್ಯ ಸದಸ್ಯರು ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ :—ಇಂದು ಅನುಭವ ಇಲ್ಲದವರಿಗೆಲ್ಲಾ ಡ್ರೈವರ ಕೆಲಸ ಕೊಡುತ್ತಿದ್ದಾರೆ. ಮತ್ತು ಡ್ರೈವಿಂಗ್ ಲೈಸನ್ಸ್ ಕೊಡುತ್ತಿ ದ್ದಾರೆ. ಆದಕ್ಕಾಗಿ ಹೇಳಬೇಕಾಗಿದೆ. ಇಂದು ಡ್ರೈವರ ಕೆಲಸ ಕೊಡಬೇಕಾದರೆ ಎಸ್. ಎಸ್. ಎಲ್. ಸಿ. ಪಾಸಾಗಿರಬೇಕೆಂದು ಹೇಳುತ್ತಾರೆ. ಯಾರು ಅದೇ ಕಸಬಿನಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿರುತ್ತಾರೋ ಅಂತಹವರಿಗೆ ಈ ಕೆಲಸ ಕೊಡುತ್ತಿಲ್ಲ. ಬೋಲ್ಟ್, ನಟ್‌ಗಳ ವಿಚಾರವನ್ನು ಇವರುಗಳು ಓದಿಯೇ ಕಲಿಯಬೇಕಾಗಿಲ್ಲ; ಅನುಭವದಿಂದಲೇ ಕಲಿತುಕೊಂಡಿರುತ್ತಾರೆ. ಆದ ಕಾರಣ ಇಂತಹವರಿಗೆ ಮಾನವೀಯತೆ ದೃಷ್ಟಿಯಿಂದ ವಿಶೇಷವಾದ ಅವಕಾಶ ಕಲ್ಪಿಸಿ ಕೊಡಲು ಮನಸ್ಸು ಮಾಡಬೇಕು. ಇವರ ಜೊತೆ ಹೊಸಬರಿಗೂ ಸಹ ಅವಕಾಶ ಕಲ್ಪಿಸಿಕೊಡಿ. ಮುಖ್ಯವಾಗಿ ತಮ್ಮ ಇಲಾಖೆಯನ್ನು ಸಾರ್ವಜನಿಕ ಇಲಾಖೆ ಯನ್ನಾಗಿ ಮಾಡಬೇಕು.

ಇನ್ನು ಟ್ಯಾಕ್ಸೇಷನ್ ಬಗ್ಗೆ ಬಸ್ಸುಗಳ ಬಗ್ಗೆ ಹಾಗೂ ಲಾರಿಗಳ ಮತ್ತು ಇನ್ನಿತರ ವಿಚಾರಗಳ ಬಗ್ಗೆ ಇಲ್ಲಿ ಹೇಳಲು ಹೋಗುವುದಿಲ್ಲ. ಮುಖ್ಯವಾಗಿ ಸಮಾಜವಾದಿ ಸಮಾಜವನ್ನು ತರುತ್ತೇವೆಂದು ಹೇಳುವ ಇಂದಿರಾ ಕಾಂಗ್ರೆಸ್ಸು ಸರಕಾರದವರು ಕೊನೆಯ ಪಕ್ಷ ಶ್ರೀಮಾನ್ ಅಜೀಜ್ ಸೇಟರ ಬಾಯಲ್ಲಿ ಸಮಾಜವಾದವನ್ನು ತರುವುದರ ಬಗ್ಗೆ ಇಲ್ಲಿ ಏನನ್ನೂ ಹೇಳಲ್ಲಿಲ್ಲ. ಇದಕ್ಕಾಗಿ ನಾನು ಅವರಲ್ಲಿ ಹೇಳುವುದು ಕಾರ್ಮಿಕರ ಹಾಗೂ ಅವರ ಆಗುಹೋಗುಗಳನ್ನು ನೋಡಿಕೊಳ್ಳಲು ಅನುಕೂಲವಾಗುವಂತೆ ಅವರಿಗೆ ಬಸ್ಸುಗಳನ್ನು ಲಾಭನಷ್ಟ ವಿಲ್ಲದೆ ನಡೆಸಿಕೊಳ್ಳಲು ತಕ್ಕ ಒಂದು ವ್ಯವಸ್ಥೆ ಮಾಡಲು ಹಾಗೂ ವಿಕೇಂದ್ರಿ ಕರಣದ ವ್ಯವಸ್ಥೆಯನ್ನು ತರುವ ಒಂದು ಯೋಜನೆಯನ್ನಾದರೂ ತಕ್ಷಣ ಕಾರ್ಯ ರೂಪಕ್ಕೆ ತರಬೇಕೆಂದು ಅವರಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ) :-ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇಲ್ಲಿ ತಂದಿರತಕ್ಕ ಬಿಲ್ಲು ಬಹಳ ಸೀಮಿತವಾದುದು. ಇದರಲ್ಲಿರುವ ಉದ್ದೇಶ ಬೆಂಗಳೂರಿನಲ್ಲಿ ಸಿಟಿ ವಿಭಾಗಕ್ಕಾಗಿಯೇ ಒಂದು ಪ್ರತ್ಯೇಕ ವಾದ ಆರ್.ಟಿ.ಐ. ಇಲಾಖೆಯನ್ನು ಮಾಡತಕ್ಕದ್ದು ಮತ್ತು ಮೋಟಾರು ವೆಹಿಕಲ್‌ಗಳ ಅಫೇನ್ಸ್‌ಗಳನ್ನು ಕಾಂಪ ಾಂಡು ಮಾಡುವುದು ಮತ್ತು ಈಗ ಇದರಿಂದಾಗುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕಾಗಿ ಈ ಬಿಲ್ಲನ್ನು ತರಲಾಗಿದೆ ಎಂದು ಇಲ್ಲಿ ಹೇಳಿದ್ದಾರೆ, ಈ ಅಮೆಂಡುಮೆಂಟು ಬಿಲ್ಲನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ ಮತ್ತು ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ಇದೊಂದು ದೌರ್ಭಾಗ್ಯ. ಸಮಾಜವಾದೀ ಸಮಾಜದಲ್ಲಿ ಪಬ್ಲಿಕ್ ಸೆಕ್ಟರು ಸಂಸ್ಥೆಗಳಲ್ಲಿ ಆಗತಕ್ಕ ಅವ್ಯವಸ್ಥೆಗಳಿಂದಾಗಿ ಜನತೆಗೆ ಇದರಲ್ಲಿ ನಂಬಿಕೆಯೇ ಹೋಗುವ ಕಾಲ ಬರುತ್ತಿದೆ. ಇದು ನಿಜವಾಗಿಯೂ ಎಲ್ಲರೂ ತಲೆ ತಗ್ಗಿಸಬೇಕಾದ ವಿಚಾರ. ಸರ್ವೆ ಸಾಮಾನ್ಯವಾಗಿ ಇಂತಹ ಸಾರ್ವಜನಿಕ ಸಂಸ್ಥೆಗಳ ಬಗ್ಗೆ ಜನತೆಯಿಂದ ದೂರುಗಳು ಬರುತ್ತಲೇ ಇವೆ. ಸಾರ್ವಜನಿಕ ಸಂಸ್ಥೆಯನ್ನು ನಡೆಸತಕ್ಕ ಯಾವ ಸಂಸ್ಥೆಯಾದರೂ ಕೂಡ ಅವು ಸರಿಯಾದ ಮಟ್ಟದಲ್ಲಿ ನಡೆಸಬೇಕು. ಇಂದು ಆ ರೀತಿ ಈ ಸಂಸ್ಥೆ ನಡೆಯುತ್ತಿಲ್ಲ ಎನ್ನುವುದು ಜನಜನಿತವಾಗಿದೆ. ಎಲ್ಲಿಯ ವರೆಗೆ ಈ ಕಪ್ಪು ಚುಕ್ಕೆ ಈ ಸಂಸ್ಥೆಯಿಂದ ಹೋಗು ವುದಿಲ್ಲವೋ ಅಲ್ಲಿಯವರೆಗೆ ಇದರ ಉದ್ದೇಶ ಸಫಲವಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ನಾನು ಯಾರೊಬ್ಬರೂ ಕಾರಣಕರ್ತರು ಎಂದು ಹೇಳಲು ಬಯಸುವುದಿಲ್ಲ. ಮೊದಲಿಂದ ಹಿಡಿದು ಕೊನೆಯುವರೆಗೆ ಜವಾಬು ದಾರಿಯಿಂದ ಇಲ್ಲಿನ ಕೆಲಸಕಾರ್ಯಗಳನ್ನು ಮಾಡುವಾಗ ಸರಿಯಾಗಿ ತಿಳಿದು ಕೊಳ್ಳದೇ ಮಾಡುವುದು ಇದಕ್ಕೆ ಕಾರಣ ಎಂದು ನಾನಂತೂ ಭಾವಿಸಿದ್ದೇನೆ. ಇದು ನನ್ನ ಒಬ್ಬನ ಅನುಭವವೇ ಅಲ್ಲ, ಇದು ನನ್ನ ಅನೇಕ ಮಿತ್ರರ ಅನುಭವವೂ ಹಾಗೇ ಇದೆ. ಸರಕಾರಿ ಬಸ್ಸುಗಳಲ್ಲಿ ದಿನ ನಿತ್ಯ ಪ್ರಯಾಣ ಮಾಡುವವರಿಗೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಯಾವ ರೀತಿಯ ಜವಾಬುದಾರಿ ಇಲ್ಲದೆ ಇಲ್ಲಿನ ಅಧಿಕಾರ ವರ್ಗದವರು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಚೆನ್ನಾಗಿ ತಿಳಿದು ಬರುತ್ತದೆ. ಇದಕ್ಕೆ ಒಂದೇ ಒಂದು ಉದಾಹರಣೆ ಕೊಡಬಹುದು. ನಮ್ಮ ಮಾನ್ಯ ಅಧ್ಯಕ್ಷರು ಹಾಗೂ ನಾನು ಇನ್ನಿತರ ಕೆಲವು ಸ್ನೇಹಿತರು ಕೆಲ ದಿನಗಳ ಹಿಂದೆ ಒಂದು ಸರಕಾರದ ಬಸ್ಸಿನಲ್ಲಿ ಹತ್ತಿ ಕುಳಿತಾಗ ನಮ್ಮ ಬಸ್ಸಿನಲ್ಲಿ ಸುಮಾರು 60 ಬುಟ್ಟಿಗಳನ್ನು ತಂದು ಕೆಲವು ಪ್ರಯಾಣಿಕರು ಆ ಬಸ್ಸಿನಲ್ಲಿಟ್ಟಿದ್ದರು. ಇದರಿಂದ ಇತರ ಪ್ರಯಾಣಿಕರಿಗೆ ತೊಂದರೆಯಾಗುತ್ತೆ ಎಂದು ತಿಳಿದರೂ ಅಲ್ಲಿರುವ ಬಸ್ಸಿನ ನೌಕರವರ್ಗದವರು ಅದನ್ನು ಹೊರಗೆ ಇಡಲು ಪ್ರಯತ್ನ ಮಾಡಲಿಲ್ಲ. ಇದರಿಂದ ಎಷ್ಟು ಬೇಜವಾಬುದಾರಿಯಿಂದ ಸರಕಾರಿ ಬಸ್ಸಿನವರು ಕೆಲಸ ಮಾಡುತ್ತಿದ್ದಾರೆನ್ನುವುದು ಗೊತ್ತಾಗುತ್ತದೆ. ಸರಕಾರಿ ಬಸ್ಸಿನಲ್ಲಿ ದಿನ ನಿತ್ಯವೂ ಇದೊಂದು ತಲೆನೋವು ಆಗಿಬಿಟ್ಟಿದೆ ನಾವು ಮೂರು ನಾಲ್ಕು ಜನ ಶಾಸಕರು ಆ ಬಸ್ಸಿನಲ್ಲಿದ್ದರೂ ಯಾರು ಈ ಬುಟ್ಟಿಗಳನ್ನು ಕೆಳಗಿಳಿಸಲು ಯತ್ನ ಮಾಡಲಿಲ್ಲ. ಕೊನೆಗೆ ಅಲ್ಲಿನ ಪ್ರಯಾಣಿಕರೇ ಇದನ್ನು ಬೇರೆಡೆಗೆ ಎತ್ತಿಡಬೇಕಾಗಿ ಬಂತು. ನಾನು ಈ ಸಂಸ್ಥೆಯ ಅಧ್ಯಕ್ಷರಿಗೆ ಹಾಗೂ ಮಾನ್ಯ ಮಂತ್ರಿಗಳಿಗೆ ಶಿವಮೊಗ್ಗಾದಿಂದ ಬರುವ ಸರಕಾರಿ ಬಸ್ಸುಗಳ ಬಗ್ಗೆ ಬರೆದು ಕೆಲವು ವಿಚಾರ ಗಳನ್ನು ಅವರ ಗಮನಕ್ಕೆ ತಂದಿದ್ದೆ. ಈಗ ಶಿವಮೊಗ್ಗಾಕ್ಕೆ ಬೆಂಗಳೂರಿಂದ 8-10 ಖಾಸಗಿ ಲಕ್ಸುರಿ ಬಸ್ಸುಗಳು ದಿನನಿತ್ಯ ಓಡಾಡುತ್ತಿವೆ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡಿರುವುದು ಬೆಳಗ್ಗೆ ಆರು ಗಂಟೆಗೆ ಒಂದು ನಾನ್ ಸ್ಟಾಪು ಬಸ್ಸನ್ನು ಶಿವಮೊಗ್ಗಾಕ್ಕೆ ಓಡಿಸುವುದು ಮತ್ತು ಮಧ್ಯಾಹ್ನ ಎರಡು ಗಂಟೆಗೆ ಒಂದು ನಾನ್ ಸ್ಟಾಪು ಬಸ್ಸನ್ನು ಶಿವಮೊಗ್ಗಾಕ್ಕೆ ಓಡಿಸಬೇಕೆಂದು ಸಲಹೆ ಮಾಡಿದ್ದೆ. ಇದರಿಂದ ಸ್ವಲ್ಪ ಸರಕಾರಕ್ಕೆ ಆದಾಯವೂ ಬರಬಹುದು ಮತ್ತು ಖಾಸಗಿಯವರ ಪೈಪೋಟಿಯೂ ಕಡಿಮೆಯಾಗಬಹುದು ಎಂದು ಸಲಹೆ ಮಾಡಿದ್ದೆ. ಇದರ ಬಗ್ಗೆ ಇನ್ನೂ ಈ ಸಂಸ್ಥೆಯವರೂ ಯೋಚನೆ ಮಾಡಲಿಲ್ಲ. ಈಗ ಇರುವ ಖಾಸಗಿ ಬಸ್ಸುಗಳ ಜೊತೆಗೆ ಇನ್ನೂ ನಾಲ್ಕೈದು ಬಸ್ಸುಗಳಿಗೆ ಪುನಃ ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆಂದು ಈಚೆಗೆ ತಿಳಿದುಬಂದಿದೆ. ಸರಕಾರಕ್ಕೆ ಹಾಗೂ ಎಂ. ಎಸ್. ಆರ್. ಟಿ. ಸಿ. ಚೇರ್ಮನ್ನರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯಮ ಗಳನ್ನು ಸರಿಯಾಗಿ ನಡೆಸಲು ಬರುತ್ತಿಲ್ಲ ಎನ್ನುವ ಅನುಮಾನ ನಮಗೆ ಬರುತ್ತಿದೆ. ಇದರ ಬಗ್ಗೆ ಸರಕಾರದ ನೀತಿಯೇನು ಎನ್ನುವುದೂ ಅರ್ಥವಾಗುತ್ತಿಲ್ಲ. ಒಂದು ಸಲ ಒಂದು ಸರಕಾರಿ ಬಸ್ಸಿನಲ್ಲಿ ನಾಲ್ಕು ಜನ ಕಂಡಕ್ಟರುಗಳು ಕುಳಿತಿದ್ದರು. ಏಕೆ ಹೀಗೆ ನಾಲ್ಕು ಜನ ಕಂಡಕ್ಟರುಗಳು ಒಂದೇ ಬಸ್ಸಿನಲ್ಲಿದ್ದಾರೆಂದು ವಿಚಾರಿ ಸಿದಾಗ ಅಲ್ಲಿದ್ದ ಡ್ರೈವರು ಒಬ್ಬರು ಕಂಡಕ್ಟರು ಚಕ್ರ ತಿರುಗಿಸಲು, ಇನ್ನೊಬ್ಬರು ಬ್ರೇಕುಗಳನ್ನು ಬಿಗಿಯಾಗಿ ಹಿಡಿಯಲು ಹಾಗೂ ಇನ್ನಿತರರು ಬೇರೆ ಕೆಲಸಗಳಿಗೆ

ಇರಬೇಕಾಗಿದೆ ಎಂದು ತಿಳಿಸಿದರು, ಇದೂ ಅಲ್ಲದೆ ಖಾಸಗಿಯವರ ಬಸ್ಸಿನ ರೇಟಿಗೂ ಸರಕಾರದ ಬಸ್ಸಿನ ರೇಟಿಗೂ ಬಹಳ ವ್ಯತ್ಯಾಸವಿದೆ ಸರಕಾರದ ಬಸ್ಸಿನಲ್ಲಿ ಶಿವಮೊಗ್ಗಕ್ಕೆ 17 ರೂಪಾಯಿ ಚಾರ್ಜ್ ಎಂದು ಇದೆ. ಆದರೆ ಖಾಸಗಿ ಲಕ್ಷ್ಯುರೀ ಬಸ್ಸುಗಳಲ್ಲಿ 10 ರೂಪಾಯಿಗಳು ಮಾತ್ರ ಚಾರ್ಜ್ ಇದೆ ಮತ್ತು ಪ್ರಯಾಣಿಕರಿಗೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಕೊಡುತ್ತಿದ್ದಾರೆ, ಹೀಗಿರುವಾಗ ಸರಕಾರದ ಬಸ್ಸುಗಳಲ್ಲಿ ಏಕೆ ಈ ರೀತಿ ಅನುಕೂಲಗಳನ್ನು ಕೊಡುತ್ತಿಲ್ಲ ಎಂದು ನಾನು ಇಲ್ಲಿ ಕೇಳಬೇಕಾಗಿದೆ.

SRI AZEEZ SAIT.—I want the Hon. Member to restrict his speech to the amendments in question. He cannot expect me to answer to his points which are not relevant to the subject.

MR. DEPUTY SPEAKER.—Hon. Member Sri Chandrasekhar, may please be concise and within the scope of the amending Bill. Other wise I will have to call another member. I hope, he will be within the scope of the subject.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : ಮುಖ್ಯವಾದ ಒಂದೇ ವಿಷಯವನ್ನು ಹೇಳಲು ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ಬಿಲ್ಲಿನ ಕಕ್ಷೆಯೊಳಗೆ ಬಂದರೆ ಕೊಡಬಹುದು, ಇಲ್ಲದೆ ಇದ್ದರೆ ಹೇಗೆ ಕೊಡುವುದಕ್ಕಾಗುತ್ತದೆ ?

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ್ : ನಾವು ಇಲ್ಲಿಂದ ಶಿವಮೊಗ್ಗಕ್ಕೆ ಹೋಗುವಾಗ ದಿನನಿತ್ಯ ನೋಡುತ್ತೇವೆ. ತರೀಕೆರಿ ಹತ್ತಿರ ಬಂದರೆ,....

AZEEZ SAIT.— Again the Hon. Member speaks about the bus. If he gives any suggestions for improvement, I will gladly accept them. The M.S.R.T.C. is an autonomous body.

MR. DEPUTY SPEAKER :—The Hon-Member must restrict himself to the scope of the Bill. If he persists I will have to call another member.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :....ಕಣ್ಣಾರೆ ಕಂಡ, ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಮುಖ್ಯವಾದ ವಿಷಯದ ಬಗ್ಗೆ ಮಾತನಾಡುವಾಗ ಅದಕ್ಕೆ ಬಿಲ್‌ನಲ್ಲಿ ಸ್ಕೋಪ್ ಇಲ್ಲವೆಂದರೆ ಒಪ್ಪುವುದಕ್ಕಾಗುವುದಿಲ್ಲ. ಎಂ. ಎಸ್. ಆರ್. ಟಿ. ಸಿ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಪ್ರಯಾಣ ಮಾಡುವಾಗ ತರೀಕೆರೆ ದಾಟಿದ ನಂತರ ಪ್ರಯಾಣಿಕರಿಗೆ ಟಿಕೆಟ್‌ಗಳನ್ನು ಕೊಡದೆ ಹತ್ತಿಸಿಕೊಳ್ಳುತ್ತಿರುತ್ತಾರೆ.

SRI AZEEZ SAIT.—What the Hon. Member was doing at that time when the Conductor was taking the passengers without tickets ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ ;—ನಾವು ಎಷ್ಟೋ ತಕರಾರು ಮಾಡುತ್ತೇವೆ. ಆದರೂ ನಮ್ಮನ್ನು ಮುಂದುಗಡೆ ಕೂಡಿಸಿ, ಹಿಂದುಗಡೆ ಟಿಕೆಟ್ ಕೊಡದೆ ದುಡ್ಡು ತೆಗೆದುಕೊಳ್ಳುವುದು ಬಸ್ಸುಗಳಲ್ಲಿ ದಿನನಿತ್ಯ ನಡೆಯುವ ವ್ಯವಹಾರ.

MR. DEPUTY SPEAKER.—I have told the Hon. Member many times that if he persists I will call some other members.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :— ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಮಸೂದೆಯ ಬಗ್ಗೆ ನಮ್ಮದೇನೂ ವಿರೋಧವಿಲ್ಲ. ಇದು ಅತ್ಯಾವಶ್ಯಕವಾದ ತಿದ್ದುಪಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್ ಬಂಗಾರಪ್ಪ (ಸೊರಬ): ಮಾನ್ಯ ಉಪಸಭಾಪತಿಗಳೇ, ಮಾನ್ಯ ಸಚಿವರು ಮಂಡಿಸಿರತಕ್ಕ ತಿದ್ದುಪಡಿ ಮಸೂದೆಯ ಮೇಲೆ ಮಾನ್ಯ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಈ ತಿದ್ದುಪಡಿ ಮಸೂದೆಯಲ್ಲಿ ಅಡಗಿರತಕ್ಕ ವಿಷಯಗಳನ್ನು ಅವಲೋಕಿಸಿದಾಗ ಇದು ನಾಲ್ಕು ಅಂಶಗಳನ್ನು ಒಳಗೊಂಡಿರತಕ್ಕ ತಿದ್ದುಪಡಿ ಮಸೂದೆ ಎಂದು ನಾನ್ನು ಭಾವನೆ ಮಾಡಿದೆ. ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ, ಬೆಂಗಳೂರು ನಗರದಲ್ಲಿ ಬಸ್ಸುಗಳು ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಇದಕ್ಕಾಗಿ ಬೆಂಗಳೂರು ನಗರಕ್ಕಾಯೇ ಪ್ರತ್ಯೇಕ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಬೇಕು ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಸಲಹೆ ಎಂದು ನಾನು ಭಾವಿಸುತ್ತೇನೆ. ಬೆಂಗಳೂರು ನಗರ ಬೆಳೆಯುತ್ತಿರತಕ್ಕ ನಗರ. ಇಲ್ಲಿನ ಜನಸಂಖ್ಯೆ ದಿನನಿತ್ಯ ಜಾಸ್ತಿಯಾಗುತ್ತಿದೆ. ಇಂಥ ನಗರಕ್ಕೆ ಹೆಚ್ಚು ಬಸ್ಸುಗಳನ್ನು ಒದಗಿಸತಕ್ಕ ಪರಿಸ್ಥಿತಿ ಸರ್ಕಾರಕ್ಕೆ ಬಂದಿದೆ ಎನ್ನುವ

ದನ್ನು ಒಪ್ಪುತ್ತೇನೆ. ಅದಕೋಸ್ಕರ ಸ್ವಲ್ಪ ಹತೋಟಿ ಇರುವ ದೃಷ್ಟಿಯಿಂದ ಬೆಂಗಳೂರು ನಗರಕ್ಕೇ ಪ್ರತ್ಯೇಕವಾದ ರೀಜನಲ್ ಟ್ರಾನ್ಸ್‌ಪೋರ್ಟ್ ಇರುವುದು ಯೋಗ್ಯವೆಂದು ನಾನಾದರೂ ಭಾವಿಸುತ್ತೇನೆ.

ಎರಡನೆಯದಾಗಿ "It is proposed to have a provision similar to sub-section (2 of Section 45 in respect of grant of permits to transport vehicles proposed to be used in two or more regions inside the State. By invoking the powers under that provision it is proposed to have better control over contract carriages which are being clandestinely operated as stage carriages." ಎಂದು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದುದು ಎಂದು ನಾನು ಭಾವನೆ ಮಾಡುತ್ತೇನೆ. ಕಾಂಟ್ರಾಕ್ಟ್ ಕಾರೇಜ್ ಎನ್ನುವ ಹೆಸರಿನಲ್ಲಿ ಈ ಹೊತ್ತು ಅವನ್ನು ಸ್ಟೇಜ್ ಕ್ಯಾರೆಜ್‌ಗಳಾಗಿ ನಡೆಸುತ್ತಿದ್ದಾರೆ, ಕ್ಲಾಂಡೆಸ್ಟೈನ್ ಆಗಿ ನಡೆಸುತ್ತಿದ್ದಾರೆ ಎನ್ನುವ ವಿಷಯವನ್ನು ಸರ್ಕಾರದವರೇ ಈ ತಿದ್ದುಪಡಿ ಮಸೂದೆಯಲ್ಲಿ ಒಪ್ಪಿಕೊಂಡಿರುವುದು ಬಹಳ ಪ್ರಾಮುಖ್ಯವಾದ ಅಂಶ. ಮಾನ್ಯ ಅಜೀಜ್‌ಸೇಟ್ ಅವರು ಸಾರಿಗೆ ಮಂತ್ರಿಗಳಾದ ಮೇಲೆ ಕ್ಲಾಂಡೆಸ್ಟೈನ್ ಆಗಿ ಕಾಂಟ್ರಾಕ್ಟ್ ಕ್ಯಾರೇಜುಗಳು ಓಡುವುದು ಹೆಚ್ಚಾಗಿದೆ. ತಿದ್ದುಪಡಿ ಮಸೂದೆಯಲ್ಲಿ ಅದನ್ನು ಅವರೇ ಒಪ್ಪಿಕೊಂಡಿದ್ದಾರೆ. ಏಕೆ ಜಾಸ್ತಿಯಾಯಿತು. ಏಕೆ ಇಷ್ಟೊಂದು ಪರ್ಮಿಟ್‌ಗಳನ್ನು ಕೊಟ್ಟಿರುವುದು, ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ಎನ್ನುವ ಭಾವನೆ ಇವರಿಗೆ ಇಲ್ಲವಲ್ಲ ಎಂದು ಕೇಳಬೇಕಾಗಿದೆ, ಮಾನ್ಯ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಹಿಂದಿಗಿಂತ ರಸ್ತೆ ಸಾರಿಗೆ ಕಾರ್ಪೊರೇಷನ್ನಿನಿಂದ ವರಮಾನ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಜನಸಂಖ್ಯೆ ಹೆಚ್ಚಾಗಿರುವುದನ್ನು ನೋಡಿದರೆ, ಬಸ್ಸುಗಳ ಸಂಖ್ಯೆ ಹೆಚ್ಚಾಗಿರುರುವುದನ್ನು ನೋಡಿದರೆ, ಪ್ರಯಾಣ ಮಾಡುವವರ ಸಂಖ್ಯೆಯನ್ನು ನೋಡಿದರೆ, ಸರ್ಕಾರ ಇದರ ಬಗ್ಗೆ ಹೆಚ್ಚು ಗಮನ ಕೊಟ್ಟಿದೆಯೇ ಎಂದು ನಾವು ಕೇಳಬೇಕಾಗಿದೆ. ಇದು ಅಟಾನಮಸ್ ಬಾಡಿ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಸರ್ಕಾರಕ್ಕೆ ಇದರ ಬಗ್ಗೆ ಜವಾಬ್ದಾರಿ ಇದೆಯೇ? ಇವರ ಅದಕ್ಷತೆಯ ಆಡಳಿತದಿಂದ, ದಕ್ಷತೆ ರಹಿತವಾದ ಆಡಳಿತದಿಂದ ಈ ಹೊತ್ತು ಹಲವಾರು ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ. ಕುರುಡುಗಣ್ಣಿಗಿಂತ ಮೆಳ್ಳಗಣ್ಣು ಮೇಲು ಎನ್ನುವ ಹಾಗೆ ಇವರು ಹಿಂದೆ ಇದ್ದುದಕ್ಕಿಂತ ಈಗ ವರಮಾನ ಹೆಚ್ಚಾಗಿದೆ ಎಂದು ಹೇಳುತ್ತಿದ್ದಾರೆ. ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ನೋಡಿದರೆ ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಫ್ಲೋಟಿಂಗ್ ಪಾಪ್ಯುಲೇಷನ್ ಜಾಸ್ತಿಯಾಗುತ್ತಿದೆ. ಆದರೂ ವರಮಾನ ಹೆಚ್ಚು ಮಾಡುವುದಕ್ಕೆ ಆಗಿಲ್ಲ. ಇದಕ್ಕೆ

(ಶ್ರೀ ಎಸ್ ಬಂಗಾರಪ್ಪ)

ಹಲವಾರು ಕಾರಣಗಳಿವೆ. ತಿದ್ದುಪಡಿ ಮಸೂದೆಯಲ್ಲಿ ಕಾಂಟ್ರಾಕ್ಟ್ ಕ್ಯಾರೇಜಸ್ ವಿಷಯ ಏನು ಹೇಳಿದ್ದಾರೆ ? ಅದರ ಬಗ್ಗೆ ಹೇಳಬೇಕಾದರೆ ಮಾನ್ಯ ಅಜೀಜ್ ಸೇಟ್ ಅವರು ಸಾರಿಗೆ ಸಚಿವರಾಗಿ ಬಂದ ಮೇಲೆ ಇವು ಜಾಸ್ತಿಯಾಗಿವೆ, ಕ್ಲಾಂಡೆಸ್ಟೈನ್ ಆಗಿ ಓಡುವುದಕ್ಕೆ ಇವರು ಮತ್ತು ಸಂಬಂಧಪಟ್ಟ ಇಲಾಖೆಯೇ ಕಾರಣ. ಕಾಂಟ್ರಾಕ್ಟ್ ಕ್ಯಾರೇಜಸ್‌ಗೆ ಹೆಚ್ಚು ಪರ್ಮಿಟ್‌ಗಳನ್ನು ಕೊಟ್ಟು ಕೆಂಪು ಬಸ್ಸುಗಳನ್ನು ಯಾರೂ ಹತ್ತುವುದಿಲ್ಲ. ಫ್ರೀ ಪಾಸುಗಳಿರುವ ನಮ್ಮಂಥ ಶಾಸಕರು ಮಾತ್ರ ಆ ಬಸ್ಸುಗಳಲ್ಲಿ ಹೋಗುತ್ತೇನೆ. ಯಾತಕ್ಕೆ ಎಂದು ಹೇಳುತ್ತೇನೆ, ಆಂಧ್ರ, ಹರಿಯಾಣ, ಪಂಜಾಬ್, ತೋರಿಸಿ ಅಲ್ಲಿ ಕಡಿಮೆ ರೇಟ್ ಇದೆ ಎಂದು ಉದಾಹರಣೆ ಕೊಡುತ್ತಾರೆ ಶಿವಮೊಗ್ಗದಿಂದ ಪ್ರೈವೇಟ್ ಬಸ್ಸಿನಲ್ಲಿ ಅಂದರೆ ಅಶೋಕಾ ಟ್ರಾವಲ್ಸ್‌ನಲ್ಲಿ ಅಥವಾ ಮಾಡರ್ನ್ ಟ್ರಾವಲ್ಸ್‌ನಲ್ಲಿ ಬಂದರೆ 10 ರೂಪಾಯಿ ತೆಗೆದು ಕೊಳ್ಳುತ್ತಾರೆ. ಕಾಲದ ಪ್ರಶ್ನೆಯೂ ಕೂಡ ಬರುತ್ತದೆ. ನಿಮ್ಮ ಬಸ್ಸಿಗೆ ಎಷ್ಟು ಎಂದರೆ 15 ಚಿಲ್ಲರೆ ಅಥವಾ 16 ಚಿಲ್ಲರೆ ರೂಪಾಯಿ ಕೊಡಬೇಕಾಗುತ್ತದೆ. ಆದರೂ ಕೂಡ ಪ್ರೈವೇಟ್ ಬಸ್ಸಿನವರಿಗಿಂತ ಒಂದೂವರೆಯಷ್ಟು ಟೈಮ್ ತೆಗೆದುಕೊಳ್ಳುತ್ತಾರೆ. ಅಜೀಜ್‌ಸೇಠ್‌ರವರನ್ನು ನೋಡಬೇಕು ಎಂದು ನಿಮ್ಮ ಬಸ್ಸಿನಲ್ಲಿ ಬಂದರೆ ನಿಮ್ಮ ಮುಖ ದರ್ಶನ ನಮಗೆ ಒದಗುವುದಿಲ್ಲ.

SRI AZEEZ SAIT.—I have to request the Hon'ble Member who is a well practising lawyer of Shimoga to speak on the subject. He may take some other time for discussing M. S. R. T. C. matters.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕೆಂಪು ಬಸ್ಸು ಎಂ ಎಸ್. ಆರ್. ಟಿ. ಸಿ. ಬಗ್ಗೆ ಕೂಡ ಹೇಳಬೇಕಾಗಿದೆ. ಬಾಯಿ ಮುಚ್ಚುವುದಕ್ಕೆ ಆಗುವುದಿಲ್ಲ. ಪ್ರೈವೇಟ್ ಕಾಂಟ್ರಾಕ್ಟ್ ಕ್ಯಾರೇಜಸ್‌ಗಳಿಗೆ ಪರ್ಮಿಟ್ ಇಶ್ಯು ಮಾಡಿದ್ದಾರೆ, ಕ್ಲಾಂಡಸ್ಟೈನ್ ಆಗಿ ಓಡಾಡುತ್ತಾರೆ. ಅದನ್ನು ನೀವು ಅಬ್ಜಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಹೇಳಿದ್ದೀರಿ. I have a right to comment upon it. ಮಾನ್ಯ ಅಧ್ಯಕ್ಷರೇ ಇದರಲ್ಲಿ ಕಾಲದ ಪ್ರಶ್ನೆ ಮತ್ತು ಹಣದ ಪ್ರಶ್ನೆ ಕೂಡ ಇದೆ. ಮತ್ತು ಪ್ರಯಾಣಿಕರಿಗೆ ಏನೇನು ಸೌಕರ್ಯಗಳು ಇರಬೇಕು ಎಂಬುದು ಇದೆ. ನೀವು ಪರ್ಮಿಟ್ಸ್ ಕೊಡುತ್ತಾ ಹೋದರೆ ಜನ ಬಸ್ಸುಗಳನ್ನು ಹತ್ತಿಕೊಂಡು ಹೋಗುತ್ತಾರೆ. ರಾಜ್ಯ ಸರ್ಕಾರದ ಬಸ್ಸುಗಳನ್ನು ಜನ ಹತ್ತುವುದಿಲ್ಲ. ಅದರಿಂದ ನಷ್ಟ ಆಗುತ್ತದೆ. ಕ್ಲಾಂಡಸ್ಟೈನ್ ಆಗಿ ಓಡಾಡುತ್ತಾರೆ ಎಂದು ಹೇಳುವುದಾದರೆ What is your Department doing? ನೀವು ಯಾತಕ್ಕೆ ಕ್ಲಾಂಡಸ್ಟೈನ್

ಆಗಿ ಓಡಾಡುವುದನ್ನು ನಿಲ್ಲಿಸುವುದಿಲ್ಲ? ಮಾನ್ಯ ಅಧ್ಯಕ್ಷರೇ ಈ ರೀತಿ ಆಗುತ್ತಿರುವುದನ್ನು ನಾನು ಸಂಪೂರ್ಣ ವಿರೋಧ ಮಾಡುತ್ತೇನೆ. ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗೆ ಏನು ಪರ್ಮಿಟ್ ಕೊಟ್ಟಿದ್ದಾರೆ ಅದನ್ನು ಕ್ಯಾನ್ಸಲ್ ಮಾಡಬೇಕು. ನಮ್ಮ ದೇಶ ಬಡ ದೇಶ. ಬಸ್ಸುಗಳನ್ನು ಕಾಲಕ್ಕೆ ಸರಿಯಾಗಿ ಓಡುವಂತೆ ಮಾಡಬೇಕು, ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗೆ ಪರ್ಮಿಟನ್ನು ಕೊಡುವುದರಿಂದ ಕೆಂಪು ಬಸ್‌ಗಳಲ್ಲಿ ಅಷ್ಟೂ ಖಾಲಿಯಾಗಿರುತ್ತವೆ. ಸಂಪೂರ್ಣವಾಗಿ ಅವು ಖಾಲಿಯಾಗಿಯೇ ಹೋಗುತ್ತವೆ. ಜನ ಎಲ್ಲಿ ಕಡಿಮೆ ದರದಲ್ಲಿ ಕರೆದುಕೊಂಡು ಹೋಗುತ್ತಾರೆ ಅದರ ಮೂಲಕ ಹೋಗುತ್ತಾರೆ. ತಾವು ರೇಟ್ ಜಾಸ್ತಿ ಮಾಡಿ ಖಾಲಿ ಬಸ್ಸುಗಳನ್ನು ಓಡಿಸುತ್ತೀರಿ. Still you are telling that your Department is going ahead in a right manner. ಫಸ್ಟ್ ಕ್ಲಾಸ್ ವರಮಾನ ಬರುತ್ತಿದೆ ಎಂದು ನಮ್ಮ ಮಂತ್ರಿಗಳು ತಮ್ಮ ಭುಜವನ್ನು ತಟ್ಟಿಕೊಳ್ಳುತ್ತಿದ್ದಾರೆ.

ಮಾನ್ಯ ಉಪಾಧ್ಯಕ್ಷರೇ, ಇನ್ನು ಮೂರನೆಯದಾಗಿ 'It is also proposed to amend Section 60 to provide for suspension of the permit for minimum period of two months when there is a second breach of prescribed conditions of the permit and for cancellation of the permit when there is a third breach of these conditions, ಎಂದು ಹೇಳಿದ್ದೀರಿ I cannot understand why this amendment has been put forward here.

ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಮೋಸ ಮಾಡತಕ್ಕ ವರ್ಗಕ್ಕೆ ಒಂದಕ್ಕಿಂತ ಹೆಚ್ಚು ಚಾನ್ಸ್ ಯಾತಕ್ಕೆ ಕೊಡುತ್ತೀರಿ?. ಈ 25 ವರ್ಷಗಳ ಆಡಳಿತದಲ್ಲಿ ಇದೇ ರೀತಿ ಮಾಡಿದ್ದಾಯಿತು Again you are repeating the same thing in this amendment bill. I cannot understand this ತಪ್ಪಿತಸ್ಥರಿಗೆ ಪಾರ್ಡನ್ ಮಾಡಿ ಬಿಟ್ಟು ಬಿಡುವುದು ಸರಿಯಲ್ಲ. ಒಂದು ಸಾರಿ ಎರಡು ಸಾರಿ ತಪ್ಪು ಮಾಡಿದರೆ ಅದು ಗಮನಕ್ಕೆ ಬರುವುದಿಲ್ಲ. ಗಲಾಟೆಯಾಗಿ ಎಂ. ಎಲ್. ಎ. ಹೇಳಿದರೆ ಮೊದಲನೆಯ ಸಾರಿ ಮಾಡಿದ್ದಾರೆ ಎಂದು ಬಿಟ್ಟು ಬಿಡುತ್ತೀರಿ. ಈ ಒಂದು ಸೌಲಭ್ಯವನ್ನು ಪ್ರೈವೇಟ್ ಅಪರೇಟರ್ಸ್‌ಗೆ ಕೊಡುವುದಕ್ಕೆ ಕಾರಣವೇನು? ಯಾತಕ್ಕೆ ಈ ಕ್ಲಾಜ್ ಇಟ್ಟಿದ್ದೀರಿ ಎಂದು ಪ್ರಶ್ನೆ ಮಾಡಬೇಕಾಗಿದೆ. ಒಂದು ಸಾರಿ ತಪ್ಪು ಮಾಡಿದರೆ ಪರ್ಮಿಟ್ ಕ್ಯಾನ್ಸಲ್ ಆಗಬೇಕು. ನಮ್ಮ ಎಕ್ಸ್‌ಚೆಕರ್‌ಗೆ ಹಣ ಬರಬೇಕು. ಅನ್ಯಾಯ ಮಾಡುವುದನ್ನು ನಿಲ್ಲಿಸಬೇಕು, ಮಾನ್ಯ ಮಂತ್ರಿಗಳಿಗೆ ಧೈರ್ಯ ಇರುವುದಾದರೆ ಮೊದಲನೆಯ ತಪ್ಪಿಗೆ ಪರ್ಮಿಟ್ ಕ್ಯಾನ್ಸಲ್ ಮಾಡುತ್ತೇವೆ ಎಂದು ತಿದ್ದುಪಡಿ ತಂದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಾಗುತ್ತದೆ. ಒಂದೆರಡು ಸಾರಿ ತಪ್ಪು ಮಾಡಿದರೆ ಬದುಕಿಕೋ ಎಂದು ಬಿಟ್ಟು

(ಶ್ರೀ ಎಸ್. ಬಂಗಾರಪ್ಪ)

ಬಿಡುತ್ತೇವೆ. ಎರಡು-ಮೂರು ಸಾರಿ ತಪ್ಪು ಮಾಡಿದರೆ ಪರ್ಮಿಟ್ ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದರೆ ಅದು ಸರಿ ಎಂದು ಕಾಣುವುದಿಲ್ಲ.

ಮಾನ್ಯ ಉಪಾಧ್ಯಕ್ಷರೇ ಕೊನೆಯದಾಗಿ ಒಂದು ವಿಷಯ ಪ್ರಸ್ತಾಪ ಮಾಡಿ ನನ್ನ ಮಾತನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ. Even for minor offences under the Motor Vehicles Act 1939 and the Rules made there-under, the persons concerned have to be charged before the Court. This causes avoidable inconvenience to the persons involved in such minor offences." ಎಂದು ಹೇಳಿದ್ದೀರಿ. ಇದರ ಉದ್ದೇಶ ಬಹಳ ಒಳ್ಳೆಯದು. Even in America, I am told, Police have got power to compound offences even on the road or on the spot. I have khown cases where a driver or a owner of a vehicle commits an offence, the Police in America have got ample power to compound those offences. ರಾಂಗ್ ಪಾತ್‌ನಲ್ಲಿ ಹೋಗುವುದು ಇತ್ಯಾದಿ ತಪ್ಪುಗಳಿಗೆ 60 ರೂ ಜುಲ್ಮಾನೆ ಹಾಕಿ ಫೈನನ್ನು ಕಲೆಕ್ಟ್ ಮಾಡುವ ಅನುಕೂಲತೆ ಇವೆ. But we cannot compare our departmental people to the Officers in America. - ಇಲ್ಲಿ ಏನು ಕಾನೂನು ಮಾಡಿದರೂ ಕೂಡಾ ಅದರ ದುರುಪಯೋಗ ಆಗುತ್ತದೆ ಎನ್ನುವ ಒಂದು ಭಾವನೆ 25 ವರ್ಷಗಳ ಆಡಳಿತದಲ್ಲಿ ಜನತೆಗೆ ಬಂದಿದೆ. ತಪ್ಪುಗಳನ್ನು ಕಾಂಪೌಂಡ್ ಮಾಡುವ ಅವಕಾಶ ಕಾನೂನಿನಲ್ಲಿ ಮಾಡಿಕೊಟ್ಟರೆ ನೂರು ರೂಪಾಯಿ ಹಾಕುವ ಕಡೆ 25 ರೂಪಾಯಿ ಹಾಕಿ ತಾನು 75 ರೂಪಾಯಿ ಇಟ್ಟು ಕೊಳ್ಳತಕ್ಕ ಸಂದರ್ಭ ಬರುತ್ತದೆ. ಅನೇಕ ಕೇಸ್‌ಗಳಲ್ಲಿ ಸರ್ಕಾರಕ್ಕೆ ಹಣವೇ ಪಾವತಿಯಾಗುವುದಿಲ್ಲ ಈ ರೀತಿ ಒಳ್ಳೆಯ ಉದ್ದೇಶದ ಹೆಸರಿನಲ್ಲಿ ಅಧಿಕಾರಿಗಳು ದುಡಿಮೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಟ್ಟ ಹಾಗಾಗುತ್ತದೆ. ಆದುದ ರಿಂದ ಈ ತಿದ್ದುಪಡಿಯನ್ನು ನಾನು ವಿರೋಧ ಮಾಡುತ್ತೇನೆ.

ಮೊದಲು ಬೆಂಗಳೂರು ಸಿಟಿಗೆ ಸಂಬಂಧಪಟ್ಟ ಹಾಗೆ ತಂದ ತಿದ್ದುಪಡಿಯನ್ನು ಅನುಮೋದಿಸಿ, ಮಿಕ್ಕ 3 ತಿದ್ದುಪಡಿಗಳನ್ನು ಮಂತ್ರಿಗಳು ಹಿಂದಕ್ಕೆ ತೆಗೆದುಕೊಳ್ಳ ಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ : (ಶೃಂಗೇರಿ) ಮಾನ್ಯ ಅಧ್ಯಕ್ಷರೇ, ಈ ರೋಡ್ ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ನಮ್ಮ ಮಂತ್ರಿಗಳು ಬಹಳ ದಿವಸಗಳಿಂದ

ವಿಮರ್ಶೆ ಮಾಡಿ ಒಂದು ತಿದ್ದುಪಡಿ ಮಾಡುವುದು ಸೂಕ್ತವೆಂದು ಇದನ್ನು ತಂದಿದ್ದಾರೆ. ಈ ವರೆಗೆ ಇರತಕ್ಕ ಕಾನೂನು ಪ್ರಕಾರ ಟೂರಿಸ್ಟ್ ಬಸ್‌ಗೆ ಆಗಲಿ, ಕಾಂಟ್ರಾಕ್ಟು ಬಸ್‌ಗೆ ಆಗಲಿ ಕಂಡೀಷನ್ ಹಾಕುವುದು ಬಹಳ ಕಷ್ಟವಿತ್ತು. ಈ ಬಗ್ಗೆ ಅನೇಕಸಾರಿ ಅಸೆಂಬ್ಲಿಯಲ್ಲಿ ಚರ್ಚೆ ಮಾಡಿದ್ದೇನೆ. ಆರ್. ಟಿ. ಎ., ಎಸ್. ಟಿ. ಎ. ಮೆಂಬರಾಗಿ ಕೆಲಸ ಮಾಡಿರತಕ್ಕ ಅನುಭವ ನನಗೆ ಇದೆ. ಸರ್ಕಾರಕ್ಕೆ ಎಷ್ಟು ಅವಕಾಶ ಇದೆ, ಆರ್ ಟಿ. ಎ. ಮತ್ತು ಎಸ್. ಟಿ. ಎ. ಗೆ ಎಷ್ಟು ಅಧಿಕಾರ ಇದೆ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಜೊತೆಗೆ ಪಬ್ಲಿಕ್ ಅಕೌಂಟ್ಸ ಕಮಿಟಿ ಮೆಂಬರಾಗಿ ಅನೇಕ ಆರ್. ಟಿ. ಎ. ಆಫೀಸುಗಳನ್ನು ಇನ್‌ಸ್ಪೆಕ್ಷನ್ ಮಾಡತಕ್ಕ ಕೆಲಸಕ್ಕೆ ಹೋದ ಸಾರಿ ಹೋಗಿದ್ದೆ. ಅಲ್ಲಿರತಕ್ಕ ಕೆಲಸದ ಒತ್ತಡ, ಕೆಲವು ಕಡೆ ಬಹಳ ಜಾಸ್ತಿ ಮತ್ತು ಕೆಲವು ಕಡೆ ಕಡಿಮೆಯಾಗಿರುವುದನ್ನು ನೋಡಿದ್ದೇನೆ ಮತ್ತು ಅದನ್ನು ನಮ್ಮ ರಿಪೋರ್ಟಿನಲ್ಲಿ ಕಾಣಿಸಿದ್ದೇವೆ. ನಮ್ಮ ಮಂತ್ರಿಗಳು ಬೆಂಗಳೂರು ಸಿಟಿಗೆ ಪ್ರತ್ಯೇಕ ಒಂದು ಆರ್. ಟಿ. ಎ. ಆಫೀಸ್ ಮಾಡಬೇಕು ಎಂದು ನಿರ್ಧಾರ ಮಾಡಿದ್ದಾರೆ. ಇದು ಬಹಳ ಕಾಲದ ಹಿಂದೆಯೇ ಆಗಬೇಕಾಗಿತ್ತು. ಈಗಲಾದರೂ ಕೂಡ ಮಂತ್ರಿಗಳು ಇದನ್ನು ಜಾಗ್ರತೆ ಜಾರಿ ಮಾಡುವುದಕ್ಕೆ ತಂದಿದ್ದಾರೆ. . ಇದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕಾಗಿದೆ. ಆರ್. ಟಿ. ಎ. ಅಫೀಸುಗಳಲ್ಲಿ ಸ್ವಾಭಾವಿಕವಾಗಿ ಲೈಸನ್ಸ್ ಕೊಡುವಾಗ ಟೂರಿಸ್ಟ್ ಬಸ್‌ಗಳ, ಕಾಂಟ್ರಾಕ್ಟ್ ಬಸ್ಸುಗಳ ವಿಷಯದಲ್ಲಿ ಪರ್ಮಿಟ್ ಕೊಡುವಾಗ ಸಾಕಷ್ಟು ಲೋಪದೋಷಗಳು ಇವತ್ತು ಕೂಡ ಇವೆ ಎನ್ನುವುದನ್ನು ಮಂತ್ರಿಗಳು ತಿಳಿದುಕೊಂಡಿರಬಹುದು, ನಾವೂ ತಿಳಿದುಕೊಂಡಿದ್ದೇವೆ. ಇದನ್ನು ಸರಿಪಡಿಸುವುದಕ್ಕೆ ಅನೇಕ ಬದಲಾವಣೆಗಳನ್ನು ಈ ಮಸೂದೆಯಲ್ಲಿ ತಂದಿದ್ದಾರೆ. ಇದನ್ನು ಒಪ್ಪಿಕೊಂಡು, ಬಹಳ ಮಟ್ಟಿಗೆ ಹೆಚ್ಚಿನ ಅಧಿಕಾರ ಇಟ್ಟುಕೊಳ್ಳತಕ್ಕಂಥ ಮಟ್ಟಕ್ಕೆ ಕೈಹಾಕಬೇಕಾಗಿದೆ. ಈ ಟ್ಯೂರಿಸ್ಟ್ ಮತ್ತು ಕಾಂಟ್ರಾಕ್ಟ್ ಬಸ್ಸುಗಳಿಗೆ ಲಿಮಿಟೆಡ್ ಸ್ಕೋಪ್ ಇದೆ. ಯಾವ ತರಹದಲ್ಲಿ ಪ್ರತಿದಿನ ಇವರಿಗೆ ಓಡಿಸತಕ್ಕ ಅವಕಾಶ ಬರುತ್ತದೆ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಸ್ವಾಭಾವಿಕವಾಗಿ ಯಾವುದಾದರೊಂದು ಕಾರ್ಯಕ್ಕೋಸ್ಕರ ಪರ್ಮಿಟ್ ತೆಗೆದುಕೊಳ್ಳುವುದು, ವರ್ಷಗಟ್ಟಲೆ ಅದನ್ನು ಉಪಯೋಗಿಸತಕ್ಕ ಅವಕಾಶ ಮಾಡಿಕೊಳ್ಳುತ್ತಿದ್ದಾರೆ, ಅದು ಹೇಗೆ ಆಗುತ್ತಿದೆ ಎನ್ನುವುದನ್ನು ವಿಮರ್ಶೆ ಮಾಡತಕ್ಕದ್ದು ಸ್ವಾಭಾವಿಕವಾಗಿ ಪೋಲೀಸ್ ಡಿಪಾರ್ಟ್ಮೆಂಟಿಗೆ ಸೇರಿದ್ದು. ಪೋಲೀಸ್ ಡಿಪಾರ್ಟ್‌ಮೆಂಟ್ ಮನಸ್ಸು ಮಾಡಿದರೆ ಬಹುಶಃ ಈ ಅಮೆಂಡ್‌ಮೆಂಟ್, ಇನ್ನೊಂದು ಅಮೆಂಡ್‌ಮೆಂಟ್ ಮಾಡುವ ಅಗತ್ಯತೆ ಇಲ್ಲ ಎಂದು ನನಗೆ ಅನ್ನಿಸುತ್ತದೆ. ಇತ್ತೀಚೆಗೆ ನಾನು ಕೇಳಿದ್ದರಲ್ಲಿ ವ್ಯಕ್ತಿಗಳ ಹೆಸರನ್ನು ಬರೆದುಕೊಟ್ಟು ಪರ್ಮಿಟ್ ಪಡೆಯಬೇಕು ಎಂದು ಮನಿತ್ತು ಅದನ್ನು ಹೈಕೋರ್ಟಿಗೆ ಹಾಕಿ, ಹೈಕೋರ್ಟಿನವರು ಸ್ಟೇ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಈ ಸ್ಟೇ ಕೊಟ್ಟರೂ ಕೂಡ, ಅದಕ್ಕಿಂತ ಮುಂದೆ ಈ

(ಶ್ರೀ ಕೆ. ಎನ್. ವೀರಪ್ಪಗೌಡ)

ಬಸ್‌ಗಳಲ್ಲಿರತಕ್ಕ ಜನ ಯಾರು, ಎಲ್ಲಿಗೆ ಹೋಗತಕ್ಕವರು ಎಂದು ನಾಲ್ಕಾರು ಸಾರಿ ಬಸ್ಸು ನಿಲ್ಲಿಸಿ ಅಡ್ರೆಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದರೆ, ಅಧಿಕಾರಿಗಳು ಹೋಗದೇ ಇದ್ದರೂ ಪ್ಯಾಸೆಂಜರ್ಸ್ ಕಡಿಮೆಯಾಗಿ ಓಡಾಡುವುದಕ್ಕೆ ಕಾರಣವಾಗುತ್ತಿತ್ತು, ಆ ಕಾರ್ಯ ಅಷ್ಟಾಗಿ ನಡೆಯಲಿಲ್ಲ. ಹಿಂದೆ ಒಂದು ಸಾರಿ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ, ಇದೇ ಪ್ರಶ್ನೆ ಎತ್ತಿದಾಗ, ಒಂದೇ ದಿವಸ 35 ಬಸ್‌ಗಳನ್ನು ಸಸ್ಪೆಷನ್ ಮಾಡಿದ್ದೇವೆಂದು ಹೇಳಿದ್ದರು. ಹಾಗೇನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಎಂ. ಎಸ್. ಆರ್. ಟಿ. ಸಿ. ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತಿತ್ತು, ನಾನು ನಿನ್ನೆತಾನೆ ಬಸ್‌ನಲ್ಲಿ ಪ್ರಯಾಣ ಮಾಡಿ ಬಂದಿದ್ದೇನೆ. ರಾತ್ರಿ ಹನ್ನೊಂದೂವರೆ ಘಂಟೆಗೆ ಹೊರಟು ಸುಮಾರು 7—8 ಬಸ್‌ಗಳು ಹಿಂದೆ ಮುಂದೆ ಓಡಾಡತಕ್ಕದ್ದನ್ನು ನೋಡಿದ್ದೇನೆ. ಬೀರೂರು ಬುಕ್ಕಿಂಗ್ ಆಫೀಸಿನಲ್ಲಿ ಏಜೆಂಟರು ನಿಂತುಕೊಂಡು „ ನಮ್ಮದು ಇಂಥ ಸರ್ವೀಸು, ಈಗ ಬರುತ್ತದೆ, ನಿಮಗೆ ಅದರಲ್ಲಿ ಜಾಗ ಕೊಡಿಸೋಣ '' ಎಂದು ಹೀಗೆ ಜನಗಳನ್ನು ಕೇಳುವುದಕ್ಕೆ ಬರುವುದನ್ನು ನಾನು ಪ್ರತಿದಿನ ನೋಡುತ್ತಿದ್ದೇನೆ ನಿನ್ನೆ ಕೂಡ ನೋಡಿದ್ದೇನೆ. ಹೀಗೆ ಟೂರಿಸ್ಟ್ ಅನ್ ಕಾಂಟ್ರಾಕ್ಟ್ ಬಸ್‌ಗಳ ಬಗ್ಗೆ ಪ್ರತಿ ಬಸ್‌ಸ್ಟ್ಯಾಂಡಿನಲ್ಲಿ ಬೋರ್ಡು ಹಾಕಿ. ಇಷ್ಟು ಘಂಟೆಗೆ ಇಂತಿಂಥ ಊರಿಗೆ ಬಸ್ ಸರ್ವೀಸ್ ಓಡುತ್ತದೆ ಎಂದು ಆಯಾ ಬುಕ್ಕಿಂಗ್ ಆಫೀಸುಗಳಲ್ಲಿ ಕುಳಿತುಕೊಂಡು ಜನಗಳನ್ನು ಕರೆಯುವುದನ್ನು ಮತ್ತು ಏಜಂಟರುಗಳು ಪ್ಯಾಸೆಂಜರನ್ನು ಬುಕ್ ಮಾಡುವುದನ್ನು ನೋಡಿದ್ದೇನೆ. ಇಷ್ಟು ಕೂಡ ಓಪನ್ ಆಗಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಅಸೆಂಬ್ಲಿ ಸದಸ್ಯರಾಗಿರುವ ನಾವು ಸ್ವಲ್ಪ ತಲೆ ತಗ್ಗಿಸಿ ಮಾತನಾಡಬೇಕಾದ ಕಾಲ ಬಂದಿದೆ. ಇದಕ್ಕೆ ಉಪಾಯ ಕಂಡು ಹಿಡಿಯಬೇಕು ಆರ್.ಟಿ.ಎ.ಗೆ ಇರತಕ್ಕ ಅಧಿಕಾರವನ್ನು ಎಸ್.ಟಿ.ಎ.ಗೆ ಕೊಡಬೇಕು. ಆಗ ಪರ್ಮಿಟ್ಸ್‌ಗಳನ್ನು ಸುಲಭವಾಗಿ ತೆಗೆದುಕೊಳ್ಳತಕ್ಕ ಅವಕಾಶ ಕಡಿಮೆಯಾಗುತ್ತದೆ ಎಂದು ನಮ್ಮ ಮಂತ್ರಿಗಳು ತಿಳಿದುಕೊಂಡು ಈ ತಿದ್ದುಪಡಿಯನ್ನು ತಂದಿದ್ದಾರೆ. ಈಗ ಕೆಲವು ಕಡೆ ನಮ್ಮ ಎಂ.ಎಸ್.ಆರ್.ಟಿ.ಸಿ. ಬಸ್‌ಗಳು ಹೋಗತಕ್ಕ ಟೈಮಿಗೆ ಸರಿಯಾಗಿ ಹೋಗದೇ ಇರುವುದರಿಂದ ಈ ಬಸ್‌ಗಳಿಗೆ ಜಾಸ್ತಿ ಎನ್‌ಕರೇಜ್‌ಮೆಂಟ್ ಸಿಗುತ್ತಿದೆ. ನಾವು ಒಂದು ಸಂದರ್ಭ, ಲಗ್ಸುರಿ ಬಸ್ ಹಾಕಿದರೆ, ನಮ್ಮ ಚಾರ್ಜಿಗೂ, ಅವರ ಚಾರ್ಜಿಗೂ ಬಹಳ ವ್ಯತ್ಯಾಸವಿದ್ದು ಆ ರೀತಿ ಎನ್‌ಕರೇಜ್‌ಮೆಂಟ್ ಕೂಡ ಸಿಗತಕ್ಕದ್ದು ಇದೆ. ಟ್ಯೂರಿಸ್ಟ್ ಆನ್ ಕಂಟ್ರಾಕ್ಟ್ ಬಸ್‌ಗಳನ್ನು ಕಂಟ್ರೋಲ್ ಮಾಡಬೇಕಾದರೆ ಅನೇಕ ರೂಪದಲ್ಲಿ ಇದನ್ನು ವಿಮರ್ಶೆಮಾಡಿ ನೋಡಬೇಕಾಗಿದೆ. ಇದರ ಜೊತೆಗೆ ಟ್ಯೂರಿಸ್ಟ ಕಾರ್ಸ್ ಎಂದು ಬೇರೆ ಇದೆ. ಅದರ ಪರ್‌ಪಸ್ ಏನು, ಯಾವ ಬಗ್ಗೆ ಎಂದು ಇದ್ದರೂ ಕೂಡ ಅವುಗಳು ಯಾವ ರೂಪದಲ್ಲಿ ಓಡಾಡುತ್ತಿವೆ

ಎಂದು ನೋಡಬೇಕು. ಇವತ್ತು ಚಿಕ್ಕಮಗಳೂರು ಬಸ್ ಸ್ಟ್ಯಾಂಡಿನಲ್ಲಿ ಬಸ್‌ಗಳು ನಿಲ್ಲುವುದಕ್ಕೆ ಜಾಗವಿಲ್ಲದಿದ್ದರೂ, ಟ್ಯೂರಿಸ್ಟ್ ಮತ್ತು ಖಾಸಗಿ ಕಾರುಗಳನ್ನು ತಂದು ಅಲ್ಲಿ ನಿಲ್ಲಿಸಿಕೊಂಡು, ಆ ಏಜೆಂಟರಾಗಿ ನೇಮಿಸಿರತಕ್ಕ ಹುಡುಗರು ಕೂಗತಕ್ಕಂಥಾದ್ದನ್ನು ಯಾರೂ ಗುಟ್ಟಾಗಿ ಹೇಳಬೇಕಾದುದಿಲ್ಲ. ಟ್ರಾಫಿಕ್ ಗೋಸ್ಕರ ಪೋಲೀಸರನ್ನು ಬಸ್ ಸ್ಟ್ಯಾಂಡಿನಲ್ಲಿ ಇಟ್ಟಿದ್ದಾರೆ. ಅವರು ಕೂಡ ಅಲ್ಲೇ ಇರುತ್ತಾರೆ. ಈ ರೀತಿ ಕೂಗುವುದು, ಕರೆಯುವುದು, ಒಬ್ಬೊಬ್ಬ ಪ್ಯಾಸೆಂಜರನ್ನು ಬಸ್ ಈಗ ಬರುತ್ತದೆ ಎಂದು ಕೂಡಿಸಿಕೊಳ್ಳುವುದು, ಮತ್ತೊಂದು ಕಡೆ ಹೋಗುವುದು, ಇವೆಲ್ಲವೂ ಕೂಡ ನಮ್ಮ ಮತ್ತು ಅಧಿಕಾರಿಗಳ ಮುಂದುಗಡೆ ನಡೆಯುತಕ್ಕದ್ದನ್ನು ನಾವು ನೋಡಿದಾಗ ಬಹುಶಃ ಈ ಇಲಾಖೆಯನ್ನು ಯಾವ ರೀತಿಯಲ್ಲಿ ಬಿಗಿ ಮಾಡಬೇಕು ಎನ್ನುವುದನ್ನು ನಮ್ಮ ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಬಸ್‌ಗಳಿಗೆ ಪರ್ಮಿಟ್ ಕೊಡುವುದು ರಾಷ್ಟ್ರಾಧ್ಯಕ್ಷರ ಆಡಳಿತದ ಕಾಲದಲ್ಲಿ ಜಾಸ್ತಿ ಆಯಿತು. ಅದಕ್ಕಿಂತ ಮೊದಲು ಇದ್ದ ಟೈಮಿನಲ್ಲಿ ಬಹಳ ಜಾಸ್ತಿ ಇತ್ತು. ನಮ್ಮ ಮಂತ್ರಿಗಳು ಈ ಇಲಾಖೆಯನ್ನು ಕೈಗೆ ತೆಗೆದುಕೊಂಡ ಮೇಲೆ ಬಹಳ ಹೆಚ್ಚಿಗೆ ಪರ್ಮಿಟುಗಳು ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲೋ ಅಲ್ಪ ಸ್ವಲ್ಪ ಕೊಡಬೇಕಾದ ಸಂದರ್ಭ ಬಂದು, ಕೊಟ್ಟಿರಬಹುದು. ಅ ದುರುಪಯೋಗವನ್ನು ನಾವು ನೀವು ಎಲ್ಲರೂ ಸೇರಿ ಕಂಡುಹಿಡಿಬೇಕೇ ವಿನಾ, ಪ್ರತಿಯೊಂದು ಕಡೆಗೂ ಸರ್ಕಾರವೇ ಅಧಿಕಾರಿಗಳನ್ನು ನೇಮಕಮಾಡಿ ಪ್ರತಿ ಸ್ಟೇಜಿನಲ್ಲ ಇಡಬೇಕು ಎಂದರೆ ಬಹುಶಃ ಸರ್ಕಾರದ ಬೊಕ್ಕಸದ ಹಣ ಒಂದೊಂದು ಇಲಾಖೆ ಕಂಟ್ರೋಲ್ ಮಾಡುವುದಕ್ಕೆ ಕೊಟ್ಟರೂ ಸಾಕಾಗುವುದಿಲ್ಲ. ನಾನು ಈ ಅಸೆಂಬ್ಲಿಯಲ್ಲಿ ಇದರ ಬಗ್ಗೆ ಎಷ್ಟೋ ಮಾತನಾಡಿದ್ದೇನೆ. ಅದೇ ರೀತಿ ನಮ್ಮ ನೋಟೀಸಿಗೆ ಬಂದ ತಕ್ಷಣ ಗವರ್ನ್‌ಮೆಂಟಿಗೆ ಬರೆದು ತಿಳಿಸಿ ಪರಿಹಾರ ಕಂಡುಹಿಡಿಯುವುದಕ್ಕೆ ಆಗುತ್ತದೆ ಎಂದು ಸಲಹೆ ನೀಡುವುದು ನಮ್ಮ ಕರ್ತವ್ಯ ಕೂಡ ಇದೆಯೆಂದು ನಾವು ಭಾವಿಸುತ್ತೇವೆ. ನಾನು ಕೆಲವು ಸಂದರ್ಭಗಳಲ್ಲಿ ಇದನ್ನು ಸರ್ಕಾರದ ನೋಟೀಸಿಗೆ ತಂದಿರತಕ್ಕದ್ದು ಇದೆ. ಸರ್ಕಾರದವರೂ ಉತ್ತರ ಕೊಟ್ಟಿರತಕ್ಕದ್ದೂ, ಸ್ವಲ್ಪಮಟ್ಟಿಗೆ ಕಾರ್ಯಗತ ಮಾಡಿರುವುದೂ ನನಗೆ ಗೊತ್ತಿದೆ. ಹಾಗಾಗಿ ಈಗ ಎಲ್ಲಾ ಕಷ್ಟಸುಖಗಳನ್ನೂ ನೋಡಿ ಇವತ್ತು ನಮ್ಮ ಮಂತ್ರಿಗಳು ಏನು ಈ ಬಿಲ್ಲಿಗೆ ಅಮೆಂಡ್‌ಮೆಂಟನ್ನು ತಂದಿದ್ದಾರೆ, ಇದು ಬಹಳ ಸೂಕ್ತವಾಗಿದೆ. ನನಗೆ ಒಂದು ಅನ್ನಿಸುತ್ತದೆ, ಮಾನ್ಯ ಬಂಗಾರಪ್ಪನವರು ಹೇಳಿದಹಾಗೆ ತಪ್ಪಿತಸ್ಥರಿಗೆ ಒಂದು ಸಾರಿ.ಎರಡು ಸಾರಿ, ರಿಯಾಯಿತಿ ಇಡಬೇಕೇ ಬೇಡವೇ. ಈ ರೀತಿ ತಪ್ಪಿತಸ್ಥರಿಗೆ ರಿಯಾಯಿತಿ ಇಡುವುದರಿಂದ ನಾವು ಆಡಳಿತವನ್ನು ಬಿಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡುವುದು ಅಗತ್ಯ ಎಂದು ನನಗನ್ನಿಸುತ್ತದೆ. ಯಾರೇ ತಪ್ಪು ಮಾಡಿದರೂ ಕೂಡ ಅಸೆಂಬ್ಲಿ ಸದಸ್ಯರೇ ಆಗಲೀ ಅವರಿಗೆ ಯಾವ ರಿಯಾಯಿತಿ ಇರಲೇಬಾರದು.

(ಶ್ರೀ ಕೆ. ಎನ್. ವೀರಪ್ಪಗೌಡ)

ಆ ರೀತಿ ಇದ್ದರೆ ಮಾತ್ರ ನಮ್ಮ ಆಡಳಿತ ಸಾಕಷ್ಟು ಬಿಗಿಯಾಗುತ್ತದೆ. ಎಲ್ಲೋ ಆಕ್ಟ್‌ನಲ್ಲಿ, ರೂಲ್ಸ್‌ನಲ್ಲಿ ಒಂದು ಕಡೆ ಪ್ರೊವೈಡ್‌ಮಾಡಿ ಅಧಿಕಾರಿಗಳಿಗೆ ಒಂದು ಅವಕಾಶವನ್ನು ಕೊಟ್ಟರೆ. ಅದು ಆಯಾ ವ್ಯಕ್ತಿಗಳ ಮೇಲೆ, ಆಯಾ ಪ್ರಭಾವದ ಮೇಲೆ ಅಥವಾ ಇನ್ನಾವುದೋ ಕಾರಣದ ಮೇಲೆ ದುರುಪಯೋಗವಾಗುತ್ತದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಅವರು ಏನಾದರೂ ಸಾಕಷ್ಟು ದುರುಪಯೋಗ ಮಾಡಿದ್ದೇ ಆದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮೊಟ್ಟಮೊದಲನೇ ತಪ್ಪಿಗೇನೇ ಶಿಕ್ಷೆ ಕೊಡಬೇಕಾಗುತ್ತದೆ. ಮತ್ತು ಪೋಲೀಸ್‌ನವರೇ ಹಿಡಿದು ಕಾಂಪೌಂಡ್ ಮಾಡಿದ್ದರೆ ಆದರ ಬಗ್ಗೆ ಮಾತನಾಡಬಹುದಾಗಿತ್ತು. ಆ ವಿಷಯ ಬೇರೆಯಾಗುತ್ತದೆ. ಈ ರೀತಿಯಾಗಿ ಸಾಮಾನ್ಯ ಜನರು ಕೆಲಸ ಮಾಡುತ್ತಾ ಇರುವಾಗ ಅವರು ತಪ್ಪು ಮಾಡಿದರೆ ಅದಕ್ಕೆ ಅಲ್ಲೇ ಶೀಘ್ರವಾಗಿ ಪರಿಹಾರ ಕೊಟ್ಟರೆ ಒಳ್ಳೆಯದಾಗುತ್ತದೆ ಅದು ಬಿಟ್ಟು ಅವರನ್ನು ಕೋರ್ಟಿಗೆ ಓಡಾಡಿಸತಕ್ಕದ್ದು ಮಾಡಿದರೆ ಆದರಿಂದ ಅನಾವಶ್ಯಕವಾದ ಖರ್ಚು ಎಲ್ಲರಿಗೂ ಆಗುತ್ತದೆ. ಇದರಿಂದ ಸರ್ಕಾರಕ್ಕೂ ಲಾಭ ಇಲ್ಲ, ಮತ್ತು ಪಾರ್ಟಿಗೂ ಲಾಭ ಇಲ್ಲ. ಆದುದರಿಂದ ಇಂತಹ ಖರ್ಚುಗಳನ್ನು ನಿಲ್ಲಿಸುವುದಕ್ಕೆ ಈ ತಿದ್ದುಪಡಿ ಇರುವುದು ಅನುಕೂಲವಾಗುತ್ತದೆ. ಇದರ ಜೊತೆಗೆ ಇನ್ನೂ ಕೆಲವು ವಿಷಯಗಳ ಬಗ್ಗೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಅತಿ ಮುಖ್ಯವಾದುದು ಎಂದರೆ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ಗೆ ಪರ್ಮಿಟ್ ಕೊಡತಕ್ಕ ಬಗ್ಗೆ ಕೊಟ್ಟಿದ್ದಾರೆ. ಈ ವಿಷಯದಲ್ಲಿ ನಾನು ಹೇಳುವುದಾದರೆ ಯಾವುದಾದರೂ ಮದುವೆ ಮುಂಜಿಗೆ ಕಾಂಟ್ರಾಕ್ಟ್ ಬಸ್ಸನ್ನು ತೆಗೆದುಕೊಂಡು ಹೋಗಬೇಕಾದ್ದಲ್ಲಿ 2–3 ದಿವಸದ ಮೇಲೆ ಬೇಕಾಗಿರುವುದಿಲ್ಲ. ಈಗ ಅಂಥಾದ್ದಕ್ಕೆ ಒಂದು ವಾರದವರೆಗೆ ಪರ್ಮಿಟ್ ತೆಗೆದುಕೊಳ್ಳುತ್ತಾರೆ. ಆದುದರಿಂದ ಅದನ್ನು ಮೊದಲು ತೆಗೆದುಹಾಕಬೇಕು ಎಂದು ನನ್ನ ಸಲಹೆ. ಇದು ಒಂದನೆಯ ಸಲಹೆ.

ಇನ್ನು ಎರಡನೇ ಸಲಹೆ ಏನೆಂದರೆ ಟೂರಿಸ್ಟ್ ಬಸ್ಸಿನ ವಿಷಯ. ನಮ್ಮಲ್ಲಿ ಟೂರಿಸ್ಟ್ ಸೆಂಟರ್‌ಗಳು ಎಷ್ಟು ಇದೆ ಎಂಬುದು ತಮಗೆ ಗೊತ್ತಾಗಿದೆ ಅವುಗಳಿಗೆ ಹೆಚ್ಚು ಪರ್ಮಿಟ್ ಕೊಡತಕ್ಕಂಥಾದ್ದರಲ್ಲಿ ಈಗ ಏನಾಗಿದೆ ಎಂದರೆ ಟೂರಿಸ್ಟ್ ಬಸ್ ಮಧ್ಯೆ ಮಧ್ಯೆ ನಿಂತು ಜನಗಳನ್ನು ಇಳಿಸುವುದು ಮತ್ತು ಪಿಕ್‌ಅಪ್ ಮಾಡುವುದು ಮಾಡುತ್ತಿದ್ದಾರೆ. ಈ ರೀತಿ ಆಗದೇ ಇರುವ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಪೋಲೀಸಿನವರನ್ನು ಇಡುವುದಾಗಲಿ ಅಥವಾ ಇದಕ್ಕೆ ಒಂದು ಸಪರೇಟ್ ಆಗಿ ಟ್ರಾನ್ಸ್‌ಪೋರ್ಟ್ ಇಲಾಖೆಯಿಂದಲೇ ಒಂದು ಸ್ಕ್ವಾಡ್ ಇಟ್ಟು ಒಳ್ಳೆಯ ಅಧಿಕಾರಿಗಳನ್ನು ನೇಮಿಸಿದರೆ ಸರ್ಕಾರಕ್ಕೆ

ಕೋಟ್ಯಾಂತರ ರೂಪಾಯಿ ಲಾಭವಾಗುತ್ತದೆ. ಈಗ ಆಗತಕ್ಕಂಥ ಲುಕ್ಸಾನು ಕಡಿಮೆಯಾಗುತ್ತದೆ. ಇಲ್ಲದೇ ಹೋದರೆ ಎಂ.ಎಸ್.ಆರ್.ಟಿ.ಸಿ. ಬಸ್ಸುಗಳನ್ನು ಹೆಚ್ಚಾಗಿ ಹಾಕಿ ಓಡಾಡಿಸಿದರೂ ಕೂಡ ಹೆಚ್ಚು ಲಾಭವಾಗುತ್ತದೆ. ಅದಕ್ಕೆ ಅವಕಾಶ ಇಲ್ಲದೆ ಹೋದರೆ ನಾನು ಮೊದಲೇ ಹೇಳಿದಂತೆ ಇದರಿಂದ ಸರ್ಕಾರಕ್ಕೆ ಆಗತಕ್ಕ ಲುಕ್ಸಾನನ್ನು ತಪ್ಪಿಸುವುದಕ್ಕೆ ಒಂದು ಸಪರೇಟ್ ಸ್ಕ್ವಾಡ್ ಇಟ್ಟು ಹೆಚ್ಚು ಉತ್ಪನ್ನ ಮಾಡುವುದರ ಕಡೆಗೆ ಗಮನ ಹರಿಸುವುದಕ್ಕೆ ಸರ್ಕಾರದವರು ಯೋಚನೆ ಮಾಡತಕ್ಕಂಥಾದ್ದು ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಇದರ ಬಗ್ಗೆ ಇನ್ನು ಹೆಚ್ಚು ಸಲಹೆಗಳು ಕೊಡತಕ್ಕಂಥಾದ್ದು ಏನು ಇಲ್ಲ. ಈಗ ನಾನು ಹೇಳಿದ ಕೆಲವು ಸಲಹೆಗಳನ್ನು ಸರ್ಕಾರದವರು ವಿಮರ್ಶೆ ಮಾಡುತ್ತಾರೆಂದು ನಂಬಿ ನನಗೆ ಅಧ್ಯಕ್ಷರು ಇಷ್ಟು ಮಾತನಾಡುವುದಕ್ಕೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ :—(ತಿಪಟೂರು) ಸನ್ಮಾನ್ಯ ಉಪಸಭಾಪತಿಗಳೇ, ಮೈಸೂರು ಸರ್ಕಾರದ ಸಾರಿಗೆ ಮಂತ್ರಿಗಳಾದ ಶ್ರೀಮಾನ್ ಅಜೀಜ್ ಸೇಟ್‌ರವರು ಮೋಟಾರ್ ವಾಹನಗಳ (ಮೈಸೂರು ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ತಂದಿದ್ದಾರೆ. ಇದರಲ್ಲಿ ಮೊಟ್ಟ ಮೊದಲನೆಯದಾದ ಒಂದು ಅಂಶವನ್ನು ನಾನು ಅನುಮೋದಿಸುತ್ತಾ, ಸರಕಾರದವರು ಈಗಲಾದರೂ ಇದನ್ನು ಗಣನೆಗೆ ತೆಗೆದುಕೊಂಡು ಈ ಒಂದು ತಿದ್ದುಪಡಿಯನ್ನು ತಂದಿದ್ದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಇದು ಅತಿ ಮುಖ್ಯವಾಗಿ ಆಗ ಬೇಕಾದಂಥ ತಿದ್ದುಪಡಿ ಏತಕ್ಕೆಂದರೆ ದೇಶದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿ ಆಗುತ್ತಾ ಇರುವುದರಿಂದ ಅದರಲ್ಲೂ ಬೆಂಗಳೂರು ನಗರದಲ್ಲಿ ಬಹಳ ಹೆಚ್ಚಾಗಿ ಆಗಿರುವುದರಿಂದ ಅವುಗಳು ವಿವಿಧ ರೀತಿಯಲ್ಲಿರುವುದರಿಂದ ಅವನ್ನು ಸರಿಯಾದ ರೀತಿಯಲ್ಲಿ, ಒಂದು ಕ್ರಮವಾದ ರೀತಿಯಲ್ಲಿ ಇಡಬೇಕು, ಆ ಬಗ್ಗೆ ಒಂದು ಪ್ರತ್ಯೇಕವಾದ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸನ್ನು ಇಲ್ಲಿ ಮಾಡಬೇಕು ಎಂದು ತಂದಿದ್ದಾರೆ, ಅದು ಬಹಳ ಸಂತೋಷದ ವಿಚಾರ. ಇದರಲ್ಲಿ ನನ್ನ ಒಂದು ಸಲಹೆ ಏನೆಂದರೆ ಬೆಂಗಳೂರಿನಲ್ಲಿ ಇದಕ್ಕೆ ಒಂದು ಪ್ರತ್ಯೇಕವಾದ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸನ್ನು ಹೇಗೆ ಮಾಡುತ್ತಿರೋ ಅದೇ ರೀತಿಯಾಗಿ ಉಳಿದ ಜಿಲ್ಲೆಗಳನ್ನೂ ಸೇರಿಸಿ ಅದನ್ನು 2 ವಿಭಾಗ ಮಾಡಿ ಅಂದರೆ ದಕ್ಷಿಣ ವಿಭಾಗ ಮತ್ತು ಉತ್ತರ ವಿಭಾಗ ಅಂತ ಮಾಡಿ ಇನ್ನು 2 ಆಫೀಸುಗಳನ್ನು ಮಾಡಿದರೆ ಬಹುಶಃ ಎಲ್ಲಾ ಕೆಲಸಗಳೂ ಕೂಡ ತೀವ್ರ ಗತಿಯಲ್ಲಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಅಜೀಜ್ ಸೇಟ್ :—ಪ್ರತಿ ಜಿಲ್ಲೆಯಲ್ಲೂ ಆರ್. ಟಿ. ಎ. ಆಫೀಸ್ ಇದೆ. ಈಗ ನಾವು ಮಾಡುತ್ತಾ ಇರುವುದು ಬೆಂಗಳೂರಿಗೇನೇ ಒಂದು ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸ್ ಮಾಡಬೇಕು ಎಂದು.

ಶ್ರೀ ಟಿ. ಎಂ ಮಂಜುನಾಥ್ :—ಅದನ್ನು ನಾನು ಅನುಮೋದಿಸುತ್ತೇನೆ. ಈ ಬಗ್ಗೆ ಅಧ್ಯಕ್ಷರ ಮುಖಾಂತರ ಒಂದು ವಿಷಯವನ್ನು ಸರಕಾರದ ಗಮನಕ್ಕೆ ತರ ಬಯಸುತ್ತೇನೆ. ಅದೇನೆಂದರೆ ಈ ರೀತಿಯಾಗಿ ತಿದ್ದುಪಡಿಯನ್ನು ತಂದು ಸಭೆಯ ಮುಂದೆ ಇಟ್ಟರೆ ಸಾಲದು. ಅನೇಕ ಮಸೂದೆಗಳನ್ನು ಈ ರೀತಿಯಾಗಿ ಸಭೆಯ ಮುಂದೆ ಇಟ್ಟಿದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಈ ಮಸೂದೆಯಲ್ಲಿರುವಂತೆ ಕಾರ್ಯಕ್ರಮಗಳು ಸರಿಯಾಗಿ ನಡೆಯುತ್ತಾ ಇವೆಯೋ ಎನ್ನುವುದನ್ನು ಪರಿಶೀಲನೆ ಮಾಡುವುದಾದರೆ ಸ್ವಲ್ಪವೂ ಸಹಿತ ನಡೆಯುತ್ತಾ ಇಲ್ಲ. ಈ ಕಂಟ್ರಾಕ್ಟ್ ಕ್ಯಾರಿಯೇಜಸ್ ಬಗ್ಗೆ ಈಗ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಈಗ ಇದಕ್ಕೆ ಪರ್ಮಿಟ್ ಕೊಡುವ ಅಧಿಕಾರವನ್ನು ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಗೆ ಇದ್ದುದನ್ನು ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಗೆ ಕೊಡ ಬೇಕು ಅನ್ನುವ ಸಲಹೆ ತಂದಿದ್ದಾರೆ ಎಂದು ನನಗೆ ಅನಿಸುತ್ತದೆ. ಆದುದರಿಂದ ನಾನು ಹೇಳುವುದು ಮೊದಲು ಯಾವ ರೀತಿ ಇತ್ತೋ ಅದೇ ರೀತಿ ಇದ್ದರೆ ಅನು ಕೂಲ ಎಂದು ಹೇಳುತ್ತೇನೆ. ಈ ವಿಷಯದ ಬಗ್ಗೆ ಅನೇಕ ಮಿತ್ರರು ಕೂಡ ಹೇಳಿದ್ದಾರೆ. ಆದರೆ ನನ್ನ ಸ್ವಂತ ಅಭಿಪ್ರಾಯ ಹೇಳುವುದಾದರೆ ಮತ್ತು ದೇಶದಲ್ಲಿ ಬಹು ಜನಗಳು ಸಾರಿಗೆ ಬಸ್ಸಿಗಿಂತ ಖಾಸಗೀ ಬಸ್ಸಿನಲ್ಲಿ ಹೆಚ್ಚು ಪ್ರಯಾಣ ಮಾಡು ತ್ತಾರೆ. ಕಾರಣ ಅದರಲ್ಲಿ ಹೆಚ್ಚು ಸೌಕರ್ಯ ಸಿಕ್ಕುತ್ತದೆ ಎಂದು. ಮತ್ತು ನಿಮ್ಮ ಸಾರಿಗೆ ಬಸ್ಸುಗಳು ಎಲ್ಲೆಲ್ಲಿ ಓಡಾಡುತ್ತಿವೆಯೋ ಅಲ್ಲಲ್ಲಿ ಕೆಲವು ಕಡೆ ನಿಮ್ಮ ಸಾರಿಗೆ ಬಸ್ಸುಗಳು ಸಿಕ್ಕದೆ ಜನಗಳು ಏನು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಎನ್ನುವುದನ್ನು ನಾವು ನೋಡಿದ್ದೇವೆ ಒಂದೊಂದು ಕಡೆ ರಸ್ತೆ ಪಕ್ಕದಲ್ಲಿ 20-30 ಮಂದಿ ನಿಂತುಕೊಂಡು ದಾರಿಯಲ್ಲಿ ಯಾವ ಕಾರುಗಳು ಮತ್ತಿತರ ವಾಹನಗಳು ಹೋಗುತ್ತವೆಯೋ ಅವಕ್ಕೆ ಕೈ ತೋರಿಸಿ ಅದನ್ನು ನಿಲ್ಲಿಸಿ ಆದರಲ್ಲಿ ಬರುವು ದನ್ನು ನೋಡುತ್ತಾ ಇದ್ದೇವೆ. ಸರ್ಕಾರ ಇದನ್ನು ಗಮನಿಸಬೇಕು ಜನತೆಯ ಬೇಡಿಕೆ ಇಷ್ಟೆ. ಜನರಿಗೆ ಸಾರಿಗೆ ಸೌಕರ್ಯವನ್ನು ಕಲ್ಪಿಸಬೇಕಾದರೆ ಅವರಿಗೆ ಅದ ರಲ್ಲಿ ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಈ ಬಗ್ಗೆ ತಾವು ಯೋಚನೆ ಮಾಡಬೇಕು. ಈವೊತ್ತಿನ ದಿವಸ ನಾವು ನೋಡುತ್ತಾ ಇದ್ದೇವೆ ಈ ಸರ್ಕಾರಿ ಬಸ್ಸಿಗಿಂತ ಖಾಸಗೀ ಬಸ್ಸುಗಳಲ್ಲೇ ಜನರು ಪ್ರಮಾಣ ಮಾಡುತ್ತಾರೆ. ಈವೊತ್ತಿನ ದಿವಸ ಈ ಕಾಂಟ್ರಾಕ್ಟ್ ಕ್ಯಾರಿಯೇಜಸ್ ಇಲ್ಲದೇ ಹೋಗಿದ್ದ ಪಕ್ಷದಲ್ಲಿ ಈ ಮನೆ ಯಲ್ಲಿರತಕ್ಕಂಥ ಅನೇಕ ಸದಸ್ಯರು ಬೊಬ್ಬೆ ಇಡಬೇಕಾದ ಪ್ರಸಂಗ ಬರುತ್ತಿತ್ತು. ನನ್ನ ವಿಷಯವನ್ನೇ ಹೇಳುವುದಾದರೆ ನನಗೆ ಸರ್ಕಾರೀ ಬಸ್ಸಿನಲ್ಲಿ ತಿರುಗಾಡು ವುದಕ್ಕೆ ಪುಕ್ಕಟೆಯಾಗಿ ಪಾಸು ಕೊಟ್ಟಿದ್ದರೂ ಸಹಿತ ನಾನು ಅನೇಕ ಸಂದರ್ಭಗಳಲ್ಲಿ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ನಲ್ಲೇ ಪ್ರಯಾಣ ಮಾಡಿ ದ್ದೇನೆ. ಕಾರಣ ಎಂ. ಎಸ್. ಆರ್. ಟಿ ಸಿ. ಬಸ್ಸಿನಲ್ಲಿ ಅಷ್ಟೊಂದು ಸೌಲಭ್ಯ ಇಲ್ಲ. ಕಾರಣ ಶ್ರೀಮಾನ್ ಬಂಗಾರಪ್ಪನವರೂ ಕೂಡ ಹೇಳಿದ್ದಾರೆ.

ಅದು ಏನೆಂದರೆ ಸಕಾಲಕ್ಕೆ ಸರಿಯಾಗಿ ಬಸ್ಸು ಓಡುವುದಿಲ್ಲ ಮತ್ತು ಅಲ್ಲಿ ಇರತಕ್ಕಂಥ ಅಧಿಕಾರಿಗಳು ಸರಿಯಾಗಿ ವರ್ತನೆ ಮಾಡುತ್ತಾ ಇಲ್ಲ ಎಂದು ಹೇಳಿದ್ದಾರೆ. ಬಹುಶಃ ನಮ್ಮ ಮಂತ್ರಿಗಳು ಈಗ ಏನು ತಿದ್ದುಪಡಿ ತಂದಿದ್ದಾರೆ ಇದರಲ್ಲಿ ಏನಾದರೂ ಹೆಚ್ಚಿಗೆ ಪ್ರಗತಿ ಆಗಬೇಕು. ಆದುದರಿಂದ ಈಗ ನಾವು ಹೇಳಿದ ಮಾತುಗಳನ್ನು ಅವರು ಮರೆಯಬಾರದು. ಅನೇಕ ಸಂದರ್ಭಗಳಲ್ಲಿ ಎಂ. ಎಸ್. ಆರ್. ಟಿ. ಸಿ. ನೌಕರ ವರ್ಗದವರು ಸರಿಯಾಗಿ ವರ್ತನೆ ಮಾಡುತ್ತಾ ಇಲ್ಲ. ಈ ವರ್ಷ ಎಂ. ಎಸ್. ಆರ್. ಟಿ. ಸಿಯಲ್ಲಿ ಹೆಚ್ಚು ಪ್ರಾಫಿಟ್ ಬಂದಿದೆ ಎಂದು ಹೇಳುತ್ತಾರೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಒಬ್ಬ ಖಾಸಗೀ ಮನುಷ್ಯ 1½ ಲಕ್ಷ ರೂಪಾಯಿ ಬಂಡವಾಳ ಹಾಕಿ ಒಂದು ಕಾಂಟ್ರಾಕ್ಟ್ ಕ್ಯಾರಿಯೇಜನ್ನು ಕೊಂಡುಕೊಂಡು ಓಡಾಡಿಸುತ್ತಾನೆ. ಅದರಲ್ಲಿ ಅವನು ತನ್ನ ಸಾಲಸೋಲಗಳನ್ನು ತೀರಿಸಿ ಆ ಒಂದು ಬಸ್ಸಿನಲ್ಲೇ ದುಡಿದು ಲಾಭ ಮಾಡ ಬೇಕಾದರೆ ಇನ್ನು ಈಗಿರತಕ್ಕಂಥ ಎಂ. ಎಸ್. ಆರ್. ಟಿ. ಸಿ. ಬಸ್ಸಿನಲ್ಲಿ ಎಷ್ಟು ಲಾಭ ಬರಬೇಕು ಅನ್ನುವುದನ್ನು ಯೋಚನೆ ಮಾಡಿ. ಈವೊತ್ತಿನ ದಿವಸ ಶ್ರೀಮಾನ್ ಬಂಗಾರಪ್ಪನವರು ತಮ್ಮ ಭಾಷಣದಲ್ಲಿ ಹೇಳಿದರು, ಸರ್ಕಾರದ ಬಸ್ಸಿನಲ್ಲಿ ಒಂದು ದರ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ನಲ್ಲಿ ಒಂದು ದರ, ಖಾಸಗೀ ಬಸ್ಸಿನಲ್ಲಿ ಒಂದು ದರ ಇದೆ ಎಂದು. ರಾಷ್ಟ್ರೀಕೃತ ಮಾಡಿರುವ ರೂಟ್‌ಗಳಲ್ಲೂ ಕೂಡ ಕಾಂಟ್ರಾಕ್ಟ್ ಕ್ಯಾರಿಯೇಜಸ್ ಬಸ್ಸುಗಳು ಓಡಾಡುತ್ತ ಇವೆ. ಆ ಬಸ್ಸು ಖಾಸಗೀಯವರದ್ದು. ಆದರೆ ಅದರಲ್ಲಿರುವ ಸೌಲಭ್ಯಗಳು ಎಂ. ಎಸ್. ಆರ್. ಟಿ. ಸಿ. ಬಸ್ಸಿನಲ್ಲಿ ದೊರಕುತ್ತಾ ಇಲ್ಲ ಎಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಎಂ. ಎಸ್. ಆರ್. ಟಿ. ಸಿಯಲ್ಲಿರುವ ನೌಕರ ವರ್ಗದವರ ಅದಕ್ಷತೆ ಮತ್ತು ಅಪ್ರಾಮಾಣಿಕತೆಯಿಂದ ಈರೀತಿ ಆಗುತ್ತಾ ಇದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಪ್ರಾವಿಷನ್ ಫಾರ್ ಪರ್ಮಿಟ್ಸ್‌ನಲ್ಲಿ ಮೋಟಾರ್ ವೆಹಿಕಲ್ಸ್‌ಗಳಿಗೆ ಪರ್ಮಿಟು ಇಷ್ಯೂ ಮಾಡುವ ಬಗ್ಗೆ ಯಾವರೀತಿ ಮಾಡಬೇಕು ಎಂದು ಇದೆ. ಪರ್ಮಿಟ್ಸ್ ಇಷ್ಯೂ ಮಾಡಬೇಕಾದರೆ ಅಲ್ಲಿ ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯಲ್ಲಿ ಮೀಟಿಂಗ್ ನಡೆಯುತ್ತದೆ. ಅಲ್ಲಿ ಮೆಂಬರ್ಸ್ ಇರುತ್ತಾರೆ ಅವರಿಗೆ ಯಾರಿಂದ ಇನ್‌ಫ್ಲುಯೆನ್ಸ್ ಬರುತ್ತದೆಯೋ ಅಂಥಾವರಿಗೆ ಪರ್ಮಿಟ್ ಸಿಕ್ಕುತ್ತದೆ ನಿಜವಾಗಿ ಲೈಸನ್ಸ್ ಯಾರಿಗೆ ಸಿಗಬೇಕೋ ಅವರಿಗೆ ಸಿಗುತ್ತಾ ಇಲ್ಲ. ಈರೀತಿ ಅನೇಕ ಅವ್ಯವಹಾರಗಳು ನಡೆಯುತ್ತವೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪು ಮಾಡುತ್ತಾ ಇರುವುದರಿಂದ ಕಾನೂನು ಪ್ರಕಾರ ಯಾವರೀತಿ ನಡೆಯಬೇಕೋ ಆ ರೀತಿ ಆಗುತ್ತಾ ಇಲ್ಲ. ಉದಾಹರಣೆ ಒಬ್ಬ ಖಾಸಗೀ ಮನುಷ್ಯ ಒಂದು ಹೊಸ ಲಾರಿಯನ್ನು ತಂದ. ಅವನು ಕಾನೂನು ಪ್ರಕಾರ ಏನು ಸೆಸ್ ಕಟ್ಟ ಬೇಕೋ ಅದನ್ನು ಕಟ್ಟಿದ್ದಾನೆ. ಒಂದು ಲಾರಿಗೆ ಇಷ್ಟು ಟನ್ ತುಂಬುವಂಥ

(ಶ್ರೀ ಟಿ. ಎಂ. ಮಂಜುನಾಥ)

ಲಾರಿಗೆ ಇಷ್ಟು ಸೆಸ್ ಕಟ್ಟಬೇಕು ಅಂತ ಇದೆ, ಅದರಂತೆ ಕಟ್ಟಿದ್ದಾನೆ. ಅದನ್ನು ಅಧಿಕಾರಿಗಳು ಇನ್‌ಸ್ಪೆಕ್ಷನ್ ಮಾಡಿದ್ದಾರೆ. ಅವನಿಗೆ ಅದಕ್ಕೆ ಇಷ್ಟೇ ಸೆಸ್ ಕಟ್ಟಬೇಕು ಅಂತ ಅಧಿಕಾರಿಗಳು ಬರೆದು ಕೊಟ್ಟಿದ್ದಾರೆ. ಅವನ ಹತ್ತಿರ ಚಲನ್ಸ್ ಕಟ್ಟಿಸಿದ್ದಾರೆ. ಅನಂತರ ಅವನಿಗೆ ಬ್ಯಾಡ್ಜಸ್ ಇಷ್ಯೂ ಮಾಡಿದ್ದಾರೆ ಹೀಗಿದ್ದರೂ ಕೂಡ ಅವನು ಲಾರಿಯನ್ನು ಓಡಿಸುವಾಗ ಹಾಸನದಲ್ಲಿ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯ ಅಧಿಕಾರಿಗಳು ಅವನನ್ನು ಹಿಡಿದುಕೊಂಡು ಅವನಿಗೆ ಒಂದು ನೋಟೀಸ್ ಕೊಟ್ಟರು. ಸ್ಟೇಟ್ ಟ್ರಾನ್ಸ್‌ಪೋರ್ಟ್ ಆಫೀಸರು ಈಗ ಇಲ್ಲಿಗೆ ಬಂದಿದ್ದಾರೆ, ಈ ವಿಷಯವನ್ನು ಅವರ ಗಮನಕ್ಕೂ ಕೂಡ ತಂದಿದ್ದೇನೆ.

5-0(P. M.

ಲಾರಿಯ ಮಾಲೀಕರಿಗೆ ಪರ್ಮಿಟ್ ಕೊಡುವುದಕ್ಕೆ ಎಷ್ಟು ಕಟ್ಟಬೇಕೆಂದು ಪುಸ್ತಕದಲ್ಲಿ ಇದೆಯೋ ಆ ರೀತಿ ಪರ್ಮಿಟ್ ಸರಿಯಾಗಿ ಹಣ ಕಟ್ಟಿದ್ದರೂ ಸಹಿತ ಅವರಿಗೆ 1750 ರೂಪಾಯಿ ಪೆನಾಲ್ಟಿ ಹಾಕಿದ್ದೇವೆಂದು ನೋಟೀಸ್ ಕೊಟ್ಟಿದ್ದಾರೆ. ಅಧಿಕಾರಿಗಳು ಮಾಡಿರುವ ತಪ್ಪಿಗೆ ಖಾಸಗಿಯವರಿಗೆ ಎಷ್ಟರಮಟ್ಟಿನ ತೊಂದರೆಯಾಗುತ್ತದೆ ಎಂಬ ಈ ಒಂದು ವಿಚಾರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಅಧಿಕಾರಿಗಳು ಮಾಡಿರತಕ್ಕ ತಪ್ಪಿಗೆ ಲಾರಿ ಓನರ್‌ಗೆ ಶಿಕ್ಷೆ ಆಗಬೇಕೇ ಅಥವಾ ಅಲ್ಲಿರತಕ್ಕ ಆರ್. ಟಿ. ಓ. ಗೆ ಶಿಕ್ಷೆ ಆಗಬೇಕೇ ಎನುವುದನ್ನು ತಾವು ಯೋಚನೆ ಮಾಡಿ. ಈ ತಪ್ಪಿಗೆ ಏನು ಕಾರಣ ಎಂದರೆ ಇದರ ಬಗ್ಗೆ ಅಧಿಕಾರಿಗಳು ಸೂಕ್ಷ್ಮವಾಗಿ ಮತ್ತು ಸರಿಯಾಗಿ ನೋಡದೆ ಇರುವುದರಿಂದ ಖಾಸಗಿಯವರಿಗೆ ತೊಂದರೆಯಾಗುತ್ತದೆ ಈ ರೀತಿ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ವ್ಯವಸಾಯಕ್ಕಾಗಿ ರೈತರು ಟ್ರೈಲರ್ ಮತ್ತು ಟ್ರಾಕ್ಟರ್‌ಗಳನ್ನು ಉಪಯೋಗಿಸುತ್ತಾರೆ. ನಮ್ಮ ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಒಬ್ಬರು ಟ್ರಾಕ್ಟರ ಮತ್ತು ಟ್ರೈಲರನ್ನು ಉಪಯೋಗಿಸುತ್ತಿದ್ದಾರೆ. ಅವರು ಮನೆಗೆ ಬೇಕಾದ ನಾಶಿದೆ ಮತ್ತು ಸಾಮಾನುಗಳನ್ನು ತೆಗೆದುಕೊಂಡು ಹೋಗಬಾರದು ಮತ್ತು ತೋಟಕ್ಕೆ ಮರಳು ಮತ್ತು ಮಣ್ಣು ತುಂಬಿಕೊಂಡು ಹೋಗಬಾರದು ಎಂದು ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ವ್ಯವಸಾಯದ ಕೆಲಸ ಮಾಡುವ ಜಾಗಕ್ಕೆ ಕೂಲಿಕಾರರನ್ನು ಸಹಿತ ಕೂಡಿಸಿಕೊಂಡು ಹೋಗಕೂಡದೆಂದು ಹೇಳುತ್ತಾರೆ. ಈ ರೀತಿ ರೈತನಿಗೆ ಹೇಳಿದರೆ ಅವರ ವ್ಯವಸಾಯಕ್ಕೆ ಎಷ್ಟು ತೊಂದರೆಯಾಗುತ್ತದೆಂದು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಅವರ ತೋಟಗಳಲ್ಲಿ ಬೆಳೆದ ಧವಸ ಧಾನ್ಯಗಳನ್ನು ಮನೆಗೆ ಸಾಗಿಸಬಾರದು ಮತ್ತು ಅವನು ಬೆಳೆದ ಸಾಮಾನು

ಗಳನ್ನು ಮನೆಗೆ ತೆಗೆದುಕೊಂಡು ಹೋಗಬಾರದು ಎಂದು ಹೇಳುವ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ರೈತರಿಗೆ ಸಹಾಯ ಮಾಡುವಂತಹ ಉದ್ದೇಶದಿಂದ ಸರ್ಕಾರದವರು ಪರ್ಮಿಟ್ ಇಷ್ಯೂ ಮಾಡಬೇಕು.

ಇನ್ನು ಆಕ್ಸಿಡೆಂಟ್‌ಗಳ ವಿಚಾರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಡ್ರೈವಿಂಗ್ ಲೈಸನ್ಸ್ ಇಷ್ಯೂ ಮಾಡುವಾಗ ಸರಿಯಾದ ರೀತಿಯಲ್ಲಿ ಅವರನ್ನು ಟೆಸ್ಟ್ ಮಾಡಿ ಲೈಸೆನ್ಸ್ ಕೊಡುವುದಿಲ್ಲ. ಅವನಿಗೆ ಸರಿಯಾದ ಡ್ರೈವಿಂಗ್ ಕಂಟ್ರೋಲ್ ಇರುವುದಿಲ್ಲವಾದ್ದರಿಂದ ದಿನಬೆಳಗಾದರೆ ಅನೇಕ ಆಕ್ಸಿಡೆಂಟ್ಸ್ ಆಗಿರುವುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಮುಖ್ಯವಾಗಿ ಓವರ್ ಸ್ಪೀಡ್ ಇದಕ್ಕೆ ಕಾರಣ. ಎಷ್ಟೋ ಚಾಲಕರುಗಳಿಗೆ ಮತ್ತು ಡ್ರೈವರ್‌ಗಳಿಗೆ ಯಾವ ರೀತಿ ಡ್ರೈವ್ ಮಾಡಬೇಕು, ಎಷ್ಟು ವೇಗದಲ್ಲಿ ಹೋದರೆ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದು ಸಹ ಅವರಿಗೆ ಅನುಭವ ಇರುವುದಿಲ್ಲ ಮತ್ತೆ ಯಾವುದಾದರೂ ಬಸ್ಸು ಕೆಟ್ಟು ಹೋದರೆ ಅದನ್ನು ರಿಪೇರಿ ಮಾಡುವುದಕ್ಕೆ ಬರುವುದಿಲ್ಲ. ಇಂಥ ಕೆಲಸಗಾರರನ್ನು ಇಟ್ಟುಕೊಂಡಿದ್ದಾರೆ

ತಮಗೆ ಕೇಳಿಕೊಳ್ಳುವುದೇನೆಂದರೆ ಡ್ರೈವಿಂಗ್ ಲೈಸೆನ್ಸ್ ಕೊಡುವಾಗ ಸರಿಯಾದ ರೀತಿಯಲ್ಲಿ ಅವನನ್ನು ಪರೀಕ್ಷೆ ಮಾಡಿ ಅವನಿಗೆ ವಾಹನವನ್ನು ನಡೆಸುವ ಯೋಗ್ಯತೆ ಇದೆಯೋ ಎಂಬುದನ್ನು ನೋಡಿ ಲೈಸೆನ್ಸ್ ಇಷ್ಯೂ ಮಾಡುವುದು ಒಳ್ಳೆಯದು. ಸ್ವಾಮಿ ಸರ್ಕಾರದವರು ಹಲವಾರು ವಾಹನ ಸೌಕರ್ಯವನ್ನು ಒದಗಿಸುತ್ತೇವೆಂದು ಹೇಳಿದರೂ ಆ ಶಕ್ತಿ ತಮಗೆ ಇನ್ನು ಬಂದಿರುವುದಿಲ್ಲವೆಂದು ಹೇಳಿ ಈಗ ಕಾಂಟ್ರ್ಯಾಕ್ಟ್ ಕ್ಯಾರೇಜ್ ಪರ್ಮಿಟ್ ರದ್ದು ಮಾಡುವುದು ಏನು ತಂದಿದ್ದೀರಿ, ಅದ ದಯವಿಟ್ಟು ಈಗ ಬೇಡ ಎಂದು ಹೇಳುತ್ತೇನೆ. ಇನ್ನು ಲೈಸೆನ್ಸ್ ಇಷ್ಯೂ ಮಾಡುವ ಅಧಿಕಾರ ಆರ್. ಟಿ. ಓ. ಗೆ ಏನು ಇದೆ ಅದನ್ನು ಹಾಗೆಯೇ ಮುಂದುವರಿಸಿ, ಅದು ಅವರಿಗೆ ಇರಬೇಕು. ದಯವಿಟ್ಟು ಆ ಅಧಿಕಾರವನ್ನು ಎಸ್. ಟಿ. ಎ. ಗೆ ಕೊಡಬಾರದು ಎಂದು ಹೇಳುತ್ತೇನೆ.

* ಶ್ರೀ ಕೆ. ಶ್ರೀರಾಮುಲು : ಮಾನ್ಯ ಅಧ್ಯಕ್ಷರು, ಸರ್ಕಾರ ತಂದಿರತಕ್ಕ ತಿದ್ದುಪಡಿ ಬಿಲ್ಲು ಏನು ಇದೆ ಈ ಬಿಲ್ಲನ್ನು ಒಪ್ಪಿಕೊಳ್ಳುತ್ತಾ ಅದರಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಈ ಬಿಲ್ಲು ಬರಬೇಕಾಗಿತ್ತೇ ಎಂದು ನನ್ನ ಮನಸ್ಸಿಗೆ ಬಂತು. ಕಾರಣವಾದರೂ ಇಷ್ಟೇ ಮಂತ್ರಿ ಮಂಡಲ ಇತ್ತೀಚೆಗೆ ಆದಷ್ಟು ಸರ್ಕಾರದ ಆಡಳಿತದ ಖರ್ಚನ್ನು ಕಡಿಮೆಮಾಡಿ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂದು ಯೋಚನೆ ಮಾಡಿರುವ ಸಂದರ್ಭದಲ್ಲಿ ಈ ರೀತಿಯಾದ ಬಿಲ್ಲಿನ ಅವಶ್ಯಕತೆ ಇತ್ತೆ ಎಂದು ನನ್ನ ಮನಸ್ಸಿಗೆ ಅನಿಸುತ್ತದೆ. ಇಲ್ಲಿಯೂ ಅನೇಕ ಸಂದರ್ಭಗಳಲ್ಲಿ ಹೇಳಿರುವುದು ಮತ್ತು ಪತ್ರಿಕೆ

(ಶ್ರೀ ಕೆ. ಶ್ರೀರಾಮುಲು)

ಗಳಲ್ಲಿಯೂ ಬಂದಿದೆ ಅದು ಅಲ್ಲದೆ ನಮ್ಮ ಹಿರಿಯ ನಾಯಕರು ಸಹಿತ ಇದೇ ರೀತಿಯ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಸರ್ಕಾರದ ಆಡಳಿತ ಕಡಿಮೆ ಖರ್ಚಿನಲ್ಲಿ ನಡೆಸಬೇಕೆಂದು ಇಚ್ಛೆಪಟ್ಟಿರತಕ್ಕಂಥ ಇಂಥ ಸಮಯದಲ್ಲಿ ಇಂಥ ಒಂದು ಬಿಲ್ಲು ಈಗಲೇ ಬರಬೇಕಾಗಿತ್ತೇ ಎಂದು ನನ್ನ ಮನಸ್ಸಿಗೆ ಬರುತ್ತಿದೆ. ಆದರೂ ಉತ್ತಮ ಆಡಳಿತ ಮಾಡುವ ದೃಷ್ಟಿಯಿಂದ ಒಳ್ಳೆಯ ಆಡಳಿತ ಕಂಟ್ರೋಲ್ ಇರಬೇಕಾಗಿದೆ. ಆದ್ದರಿಂದ ಬೆಂಗಳೂರಿಗೆ ಮಾತ್ರ ಈ ಬಿಲ್ಲನ್ನು ಏರ್ಪಡಿಸಿದ್ದಾರೆ ಇದು ಸ್ವಾಗತಾರ್ಹ. ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತರುವುದು ಇಷ್ಟೇ. ಇದರಲ್ಲಿ ನನ್ನ ಪ್ರಶ್ನೆಯಾದರೂ ಇಷ್ಟೇ. ಈ ಆಡಳಿತ ಯಂತ್ರ ಸರಿಯಾದಂಥ ರೀತಿಯಲ್ಲಿ ಕೆಲಸ ಮಾಡಬೇಕು ಅದರಿಂದ ಎಲ್ಲರಿಗೂ ಅನುಕೂಲವಾಗಬೇಕು, ಅದಕ್ಕೆ ಅನುಗುಣವಾದಂತಹ ಮಸೂದೆ ಆಗಬೇಕು ಎಂದು ಹೇಳುತ್ತೇನೆ. ತಾವು ವಾಹನ ಸೌಕರ್ಯವನ್ನು ಮಾಡುವುದಕ್ಕೆ ಮೊದಲು ಬಸ್ಸಿನಲ್ಲಿ ಪ್ರಯಾಣ ಮಾಡತಕ್ಕಂಥ ಹೆಣ್ಣು ಮಕ್ಕಳಿಗೆ ಬಾತ್ ರೂಂ ಸೌಕರ್ಯ ಮಾಡಬೇಕು. ಈಗ ಅವರ ಅನುಕೂಲ ಕ್ಕೋಸ್ಕರ ಬಾತ್ ರೂಮುಗಳನ್ನು ಎಲ್ಲೂ ಏರ್ಪಡಿಸಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ. ಈ ಸೌಕರ್ಯವನ್ನು ಏರ್ಪಡಿಸಿದರೆ ಹೆಣ್ಣುಮಕ್ಕಳು ಸುಗಮವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕೆ ಅವಕಾಶವಾಗಬಹುದು ಎನ್ನುವ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಸಾಮಾನ್ಯವಾಗಿ 10-15 ಗಂಟೆಗಳ ಕಾಲ ಪ್ರಯಾಣ ಮಾಡುವಾಗ ಅವರ ಪರಿಸ್ಥಿತಿಯನ್ನು ತಾವು ಯೋಚನೆ ಮಾಡಿ ಇಂಥ ವಿಷಯಗಳಿಗೆ ಹೆಚ್ಚಿನ ಗಮನಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ಕೆಲಸಕಾರ್ಯಗಳನ್ನು ಮಾಡಲು ತಮಗೆ ಖರ್ಚುಬರುತ್ತದೆ ಅದಕ್ಕೆ ಸಿಬ್ಬಂದಿಗೆ ಸಂಬಳ ಹೆಚ್ಚಿಗೆ ಕೊಡಬೇಕಾಗುತ್ತದೆ ಎನ್ನುವುದಿದ್ದರೆ ಬೇಕಾದರೆ ಅದಕ್ಕೆ ಹೆಚ್ಚಿಗೆ 10 ಪೈಸೆ ಆಗಿ ತೆಗೆದುಕೊಳ್ಳಿ. ಅದರಿಂದ ಹೆಣ್ಣು ಮಕ್ಕಳಿಗೂ ಅನುಕೂಲವಾಗುತ್ತದೆ ಮತ್ತು ಅದಕ್ಕೆ ನೇಮಕಮಾಡತಕ್ಕ ಇನ್ನು ಒಬ್ಬರಿಗೆ ಜೀವನಕ್ಕೆ ಮಾರ್ಗಮಾಡಿ ಕೊಟ್ಟಂತಾಗುತ್ತದೆ ಎಂದು ನನ್ನ ಅಭಿಪ್ರಾಯ. ಉತ್ತಮ ಆಡಳಿತ ನಡೆಸಬೇಕು ಬೆಂಗಳೂರಿನಲ್ಲಿ ಒತ್ತಡ ಇದೆ, ಅದಕ್ಕೆ ಅನುಕೂಲ ಮಾಡಬೇಕೆಂದು ಪ್ರಯತ್ನ ಪಟ್ಟಿದ್ದೀರೆಂದು ಕಾಣುತ್ತದೆ. ಮದ್ರಾಸ್ ರಾಜ್ಯದಲ್ಲಿ ಬಹುತ: ಇದೇ ರೀತಿ ಇದೆ ಇನ್ನೊಂದು ವಿಷಯ. ಆಟೋ ರಿಕ್ಷಾ ಮತ್ತು ಟ್ಯಾಕ್ಸಿಗಳು ನಮಗೆ ಬೇಕಾದಾಗ ನಾವು ಕರೆದ ಕಡೆಗೆ ಬರುವುದಕ್ಕೆ ಅವರು ತಯಾರಿಲ್ಲ, ಇದು ನನಗೆ ಅನುಭವವಾಗಿದೆ ಆ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಬೆಂಗಳೂರಿನಲ್ಲಿ ಸಂಜೆ ಆರು-ಏಳು ಗಂಟೆಯಾದಮೇಲೆ, ಆಟೋರಿಕ್ಷಾ ಹವರು ನಾವು ಕರೆದ ಕಡೆಗೆ ಬರುವುದಿಲ್ಲ. ಟ್ಯಾಕ್ಸಿಯವರು ಕೂಡ ನಾವು ಕರೆದ ಕಡೆಗೆ ಬರುವುದಿಲ್ಲ. ಸರ್ಕಾರದವರು ಇವರಿಗೆ ಪರ್ಮಿಟ್ಸ್ ಕೊಡುತ್ತಾ ಇದ್ದೀರಿ, ಇವರ ಮೇಲೆ ಸರ್ಕಾರಕ್ಕೆ ಯಾವ ತರಹ ಅಥಾರಿಟಿಯೂ ಇಲ್ಲ. ಇವರಿಗೆ

ಮದ್ರಾಸ್‌ನಲ್ಲಿ ಲೈಸನ್ಸ್ ಕೊಡುವಾಗ ಯಾವರೀತಿ ಕಂಟ್ರೋಲ್ ಇಟ್ಟುಕೊಂಡಿರುತ್ತಾರೆಯೋ ಹಾಗೆ ಇಲ್ಲಿಯೂ ಒಂದು ಕಂಟ್ರೋಲ್ ಹಾಕಿ ಕೊಡಬೇಕು. ಆಟೋರಿಕ್ಷಾಗಳನ್ನು ನಾವು ಎಲ್ಲಿಗೆ ಕರೆಯುತ್ತೇವೆಯೋ ಅಲ್ಲಿಗೆ ಅವರು ಬರಬೇಕು, ಅವರು ಬರುವುದಿಲ್ಲ ಎಂದರೆ ಅವರಿಗೆ ಲೈಸನ್ಸ್ ಏಕೆ ಕೊಡಬೇಕು ? ಒಂದು ಪಕ್ಷ ಅವರು ನಾವು ಕರೆದ ಕಡೆ ಬಂದರೆ, ಅವರು ಹೇಳುವಷ್ಟು ಚಾರ್ಜ್ ಕೊಡಬೇಕಾಗುತ್ತದೆ ಆದ್ದರಿಂದ ಬೆಂಗಳೂರಿನಲ್ಲಿ ವಿಭಾಗ ಅಧಿಕಾರಿಗಳನ್ನು ನೇಮಿಸಬೇಕು ಎಂದು ನಾನು ಹೇಳುತ್ತೇನೆ. ನೀವು ನೇಮಿಸತಕ್ಕ ವಿಭಾಗ ಅಧಿಕಾರಿಗಳ ಜೊತೆಯಲ್ಲಿ ಈ ಸಮಸ್ಯೆಗಳನ್ನೆಲ್ಲಾ ಚರ್ಚೆ ಮಾಡಿ, ಒಂದು ಕಾನೂನನ್ನು ತಂದು ಆಟೋರಿಕ್ಷಾಗಳನ್ನು ನಾವು ಎಲ್ಲಿಗೆ ಕರೆದರೂ ಬರುವಂತೆ ಮಾಡಬೇಕು; ಇಲ್ಲದಿದ್ದರೆ ಲೈಸನ್ಸ್ ಕೊಡುವುದಿಲ್ಲ ಎಂದು ಹೇಳಬೇಕು. ಈಗ ಆ ರೀತಿ ಮಾಡದೆ, ಬರೀ ಅಧಿಕಾರಿಗಳನ್ನು ನೇಮಕ ಮಾಡಿಕೊಂಡು, ಡಿಪಾರ್ಟ್‌ಮೆಂಟ್‌ಅನ್ನು ಹೆಚ್ಚಿಗೆ ಮಾಡಿಕೊಂಡು ಸರ್ಕಾರಕ್ಕೆ ದುಡ್ಡು ಖರ್ಚಾಗುತ್ತದೆಯೇ ವಿನಹ ಜನಗಳಿಗೆ ಇದರಿಂದ ಯಾವ ಅನುಕೂಲವಾಗಿಲ್ಲ. ನನ್ನ ಅಭಿಪ್ರಾಯದಲ್ಲಿ, ಇದರಿಂದ ಇದರಿಂದ ಜನಗಳಿಗೆ ಅನುಕೂಲವಾಗಬೇಕು. ಸರ್ವೆಸಾಧಾರಣವಾಗಿ ಟ್ಯಾಕ್ಸಿಯಲ್ಲಿ, ಆಟೋರಿಕ್ಷಾದಲ್ಲಿ ಓಡಾಡುವ ಜನಗಳಿಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ನನ್ನ ಅನುಭವದಿಂದ ಹೇಳುತ್ತಾ ಇದ್ದೇನೆ. ಆದ್ದರಿಂದ ತಾವು ಮುಂದೆಯಾದರೂ ಕೂಡ ಇಂಥ ಬಿಲ್‌ಗಳನ್ನು ತರುವುದರ ಜೊತೆಗೆ, ಆಟೋರಿಕ್ಷಾಗಳವರು ನಾವು ಕರೆದ ಕಡೆ ಬಾರದೆ ಇರತಕ್ಕವರಿಗೆ 15 ದಿವಸಗಳ ಕಾಲ ಅವರ ಲೈಸನ್ಸ್‌ನ್ನು ಸಸ್ಪೆಂಡ್ ಮಾಡುತ್ತೇವೆ ಎನ್ನುವುದಕ್ಕೆ ಒಂದು ಬಿಲ್ಲನ್ನು ತರಬೇಕು, ಇದರಿಂದ ಜನಗಳಿಗೆ ಅನುಕೂಲವಾಗುತ್ತದೆ.

ಕೊನೆಯದಾಗಿ, ನಾನು ಮೊದಲೆ ಹೇಳಿದಂತೆ, ಬಸ್‌ಗಳಲ್ಲಿ 400-500 ಮೈಲಿ ಪ್ರಯಾಣ ಮಾಡತಕ್ಕ ಹೆಣ್ಣುಮಕ್ಕಳಿಗೆ, ಯಾವುದಾದರೂ ಒಂದು ಕಡೆ ಬಾತ್ ರೂಮುಗಳ ವ್ಯವಸ್ಥೆಯನ್ನು ಮಾಡಬೇಕು, ಟ್ಯಾಕ್ಸಿ ಮತ್ತು ಆಟೋರಿಕ್ಷಾಗಳಿಗೆ ಕಂಡಿಷನಲ್ ಪರ್ಮಿಟ್ಸ್ ಕೊಡಬೇಕು, ಮತ್ತು ಯಾರಾದರೂ ಇವರುಗಳ ಮಾಡುವ ತಪ್ಪಿನಮೇಲೆ ಕಪ್ಲೆಂಟ್ಸ್ ಬರೆದರೆ ಟ್ಯಾಕ್ಸಿ ಓನರ್ಸ್‌ಗೆ ಆಗಲೀ, ಅಥವಾ ಡ್ರೈವರ್ಸ್‌ಗಾಗಲೀ, ಅವರ ಲೈಸನ್ಸ್‌ಅನ್ನು 15 ದಿವಸಗಳ ಕಾಲ ರದ್ದು ಮಾಡುವುದಕ್ಕೆ ಪ್ರಯತ್ನ ಪಟ್ಟರೆ ಸಾರ್ವಜನಿಕರಿಗೆ ನಿಮ್ಮ ಇಲಾಖೆಯಿಂದ ಹೆಚ್ಚಿನ ಅನುಕೂಲವಾದಂತಾಗುತ್ತದೆ, ಮತ್ತು ನಿಮಗೆ ಒಳ್ಳೆಯ ಹೆಸರೂ ಬರುತ್ತದೆ ಎಂದು ಹೇಳಿ ಈ ಬಿಲ್ಲನ್ನು ಸ್ವಾಗತಿಸಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ) : ಅಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು ಮೋಟಾರು ವಾಹನಗಳ ಕಾಯಿದೆ 1939 ಕ್ಕೆ ಇವತ್ತಿನ ದಿವಸ

(ಶ್ರೀ ಸಿ ಬೈರೇಗೌಡ)

ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿರತಕ್ಕ ಮೂಲ ತತ್ವವನ್ನು ನಾನು ಸ್ವಾಗತಿಸುತ್ತೇನೆ. ಸ್ವಾಗತಿಸುತ್ತಾ, ಈ ಕಾಯಿದೆಯಿಂದ ಸರ್ಕಾರ ಏನನ್ನು ಸಾಧಿಸಬೇಕಾಗಿತ್ತೋ ಅದನ್ನು ಸಾಧಿಸುತ್ತಿಲ್ಲ ಆದ್ದರಿಂದ ಈಗ ನಾನು ಕೆಲವು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೂ ಸರ್ಕಾರಕ್ಕೂ ತಿಳಿಸಬಯಸುತ್ತೇನೆ. ಮೂಲಭೂತವಾಗಿ ಕಾಂಟ್ರ್ಯಾಕ್ಟ ಕ್ಯಾರೇಜ್‌ಸ್‌ಗೆ ಪರ್ಮಿಟ್ಸ್ ಕೊಡುವಾಗ ಎರಡು ಮಿತಿಯನ್ನು ಹಾಕುತ್ತಾರೆ ಇದು ಸ್ವಾಗತಾರ್ಹ. ಈ ಮಿತಿಯನ್ನು ಹೇಗೆ ಪರಿಪಾಲಿಸುತ್ತಾರೆ ಎನ್ನುವುದಕ್ಕೆ ನಾನು ಒಂದು ಉದ್ಧಾಹರಣೆಯನ್ನು ಕೊಡಬೇಕಾಗಿದೆ. ಮಾನ್ಯ ಮಂತ್ರಿಗಳು ಒಂದು ಸಾರಿ ಕೋಲಾರಕ್ಕೆ ಬಂದಿದ್ದರು, ಅವೊತ್ತಿನ ದಿವಸ ಬೆಂಗಳೂರು—ಕೋಲಾರಕ್ಕೆ ಓಡಾಡುವ ಎಲ್ಲಾ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳನ್ನು ನಿಲ್ಲಿಸಿದ್ದರು. ಇದರ ಪರಿಣಾಮವಾಗಿ ಎಂ ಎಸ್. ಆರ್. ಟಿ. ಸಿ. ಯವರು ಎಕ್ಸಟ್ರಾ ಟ್ರಿಪ್ಸ್ ಕೂಡ ಮಾಡಲಿಲ್ಲ. ಆ ಒಂದು ದಿವಸದ ಆದಾಯ ಎಂ ಎಸ್. ಆರ್. ಟಿ. ಸಿ. ಗೆ ಐದು ಸಾವಿರ ರೂಪಾಯಿ ಹೆಚ್ಚಾಗಿ ಬಂತು. ಇದನ್ನು ನಾವು ಸ್ವಲ್ಪ ಗಮನಿಸುವುದಾದರೆ ಕೇವಲ 50-60 ಮೈಲಿಗೆ, ಒಂದು ದಿವಸಕ್ಕೆ ಐದು ಸಾವಿರ ರೂಪಾಯಿ ನಷ್ಟವಾಗುತ್ತಿದೆ ಎಂದು ಗೊತ್ತಾಗುತ್ತದೆ; ಮತ್ತು ಒಂದು ವರ್ಷಕ್ಕೆ 15 ಲಕ್ಷ ರೂ. ಗಳು 50 ಮೈಲಿಯಲ್ಲಿ ನಷ್ಟವಾಗುತ್ತದೆ ಎಂದಾಗುತ್ತದೆ. ಅದೇ ರೀತಿಯಲ್ಲಿ ರಾಜ್ಯಾದ್ಯಂತ ನಾವು ಹೋಲಿಸುವುದಾದರೆ, ಎಂ. ಎಸ್. ಆರ್. ಟಿ. ಸಿ. ಗೆ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ನಷ್ಟವಾಗುತ್ತದೆ. ಎಂದಹಾಗಾಗುತ್ತದೆ. ಇದನ್ನು ಸರಿಪಡಿಸತಕ್ಕ ಜವಾಬ್ದಾರಿ ರಾಜ್ಯಸರ್ಕಾರದ್ದು, ಇದು ಸರ್ಕಾರದ ಮೊದಲನೆಯ ಕರ್ತವ್ಯ. ಮಂತ್ರಿಗಳು ನನ್ನ ಅಭಿಪ್ರಾಯದಲ್ಲಿ ಈಗತಾನೇ ಗಾಢ ನಿದ್ದೆಯಿಂದ ಎಚ್ಚೆತ್ತು ಬಂದಿರುವಂತೆ ಕಾಣುತ್ತದೆ. ಇದನ್ನು ನಾವು ಸರ್ಕಾರದ ಗಮನಕ್ಕೆ ತಂದರೂ ಕೂಡ ಕುಂಭಕರ್ಣನ ರೀತಿಯಲಿ ಮಂತ್ರಿಗಳು ನಿದ್ದೆ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ಈಗಲಾದರೂ ಇಂಥ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದರಲ್ಲಿ ತಪ್ಪು ಮಾಡಿದವರಿಗೆ, ಅವರ ಪರ್ಮಿಟ್ ಅನ್ನು ಸಸ್ಪೆಂಟ್ ಮಾಡುವುದು, ಮತ್ತು ಪರ್ಮಿಟ್ ಅನ್ನು ಕ್ಯಾನ್ಸಲ್ ಮಾಡುವುದು ಎಂದು ಇದೆ. ಇಂಥ ಸಂದರ್ಭಗಳಲ್ಲಿ ಯಾವ ರೀತಿಯಲ್ಲಿ ನಡೆಯುತ್ತದೆ. ಎಂದು ಹೇಳಬೇಕಾದರೆ, ಅಧಿಕಾರಿಗಳು ಯಾವ ರೀತಿ ತಪ್ಪು ಮಾಡಿದವರ ಮೇಲೆ ಕೇಸ್ ಹಾಕುತ್ತಾರೆ ಎಂದು ಹೇಳುವುದಕ್ಕೆ ಒಂದು ಉದಾಹರಣೆಯನ್ನು ಕೊಡಬೇಕಾಗಿದೆ. ಎಂ. ಎಸ್. ಆರ್. ಟಿ. ಸಿ. ಯಲ್ಲಿರುವ ವ್ಯವಸ್ಥೆ ಪೋಲೀಸ್ ಇಲಾಖೆಯಲ್ಲಿರುವ ವ್ಯವಸ್ಥೆ ಎಂದು ವಿವರಿಸಬೇಕಾಗಿದೆ. ಹೊಸ ಕೋಟೆ ಹತ್ತಿರ ಸಾಮಾನ್ಯವಾಗಿ ಎಂ. ವೈ. ಎಫ್. 101 ನೇ ನಂಬರಿನ ಜೀಪು ನಿಂತಿರುವುದನ್ನು ನಾವು ನೋಡಬಹುದು ಅದು

ಇಲ್ಲದಿದ್ದರೆ, ಎಂ. ವೈ ಎಫ್. 99 ನೇ ನಂಬರಿನ ಜೀಪು ನಿಂತಿರುತ್ತದೆ. ಪ್ರತಿಯೊಂದು ಬಸ್‌ಗಳನ್ನು ಕೂಡ ಅಲ್ಲಿ ಐದು ನಿಮಿಷ ನಿಲ್ಲಿಸುತ್ತಾರೆ. ಈ ರೀತಿ ನಿಲ್ಲಿಸುವುದು ಏಕೆ ಏನು ಸಮಾಚಾರ ಎಂದು ಕೇಳಿದರೆ ಬಸ್ಸಿನವರು 50 ರೂಪಾಯಿ, 100 ರೂಪಾಯಿಗಳನ್ನು ಅವರಿಗೆ ಕೊಟ್ಟೆ ಎಂದು ಹೇಳುತ್ತಾರೆ. ಇದು ಹೊಸಬರು ಬಂದಾಗ ಹೊಸ ಹೊಸದಾಗಿ ಬದಲಾವಣೆ ಯಾಗುತ್ತದೆ. ಅಂದರೆ ಇನ್ನೂ ಜಾಸ್ತಿ ಕೊಡಬೇಕಾಗುತ್ತದೆ. ಈ ಅಧಿಕಾರಿ ಗಳು, ಇವರ ಮೇಲೆ ಕೇಸನ್ನು ಬುಕ್ ಮಾಡುವುದಿಲ್ಲ. 50 ಜನ ಓವರ್‌ಲೋಡ್ ಇದ್ದರೆ, ಐದು ಜನ ಓವರ್‌ಲೋಡ್ ಇದ್ದಾರೆ ಎಂದು ಕೆಲವು ಸಾರಿ ಕೇಸ್ ಬುಕ್ ಮಾಡುತ್ತಾರೆ. ಈ ರೀತಿ ಕೇಸ್ ಬುಕ್ ಮಾಡಿದರೆ, ಇವರಿಗೆ ಹೆಚ್ಚಿನ ಪೆನಾಲ್ಟಿ ಆಗುವುದಿಲ್ಲ. ಆದ್ದರಿಂದ ಇವರು ಕಡಿಮೆ ಓವರ್ ಲೋಡ್ ಎಂದು ಬರೆಯುತ್ತಾರೆ. ಅಷ್ಟೇ ಅಲ್ಲದೆ ಎಂ.ಎಸ್.ಆರ್.ಟಿ.ಸಿಯಲ್ಲಿ ಐದು ಜನರ ಒಂದು ಫ್ಲೈಯಿಂಗ್ ಸ್ಕ್ವಾಡ್ ಇದೆ. ಇವರಿಗೆ ಒಂದೊಂದು ತಿಂಗಳಿಗೆ 130 ರೂಪಾಯಿ ಸಂದಾಯವಾಗುತ್ತದೆ. ಇದನ್ನು ನಾನು ಅಂಕಿ ಅಂಶಗಳ ಮೂಲಕ ಹೇಳುತ್ತೇನೆ. ಈ ಫ್ಲೈಯಿಂಗ್ ಸ್ಕ್ವಾಡ್‌ನಲ್ಲಿ ಯಾರು ಇದ್ದಾರೆ. ಎಂದರೆ ಪೋಲೀಸ್ ಅಧಿಕಾರಿಗಳು ಇದ್ದಾರೆ, ಎಂ. ಎಸ್. ಆರ್. ಟಿ. ಸಿ. ಅಧಿಕಾರಿಗಳು ಇದ್ದಾರೆ. ಅಲ್ಲಿರತಕ್ಕ ಸಬ್‌ಇನ್ಸ್‌ಪೆಕ್ಟರ್ ಜೀಪಿನಿಂದ ಇಳಿಯುವುದೇ ಇಲ್ಲ. ಒಬ್ಬ ಕಾನ್ಸಟೇಬಲ್ ನಿಂತುಕೊಂಡು ನೋಡಿ 50 ಸೀಟು ಓವರ್‌ಲೋಡ್ ಇದ್ದರೂ ಒಂದೂ ಇಲ್ಲ ಎಂದು ಹೇಳುತ್ತಾನೆ. ಇಂಥ ಆದಾಯ ಎಷ್ಟೋ ಪೋಲೀಸ್ ಸ್ಟೇಷನ್‌ನಲ್ಲಿ ಇದೆ. ಪ್ರತಿ ತಿಂಗಳಿಗೆ ಈ ಅಧಿಕಾರಿಗಳಿಗೆ 50 ರೂಪಾಯಿ ಸಂದಾಯವಾಗುತ್ತದೆ. ಸಬ್‌ಇನ್ಸ್‌ಪೆಕ್ಟರ್ ಸ್ವಲ್ಪ ಜಬರ್‌ದಸ್ತಾಗಿ ದ್ದರೆ, 100 ರಿಂದ 150 ರೂಪಾಯಿಗಳವರೆಗೂ ಸಂದಾಯವಾಗುತ್ತದೆ. ಕಂಟ್ರಾಕ್ಟ ಕ್ಯಾರೇಜಸ್‌ನವರು ಈ ರೀತಿಯಾಗಿ ಹಣವನ್ನು ಅಧಿಕಾರಿಗಳಿಗೆ ಕೊಡುತ್ತಿದ್ದಾರೆ. ಇಂಥ ವ್ಯವಹಾರದಲ್ಲಿ, ಲಂಚಗುಳಿತನದಲ್ಲಿ ಮುಲಗಿ ನಿದ್ದೆ ಮಾಡತಕ್ಕ ಅಧಿಕಾರಿಗಳು ಇರುವಾಗ ಇವರು ಒಂದು ಪರ್ಮಿಟ್ ಅನ್ನು ಕ್ಯಾನ್ಸಲ್ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಮಾಡಿದ್ದೇ ಆದರೆ ಎಂ. ಎಸ್. ಆ.ಟಿ.ರ್‌ಸಿ.ಗೆ ಕೋಟ್ಯಾಂತರ ರೂಪಾಯಿಗಳ ಆದಾಯ ಬರುತ್ತದೆ. ಎಂ.ಎಸ್. ಆರ್.ಟಿ.ಸಿ.ಯು ವ್ಯವಸ್ಥೆ ಜನತೆಗೋಸ್ಕರ ಇರುವ ವ್ಯವಸ್ಥೆ. ಇಂಥಾದ್ದಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಈಗ ಇವರು ಹಿಂದೆ ನಮ್ಮ ಪಕ್ಷ ಅಧಿಕಾರದಲ್ಲಿರಲಿಲ್ಲ, ಎಂದು ಒಂದು ಉದಾಹರಣೆಯನ್ನು ಹೇಳುತ್ತಾರೆ. ಯಾವ ಪಕ್ಷವೇ ಅಧಿಕಾರದಲ್ಲಿರಲಿ, ಎಂ. ಎಸ್. ಆರ್. ಟಿ. ಸಿ. ಒಂದೇ. ಸರ್ಕಾರ ಮಾಡಿದಂಥ ತಪ್ಪನ್ನು ತಿದ್ದಬೇಕಾಗಿರತಕ್ಕದ್ದು, ಸಮಾಜವಾದವನ್ನು ಹೇಳತಕ್ಕ ನಿಮ್ಮ ಸರ್ಕಾರದ ಮೊದಲನೆಯ ಕರ್ತವ್ಯ. ಈಗ ಬೆಂಗಳೂರಿನಿಂದ ಕೆ. ಜಿ. ಎಫ್. ಕೋಲಾರಕ್ಕೆ ಸುಮಾರು 100 ಬಸ್‌ಗಳು ಓಡಾಡುತ್ತಿವೆ. ಇದ್ದ

(ಶ್ರೀ ಸಿ. ಬೈರೇಗೌಡ)

ರಿಂದ ಸರ್ಕಾರದ ಬಸ್‌ಗಳಿಗೆ ಏನಾಗುತ್ತದೆ. ಎಂದರೆ, ಇದಕ್ಕೆ ಒಂದು ನಿದರ್ಶನವನ್ನು ಕೊಡಬೇಕಾಗಿದೆ. ನಾನು ಮೊನ್ನೆ ಹೊಸ ಕೋಟೆಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದೆ. ನರಸಾಪುರದಲ್ಲಿ ನಾನು ಇಳಿಯಬೇಕಾಗಿತ್ತು. ನಾನು ಇಳಿದೆ, ಅಲ್ಲಿ ಒಬ್ಬರು ಮಾತ್ರ ಉಳಿದಿದ್ದರು. ಅದು ಎಕ್ಸ್‌ಪ್ರೆಸ್ ಬಸ್ಸು. ಆದರೆ ಆ ಬಸ್ಸಿನ ಹಿಂದೆ ಮುಂದೆ ನೋಡಿದರೆ ಕಾಂಟ್ರ್ಯಾಕ್ಟ್ ಕ್ಯಾರೇಜ ಹೋಗುವುದರಲ್ಲಿ ಫುಟ್ ಬೋರ್ಡಿನ ಮೇಲೆ ನಿಂತು ಜನ ಪ್ರಯಾಣ ಮಾಡುವರು. ಕೋಲಾರದಿಂದ ಬೆಂಗಳೂರಿಗೆ ಕಾಂಟ್ರ್ಯಾಕ್ಟ್ ಕ್ಯಾರೇಜಿನಲ್ಲಿ ಚಾರ್ಜು 2 ರೂಪಾಯಿಗಳು, ಅದೇ ಸರಕಾರಿ ಬಸ್ಸಿನಲ್ಲಿ ಸುಮಾರು 3 ರೂಪಾಯಿ ಇರಬಹುದು. ಖಾಸಾಗಿಯುವರು ಕಡಿಮೆ ಬಸ್ಸುಗಳನ್ನು ಓಡಿಸಿದರೂ ಕೂಡ ಲಾಭ ಪಡೆಯುತ್ತಿದ್ದಾರೆ. ಆದರೆ ಇಂದು ಸರಕಾರಿ ಬಸ್ಸುಗಳನ್ನು ನೋಡಿದರೆ ದುರವಸ್ಥೆ, ದುರಾಡಳಿತ ಕಂಡು ಬರುತ್ತಿದೆ, ಚಾರ್ಜ್ ಹೆಚ್ಚಾಗಿದ್ದರೂ ನಷ್ಟವಾಗುತ್ತಿದೆ, ಇದಕ್ಕೆ ಸರಕಾರದ ದುರಾಡಳಿತವೇ ಕಾರಣ. ಪ್ರಯಾಣಕರಿಗೆ ಟಿಕೆಟ್ ಇಲ್ಲದಿದ್ದರೆ ಕೋರ್ಟಿಗೆ ಕರೆದುಕೊಂಡು ಹೋಗಿ 2 ರೂಪಾಯಿ ಜುಲ್ಮಾನೆ ಹಾಕಿಸುವರು. ಸರಕಾರಿ ಬಸ್ಸುಗಳಲ್ಲಿ ಕುಳಿತ ತಪ್ಪಿಗೆ ಜನರು ಜುಲ್ಮಾನೆ ತರಬೇಕು.

† SRI AZEEZ SAIT.—In one breath they want that strict control should be maintained and there should be no pilferage. In another breath they do not want me to take action against the passengers who collude with conductors and travel without tickets. I cannot understand this socialism of theirs.

MR. DEPUTY SPEAKER.—I can understand provided the hon. member had intimated by way of a letter or representation to the Minister concerned or the Chief Minister.

SRI AZEEZ SAIT.—All that I want to say is that they are saying this so that it will come in the press.

ಶ್ರೀ ಕೋಣಂದೂರು ಲಿಂಗಪ್ಪ.—ಸರಕಾರಿ ಬಸ್ಸುಗಳಲ್ಲಿ ಜನರು ಕೇಳಿ ಟಿಕೆಟ್ ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿದ್ದರೆ ತಪ್ಪು ಅವರದೇ, ಜೈಲಿಗೆ ಕಳಿಸುವರು,

MR. DEPUTY SPEAKER.—The hon. member is trying to be effective. I could have understood if he had intimated the matter by way of representation or letter or by organising local agitation or protest. If he says that he had written a letter on such and such a date and had not received even an acknowledgement, that would have been still more effective.

SRI KONANDUR LINGAPPA.—On a point of order, Sir

ಸಿ. ಬೈರೇಗೌಡ ;—ಪರ್ಮಿಟ್ ಕೊಡುವುದನ್ನು ಕಂಟ್ರೋಲ್ ಮಾಡಲು ಹೊರಟಿದ್ದಾರೆ. ಪರ್ಮಿಟ್ ಇಲ್ಲದೆ ಇಂದು ಅನೇಕ ಬಸ್ಸುಗಳು ಓಡಾಡುತ್ತಿವೆ ಇಲ್ಲಿಂದ ಕೆ. ಜಿ. ಎಫ್ ವರೆಗೆ ಎಲ್ಲೂ ನಿಲ್ಲದೆ ಎಸ್ಸುಗಳು ಓಡುತ್ತಿವೆ. ಅಲ್ಲಿಂದ ಬೆಂಗಳೂರಿಗೆ ಬರುವುವು, ಅವರನ್ನು ಕೇಳುವವರೇ ಇಲ್ಲ, ಪರ್ಮಿಟ್ ಇಲ್ಲದೆ ಓಡಿಸುತ್ತಿದ್ದಾರೆ. ಸರಕಾರದವರೇನು ಮಾಡುತ್ತಿದ್ದಾರೆ ಈ ದಿವಸ? ಅವರು ಮಾತೆತ್ತಿದರೆ ಈ ಮಂತ್ರಿಗಳ ಹೆಸರನ್ನು ಹೇಳುವರು. ಏನು ಅಪಹಾಸ್ಯ ಇದು? ಮಂತ್ರಿಗಳ ವಿಚಾರ ಬಸ್ಸಿನಲ್ಲಿ ಮಾತನಾಡುವ ಮಟ್ಟಿಗೆ ಇಳಿದರೆ ನಾವು ಸರಕಾರದ ಮಂತ್ರಿಗಳಲ್ಲೆಷ್ಟು ನಂಬಿಕೆ ಇಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ :—Point of order, Sir, ಮಂತ್ರಿಗಳು ಕಾಗದ ಬರೆಯುವುದಿಲ್ಲ, ಪ್ರೆಸ್‌ನಲ್ಲಿ ಬರಲಿ ಎಂದು ಇದೆಲ್ಲಾ ಇಲ್ಲಿ ಹೇಳುವರು ಎಂದು ಮಾತೆತ್ತಿದರೆ ಹೇಳುವರು. ನಮ್ಮ ಜನರು ತಿಳಿಯಲೆಂದು ನಾವು ಇಲ್ಲಿ ಮಾತನಾಡುವುದು.

MR. DEPUTY SPEAKER : The hon. member Sri Lingappa appears to be eager for a ruling. We must take the import of what the Hon. Minister said. He said that there is no representation in black and white from the hon. member in regard to this matter. If he had represented to the Minister or Government about it, that would have had more force. In the absence of a letter or representation to the Minister in the matter, when he is suddenly raising it on the floor of the House, the Hon. Minister said that he is doing so for some other purpose. There is nothing to say that he is not justified in saying so. We must not make a mountain out of a mole hill. It is perfectly justified to make an accusation and it is equally justified to rebut it. Otherwise, the debate will be lifeless.

ಶ್ರೀ ಬಿ. ಪುಟ್ಟಸ್ವಾಮಯ್ಯ : ಮಾನ್ಯ ಸದಸ್ಯರ ಹಕ್ಕಿಗೆ ಚ್ಯುತಿ ತರುವ ವಿಚಾರ ಮಂತ್ರಿಗಳು ಹೇಳಿದ್ದಾರೆ ಅದನ್ನು ಅವರು ವಾಪಸ್ಸು ಪಡೆಯಬೇಕು. ತಮ್ಮ ಮೂಲಕ ಸರಕಾರಕ್ಕೆ ಹೇಳುವ ಹಕ್ಕು ನಮಗಿದೆ. ಜಟಕ ಹೊಡೆಯುವವರು ಹೇಳುವಂತೆ ಹೇಳುವುದು ಸರಿಯಲ್ಲ, ಇದು ಮಂತ್ರಿಗಳು ಹೇಳುವ ಮಾತಲ್ಲ. ಆದುದರಿಂದ ಅವರು ಹೇಳಿದುದನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ನಮಗೆ ಸೂಚನೆ ಕೊಡುವಂತೆ ಅಧ್ಯಕ್ಷರು ಮಂತ್ರಿಗಳಿಗೂ ಕೊಟ್ಟು ಅವರನ್ನು ಹಿಡಿತದಲ್ಲಿಡಬೇಕಾದ್ದು ಅವರ ಕರ್ತವ್ಯ.

ಶ್ರೀ ಕೆ. ಹೆಚ್ ಹನುಮೇಗೌಡ : ಎಂ. ಎಸ್.ಆರ್.ಟಿ.ಸಿ.ಯ ಅನೀತಿಯ ಬಗ್ಗೆ ಜನರಿಗಾಗುತ್ತಿರುವ ತೊಂದರೆಯ ಬಗ್ಗೆ ಅನೇಕಸಲ ಪ್ರಸ್ತಾಪಮಾಡಲಾಗಿದೆ. ಪಬ್ಲಿಕ್ಕಾಗಿ ಹೇಳಿದ್ದಾರೆ. ಹಾಗಿರುವಾಗ ಮಂತ್ರಿಗಳು ಕಷ್ಟ ಗಮನಕ್ಕೆ ತರ ಬೇಕಾಗಿತ್ತು ಎಂದು ಹೇಳುವರು. ಇದನ್ನು ಹೇಳುತ್ತಿರುವುದು ಸಾವಿರದೊಂದನೇ ಸಾರಿ. ಅವರು ಜನರಲ್ಲಿ ವಿಶ್ವಾಸವಿಟ್ಟು ಲೋಪದೋಷಗಳನ್ನು ಸರಿಪಡಿಸಬೇಕು.

ಶ್ರೀ ಅಜೀಜ್‌ಸೇಟ್ : ಅದು ಸರಿ. ಆದರೆ ಶ್ರೀ ಪುಟ್ಟಸ್ವಾಮಯ್ಯನವರು ಹೀಗೆ ಹೇಳಬಹುದೇ ?

5-30 p. m.

ಶ್ರೀ ಕೆ. ಹೆಚ್. ಹನುಮೇಗೌಡ :— ಪ್ರಜೆಗಳಿಂದ ಸಂಗ್ರಹಮಾಡಿದ 40 ಕೋಟಿ ರೂಪಾಯಿಗಳನ್ನು ಈ ದಿವಸ ಈ ಎಂ. ಎಸ್. ಆರ್. ಟಿ. ಸಿ. ಸಂಸ್ಥೆ ಯಲ್ಲಿ ತೊಡಗಿಸಿದ್ದೇವೆ. ಜನರು ಈ ದಿನ ಬಸ್ಸುಗಳಲ್ಲಿ ಪ್ರಯಾಣ ಮಾಡ ಬೇಕಾಗಿದ್ದರೆ ಪಡಬಾರದ ತೊಂದರೆಗಳನ್ನು ಪಡುತ್ತಿದ್ದಾರೆ, ಆ ವಿಚಾರವನ್ನು ನಾವೀಗ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇವೆ.

ಉಪಾಧ್ಯಕ್ಷರು:- ಆದರೆ ತಾವು ಹೇಳತಕ್ಕ ವಿಚಾರಗಳು ಈ ಚರ್ಚೆಯಾಗು ತ್ತಿರುವ ಬಿಲ್ಲಿನ ಕಕ್ಷೆಯಲ್ಲಿ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ :— ಅಧ್ಯಕ್ಷರೇ, ಮಾನ್ಯ ಸಚಿವರು ನನಗೆ ನೀವೇ ನಾದರೂ ಬರವಣಿಗೆಯಲ್ಲಿ ಈ ತೊಂದರೆಗಳ ವಿಚಾರವನ್ನು ಕೊಟ್ಟಿದ್ದೀರಾ ಎಂದು ಕೇಳಿದರು. ಅದಕ್ಕೆ ನಾನು ಹೇಳುವುದು ಏನೆಂದರೆ ಇಲ್ಲಿಗೆ 8,10 ತಿಂಗಳ ಕೆಳಗೆ ನಾನೂ ಮತ್ತು ನನ್ನ ಕ್ಷೇತ್ರದ ಇನ್ನೂ 10,15 ಜನರು ಮಾನ್ಯ ಸಾರಿಗೆ ಸಚಿವರ ಛೇಂಬರಿಗೆ ಬಂದು ಅಲ್ಲಿ ಬಸ್ಸಿನ ಸಂಚಾರದಲ್ಲಿ ಇರತಕ್ಕ ಅವ್ಯವಸ್ಥೆಗಳನ್ನು ಅವರ ಗಮನಕ್ಕೆ ತಂದು ಅದನ್ನೆಲ್ಲಾ ಸರಿಪಡಿಸಬೇಕೆಂದು ಹೇಳಿದೆವು. ಆದರೆ ಇಲ್ಲಿಯವರೆಗೂ ಏನು ಕ್ರಮಗಳನ್ನೂ ಅವರು ಕೈಗೊಂಡಿಲ್ಲ.

ಆದುದರಿಂದ ನಾನೀಗ ಈ ಬಗ್ಗೆ ಸ್ವಲ್ಪ ಖಾರವಾಗೇ ಹೇಳಬೇಕಾಗಿದೆ. ನಾವು ಇಂಥ ವಿಚಾರಗಳಲ್ಲಿ ಸರ್ಕಾರಕ್ಕೆ ಒಂದು ಕಾಗದ ಬರೆದರೆ ಅದಕ್ಕೆ ನಿಮ್ಮ ಕಾಗದ ಬಂದಿದೆ ಎಂದು ಅಷ್ಟು ಮಾತ್ರ ಉತ್ತರ ಬರೆಯುತ್ತಾರೆ. ಅನಂತರ ಆ ಕಾಗದವನ್ನೇನು ಬೆಂಕಿಗೆ ಹಾಕಿದರೆ ಅಥವಾ ಅದನ್ನು ಕಸದ ಬುಟ್ಟಿಗೆಸೆದರೆ ಏನಾಯಿತು ಅದು ಎಂಬುದೇ ಗೊತ್ತಾಗುವುದಿಲ್ಲ.

ಶ್ರೀ ಅಜೀಜ್‌ಸೇಟ್ :- ಮಾನ್ಯ ಸದಸ್ಯರು ನನಗೆ ಕೊಟ್ಟ ಅರ್ಜಿ ಯಾವುದು ?

ಶ್ರೀ ಸಿ. ಬೈರೇಗೌಡ :—ಕ್ಯಾಲನೂರಿಂದ ಬೆಂಗಳೂರಿಗೆ ಒಂದು ಎಕ್ಸ್ ಪ್ರೆಸ್ ಬಸ್ಸನ್ನು ಹಾಕಬೇಕೆಂಬ ವಿಚಾರದಲ್ಲಿ.

ಶ್ರೀ ಅಜೀಜ್‌ಸೇಟ್ :—ಅದಕ್ಕೂ ಈ ಬಿಲ್ಲಿಗೂ ಏನು ಸಂಬಂಧ ?

ಶ್ರೀ ಸಿ. ಬೈರೇಗೌಡ :— ಈ ಸಾರಿಗೆ ಇಲಾಖೆ ವಿಚಾರದಲ್ಲಿ ಅನಾವಶ್ಯಕ ವಾಗಿ ಫುಟ್‌ಪಾತಿನಲ್ಲಿ ತಿರುಗಾಡತಕ್ಕ ಜನರು ಅಗೌರವಯುತವಾದ ಮಾತುಗ ಳನ್ನಾಡುವುದಕ್ಕೆ ಅವಕಾಶ ಕೊಡಬಾರದೆಂಬುದು ನನ್ನ ಉದ್ದೇಶ. ಅದಕ್ಕಾಗಿ ಇದನ್ನು ಹೇಳುತ್ತಿದ್ದೇನೆ.

ಈ ದಿವಸ 19 ಜಿಲ್ಲೆಗಳಲ್ಲಿ 19 ಜನ ಆರ್. ಟಿ. ಓ. ಆಫೀಸರುಗಳಿದ್ದಾರೆ. ಮತ್ತೆ ಅವರ ಕೈಕೆಳಗೆ ಇರತಕ್ಕ ಇನ್‌ಸ್ಪೆಕ್ಟರುಗಳನ್ನು ಪ್ರಾಸೆಕ್ಯೂಟಿಂಗ್ ಇನ್ ಸ್ಪೆಕ್ಟರುಗಳನ್ನು ಮಾಡಿ ಈ ಬಸ್ಸುಗಳ ಬಗ್ಗೆ ನಿಗಾ ಇಡುವುದಕ್ಕೆ ಒಂದು ಅವಕಾಶ ಮಾಡಿದ್ದರು. ಆದರೆ ಈ ದಿವಸ ಅವರನ್ನು ತೆಗೆಯಬೇಕೆಂದು ಹೇಳುತ್ತಿದ್ದಾರೆ. ಮತ್ತೆ ಮೇಲಾಗಿ ಈ ಕಾಂಟ್ರಾಕ್ಟ್ ಕ್ಯಾರೇಜಿನವರು ಮೂರು ಸಾರ್ತಿಗಿಂತ ಹೆಚ್ಚು ತಪ್ಪು ಮಾಡಿದರೆ ಅವರ ಲೈಸೆನ್ಸ್‌ನ್ನು ಕ್ಯಾನ್ಸಲ್ ಮಾಡುವುದಾಗಿ ಹೇಳಿದ್ದಾರೆ. ಅದು ಸರಿಯಲ್ಲ. ಅವರು ಒಂದು ಸಾರ್ತಿ ತಪ್ಪು ಮಾಡಿದ್ದರೂ ಸಾಕು ಅವರ ಲೈಸೆನ್ಸ್‌ಸನ್ನು ಕ್ಯಾನ್‌ಸಲ್ ಮಾಡುವುದಕ್ಕೆ ಬರುತ್ತದೆ. ಹಾಗೆ ಮಾಡದಿದ್ದರೆ ನಮ್ಮ ಸರ್ಕಾರಿ ಬಸ್ಸುಗಳಿಗೆ ಬಹಳ ಪೆಟ್ಟಾ ಗುತ್ತದೆ. ಅಲ್ಲದೆ ಪೋಲೀಸಿನವರಿಗೆ ಈ ಪ್ರಾಸಿಕ್ಯೂಷನ್ ವಿಚಾರ ಒಪ್ಪಿಸ ಬಾರದೆಂದು ಹೇಳುತ್ತೇನೆ.

ಶ್ರೀ ಅಜೀಜ್ ಸೇಟ್ :— ಒಂದು ತಪ್ಪು ಮಾಡಿದರೆ ಸಾಕು ಲೈಸೆನ್ಸ್ ಕ್ಯಾನ್‌ಸಲ್ ಮಾಡುವುದಕ್ಕೆ ನನಗೆ ಎಲ್ಲಿ ಅಧಿಕಾರವಿದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿಸುತ್ತಾರೆಯೇ ?

ಶ್ರೀ ಸಿ. ಬೈರೇಗೌಡ :— ತಾವು ಈ ಕ್ಲಾಜ್ 60 ಕ್ಕೆ ತಂದಿರತಕ್ಕ ಅಮೆಂಡ್‌ಮೆಂಟಿನಲ್ಲಿದೆ ಇದರಲ್ಲಿ ಹೀಗೆ ಹೇಳಿದ್ದೀರಿ :—

"Suspend permit for such period..........." ಎಂದು ಇರುವುದರಲ್ಲಿ Exemption should not be given even once.

ಇದನ್ನು ಮುಂದೆ ಎಗ್ಸಿಕ್ಯೂಟ್ ಮಾಡತಕ್ಕವರಾರು ? ಕಲವು ಹುದ್ದೆಗಳನ್ನು ತೆಗೆದು ಹಾಕಿದರೆ ಈ ಕೇಸುಗಳನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ಖಂಡಿತ ಕಾಂಟ್ರ್ಯಾಕ್ಟ್ ಕ್ಯಾರೇಜುಗಳಿಗೆ ಮೂರುಸಾರ್ತಿ ವಿನಾಯಿತಿ ಕೊಡುವುದನ್ನು ತಪ್ಪಿಸಿ ಎಂದು ಒತ್ತಾಯ ಮಾಡುತ್ತೇನೆ. ಇವರು ಐದ್ಯೆದು ಅಡಿಗೂ ಒಂದೊಂದು ತಪ್ಪನ್ನು ಮಾಡುತ್ತಾರೆ. ಇವರನ್ನು ತಡೆಯದಿದ್ದರೆ ನಮ್ಮ ಎಂ. ಎಸ್. ಆರ್. ಟಿ. ಸಿ. ಬಸ್ಸುಗಳಿಗೆ ಬಹಳ ತೊಂದರೆ ಬರುತ್ತದೆ. ಇವರಿಗೆ ಸರ್ಕಾರದವರು ಯಾವ ಪರಿಹಾರವನ್ನೂ ಕೊಡದೆ ಲೈಸೆನ್ಸನ್ನು ಕ್ಯಾನ್ಸಲ್ ಮಾಡುವುದಕ್ಕೆ ಅಧಿಕಾರವಿದೆ.

SRI AZEEZ SAIT :- You have been stressing that I can cancel permits for contract carriages. Will you please tell me under what Section I have the power to cancel the permits ? you have not seen the Act.

ಶ್ರೀ ಕೋಣಂಡೂರು ಲಿಂಗಪ್ಪ: ಮಾನ್ಯ ಸಚಿವರು ಸದಸ್ಯರು ಆಕ್ಟನ್ನೇ ನೋಡಿಲ್ಲ, ಓದಿಲ್ಲ ಎಂದು ಹೀಗೆಲ್ಲಾ ಹೇಳಬಾರದು.

ಶ್ರೀ ಸಿ. ಬೈರೇಗೌಡ: ಈ ಸರ್ಕಾರಕ್ಕೆ ಸಮಾಜವಾದದಲ್ಲಿ ನಂಬಿಕೆ ಇದ್ದರೆ ಸರಿಯಾಗಿ ಬಸ್ಸುಗಳನ್ನು ನಡೆಸಲಿ ಜನರಿಗೆ ಅನುಕೂಲ ಉಂಟುಮಾಡಲಿ. ಅದರೆ ಪೋಲೀಸ್ ಪರ್ಮಿಟ್ಟಿನ ಬಸ್ಸುಗಳನ್ನೂ ಕೂಡ ಕೂಡಲೆ ನಿಲ್ಲಿಸಬೇಕೆಂದು ಹೇಳುತ್ತೇನೆ.

ಶ್ರಿ ಅಜೀಜ್‌ಸೇಟ್.—ಪೋಲೀಸ್ ಪರ್ಮಿಟ್ಟಿನ ಮೇಲೆ ಓಡತಕ್ಕ ಬಸ್ಸುಗಳು ಯಾವುವು ?

ಶ್ರೀ ಸಿ. ಬೈರೇಗೌಡ.—ಸರ್ಕಾರದವರು ನೇಮಕ ಮಾಡಿರತಕ್ಕ ಸ್ಕ್ವಾಡ್‌ಗಳೇನಿವೆ ಅವುಗಳಿಗೆ ಈ ಬಸ್ಸು ಮಾಲೀಕರು ಅಪಾರವಾದ ಲಂಚವನ್ನು ಕೊಟ್ಟು ಓಡಿಸುತ್ತಿರುವ ಬಸ್ಸುಗಳನ್ನು ಪೋಲೀಸ್ ಪರ್ಮಿಟ್ಟಿನ ಮೇಲೆ ಓಡತಕ್ಕ ಬಸ್ಸುಗಳೆಂದು ಜನರು ಕರೆಯುತ್ತಾರೆ. ಇದನ್ನೆಲ್ಲಾ ಸರಿಪಡಿಸಬೇಕು. ಸರ್ಕಾರ ಕಿವುಡಾಗಿದೆ. ನಾವು ಎಷ್ಟು ಹೇಳಿದರೂ ಪ್ರಯೋಜನವಿಲ್ಲ. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI K. H. PATIL.—(Minister for Agriculture and Forest): Mr. Speaker Sir, the house wanted to have a statement from me about the fertiliser distribution in the State. I think the time is running out today and the house is seized of of this Bill. I have promised to make a statement today. After the statement, there are bound to be some clarifications. Therefore if the house wants to finish this bill, I may be permitted to make that statement tomorrow.

MR. DEPUTY SPEAKER.—You can make the statement tomorrow. We will complete the bill today.

SRI AZEEZ SAIT.—Mr. Deputy Speaker Sir, I have heard carefully the hon. members speaking on the Motor Vehicles Bill for which I have moved amendments in this house. While speaking on the Amendment Bill, they have dragged my attention to the working of the M. S. R. T. C., the conductors and drivers employed in it, recruitment and what not. Sir, I do not want to say any thing more at this moment except to say, with due regards to the hon. members, that some of the speakers at least have not gone through the amendments in detail; nor have they tried to understand the existing Act. It pained me very much to hear some of their criticisms. It is not the people who are cursing the M. S. R. T. C. It is the hon. members of this August house who are speaking in this fashion and who are criticising the M. S. R. T. C. By condemning it in this fashion, they are making people believe that something is gravely wrong with it. The elected representatives of the people who pleaded for nationalisation and who have confidence in it, are condemning the working of the same nationalised transport, and painting a bad picture of nationalisation.

(Interruption)

SRI KONANDUR LINGAPPA.—The hon. minister must withdraw those words.

MR. DEPUTY SPEAKER.—Sri Lingappa, do you not hear me ? When I am standing on my legs, is it not your duty to resume your seat ?

SRI AZEEZ SAIT.—I am not yielding

ನಾನೇನೂ ತಪ್ಪಾಗಿ ಹೇಳಲಿಲ್ಲ ಕೈಜೋಡಿಸಿ ವಿನಂತಿ ಮಾಡುತ್ತೇನೆ. ಎಂ. ಎಸ್. ಆರ್. ಟಿ. ಸಿ. ಬಸ್ಸುಗಳ ಬಗ್ಗೆ ವಿನಾಕಾರಣ ಟೀಕೆ ಟಿಪ್ಪಣಿಗಳನ್ನು ಮಾಡಿ ಜನಗಳಲ್ಲಿ ಇವುಗಳ ಬಗ್ಗೆ ತಪ್ಪು ಅರ್ಥ ಬರುವ ರೀತಿಯಲ್ಲಿ ಮಾತನಾಡಿದರೆ ಅದರಿಂದ ಅಪಾಯವಾಗುತ್ತದೆ. ಅಲ್ಲಿ ಕೆಲಸ ಮಾಡುವ ಕಾರ್ಮಿಕರು ಕಳ್ಳರು ಎಂಬುದಾಗಿ ಹೇಳಿದರೆ ಹೇಗೆ ?

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಆ ರೀತಿ ಹೇಳಲಿಲ್ಲ

SRI AZEEZ SAIT.—It may not be outright condemnation. But such critcism will create a wrong impression in the minds of the public as to how the M. S. R. T. C. is operating. I appeal to them not to create such impression.

SRI T. R. SHAMANNA.—I rise on a point of order. We only suggested that series of improvements were necessary in the working of the M. S. R. T. C. When private luxury buses could be run at lower cost, is it not possible to run M. S. R. T. C. buses efficiently at reasonable rates ? That was the argument placed before the Government. Is that argument in any way offensive against nationalisation ? Nationalised buses must run more efficiently than private buses. Otherwise Government money is being wasted. Can I not draw attention of the Government to that aspect ?

MR. DEPUTY SPEAKER.—A point of order should relate to one or the other Rule of the rules of Procedure ; so that it may be enforced. All that Sri Shamanna meant was that the members only pointed out deficiencies in the M.S.R.T.C. So his point of order requires no reply.

SRI KONANDUR LINGAPPA.—I want opportunity for personal explanation.

SRI AZEEZ SAIT.—I am not yielding

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ಹೇಳಿದ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿನ ಕಾರ್ಮಿಕರು ಕಳ್ಳರು ಎಂಬ ಅಭಿಪ್ರಾಯ ನಮಗೆ ಇಲ್ಲ. ಕಾರ್ಮಿಕ ಸಚಿವರು ಆ ರೀತಿಯಾಗಿ ಹೇಳುತ್ತಿದ್ದಾರೆ. ಅದು ಅವರ ಬಾಯಿನಿಂದಲೇ ಬರುತ್ತಿದೆ. ಇದು ಬಹಳ ಖೇದವಾದ ವಿಚಾರ.

SRI AZEEZ SAIT.—There are people in this country to judge what he has stated.

What I stated in my last sentence was that some of the members, in their speeches, were to a certain extent, condemning nationalisation of the M. S. R. T. C. in a manner and fashion that the people would feel that there was something wrong wiih the Road Transport Corporation buses and that it was unsafe to travel in them. I appeal to them most sincerely not to condemn nationalised institutions but to help me and guide me in improving those institutions and point out the ways in which the corporation's working could be improved.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಅಫಿಷಿಯಲ್ಸ್ ರಿಕಾರ್ಡ್ಸ್‌ನ್ನು ತೆಗೆದು ನೋಡಿ. ಅಲ್ಲಿ ಏನೇನು ಕುಂದು ಕೊರತೆಗಳಿವೆಯೋ ಅವೆಲ್ಲವೂ ಮಾನ್ಯ ಮಂತ್ರಿಯವರಿಗೆ ಚೆನ್ನಾಗಿ ಮನದಟ್ಟಾಗಬೇಕೆಂಬ ಭಾವನೆಯಿಂದ ಹ್ಯೂಮರಸ್ಸಾಗಿ ಕೆಲವು ಸದಸ್ಯರು ತಂತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರಷ್ಟೆ.

MR. DEPUTY SPEAKER.—Although the members were speaking in Kannada I could understand them effectively. Although the hon. minister was telling during the course of the speeches of some members that they were transgressing and were not speaking within the scope of the Bill, they were only suggesting certain remedies to improve the working of the corporation. I do not think anybody has outright condemned the M.S.R.T.C.

ಶ್ರೀ ಅಜೀಜ್ ಸೇಟ್ :—ನಿಮ್ಮ ಕನ್ನಡಿಯಲ್ಲಿ ಮುಖ ನೋಡಿ. ಪ್ರೈವೇಟ್ ಬಸ್ಸುಗಳು ಎಷ್ಟು ಲಕ್ಷಣವಾಗಿವೆ ಎಂ. ಎಸ್. ಆರ್. ಟಿ. ಸಿ. ಬಸ್ಸುಗಳು ಚೆನ್ನಾಗಿಲ್ಲ, ಅಜೀಜ್ ಸೇಟ್ ಕೂತುಕೊಳ್ಳುವ ಹಾಗೆ ಅವು ಇವೆ. ಎಂದು ಏನೋ ಒಂದು ಅಭಿಮಾನದಿಂದ ಅವರು ಸೋಷಿಯಲಿಸ್ಟ್ ವಾಕ್ಯದಲ್ಲಿ ಮಾತನಾಡುವುದು ಸರಿಯಲ್ಲ. ಅವರು ಹೇಳಿದ್ದರಲ್ಲಿ ಎಂ. ಎಸ್. ಆರ್. ಟಿ.-ಸಿ. ಬಸ್ಸುಗಳಿಗೆ ಹೆಚ್ಚಿಗೆ ಸಹಾಯಮಾಡಿ ಎಂದು ಹೇಳುವುದು ಒಂದೂ ಇಲ್ಲ. ಯಾವಾಗಲೂ ಈ ಬಸ್ಸುಗಳಿಗೆ ಸರಿಯಾದ ಟೈರ್ ಇಲ್ಲ. ಟ್ಯೂಬ್ ಇಲ್ಲ, ಎಂಬುದಾಗಿ ಹೇಳುತ್ತಾ ಹೋದರೆ ಜನರು ಏನು ತಿಳಿದುಕೊಳ್ಳುತ್ತಾರೆ. ಜನಗಳ ಪ್ರತಿನಿಧಿಗಳಾದ ಅವರು ಹೀಗೆ ಅವಹೇಳನ ಮಾಡಿದರೆ ಜನಗಳು ಏನು ತಿಳಿದುಕೊಳ್ಳುತ್ತಾರೆ? ಆ ಬಸ್ಸುಗಳಲ್ಲಿ ಕೂತರೆ ಪ್ರಾಣಹೋಗುತ್ತದೆಂದು ಹೇಳುವುದು ಇವೆಲ್ಲ ಸರಿಯಲ್ಲ, ಅವರು ಜನರ ಪ್ರತಿನಿಧಿಯಾಗಿದ್ದುಕೊಂಡು ಈ ರೀತಿಯಾಗಿ ಹೇಳುವುದು ಖಂಡಿತವಾಗಿ ಸರಿಯಲ್ಲ. ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಸಿ. ಬೈರೇಗೌಡ :—ತಾವು ಅಫಿಷಿಯಲ್ ರಿಕಾರ್ಡ್ಸನ್ನು ತರಿಸಿ ನೋಡಿ. ಮಂತ್ರಿಗಳು ಏನು ಹೇಳಿದ್ದಾರೆಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಅಜೀಜ್ ಸೇಟ್ : ಅವರು ಹೇಳುವ ಧಾಟಿಯಲ್ಲಿ ನೋಡಿದರೆ ಎಂ. ಎಸ್. ಆರ್. ಟಿ. ಸಿ. ಬಸ್ಸಿನಲ್ಲಿ ಕುಳಿತುಕೊಳ್ಳುವುದು ಜೀವಕ್ಕೆ ಅಪಾಯವಾಗುತ್ತದೆ ಎಂದು ಹೇಳಿದರು. ಅದು ಸರಿಯಲ್ಲ. ಮತ್ತು ಕಾರ್ಮಿಕರು ಕಳ್ಳರು ಎನ್ನುವ ಭಾವನೆಯಿಂದ ಹೇಳಿಬೇಡಿ.

(ಮಾನ್ಯ ಮಂತ್ರಿಗಳು ಉದ್ವೇಗದಿಂದ ಕೈಯಲ್ಲಿದ್ದ ಕಾಗದವನ್ನು ಮುಂದಿನ ಮೇಜಿಗೆ ಹೊಡೆದರು)

ಶ್ರೀ ಬಿ. ಪುಟ್ಟಸ್ವಾಮಯ್ಯ :—ಕಾರ್ಮಿಕರು ಕಳ್ಳರು ಎಂದು ನಾವು ಹೇಳಲಿಲ್ಲ. ಮಾನ್ಯ ಮಂತ್ರಿಗಳಿಗೆ ಸ್ವಲ್ಪ ಸ್ಮೃತಿ ತಪ್ಪಿರುವ ಹಾಗೆ ಕಾಣುತ್ತದೆ.

ಶ್ರೀ ಸಿ. ಬೈರೇಗೌಡ :—ಮಾನ್ಯ ಸಚಿವರ ವರ್ತನೆ ಸರಿಯಲ್ಲ. ಅವರ ತಲೆಯ ಮೇಲೆ ಬೇಕಾದರೆ ಪೇಪರ್ ಹೊಡೆಯುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಮಾನ್ಯ ಮಂತ್ರಿಗಳು ಮೇಜು ಕುಟ್ಟಿ, ನಮ್ಮನ್ನು ಕೂರಿಸುವುದಕ್ಕೆ ಆಗುವುದಿಲ್ಲ.

MR. DEPUTY SPEAKER —I am here to protect the dignity of the house. hon. member, Mr. Bhyre Gowda should not exceed limits. It is my sacred duty to protect the decorum of the house. I do not justify any member getting impulsive. No member or minister can afford to get angry in this house, because, there is a sanctity attached to this house.

ಶ್ರೀ ಆಜೀಜ್ ಸೇಟ್ :—ಮಾನ್ಯ ಸದಸ್ಯರು ತಲೆಮೇಲೆ ಹೊಡೆಯುತ್ತೇವೆ ಎಂದು ಹೇಳಿದರು. ನಾನು ಹೇಳಬಲ್ಲೆ. ಆದರೆ ನಾನು ಆ ಮಟ್ಟಕ್ಕೆ ಹೋಗ ಬಯಸುವುದಿಲ್ಲ. ಬಸ್ಸುಗಳಲ್ಲಿ ಕಂಡಕ್ಟರು ದುಡ್ಡು ಹೊಡೆಯುತ್ತಾರೆ, ಪ್ರಯಾಣಿಕರಿಗೆ ಟಿಕೇಟು ಕೊಡುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಅವರು ಹೇಳುವ ಧಾಟಿ ಏನೆಂದರೆ ಕಾರ್ಮಿಕರು ಕಳ್ಳರು ಎಂದು ಹೇಳಿದ ಹಾಗಾಗುತ್ತದೆ. ರೀತಿ ಹೇಳಬೇಡಿ. ಮೊನ್ನೆ ತಾನೆ ಕಾರ್ಮಿಕರಿಗೆ ಲಕ್ಷಾಂತರ ರೂಪಾಯಿ ಬೋನಸ್ ಕೊಟ್ಟಿದ್ದೇವೆ.

MR. DEPUTY SPEAKER.—I have been quite attentive to all the debate. No hon. member said the workers of the M.S.R.T.C. are 'kallas', and so, that imputation or conclusion or meaning can never be attributed to the speeches made. Let this be very clear.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಮಂತ್ರಿಗಳು ಸ್ವಲ್ಪ ಸರಿಯಾಗಿ ಮಾತನಾಡುವ ಹಾಗೆ ಅಧ್ಯಕ್ಷರು ಹೇಳಬೇಕು.

ಶ್ರೀ ಅಜೀಜ್ ಸೇಟ್ :—ನಾನು ಕೇಳಿದ್ದೇನೆ ಮಾನ್ಯ ಸದಸ್ಯರು ಒಬ್ಬರು ನನ್ನ ತಲೆಯ ಮೇಲೆ ಹೊಡೆಯುತ್ತೇವೆ ಎಂದು ಹೇಳಿದರು. ನನಗೂ ಆ ರೀತಿ ಹೇಳುವುದಕ್ಕೆ ಅಧಿಕಾರ ಇದೆ. ಆದರೆ ನಾನು ಆ ಮಟ್ಟಕ್ಕೆ ಹೋಗುವುದಿಲ್ಲ. I do not want to put myself to that level.

SRI KAGODU THIMMAPPA.—That means the members have gone to a level below their dignity.

MR. DEPUTY SPEAKER: All that I would urge upon the hon. members and also upon the hon. minister is this. We have to maintain a high dignity and code of conduct while participating in the discussion.

SRI AZEEZ SAIT.—The minister is the only man who has committed sin. If the hon. member wants to hit on my head, what can I do? The members are not prepared to receive any hit.

MR. DEPUTY SPEAKER :—I would never allow it. How can it be done? I curbed the hon. member immediately, when he said it.

SRI AZEEZ SAIT.—You were good enough to pull him up.

SRI H. T. KRISHNAPPA—Please confine your hitting to your party.

SRI M. S. KRISHNAN.—We do not want you to hit us below the belt. That is all.

SRI AEEZ SAIT.—As my friends have said, they are plying vehicles with taxes or without taxes. I have conceded it. It is very unfortunate that these things are happening in this country. Who are the people responsible for it. They are also our own people. I would like to request the hon. members to go through the notes I supplied to them some time ago. If the hon. members had gone through that notes, they would never have talked in this manner. I am sorry, Sir.

SRI T. R. SHAMANNA.—I have read it. He says that we have not read it.

MR. DEPUTY SPEAKER..Mr. Shamanna, please resume your seat.

SRI AZEEZ SAIT.—When I went to Kolar on tour, an increase of Rs. 4,000 to Rs. 5,000 in the collections was noticed by me. Eversince, I was thinking what I should do. As the minister-in-charge of the Motor Vehicles Department, I thought of getting this amendment intro-

duced in this house. Unfortunately, we were not able to discuss as the house adjourned sine-die. I took this opportunity to move this bill and to have a discussion on the provisions. I want the hon. members to understand this. To day, we have got different anomalies. One is indiscriminate issue of permits by the R. T. A., which is a composite quasi-judicial body. No less a man than the Deputy Commissioner is the Chairman and the R. T. O. is the Secretary. There is no rule by which I can ask the Deputy Commissioner to issue a permit. It is a semi-quasi-judicial body. I am taking away the power from the R. T. A. to S. T. A through this amendment. This is in accordance with the directions of the High Court. Only one District *i.e.*, Bijapur District in the State of Mysore, is permitted to issue a state-wide permit. No other district is permitted to issue a state-wide permit

6.00 P. M.

To overcome this, it has become necessary that this amendment is brought before the house for acceptance. These contract carriages and the goods lorries are unable to get permit for more than a district at present without any difficulty. Just to facilitate them to get permit for more than one region, it is found necessary to bring an amendment and this has been brought before the house. The entire power is invested in the State Transport Authority. By a notification we will delegate the power in respect of lorries and state carriages to the State Transport Authority. This is going to control the indiscriminate issue of permit to contract carriages. I have been informing my friends here several times that the M. S. R. T. C. is operating like any other operator. They have already started thinking to take over the contract carriages. The subject is before the M.S.*R*. T.C The M. S. R. T. C. is an autonomous body. Just because it is an autonomous body. Just because it is an autonomous body, they cannot run their buses without permit. Plying the buses on certain routes have been challenged and the M.S.R T.C. cannot

Sri Azeez Sait

run the buses without permit on account of the stay orders from the High Court. Therefore, it means the M. S. R. T. C. cannot run the buses without permit like any other operator. If the M. S. R. T. C. is going to nationalise a route, it has to call for objections and go before the concerned authorities for permit. But there is no question of de-nationalisation at all.

SRI T. *R*. SHAMANNA :—There is a rumour that the Bangalore Transport is going to be given to a private authority. If it is a fact let the Minister come out with facts and figures. You were also of the same opinion on some other day.

SRI Azeez SAIT :—When I was talking on the prevous occasion, I simply said that the Bangalore Transport has to be improved and some inefficiency is increasing the re day by day. Time and again I have replied in that way. Please do not have misconceived ideas and not have any presumptions of your own. Let us be frank about it.

Amendment of Section 60. In this Act there is no power mandatory to cancel a permit. Section 60 lays a provision for imposing penalty. To-day what is happening for offences? They are imposing penalty. Let us make it a mandatory provision to cancel the permit if it is required. For the first offence seizing of vehicle: for the second breach of condition suspension of the vehicle; and if there is a third breach of conditions cancellation of permit. This is how we have provided. You are all practising lawyers and you know how to do things in this connection. All of a sudden we cannot cancel the permit. We have to give some chance. This is a democratic system of Government. Chances will have to be given.

Section 114A. This is about compounding of offences This is a simple matter. These are small punishments imposed for driving vehicles without licence, driving the vehicle without observing the formalities fixed by the department etc. We have to send them to emergency court. This Section empowers the officers of the R.T.O to compound the offences and see that these people are not harassed. This is a new insertion as Section 114A. There is nothing beyond this. As I already told we are forming an office of *R*. T. O. for the City of Bangalore We have brought these amendments for improving the efficiency of the department and you will all appreciate the intention of the Government and see the amending bill is passed.

Sri Byre Gowda has brought to my notice that there is a move to remove the prosecuting inspectors from this Department. It is an idea working in my mind since a long time. No state has got these posts. There are 19 posts and these prosecuting inspectors have got a very limited job. They have to go to the courts and attend for the prosecuting cases put by the Motor Inspectors and they are having no other work. No state in the country is having these posts. The Motor Vehicle department is a lucky department unlike any other department and I cannot touch even a chaprasi.

SRI KAGODU THIMMAPPA :—Is there a post called chaprasi ?

SRI *A*ZEEZ SAIT :—Chaprasi means a peon. It is a Urdu word. Let us leave it at that. Now, the hon. members have spoken for a long time on this bill. I want to remove the mistake or confusion among the members. some of the hon. members talked about the corruption prevailing in the Motor Vehicles Department and they have also alleged that for effecting transfers of even Attenders, few thousand rupees would be demanded from them.

Sri Azeez Sait

Some of the opposition members stood up and protested against the remarks of the hon. minister).

Mr. DEPUTY SPEAKER :—The hon. members should have some restraint and patience in hearing the speech of the hon. minister.

SRI M. S. KRISHNAN.—I have a point of order Sir. My point of order is this: I did not participate in the discussion which took place on the bill. The reply which the Hon Minister is giving does not form part of the bill and when it does not form part of the bill, whether he is entitled to speak anything on the face of this earth?

Mr. DEPUTY SPEAKER :— The hon. member is perfectly justified in raising a point of order. In fact, I did point out to the hon. minister that the points which he was dealing with were outside the scope of the bill. But he said that he was saying just as a passing remark. That is why I told the hon. members that they should restrict themselves to the scope of the bill. Even before raising the point of order, I enquired whether it was within the scope of the bill. He said that certain hon. members made certain remarks and just he was referring to them in a sentence.

SRI AZEEZ SAIT.—With due respect to the chair, I may inform the house that it was not at all my intention to talk beyond the scope of the bill, but I have heard during the deliberations of this bill certain remarks made by some hon. members against the department which I was rebutting them. They referred to certain points which did not have a bearing on the bill. They referred to the corruption and favouritism prevailing in the department.

Mr. DEPUTY SPEAKER.—I request you to please restrict your remarks to the bill.

SRI AZEEZ SAIT.—Unless I rebut those remarks made against my department, they remain unanswered. I cannot simply pocket those remarks. I am very anxious to have an efficient administration and with that end in view I have thought of reorganisation of the department I appeal to the hon. members of this house not to magnify the defects but offer useful suggestions to improve the efficiency of the department. With these few words, I thank the chair.

MR. DEPUTY SPEAKER.—The question is:

"That the Motor Vehicles (Mysore amendment) Bill, 1973, be taken into consideration."

The motion was adopted:

CLAUSES 2 to 5

MR. DEPUTY SPEAKER.—The question is:

"That clauses 2 to 5 both inclusive do stand part of the bill."

The motion was adopted:—

Clauses 2 to 5 both inclusive and were added to the Bill.

MR. DEPUTY SPEAKER.—The question is:

"That clause 1, long Title the Preamble and the Exacting formla do stand part of the Bill."

The motion was adopted:

Clause 1, etc. were added to the Bill

MOTION TO PASS

SRI AZEEZ SAIT (Minister for Transport and Labour).- I beg to move :

"That the Motor Vehicles (Mysore Amendment) Bill, 1973, be passed".

MR. DEPUTY SPEAKER.—The question is :

"That the Motor Vehicles (Mysore Amendment) Bill, 1973 be passed."

The motion was adopted and the Bill was passed.

MR. DEPUTY SPEAKER.— The House now stands adjourned to meet again at 1 P.M. tomorrow the 4th September 1973.

The House adjourned at Seventeen Minutes past Six of the clock to meet again at one of the clock on Tuesday the 4th September 1973.

ANNEXURE A

THE MYSORE AGRICULTURAL PRODUCE MARKETING (REGULATION) (AMENDMENT) BILL' 1973.

(L. A. Bill No. 45 of 7)

A BILL further to amend the Mysore Agricultural Produce Marketing (Regulation) Act 1966.

WHEREAS it is expedient further to amend the Mysore Agricultural Produce Marketing (Regulation) Act, 1966 (Mysore Act 27 of 1966) for the purposes hereinafter appearing ;

Be it enacted by the Mysore State Legislature in the Twenty-fourth Year of the Re-public of India as follows:—

1. SHORT TITLE.—This Act may be called the Mysore Agricultural Produce Marketing (Regulation) Amendment) Act. 1973.

2. AMENDMENT OF SECTION 65.—In Section 65 of the Mysore Agricultural Produce Marketing (Regulation) Act, 1966 (hereinafter referred to as the principal Act), for the words "thirty paise", the words "one rupee" shall be substituted.

3. AMENDMENT OF SECTION 90.—In Section 90 of the principal Act, for clause (c) of sub-section (3), the following clause shall be substituted; namely:—

"(c) in a Scheduled Bank with the previous approval of the Chief Marketing Officer, or".

4. REPEAL OF MYSORE ORDINANCE NO. 5 OF 1973.—The Mysore Agricultural Produce Marketing (Regulation) (Amendment) Ordinance, 1973 is hereby repealed;

Provided that anything done or any action taken under the principal Act as amended by the said Ordinance shall be deemed to have been done or taken under the prineipal Act as amended by this Act.

STATEMENT OF OBJECTS AND REASONS

Under Section 65 of the Act market committee may levy market fees as prescribed by bye-laws upto 30 paise per 100 rupees price of the produce sold.

For development regulated markets in the State, the International Development Association has agreed to advance a loan of rupees ten crores to the State Government on the condition among others, that the maximum market fee to be levied may be one rupee per one hundred rupees of the price of the agricultural produce sold.

The loan had to be expeditiously obtained. In view of this urgency and as both houses of the Legislature were not in session, the Mysore Agricultural Produce Marketing (Regulation) (Amendment) Ordinance, 1973 was promulgated. Since the loan would be advanced through commercial banks, another amendment was made to Section 90 to authorise investments by the Market Committees in Scheduled Banks also.

The bill is to replace the Ordinance

STATEMENT EXPLAINING THE CIRCUMSTANCES WHICH NECESSITATED IMMEDIATE LEGISLATION OF THE MYSORE AGRICULTURAL PRODUCE MARKETING (REGULATION ORDINANCE, 1973

Government of Mysore have entered into an agreement with World Bank on 9th May, 1973 for release of assistance of rupees ten crores to be spent for the development of 55 Market Yards in Mysore State for a period of five years.

2. The agreement entered into by the Government of Mysore with the World Bank stipulates the following conditions to be fulfilled by the Government of Mysore.—

(i) appointment of an Economist and an Architect for the Marketing Department

(ii) creation of an Engineering Cell in the department of Marketing to enable the expeditious preparation and scrutiny of the plans and estimates of the development works of the market committees.

(iii) raising the market fees from 30 paise per one hundred rupees worth of commodities sold to rupee one.

3. The conditions stipulated by the World Bank as described in para 2 above have to be fulfilled by Government of Mysore before September 7, 1973 in order to ensure the credit effectiveness from the World Bank.

4. It was considered necessary that the Regulated Market Committees should be empowered to invest funds in a Scheduled Bank with the previous approval of the Chief Marketing Officer, in view of the fact that the Scheduled Banks will be advancing funds to the Market Committees under this project.

5. As both the houses of Mysore Legislature were not in session and as the matter was urgent the Mysore Agricultural Produce Marketing (Regulation) Ordinance, 1973 was promulgated.

A. SHANKAR ALVA,
Minister for Co-operation.

TE. HANUMANTHAPPA,
Secretary.

ANNEXURE--II

THE MYSORE PUBLIC SERVICE COMMISSION (CONDUCT OF BUSINESS AND ADDITIONAL FUNCTIONS) (SECOND AMENDMENT) BILL, 1973

(L. A. BILL NO. 46 OF 1973)

A BILL further to amend the Mysore Public Service Commission (Conduct of Business and Additional Functions) Act, 1959.

WHEREAS it is expedient further to amend the Mysore Publlc Service Commission (Conduct of Business and Additional Functions) Act, 1959 (Mysore Act 20 of 1959);

BE it enacted by the Mysore State Legislature in the Twenty-fourth year of the Republic of India as follows :—

1. SHORT TITLE AND COMMENCEMENT.—(1) This Act may be called the Mysore Public Service Commission (Conduct of business and Additional Functions) (Second Amendment) Act, 1973.

(2) It shall come into force at once

2. AMENDMENT OF SECTION 9.—In Scetion 9 of the Mysore Public Service Commission (Conduct of Business and Additional Functions) Act, 1959 (Mysore Act 20 of 1959) (hereinafter referred to as the principal Act), for the word "two", the word "four" shall be substituted.

3. AMENDMENT OF SECTION 16.—Section 16 of the principal Act shall be renumbered as sub-section (1) thereof and after the said sub-section as so re-numbered the following sub-section shall be inserted, namely :—

"(2) Where persons in the services of any local authority or other body corporate constituted by law, are required to pass under the conditions of recruitment or service applicable to them any of the service examinations notified by the Government under sub-section (1), the Government may, in consultation with the commission by general order declare that the said persons shall be eligible to appear for the said service examinations and thereupon the said persons may appear the said service exammations, subject to such conditions as may be prescribed.

EXPLANATION.—For purposes of this sub-section, the expression 'local authority' shall have the meaning assigned to it in sub-section (3) of Section 17".

STATEMENT OF OBJECTS AND REASONS

Under Section 9 of the Act the quorum for a meeting of Public Service Commission is two. This was fixed when there were only three members in the Commission. The number of members has since been raised to seven. In view of this quorum requires to be re-fixed at four.

Under Section 16 of the Act, the Public Service Commission is required to hold service examinations only for Government servants. Some of the local authorities and statutory bodies have prescribed the same examinations as those prescribed for Government servants for their employees and they have requested that their employees may also be made eligible to appear for the service examinations conducted by the Public Service Commission, It is, therefore, proposed to amend Section 16.

Hence the Bill

MEMORANDUM REGARDING DELEGATED LEGISLATION

Sub-section (2) of Section 16 propsed to be substituted by clause 3 of the Bill empowers the State Government to

prescribe by rules the conditions subject to which the persons in the services of any local authority or other body corporate constituted by law may appear for the service examinations which are required to be passed under the conditions of recruitment or service applicable to them.

The proposed delegation of legislative power is of a normal character.

D. DEVARAJ URS

Te. HANUMANTHAPPA,
Secretary.

WD 6—GBPC—550—5-5-74

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 4th September 1973 Bhadrapada 13, 1895-S.E.

The House met in the Assembly Chamber, Vidhana Soudha, at One of the Clock.

MADAM SPEAKER: (Smt. K. S. NAGARATHNAMMA) in the Chair.

OBITUARY REFERENCE

RE: DEMISE OF SRI D. SURYANARAYANA AND SRI N. VENKATAGIRIAPPA.

MADAM SPEAKER:—I regret to make a reference to the demise of Sri D. Suryanarayana, a sitting member of this House yesterday at Mysore.

Sri D. Suryanarayana was elected to the Fifth Legislative Assembly in the year 1972 from Krishnaraja Constituency, Mysore. He was the President of the Mysore City District Congress Committee for a number of years.

I also regret to make a reference to the demise of Sri N. Venkatagiriyappa, former member of the Representative Assembly on 30th August 1973 at Thirthahalli.

I am sure the House will join me in expressing our sense of sorrow on the passing away of Sri D. Suryanarayana and Sri N. Venkatagiriyappa.

I request the hon. members to stand in silence for two minutes as a mark of respect to the deceased.

(MADAM SPEAKER)

(Hon. Members stood in silence for two minutes)

STARRED QUESTIONS TO WHICH ORAL ANSWERS WERE GIVEN

LABOUR DISPUTE OF MUKESH TEXTILES, SHIMOGA

(3) SRI S. M. SHEERANALY CHANDRASEKHAR (Hosanagar).—

Will the Minister for Labour be pleased to state :—

(*a*) whether the case of a labour dispute of Mukesh Textiles, Shimoga referred to the Industrial Tribunal *vide* No. ID 66/67 is still pending without taking any final decision since in the year 1966;

(*b*) the reasons for such inordinate delay in the disposal of this case?

SRI AZEEZ SAIT.—(Minister for Labour)

(*a*) Yes ; the case is pending before the Industrial Tribunal, Bangalore since September, 1967 but not from 1966.

(*b*) The arguments in ID No.66 of 1965 were completed by about the end of June, 1972. While going through the records for writing the award, it was felt by the then Presiding Officer that the parties should be heard on certain points required for decision in deciding the dispute. Since the parties requested for adjournment the case could not be heard till the end of 1972. In the meanwhile the Presiding Officer was transferred and the present Presiding Officer took charge on 9th March 1973. The case was last posted for hearing on 20th August 1973. Again the parties moved for adjournment. The case is now finally posted to 3rd September 1973.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. ತಾವು ನನ್ನ ಪ್ರಶ್ನೆಯ (ಅ)ಕ್ಕೆ ಕೊಟ್ಟ ಉತ್ತರದಲ್ಲಿ ನೋಡಿದರೆ ಈ ಕಾರ್ಮಿಕ ವಿವಾದ ಇತ್ಯರ್ಥವಾಗದೆ ಹಾಗೆ ಉಳಿದಿದೆ ಎಂದು ಕಾಣುತ್ತದೆ. ಈ ರೀತಿ ವರ್ಷಾನುಗಟ್ಟಲೇ ಲೇಬರ್ ಡಿಸ್ಪ್ಯೂಟ್ ಕೋರ್ಟಿನಲ್ಲಿ ಪೆಂಡಿಂಗ್ ಇರುವುದಕ್ಕೆ ಏನಾದರೂ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ

† ಶ್ರೀ ಅಜೀಜ್ ಸೇಟ್.—ಸಾಧಾರಣವಾಗಿ, ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನಲ್ಲಾಗಲೀ, ಲೇಬರ್ ಕೋರ್ಟಿನಲ್ಲಾಗಲೀ ಅಥವಾ ಇನ್ನು ಯಾವುದಾದರೂ ಕೋರ್ಟು ಕಚೇರಿಯಲ್ಲಾಗಲೀ It both the parties are prepared for disposal of the case quickly such delays would not normally take place. The judge who was conducting the case was transferred and a new judge was posted. The new judge wanted to have certain arguments on some specific points. Then both the parties pleded for adjournment. The one adjournment was on 6th March and second one was on 20th August 19 3. Now the case is posted for final hearing on 3-9-1973. But what happened afterwards that information is not with me.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ತಮ್ಮ ಉತ್ತರದಲ್ಲಿ ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಂತೆ ಕಾಣಲಿಲ್ಲ. ಈ ರೀತಿಯ ಇನ್‌ಆರ್ಡಿನೇಟ್ ಡಿಲೇ ಏನು ಇದೆ ಅದನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಅಜೀಜ್ ಸೇಟ್.—ಪರಿಹಾರ ಮಾಡುವುದಕ್ಕೆ ಬರುತ್ತದೆ. ನಾವು ಅವರಿಗೆ ಡೈರೆಕ್ಟೀವ್ಸ್ ಕೊಡಬಹುದು ಎಂದು ಹೈಕೋರ್ಟಿನಲ್ಲಿ ಒಪ್ಪಿಕೊಂಡಿದ್ದಾರೆ. ಈ ಕೇಸಿನಲ್ಲಿಯೂ ಸಹ ನಾವು ಡೈರೆಕ್ಟೀವ್ಸ್ ಕೊಟ್ಟಿದ್ದೇವೆ. ಎರಡು ಪಾರ್ಟಿಯವರು ಅಡ್ಜರ್ನಮೆಂಟ್‌ಗೆ ಕೇಳಿದರೆ ಜಡ್ಜ್ ಏನು ಮಾಡಬಲ್ಲ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಲೇಬರ್ ಪರವಾಗಿ ಈ ಕೇಸ್ ಕೂಡಲೇ ಇತ್ಯರ್ಥವಾಗಬೇಕು ಎಂದು ಒತ್ತಾಯ ಮಾಡಿ ಕೇಳಿದರೂ ಕೂಡ ಅಡ್ಜರ್ನಮೆಂಟ್ ಕೊಟ್ಟಿದ್ದಾರೆ ಇದಕ್ಕೆ ತಾವು ಏನು ಹೇಳುತ್ತೀರಿ?

---

‡ Asterisks indicate that remarks or speeches have not been revised by the member concerned.

ಶ್ರೀ ಅಜೀಜ್ ಸೇಟ್. ಎರಡು ಪಾರ್ಟಿಯವರು ಅಡ್ಜರ್ನಮೆಂಟಿಗೆ ಕೇಳಿದ್ದಾರೆ. ಆದ್ದರಿಂದ ಜಡ್ಜ್ ಏನು ಮಾಡುವುದಕ್ಕಾಗುತ್ತದೆ ? ಈಗ ಫೈನಲ್ ಆಗಿ ಈ ಕೇಸ್‌ನ್ನು ಇತ್ಯರ್ಥಗೊಳಿಸಲು 3-9-1973 ಗೊತ್ತು ಮಾಡಿದ್ದಾರೆ. ಮೂರನೆಯ ತಾರೀಖು ಏನು ಆಗಿದೆ ಎನ್ನುವುದು ನನ್ನ ಹತ್ತಿರ ಇಲ್ಲ. ನನ್ನಲ್ಲಿರುವ ರಿಪೋರ್ಟ್ ಪ್ರಕಾರ both the parties asked asked for adjournment twice. To avoid inordinate delay, Government has sufficient power to issue directions. In this case, a direction has been sent.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಎರಡು ಪಾರ್ಟಿಯವರೂ ಅಡ್ಜರ್ನಮೆಂಟಿಗೆ ಕೇಳಲಿಲ್ಲ. ಮಾಲೀಕರ ಪರವಾಗಿ ಅಡ್ಜರ್ನಮೆಂಟಿಗೆ ಕೇಳಿದ್ದಾರೆ.

GRANT OF LEAVE TO TEACHERS

8. SRI K. H. HANUMEGOWDA (Hassan).—

Will the Minister for Education be pleased to state :—

(*a*) the number of Primary and Middle School teachers of Hassan District whose leave has been treated as L. W. A. during the last two years though privilege and furlough leaves were at their credit;

(*b*) out of them, the number of teachers in respect of whom orders have been issued for cancellation of L. W. A. and for converting the same into leaves at their credit;

(*c*) the names of such teachers and the officer who issued such orders?

SRI A. R. BADARINARAYANA (Minister for Education):

(*a*) 130

(*b*) 4

(c) Details are given in the statement appended

STATEMENT

Sl. No.	Name of the Teacher	Post and Address	The Officer who sanctioned the leave at credit of the teachers
1	2	3	4
1.	Smt. A. M. Akthurunnisa	Mistress, Higher Primary Girls' School (Urdu), Hassan	Director of Public Instruction, Bangalore
2.	Sri B. K. Subba Rao	Teacher, Government Boys' High School Hallimysore, Holenarasipur Taluk.	Joint Director Mysore Division, Mysore
3.	Smt. S. Ratna	Mistress, Boys' Primary School, Mandalamane, Belur Taluk.	do
4.	Sri R. Venktaramaiah	Head Master, Boys' Primary School, Mosale, Hassan Taluk	do

ಶ್ರೀ ಕೆ. ಹೆಚ್. ಹನುಮೇಗೌಡ :—ಹಾಸನ ಜಿಲ್ಲೆಯ 130 ಜನ ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ಉಪಾಧ್ಯಾಯರುಗಳಿಗೆ ಲೀವ್ ಕ್ರೆಡಿಟ್‌ನಲ್ಲಿದ್ದರೂ ಕೂಡ ಅದನ್ನು ಎಲ್ ಡಬ್ಲ್ಯು. ಎ. ಎಂದು ಮಾಡಿ ಆರ್ಡರ್ ಮಾಡಿದ್ದಾರೆ. ಈ ರೀತಿ ಲೀವ್ ಕ್ರೆಡಿಟಿನಲ್ಲಿದ್ದರೂ ಕೂಡ ಎಲ್. ಡಬ್ಲ್ಯು ಎ. ಮಾಡಲಿಕ್ಕೆ ಕಾರಣ ಏನು ?

ಶ್ರೀ ಎ. ಆರ್. ಬದರಿನಾರಾಯಣ್ :—ಈ ಉಪಾಧ್ಯಾಯರುಗಳು ಇವರನ್ನು ಎಲ್ಲಿಗೆ ಟ್ರಾನ್ಸ್‌ಫರ್ ಮಾಡಿತ್ತೋ ಅಲ್ಲಿಗೆ ಹೋಗದೇ ಪ್ರತಿಭಟಿಸಿ ಮಾಡಿ ಕೆಲಸಕ್ಕೆ ಹಾಜರಾಗದೆ ಇರುವುದರಿಂದ ಆವರಿಗೆ ರಜವನ್ನು ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ :— ತಾವು ನಾಲ್ಕು ಜನ ಉಪಾಧ್ಯಾಯರುಗಳಿಗೆ ಮಾತ್ರ ಎಲ್. ಡಬ್ಲ್ಯು. ಎ. ಅನ್ನು ಮಾಡದೆ ರಜವನ್ನು ಮಂಜೂರು ಮಾಡಿದ್ದೀರಿ, ನನಗೆ ತಿಳಿದಮಟ್ಟಿಗೆ ಈ ನಾಲ್ಕು ಜನರೂ ಟ್ರಾನ್ಸ್‌ಫರ್ ಆದವರು, ಮತ್ತು ಇವರೂ ಪ್ರತಿಭಟನೆಮಾಡಿ ಡ್ಯೂಟಿಗೆ ಹೋಗದೆ ಇದ್ದವರು. ಈ ನಾಲ್ಕು ಜನಕ್ಕೆ ಮಾತ್ರ ಎಲ್ ಡಬ್ಲ್ಯು ಎ ಮಾಡದೆ ರಜ ಕೊಟ್ಟು ಉಳಿದ ಉಪಾಧ್ಯಾಯರುಗಳಿಗೆ ಎಲ್ ಡಬ್ಲ್ಯು ಎ ಮಾಡಿರುವುದು, ಈ ಸರ್ಕಾರ ಅವರಿಗೆ ತಾರತಮ್ಯ ಮಾಡಿದಂತೆ ಅಲ್ಲವೇ ? ಈರೀತಿ ಒಬ್ಬರಿಗೊಂದು ಒಬ್ಬರಿಗೊಂದು ಮಾಡುವುದಕ್ಕೆ ಕಾರಣ ಏನು ;

ಶ್ರೀ ಎ ಆರ್. ಬದರೀನಾರಾಯಣ್ :—ತಾರತಮ್ಯ ಏನೂ ಇಲ್ಲ. 130 ಜನಗಳಲ್ಲಿ ನಾಲ್ಕು ಜನಕ್ಕೆ ಮಾತ್ರ ರಜ ಕೊಟ್ಟಿದೆ. ಕಾರಣ ಏನೆಂದರೆ, ಅವರು ಟ್ರಾನ್ಸ್‌ಫರ್ ಆಗುವುದಕ್ಕೆ ಮುಂಚೆ ರಜಾಕ್ಕೆ ಅರ್ಜಿಯನ್ನು ಕೊಟ್ಟಿದ್ದರು. ಅವರು ಅನಾರೋಗ್ಯದ ಸರ್ಟಿಫಿಕೇಟನ್ನು ಪ್ರಡ್ಯೂಸ್ ಮಾಡಿ ಅರ್ಜಿಯನ್ನು ಕೊಟ್ಟಿದ್ದರಿಂದ, ಅವರಿಗೆ ಹಕ್ಕಿನ ರಜವನ್ನು ಮುಂಜೂರು ಮಾಡಲಾಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ :— ಈ 126 ಜನ ಉಪಾಧ್ಯಾಯರುಗಳಿಗೆ ಲೀವ್ ಕ್ರೆಡಿಟ್‌ನಲ್ಲಿದೆ ಆದ್ದರಿಂದ ರಜ ಮುಂಜೂರಾತಿಗೆ ಕೊಟ್ಟಿದ್ದನ್ನು ಇವರ ಅರ್ಜಿಗಳನ್ನು ಸಹಾನುಭೂತಿಯಿಂದ ಪುನಃ ಪುನರ್ ಪರಿಶೀಲನೆ ಮಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್ :— ಇವರು ಟ್ರಾನ್ಸ್‌ಫರ್ ಆಗುವುದಕ್ಕೆ ಮುಂಚೆ ರಜದ ಅರ್ಜಿಯನ್ನು ಕೊಡಲಿಲ್ಲ. ಟ್ರಾನ್ಸ್‌ಫರ್ ಆದಮೇಲೆ, ಟ್ರಾನ್ಸ್‌ಫರ್ ಆದದ್ದಕ್ಕೆ ಪ್ರತಿಭಟನೆ ಮಾಡಿ, ಎಲ್ಲಿಗೆ ಹೋಗಬೇಕಾಗಿತ್ತೋ ಅಲ್ಲಿಗೆ ಹೋಗದೆ ರಜಾಕ್ಕೆ ಅರ್ಜಿಯನ್ನು ಹಾಕಿರುತ್ತಾರೆ. ಇದನ್ನು ಮೈಸೂರು ಸಿವಿಲ್ ಸರ್ವೀಸ್ ಸೆಕ್ಷನ್ 106 (ಎ) ಪ್ರಕಾರ ಲೀವ್ ಎಂದು ಮುಂಜೂರು ಮಾಡಿಲ್ಲ.

PERMIT FOR CONTRACT CARRIAGES BETWEEN BANGALORE AND SHIMOGA

31. Sri N. Basavaiah : (Chikkanayakanahally).—

Will the Minister for Labour be pleased to state :—

(*a*) the number of "on contract" permits given to the private bus owners from Bangalore-Shimoga (B. H. Road)-during the last one year ;

(*b*) whether it has come to the notice of the Government that number of "on contract" buses are running on this road without any permits;

(*c*) if so, the action taken by Government in this matter?

SRI AZEEZ SAIT:—(Minister for Labour).—

(*a*) No. contract permits have been given to any private bus owners to run contract carriages exclusively between Bangalore and Shimoga during the last one year.

(*b*) Yes

(*c*) Whenever such violations have been detected suitable action has been taken against the operators.

ಶ್ರೀ ಎನ್. ಬಸವಯ್ಯ :—ತಮ್ಮ ಉತ್ತರದಲ್ಲಿ ಕಳೆದ ವರ್ಷದಲ್ಲಿ ಯಾವ ಬಸ್‌ಗಳಿಗೂ ಪರ್ಮಿಟ್ ಕೊಡಲಿಲ್ಲ ಎಂದು ಹೇಳಿದ್ದೀರಿ, ಆದರೆ ಈಗಲೂ ಸಹ ಹೊಸ 7-8 ಸರ್ವಿಸ್ ಬಸ್‌ಗಳು ಬೆಂಗಳೂರು ಶಿವಮೊಗ್ಗ ರೋಡುಗಳಲ್ಲಿ ಓಡಾಡುತ್ತಿವೆ. ಅವು ಯಾವುವು?

†ಶ್ರೀ ಅಜೀಜ್ ಸೇಟ್ :—ಅವು ಬಹುಶಃ ಕಂಟ್ರ್ಯಾಕ್ಟ್ ಕ್ಯಾರೇಜಸ್‌ಗಳು ಇರಬಹುದು. ಈ ಸದನದಲ್ಲಿ ನಾನು ಅನೇಕ ಸಾರಿ ಹೇಳಿದ್ದೇನೆ. ಅನೇಕ ಡಿಸ್ಟ್ರಿಕ್ಟ್‌ಗಳಲ್ಲಿ ಆರ್. ಟಿ. ಎ. ಅವರಿಗೆ ಕಂಟ್ರ್ಯಾಕ್ಟ್ ಕ್ಯಾರೇಜ್‌ಸ್‌ಗಳಿಗೆ ಪರ್ಮಿಟ್ ಕೊಡುವಂಥ ಪವರ್ಸ್ ಇರುತ್ತದೆ. ಹಿಂದೆ200 ಚಿಲ್ಲರೆ ಕಾಂಟ್ರ್ಯಾಕ್ಟ್ ಕ್ಯಾರೇಜಸ್‌ಗೆ ಪರ್ಮಿಟ್ ತೆಗೆದುಕೊಂಡಿರುವವರು, ಎಲ್ಲಿಗೆ ಬೇಕಾದರೂ ತಮ್ಮ ಕ್ಯಾರೇಜಸ್‌ಗಳನ್ನು ಓಡಿಸಬಹುದು. ಅವರಿಗೆ ಇಂಥ ರೋಡು ಎಂದು ಇಲ್ಲ, ಟೈಮಿಂಗ್ಸ್ ಇಲ್ಲ, ಇಂಥ ಕಡೆ ಹೋಗಬೇಕು ಎಂದು ಇಲ್ಲ, ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಬಹುದು

ಶ್ರೀ ಎನ್. ಬಸವಯ್ಯ :—ಈ ಕಂಟ್ರ್ಯಾಕ್ಟ್ ಕ್ಯಾರೇಜಸ್‌ನವರಿಗೆ ಪಿಕ್ ಅಪ್ ಸ್ಟ್ಯಾಂಡ್ ಬಿಟ್ಟು, ಪ್ಯಾಸೆಂಜರ್ಸ್ ಅನ್ನು ಬೇರೆ ಕಡೆಯಿಂದ ಪಿಕ್-ಅಪ್ ಮಾಡತಕ್ಕ ಪರವಾನೆ ಏನಾದರೂ ಇದೆಯೇ?

ಶ್ರೀ ಅಜೀಜ್ ಸೇಟ್ :—ಇದು ಆಗ ಕೂಡದು ಎಂದು ಸೆಕ್ಷನ್ 111ನ್ನು ನಾವು ಮಾಡಿದ್ದೇವೆ. ಇದನ್ನು ಮಾಡಿದರೂ ಸಹಿತ, ಕೆಲವು ಅಪರೇಟರ್ಸ್‌ಗಳು ಹೈಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಆದ್ದರಿಂದ ಸೆಕ್ಷನ್ 111 ಕ್ಕೆ ಇಲ್ಲಿ ತಿದ್ದುಪಡಿ ಮಾಡಿದ್ದೇವೆ. ಈ ರೀತಿ ಆಂಧ್ರ ಮತ್ತು ಇತರ ಸ್ಟೇಟ್‌ನಲ್ಲಿ ನಡೆಯುತ್ತಿದೆ. ಇದರ ಬಗ್ಗೆ ಹೈಕೋರ್ಟಿನಲ್ಲಿ ಸ್ಟೇ ಆಗಿರುವುದರಿಂದ ಅವರನ್ನು ಹೇಳುವವರು ಕೇಳುವವರು ಇಲ್ಲ. ಅವರು ಪಿಕ್ ಅಪ್ ಪ್ಯಾಸೆಂಜರ್ಸ್ ಅನ್ನು ಹಾಕಿಕೊಂಡು ಹೋಗುತ್ತಿರುವುದು ನಿಜ; ಎಂ. ಎಸ್. ಆರ್. ಟಿ. ಸಿ. ಸ್ಟ್ಯಾಂಡ್‌ನ ಅಕ್ಕಪಕ್ಕದಲ್ಲಿ ನಿಂತು ಹೋಗುವುದು ನಿಜ. ಕಾನೂನು ರೀತ್ಯ ಇವರಿಗೆ ಶಿಕ್ಷೆ ಮಾಡಬೇಕೇ ವಿನಹ, ಕಾನೂನು ಬಿಟ್ಟು ಮಾಡುವ ಹಾಗೆ ಇಲ್ಲ. ಇನ್ನೊಂದು ನಮ್ಮಲ್ಲಿ ನಾಲ್ಕು ಫ್ಲೈಯಿಂಗ್ ಸ್ಕ್ವಾಡುಗಳು ಕೆಲಸಮಾಡುತ್ತಿವೆ. ನಾವು ಬಂದ ಮೇಲೆ ಬಿಗಿ ಮಾಡಿದ್ದೇವೆ. ಇದಕ್ಕೆ ಸಂಬಂಧ ಪಟ್ಟಂತೆ 4 ರೇಂಜುಗಳಿವೆ, ನಾರ್ದರ್ನ್, ಸದರನ್, ಸೆಂಟ್ರಲ್ ಮತ್ತು ನಾರ್ತ ಈಸ್ಟರನ್ ರೇಂಜ್ ಎಂದು 4 ರೇಂಜುಗಳಿವೆ. ಆಗಸ್ಟ್ 1972 ರಿಂದ ಜುಲೈ 1973ರ ರವರೆಗೆ 13,25,562 ರೂಪಾಯಿ ಜುಲ್ಮಾನೆ ವಸೂಲು ಮಾಡಿದ್ದೇವೆ. 1 ಲಕ್ಷ 23 ಸಾವಿರ ರೂಪಾಯಿ ಚಿಲ್ಲರೆ ಸದರನ್ ರೇಂಜಿನಲ್ಲಿ, 80456 ರೂಪಾಯಿ ನಾರ್ದರನ್ ರೇಂಜಿನಲ್ಲಿ, 54878 ರೂಪಾಯಿ ಚಿಲ್ಲರೆ ಸೆಂಟ್ರಲ್ ರೇಜಿನಲ್ಲಿ, 1 ಲಕ್ಷ 261 ರೂಪಾಯಿ ಚಿಲ್ಲರೆ ನಾರ್ತ ಈಸ್ಟರನ್ ರೇಂಜಿನಲ್ಲಿ, 8 ಲಕ್ಷ 69 ಸಾವಿರ ರೂಪಾಯಿ ಚಿಲ್ಲರೆ ಬೆಂಗಳೂರು ಸಿಟಿ ಟ್ರಾಫಿಕ್ ರೇಂಜಿನಲ್ಲಿ ವಸೂಲಾಗಿದೆ, ಸ್ಪೆಷಲ್ ಸ್ಕ್ವಾಡ್ 97841 ರೂಪಾಯಿ ವಸೂಲು ಮಾಡಿದೆ, ಒಟ್ಟು 1 ಲಕ್ಷ 25 ಸಾವಿರ ಚಿಲ್ಲರೆ ರೂಪಾಯಿ ಜುಲ್ಮಾನೆ ವಸೂಲು ಮಾಡಿದೆ ಜೊತೆಗೆ 92 ವೆಹಿಕಲ್ಸ್ ಸೀಜ್ ಮಾಡಿದ್ದೇವೆ, 6 ಲೈಸನ್ಸ್ ಸಸ್ಪೆಂಡ್ ಮಾಡಿದ್ದೇವೆ. ಅಲ್ಲದೆ ಮೋಟಾರ್ ವೆಹಿಕಲ್ಸ್ ಆಕ್ಟಿಗೆ ಕೆಲವು ತಿದ್ದುಪಡಿ ಮಾಡಿದ್ದೇವೆ. ಮೇಲ್ಮನೆಯಲ್ಲಿ ಅದಕ್ಕೆ ಅಂಗೀಕಾರ ದೊರೆತ ನಂತರ ಬಹುಶಃ ಸ್ವಲ್ಪ ಕಂಟ್ರೋಲ್ ಮಾಡಬಹುದು.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ :—ಎಷ್ಟು ಕಂಟ್ರಾಕ್ಟ ಬಸ್ಸುಗಳನ್ನು ಹಿಡಿಯಲಾಗಿದೆ ? ಎಷ್ಟು ಲೈಸೆನ್ಸ್ ಕ್ಯಾನ್ಸಲ್ ಮಾಡಲಾಗಿದೆ ?

ಶ್ರೀ ಅಜೀಜ್ ಸೇಟ್ :—ಕ್ಯಾನ್ಸಲ್ ಮಾಡುವ ಪ್ರಶ್ನೆಯಿಲ್ಲ, ನಾವೇನು ತಿದ್ದುಪಡಿ ಮಾಡಿದ್ದೇವೆ, ಅದರಂತೆ ಕ್ಯಾನ್ಸಲ್ ಮಾಡುವುದಕ್ಕೇನು ಅಧಿಕಾರ ತೆಗೆದುಕೊಂಡಿದ್ದೇವೆ. ಅದರಂತೆ ಮಾಡಿರುವುದನ್ನು ಈಗ ತಾನೆ ಹೇಳಿದೆ. 13 ಲಕ್ಷ ರೂಪಾಯಿ ಚಿಲ್ಲರೆ ಫೈನ್ ಹಾಕಿದ್ದೇವೆ, ಎಂದು ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್ :—ಒಂದೇ ಸಲ ಇರುವ ತೊಂದರೆಯನ್ನು ನಿವಾರಣೆ ಮಾಡಲು ಸರಕಾರದವರೇ ಎಲ್ಲವನ್ನೂ ತೆಗದುಕೊಂಡು ಏಕೆ ನಡೆಸಬಾರದು ?

ಶ್ರೀ ಅಜೀಜ್ ಸೇಟ್ : ಸರಕ್ಕಾರ ನಡೆಸುವುದಕ್ಕೆ ಮೆಷೀನರಿ ಇಲ್ಲ. ಎಂ. ಎಸ್. ಆರ್. ಟಿ. ಸಿ. ಅಟಾನಮಸ್ ಬಾಡಿ ಅದು ಕಂಟ್ರಾಕ್ಟ್ ಕ್ವಾರೆಜುಗಳನ್ನು ತೆಗದುಕೊಳ್ಳಲು ತೀರ್ಮಾನಿಸಿದೆ, ಬಹುಶಃ ಕೆಲವು ದಿವಸಗಳಲ್ಲಿ ಈ ಕೆಲಸವಾಗಬಹುದು. ಒಂದು ವಿಷಯವನ್ನು ಗಮನಿಸಬೇಕು. ತಮಿಳುನಾಡಿನಲ್ಲಿ ಸರಕಾರ ಕಾಂಟ್ರಾಕ್ಟ್ ಕ್ವಾರೀಜುಗಳನ್ನು ಮತ್ತು ಸ್ಟೇಟ್ ಕ್ವಾರೀಜುಗಳನ್ನು ಲೆಜಿಸ್ಲೇಷನ್ ಮೂಲಕ ತೆಗೆದುಕೊಳ್ಳಲು ಕಾನೂನು ಮಾಡಿತು. ಆದರೆ ಆ ಕಾನೂನು ಹೈಕೋರ್ಟಿನಲ್ಲಿ ಸ್ಟ್ರಕ್‌ಡೌನ್ ಆಗಿದೆ.

ನಾವೂ ಕಾನೂನು ತರಬಹುದೇ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ನಾನು ಒಂದು ವಿಚಾರ ಅಧ್ಯಕ್ಷರ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು :—ತಾವು ಬೇರೆ ವಿಚಾರವಿದ್ದರೆ ಅದನ್ನು ಪ್ರಶ್ನೋತ್ತರ ಕಾಲ ವಾದ ಮೇಲೆ ಪ್ರಸ್ತಾಪ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ಸ್ಪೆಷಲ್ ಸ್ಕ್ವಾಡ್‌ನವರು ಷರೀಕಾಗಿರುವುದರಿಂದ ಕಾಂಟ್ರಾಕ್ಟ್ ಕ್ವಾರೀಜುಗಳನ್ನು ಇಷ್ಟು ಅವ್ಯವಸ್ಥೆಯಿಂದ ನಡೆಸುತ್ತಿದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್ :—ಇದುವರೆಗೆ ಹಿಡಿದು ಜುಲ್ಮಾನೆ ಹಾಕಿರುವ ವಿಚಾರವನ್ನು ನಾನು ಹೇಳಿದೆ.

LANDS GRANTED UNDER N. A. SCHEME

41 SRI S. KARIAPPA (Kanakapur).—

Will the Minister for Agriculture and Forests be pleased to state:—

(*a*) whether lands granted under N. A. scheme will be treated on a par with the revenue lands in respect of tenancy ;

(*b*) the action the Government intend to take against the persons who have snatched away the lands granted under the scheme ?

SRI K. H. PATIL (Minister for Agriculture and Forests).—

(*a*) Only the lessee can cultivate the lands granted under Non-Alienation Scheme, subject to renewal of the lease every year and on payment of the lease rent.

(*b*) If such instances come to light the leases will be terminated and the land resumed by the Forest Department.

ಶ್ರೀ ಎಸ್. ಕರಿಯಪ್ಪ :—ಎನ್. ಎ. ಸ್ಕೀಂ ಪ್ರಕಾರ ಅರಣ್ಯದ ಜಮೀನು ಕೊಟ್ಟಿರುವುದನ್ನು ಬೇರೆಯವರಿಗೆ ಮಾರಬಹುದೇ ?

ಶ್ರೀ ಕೆ. ಹೆಚ್. ಪಾಟೀಲ್.—ಅದನ್ನು ಗೇಣೀದಾರರಿಗೆ ಮಾತ್ರ ಕೊಡಲಾಗಿದೆ. ಅದನ್ನು ಯಾವರೀತಿಯಲ್ಲೂ ಎಲಿಯನೇಟ್ ಮಾಡುವುದಕ್ಕೆ ಬರುವುದಿಲ್ಲ ಯಾರಾದರೂ ಎಲಯನೇಟ್ ವಗೈರೆ ಮಾಡಿರುವುದನ್ನು ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ :—ಕೆಲವು ಕಡೆ ಎಲಿಯನೇಟ್ ಮಾಡಿದ್ದಾರೆ, ಸುಮಾರು ಐದಾರು ಜನರು ಆ ರೀತಿ ಮಾಡಿದ್ದಾರೆ, ಬೇರೆಯವರು ಪಡೆದು ಐದಾರು ವರ್ಷದಿಂದ ಜಮೀನನ್ನು ಸಾಗು ಮಾಡುತ್ತಿದ್ದಾರೆ. ಇದಕ್ಕೇನು ಮಾಡುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್:—ಹಾಗೆ ಮಾಡಿದ್ದರೆ ಲೀಸ್ ರದ್ದುಮಾಡಿ ಸರಕಾರದ ವಶಕ್ಕೆ ಜಮೀನನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ :—ಇಲಾಖೆಯೇ ವಾಲಂಟರಿಯಾಗಿ ಇಂಥ ವಿಷಯಗಳಲ್ಲಿ ಕ್ರಮ ಕೈಕೊಳ್ಳುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್:—ಇಲಾಖೆ ಹಾಗೆ ಮಾಡಬೇಕಾದ್ದು ಅದರ ಕರ್ತವ್ಯ. ಮಾನ್ಯ ಸದಸ್ಯರು ಅಂಥ ಸಂದರ್ಭಗಳಿದ್ದು ಇಲಾಖೆಯ ಗಮನಕ್ಕೆ ಬಾರದಿರುವುದಿದ್ದರೆ ಹೇಳಿದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

LAND GRANTED IN KARUVINAHALLI KAVAL UNDER N. A. SCHEME

44 SRI S. KARIAPPA (Kanakapura).—

Will the Minister for Agriculture and Forests be pleased to state:—

(*a*) the names of persons who have been granted

lands in Karuvinahalli Kaval, Maralvadi Hobli, Kanakapura Taluk under N. A. scheme;

(*b*) the extent of land granted to each person;

(*c*) the year during which and the order under which the land was granted;

(*d*) whether it has come to the notice of the Government that some rowdy Section of these grantees have grabbed and have been trying to grab the land of weaker Section of the grantees;

(*e*) if so, the action they propose to take against such rowdy section of grantees?

SRI K. H. PATIL (Minister for Agriculture and Forests).—

(*a*) and (*b*)—

		A. G.
1.	Venkatappa son of Thimmaiah	2-20
2.	K. C. Ankaiah s/o Channe Gowda	2-20
3.	Gogya Naik s/o Krishna Naik	2-20
4.	Gonya Naik s/o Krishna Naik	2-20
5.	Thotacha Naik s/o Lakshman Naik	2-20
6.	Sakriya Naik s/o Lakshman Naik	2-20
7.	Ramala Naik s/o Somala Naik	2-20
8.	Narsimha s/o *Alias* Guddali Naik	2-20
9.	Siddaiah s/o Kempaiah	2-20
10.	Thovaraya Naik s/o Murhya Naik	2-20
	Total	25-00

(*c*) During 1954 under letter No: M2-9-193-48, dated 5th July 1954 of the Chief Conservator of Forests, Bangalore.

(Sri. K. H. Patil)

(*d*) such instances have not been noticed so far

(*e*) does not arise

ಶ್ರೀ ಎಸ್‌, ಕರಿಯಪ್ಪ : ಎಸ್‌. ಎ. ಸ್ಕೀಂ ಪ್ರಕಾರ ಜಮೀನನ್ನು ಪಡೆದಿರುವವರ ಪಟ್ಟಿಯನ್ನು ಕೊಟ್ಟಿದ್ದೀರಿ. ಇದರಲ್ಲಿ ಒರಿಜನಲ್‌ ಗ್ರ್ಯಾಂಟ್‌ ಬಿಟ್ಟು ಬೇರೆಯವರಿಗೆ ಮಂಜೂರು ಮಾಡಲು ಅವಕಾಶವಿದೆಯೇ ?

ಶ್ರೀ ಕೆ. ಹೆಚ್‌. ಪಾಟೀಲ್‌ :—ಲೀಜ್‌ ಇರುವುದರಿಂದ ಬೇರೆಯವರಿಗೆ ಕೊಡಲು ಬರುವುದಿಲ್ಲ. ಅವಶ್ಯಕತೆ ಇರುವವರಿಗೆ ಹಿಂದೆ ಕೊಟ್ಟಿದ್ದಾರೆ.

ಶ್ರೀ ಎಸ್‌. ಕರಿಯಪ್ಪ :—ಲೀಜ್‌ಗೆ ಪಡೆದವರು ಅವರ ಮಗನಿಗೆ ಕೊಡದೆ ಬೇರೆಯವರಿಗೆ ಕೊಡಲು ಅವಕಾಶವಿದೆಯೇ ?

ಶ್ರೀ ಕೆ. ಹೆಚ್‌. ಪಾಟೀಲ್‌ :....ಲೀಜ್‌ ಹೋಲ್ಡರ್‌ ತನಗೆ ಕೊಟ್ಟಿದ್ದ ಜಮೀನನ್ನು ಆತನ ಮಕ್ಕಳಿಗೆ ಕೊಡಲು ಹಕ್ಕಿಲ್ಲ. ಸರಕಾರಿ ಜಮೀನನ್ನು ಹಂಗಾಮಿಯಾಗಿ ಕೊಡಲಾಗಿದೆ. ಅದನ್ನು ಅರಣ್ಯ ಬೆಳೆಸಲು ಬೇಕಾದರೆ ಬಿಟ್ಟು ಕೊಡಬೇಕಾಗುತ್ತದೆ. ಬೇಕಾದಾಗ ಸರಕಾರ ರಿಸ್ಯೂಮ ಮಾಡಿಕೊಳ್ಳಬಹುದು. ಬೇರೆಯವರಿಗೆ ಬೇಕಾದರೆ ಕೊಡಲೂಬಹುದು.

ಶ್ರೀ ಎಸ್‌. ಕರಿಯಪ್ಪ :—ತಂದೆ ಸತ್ತಾಗ ಅದಕ್ಕೆ ಕೊಡಬೇಕಾದ ಕಂದಾಯ ಮಗ ಕೊಟ್ಟಿದ್ದರೂ ಕೂಡ ಜಮೀನನ್ನು ಅವನಿಂದ ತಪ್ಪಿಸಿ ಬೇರೆ ಯವರಿಗೆ ಕೊಟ್ಟಿದ್ದಾರೆ. ಇದು ಕ್ರಮಬದ್ಧವಾಗಿದೆಯೇ ?

ಶ್ರೀ ಕೆ. ಹೆಚ್‌. ಪಾಟೀಲ್‌ .—ಈಗ ಕೊಟ್ಟಿರುವುದು ಲೀಜ್‌ಮೇಲೆ. ವರ್ಷ ಮುಗಿಯುವವರೆಗೆ ಸಾಗು ಮಾಡಬಹುದು, ಮುಗಿದಮೇಲೆ ಅದನ್ನು ಬೇರೆಯವರಿಗೆ ಕೊಡಲು ಅಧಿಕಾರವಿದೆ.

ಶ್ರೀ ಎಂ. ಬಿ. ರಾಮಸ್ವಾಮಿ :—ಲ್ಯಾಂಡ್‌ ಗ್ರ್ಯಾಂಟ್‌ ರೂಲ್ಸ್‌ ಪ್ರಕಾರ ಈಗ ಕೊಡಲಾಗಿದೆ. 'ಅರ್ಜಿ ಸಕಾಲದಲ್ಲಿ ಬಂದರೆ ಮಾತ್ರ ಕೊಡುವಿರಾ ?

ಶ್ರೀ ಕೆ. ಹೆಚ್‌. ಪಾಟೀಲ್‌ :—ಇದು ಹಿಂದೆ ಕೊಟ್ಟಿರುವುದು, ಲ್ಯಾಂಡ್‌ ಗ್ರ್ಯಾಂಟ್‌ರೂಲ್ಸ್‌ಗೂ ಇದಕ್ಕೂ ಸಂಬಂಧವಿಲ್ಲ. ಇದು ಅರಣ್ಯದ ಜಮೀನು, ಬೇಕಾದಾಗ ಬಿಟ್ಟುಕೊಡಬೇಕು.

ಶ್ರೀ ಎಸ್. ಕರಿಯಪ್ಪ.—ಕೆಲವರು ಇತರರ ಜಮೀನನ್ನು ಆಕ್ರಮಿಸಿ ಕೊಂಡಿರುವುದರಿಂದ ಕೆಲವರಿಗೆ ಕಡಮೆ ಪ್ರದೇಶ ಸಿಕ್ಕಿದೆ. ಆದುದರಿಂದ ಅಳತೆ ಮಾಡಿಸಿ ಎರಡೂವರೆ ಎಕರೆಗಿಂತ ಕಡಮೆ ದೊರೆತಿರುವವರಿಗೆ ಕಡಮೆ ಇರುವುದನ್ನು ಸೇರಿಸಿ ಕೊಡುವಿರಾ !

ಶ್ರೀ ಕೆ. ಹೆಚ್. ಪಾಟೀಲ್;—ಬೇರೆಯವರು ಅಕ್ರಮವಾಗಿ ಸಾಗುವಳಿ ಮಾಡಿದ್ದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆಂದು ಆಗಲೇ ಹೇಳಿದೆ.

ಶ್ರೀ ಎಸ್. ಕರಿಯಪ್ಪ . ಸ್ವಾಮಿ : ಇಲ್ಲಿ ಏನಾಗಿದೆ ಎಂದರೆ ಸರ್ಕಾರದವರು ಕೆಲವರಿಗೆ ಕೊಟ್ಟಿರುವುದು ಕೇವಲ ಎರಡೂವರೆ ಎಕರೆ ಜಮೀನಾಗಿದ್ದರೂ ಅವರು ಅಲ್ಲಿ ಒತ್ತರಿಸಿ 4-5 ಎಕರೆ ಜಮೀನನ್ನು ಅಕ್ರಮಿಸಿಕೊಂಡಿದ್ದಾರೆ. ಇನ್ನು ಕೆಲವು ಖದೀಮರಾಗಿರತಕ್ಕ ಜನ ಜಮೀನನ್ನು ತಾವೇ ಅಕ್ರಮವಾಗಿ ಅಕ್ರಮಿಸಿ ಕೊಂಡಿದ್ದಾರೆ. ಇಂಥವರ ಬಗ್ಗೆ ಸರ್ಕಾರದವರೇನು ಕ್ರಮಗಳನ್ನು ಕೈಗೊಳ್ಳುತ್ತಾರೆ ?

ಶ್ರೀ ಕೆ. ಹೆಚ್. ಪಾಟೀಲ್ ; ಅಂಥ ವಿಚಾರಗಳನ್ನು ಸರ್ಕಾರದವರ ನಜರಿಗೆ ತಂದರೆ ಕೂಡಲೇ ವಿಚಾರಣೆ ಮಾಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ : ಹೀಗೆ ಸರ್ಕಾರದ ಜಮೀನು ಕೊಡುವಾಗ ಯಾವುದಾದರೂ ನಿರ್ದಿಷ್ಟವಾದ ಕ್ರಮಗಳನ್ನು ಅನುಸರಿಸುತ್ತಿದ್ದಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್ : ಈ ಜಮೀನುಗಳೆಲ್ಲಾ ಹಿಂದೆ ಕೊಟ್ಟಿದ್ದವುಗಳು. ಈಗ ಈ ಸರ್ಕಾರ ಯಾರಿಗೂ ಈ ಜಮೀನುಗಳನ್ನು ಕೊಡಬಾರದೆಂತಲೇ ತೀರ್ಮಾನ ಕೈಗೊಂಡಿದೆ. ಆದರೆ ಹಿಂದೆ ಕೊಟ್ಟಿದ್ದವುಗಳನ್ನು ಮಾನವೀಯತೆಯ ದೃಷ್ಟಿಯಿಂದ ನಿಧಾನವಾಗಿ ಬಿಡಿಸಿಕೊಳ್ಳಲಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಆರೋಗ್ಯಸಚಿವರು ಸಭೆಯಲ್ಲಿ ಇಲ್ಲದಿರುವುದರಿಂದ ಪ್ರಶ್ನೆ ನಂ. 53 ಹಾಗೂ 303 ಮುಂದಕ್ಕೆ ಹಾಕಲಾಗಿದೆ.

FODDER COLLECTED BY FOREST DEPARTMENT IN NORTH KANARA DISTRICT.

57. SMT. RADHA BHATT (Ankola).—

Will the Minister for Agriculture and Forests be pleased to state :—

(*a*) the quantum o. fodder collected and purchased in Siddapura, Hulekal, Sirsi, Janmane ranges by the Sirsi Forest Division for the drought affect areas ;

(Smt. Radha Bhatt)

(*b*) the expenditure incurred therefor ;

(*c*) the Divisions to which this fodder was sent ?

SRI K. H. PATIL.—(Minister for Agriculture and Forests.)

(a) 39 Truck Loads

(b) Rs. 5,174-75.

(*c*) The Deputy Commissioner, Karwar, as Co-ordinating Officer has arranged for the despatch of three truck loads of fodder grass. Rest of the fodder grass collected has been stored by the Forest Department, awaiting despatch instructions.

ಶ್ರೀಮತಿ ರಾಧಾಭಟ್:— ಇಲ್ಲಿ 39 ಟ್ರಕ್ ಲೋಡಿನಷ್ಟು ಹುಲ್ಲನ್ನು ಶೇಖರಣೆ ಮಾಡಿದ್ದರೂ ಕೇವಲ 3 ಟ್ರಕ್ ಲೋಡ್ ಹುಲ್ಲನ್ನು ಮಾತ್ರ ಬರಗಾಲ ಪೀಡಿತ ಪ್ರದೇಶಕ್ಕೆ ರವಾನಿಸಿ ಉಳಿದುದನ್ನು ಹಾಗೆ ನಿಲ್ಲಿಸಿಕೊಳ್ಳುವುದಕ್ಕೇನು ಕಾರಣ ?

ಶ್ರೀ ಕೆ. ಹೆಚ್. ಪಾಟೀಲ್:—ಅಲ್ಲಿ ಎಷ್ಟು ಡಿಮ್ಯಾಂಡ್ ಬಂದಿತೋ ಅಷ್ಟನ್ನು ಮಾತ್ರ ರವಾನೆ ಮಾಡಿದ್ದಾರೆ. ಅಲ್ಲದೆ ಉಳಿದ ಹುಲ್ಲನ್ನು ರವಾನೆ ಮಾಡುವುದಕ್ಕೆ ಟ್ರಾನ್ಸ್‌ಪೋರ್ಟ್ ಬಾಟಲ್‌ನೆಕ್ ಬೇರೆ ಇದ್ದಿತು.

ಶ್ರೀಮತಿ ರಾಧಾಭಟ್ :— ಸಂಗ್ರಹಿಸಿದ ಹುಲ್ಲನ್ನು ಸರಿಯಾಗಿ ರಕ್ಷಣೆ ಮಾಡದೆ ಇದ್ದುದರಿಂದಲೂ ಮತ್ತು ಇನ್ನು ಕೆಲವು ಭಾಗದ ಹುಲ್ಲನ್ನು ಅಲ್ಲಿಯ ಅಧಿಕಾರಿಗಳು ಖಾಸಗೀರೀತಿಯಾಗಿ ಮಾರಾಟ ಮಾಡಿಕೊಂಡಿದ್ದಾರೆಂದೂ ಕೆಲವು ಭಾಗ ನಾಶವಾಗಿದೆ ಎಂದೂ ನನಗೆ ತಿಳಿದು ಬಂದಿದೆ. ಈ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್ :— ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದರೆ ಆ ಅಧಿಕಾರಿಗಳು ಅಲ್ಲಿ ಉಳಿಯಲಿಕ್ಕೆ ಸಾಧ್ಯವಿರುತ್ತಿರಲಿಲ್ಲ.

ಶ್ರೀಮತಿ ರಾಧಾಭಟ್ ;— ನಾನು ಸರ್ಕಾರಕ್ಕೆ ಈ ವಿಚಾರವನ್ನು ಮೊದಲೇ ಪತ್ರದ ಮೂಲಕ ತಿಳಿಸಿದ್ದೆ. ಆದರೆ ಅಲ್ಲಿಯ ಕೆಲವು ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಈಗಲಾದರೂ ಸರ್ಕಾರದವರು ಇನ್ನೊಮ್ಮೆ ಸರಿಯಾಗಿ ವಿಚಾರಣೆ ಮಾಡಿ ತಪ್ಪಿತಸ್ಥರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :.... ಅಧಿಕಾರಿಗಳು ತಪ್ಪು ತಿಳುವಳಿಕೆ ಕೊಟ್ಟಿದ್ದಾರೋ ಅಥವಾ ಮಾನ್ಯ ಸದಸ್ಯರು ಕೊಡುತ್ತಿರುವುದು ಸರಿಯಾಗಿಲ್ಲವೋ ಇದನ್ನು ಇನ್ನೊಮ್ಮೆ ತನಿಖೆ ಮಾಡಿದ ನಂತರ ನಿರ್ಧಾರ ಮಾಡಬೇಕಾಗಿದೆ ವಿಚಾರ ಮಾಡೋಣ.

ಶ್ರೀ ಎಸ್. ಬಂಗಾರಪ್ಪ:— ಮಾನ್ಯ ಸದಸ್ಯರಾಗಲೇ ಸರ್ಕಾರಕ್ಕೆ ಪತ್ರ ಬರೆದಿದ್ದೇವೆಂದು ಹೇಳಿದ್ದಾಗ್ಗೂ ಅವರು ಇನ್ನು ಯಾವ ರೀತಿ ಇದನ್ನು ಸರ್ಕಾರದ ಗಮನಕ್ಕೆ ತರಬೇಕು ?

ಶ್ರೀ ಕೆ. ಹೆಚ್. ಪಾಟೀಲ್ :— ಅವರು ಪ್ರಶ್ನೆಯನ್ನು ಹಾಗೆ ಕೇಳಿಲ್ಲ. ಅವರು ಯಾವ ಅಧಿಕಾರಿಯ ಬಗ್ಗೆಯೂ ನಿರ್ದಿಷ್ಟ ಅಪಾದನೆಯನ್ನು ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ;- ಆ 39 ಟ್ರಕ್ ಹುಲ್ಲಿನಲ್ಲಿ 3 ಟ್ರಕ್ ವಿನಾ ಉಳಿದೆಲ್ಲಾ ಹುಲ್ಲೂ ಅಲ್ಲಿಲ್ಲ. ಅದು ನಾಶವಾಗಿದೆ, ಇಲ್ಲವೇ ಅಕ್ರಮವಾಗಿ ಮಾರಾಟವಾಗಿ ಹೋಗಿದೆ. ಅಲ್ಲಿ ಹುಲ್ಲು ಇಲ್ಲದಿರುವುದರಿಂದ ತಮ್ಮ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಹೀಗೆ ಉತ್ತರ ಕೊಟ್ಟಿದ್ದಾರಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್:- ಸಿರ್ಸಿ ಡಿವಿಜನ್ನಿನಲ್ಲಿ ಶೇಖರಣೆ ಮಾಡಿದ್ದು 39 ಟ್ರಕ್ ಮಾತ್ರ. ಹಾಗೇ ದಾಂಡೇಲಿ ಡಿವಿಜನ್ನಿನಲ್ಲಿ ಶೇಖರಿಸಿದ್ದು 106 ಟ್ರಕ್ಕು ಅದನ್ನು ಅಲ್ಲಿ ರೈಲ್ವೆ ಸೌಕರ್ಯವಿದ್ದುದರಿಂದ ಬೇಗ ಟ್ರಾನ್ಸ್‌ಪೋರ್ಟ್ ಮಾಡಿದ್ದೇವೆ. ಆದರೆ ಸಿರ್ಸಿ ಸರ್ಕಲ್ಲಿನ ಹುಲ್ಲು ಸ್ವಲ್ಪ ಬಿರುಸಾಗಿದ್ದುದರಿಂದ ಇದಕ್ಕೆ ಅಷ್ಟು ಹೆಚ್ಚಿನ ಡಿಮ್ಯಾಂಡ್ ಬರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ಅಲ್ಲಿ ಹುಲ್ಲೇ ಇಲ್ಲ. ಎಲ್ಲಾ ನಾಶವಾಗಿ ಹೋಗಿದೆ. ಅದನ್ನು ಪರಿಶೀಲನೆ ಮಾಡಿ ಏಕೆ ಕ್ರಮ ಕೈಗೊಳ್ಳಲಿಲ್ಲ ?

ಶ್ರೀ ಕೆ. ಹೆಚ್. ಪಾಟೀಲ್:- ಅಂಥ ವಿಚಾರಗಳಿದ್ದರೆ ಸರ್ಕಾರದ ನಜರಿಗೆ ತಂದರೆ ತಕ್ಷಣ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

SRI KAGODU THIMMAPPA :- Are you going to investigate the matter ?

SRI K. H. PATIL :—If you bring it to my notice I will certainly investigate it. I have the information that there is stock. If according to the Lon- member there is no stock and the same is brought to my notice I can certainly take suitable action in the matter.

ಶ್ರೀ ಕೋಣಂದೂರು ಲಿಂಗಪ್ಪ:- ಮಾನ್ಯ ಸದಸ್ಯರು ಅವರಿಗೆ ಇಂಥ ವಿಷಯಗಳೇನಾದರೂ ಇದ್ದರೆ ತಿಳಿಸಲಿ ಎಂದು ಹೇಳುತ್ತಲೇ ಇದ್ದಾರೆ ನಾನೇ ಆರಸಾಳುರೇಂಜ್ ಫಾರೆಸ್ಟ್‌ರ ಬಗ್ಗೆ ಹೇಳಿದ್ದ. ಆ ವಿಚಾರದಲ್ಲಿ ಏನು ಕ್ರಮ ಕೈಗೊಂಡಿದ್ದಾರೆ ?

SRI K. H. PATIL :—I would like to add to my reply for the information of the Lon. members that out of total number of 25 trucks 23 trucks have already been sent to the scarcity areas.

ಶ್ರೀಮತಿ ರಾಧಾಭಟ್ ;— ಅಲ್ಲಿ ಶೇಖರಣೆ ಮಾಡಿದ್ದು ಹಸೀ ಹುಲ್ಲನ್ನಲ್ಲ, ಆದು ಒಣಹುಲ್ಲು ಆದುದರಿಂದ ಆದು ಅಷ್ಟು ಬೇಗ ಹಾಳಾಗುವುದಿಲ್ಲ. ಇದನ್ನು ಮತ್ತೆ ಕೂಲಂಕಷವಾಗಿ ವಿಚಾರ ಮಾಡಿ ತಪ್ಪಿದ್ದರೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್: ಮಾನ್ಯ ಸದಸ್ಯರ ತೃಪ್ತಿಗಾಗಿ ಇನ್ನೊಮ್ಮೆ ವಿಚಾರಣೆ ನಡೆಸಲು ತಿಳಿಸುತ್ತೇನೆ. ಆದರೆ ನನಗೇನೋ ಈಗ ಕೊಟ್ಟಿರತಕ್ಕ ಉತ್ತರ ಸರಿಯಾಗಿರುವಂತೆ ಕಾಣುತ್ತೆ. ಕೀಳುವಾಗ ಎಲ್ಲ ಹುಲ್ಲೂ ಹಸುರಾಗಿರುತ್ತೆ, ಕಿತ್ತನಂತರ ಅದು ಒಣಗುತ್ತದೆ. ಆದಾಗ್ಯೂ ಇದನ್ನು ವಿಚಾರಣೆ ಮಾಡಿಸೋಣ.

CREDIT FACILITIES AFFORDED TO MARGINAL LAND HOLDERS

84. SRI K. SIDDAIAH (Santhemarahally).—
Will the Minister for Co-operation be pleased to state:—

(*a*) the nature of credit facilities afforded to farmers who hold less extent of lands than that held by the small holders ;

(*b*) if none, whether Government proposes to give any facilities for the economic improvement of such marginal land holders ?

SRI A. SHANKARA ALVA.—(Minister for Co-operation)

(a) Same as in the case of other farmers

(b) Does not arise

ಶ್ರೀ ಕೆ. ಸಿದ್ದಯ್ಯ :— ಸಣ್ಣ ಹಿಡುವಳಿದಾರರಿಗಿಂತ ಕಡಿಮೆ ಜಮೀನಿರತಕ್ಕವರಿಗೆ ಒಂದು ಪ್ರತ್ಯೇಕವಾದ ಯೋಜನೆ ಮಾಡಿ, ಇಲ್ಲವೇ ಇವರನ್ನು ಒಂದು ಪ್ರತ್ಯೇಕ ಗ್ರೂಪನ್ನಾಗಿ ಮಾಡಿ ಇವರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ :- ಈಗ ಎಕರೆಗಳ ಆಧಾರದ ಮೇಲೆ ಸಾಲ ಕೊಡಲಾಗುತ್ತಿದೆ. ಈ ವಿಚಾರದಲ್ಲಿ ಬೇರೆ ಯಾವ ಯೋಜನೆಗಳೂ ಸಧ್ಯದಲ್ಲಿ ಸರ್ಕಾರದ ಗಮನದಲ್ಲಿಲ್ಲ.

ಶ್ರೀ ಕೆ. ಸಿದ್ದಯ್ಯ:- ಅವರಿಗೆ ಸರ್ಕಾರದ ಕೇಳತಕ್ಕ ಸೆಕ್ಯೂರಿಟಿಯನ್ನು ಕೊಡಲು ಸಾಧ್ಯವಿಲ್ಲ. ಆದಕ್ಕಾಗಿ ಒಂದು ಪ್ರತೇಕ ಸ್ಕೀಮನ್ನು ಮಾಡುವುದು ಒಳ್ಳೆಯುದಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಎಕರೆಗಳ ದಾಮಾಶಯದಲ್ಲಿ ಪ್ರತಿಯೊಬ್ಬರಿಗೂ ಸಾಲದ ಸೌಲಭ್ಯ ದೊರೆಯುತ್ತಿದೆ. ಅದನ್ನು ಮೀರಿ ಸಾಲ ಕೊಟ್ಟರೆ ಅವರಿಗೆ ಅದನ್ನು ಹಿಂದಕ್ಕೆ ಕೊಡಲು ತೊಂದರೆಯಾಗುತ್ತದೆ. ಆದುದರಿಂದ ಹೆಚ್ಚು ಸಾಲ ಕೊಡುವುದಕ್ಕೆ ಸಾಧ್ಯವಿಲ್ಲ.

1-30 P. M.

ಶ್ರೀ ಹೆಚ್. ಎಸ್. ಸಿದ್ಧಪ್ಪ—ಉತ್ತರದಲ್ಲಿ ಚಿಕ್ಕ ಹಿಡುವಳಿದಾರರಿಗೂ ಮತ್ತು ದೊಡ್ಡ ಹಿಡುವಳಿದಾರರಿಗೂ ಒಂದೇ ಸಮನೆ ಸಾಲ ಸಿಗುತ್ತದೆಂದು ಹೇಳಿದ್ದೀರಿ. ಅವರಿಗೆ ಎಷ್ಟು ತರಹ ಸಾಲ ಬೇರೆಬೇರೆಯಾಗಿ ಸಿಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎ. ಶಂಕರ ಆಳ್ವ.—ಅದನ್ನು ನಿಗದಿ ಮಾಡುತ್ತೇವೆ. ಯಾವ್ಯಾವ ಬೆಳೆಗೆ ಯಾವ ಯಾವ ರೀತಿಯಲ್ಲಿ ಸಾಲ ಎಷ್ಟೆಷ್ಟು ಕೊಡಬೇಕೆಂಬುನ್ನು ನಿಗದಿ ಮಾಡಲಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಸಣ್ಣ ಹಿಡುವಳಿದಾರರಿಗೂ ಮತ್ತು ಮ್ಯಾರ್ಜಿನಲ್ ಲ್ಯಾಂಡ್ ಹೋಲ್ಡರ್ಸ್‌ಗೂ ಇವರಿಬ್ಬರಿಗೂ ಈ ಸ್ಕೀಮ್‌ನಲ್ಲಿರತಕ್ಕ ವ್ಯತ್ಯಾಸವೇನು?

ಶ್ರೀ ಎ. ಶಂಕರ ಆಳ್ವ.—ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೊಟ್ಟರೆ, ಜವಾಬು ಹೇಳುತ್ತೇನೆ.

ಶ್ರೀ ಹೆಚ್. ಜಿ. ಚನ್ನಪ್ಪ.—ಸಣ್ಣ ಹಿಡುವಳಿದಾರರಿಗೆ ಸಾಲಕೊಡುತ್ತೀರಿ. ಸಬ್ಸಿಡಿಯ ಅನುಕೂಲತೆಯೂ ಅವರಿಗೆ ದೊರೆಯುತ್ತದೆ. ಆದರೆ ಅವರಿಗಿಂತ ಕಡಿಮೆ ಹಿಡುವಳಿದಾರರಿಗೆ ಯಾವ ತರಹ ಸಬ್ಸಿಡಿ ಸಿಗುವುದಿಲ್ಲ. ಕೇವಲ ಕಡಿಮೆ ಸಾಲ ಮಾತ್ರ ಸಿಗುತ್ತದೆ ಆದರಿಂದ ಅವರಿಗೂ ಏನಾದರೂ ಸಬ್ಸಿಡಿ ರೂಪದಲ್ಲಿ ಸಾಲ ಸಿಗುವ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಆಲೋಚನೆ ಮಾಡುತ್ತೇವೆ

ಶ್ರೀ ಎಂ. ಬಿ. ರಾಮಸ್ವಾಮಿ.—ಸಣ್ಣ ಹಿಡುವಳಿದಾರರಿಗೆ ಹೆಚ್ಚಿಗೆ ಮಾನ್ಯತೆ ಕೊಡತ್ತೇವೆ ಎಂಬುದಾಗಿ ಹೇಳಿದ್ದೀರಿ. ಆದರೂ ಬಹುಭಾಗ ಸಣ್ಣ ಹಿಡುವಳಿದಾರರಿಗೆ ಸರಿಯಾದ ಸಾಲದ ಸೌಲಭ್ಯ ದೊರೆಯುತಾ ಇಲ್ಲ. ಹೆಚ್ಚಿಗೆ ಶ್ರೀಮಂತರಿಗೆ ಆ ಸಾಲ ಹೋಗುತ್ತಿದೆ. ಅದರಿಂದ ತಾವು ದೊಡ್ಡ ಮನಸ್ಸು ಮಾಡಿ ಹೆಚ್ಚಿಗೆ ಈ ಬಾಬಿಗೆ ಗಮನಕೊಟ್ಟು ಸಣ್ಣ ಹಿಡುವಳಿದಾರರಿಗೆ ಹೆಚ್ಚಿಗೆ ಸಾಲದ ಸೌಲಭ್ಯ ಸುಲಭ ರೀತಿಯಲ್ಲಿ ದೊರಕುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ. ಈ ಸ್ಕೀಂ ಪ್ರಕಾರ ಅದು ಸಾಧ್ಯವಿಲ್ಲ. ಏಕೆಂದರೆ ಎಷ್ಟು ಎಕರೆ ಬೆಳೆಗೆ ಎಷ್ಟು ಸಾಲ ಕೊಡಬೇಕೆಂಬುದನ್ನು ಮೊದಲೇ ನಿರ್ಣಯ ಮಾಡುತ್ತಾರೆ. ಕೇವಲ ಅರ್ಧ ಎಕರೆ ಜಮೀನು ಇರತಕ್ಕಂಥವರಿಗೆ ಸಾಲವನ್ನು ಜಾಸ್ತಿಯಾಗಿ ಕೊಟ್ಟರೆ, ಅವರಿಂದ ಕೊಟ್ಟ ಸಾಲವನ್ನು ವಾಪಸ್ಸು ಪಡೆಯುವುದ ಕ್ಕಾಗುವುದಿಲ್ಲ. ಅದರಿಂದ ಬೆಳೆಯ ದಾಮಾಶಯದ ಪ್ರಕಾರ ಸಾಲವನ್ನು ಕೊಡಬೇಕಾಗುತ್ತದೆ.

ಶ್ರೀ ಬಾಪೂಗೌಡ ರಾಯಪ್ಪ.—ಮಾನ್ಯ ಸ್ನೇಹಿತರು ಕೇಳುವ ಪ್ರಶ್ನೆ ಸ್ಪಷ್ಟವಾಗಿದೆ. ಆದರೆ ಮಾನ್ಯ ಮಂತ್ರಿಗಳು ಕೊಟ್ಟ ಉತ್ತರ ಸರಿಯಾಗಿಲ್ಲ. ಸಣ್ಣ ಹಿಡುವಳಿದಾರರಿಗಿಂತ ಕಡಿಮೆ ಹಿಡುವಳಿದಾರರಾಗಿರುವ ರೈತರು ಕೇವಲ 1, 2, 3, 4, 5 ಎಕರೆಗಳಷ್ಟು ಜಮೀನು ಹೊಂದಿದ್ದರೆ ಅಂತವರಿಗೆ ಕೇಂದ್ರ ಸರ್ಕಾರ ದಿಂದಾಗಲೀ ಅಥವಾ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದಾಗಲೀ ಸರಿಯಾಗಿ ಸಾಲದ ಸೌಲಭ್ಯ ಸಿಗುತ್ತಾ ಇಲ್ಲ. ಅಂತಹವರ ಬಗ್ಗೆ ತಾವೇನಾದರೂ ಹೊಸ ದಾಗಿ ಏನಾದರೂ ಬೇರೆ ಯೋಜನೆಯನ್ನು ಹಾಕಿದ್ದೀರಾ?

ಶ್ರೀ ಎ. ಶಂಕರ ಆಳ್ವ: ಅಂತಹವರಿಗೆ ಸಾಲ ಸಿಗುವ ಹಕ್ಕು ಇದ್ದರೆ ಮಾತ್ರ ಅವರಿಗೆ ಸಾಲ ಸಿಗುತ್ತದೆ.

ಶ್ರೀ ಕೆ.ಹೆಚ್. ಹನುಮೇಗೌಡ : ಈ ಯೋಜನೆಯನ್ನು ಕೇವಲ ಮೈಸೂರು ಮತ್ತು ಬಿಜಾಪುರ ಜಿಲ್ಲೆಗಳಲ್ಲಿರತಕ್ಕ ಸಣ್ಣ ಹಿಡುವಳಿದಾರರಿಗೆ ಮಾತ್ರ ಅಳವಡಿಸಿ ಅವರಿಗೆ ಮಾತ್ರ ಅನುಕೂಲ ಮಾಡಿಕೊಡುತ್ತಿದ್ದೀರಿ. ಆದರೆ ಈ ಯೋಜನೆಯನ್ನು ಬೇರೆ ಬೇರೆ ಜಿಲ್ಲೆಗಳಲ್ಲಿರತಕ್ಕ ಎಲ್ಲಾ ಸಣ್ಣ ಹಿಡುವಳಿದಾರರಿಗೂ ಹಾಗೂ ಕಡಿಮೆ ಹಿಡುವಳಿದಾರರಿಗೂ ಅನ್ವಯ ಮಾಡಿ ಅವರಿಗೆ ಇದೇ ರೀತಿಯಲ್ಲಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಆಲೋಚನೆ ಮಾಡುತ್ತಿದ್ದೇವೆ. ಅದಕೋಸ್ಕರವೇ ಈಗ ಒಂದು ಕಮಿಟಿಯನ್ನು ಮಾಡಿದ್ದೇವೆ. ಅವರು ಅದರ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಶ್ರೀ ಎನ್. ಬಸವಯ್ಯ: ಸಣ್ಣ ಹಿಡುವಳಿದಾರರಿಗೆ ಸಹಕಾರ ಸಂಘಗಳ ಮೂಲಕ ವ್ಯವಸಾಯ ಉಪಕರಣಗಳನ್ನು ಹಾಗೂ ಪ್ರಾಣಿಗಳನ್ನು ಕೊಳ್ಳುವುದಕ್ಕೆ ಸಾಲ ಕೊಡುತ್ತಾರೆ. ಇದರಲ್ಲಿ ಅನೇಕ ಸಂದರ್ಭಗಳಲ್ಲಿ ಲೋಕಲ್ಲಾಗಿ ಅನೇಕರಿಗೆ ಸಾಲ ಸಿಗುತ್ತಾ ಇಲ್ಲ. ಕ್ರಾಸ್ ಬ್ರೀಡ್ ಇಟ್ಟುಕೊಂಡಿರುವವರಿಗೆ ಹೆಚ್ಚಿಗೆ ಸಾಲ ಸಿಗುತ್ತದೆ. ಹವಾಗುಣಗಳಿಂದ ಒಂದು ವೇಳೆ ಕ್ರಾಸ್ ಬ್ರೀಡ್ಸ್ ಸತ್ತು ಹೋಗುವುದೂ ಉಂಟು. ಆದ್ದರಿಂದ ಅಂತಹವರಿಗೆ ಸಾಲವನ್ನು ಕಡಿಮೆ ಕೊಟ್ಟರೂ ಪರವಾ ಇಲ್ಲ. ಆದ್ದರಿಂದ ಸಣ್ಣ ಹಿಡುವಳಿದಾರರಿಗಿಂತ ಕಡಿಮೆ ಇರತಕ್ಕ ಹಿಡುವಳಿದಾರರಿಗೆ ಎರಡು ಹಸುಗಳನ್ನಾದರೂ ಕೊಳ್ಳುವುದಕ್ಕೆ ಬೇಕಾದಂಥ ಸಾಲವನ್ನು ಸರ್ಕಾರದವರು ಈ ಯೋಜನೆಯಲ್ಲಿ ಒದಗಿಸುವುದಕ್ಕೆ ಸಾಧ್ಯವೇ ?

ಶ್ರೀ ಎ. ಶಂಕರ ಆಳ್ವ:....ಈಗಿನ ಯೋಜನೆಯ ಪ್ರಕಾರ ಅದು ಸಾಧ್ಯವಿಲ್ಲ. ಆ ಬಗ್ಗೆ ಇನ್ನೂ ಏನು ಮಾಡಬೇಕೆಂಬ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ ಈ ಯೋಜನೆಯನ್ನು ಇಡೀ ಸ್ಟೇಟಿಗೆ ಎಕ್ಸ್‌ಟೆಂಡ್ ಮಾಡಬೇಕೆಂದಿದ್ದೇವೆ. ಅದನ್ನು ಯಾವ ರೀತಿಯಲ್ಲಿ ಕಾರ್ಯಗತ ಮಾಡುವುದಕ್ಕೆ ಸಾಧ್ಯವೋ ಅದನ್ನು ನೋಡಿ ಮಾಡುತ್ತೇವೆ.

ಶ್ರೀ ಹೆಚ್. ಎನ್. ಸಿದ್ದಪ್ಪ.—ಭೂ ಅಭಿವೃದ್ಧಿ ಬ್ಯಾಂಕಿನಿಂದ ತೆಂಗಿನ ಬೆಳೆ ಯೋಜನೆಗೆ ಏನಾದರೂ ಮಿನಿಮಮ್ ಬೆಳೆ ಇದ್ದರೆ ಮಾತ್ರ ಸಾಲ ಕೊಡುತ್ತಾರೆ. ಇದಕ್ಕೊಂದು ನಿಬಂಧನೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೋ? ಅಂದಮೇಲೆ

(ಶ್ರೀ ಎಚ್. ಎಸ್. ಸಿದ್ದಪ್ಪ)

ಕೇವಲ 2-3-4 ಎಕರೆಗಳಿಗಿಂತ ಕಡಿಮೆ ಜಮೀನು ಇಟ್ಟುಕೊಂಡು ಆರೇಂಜ್ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಅಂತಹವರಿಗೆ ಈ ಯೋಜನೆಯಲ್ಲಿ ಹೆಚ್ಚು ಹಣ ಸಾಲ ಸಿಗುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಶಂಕರ ಅಳ್ವ.— ಅದನ್ನು ಪರಿಶೀಲಿಸೋಣ

ಶ್ರೀ ಸಿ. ಬೈರೇಗೌಡ.— ಸಣ್ಣ ಹಿಡುವಳಿದಾರರ ಬಗ್ಗೆ ಒಂದು ಕಮಿಟಿಯನ್ನು ನೇಮಿಸುತ್ತೇವೆ ಎಂದು ಹೇಳಿದ್ದೀರಿ. ಅದು ರಾಜ್ಯಮಟ್ಟದಲ್ಲೋ, ತಾಲ್ಲೂಕು ಮಟ್ಟದಲ್ಲೋ ಅಥವಾ ಜಿಲ್ಲಾ ಮಟ್ಟದಲ್ಲೋ ಒಂದುವೇಳೆ ಆ ರೀತಿಯಾಗಿ ಮಾಡದಿದ್ದರೆ, ಈಗಲಾದರೂ ಎಲ್ಲಾ ಮಟ್ಟಗಳಲ್ಲಿಯೂ ಅಂತಹ ಕಮಿಟಿಯನ್ನು ರಚನೆ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ:- ಪ್ರತಿಯೊಂದು ತಾಲ್ಲೂಕಿಗೆ ಸಂಬಂಧ ಪಟ್ಟಹಾಗೆ ಒಂದೊಂದು ಕಮಿಟಿಯನ್ನು ಮಾಡಬೇಕೆಂಬ ಅಲೋಚನೆ ಇದೆ. ನಾಳೆಯ ದಿನ ಒಂದು ಮೀಟಿಂಗ್ ಕರೆಯುತ್ತಿದ್ದೇನೆ. ಅದಕ್ಕೆ ತೀವ್ರವಾಗಿ ಎಷ್ಟು ಕೇಂದ್ರದಿಂದ ಹಣ ಸಹಾಯ ಬರುತ್ತದೋ ಅದನ್ನು ನೋಡಿಕೊಂಡು ಎಲ್ಲೆಲ್ಲಿ ಅಂತಹ ಯೋಜನೆಗಳು ಇಲ್ಲವೋ ಅಂತಹ ಕಡೆಗಳಲ್ಲೆಲ್ಲಾ ಈ ಯೋಜನೆಯನ್ನು ಸರ್ಕಾರ ವಿಸ್ತರಿಸಬೇಕೆಂದು ಆಲೋಚನೆ ಮಾಡುತ್ತಿದೆ.

ಶ್ರೀ ಕೆ. ಸಿದ್ದಯ್ಯ:- ಉತ್ತರದಲ್ಲಿ ಸಣ್ಣ ಹಿಡುವಳಿದಾರರಿಗೂ ಮತ್ತು ಅವರಿಗಿಂತ ಕಡಿಮೆ ಹಿಡುವಳಿದಾರರಿಗೂ ದಾಮೂಶಯ ಪ್ರಕಾರ ಎಲ್ಲರಿಗೂ ಒಂದೇ ಸಮನೆ ಸಾಲ ಸಿಗುತ್ತದೆಂದು ಹೇಳಿದ್ದಾರೆ. ಸಣ್ಣ ಹಿಡುವಳಿದಾರರಿಗೂ ಮತ್ತು ಅವರಿಗಿಂತ ಕಡಿಮೆ ಇರುವ ಜನರಿಗೂ ಯೂನಿಫಾರಂ ಕಂಡೀಷನ್ಸ್ ಇರುವುದರಿಂದ, ಈಗ ಇರತಕ್ಕ ರೂಲ್ಸನ್ನು ರಿಲ್ಯಾಕ್ಸ್ ಮಾಡಿ ಅವರಿಗೂ ಹೆಚ್ಚಿಗೆ ಸಬ್ಸಿಡಿ ಕೊಟ್ಟು ಅವರ ಪರಿಸ್ಥಿತಿಯನ್ನು ಇಂಪ್ರೂವ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಎ. ಶಂಕರ ಆಳ್ವ:- ಅದನ್ನೂ ಸಹ ಗಮನಿಸುತ್ತೇವೆ

AFFORESTATION IN YELBURGA TALUK

10. Sri PRABHURAJ PATIL (Yelburga).— Will the Minister for Agriculture and Forests be pleased to state :-

(*a*) the area of Yelburga Taluk of Raichur District;

(*b*) the area of forest land in the Taluk;

(*c*) the number of plants in possession of Government in this Taluk;

(*d*) the staff provided to this Taluk for the development of forest;

(*e*) whether a representation has been received by the Government to provide a separate forester, two guards and at least five watchmen to this Taluk;

(*f*) if so the action taken by the Government in this behalf;

(*g*) whether any schemes have been prepared by the Government for afforestation in the Taluk?

Sri K. H PATIL (Minister for Agriculture and Forests)

(*a*) 1,49,018 hectares

(*b*) 80.92 hectares

(*c*) no account is maintained regarding the number of plants.

(*d*) one guard in addition to staff at the District and Division levels.

(*e*) yes. There is a proposal to appoint staff with one forester and two guards to develop forest on large scale and raise plantations in revenue lands.

(*f*) the scheme has been held up due to want of finance.

(*g*) yes. The scheme of afforestation will be implemented when the funds are provided in the budget.

ಶ್ರೀ ಪ್ರಭುರಾಜ ಪಾಟೀಲ್ ಃ ನನ್ನ ಪ್ರಶ್ನೆ ಉತ್ತರವಾಗಿ ಈ ತಾಲ್ಲೂಕಿಗೆ ಅರಣ್ಯವನ್ನು ಒದಗಿಸಿ ಕೊಡಲು ಆಯುವ್ಯಯದಲ್ಲಿ ಹಣ ಒದಗಿಸಿದಾಗ ಅರಣ್ಯ ಬೆಳೆಸುವ ಯೋಜನೆ ನೆರವೇರಿಸಲಾಗುವುದು ಎಂಬುದಾಗಿ ಹೇಳಿದೆ. ಈ ಬಗ್ಗೆ ಮುಂದಾದರೂ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೀರಾ ?

†ಶ್ರೀ ಕೆ. ಹೆಚ್. ಪಾಟೀಲ್ : ತೆಗೆದುಕೊಳ್ಳುತ್ತೇವೆ

ಶ್ರೀ ಪ್ರಭುರಾಜ ಪಾಟೀಲ್ ; ಈ ಯೋಜನೆಯನ್ನು ಈ ತಾಲ್ಲೂಕಿನಲ್ಲಿ ಪೂರೈಸುವುದಕ್ಕೆ ಆಯವ್ಯಯದಲ್ಲಿ ಹಣವನ್ನು ಯಾವಾಗ ಒದಗಿಸುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್ : ಸರ್ಕಾರಕ್ಕೆ ಚೀಫ್ ಕನಸರವೇಟರ್ ಆಫ್ ಫಾರೆಸ್ಟ್ಸ್ ಅವರು ಇದರ ಬಗ್ಗೆ ಒಂದು ಯೋಜನೆಯನ್ನು ಕಳುಹಿಸಿದ್ದಾರೆ. ಆ ಯೋಜನೆಗೆ ಸುಮಾರು ಒಂದು ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ. ತಾಲ್ಲೂಕಿನಲ್ಲಿ ಎಷ್ಟು ಭೂಮಿ ಸಿಗುತ್ತದೋ ಅಲ್ಲಿ ಫಾರೆಸ್ಟ್ ಬೆಳೆಸಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಅದಕ್ಕಾಗಿ ಒಬ್ಬ ಫಾರೆಸ್ಟರ್ ಹಾಗೂ ಇಬ್ಬರು ಗಾರ್ಡ್ಸ್ ಇರುವ ಸಿಬ್ಬಂದಿಯನ್ನು ನೇಮಿಸುವ ವ್ಯವಸ್ಥೆಯೂ ಇದೆ. ಈಗಿನ ತುರ್ತು ಆರ್ಥಿಕ ಕಾರಣಗಳಿಗೋಸ್ಕರವಾಗಿ ಇದನ್ನು ಸ್ವಲ್ಪ ಮುಂದಕ್ಕೆ ಹಾಕಿ ಮುಂದೆ ಶೀಘ್ರಗತಿಯಿಂದ ಈ ಕಾರ್ಯ ಮಾಡಬೇಕೆಂದು ನಾನು ಉತ್ಸುಕನಾಗಿದ್ದೇನೆ.

MR. SPEAKER :—Now questions are over. Adjourning the house on the death of sitting member of the house.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : ನನ್ನ ಒಂದು ಕ್ರಿಯಾಲೋಪ ಇದೆ. ಮಾನ್ಯ ಸದಸ್ಯರೊಬ್ಬರು ಕಳೆದ ಆಯವ್ಯಯ ಅಧಿವೇಶನ ನಡೆಯುತ್ತಿರುವ ಸಮಯದಲ್ಲಿ ತೀರಿಕೊಂಡಾಗ್ಗೆ ಈ ಸದನಕ್ಕೆ ರಜ ಕೊಟ್ಟಿರುವ ನಿದರ್ಶನವಿದೆ

ಅಧ್ಯಕ್ಷರು ; ಅದು ಕ್ರಿಯಾಲೋಪ ಆಗುವುದಿಲ್ಲ

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ : ಹಾಗಾದರೆ ನಾನು ವಿವರಣೆ ಕೇಳುತ್ತೇನೆ.

ಅಧ್ಯಕ್ಷರು : ನಾನೇ ವಿವರಣೆ ಕೊಡುತ್ತೇನೆ

(ಹಲವು ಸದಸ್ಯರು ಎದ್ದು ಮಾತನಾಡಲು ಪ್ರಯತ್ನ ಮಾಡಿದರು)

ಶ್ರೀ ಹೆಚ್. ಟಿ. ಕೃಷ್ಣಪ್ಪ ; ಮಾನ್ಯ ಅಧ್ಯಕ್ಷರೇ, ಈ ಸಭೆಯ ಒಬ್ಬ ಮಾನ್ಯ ಸದಸ್ಯರು ತೀರಿ ಹೋಗಿರುವುದರಿಂದ ಇವತ್ತು ಈ ಅಧಿವೇಶನ ನಡೆಸದೆ ರಜಾ ಕೊಡಬೇಕಾಗಿತ್ತು. ಹಿಂದೆ ಈ ಸಂಪ್ರದಾಯ ನಡೆದುಕೊಂಡು ಬರುತ್ತಿತ್ತು. ಆದರೆ ಇವತ್ತು ಆ ಸಂಪ್ರದಾಯದಿಂದ ದೂರ ಹೋದ ಹಾಗೆ ಕಾಣುತ್ತದೆ.

ಅಧ್ಯಕ್ಷರು ; ಸಂಪ್ರದಾಯದಿಂದ ದೂರ ಹೋಗಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ; ತೀರಿಹೋದ ಮಾನ್ಯ ಸದಸ್ಯರ ಸ್ಮಶಾನ ಯಾತ್ರೆ ಅಲ್ಲಿ ನಡೆಯುತ್ತಿರುವಾಗ ಇಲ್ಲಿ ನಾವು ಚರ್ಚೆ ಮಾಡುತ್ತಿರುವುದು ಯಾವ ನ್ಯಾಯ.

ಅಧ್ಯಕ್ಷರು : ಮಾನ್ಯ ಸದಸ್ಯರು ಅ ರೀತಿ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸಬೇಕಾಗಿಲ್ಲ. ಈ ಮನೆಯ ಸದಸ್ಯರ ಅಭಿಪ್ರಾಯ ಏನಿದೆಯೋ ಅದರಂತೆ ನಾವು ಮಾಡಬಹುದು. ಈ ಮನೆಯಲ್ಲಿ ಒಂದು ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದ್ದೇವೆ. ಅದರ ಪ್ರಕಾರ ನಾವು ನಡೆದುಕೊಂಡು ಹೋಗಬೇಕಾಗುತ್ತದೆ. ಆದುದರಿಂದ ಸಂಪ್ರದಾಯದಿಂದ ದೂರ ಹೋಗಿದ್ದೇವೆ ಎಂದು ಹೇಳುವುದು ಸರಿಯಲ್ಲ. ಈ ಮನೆಯವರು ಏನು ಹೇಳುತ್ತಾರೋ ಅದರಂತೆ ನಡೆಯುವುದು ನನ್ನ ಕರ್ತವ್ಯ.

ಶ್ರೀ ಹೆಚ್. ಎಸ್. ಸಿದ್ದಪ್ಪ : ಆದರೆ ತಾವು ವಿರೋಧ ಪಕ್ಷದ ನಾಯಕರಿಗೆ ಆ ರೀತಿ ಹೇಳುವುದಕ್ಕೆ ಬರುವುದಿಲ್ಲವೆಂದು ಹೇಳಿದರೆ ನಮಗೆ ನೋವಾಗುತ್ತದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ : ಅಧ್ಯಕ್ಷರೆ, ತಾವು ಏನು ಕಾರಣದಿಂದ ಆ ಮಾತನ್ನು ಉಪಯೋಗಿಸಿದ್ದೀರಿ ಎಂದು ನನಗೆ ಗೊತ್ತಾಗಲಿಲ್ಲ. ನಾನು ಏನು ಒಂದು ನಿಲುವನ್ನು ತೆಗೆದುಕೊಂಡು ಮಾತನಾಡುತ್ತಿದ್ದೇನೆ, ಅದನ್ನು ಪುಷ್ಟೀಕರಿಸುವುದಕ್ಕೆ ನನ್ನ ಹತ್ತಿರ ಬೇಕಾದಷ್ಟು ಮಾಹಿತಿಗಳು ಇವೆ. ಹಿಂದೆ ಈ ರೀತಿಯ ಒಂದು ಸಂಪ್ರದಾಯ ಇದ್ದುದರಿಂದ, ಅದನ್ನು ಬಿಟ್ಟು ನಾವು ದೂರ ಹೋಗುತ್ತಿದ್ದೇವೆಂದು ನನಗೆ ಕಂಡು ಬಂದುದರಿಂದ ನಾನು ಹಾಗೆ ಹೇಳಿದ್ದೇನೆ. ಆದ್ದರಿಂದ ಈ ವಿಚಾರದಲ್ಲಿ ತಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಈ ಮನೆಯ ಸದಸ್ಯರ ಕಳಕಳಿಯನ್ನು ತಾವು ಗಮನದಲ್ಲಿಟ್ಟುಕೊಂಡು ಒಂದು ನಿರ್ಣಯಕ್ಕೆ ಬರಬೇಕಾಗಿದೆ. ಹಿಂದೆ ದಿವಂಗತ ಟಿ. ಎನ್. ಮಾದಪ್ಪ ಗೌಡರು ನಿಧನರಾದಾಗ ಸಹ ಸಭೆಗೆ ರಜಾ ಕೊಟ್ಟಿದ್ದರು. ಇವತ್ತು ತೀರಿಹೋದ ಸದಸ್ಯರ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವಂತಹ ಅನೇಕ ಸದಸ್ಯರು ಇಲ್ಲಿ ಇದ್ದಾರೆ. ಆದ್ದರಿಂದ ತಾವು ಸದನವನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ : — ಈ ಸದನ ನಡೆಯುತ್ತಿರುವಾಗ ಮತ್ತು ಸದಸ್ಯರ ಶವಸಂಸ್ಕಾರ ನಡೆಯುತ್ತಾ ಇರುವುದರಿಂದ ಇದು ಬಹಳ ಗಹನವಾದ ವಿಚಾರವಾಗಿದೆ. ನಾವು ಒಂದು ಒಳ್ಳೆಯ ಸಂಪ್ರದಾಯವನ್ನು ಬೆಳೆಸಿಕೊಂಡು ಬರುವ

(ಶ್ರೀ ಕೋಣಂದೂರು ಲಿಂಗಪ್ಪ)

ದೃಷ್ಟಿಯಿಂದ ಈ ಸಭೆಯನ್ನು ನಡೆಸಿಕೊಂಡು ಹೋಗುವುದು ಅಷ್ಟು ಯುಕ್ತವಲ್ಲ. ಇದಕ್ಕೆ ರೂಲ್ಸ್ ರೆಗ್ಯೂಲೇಶನ್ಸ್ ಎಂದು ಹೇಳಿಕೊಂಡು ಹೋಗದೆ ಒಂದು ನಿರ್ಣಯವನ್ನು ಮಾಡಬೇಕಾಗಿದೆ. ಅವರು ನಮ್ಮ ಸಹೋದ್ಯೋಗಿಗಳಾಗಿರುವುದರಿಂದ ತಾವು ಇದರ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Madam Speaker :—The procedure adopted in parliament is as follows :

"If the death of a sitting member or a minister occurs in New-Delhi while the house is sitting, further business might be suspended and the house adjourned after the obituary reference is made....

"It is now the practice that the House adjournes only when it is necessary to enable the members to take part in the funeral procession of a sitting member irrespective of the fact whether the deceased held the office of a minister or not."

ಇಲ್ಲಿ ಸಭೆ ಅಧಿವೇಶನದಲ್ಲಿದ್ದಾಗ ಸದಸ್ಯರು ತೀರಿಹೋದರೆ ನಾವು ಸಂಪ್ರದಾಯದ ಪ್ರಕಾರ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಿಲ್ಲ. ಸದಸ್ಯರ ಅಭಿಪ್ರಾಯದಲ್ಲಿ ರಜಾ ಕೊಡಬೇಕೆಂದಿದ್ದರೆ ನನ್ನದು ಏನೂ ಅಭ್ಯಂತರವಿಲ್ಲ.

Sri H.M. Channabasappa : (Minister for Public Works and Electricity) : - The hon. speaker, already discussed this questson with me. I left it to the speaker, because the speaker is guided by the Rules of Procedure and *Sampradayams.* I cannot tell the speaker to act in a particular way. It would be against all standards.

Voices :—What is your personal opinion ?

Sri H. M. Channabasappa :—My personal opinion does not count here. I am also to be guided by the rules. The hon. members have also to be guided by rules. The

speaker also has to be guided by rules. Personal opinions do not count in the deliberations of this house.

The speaker has already given a ruling

VOICES :—No ruling has been given

SRI H. M. CHANNABASAPPA :--The speaker was pleased to say that we may decide this matter after the question-hour. After question-hour the members have placed their views before the hon. speaker and the Speaker has referred it to the pleasure of the house. I am only enumerating the facts as they took place. Government have no opinion in this matter except leaving it to the speaker. If the speaker says, 'I would be guided by the opinion of the house'...........

SRI S BANGARAPPA :—I do not think there is any necessity to hear the hon. minister, because the hon. speaker has already left it to the house.

SRI H. M. CHANNABASAPPA :—I do not know why the hon. member Sri Bangarappa is so impetuous of getting up every now and then. The hon. speaker feels that she will be guided by the opinion of the house. The trend of opinion in the house appears to be in favour of having leave today. I have no objection.

MADAM SPEAKER :—As desired by the hon. members, the House stands adjoured to meet again tomorrow at 1 P. M.

The House adjourned at fifty five Minutes past one of the clock to meet again at one of the clock on Wednesday the 5th September, 1973.

WD—7--GBPC—550—6-5-74.

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday, 5th September 1973 Bhadrapada 14, 1895 S. E.

The House met in the Assembly Chamber, Vidhana Soudha, at one of the Clock.

MADAM SPEAKER : (*Smt. K. S. Nagarathnamma*) in the Chair

STARRED QUESTIONS

(to which oral answers were given)

MADAM SPEAKER :—Sri Puttadasa is authorised to put question No. 38

OPENING OF PROVIDENT FUND ACCOUNTS BY COLLEGES

38. SRI H. PUTTADASA (Sathnur) :—On behalf of SRI S. KARIAPPA (Kanakapura)—Will the Minister for Education be pleased to state .—

(*a*) the names of colleges which have not opened the provident fund accounts in individual names of their employees ;

(*b*) whether the Government is aware of the difficulties of such college which have not so far opened such accounts ;

(*c*) the solutions the Government have thought of in respect of those colleges which have no financial resources for opening such accounts since they have utilised the P. F. Amount for other purposes of the Colleges ?

SRI A. R. BADARINARAYANA (MINISTER FOR EDUCATION)—

(*a*) *vide* Statement appended

(*b*) no such difficulties have been brought to the notice of the Government.

(*c*) utilisation of P. F. accumulations for other purposes constitute's an irregulartily and calls for suitable action.

STATEMENT

1 Teresian College, Mysore
2 MDTDB College, Mysore
3 J. S. S. College, Chamarajanagar
4 J. S. S. College, Nanjangud
5 Municipal First Grade College, Hunsur
6 Municipal First Grade College, K. R. Nagar
7 J. S. S. College for Women, Mysore
8 M. E. S. College, Mulbagal
9 Vidyodaya Law College, Tumkur
10 First Grade College of Arts, Science and Commerce, Sira
11 Gomateswara Mahavidyalaya College, Sravanabelagula
12 Hoysaleshwara College, Arsikere
13 S. T. J. College for Women, Chikmagalur
14 Sarswathi Law College, Chitradurga
15 S. J. V. P. Art, Science and Commerce College, Harihar
16 Intitute of Social Service, Mangalore
17 Cauvery College, Gonikappal
18 Dayananda College of Science, Bangalore
19 M. V. P. Arts, Science and Home Science College, Hubli
20 S. J. M. V. S. Arts, College for Women, Hubli
21 R. T. E's. Arts and Science College, Ranebennur
22 Shankar's Arts College, Navalgund
23 Smt. Allam Sumangalamma Memorial College for Women, Bellary.

24 Gangavathi Bhagyamma Rural College, Huvinahadhalli
25 The Anjuman Arts and Science College, Bhatkal
26 Divekar College, of Commerce, Karwar
27 S.E.S. Arts Collage, Baad
28 HKES's SS Margal College of Arts and Science, Shahabad
29 H. K. E. S. Arts and Science College, Shorapur
30 M. S. I. Institute of Science, Gulbarga
31 S V. E's Channabasaveshwar Arts College, Bhalki
32 Karnatak Commerce College, Bidar

ಶ್ರೀ ಹೆಚ್. ಪುಟ್ಟದಾಸ್ :—ಭವಿಷ್ಯ ನಿಧಿ ಮೊಬಲಗನ್ನು ಇತರ ಉದ್ದೇಶಕ್ಕೆ ಉಪಯೋಗ ಮಾಡಿದ್ದರೆ ಕ್ರಮ ತೆಗೆದುಕೊಳ್ಳುತ್ತೀರಾ? ಸಂಪನ್ಮೂಲವಿಲ್ಲದೆ ಭವಿಷ್ಯನಿಧಿ ಉಪಯೋಗಿಸಿಕೊಳ್ಳಬಹುದೇ?

*ಶ್ರೀ ಎ. ಆರ್. ಬದರಿನಾರಾಯಣ್ :— ಹಾಗೆ ಸಂಪನ್ಮೂಲವಿಲ್ಲದಿದ್ದರೆ ಕಾಲೇಜನ್ನು ಮುಚ್ಚಬೇಕಾಗುತ್ತದೆ. ಭವಿಷ್ಯನಿಧಿ ಕಾಲೇಜಿನವರು ಇತರ ಉಪಯೋಗಕ್ಕೆ ವಿನಿಯೋಗಮಾಡಿದರೆ ಕ್ರಮ ತೆಗೆದುಕೊಳ್ಳಬೇಕಾಗುವುದು.

ಶ್ರೀ ಎಂ. ಮಲ್ಲಪ್ಪ :—ಭವಿಷ್ಯನಿಧಿ ಲೆಕ್ಕವನ್ನು ಪ್ರಾರಂಭಿಸಬೇಕಾದ್ದು ಕಡ್ಡಾಯವಲ್ಲವೇ? ಹಾಗೆ ಮಾಡಲೇಬೇಕೆಂದು ನಿರ್ದೇಶ ಹೋಗಿದೆಯೇ?

ಶ್ರೀ ಎ. ಆರ್. ಬದರಿನಾರಾಯಣ್ :—ಹೌದು

ಶ್ರೀ ಎಂ. ಮಲ್ಲಪ್ಪ :— ಹಾಗೆ ಮಾಡದಿದ್ದರೆ ಕ್ರಮ ತೆಗೆದುಕೊಳ್ಳಲು ಅಧಿಕಾರವಿದೆಯಲ್ಲವೇ?

ಶ್ರೀ ಎ. ಆರ್ ಬದರಿನಾರಾಯಣ್ :—ಆ ಹಣವನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು ಎಂದು ಕಾನೂನೇ ಇದೆ.

ಶ್ರೀ ಎಂ. ಮಲ್ಲಪ್ಪ :—ಹಾಗೆ ಕಾನೂನು ಪ್ರಕಾರ ಮಾಡದಿದ್ದರೆ ಕ್ರಮ ತೆಗೆದುಕೊಳ್ಳುವಿರಾ?

ಶ್ರೀ ಎ. ಆರ್ ಬದರಿನಾರಾಯಣ್ :—ತೆಗೆದುಕೊಳ್ಳುತ್ತೇವೆ.

---

*Asterisks indicate that remarks or speeches have not been revised by the member concerned

ಶ್ರೀ ಎಂ ಬಿ. ರಾಮಸ್ವಾಮಿ :—ಈ ಸಂಬಂಧದಲ್ಲಿ ಎಷ್ಟು ಕಾಲೇಜುಗಳ ಬಗ್ಗೆ ದೂರು ಬಂದಿದೆ? ಬಂದಿದ್ದರೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ?

ಶ್ರೀ ಎ. ಆರ್. ಬದರಿನಾರಾಯಣ್ :— ದೂರು ಬಂದಿಲ್ಲ. ಅವರು ವಸೂಲು ಮಾಡುತ್ತಿದ್ದಾರೆ. ರೂಲ್ಸ್ ಪ್ರಕಾರ ನಡೆದುಕೊಳ್ಳುತ್ತಿದ್ದಾರೆ ಎಂದು ನಂಬಿದ್ದೇವೆ. ಹಾಗೆ ಮಾಡದಿದ್ದರೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ

DISTRIBUTION OF FOREST LAND IN NORTH KANARA DISTRICT.

58. SMT. RADHA BHATT (Ankola).—

Will the Minister for Revenue be pleased to state :—

(*a*) the number of acres of land which has been transferred from the Forest Department to Revenue Department in North Kanara District :

(*b*) whether the said land has been distributed among the eligible farmers ;

(*c*) if not, the reasons for the same ?

SRI N. HUTCHAMASTHY GOWDA.—(Minister for Revenue)

(*a*) 29314-0-0

(*b*) 18113-0-0 acres of land is distributed

(*c*) the distribution of forest land is withheld as per Government Order.

ಶ್ರೀಮತಿ ರಾಧಾ ಭಟ್: ಜಮೀನನ್ನು ಆತುರವಾಗಿ ಹಂಚಿದ್ದಾರೆ. ಅನೇಕರಿಗೆ ಸಾಕಾದಷ್ಟು ಜಮೀನಿದ್ದರೂ ಅರಣ್ಯ ಇಲಾಖೆಯಿಂದ ಬಿಡುಗಡೆ ಮಾಡಿದ ಜಮೀನನ್ನು ಹಂಚಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್, ಹುಚ್ಚಮಾಸ್ತಿಗೌಡ : ಆತುರಾತುರವಾಗಿ ಹಂಚುವುದು ಕಷ್ಟ. ಇದಕ್ಕೆ ಕೆಲವು ಕ್ರಮ ಅನುಸರಿಸಬೇಕು. ಆದುದರಿಂದ ನಿಧಾನವಾಗಿಯೇ ಹಂಚಿದ್ದಾರೆಂಬ ಭಾವನೆಯಿದೆ. ಜಮೀನಿರುವವರಿಗೆ ಅರಣ್ಯದ ಜಮೀನನ್ನು ಹಂಚಿದ್ದರೆ ಅದನ್ನು ವಜಾ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ರಾಧಾಭಟ್ : ಈಗಾಗಲೇ ವಿತರಣೆಯಾಗಿರುವ ಜಮೀನು ಯೋಗ್ಯರಾದ ರೈತರಿಗೆ ದೊರೆತಿದೆಯೇ ಎಂದು ಖಚಿತಮಾಡಿಕೊಳ್ಳಲು ಮತ್ತು ಜಮೀನು ಹಂಚಿಕೆಯಲ್ಲಿ ದುರುಪಯೋಗ ನಡೆದಿದೆಯೇ ಎಂಬುದನ್ನು ಕಂಡು ಹಿಡಿಯಲು ಕ್ರಮ ಕೈಗೊಳ್ಳುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ರೂಲ್ಸ್ ಪ್ರಕಾರ ಹಂಚಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ ಹಂಚಿರುವುದು ಗಮನಕ್ಕೆ ಬಂದರೆ ಕ್ರಮ ತೆಗೆದುಕೊಳ್ಳ ಬಹುದು. ಕ್ರಮವಾಗಿ ಹಂಚಿರುವುದು ಗಮನಕ್ಕೆ ಬಂದಿದೆ. ಅಕ್ರಮವಾಗಿರುವು ದಿದ್ದರೆ ಅದನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಯಾವ ಯಾವ ತಾಲ್ಲೂಕಿಗೆ ಎಷ್ಟು ಹಂಚಿದೆಯೆಂಬುದನ್ನು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ತಾಲ್ಲೂಕುವಾರು ಅಂಕಿಅಂಶವಿಲ್ಲ. ದಯವಿಟ್ಟು ಕ್ಷಮಿಸಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ : ಹರಿಜನರಿಗೆ ಇದರಲ್ಲಿ ಶೇಕಡ 50 ಭಾಗ ಕೊಡಲಾಗಿದೆಯೇ ಇಲ್ಲದಿದ್ದರೆ ಅಷ್ಟನ್ನು ರಿಸರ್ವ್ ಮಾಡುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಹಂಚಿಕೆ ನಿಯಮ ಅನುಸರಿಸಿ ಹಂಚಬೇಕು. ಅಕಸ್ಮಾತ್ ಅದರಂತೆ ಹಂಚದಿರುವ ಸಂದರ್ಭವಿರುವುದು ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು. ಇದು ನಿನ್ನೆ ಮೊನ್ನೆ ಆಗಿರುವ ವಿಷಯವಲ್ಲ, 1969ರಿಂದ ಹಂಚಿಕೆಯಾಗಿದೆ. ಇತ್ತೀಚೆಗೆ ಹಂಚಿಕೆ ಯಾಗಿರುವುದರಲ್ಲಿ ಅಕ್ರಮವಿದ್ದರೆ ವಿಚಾರಿಸುತ್ತೇನೆ. ಜೊತೆಗೆ ಹರಿಜನ-ಗಿರಿಜನರಿಗೆ ಜಮೀನು ಕೊಡಬೇಕಾದ ಅವಶ್ಯಕತೆಯಿರುವುದರಿಂದ ಕೆಲವು ಭಾಗ ಅರಣ್ಯದಿಂದ ರಿಲೀಜ್ ಮಾಡಬೇಕಾಗಿದೆ. ಈ ಬಗ್ಗೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಶ್ರೀಮತಿ ರಾಧಾ ಭಟ್.—ಅರಣ್ಯ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ಬಿಡುಗಡೆ ಮಾಡಿದ್ದ ಜಮೀನನ್ನು ಪೂರ್ಣವಾಗಿ ಹಂಚದೆ ತಡೆಹಿಡಿದಿರುವುದನ್ನು ಮತ್ತೆ ಹಂಚಲಾಗುವುದೇ ? ಇದನ್ನು ಮತ್ತೆ ವಿಚಾರ ಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —19-7-1972ಕ್ಕೆ ಮುಂಚೆ 10546 ಎಕರೆ 22 ಗುಂಟೆ ಜಮೀನನ್ನು ರೈತರಿಗೆ ಹಂಚಿದೆ. ಆದರೆ ಅವರಿಗೆ ಸ್ವಾಧೀನಕ್ಕೆ ಕೊಡುವುದಕ್ಕೆ ಮುಂಚೆ 19-7-1972ರಲ್ಲಿ ಆಜ್ಞೆ ಮಾಡಿರುವಂತೆ ಕೊಡದಂತೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಅರಣ್ಯ ಇಲಾಖೆ ಅರ್ಜಿ ಮಾಡಿದೆ. ಆ ಮೇಲೆ ರೈತರಿಗೆ ವಿತರಣೆ ಆಗಿರುವುದನ್ನು ಪುನಃ ವಾಪಾಸು ಪಡೆಯಬೇಕೆಂದು 21-12-1972ರಲ್ಲಿ ಮತ್ತೊಂದು ಅರ್ಜಿಯಾಗಿದೆ. ಜಮೀನು ಯಾರಿಗೆ ಕೊಟ್ಟಿದೆ ಅವರು ವಾಪಾಸು ಕೊಡಬೇಕೆಂದು ಅರ್ಜಿಯಾಗಿದೆ. ಈಗ ರೆವಿನ್ಯೂ ಇಲಾಖೆಗೆ ತೆಗೆದುಕೊಂಡು ಮೊದಲು ಮಂಜೂರು ಮಾಡಿರುವವರಿಗೆ ಕೊಡಲು ಅರ್ಜಿಯಾಗಿದೆ.

LAND ARMY SCHEME

72. Sri B. G. BANAKAR :—(Hirekerur).—

Will the Minister for Community Development and Social Welfare be pleased to state:—

(*a*) the names of places wherein the Land Army Scheme is working in the State;

(*b*) the total amount spent on this Land Army Scheme during the last 3 years;

(*c*) the types of works undertaken by this Land Army;

(*d*) the number of persons engaged or employed in these places;

(*e*) whether there is any proposal before Government to close this scheme?

SRI M. MALLIKARJUNASWAMY :—(Minister for Community Development and Social Welfare).

(*a*) Names of Land Army Projects and their places are indicated in the Statement appended.

(*b*) Expenditure on

(i) Establishment and Field Staff:

1971-72	Rs. 4,09,545.86
1972-73	Rs. 7,18,545.66
1973-74 from 1-4-73 to 30-6-73	Rs. 1,71,114.73

(ii) Expenditure on works:

1971-72	Rs. 11,12,813.00 (under CSRE) Rs. 2,26,187.00 (under DPAP and Famine Relief)
1972-73	Rs. 48,11,000.00 (under CSRE, DPAP and Famine Relief).
1973-74 (from 1-4-73 to 30-6-73)	Rs. 7,27,786.73 (under CSRE)

(*c*) (i) Rural Communication Works
(ii) Minor Irrigation Works
(iii) Afforestation Works
(iv) Soil Conservation Works
(v) Construction of School Buildings

(*d*)

	Maximum Bhusainiks employed	*Average Strength*
1971-72:	3,600	2,378
1972-73:	8,578	4,026

(*e*) No

(Sri M. Mallikarjunaswamy)

STATEMENT

Land Army Projects in Mysore State are located as follows

Sl. No.	Name of the Land Army Project		Their Location	
			Taluk	District
1	Alilu Sri Rama	—	Gubbi	Tumkur
2	Channagiri	—	Channagiri	Shimoga
3	Chunchanagiri	—	Nagamangala	Mandya
4	Chintaki	—	Aurad	Bidar
5	Farhatabad	—	Gulbarga	Gulbarga
6	Gulur	—	Bagepalli	Kolar
7	S. S. Ghati	—	Doddaballapur	Bangalore
8	Indi	—	Indi	Bijapur
9	Kanaka	—	Byadagi	Dharwar
10	Manasa Gangotri	—	Mysore	Mysore
11	Mattikop	—	Bailhongal	Belgaum
12	Muthanallur	—	Anekal	Bangalore
13	National Park	—	Anekal	Bangalore
14	Nayakanahatti	—	Challakere	Chitradurga
15	Sarapura	—	Hassan	Hassan
16	Somenahalli	—	Gudibanda	Kolar
17	Santhapur	—	Aurad	Bidar
18	Ujjini	—	Kudligi	Bellary
19	Yemmedoddi	—	Kadur	Chickmagalur
20	Yermaras	—	Raichur	Raichur

ಶ್ರೀ ಬಿ. ಜಿ. ಬಣಕಾರ್.—(ಸಿ) ಪ್ರಶ್ನೆಗೆ ಉತ್ತರವಾಗಿ ಭೂಸೇನೆ ಗ್ರಾಮಾಂತರ ಸಂಪರ್ಕ ಕಾಮಗಾರಿ, ಸಣ್ಣ ನೀರಾವರಿ ಕಾಮಗಾರಿಗಳು, ವನ ನಿರ್ಮಾಣ ಕಾಮಕಾರಿಗಳು, ಭೂ ಸಂರಕ್ಷಣಾ ಕಾಮಕಾರಿಗಳು ಮತ್ತು ಶಾಲಾ ಕಟ್ಟಡಗಳ ನಿರ್ಮಾಣ ಮುಂತಾದ ಕೆಲಸಗಳನ್ನು ಕೈಗೊಂಡಿದೆಯೆಂದು ತಿಳಿಸಲಾಗಿದೆ. ಈ ಕೆಲಸಗಳನ್ನು ಭೂಸೇನೆಯೇ ಮಾಡಿತೋ ಅಥವಾ ಕಂಟ್ರಾಕ್ಟ್ ಕೊಟ್ಟು ಮಾಡಿಸಲಾಯ್ತೋ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಕಂಟ್ರಾಕ್ಟ್ ಕೊಟ್ಟು ಮಾಡಿಸಿಲ್ಲ. ಲ್ಯಾಂಡ್ ಆರ್ಮಿಗೆ ಯಾರನ್ನು ರೆಕ್ರೂಟ್ ಮಾಡಲಾಯ್ತೋ ಅವರಿಂದಲೇ ಮಾಡಿಸಿದೆ. ಪ್ರಶ್ನೆಯಲ್ಲಿ ಕೇಳಿರುವ ವಿಚಾರ ಸ್ಟಿಲ್ ಓವರ್ ಸ್ಟೇಜಿನಲ್ಲಿರುವುದರಿಂದ ತಪಶೀಲು ದೊರೆಯುವುದಿಲ್ಲ. ಖರ್ಚಾಗಿರುವುದನ್ನು ತಿಳಿಸಿದೆ.

ಸಂಬಂಧಪಟ್ಟವರ ಹೆಸರುಗಳನ್ನು ತಿಳಿಸಬೇಕೆಂದು ಕೇಳಿದ್ದಕ್ಕೆ ಅದನ್ನು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಕೇಸುಗಳನ್ನು ಲಾಡ್ಜ್ ಮಾಡುವಾಗ ಮತ್ತು ಇನ್‌ವೆಸ್ಟಿಗೇಷನ್ ಟೈಂ ನಲ್ಲಿಯೂ ಅವರ ಹೆಸರುಗಳನ್ನು ತಿಳಿದು ಕೊಳ್ಳುವುದಕ್ಕೆ ಸಾಧ್ಯವಿದ್ದುದರಿಂದ, ತಮ್ಮಲ್ಲಿ ಅದರ ಬಗ್ಗೆ ಸಂಪೂರ್ಣ ಮಾಹಿತಿ ಇರುವಾಗ, ಅವರ ಹೆಸರುಗಳನ್ನು ಏಕೆ ತಿಳಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಆ ಹೆಸರುಗಳನ್ನು ತಿಳಿಸುವುದಕ್ಕಾಗುವುದಿಲ್ಲವೆಂದು ಹೇಳಲಿಲ್ಲ. ಅವರ ಹೆಸರುಗಳು ನಮ್ಮ ಮುಂದೆ ಇಲ್ಲವೆಂದು ಹೇಳಿದ್ದೇನೆ.

SRI DODDATHIMMIAH.—As you are aware the West Bengal Government has recently enacted a law imposing rigorous punishment for the offences of food adulteration to bring in such a law ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇದು ವೆಸ್ಟ್‌ಬೆಂಗಾಲ್ ಆಕ್ಟ್ ಪ್ರಕಾರವಲ್ಲ, ಮೈಸೂರು ಎಕ್ಸೈಜ್‌ಆಕ್ಟ್ ಪ್ರಕಾರ ಈ ಕೆಲಸ ನಡೆಯುತ್ತಾ ಇರುವುದು.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಕಲಬೆರಕೆ ಸಾರಾಯಿ ಹಾಗೂ ಸೇಂದಿ ಈಗ ಅಲ್ಲಿ ಮಾರುತ್ತಿದ್ದಾರೆ. 100 ಲೀಟರನ್ನು ಸಾವಿರ ಲೀಟರ್ ಆಗಿ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಬರುವ ದುಡ್ಡು ಸರಿಯಾಗಿ ಬರುವುದಿಲ್ಲ. ಇದಕ್ಕೆ ಇನ್‌ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಎಜ್ಯುಕೇಷನ್ ಸೆಸ್ ಏನೂ ಇಲ್ಲ ಎಲ್ಲಾ ಹಣವೂ ಕಪ್ಪು ಹಣವಾಗುತ್ತಿದೆ. ಸರ್ಕಾರಕ್ಕೆ ಇದರಿಂದ ಹೆಚ್ಚಿನ ಹೊರೆ ಬೀಳುತ್ತದೆ. ಇಂಥಾದ್ದನ್ನು ತಡೆಗಟ್ಟುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ

ಹೆಚ್. ಎಂ. ಚನ್ನಬಸಪ್ಪ.—ಅಡಲ್ಟ್ರೇಷನ್ ಪ್ರಿವೆಂಟ್ ಮಾಡಬೇಕು. ಅದಕ್ಕಾಗಿ ಸೆಂಟ್ರಲ್ ಇಂಟಲಿಜೆನ್ಸ್ ಬ್ಯೂರೊ ಮುಂತಾದ ಸಂಸ್ಥೆಗಳಿವೆ, ಅವು ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಹೇಳಿದರೆ, ಆಗ ಅವುಗಳಿಂದ ಸರಿಯಾಗಿ ಕೆಲಸಮಾಡಿಸತಕ್ಕದ್ದು ನಮ್ಮ ಕೆಲಸವಾಗಿದೆ.

KRISHNA DAIRY CO-OPERATIVE SOCIETY, HULKOTI

109. SRI J. L. KABADE (Ballolli).—Will the minister for Co-operation be pleased to state.—

(Sri J. L. Kabade)

(*a*) whether there is one dairy by name Krishna Dairy Co-operative Society in Hulkoti, Dharwar District ;

(*b*) if so, when was it registered and who was its Chief Promoter ;

(*c*) the extent of State Government's financial assistance and such assistance given by the National Co-operative Development Council, New Delhi to this dairy ;

(*d*) the present working condition and financial position of this society ;

(*e*) whether it is a fact that the Minister for Agriculture and Forests was the founder of this society ;

(*f*) whether it is a fact that the said Krishna Dairy has incurred heavy loss during the presidentship of of the present minister for Agriculture and Forests ;

(*g*) whether there are any grave and serious remarks in the audit report against the management of the said society ?

SRI A. SHANKARA ALVA (Minister for Co-operation.) – (*a*) Yes

(*b*) It was registered on 1-9-71. The Chief Promoter was Sri M. V. Mulimani of Binakadakatte.

(*c*) NCDC Block Capital loan	— Rs. 7.30 lakhs
Government contribution towards share capital	— Rs. 1.63 lakhs

(*d*) *Vide* Statement appended

(*e*) No

(*f*) The minister for Agriculture and Forests was not the president of the society at any time and hence does not arise.

(*g*) The accounts of the society are yet to be audited and hence the question does not arise.

STATEMENT

Showing the Krishna Dairy Milk Producers Co-operative Society Limited, Hulkoti-Financial position as on 15-7-1973

	Liabilities	Amount		Assets		Amount
1	Share capital	1,02,000	1	Current Account with KCC Bank Gadag	...	3,68,081-50
2	Government share capital	1,63,000	2	S. B. Account with KCC Bank Dharwar (Joint Account)	...	81,500-00
3	Entrance fee	250	3	Dead stock	...	139-50
4	Government Loan	7,30,000	4	Stationery	...	148-50
5	Deposit	35,000	5	Dairy plant	...	4,80,000-00
6	Interest received	1,485	6	Dairy equipment and accessories	...	90,000-00
			7	Investment in the shares of Co-operative societies		10,600-00
			8	Entrance fee paid	...	9-50
			9	Pay (receivable)		980-00
			10	Cash on hand	...	276-00
		10,31,735-00				10,31,735-00

ಶ್ರೀ ಜೆ ಎಲ್. ಕಬಾಡಿ :— (ಉ) ಪ್ರಶ್ನೆಗೆ ಉತ್ತರವಾಗಿ 'ನಿಜವಲ್ಲ' ಎಂಬುದಾಗಿ ಹೇಳಿದೆ. ಈ ಹೈನಿನ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಪೂರ್ವದಲ್ಲಿ ಮೊದಲು ಇದು ಖಾಸಗಿ ಸಂಸ್ಥೆಯಾಗಿದ್ದು, ಅದರ ವ್ಯವಸ್ಥಾಪಕರಾಗಿ ಅವರು ಇದ್ದರೆಂಬುದು ನಿಜವೇ ?

ಶ್ರೀ ಎ. ಶಂಕರ ಆಳ್ವ :—ಮೊದಲು ಈ ಕೃಷ್ಣಾ ಸಹಕಾರಿ ಹೈನು ಕೇಂದ್ರ ಪಾರ್ಟ್‌ನರ್‌ಷಿಪ್ ಆಗಿ ಒಂದು ಪ್ರತ್ಯೇಕ ಸೊಸೈಟಿಯಾಗಿತ್ತು. ಇದರಲ್ಲಿ ಮಂತ್ರಿಗಳೂ ಸಹ ಪಾರ್ಟಿಯಾಗಿದ್ದಾರೆ.

ಶ್ರೀ ಜೆ. ಎಲ್ ಕಬಾಡಿ :—ಇದು ಒಂದುಖಾಸಗೀ ಸಂಸ್ಥೆಯಾಗಿತ್ತು. ಈಗ ಆ ಒಂದು ಸಂಸ್ಥೆಯನ್ನು ಸಹಕಾರ ಸಂಘಕ್ಕೆ ವರ್ಗಾಯಿಸಿ ತೆಗೆದುಕೊಂಡಿದ್ದು ನಿಜವೇ ?

ಶ್ರೀ ಎ. ಶಂಕರ ಅಳ್ವ :—ಅದು ನನಗೆ ಗೊತ್ತಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ :—ಈ ಸಹಕಾರ ಸಂಘಕ್ಕೆ ಡೈರಿ ಪ್ಲಾಂಟ್ ಗೋಸ್ಕರ 4 ಲಕ್ಷ 80 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ. ಮತ್ತು ಡೈರಿ ಎಕ್ವಿಪ್‌ಮೆಂಟ್ ಅಂಡ್ ಅಕ್ಸ್‌ಸರೀಸ್‌ಗೆ 90 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ಡೈರಿ ಪ್ಲಾಂಟನ್ನು ಯಾರಿಂದ ಖರೀದಿ ಮಾಡಿದ್ದೀರಿ ? ಡೈರಿ ಎಕ್ವಿಪ್‌ಮೆಂಟ್ ಅಂಡ್ ಅಕ್ಸ್‌ಸರೀಸ್‌ನಲ್ಲಿ ಎಮ್ಮೆ ಮತ್ತು ಆಕಳನ್ನು ಕೊಂಡದ್ದು ಸೇರಿದೆಯೇ ?

ಶ್ರೀ ಎ. ಶಂಕರ ಆಳ್ವ :—ಇದರಲ್ಲಿ ಕೃಷ್ಣಾ ಡೈರಿಯವರ ಪಾರ್ಟ್‌ನರ್‌ಷಿಪ್ ಸಂಬಂಧವಿತ್ತು. ಈಗ ಸೊಸೈಟಿಯವರು ಅದನ್ನು ಅವರಿಂದ ತೆಗೆದುಕೊಂಡಿದ್ದಾರೆ. ನಾಲ್ಕು ಲಕ್ಷ 80 ಸಾವಿರ ರೂಪಾಯಿಗಳಲ್ಲಿ ಡೈರಿ ಪ್ಲಾಂಟನ್ನು ಕೃಷ್ಣಾ ಡೈರಿಯಿಂದ ಈ ಸೊಸೈಟಿಯವರು ಕೊಂಡುಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಡೈರಿ ಎಕ್ವಿಪ್‌ಮೆಂಟ್ ಅಂಡ್ ಅಕ್ಸಸರೀಸ್ ಗಾಗಿ 90 ಸಾವಿರ ರೂಪಾಯಿಗಳನ್ನು ಅವರು ಏಕೆ ಖರ್ಚು ಮಾಡಿದ್ದಾರೆ ? ಅದನ್ನು ಯಾರಿಂದ ಕೊಂಡಿದ್ದಾರೆ ?

ಶ್ರೀ ಶಂಕರ ಆಳ್ವ :— ಇದನ್ನು ಯಾರಿಂದ ಕೊಂಡುಕೊಂಡಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಡೈರಿ ಪ್ಲಾಂಟನ್ನು ಅವರಿಂದ ಸೊಸೈಟಿಯವರು ನಾಲ್ಕು ಲಕ್ಷ 80 ಸಾವಿರ ರೂಪಾಯಿಗಳಿಗೆ ಕೊಂಡಿದ್ದಾರೆ ಅದರ ಬಗ್ಗೆ ಸೂಪರಿಂಟೆಂಡೆಂಟ್

ಆಫ್ ಡ್ಯೈರಿ ಫಾರಂ ಅವರಿಂದ ವ್ಯಾಲ್ಯೂಯೇಷನ್ ಮಾಡಿಸಿಕೊಂಡು ತೆಗೆದು ಕೊಂಡಿದ್ದಾರೆ. ಆದರೆ ಎಕ್ವಿಪ್‌ಮೆಂಟ್ಸ್ ಮತ್ತು ಆಕ್ಸಸರೀಸ್ ಅವನ್ನು ಯಾರಿಂದ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಅವನ್ನು ಪ್ರತ್ಯೇಕವಾಗಿ ಪರ್ಚೇಜ್ ಮಾಡಿ ದ್ದಾರೋ ಅಥವಾ ಇವರಿಂದಲೇ ತೆಗೆದುಕೊಂಡಿದ್ದಾರೋ ಎಂದು ಹೇಳುವುದಕ್ಕೆ ನನ್ನಲ್ಲಿ ಮಾಹಿತಿ ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ಈ ಸಹಕಾರ ಸಂಘದಿಂದ ಎಷ್ಟು ಹಾಲು ಉತ್ಪಾದನೆಯಾಗುತ್ತದೆ? ಅದನ್ನು ಹಂಚಲಾಗುತ್ತದೆಯೇ?

ಶ್ರೀ ಎ. ಶಂಕರ ಆಳ್ವ :—ಅದಿನ್ನೂ ಪ್ರಾರಂಭ ಆಗಿಲ್ಲ. ಏಕೆಂದರೆ ಬಾಯಿಲರ್ಸ್ ಇನ್ಸ್‌ಪೆಕ್ಟರ್ ಅದರಿಂದ ಅದಕ್ಕೆ ಪರವಾನೆ ಇನ್ನೂ ಸಿಗಲಿಲ್ಲ.

ಶ್ರೀ ಜೆ ಎಲ್. ಕಬಾಡಿ :—ಮಾನ್ಯ ಸಹಕಾರೀ ಮಂತ್ರಿಯವರು ಅಲ್ಲಿಗೆ ಜುಲ್ಯಾ ತಿಂಗಳಲ್ಲಿ ಭೇಟಿ ಕೊಟ್ಟಾಗ ಈ ಕೃಷ್ಣ ಡ್ಯೈರಿಗೆ ಭೇಟಿ ಕೊಟ್ಟಿರುವರೇ; ಮತ್ತು ಹಾಗೆ ಭೇಟಿ ಕೊಟ್ಟಾಗ ಅಲ್ಲಿರತಕ್ಕಂತಹ ಹಸುಗಳನ್ನು ಎಮ್ಮೆಗಳನ್ನು, ಮತ್ತು ಮೆಶೀನು ಕೆಲಸ ಮಾಡುವುದನ್ನು ನೋಡಿದ್ದಾರೆಯೆ? ಏಕೆಂದರೆ ಮೊನ್ನೆ ಎಸ್ಟಿಮೇಟ್ ಕಮಿಟಿಯವರು ಸಹ ಹೋಗಿ ನೋಡಿಕೊಂಡು ಬಂದಿದ್ದಾರೆ.

1-30 P. M.

ಶ್ರೀ ಎ. ಶಂಕರ ಆಳ್ವ :—ಅಲ್ಲಿಗೆ ನಾನು ಭೇಟಿ ಕೊಟ್ಟಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ :—ಇದರಲ್ಲಿ ಬಹಳ ಮಹತ್ವವಾದ ವಿಚಾರ ಅಡಗಿದೆ. ಆ ಡ್ಯೈರಿಯಿಂದ ಸುಮಾರು ನಾಲ್ಕು ಲಕ್ಷ 80 ಸಾವಿರ ರೂಪಾಯಿಯ ಡ್ಯೈರಿ ಪ್ಲಾಂಟನ್ನು ಈ ಸೊಸೈಟಿಯವರು ತೆಗೆದುಕೊಂಡಿದ್ದಾರೆ. ಆದ್ದರಿಂದ ಇದಕ್ಕೆ ಇನ್ನು ಹೆಚ್ಚಿನ ಅವಕಾಶ ಕೊಡಬೇಕು.

ಅಧ್ಯಕ್ಷರು :—ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

AUCTION OF TODDY AND ARRACK

133. SRI B. SATHYANARAYANA SINGH (Hospet)—Will the Chief Minister be pleased to state :—

(a) the result of the individual shopwise system of auction of toddy and arrack introduced in the District.

(Sri B. Sathyanarayana Singh)

(b) whether there is any proposal before Government to conduct groupwise auctions first and individual shopwise auctions next; if not, the reasons for the same?

SRI H. M. CHANNABASAPPA (Minister for Public Works and Electricity) On behalf of SRI D. DEVARAJ URS.— (Chief Minister).

(a) This system is in vogue in the Districts of South Kanara and Bellary. The total revenue secured as a result of the auction of individual shops of arrack in Bellary District, and in individual shops of arrack and toddy shops of South Kanara District is as follows for 1973-74.

1. *Bellary District*: Arrack shops Rs. 7,41,650 p. m. as against previous year Rs. 4,20,900.

2. *South Kanara District*: Arrack shops Rs. 15,32,456 p. m. against previous year Rs. 11,02,100 p. m.

3. *South Kanara District*: Toddy shops Rs. 3,38,431 p.m. as against previous year Rs. 2,97,550 p.m.

(b) No. The need for taking such a step has not arisen.

ಶ್ರೀ ಬಿ. ಸತ್ಯನಾರಾಯಣ ಸಿಂಗ್:—ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿಯಲ್ಲಿ ಈ ಸಲ ಜಾರಿಗೆ ತಂದ ಪದ್ಧತಿಯಿಂದ ಹೋದ ವರ್ಷಕಿಂತ ಹೆಚ್ಚು ವರಮಾನ ಬಂದಿದೆ. ಆದ್ದರಿಂದ ಇದನ್ನು ರಾಜ್ಯಾದ್ಯಂತ ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ:—ರಾಜ್ಯಾದ್ಯಂತ ಮಾಡುವುದಕ್ಕೆ ಕಷ್ಟವಾಗುತ್ತದೆ. ಆಯಾ ಜಿಲ್ಲೆಯ ಪರಿಸ್ಥಿತಿ ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ ;—ಇದರಲ್ಲಿರುವ ಕಷ್ಟವೇನೆಂದು ತಿಳಿಸಿದರೆ ಚೆನ್ನಾಗಿತ್ತು. ಈಗಾಗಲೇ ಗ್ರೂಪ್‌ವೈಸ್, ತಾಲ್ಲೂಕವೈಸ್ ಮತ್ತು ಅಂಗಡಿವೈಸ್ ಹರಾಜು ಮಾಡುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೆ ಏನೆಂದು ತಿಳಿಸುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಯಾವ ರೀತಿಯಿಂದ ಮಾಡಿದರೆ ಸರ್ಕಾರಕ್ಕೆ ಹೆಚ್ಚು ವರಮಾನ ಬರುತ್ತದೆ ಎಂಬುದನ್ನು ಅಯಾ ಜಿಲ್ಲಾಧಿಕಾರಿಗಳು ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ತಿಳಿಸುತ್ತಾರೆ. ಅದರಂತೆ ಮಾಡುವುದಕ್ಕೆ ಅಡ್ಡಿಯಿಲ್ಲ

ಶ್ರೀ ಬಿ. ಸತ್ಯನಾರಾಯಣ ಸಿಂಗ್ ;—ಯ್ಯಾವ್ಯಾವ ಜಿಲ್ಲೆಯಿಂದ ಹೇಗೆ ಹೇಗೆ ಮಾಡಬೇಕೆಂದು ವರದಿಯೇನಾದರೂ ಬಂದಿದೆಯೇ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :- ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಪದ್ಧತಿ ಇದೆ. ಅಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಒಂದೊಂದು ಜಿಲ್ಲೆಗಳಲ್ಲಿ ಸದಾ ಕಾಲವೂ ಪರಿಸ್ಥಿತಿ ಒಂದೇ ಸಮ ಇರುವುದಿಲ್ಲ. ಆದ್ದರಿಂದ ಆಯಾ ವರ್ಷ, ಸಂದರ್ಭ ನೋಡಿಕೊಂಡು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಅಂದಾನಪ್ಪ :— ಈಗ ಈ ಹರಾಜುಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಮಾಡುವುದರಿಂದ ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟುಕೊಳ್ಳುವಂತಹ ಜನರಿಗೆ ಜಿಲ್ಲಾ ಕೇಂದ್ರಕ್ಕೆ ಬಂದು ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮುಂದಿನ ವರ್ಷದಿಂದಲಾದರೂ ಇದನ್ನು ತಾಲೂಕು ಕೇಂದ್ರಗಳಲ್ಲಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಈ ಬಗ್ಗೆ ನಿರ್ದಿಷ್ಟವಾದ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ತಾವು ಹೇಳಿದಂತಹ ಸಲಹೆಯನ್ನು ಪರಿಶೀಲನೆ ಮಾಡಬಹುದು.

ಶ್ರೀ ಎಸ್. ಹೆಚ್. ಪುಟ್ಟರಂಗನಾಥ್ :—ತಮ್ಮ ಉತ್ತರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿಯಲ್ಲಿ ಅಂಗಡಿವಾರು ಹರಾಜು ಮಾಡಿದ್ದುದರಿಂದ ಹೆಚ್ಚಿನ ಉತ್ಪತ್ತಿ ಬಂದಿದೆ ಎಂದು ತಿಳಿಯುತ್ತದೆ. ಆದ್ದರಿಂದ ಮುಂದೆ ಕೂಡ ಅಂಗಡಿವಾರು ಹರಾಜು ಹಾಕಿಸಿ ಸರ್ಕಾರಕ್ಕೆ ಹೆಚ್ಚಿನ ಲಾಭ ಬರುವಂತೆ ಮಾಡುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಹೆಚ್ಚು ಉತ್ಪತ್ತಿ ಬರಬೇಕೆಂಬುದೇ ಸರ್ಕಾರದ ಉದ್ದೇಶ. ಅದು ಬರುತ್ತದೋ, ಇಲ್ಲವೋ ಎಂಬುದನ್ನು ಎಚ್ಚರಿಕೆಯಿಂದ ನೋಡಿ ಮಾಡಬೇಕಾಗುತ್ತದೆ.

ಶ್ರೀ ಆರ್. ಎಸ್. ಪಾಟೀಲ್ :—ಅಂಗಡಿವಾರು ಹರಾಜು ಮಾಡಿರುವುದರಿಂದ ಸರ್ಕಾರಕ್ಕೆ ಹೆಚ್ಚು ಲಾಭ ಬಂದಿದೆ. ಬೇರೆ ಜಿಲ್ಲೆಗಳಲ್ಲಿ ಜಿಲ್ಲಾವಾರು ಹರಾಜು ಮಾಡಿದುದರಿಂದ ಏನಾದರೂ ನಷ್ಟವಾಗಿದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :—ನಾವು ಯಾವ್ಯಾವ ಕಡೆ ಹೆಚ್ಚು ಲಾಭ ಬರುತ್ತದೆ ಎಂಬುದನ್ನು ನೋಡಿಕೊಂಡು ನೋಟಿಫಿಕೇಶನ್ ಇಶ್ಯೂ ಮಾಡುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಬಳ್ಳಾರಿಯಲ್ಲಿ ಪ್ರಾಯೋಗಿಕವಾಗಿ ಇದನ್ನು ಮಾಡಲಾಗಿದೆ.

ಶ್ರೀ ಎನ್. ಬಸವಯ್ಯ :—ಜಿಲ್ಲಾಮಟ್ಟದಲ್ಲಿ ಹರಾಜು ಮಾಡುವುದರಿಂದ ಶ್ರೀಮಂತರಿಗೆ ಹೆಚ್ಚಿನ ಅನುಕೂಲವಾಗಿ ಇನ್ನೂ ಹೆಚ್ಚಿನ ಶ್ರೀಮಂತರಾಗುತ್ತಾರೆ. ಆದರೆ ಸಣ್ಣಪುಟ್ಟ ಜನರಿಗೆ ಇದರಿಂದ ಯಾವ ಅನುಕೂಲವೂ ಆಗುವುದಿಲ್ಲ. ಆದ್ದರಿಂದ ಅಂಥ ಜನರಿಗೆ ಅನುಕೂಲವಾಗುವ ಹಾಗೆ ಎಲ್ಲಾ ಕಡೆ ಅಂಗಡಿವೈಸ್ ಹರಾಜು ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಸಮಾಜವಾದದ ಪ್ರಶ್ನೆ ಬಂದಾಗ ಅದಕ್ಕೆ ಉತ್ತರ ಕೊಡಬಹುದು.

ಶ್ರೀ ಎಂ. ಬಿ. ರಾಮಸ್ವಾಮಿ :—ಇದರಲ್ಲಿ ಎರಡು ಮೂರು ಜನ ಶ್ರೀಮಂತರು ಮನಾಪಲಿ ಮಾಡಿಕೊಂಡಿದ್ದಾರೆ. ಆದ್ದರಿಂದ ಇದರ ಸವಲತ್ತು ಎಲ್ಲರಿಗೂ ಹಂಚಿ ಹೋಗುವ ಹಾಗೆ ದೊಡ್ಡ ಮನಸ್ಸು ಮಾಡಿ ಈಗ ಇರತಕ್ಕಂತಹ ರೂಲ್ಸ್ ಬದಲಾವಣೆ ಮಾಡಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಸರ್ಕಾರಕ್ಕೆ ಹೆಚ್ಚು ಹಣ ಬರಬೇಕೆಂಬುದರಲ್ಲಿ ದೊಡ್ಡ ಮನಸ್ಸು ಮಾಡುತ್ತದೆ. ಸರ್ಕಾರಕ್ಕೆ ಆದಾಯ ಕಡಿಮೆ ಆಗುವುದಾದರೆ ದೊಡ್ಡ ಮನಸ್ಸು ಮಾಡುವುದಿಲ್ಲ. ಆದರೆ ಸಾಧ್ಯವಾದಷ್ಟು ಹೆಚ್ಚು ಜನರಿಗೆ ಇದರ ಅನುಕೂಲ ಲಭಿಸಬೇಕೆಂದು ಏನು ಹೇಳಿದ್ದೀರಿ ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ :—ಕೆಲವು ಮನಾಪಲಿ ಮಾಡಿಕೊಂಡಿರತಕ್ಕಂತಹ ಕಂಟ್ರಾಕ್ಟರ್ಸ್ ಅನೇಕ ಜಿಲ್ಲೆಗಳಲ್ಲಿ ನೂರಾರು ಜನರಿಗೆ ಸಬ್ ಲೀಸ್

ಶ್ರೀ ಬಿ. ಜಿ. ಬಣಕಾರ್.—ಉತ್ತರದಲ್ಲಿ ಕೊಟ್ಟಿರುವಂತೆ ಕೆಲಸ ಮಾಡಿರುವವದು ಮತ್ತು ಖರ್ಚಾಗಿರುವ ಹಣ ನೋಡಿದರೆ ಮೂಗಿಗಿಂತ ಮೂಗೂತಿ ಭಾರ ಎನ್ನುವಂತಿದೆ. ಇದು ಸರಿಯಲ್ಲ. ಈ ಕೆಲಸ ಪರಿಣಾಮಕಾರಿಯಾಗುವಂತೆ ಮಾಡುವಿರಾ? ಈ ಕೆಲಸವನ್ನು ಲೋಕೋಪಯೋಗಿ ಇಲಾಖೆಯೇ ಮಾಡುವಂತೆ ಏಕೆ ತಿಳಿಸಬಾರದು?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರಿಗೆ ಆ ಅಭಿಪ್ರಾಯವಿರಬಹುದು. ಲೋಕೋಪಯೋಗಿ ಇಲಾಖೆ ಇದೇ ಕೆಲಸ ಮಾಡುತ್ತಿದೆ. ಅದರ ಜೊತೆಗೆ ಜಾಸ್ತಿ ಕೆಲಸವಾಗಬೇಕು ಎಂದು ಲ್ಯಾಂಡ್ ಆರ್ಮಿ ಡೈರೆಕ್ಟೋರೇಟ್ ಕ್ರಿಯೇಟ್ ಮಾಡಿ ಜಾಸ್ತಿ ಕೆಲಸ ಮಾಡಿಸಲಾಗುತ್ತಿದೆ. ಇಲ್ಲಿ ಕೆಲಸ ಮಾಡುವವರಿಗೆ ಒಬ್ಬರಿಗೆ ಒಂದು ತಿಂಗಳಿಗೆ ನೂರು ರೂಪಾಯಿ ಕೊಡುತ್ತೇವೆ. ಒಂದು ಮನೆಗೆ ಒಬ್ಬರಿಗಾದರೂ ಕೆಲಸ ಕೊಡಬೇಕು ಎಂಬ ದೃಷ್ಟಿಯಿಂದ ಒಂದು ಏರ್ಪಾಡು ಮಾಡಿದೆ. ಅವರು ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಸಿಬ್ಬಂದಿ ಜಾಸ್ತಿ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ಎಲ್. ಕಬಾಡಿ:—ಲ್ಯಾಂಡ್ ಆರ್ಮಿಯಲ್ಲಿ ಕೆಲಸ ಮಾಡತಕ್ಕ ಜನರಿಗೆ ಈ ಕೆಲಸಗಳ ಮಾಹಿತಿ ಇಲ್ಲದಿರುವುದರಿಂದಲೂ, ಮತ್ತು ಇವರು ಮಾಡತಕ್ಕ ಕೆಲಸಗಳ ಬಗ್ಗೆ ಯಾವ ಒಂದು ಎಸ್ಟಿಮೇಟ್ ಅಥವಾ ಅಂದಾಜುಗಳು ಇಲ್ಲದಿರುವುದರಿಂದ ಈ ಕೆಲಸಗಳು ಆ ಪಿ.ಡಬ್ಲ್ಯೂ.ಡಿ ಅಷ್ಟು ನೆಟ್ಟಗಾಗದೆ ಅವು ಮಳೆಯಲ್ಲಿ ಕೊಚ್ಚಿಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:— ಆ ವಿಷಯ ನನ್ನ ಗಮನಕ್ಕೆ ಬಂದಿಲ್ಲ ಮತ್ತು ಇದು ಬಹಳ ವೇಗ್ ಉಪಪ್ರಶ್ನೆ.

ಶ್ರೀ ಆರ್. ಎಸ್. ಪಾಟೀಲ್:—ಸರ್ಕಾರದವರು ಈ ಡಿ.ಪಿ.ಎ.ಪಿ ಮತ್ತು ಸಿ. ಎಸ್. ಆರ್. ಇ. ಯೋಜನೆಗಳಲ್ಲಿ ತೆಗೆದುಕೊಂಡ ಕೆಲವು ಕೆಲಸಗಳೇನಿವೆ ಅವುಗಳು ಕೆಲವು ಆಗಿ ಇನ್ನು ಕೆಲವು ಹಾಗೆ ನಿಂತುಹೋಗಿವೆ. ಅಂಥ ಕೆಲಸಗಳನ್ನು ಪೂರ್ತಿಗೊಳಿಸುವುದಕ್ಕೆ ಸ್ಟೇಟ್ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸುವುದಕ್ಕೇನಾದರೂ ಯೋಜನೆಯನ್ನು ಮಾಡಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:— ಪ್ಲಾನ್ ಪ್ರಕಾರ ಕೆಲಸಗಳು ನಡೆಯುತ್ತಿದ್ದರೆ ಆ ಹಣ ಅಷ್ಟಕ್ಕೆ ಲ್ಯಾಪ್ಸಾದಂತೆಯೇ. ಅದರ ಬಗ್ಗೆ ಯಾವ ಬೇರೆ ಯೋಜನೆಗಳೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಈ ಯೋಜನೆಯನ್ನು ರಾಜ್ಯಾದ್ಯಂತವೂ ವಿಸ್ತರಿಸತಕ್ಕ ಯೋಚನೆ ಸರ್ಕಾರಕ್ಕಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಕೇಂದ್ರ ಸರ್ಕಾರದವರು 1971-72 ರಲ್ಲಿ ಈ ಒಂದು ಲೇಬರ್‌ಓರಿಯೆಂಟೆಡ್ ಸ್ಕೀಮನ್ನು ತಯಾರಿಸಿ ಗ್ರಾಮಾಂತರ ಪ್ರದೇಶಗಳಲ್ಲಿನ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದಕ್ಕೆ ಒಂದು ವ್ಯವಸ್ಥೆ ಮಾಡಿದ್ದಾರೆ. ಆ ಯೋಜನೆಯಲ್ಲಿ ರೂರಲ್ ಕಮ್ಯುನಿಕೇಷನ್ ವರ್ಕ್ಸ್, ಮೈನರ್ ಇರಿಗೇಷನ್ ವರ್ಕ್ಸ್, ಅಫಾರ ಸ್ಟೇಷನ್ ವರ್ಕ್ಸ್, ಸಾಯಿಲ್ ಕನ್‌ಸರ್ವೇಷನ್ ವರ್ಕ್ಸ್ ಮತ್ತು ಶಾಲಾ ಕಟ್ಟಡಗಳ ಕೆಲಸ ಇವುಗಳನ್ನು ನಡೆಸಲಾಗುತ್ತಿದೆ. ಈ ಯೋಜನೆಯನ್ನು ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯಾದ್ಯಂತವೂ ವಿಸ್ತರಿಸಬೇಕೆಂಬ ಆಸೆ ಸರ್ಕಾರಕ್ಕಿದೆ.

ಶ್ರೀ ಅಂದಾನಪ್ಪ :—ಇಲ್ಲಿಯವರೆಗೆ ಈ ಯೋಜನೆಯಲ್ಲಿ ಕೈಗೊಂಡಿದ್ದ ಕೆಲಸಗಳಲ್ಲಿ ಕೆಲವು ಮುಗಿದು ಇನ್ನು ಕೆಲವು ಅರಗೊರತೆಯಾಗಿವೆ. ಆದ್ದರಿಂದ ಇನ್‌ಕಂಪ್ಲೀಟ್ ಆಗಿರತಕ್ಕ ಕೆಲಸಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಮತ್ತು ಕಂಪ್ಲೀಟಾದ ಕೆಲಸಗಳನ್ನು ಮುಂದೆ ನಿಗಾ ನೋಡಲು ಪಿ. ಡಬ್ಲ್ಯು. ಡಿ.ಗೆ ವಹಿಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:—ಇನ್‌ಕಂಪ್ಲೀಟ್ ಕಾಮಗಾರಿಗಳನ್ನು ಕಂಪ್ಲೀಟ್ ಮಾಡುವುದಕ್ಕಾಗಿ 24 ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಆದರೆ ಈ ಕೆಲಸಗಳೆಲ್ಲಾ ಇನ್ನೂ ಸ್ಪಿಲ್ಲೋವರ್ ಸ್ಟೇಜಿನಲ್ಲಿರುವುದರಿಂದ ಇವುಗಳನ್ನು ಯಾರಿಗೆ ವಹಿಸಬೇಕೆಂಬುದನ್ನು ಆಲೋಚನೆ ಮಾಡಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ :—ಈ ಲ್ಯಾಂಡ್ ಆರ್ಮಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೇ ? ಮತ್ತು ಅಲ್ಲಿ ಲೆಕ್ಕದ ಪ್ರಕಾರ ಜನರಿದ್ದಾರೆಯೇ ಎಂಬುದನ್ನು ಚೆಕ್ ಮಾಡುವುದಕ್ಕೆ ಯಾವ ಏಜನ್ಸಿ ಇದೆ? ಏಕೆಂದರೆ ನನಗೆ ಬಂದಿರುವ ವರ್ತಮಾನದ ಪ್ರಕಾರ ಅಲ್ಲಿ ಜನರೇ ಇಲ್ಲ, ಆದಾಗ್ಯೂ ಹಣವನ್ನು ವಿತರಣೆ ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಅದಕ್ಕೆ ಏನು ಏಜನ್ಸಿ ಇದೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ : ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ನಾನೇ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನೋಡಿದ್ದೇನೆ. ಜೊತೆಗೆ ಇಲಾಖೆಯ ಮುಖ್ಯಾಧಿಕಾರಿಗಳೂ ಕೂಡ ಇದನ್ನು ತನಿಖೆ ನಡೆಸುತ್ತಾರೆ. ಏನಾದರೂ ಅಂಥ ಅಕ್ರಮಗಳು ಇದ್ದರೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

SRI N. G. HALAPPA :—No doubt the land army people are doing wonderful work. But the only bottle-neck for them is the non-availability of Road Rollers. Will you see that as many Road Rollers as possible are made available to them ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಈ ಕೆಲಸ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ. ಆದರೆ ರೋಡ್ ರೋಲರುಗಳ ಅಭಾವದ ವಿಷಯ ಹೇಳಿದ್ದಾರೆ, ಆ ಒಂದು ತೊಂದರೆ ಇದೆ. ಅದರಿಂದ ಪಿ.ಡಬ್ಲ್ಯೂ. ಡಿ. ಇಲಾಖೆಯಲ್ಲೂ ಅನೇಕ ಕೆಲಸಗಳು ಸ್ಥಗಿತವಾಗಿವೆ.

ಶ್ರೀ ಬಿ. ಜಿ. ಬಣಕಾರ್.—ಇದನ್ನು ಕೇವಲ 20 ತಾಲ್ಲೂಕುಗಳಿಗೆ ಮಾತ್ರವೇ ಅನ್ವಯಿಸದೆ ಇದನ್ನು ಬೇರೆ ತಾಲ್ಲೂಕುಗಳಿಗೂ ವಿಸ್ತರಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಪ್ರಶ್ನೆಗಾಗಲೇ ನಾನು ಉತ್ತರ ಹೇಳಿದ್ದೇನೆ.

KAMADHENU ENTERPRISES (REGD), TIPTUR

101 SRI H. S. SIDDAPPA (Arsikere):—Will the Minister for Revenue be pleased to state;—

(*a*) whether any complaints have been received against 'Kamadhenu' Enterprises (Regd), Tiptur; if so, the action taken by the Government on such complaints;

(*b*) whether it is a legally registered firm; if so, its registered Number and date and the statements of its objects;

(*c*) the names of the partners of the firm and the total capital investment;

(*d*) the total amount collected from the public upto this date and the benefit given to the subscribers so far;

(*e*) whether the accounts of the firm are audited, checked and reported to the Registrar ?

SRI N. HUTCHAMASTHY GOWDA MINISTER(FOR REVENUE:-)

(*a*) No

(*b*) It is registered under the provisions of Indian Partnership Act, 1932, No. 1800/71-72, dated 23-11-1971. The statement of objects prescribed under Section 58(1) of the Indian Partnership Act, 1932 has been filed as follows:-

The business of the firm is that of money lending and/or such other business as may be mutually agreed by the partners from time to time.

(*c*) (1) The names of the partners are—

Sriyuths:—

(1) E. Shankarappa

(2) L. H. Nanjegowda

Capital-Not known

(*d*) Not Known

(*e*) There is no provision under the Partnership Act for auditing, checking of the accounts of the firm and reporting to the Registrars of firms.

ಶ್ರೀ ಹೆಚ್. ಎಸ್. ಸಿದ್ದಪ್ಪ : 'ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ, ದೂರುಗಳು ಬಂದಿಲ್ಲ' ಎಂದು ತಿಳಿಸಿದೆ. ಆದರೆ ತಾ. 25-8-1972 ರಲ್ಲಿ ಹೆಚ್. ವಿ. ಜವರೇಗೌಡ ಎನ್ನತಕ್ಕವರೂ ಮತ್ತು ನಾನೂ ಕೂಡ ತಾ. 6-1-1973 ರಲ್ಲಿ ಸರ್ಕಾರಕ್ಕೆ ದೂರುಗಳನ್ನು ಕಳುಹಿಸಿ ಅಲ್ಲಿ ಅನ್ಯಾಯ ದರೋಡೆ ಹಾಗೂ ಸಾರ್ವಜನಿಕರ ಹಣ ಲೂಟಿಯಾಗುತ್ತಿದೆ ಎಂದು ಸರ್ಕಾರಕ್ಕೆ ತಿಳಿಸಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಹಾಗೆ ದೂರುಗಳು ಬಂದಿರತಕ್ಕ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಜವರೇಗೌಡರ ಮತ್ತು ಮಾನ್ಯ ಸದಸ್ಯರ ಆಪಾದನೆಗಳು ಏನಿವೆ ಇವುಗಳನ್ನು ಕೂಡಲೆ ಪರಿಶೀಲನೆ ಮಾಡಿಸಿ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ : ನಮ್ಮ ಆಪಾದನೆಗಳ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುತ್ತೆಂದು ಹೇಳಿ ನನಗೆ ತಾ. 10-1-1973 ರಲ್ಲಿ ಹೋಂ ಸೆಕ್ರೆಟರಿಗಳಿಂದಲೂ ಮತ್ತು ಮುಖ್ಯಮಂತ್ರಿಗಳಿಂದಲೂ ಎಂಡಾರ್ಸ್‌ಮೆಂಟ್ ಬಂದಿದ್ದರೂ ಇಲ್ಲಿಯತನಕ ಯಾವ ಕ್ರಮಗಳನ್ನೂ ಕೈಗೊಳ್ಳದೆ ಈಗ ಏನು ಕ್ರಮಗಳನ್ನು ಕೈಗೊಳ್ಳಬಹುದೆಂಬುದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುವುದು ಸರಿಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ನನಗೆ ಇಲ್ಲಿಯತನಕ ಈ ಎರಡು ಕಂಪ್ಲೆಂಟುಗಳು ಬಂದಿದ್ದರೂ ಏಕೆ ಗಮನಕ್ಕೆ ತರಲಿಲ್ಲ ಅನ್ನತಕ್ಕ ಬಗ್ಗೆ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇನೆ.

SRI H. S. SIDDAPPA :—Since the hon. minister is not aware of the complaints made in this behalf and the reply is not properly being given, I request the Chair to held-over the question.

ಶ್ರೀ ಎನ್. ಹುಚ್ಚಮಾಸ್ತಿಗೌಡ: ಕಂಪ್ಲೆಂಟ್ ಬಂದಿರುವುದು ಒಂದಾದರೆ, ಇದು ಸೆಂಟ್ರಲ್ ಆಕ್ಟಿಗೆ ಸಂಬಂಧಪಟ್ಟಿದು. ಆದ್ದರಿಂದ ನಾವು ನೇರವಾಗಿ ಕ್ರಮ ಕೈಗೊಳ್ಳುವುದಕ್ಕೆ ಬರುವುದಿಲ್ಲವೆಂದು ನನಗೆ ಇಲಾಖೆಯವರು ಖಚಿತವಾಗಿ ತಿಳಿಸಿದ್ದಾರೆ. ಆದರೆ ಇವರು ಕಂಪ್ಲೆಂಟನ್ನು ಯಾವ ಅಂಶದ ಮೇಲೆ ಕೊಟ್ಟಿದ್ದಾರೆಂಬುದನ್ನು ಪರಿಶೀಲನೆ ಮಾಡಿ ನೋಡಬೇಕು. ಅದನ್ನು ಮಾಡಿದ ನಂತರ ಏನು ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಬೇಕಾಗುತ್ತದೆ ಆದರೆ ಇಲ್ಲಿ ಕಂಪ್ಲೆಂಟುಗಳು ಬಂದಿದೆಯೇ ಇಲ್ಲವೇ ಎಂಬುದಕ್ಕೆ ಉತ್ತರ ಹೇಳಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ : ಇಂಡಿಯನ್ ಪಾರ್ಟನರ್‌ಷಿಪ್ ಆಕ್ಟ್ ಪ್ರಕಾರ ರಿಜಿಷ್ಟರಾದ ಸಂಸ್ಥೆಗಳ ಬಗ್ಗೆ ದೂರನ್ನು ಕೊಟ್ಟರೆ ಅವುಗಳ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ಸರ್ಕಾರಕ್ಕೆ ಅಧಿಕಾರವಿಲ್ಲವೇ ? ಹಾಗಾದರೆ ಅವರು ಜನರ ಹಣವನ್ನು ಹೇಗೆ ಬೇಕಾದರೂ ದುರುಪಯೋಗ ಮಾಡಬಹುದೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ನಮಗೆ ಯಾವ ಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲ ಎಂದು ಗೊತ್ತಾಗಿದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ : ಅಧ್ಯಕ್ಷರೇ ಈ ಪ್ರಶ್ನೆಗೆ ಸರಿಯಾದ ಉತ್ತರಗಳು ಬಂದಿಲ್ಲ. ಅದಕ್ಕಾಗಿ ಇದನ್ನು ತಡೆಹಿಡಿಯಬೇಕೆಂದು ಕೇಳುತ್ತೇನೆ. ಈ

(ಹೆಚ್. ಎಸ್. ಸಿದ್ದಪ್ಪ)

ಫರ್ಮ್ 1932 ನೇ ಇಂಡಿಯನ್ ಪಾರ್ಟನರ್‌ಷಿಪ್ ಆಕ್ಟ್ ಕೆಳಗೆ ರಿಜಿಷ್ಟರಾಗಿದ್ದರೂ ಅಲ್ಲಿ ಹಣದ ದುರುಪಯೋಗ ನಡೆದಾಗ ಅದೇ ಆಕ್ಟಿನ ಸೆಕ್ಷನ್: 27 ಪ್ರಕಾರ ಕ್ರಮ ಕೈಗೊಳ್ಳುವುದಕ್ಕೆ ಅವಕಾಶವಿಲ್ಲವೇ? ಅಲ್ಲಿ ಸುಮಾರು ಸಾರ್ವಜನಿಕರಿಂದ 2 ಲಕ್ಷದ ವರೆಗೂ ಹಣವನ್ನು ದೋಚಿದ್ದಾರೆ? ಅದೇ ವಿಚಾರದಲ್ಲಿ ಹೆಚ್. ಕೆ. ಜವರೇಗೌಡ ಮತ್ತು ಒಬ್ಬ ಟೈಲರ್ ಮತ್ತು ಇನ್ನೂ ಅನೇಕರು ಅಪಾದನೆಗಳನ್ನು ಮಾಡಿದ್ದರೂ ಸರ್ಕಾರ ಏಕೆ ಸುಮ್ಮನಿದೆ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಅವರ ಧ್ಯೇಯೋದ್ದೇಶಗಳನ್ನು ರಿಜಿಸ್ಟರ್ ಮಾಡಿಸುವ ಸಂದರ್ಭದಲ್ಲಿ ತಿಳಿಸುವ ಅಗತ್ಯವಿಲ್ಲ. ಅಲ್ಲಿ ಪ್ರತಿವರ್ಷವೂ ಲೆಕ್ಕಗಳು ಅಡಿಟ್ ಆಗಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರು ಲೆಕ್ಕಪತ್ರಗಳನ್ನು ಕೊಡದೇ ಹೋದರೆ ಅದನ್ನು ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲದೆ ಸೆಂಟ್ರಲ್ ಆಕ್ಟ್ ಪ್ರಕಾರ ನಮ್ಮ ರಿಜಿಸ್ಟ್ರಾರ್ ಅವರಿಗೆ ಯಾವ ಅಧಿಕಾರವೂ ಇಲ್ಲವೆಂದು ನನಗೆ ಸ್ಪಷ್ಟವಾಗಿ ಗೊತ್ತಿರುತ್ತದೆ. ಅದರ ಒಂದು ಅಧಾರದ ಮೇಲೆ ನಾನು ಆ ರೀತಿಯಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು :—ಈ ರೀತಿಯಾಗಿ ಕಾಲ ಕಳೆಯುವುದಕ್ಕೆ ಬದಲು ತಾವು ಈ ವಿಚಾರವನ್ನು ವಿವರವಾಗಿ ಚರ್ಚೆಮಾಡಲು ಅರ್ಧಗಂಟೆಯ ಕಾಲದ ಚರ್ಚೆಗೆ ಅವಕಾಶ ಕೊಡಿ ಎಂಬುದಾಗಿ ಸೂಚನೆ ಕಳುಹಿಸಿ. ನಾನು ಅದಕ್ಕೆ ಅನುಮತಿ ಕೊಡುತ್ತೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ :—ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಪೂರ್ಣ ಮಾಹಿತಿ ಬರುವ ವರೆಗೆ ಇದನ್ನು ತಡೆ ಹಿಡಿಯಿರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈ ಸಂಸ್ಥೆಯ ರಿಜಿಸ್ಟ್ರೇಷನ್ ವಿಷಯವಾಗಿ ಕೇಳಿದ್ದಕ್ಕೆ ಉತ್ತರ ಕೊಡಲಾಗಿದೆ. ಅದಕ್ಕೆ ಸಂಬಂಧಪಟ್ಟಹಾಗೆ ಇತರ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ :—ಹಾಗಾದರೆ ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. (ಈ) ಪ್ರಶ್ನೆಗೆ ಉತ್ತರವಾಗಿ 'ಗೊತ್ತಿಲ್ಲ' ಎಂದು ಹೇಳಿದ್ದೀರಿ. ಅದರೆ ನಿಮ್ಮ ಜಿಲ್ಲಾ ಪೋಲೀಸ್ ಅಧಿಕಾರಿಗಳು ಅವರ ಅಕೌಂಟ್ಸ್ ಸೀಜ್‌ಮಾಡಿ, ಚೆಕ್‌ಮಾಡಿ ಏಕೆ ಹಾಗೆಯೇ ಇಟ್ಟುಕೊಂಡಿದ್ದಾರೆ? 26-8-1972 ರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲದೆ ಅಕೌಂಟ್ಸ್ ಸೀಜ್ ಮಾಡುವುದಕ್ಕೆ ಅಧಿಕಾರವಿಲ್ಲ ಎಂಬುದಾಗಿ ಹೇಳುವಾಗ ಆ ತಾರೀಖಿನಿಂದ ಅವರು ಅದನ್ನು ಏಕೆ ಹಾಗೆಯೇ ಇಟ್ಟುಕೊಂಡಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :- ನಾನು ಮೊದಲೇ ಹೇಳಿದ ಪ್ರಕಾರ ನಮ್ಮ ರಿಜಿಸ್ಟ್ರಾರ್ ಅವರಿಗೆ ಈಗಿನ ಕಾನೂನು ಪ್ರಕಾರ ಅದರ ಬಗ್ಗೆ ಏನೂ ಅಧಿಕಾರವಿಲ್ಲವೆಂದು ಹೇಳಿದ್ದೇನೆ. ಪೋಲೀಸಿನವರು ಯಾವ ಕಾರಣದ ಮೇಲೆ ಅಕೌಂಟ್ಸ್ ಸೀಜ್ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಆ ವಿಷಯ ತಿಳಿದು ನಾನು ಈ ಸಭೆಗೆ ತಿಳಿಸುತ್ತೇನೆ.

SALE OF ADULTERATED ARRACK AND TODDY IN HOSPET

107. SRI B. SATHYANARYANA SINGH (Hospet):—Will the Chief Minister be pleased to state :—

(*a*) the number of cases launched against selling of adulterated arrack and toddy during the last year in Hospet, Hospet Taluk and Bellary District ;

(*b*) the number of cases in which the vendors have been punished by the Courts ;

(*c*) whether it has come to the notice of the Government that instead of toddy tapped from toddy trees only toddy prepared out of hydro-chloride is being sold as toddy all over Bellary District ?

SRI H. M. CHANNABASAPPA (Minister for Public works and Electricity) On behalf of. SRI D. DEVARAJ URS. (Chief Minister):—

(*a*) Six are under investigation and five are before the Court.

(*b*) They are pending before the Court

(*c*) No toddy can be prepared from Hydro-chloride

ಶ್ರೀ ಬಿ. ಸತ್ಯನಾರಾಯಣಸಿಂಗ್. —(ಅ)ಗೆ ಉತ್ತರದಲ್ಲಿ ಹೇಳಿರುವ ಪ್ರಕಾರ ಈ ಆರು ಕೇಸುಗಳು ಎಷ್ಟು ಕಾಲದಿಂದ ಇನ್‌ವೆಸ್ಟಿಗೇಷನ್ನಿನಲ್ಲಿದೆ?

(ಶ್ರೀ ಬಿ. ಸತ್ಯನಾರಾಯಣ ಸಿಂಗ್)

ಮತ್ತು ಕೋರ್ಟಿನಲ್ಲಿರತಕ್ಕ ಐದು ಕೇಸುಗಳಿಗೆ ಸಂಬಂಧಪಟ್ಟ ಗುತ್ತಿಗೆದಾರರು ಯಾರು? ಅವರ ಹೆಸರುಗಳೇನೆಂಬ ಬಗ್ಗೆ ವಿವರಗಳನ್ನು ಕೊಡುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ. ಇನ್‌ವೆಸ್ಟಿಗೇಷನ್ನಿನಲ್ಲಿರತಕ್ಕ ಆರು ಕೇಸುಗಳ ಬಗ್ಗೆ ಎಫ್. ಐ. ಆರ್. ಮೇ 1972ರಿಂದಲೂ ಇದೆ ಎರಡನೆಯದಾಗಿ 5 ಕೇಸುಗಳ ಗುತ್ತಿಗೆದಾರರು ಯಾರೆಂಬ ಬಗ್ಗೆ ಅವರ ಹೆಸರುಗಳು ನನ್ನ ಮುಂದೆ ಇಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್. – ಆರು ಕೇಸುಗಳು ಇನ್ನೂ ಇನ್‌ವೆಸ್ಟಿಗೇಷನ್ನಿನಲ್ಲಿಯೇ ಇದೆ ಎಂದು ಹೇಳುತ್ತಾ ಇರುವುದರಿಂದ, ಇದನ್ನು ಮುಗಿಸುವುದಕ್ಕೆ ಇನ್ನೆಷ್ಟು ಕಾಲಬೇಕಾಗಬಹುದು ?

ಶ್ರೀ ಎಚ್. ಎಂ. ಚನ್ನಬಸಪ್ಪ. – ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಕಾಲಾವಧಿಯನ್ನು ನಿಗದಿ ಮಾಡಿ ಹೇಳುವುದಕ್ಕಾಗುವುದಿಲ್ಲ. ಅದು ಅಯಾಯ ಕೇಸುಗಳ ಪರಿಸ್ಥಿತಿಯನ್ನು ಅವಲಂಬಿಸುತ್ತದೆ. ಅದ್ದರಿಂದ ಈಗಲೇ ಅದರ ಇನ್‌ವೆಸ್ಟಿಗೇಷನ್ನಿಗೆ ಇಷ್ಟೇ ಕಾಲ ಹಿಡಿಯುತ್ತದೆ, ಇಷ್ಟೇ ಕಾಲದಲ್ಲಿ ಅದು ಪೂರೈಸುತ್ತದೆಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್. – ಈಗ ಇದು ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಹಾಗೆ ಪ್ರಶ್ನೆ ಕೇಳಿರುವುದು. ಅಲ್ಲಿನ ತಾಲ್ಲೂಕು ಬೋರ್ಡಿನಿಂದ ಹೆಂಡ, ಸರಾಯಿ ಮಾರುವುದು ಜಾಸ್ತಿಯಾಗುತ್ತಿದೆ. ಗುತ್ತಿಗೆದಾರರ ಕೈಲಿ ಅಲ್ಲಿನ ಅಧಿಕಾರಿಗಳು ಕೈಗೊಂಬೆಗಳಂತಾಗಿದ್ದಾರೆ. ಇದುವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಅದ್ದರಿಂದ ಈಗಲಾದರೂ ಹೆಚ್ಚು ಶಕ್ತಿಯುತವಾಗಿ ಇದನ್ನು ಹೋಗಲಾಡಿಸಲು ತಮ್ಮ ಮುಂದೆ ಏನಾದರೂ ಕಾರ್ಯಕ್ರಮ ಇದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಡುತ್ತಿದ್ದಾರೆ. ಅದಕ್ಕೋಸ್ಕರ ವಿಶೇಷ ಸಿಬ್ಬಂದಿಯನ್ನು ಏರ್ಪಾಡುಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಹಾಗೇನಾದರೂ ಅಕ್ರಮಗಳು ಹೆಚ್ಚಾಗುತ್ತಾ ಇದ್ದರೆ, ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ —(ಬಿ)ಗೆ ಉತ್ತರವಾಗಿ ಅವು ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿವೆ, ಎಂದು ಹೇಳಿದೆ. ಆ ಐದು ಕೇಸುಗಳಿಗೆ

ಮಾಡಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಹಾಗಿದ್ದರೆ ಅದನ್ನು ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :....ಮನಾಪಲಿ ಟೆಂಡೆನ್ಸಿ ಬ್ರೇಕ್ ಮಾಡಬೇಕೆಂಬುದು ಸರ್ಕಾರದ ಉದ್ದೇಶ. ಹಾಗೆ ಮಾಡುವಾಗ ಸರ್ಕಾರಕ್ಕೆ ಬರುವ ಉತ್ಪತ್ತಿ ಕೂಡ ಕಡಿಮೆಯಾಗದ ಹಾಗೆ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಅಂದಾನಪ್ಪ :.... ತಾವು ಲಾಭದಾಯಕವಾಗಿದ್ದರೆ ಮಾಡುತ್ತೇವೆಂದು ಹೇಳಿದ್ದೀರಿ. ತಾವು ಜಿಲ್ಲಾವಾರು ಗ್ರೂಪ್‌ಷಾಪ್ ಮತ್ತು ಶಾಪ್‌ವೈಸ್ ಹರಾಜು ಮಾಡಿ ಹೆಚ್ಚು ಆದಾಯ ಯಾವುದರಿಂದ ಬರುತ್ತದೆ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಬೇರೆ ಕಡೆ ಜಿಲ್ಲಾವಾರು ಮಾಡುತ್ತೀರಿ, ಆದ್ದರಿಂದ ಈ ಜಿಲ್ಲಾವಾರು ಹರಾಜು ತೆಗೆದುಕೊಳ್ಳುವುದಕ್ಕೆ ಯಾರಅಭ್ಯಂತರವೂ ಇಲ್ಲ. ಇದ್ದರಿಂದ ಅದನ್ನು ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :....ಮಾಡಬೇಕೆಂದು ಹೇಳುವುದು ಸ್ವಾಭಾವಿಕ. ಎಷ್ಟು ಮಟ್ಟಿಗೆ ಮಾಡುವುದು ಸಾಧ್ಯವೆಂಬುದನ್ನು ನೋಡಬೇಕು. ತಾವು ಹೇಳಿದಂತಹ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸಾರ್ವಜನಿಕರ ಅನುಕೂಲ ಮತ್ತು ಸರ್ಕಾರಕ್ಕೆ ಬರತಕ್ಕ ಆದಾಯ-ಇವೆರಡನ್ನು ನೋಡಿಕೊಂಡು ಅನುಕೂಲ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ :....ಬಳ್ಳಾರಿ ಜಿಲ್ಲೆಯಲ್ಲಿ ಕೇವಲ ಅರಕ್‌ದ ವಿಚಾರದಲ್ಲಿ ಅಂಗಡಿವೈಸ್ ಹರಾಜು ಮಾಡಿ, ಸೇಂದಿಯನ್ನು ಮಾತ್ರ ಜಿಲ್ಲಾವಾರು ಹರಾಜು ಮಾಡಿದ್ದಾರೆ. ಇದರಿಂದ ಸುಮಾರು 9 ಲಕ್ಷ ರೂಪಾಯಿ ನಷ್ಟವಾಗಿದೆ. ಆದ್ದರಿಂದ ಸೇಂದಿಯನ್ನು ಸಹ ಅಂಗಡಿವಾರು ಹರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಎಂ ಚೆನ್ನಬಸಪ್ಪ :....ಬಳ್ಳಾರಿ ಜಿಲ್ಲೆ ಒಂದೇ ಅಲ್ಲ; ಎಲ್ಲಾ ಜಿಲ್ಲೆಗಳಲ್ಲಿ ಕೂಡ ಯಾವುದು ಉತ್ತಮ ಎಂಬುದನ್ನು ಯೋಚನೆ ಮಾಡಿ ಮಾಡಬೇಕಾಗುತ್ತದೆ. ಮತ್ತು ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ಸಲಹೆಗಳೇನಿವೆ, ಅವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮತ್ತು ಸರ್ಕಾರದ ಹಿತವನ್ನು ಸಹ ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಯೋಚನೆ ಮಾಡುತ್ತೇವೆ.

ಅಧ್ಯಕ್ಷರು —ಶ್ರೀ ರಾಮುಲು ಅವರು ಪ್ರಶ್ನೆ ಸಂ. 13 ಕೇಳಬಹುದು.

ಶ್ರೀ ಕೆ. ಶ್ರೀರಾಮುಲು.—ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕದಿದ್ದರೆ ಅದು ಲ್ಯಾಪ್ಸ್ ಆಗುತ್ತದೆ.

DELAY IN ISSUE OF COFFEE REGISTRATION CERTIFICATES

63 SRI G. PUTTASWAMY (Mudigere).—Will the Minister for Revenue be pleased to state :—

(*a*) the number of applications for coffee registration certificates received during 1971—72

(*b*) the number of certificates issused during the year;

(*c*) the number of applications pending and since how long;

(*d*) the reasons for the delay?

SRI N. HUTCHAMASTHY GOWDA (Minister for Revenue).—

(*a*) 2572

(*b*) 1,827

(*c*) 23 cases relate to 1970–71. 83 cases relate to 1971–72. 639 cases since 6 months.

(*d*) Delay due to non-production of the required documents and other formalities

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ (ಈ) ಪ್ರಶ್ನೆಗೆ ಉತ್ತರವಾಗಿ ಇತರ ನಿಯಮಗಳು ಹಾಗೂ ದಾಖಲೆಗಳ ಅಗತ್ಯತೆಯಿಂದಾಗಿ ವಿಳಂಬವಾಗಿದೆ ಎಂದು ಹೇಳಿದ್ದೀರಿ, ಆ ನಿಯಮಗಳು ಹಾಗೂ ದಾಖಲೆಗಳ ಅಗತ್ಯತೆ ಯಾವುದು ಎಂಬುದನ್ನು ಹೇಳುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವ ವಿಷಯದಲ್ಲಿ ಕೊಡಗು ಜಿಲ್ಲೆಯಲ್ಲಿ ಕೆಲವು ತೊಂದರೆಗಳಿವೆ. ಪಹಣಿ ಭೂಮಿಯಲ್ಲಿ ಕೆಲವು ಅನ್‌ಆಥರೈಸ್ಡ್ ಆಕ್ಯುಪೆನ್ಸಿ ಕಾಫಿ ಕಲ್ಟಿವೇಷನ್ ಮಾಡಿದ್ದಾರೆ. ಇದರಲ್ಲಿ ಅಣ್ಣ ತಮ್ಮಂದಿರು ಭಾಗದಾರರು ಯಾರು, ಅವರಿಗೆ ಎಷ್ಟು ಹಕ್ಕಿದೆ ಎಂಬುದನ್ನು ನಿಗದಿ ಮಾಡಬೇಕಾದರೆ ಪ್ರತ್ಯೇಕವಾದ ದಾಖಲೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಆ ಜಮೀನಿನಲ್ಲಿ ಎಷ್ಟು ಹಕ್ಕಿದೆ ಎಂಬುದನ್ನು ನಿಗದಿ ಮಾಡಬೇಕಾದರೆ ಪ್ರತ್ಯೇಕವಾದ ದಾಖಲೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಆ ಜಮೀನಿನಲ್ಲಿ ಎಷ್ಟು ಹಕ್ಕಿದೆ ಎಂಬುದು ನಿರ್ಧಾರ ಆಗಬೇಕು. ಆ ಭೂಮಿ ಎಷ್ಟೆಷ್ಟು ಎಕರೆ ಇದೆ ಎನ್ನುವ ಸರ್ವೆ ದಾಖಲೆಗಳು ಸರಿಯಾಗಿಲ್ಲ. ಬೌಂಡರಿ ಮಾರ್ಕ್ ಇಲ್ಲ. ಇದಕ್ಕೆ ತಕ್ಕಂಥಾ ದಾಖಲೆಗಳು ಮತ್ತು ಟಿಪ್ಪಣಿಗಳು ಇಲ್ಲ. ಇಂಥಾ ತೊಂದರೆ ಇರುವುದರಿಂದ ಅವರಿಗೆ ನಿರ್ದಿಷ್ಟವಾಗಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಕೊಡುವುದಕ್ಕೆ ಸಾಧ್ಯವಾಗದೆ ನಿಧಾನವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ರೀತಿ ದಾಖಲೆಗಳು ಇಲ್ಲದೆ ಇರತಕ್ಕಂಥಾ ಅರ್ಜಿಗಳು ಎಷ್ಟಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವು ಎಷ್ಟು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಇತ್ತೀಚೆಗೆ ದಾಖಲೆಗಳು ಇಲ್ಲದೇ ಇದ್ದರೂ ಕೂಡ ಅವರಿಗೆ ಹಂಗಾಮಿಯಾಗಿ ಸರ್ಟಿಫಿಕೇಟ್‌ಗಳನ್ನು ಕೊಡಬೇಕು ಎಂದು ಹುಕುಂ ಮಾಡಿದೆ. ಮತ್ತು ಬೇಗ ಬೇಗ ಹಂಗಾಮಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ಗಳನ್ನು ಕೊಟ್ಟು ಆ ಕಾಫಿ ಕಲ್ಟಿವೇಟರುಗಳು ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಬೇಕು ಎಂದು ತಿಳಿಸಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಆ ರೀತಿ ದಾಖಲೆಗಳು ಇಲ್ಲದಿದ್ದರೆ ಅರ್ಜಿಗಳನ್ನು ಹಾಕುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿಚಾರ ನನಗೆ ಗೊತ್ತಿಲ್ಲ. ಎಲ್ಲೆಲ್ಲಿ ಅನ್ ಅಥರೈಸ್ಡ್ ಕಾಫಿ ಕಲ್ಟಿವೇಷನ್ ಮಾಡಿದ್ದಾರೆ ಅಂಥಾ ಸ್ಥಳಗಳಲ್ಲಿ ಯಾರು ಯಾರು ಎಷ್ಟು ಅನ್ ಅಥರೈಸ್ಡ್ ಕಾಫಿ ಕಲ್ಟಿವೇಷನ್ ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡು ಬೇರೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಅಧಿಕಾರಿಗಳಿಗೆ ನಾವು ತಿಳಿಸಿದ್ದೇವೆ

ಶ್ರೀ ಎಂ. ಬಿ. ರಾಮಸ್ವಾಮಿ.—ಈ ರೀತಿ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವುದರಲ್ಲಿ ವಿಳಂಬ ಮಾಡುವುದರಿಂದ ಆ

(ಶ್ರೀ ಎಂ ಬಿ. ರಾಮಸ್ವಾಮಿ)
ಜನಗಳಿಗೆ ತೊಂದರೆಯಾಗುತ್ತಿದೆ. ಅದರಿಂದ ದಯವಿಟ್ಟು ಅರ್ಜಿ ಬಂದ ತಕ್ಷಣ ಈ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವುದಕ್ಕೆ ವ್ಯವಸ್ಥೆ ಮಾಡಿ ಅವರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ. ಈ ಸಂಬಂಧದಲ್ಲಿ ಮಾನ್ಯ ಸದಸ್ಯರ ಸಮಾಧಾನಕ್ಕಾಗಿ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ ಅದು ರೀತಿ ಇದೆ. ಈ ಸಂಬಂಧದಲ್ಲಿ ಕೊಡಗು ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 1708. ಸರ್ಟಿಫಿಕೇಟ್ ಕೊಟ್ಟಿರುವುದು 1069. ಚಿಕ್ಕಮಗಳೂರು ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 608. ಸರ್ಟಿಫಿಕೇಟ್ ಕೊಟ್ಟಿರುವುದು 605. ಹಾಸನ ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು 220. ಸರ್ಟಿಫಿಕೇಟ್ ಕೊಟ್ಟಿರುವುದು 217. ಮೈಸೂರು ಜಿಲ್ಲೆಯಿಂದ ಬಂದಿರತಕ್ಕ ಅರ್ಜಿ 1 ಸರ್ಟಿಫಿಕೇಟ್ ಕೊಟ್ಟಿರುವುದು 1. ಬಳ್ಳಾರಿ ಜಿಲ್ಲೆಯಲ್ಲಿ 35 ಅರ್ಜಿ ಬಂದಿದ್ದು ಪೂರ್ತಿ ಅವುಗಳಿಗೆ ಸರ್ಟಿಫಿಕೇಟ್ ಕೊಟ್ಟಿದೆ. ಹಂಗಾಮಿಯಾಗಿ ಬೇಗ ಬೇಗ ಸರ್ಟಿಫೀಕೇಟ್‌ಗಳನ್ನು ಕೊಡಬೇಕು ಎಂದು ಸರ್ಕಾರದವರು ಅದೇಶವನ್ನು ಕೊಟ್ಟಿದ್ದಾರೆ. ದಾಖಲೆಗಳು ಇಲ್ಲದೇ ಇರುವುದರಿಂದ ಸರ್ಟಿಫಿಕೇಟ್‌ಗಳನ್ನು ಕೊಡುವುದು ನಿಧಾನವಾಗಿದೆ. ಆದ್ದರಿಂದ ದಾಖಲೆಗಳನ್ನು ತೆಗೆದುಕೊಂಡು ಅದಷ್ಟು ಬೇಗ ಸರ್ಟಿಫಿಕೇಟ್‌ಗಳನ್ನು ಕೊಡಬೇಕು ಎಂದು ಸಂಬಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ.

ಶ್ರೀ ಎನ್. ಜಿ. ಹಾಲಪ್ಪ.—ಅನ್ ಆಥರೈಸ್ಡ್ ಕಲ್ಟಿವೇಷನ್ ಎಷ್ಟು ವರ್ಷಗಳಿಂದ ಆಗಿದೆ ? ಎಷ್ಟು ಎಕರೆ ಅನ್ ಅಥರೈಸ್ಡ್ ಕಲ್ಟಿವೇಷನ್ ಮಾಡಿದ್ದಾರೆ ಈ ಬಗ್ಗೆ ಪೆನಾಲ್ಟಿ ಹಾಕುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದೀರಾ ?

ಶ್ರೀ ಎನ್, ಹುಚ್ಚಮಾಸ್ತಿಗೌಡ : ಎಲ್ಲೆಲ್ಲಿ ಅನ್ ಅಥರೈಸ್ಡ್ ಅಕ್ಯುಪೆನ್ಸಿ ಕಲ್ಟೀವೇಷನ್ ಆಗಿದೆ ಎಂದು ದೂರುಗಳು ಬಂದಿವೆ ಆ ಊರಿನಲ್ಲಿರತಕ್ಕ ವಿಲೇಜ್ ಅಕೌಂಟೆಂಟರ ಮುಖಾಂತರ ಮತ್ತು ಸ್ಥಳೀಯ ಅಧಿಕಾರಿಗಳ ಮುಖಾಂತರ ಅಕ್ರಮ ಸಾಗುವಳಿ ಮಾಡಿರತಕ್ಕ ಜಮೀನಿನ ಅಂಕಿ ಅಂಶಗಳನ್ನು ತೆಗೆದುಕೊಂಡ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ :— ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಸಿಕ್ಕದೇ ಇರುವುದರಿಂದ ಆ ಕಾಫಿ ಬೆಳೆಗಾರರು ಕಾಫೀ ಬೀಜವನ್ನು ಕಾಫೀ ಬೋರ್ಡಿಗೆ ಒದಗಿಸುವುದಕ್ಕಾಗುವುದಿಲ್ಲ. ಈ ರೀತಿ ಕಾಫಿ ರಿಜಿಸ್ಟ್ರೇ

ಷನ್ ಸರ್ಟಿಫಿಕೇಟ್ ಅವರಿಗೆ ಸಿಕ್ಕದೇ ಇರುವುದರಿಂದ ಅವರು ಕಾಫಿಬೀಜವನ್ನು ಕಳ್ಳಸಾಗಾಣಿಕೆ ಮಾಡಿದ್ದಾರೆ. ಇದರಿಂದ ಸರ್ಕಾರಕ್ಕೆ ನಷ್ಟ ಅಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅದು ಗೊತ್ತಿದೆ. ಆ ಸಂಬಂಧಪಟ್ಟ ಜಮೀನಿನ ಸರಿಯಾದ ದಾಖಲೆಗಳು ಸಿಕ್ಕದೆ ಇರುವುದರಿಂದ ಆ ಸರ್ಟಿಫಿಕೇಟ್‌ಗಳನ್ನು ಇಷ್ಯೂ ಮಾಡುವುದು ನಿಧಾನವಾಗಿದೆ. ಆದ್ದರಿಂದ ದಾಖಲೆಗಳನ್ನು ತೆಗೆದುಕೊಂಡು ಆದಷ್ಟು ಬೇಗ ಸರ್ಟಿಫಿಕೇಟ್‌ಗಳನ್ನು ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ.

SRI G. PUTTASWAMY :- Sir, has the Hon. Revenue Minister paid surprise visit to any office to discovery cases of inordinate delay Sir ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ನಾನು ವೀರರಾಜಪೇಟೆ ತಾಲ್ಲೂಕು ಆಫೀಸಿಗೆ ಅನಿರೀಕ್ಷಿತ ಭೇಟಿ ಕೊಟ್ಟು ಎಷ್ಟು ಸರ್ಟಿಫಿಕೇಟ್‌ಗಳನ್ನು ಕೊಡುವುದು ಬಾಕಿ ಇದೆ, ಅವುಗಳನ್ನು ಕೊಡುವುದಕ್ಕೆ ಏತಕ್ಕೆ ನಿಧಾನವಾಗಿದೆ ಎಂಬುದನ್ನು ತನಿಖೆ ಮಾಡಿದ್ದೇನೆ. ಇತರ ಆಫೀಸುಗಳಿಗೂ ಕೂಡ ಆದೇಶವನ್ನು ಕೊಟ್ಟು ಆದಷ್ಟು ಬೇಗ ಬೇಗ ಈ ಸರ್ಟಿಫಿಕೇಟ್‌ಗಳನ್ನು ಕೊಡಬೇಕು ಎಂದು ಸೂಚನೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು :— ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY

(but not taken up)

BILL TO REGULATE THE SERVICE CONDITIONS OF GOVERNMENT SERVANTS

13. SRI B. SUBBAYYA SHETTY (Surathkal).—

Will be Chief Minister be pleased to state :—

(*a*) whether there is any proposal before the Government to bring forth a bill before the State Legislature for regulating the recruitment, and conditions of services of

(SRI B. SUBBAYA SHETTY)

persons appointed to public services and posts in connection with the affairs of the State, under Article 309 of the Constitution of India ;

(*b*) whether it is the intention of the Government that an Act passed by the State Legislature would be better than the *R*ules made by the Governor and more so it would be in keeping with democratic processes ;

(*c*) whether the Government intends to bring out a comprehensive Bill for the above purpose by the end of this year or in the near future ?

SRI D. DEVARAJ URS (Chief Minister) :—

(*a*) Yes

(*b* and (*c*) These matters are under the consideration of Government.

PROHIBITION OF ALIENATION OF SURVEY LANDS

145. SRI M. H. JAYAPRKASH NARAYAN (Sirsi) : —

Will the Minister for Revenue be pleased to state : —

(*a*) whether it is not a fact that the Government have issued an Ordinance to prohibit alienation of survey lands by way of sale, mortgage and arrangement deeds ; if so, the date of its issue ;

(*b*) whether it has come to the notice of the Government that due to this ordinance those who had mortgaged and executed a conditional sale deeds are put to hardship to revive their ownership over such lands ;

(*c*) the number of persons in the State who have (i) mortgaged (ii) leased and (iii) executed conditional sale

deeds etc., (Talukwise figures from 1970 to 1973 may be furnished)?

SRI N. HUTCHAMASTHY GOWDA (Minister for Revenue)

(*a*) Mysore Ordinance No. 2 was issued on 29th June 1973.

(*b*) Expecting such difficulties would arise in future a provision has been made in Section 6 of the Ordinance to remove said difficulties.

(*c*, Ordinariy such figures are neither collected no it is parctical to do so as there is possibility of such documents remaining unregistered.

CALLING ATTENTION TO MATTERS OF URGENT PUBLIC IMPORTANCE

Re : DEATH OF A PERSON IN POLICE STATION, HASSAN

SRI KAGODU THIMMAPPA.—(Sagar) I beg to call the attention of the Hon. Minister to the death of a person in the police station at Hassan.

SRI H. M. CHANNABASAPPA. (Minister for Public Works)—On the 29th August 1973 at 10.30 A.M. Sri Adiraju s/o *S*ri Brahmadeva Raju, merchant of the Hassan Town, appered at the Hassan Town Police Station and oralllly reported to the Sub-Inspector that on the preceding night some rice and clothes had been stolen from his house. *S*ri *A*diraju stated that he suspected one Shri *R*aja, s/o Bettegowda, aged about 20 years, resident of Narihallikoppal, Hassan taluk, as being responsible for the theft. *S*ri Adiraju was accompanied by Sri Raja to the Police Station.

The Sub-Inspector of police made an entry regarding this complaint in the Station House Diary and thereafter proceeded for the investigation of another case. But before going, he directed the Head Constable *R*aman Ku:ti,

(H. M. CHANNABASAPPA)

and sentry Constable Somegowda to look after Sri Raja. He also directed Sri Adiraju to remain at the Police Station till his return.

After attending to his investigation work, the Sub-Inspector returned to the Police Station at about 2.15 P.M. At that time the Head Constable Appanna was in-charge of the Police Station and Constable Rajappa was on Sentry duty. When the Sub-Inspector entered the station building he noticed that Sri Raja had an attack of fits and froth was coming from his mouth. The Head Constable and the sentry Constable were attending on him and rendering first aid. Sri Raja was unconscious.

The Sub-Inspector immediately got a Jutka and transported Sri Raja to the S. C. Hospital at Hassan for treatment. The Sub-Inspector also visited the Hospital shortly afterwards when he was informed by the Doctor that Sri Raja had expired.

The Sub-Inspector thereafter registered a case under Section 174 of Cr. P. C. and submitted a copy of the first information report to the Sub-Divisional Magistrate, Hassan, with a request to conduct the proceeding under that Section on the body of Sri Raja as he had died while in police custody.

On 30 August 1973, the Sub-Divisional Magistrate, Hassan, conducted Inquest proceedings. The Magistrate examined the blood relatives of the deceased, the Medical Officer who attended on him and others. The report of the Sub-Divisional Magistrate is expected to be submitted after the receipt of medical opinion and further investigation.

The dead body was handed over, as per the instructions of the Sub-Divisional Magistrate to the Further of

the deceased. It is reported that the Panchayatdars who attended Inquest proceedings have opined that they did not see any injuries on the body of the deceased.

Further action as per law will be taken on receipt of the Sub-Divisional Magistrate's report.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲಿ ಪೋಸ್ಟ್ ಮಾರ್ಟಮ್ ಮಾಡಲಾಗಿದೆಯೋ? ಮಾಡಿದ್ದರೆ ವೈದ್ಯರು ಏನು ಅಭಿಪ್ರಾಯವನ್ನು ಈ ಸಾವಿನ ಬಗ್ಗೆ ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತೀರಾ? ಫಿಟ್ಸ್ ಬಂದು ಸತ್ತಿದ್ದಾನೆಂದು ಹೇಳಿದ್ದೀರಿ. ಅಂದರೆ ಆ ಹುಡುಗನಿಗೆ ಈ ಹಿಂದೆ ಅಂತಹ ಖಾಯಿಲೆ ಏನಾದರು ಇತ್ತೇ ಎಂಬ ಬಗ್ಗೆ ಆತನ ತಂದೆಯಿಂದ ಹೇಳಿಕೆ ಪಡೆಯಲಾಗಿದೆಯೋ; ಪಡೆದಿದ್ದರೆ ಅದನ್ನು ಸಭೆಯ ಮುಂದೆ ಇಡಲಾಗುತ್ತದೆಯೋ?

SRI H. M. CHANNABASAPPA:—I have already submitted that the Sub-Divisional Magistrate will have gone into the entire question. On seeing the entire report of the proceedings some thing or other could be said but not now.

ಶ್ರೀ ಕಾಗೋಡು ತಿಮ್ಮಪ್ಪ :—ಆತ ಪೋಲೀಸ್ ಸ್ಟೇಷನ್‌ನಲ್ಲಿ ಸತ್ತಿರಬೇಕಾದರೆ ಆತನಿಗೆ ಫಿಟ್ಸ್ ಮೊದಲಿನಿಂದಲೂ ಬರುತ್ತಿತ್ತೇ ಅಥವಾ ಇಲ್ಲವೇ ಎಂಬ ಬಗ್ಗೆ ಡಾಕ್ಟರ್ ಅಭಿಪ್ರಾಯ ಕೊಡಬೇಕಾಗಿತ್ತು. ಇಲ್ಲವೇ ಆತನ ತಂದೆಯಿಂದ ಹೇಳಿಕೆ ಪಡೆಯಬೇಕಾಗಿತ್ತು. ಅದು ಬಿಟ್ಟು ಪೋಲೀಸರು ಹೇಳಿದರು ಎಂದು ಆ ರೀತಿ ತಾವು ಹೇಳುವುದಕ್ಕೆ ಮೊದಲು ಅದರಲ್ಲಿ ಸತ್ಯ ಇದೆಯೋ ಇಲ್ಲವೇ ಎಂಬುದನ್ನು ತಾವೇ ಆಲೋಚನೆ ಮಾಡಬೇಕಾಗಿತ್ತು. ಇಲ್ಲಿ ವೈದ್ಯರ ಅಭಿಪ್ರಾಯ ಏನಿದೆ ಎಂಬುದನ್ನು ತಾವೇ ಹೇಳಿಲ್ಲ; ಮತ್ತು ಪೋಸ್ಟ್ ಮಾರ್ಟಮ್ ಮಾಡಲಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಸಹ ಹೇಳಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಮೆಡಿಕಲ್ ಎಕ್ಸಾಮಿನೇಷನ್‌ಗೆ ಒಪ್ಪಿಸಿದ್ದೇವೆ. Medical opinion is yet to be received. Opinion is reserved pending receipt of Chemical Examiner's report.

ಶ್ರೀ ಕಾಗೋಡು ತಿಮ್ಮಪ್ಪ :—ಹಾಗಿದ್ದ ಮೇಲೆ ಸಂಪೂರ್ಣವಾದ ಹೇಳಿಕೆ ಬಂದ ಮೇಲೆ ವಿವರಗಳನ್ನು ಸಭೆಯ ಮುಂದೆ ಇಡಲಿ. ಈಗ ಹೇಳಿಕೆ ಅಪೂರ್ಣವಾಗಿದೆ

ಶ್ರೀ ಎಚ್.ಎಂ. ಚೆನ್ನಬಸಪ್ಪ :—ಮಾನ್ಯ ಸದಸ್ಯರು ಹೇಳಿಕೆ ಕೊಡಬೇಕೆಂದು ಕೇಳಿದ್ದರಿಂದ ಸರ್ಕಾರದ ಹತ್ತಿರ ಎಷ್ಟು ವಿವರಗಳು ಇವೆಯೋ ಅಷ್ಟು ಮಾತ್ರ ಕೊಟ್ಟಿದ್ದೇವೆ. ಮತ್ತೊಂದು ದಿವಸ ಇದೇ ವಿಚಾರ ಕೇಳಿದರೆ ಅವೊತ್ತಿನ ದಿವಸ ಎಷ್ಟು ವಿವರಗಳು ಸರ್ಕಾರದ ಹತ್ತಿರ ಇರುತ್ತದೋ ಅಷ್ಟು ವಿವರಗಳನ್ನು ಕೊಡಬಲ್ಲೆ.

ಶ್ರೀ ಕೆ. ಎಚ್ ಹನುಮೇಗೌಡ :—ಈತ 20 ವರ್ಷದ ಯುವಕ. ಗಾಡಿ ಕೆಲಸ ಮಾಡುತ್ತಿದ್ದ. ಹಳ್ಳಿಯ ರೈತನ ಮಗ ಮೊದಲು ಈತನಿಗೆ ಫಿಟ್ ಖಾಯಿಲೆ ಇದ್ದರೂ ಸಹ ಆ ಖಾಯಿಲೆಯಿಂದ ಯಾರೂ ಸಾಯುವುದಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಈತ ಪ್ರಜ್ಞೆ ತಪ್ಪಿ ಬಿದ್ದಿದ್ದಾಗ, ಆತನನ್ನು ಆಸ್ಪತ್ರೆಗೆ ಸಾಗಿಸಲು ಟ್ಯಾಕ್ಸಿಯವರಿಗೆ ಹೇಳಿ ಕಳಿಸಿದರು. ಆದರೆ ಟ್ಯಾಕ್ಸಿ ಅವರು ಆ ಕೆಲಸ ಮಾಡಲು ನಿರಾಕರಿಸಿದರು. ನಂತರ ಆಟೋರಿಕ್ಷಾದವರಿಗೆ ಹೇಳಿ ಕಳಿಸಿದರು. ಅವರು ಸಹ ನಿರಾಕರಿಸಿದರು ನಂತರ ಜಟಕಾ ಗಾಡಿಯವರಿಗೆ ಹೇಳಿ ಕಳಿಸಿದರು. ಅವರೂ ಸಹ ನಿರಾಕರಿಸಿದರು. ನಂತರ 12 ವರ್ಷದ ಹುಡುಗ ಹೊಡೆಯುತ್ತಿದ್ದ ಜಟಕಾವನ್ನು ತರಿಸಿ ಆತನಿಗೆ ಆ ಕೆಲಸವನ್ನು ಒಪ್ಪಿಸಿದರು. ಆ ಕೆಲಸ ಮಾಡದಿದ್ದರೆ ಒಳಕ್ಕೆ ಕರೆದುಕೊಂಡು ಹೋಗಿ ಬಡಿಯುತ್ತೇವೆಂದು ಆತನಿಗೆ ಹೆದರಿಸಿದ್ದಾರೆ ನಂತರ ಆ ಹುಡುಗ ಅಳುತ್ತಲೇ ಆ ಕೆಲಸ ಮಾಡಿದ. ಆ ರೀತಿ ಆಸ್ಪತ್ರೆಗೆ ಕಳಿಸುವಾಗ ಪೋಲೀಸಿನವರು ಏತಕ್ಕೆ ಮಾರ್ಗರಕ್ಷಣ ಮಾಡಲಿಲ್ಲ ಎಂದು ಹೇಳುತ್ತೇನೆ. ದೇವರು ಕೊಟ್ಟ ಪ್ರಾಣವನ್ನು ಈ ರೀತಿಯಿಂದ ತೆಗೆಯುವುದಕ್ಕೆ ಇವರಿಗೇನು ಅಧಿಕಾರವಿದೆ? ಇಂತಹ ಕೆಲಸಗಳು ನಡೆಯುವುದಕ್ಕೆ ಸರ್ಕಾರ ಅವಕಾಶ ಕೊಡಬಾರದಾಗಿತ್ತು. ಒಬ್ಬರ ಪ್ರಾಣವನ್ನು ಗೊತ್ತು ಗುರಿ ಇಲ್ಲದೆ ತೆಗೆಯುವುದಕ್ಕೆ ನಿಮಗೆ ಏನು ಅಧಿಕಾರವಿದೆ?

ಅಧ್ಯಕ್ಷರು :—ಈ ರೀತಿ ಉದ್ವೇಗಕ್ಕೆ ಒಳಗಾಗಿ ಮಾತನಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ. ತಾವು ನಿಧಾನವಾಗಿ ಪ್ರಶ್ನೆ ಕೇಳಿ.

ಶ್ರೀ ಕೆ. ಎಚ್. ಹನುಮೇಗೌಡ :—ದನಗಳನ್ನು ಹೊಡೆಯುವ ರೀತಿಯಲ್ಲಿ ಹೊಡೆದಿದ್ದಾರೆ. ಬೀದಿಯಲ್ಲಿರುವ ಹುಚ್ಚು ನಾಯಿಗಳಿಗೆ ಹೊಡೆಯುವಂತೆ ಹೊಡೆದಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಪಾಯಿಂಟ್ ಆಫ್ ಆರ್ಡರ್........

ಅಧ್ಯಕ್ಷರು :—ಪಾಯಿಂಟ್ ಆಫ್ ಆರ್ಡರ್ ಇದೆ, ತಾವು ಕುಳಿತುಕೊಳ್ಳಿ

ಶ್ರೀ ಎನ್. ಹುಚ್ಚಮಾಸ್ತಿಗೌಡ :—ತಾವು ಸ್ವಲ್ಪ ಕೋಪವನ್ನು ಕಡಿಮೆ ಮಾಡಿಕೊಳ್ಳಬೇಕು.

ಶ್ರೀ ಕೆ. ಎಚ್. ಹನುಮೇಗೌಡ : – ತಮ್ಮ ಮನೆಯ ಹುಡುಗನಿಗೆ ಈ ರೀತಿ ಯಾಗಿದ್ದರೆ ನೀವು ಸುಮ್ಮನೆ ಇರುತ್ತಿದ್ದಿರಾ ? ತಮ್ಮಂತೆ ಎಲ್ಲರೂ ಎಂದು ತಾವು ತಿಳಿದುಕೊಳ್ಳಬೇಕು.

ಅಧ್ಯಕ್ಷರು :—ಕೃಷ್ಣಪ್ಪನವರೇ, ತಾವು ಅವರನ್ನು ಕೂರಿಸಿ ;

ಶ್ರೀ ಎಂ. ಎಸ್. ಕೃಷ್ಣನ್ .- ಸರ್ಕಾರದವರು ಯಾವಾಗಲೂ........

ಅಧ್ಯಕ್ಷರು : —ನೀವೂ ಸಹ ಹೀಗೆ ಮಾಡಿದರೆ ಹೇಗೆ ?

ಶ್ರೀ ಕೆ. ಎಚ್. ಹನುಮೇಗೌಡ :- ಇದಕ್ಕೆ ಮತ್ತೊಂದು ಉದಾಹರಣೆ ಕೊಡಬೇಕೆಂದರೆ, ತಾಲ್ಲೂಕು ಬೋರ್ಡ್ ಆಫೀಸಿಗೆ ರೈತರು ಹೋಗಿ ಗೊಬ್ಬರ ಕೇಳಿದಾಗ ಪೋಲೀಸಿನವರು ಗೊಬ್ಬರ ಕೇಳಿದವರನ್ನು ಹಿಡಿದುಕೊಂಡು ಚೆಚ್ಚಿ ಚೆಚ್ಚಿ ಹೊಡೆದಿದ್ದಾರೆ ಎನು ತಾಯಿ; ಇದು ಪ್ರಜೆಗಳ ಸರ್ಕಾರವೋ ಅಥವಾ ರಾಕ್ಷಸೀ ಸರ್ಕಾರವೋ ಎಂದು ನಾನು ತಮ್ಮನ್ನು ಕೇಳುತ್ತೇನೆ. ಈ ರೀತಿ ಪೋಲೀಸಿನವರು ನಡೆದುಕೊಳ್ಳುವುದಕ್ಕೆ ಸರ್ಕಾರದವರು ಅವಕಾಶ ಕೊಟ್ಟರೆ ಪ್ರಜಾಪ್ರಭುತ್ವವಾದರೂ ಏತಕ್ಕೆ ಇರಬೇಕು. ನಾವಾದರೂ ಸಹ ಜನರಿಂದ ಚುನಾಯಿಸಿ ಇಲ್ಲಿಗೆ ಏತಕ್ಕೆ ಬರಬೇಕು ?

MADAM SPEAKER.—Please do not take down anything. Expunge all those things.

XXXX XXXX XXXXX

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದೇನು ಹೊಡೆದಾಟವೋ ಅಥವಾ ಕಾದಾಟವೋ ?

ಅಧ್ಯಕ್ಷರು. — ಮಾನ್ಯ ಹನುಮೇಗೌಡರೇ ತಾವು ಸ್ವಲ್ಪ ಸಮಾಧಾನ ತೆಗೆದು ಕೊಂಡು ಗೊತ್ತಿರುವುದನ್ನು ಸ್ವಲ್ಪ ನಿಧಾನವಾಗಿ ಹೇಳಿ. ಈ ರೀತಿಯೆಲ್ಲಾ

XXXX Matter not recorded as ordered by the chair

(ಅಧ್ಯಕ್ಷರು)

ಮಾತನಾಡುವುದು ಸರಿಯಲ್ಲ. ಏನಾದರೂ ಮಾತನಾಡಬೇಕಾದರೆ ಆಡಿಸಿ ಮಾತನಾಡಿ. ಅವೇಶದಲ್ಲಿ ಏನೋ ಮಾತನಾಡುವುದು ಸರಿಯಲ್ಲ. ಏಕೆಂದರೆ ಅದೆಲ್ಲಾ ರೆಕಾರ್ಡ್ ಆಗುತ್ತದೆ. ಅಲ್ಲಿ ಎಲ್ಲರೂ ಇದ್ದಾರೆ; ಆದಕಾರಣ ಆ ರೀತಿಯೆಲ್ಲಾ ಮಾತನಾಡುವುದು ಚೆನ್ನಾಗಿರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳುವುದನ್ನು ಒಪ್ಪುತ್ತೇವೆ. ಆದರೆ ಅವರು ಹೇಳಿದನ್ನು ತೆಗೆದು ಹಾಕಬೇಕೆಂದು ಹೇಳಿದ್ದು ಏತಕ್ಕೆ? ಮಾನ್ಯ ಸದಸ್ಯರು ಘಟನೆಗಳು ನಡೆದಿರುವ ಬಗ್ಗೆ ಹೇಳಿದ್ದಾರೆ ಮತ್ತು ನಿಯಮದ ಪ್ರಕಾರ ಹೇಳಿದ್ದಾರೆ. ಆದಕಾರಣ ತಾವು ಕೊಟ್ಟಿರುವ ರೂಲಿಂಗನ್ನು ಬದಲಾಯಿಸಬೇಕು.

ಅಧ್ಯಕ್ಷರು.—ಅದು ನನಗೆ ಗೊತ್ತು, ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನಿಯಮದಪ್ರಕಾರ ಸ್ಪಷ್ಟೀಕರಣ ಕೇಳುವುದಕ್ಕೆ ತಾವು ಅವರಿಗೆ ಅವಕಾಶ ಕೊಟ್ಟಿದ್ದೀರಿ. ಅದರಂತೆ ಅವರು ಕೇಳಿದ್ದಾರೆ. ಆ ರೀತಿ ಅವರು ಕೇಳಿರುವುದನ್ನು ತೆಗೆದುಹಾಕಬೇಕೆಂದು ತಾವು ಹೇಳುವುದು ಸರಿಯೇ? ಆ ರೀತಿ ತಾವು ರೂಲಿಂಗ್ ಕೊಡುವುದಾದರೆ ನಾವಾದರೂ ಸಹ ಇಲ್ಲಿಗೆ ಏತಕ್ಕೆ ಬರಬೇಕು?

ಅಧ್ಯಕ್ಷರು.—ಅವರು ಹೇಳಿದಂತೆ ಕೆಲವು ವಾಕ್ಯಗಳನ್ನು ತೆಗೆದುಹಾಕಿ ಎಂದು ಹೇಳಿದ್ದೇನೆ. ತೆಗೆದು ಹಾಕುವ ಅಧಿಕಾರ ನನಗೆ ಇರುವುದರಿಂದ, ಯಾವುದನ್ನು ತೆಗೆದು ಹಾಕಬೇಕೋ ಅದನ್ನು ತೆಗೆದು ಹಾಕಿಸುತ್ತೇನೆ.

2-00 P.M.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ):—ಶ್ರೀ ಹನುಮೇಗೌಡರು ಬಹು ಉದ್ವೇಗದಿಂದ ಇಲ್ಲಿ ಮಾತಾಡುತ್ತಾರೆಂದು ಹೇಳಿದರು, ಇದಕ್ಕೆ ಕಾರಣ ಇಲ್ಲಿ ಸರಕಾರದವರು ಕೊಟ್ಟಿರುವ ಹೇಳಿಕೆ. ಸರಕಾರದವರು ಯಾವಾಗಲೂ ಪೋಲೀಸರಿಂದ ಬಂದ ವರದಿಯ ಮೇಲೆ ಒಂದು ರೀತಿಯಾದ ಪ್ರೊಫಾರ್ಮಾ ರಿಪ್ಲೈ ಕೊಡಬೇಕೆಂದು ಇರುತ್ತಾರೆ. ಆದನ್ನು ಮಾಮೂಲಾಗಿ ಕೊಡುವಂತೆ ಈಗಲೂ ಕೊಟ್ಟಿದ್ದಾರೆ. ಯಾವಾಗಲೂ ಇದೇ ರೀತಿಯಾದ ರೊಟೀನ್ ರಿಪ್ಲೈಯನ್ನೇ ಕೊಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈಚೀಚೆಗೆ ಜನಗಳನ್ನು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆಯುವುದು ಹೆಚ್ಚಾಗುತ್ತಿದೆ.

ಇಲ್ಲಿ ಕೂಡ ಪೋಲೀಸರು ಒಬ್ಬ ಹುಡುಗನನ್ನು ಹೊಡೆದಿದ್ದಾರೆಂದು, ನನಗೆ ತಿಳಿದಿರುವಂತೆ, ಇಂದು ಹಾಸನದಲ್ಲಿ ಬಂದಾಗಿದೆ ಮತ್ತು ಪೋಲೀಸರು ಟೀಯರು ಗ್ಯಾಸನ್ನು ಚೆಲ್ಲಿದ್ದಾರಂತೆ ಮತ್ತು ಹಾಸನದಲ್ಲಿರುವ ಜನರನ್ನು ವಿನಾಕಾರಣ ಪೋಲೀಸರೇ ಉದ್ರೇಕಗೊಳಿಸುತ್ತಿದ್ದಾರಂತೆ. ಇಷ್ಟು ಗಹನವಾದ ವಿಚಾರ ವಿರುವಾಗ ಸರಕಾರ ಇಲ್ಲಿಗೆ ಬಂದು ಇಂತಹ ಮಾಮೂಲ ಹೇಳಿಕೆ ಕೊಡುವುದರಿಂದ ಆಗುವ ಪ್ರಯೋಜನವಾದರೂ ಏನು? ಏತಕ್ಕೋಸ್ಕರ ಸರಕಾರ ಇರುವುದು? ಇದಕ್ಕಾಗಿ ಇದನ್ನು ಮತ್ತೆ ಪರಿಶೀಲನೆ ಮಾಡಬೇಕೆಂದು ಹೇಳುತ್ತಿರುವುದು ಸ್ವಾಮಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ :....ಮಾನ್ಯ ಅಧ್ಯಕ್ಷರೇ

ಅವರಿಗೆ ಏನು ಇಚ್ಛೆ ಇದೆ ಅದೇ ರೀತಿ ನಾನು ಇಲ್ಲಿ ಸ್ಟೇಟ್‌ಮೆಂಟ್ ಕೊಡಬೇಕೆಂದು ಅಪೇಕ್ಷೆ ಮಾಡಿದರೆ ಅದು ಸರಿಯಲ್ಲ.

(ಶ್ರೀ ಕಾಗೋಡು ತಿಮ್ಮಪ್ಪ ಮತ್ತು ಶ್ರೀ ವಾಟಾಳ್ ನಾಗರಾಜ್ ಹಾಗೂ ಇತರರು ಎದ್ದರು.)

ಶ್ರೀ ಹೆಚ್. ಎಂ. ಚನ್ನಬಸಪ್ಪ: ನಾನು ಇಂದು ಹಾಸನಕ್ಕೆ ಹೋಗುತ್ತೇನೆ

ಶ್ರೀ ವಾಟಾಳ್ ನಾಗರಾಜ್ : ಇದು ಗುರುತರವಾದ ಪ್ರಶ್ನೆಯಲ್ಲವೇ?

ಅಧ್ಯಕ್ಷರು : ಅಲ್ಲ ಎಂದು ಯಾರು ಹೇಳಿದರು? ತಮಗೆ ಸರಿಯಾಗಿ ಅರ್ಥ ಮಾಡಿ ಕೊಳ್ಳಲಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವು ಒಂದೊಂದು ಸಾರಿ ಇಲ್ಲಿ ಹೇಳು ವಾಗ ನಮ್ಮನ್ನು ಕುಳ್ಳಿರಿಸುವುದೂ ಉಂಟು.

ಅಧ್ಯಕ್ಷರು : ಒಂದು ಮಗು ಸತ್ತು ಹೋಗಿರುವಾಗ ಇದರ ಬಗ್ಗೆ ಹೇಳುವಾಗ ತಮಗೆ ಸರಿಯಾಗಿ ಅರ್ಥ ಗೊತ್ತಾಗುತ್ತಿಲ್ಲ ಎಂದು ನಾನು ಹೇಳು ತ್ತಿರುವುದು ಸ್ವಲ್ಪ ತಾವು ಸರಿಯಾಗಿ ವಿಚಾರಗಳನ್ನು ತಿಳಿದುಕೊಂಡು ಇಲ್ಲಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಇದುವರೆಗೆ ಇಲ್ಲಿ ಬಂದಿರತಕ್ಕ ಹೇಳಿಕೆ ಪೋಲೀಸರು ಕೊಟ್ಟಿರತಕ್ಕ ವರದಿಯ ಆಧಾರದ ಮೇಲೆ ಹೇಳಿರತಕ್ಕದ್ದು. ಆದರೆ

(ಶ್ರೀ ಪಾಟಾಳ್ ನಾಗರಾಜ)

ಇಲ್ಲಿ ಬಂದಿರತಕ್ಕದ್ದು ಬೇಜವಾಬುದಾರಿಯಿಂದ ಕೊಟ್ಟಿರುವ ಪೋಲೀಸರ ರಿಪೋರ್ಟು. ಇದಕ್ಕಾಗಿ ನಾನು ಮಾನ್ಯ ಶ್ರೀ ಚನ್ನಬಸಪ್ಪನವರನ್ನು ಕೈಮುಗಿದು ಕೇಳಿಕೊಳ್ಳುವುದು ಇಲ್ಲಿ ಹೇಳಿಕೆ ಕೊಡುವಾಗ ತಮ್ಮ ಆತ್ಮಸಾಕ್ಷಿಯಾಗಿ ಯೋಚನೆ ಮಾಡಿ ಕೊಟ್ಟಿದ್ದೀರಾ ಎಂದು. ನಿಮಗೆ ಆತ್ಮ ಇದ್ದರೆ ಇಂದು ಹಾಸನದಲ್ಲಿ ನಡೆಯುತ್ತಿರುವ ಗೂಂಡಗಿರಿಯನ್ನು ತಪ್ಪಿಸಬೇಕು. ಹಾಸನದಲ್ಲಿ ಜನಗಳ ಮೇಲೆ ಲಾಠಿ ಪ್ರಹಾರ ಮಾಡುತ್ತಿದ್ದಾರೆ, ಟೀಯರ್ ಗ್ಯಾಸು ಷೆಲ್‌ಗಳನ್ನು ಚೆಲ್ಲುತ್ತಿದ್ದಾರೆ, ಸಿಕ್ಕಾಪಟ್ಟೇ ಜನರನ್ನು ಪೋಲೀಸರು ಹೊಡೆಯುತ್ತಿದ್ದಾರೆ. ಇದೇನು ಪೋಲೀಸು ರಾಜ್ಯವೇ ? ನರಹತ್ಯೆ ಮಾಡುತ್ತಾ ಇದ್ದಾರೆ, ಈ ರೀತಿ ಪೋಲೀಸರು ದಬ್ಬಾಳಿಕೆ ನಡೆಸಲು ಹೋದರೆ ಮುಂದೆ ಎಲ್ಲ ವಿದ್ಯಾರ್ಥಿಗಳೂ ಚಳುವಳಿ ಮಾಡಬೇಕಾಗಿ ಬರುತ್ತದೆ. ಮಾನ್ಯ ಚನ್ನಬಸಪ್ಪನವರು ಇದರ ಬಗ್ಗೆ ತಕ್ಕ ಬಂದೂಬಸ್ತು ಮಾಡ ಬೇಕು, ಹಾಗೆ ಮಾಡದಿದ್ದರೆ ಇಡೀ ರಾಜ್ಯದ ವಿದ್ಯಾರ್ಥಿಗಳು ಚಳುವಳಿ ಮಾಡ ಬೇಕಾಗಿ ಬರುತ್ತದೆ.

(ಆಡಳಿತ ಪಕ್ಷದ ಸದಸ್ಯರುಗಳು ಓ ಎಂದು ಕೂಗಿದರು)

ಶ್ರೀ ಹೆಚ್. ಎಂ ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೇ, ವಿಷಯ ಬಹಳ ಗಹನವಾದುದು, ಇಷ್ಟು ಆವೇಶಪೂರಿತವಾಗಿ ಇಲ್ಲವೇ ಉದ್ವೇಗಪೂರಿತವಾಗಿ ಮಾತನಾಡತಕ್ಕ ವಿಷಯವಲ್ಲ ಇದು.

ಶ್ರೀ ಕೆ. ಹೆಚ್. ಹನುಮೇಗೌಡ : ಹಾಗಾದರೆ ಎಲ್ಲ ಜನರನ್ನೂ ಸಿಕ್ಕಾ ಪಟ್ಟೇ ಹೊಡೆದು ಸಾಯಿಸಿಬಿಡಿ. ನಿಮಗೆ ಭೂತದಯೂ ಪಶ್ಚಾತ್ತಾಪ ಸ್ವಲ್ಪವೂ ಇರಬೇಡವೇ ?

ಶ್ರೀ ಕೆ. ಬಿ. ಶಿವಯ್ಯ : ಮಾನ್ಯ ಸದಸ್ಯರೊಬ್ಬರಿಗೇ ಭೂತದಯೂ ಪಶ್ಚಾ ತ್ತಾಪ ಇರುವುದು ಎಂದು ಭಾವಿಸಿದ್ದೀರೇನು ?

ಶ್ರೀ ಕೆ. ಹೆಚ್. ಹನುಮೇಗೌಡ. ಅಹು ನಮಗೂ ಗೊತ್ತಿದೆ. ನಾವಾದರೂ ಈ ಸಭೆಯಲ್ಲಿ ಮೆಂಬರಾಗಿ ಏಕೆ ಇರಬೇಕು ?

ಅಧ್ಯಕ್ಷರು : ತಾವು ಈ ರೀತಿ ಸಭೆಯಲ್ಲಿ ನಡೆದುಕೊಳ್ಳುವುದು ಸ್ವಲ್ಪವೂ ಸರಿಯಾಗಿಲ್ಲ. ಸುಮ್ಮನೆ ಇಲ್ಲಿ ತಾವು ನಾನು ಈ ಸಭೆಯ ಮೆಂಬರಾಗಿರುವುದು ಬೇಕಾಗಿಲ್ಲ ಎಂದರೆ ಅದು ಸರಿಯಲ್ಲ. ತಮಗೆ ಇಲ್ಲಿ ಮೆಂಬರಾಗಲು ಇಚ್ಛೆ ಇಲ್ಲದಿದ್ದರೆ ಅದಕ್ಕೆ ತಕ್ಕ ನಿಯಮಗಳಿರುತ್ತವೆ. ಅವರಂತೆ ತಮಗೆ ಏನು ಬೇಕೋ

ಅದನ್ನು ಮಾಡಬಹುದು. ಇಲ್ಲಿ ಜನತೆಗೆ ಅನ್ಯಾಯವಾಗಿದೆ ಎಂದು ಈ ರೀತಿ ಸಭೆಯ ಕಲಾಪಗಳಿಗೆ ಅಡ್ಡಿ ಮಾಡುವುದು ಸರಿಯಲ್ಲ ಮತ್ತು ತಾವು ಈ ತರಹ ವರ್ತನೆ ಮಾಡುವುದು ಸ್ವಲ್ಪವೂ ಚೆನ್ನಾಗಿಲ್ಲ. ಈ ರೀತಿ ಮತ್ತೆ ಮತ್ತೆ ಹೇಳುತ್ತಾ ಹೋದರೆ, I will have to warn you hereafter.

ಶ್ರೀ ಎಂ. ಎಸ್. ಕೃಷ್ಣನ್ : ಅಧ್ಯಕ್ಷರೇ, ತಮ್ಮಲ್ಲಿ ನನ್ನದೊಂದು ಸಣ್ಣ ಅರಿಕೆ. ಈ ಪ್ರಶ್ನೆ ಗಹನವಾದುದು ಎಂದು ಮಾನ್ಯ ಮಂತ್ರಿಗಳೇ ಇಲ್ಲಿ ಹೇಳುತ್ತಿದ್ದಾರೆ.

ಅಧ್ಯಕ್ಷರು : ಯಾರು ಅಲ್ಲ ಎಂದು ಹೇಳಿದರು ?

ಶ್ರೀ ಎಂ. ಎಸ್. ಕೃಷ್ಣನ್ : ಸ್ವಲ್ಪ ಗಹನವಾದುದು ಎಂದೇ ಆ ಕ್ಷೇತ್ರದಿಂದ ಬಂದಿರತಕ್ಕ ನಮ್ಮ ಸದಸ್ಯರು ಸ್ವಲ್ಪ ಉದ್ವೇಗದಿಂದ ಮಾತನಾಡಿದರು. ಇದಕ್ಕೆ ಕಾರಣ ಅಲ್ಲಿ ಪೋಲಿಸಿನವರು ನಡೆಸಿರುವ ಚಿತ್ರಹಿಂಸೆಗಳನ್ನು ನೋಡಿ ಅವರು ಹೇಳಿದ್ದಾರೆ. ಇದರ ಬಗ್ಗೆ ಹೇಳುತ್ತಾ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಈ ರೀತಿ ಮಾಡುತ್ತ ಹೋದರೆ ಮುಂದೆ ವಿದ್ಯಾರ್ಥಿಗಳ ಒಂದು ಚಳುವಳಿ ಮಾಡಬೇಕಾಗುತ್ತದೆ ಎಂದು ಹೇಳಿದಾಗ ಆಡಳಿತ ಪಕ್ಷದ ಸದಸ್ಯರು ಕೆಲವರು ಓ ಎಂದು ದೊಡ್ಡದಾಗಿ ಕೂಗಿದರು. ಹೀಗೆ ಕೂಗಿದರೆ ಇದಕ್ಕೇನು ಅರ್ಥವಾಗುತ್ತದೆ ಎಂದರೆ ಆಡಳಿತ ಪಕ್ಷದವರೇ ಇದಕ್ಕೆ ಅವಕಾಶ ಕೊಟ್ಟು ಮಾಡುತ್ತಿದ್ದಾರೆಂದು ಕಾಣುತ್ತದೆ. ಅವರೆಲ್ಲ ತಮ್ಮ ಜವಾಬುದಾರಿಗಳನ್ನು ಅರಿತಿರುವವರು, ಹೀಗೆ ಹೇಳಿದರೆ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಶ್ರೀಮಾನ್ ವಾಟಾಲ್ ನಾಗರಾಜ್‌ರವರು ಚಳುವಳಿ ಮಾಡಿಸಬೇಕಾಗುತ್ತದೆ ಎಂದು ಹೇಳಿದರು. ಆ ರೀತಿ ಚಳುವಳಿ ಮಾಡುವುದಾದರೆ ನಮಗೂ ಚಳುವಳಿ ಮಾಡಿಸಲು ಬರುತ್ತದೆ ಎಂದು 'ಓ' ಎಂದಿದಕ್ಕೆ ಅರ್ಥ ಇವರಲ್ಲೇನೂ ಬೇರೆ ಸಂಶಯವಿಲ್ಲ.

ಶ್ರೀ ಎಂ.ಎಸ್ ಕೃಷ್ಣನ್ : ನಿಮ್ಮ ಕೈಯಲ್ಲಿ ಶಕ್ತಿ ಇದೆ, ಏನು ಬೇಕಾದರೂ ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಇಂತಹ ಅನ್ಯಾಯಗಳನ್ನು ರಾಜ್ಯದಲ್ಲಿ ಪೋಲೀಸರು ವಿದ್ಯಾರ್ಥಿಗಳ ಮೇಲೆ ಮಾಡುತ್ತಿದ್ದರೆ ಇಡೀ ರಾಜ್ಯದ ವಿದ್ಯಾರ್ಥಿಗಳು ಚಳುವಳಿ ಮಾಡಬೇಕಾಗಿ ಬರುತ್ತದೆ ಎಂದು ಹೇಳಿದರೆ ಇದಕ್ಕೆ ನಮ್ಮ ಕಾಂಗ್ರೆಸ್ಸು ಪಕ್ಷದ ಸದಸ್ಯರು 'ಓ' ಎಂದು ಕೂಗುವುದು ಸರಿಯೇ ?

ಅಧ್ಯಕ್ಷರು : ತಾವು ಈ ರೀತಿ ಎದ್ದೆದ್ದು ಹೇಳುವುದು ಸರಿಯಲ್ಲ. ತಾವು ಮೊದಲು ಅಧ್ಯಕ್ಷರು ಎದ್ದಾಗ ಕುಳಿತುಕೊಳ್ಳುವುದನ್ನು ಕಲಿಯಿರಿ.

ಶ್ರೀ ವಾಟಾಳ್‌ನಾಗರಾಜ್ : ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದ್ದರೆ ಅವರು ಚಳುವಳಿ ಮಾಡದೇ ಇನ್ನೇನು ಮಾಡಬೇಕು ? ತಾವೇ ಹೇಳಿ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ನಾನು ಇನ್ನೂ ಇಲ್ಲಿ ಒಂದೇ ಒಂದು ವಾಕ್ಯ ಮಾತ್ರ ಹೇಳಿದೆ, ಅದರಲ್ಲಿ ವಿಷಯ ಗಹನವಾದದ್ದು ಎಂತ ಹೇಳಿದೆ. (ಅಷ್ಟರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ಎದ್ದರು.) ನಾನು ಮಾತನಾಡುವಾಗ ಮಧ್ಯದಲ್ಲಿ ಎದ್ದು ಮಾತನಾಡಿದರೆ ಹೇಗೆ ? ನಾನು ಹೇಳುವುದನ್ನು ಸದಸ್ಯರು ಸ್ವಲ್ಪ ಸಾವಧಾನವಾಗಿ ಕೇಳಬೇಕು. ಈ ರೀತಿ ಮಧ್ಯೆ ಮಧ್ಯೆ ಹೇಳುತ್ತಿದ್ದರೆ ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಸರಕಾರ ಏನು ಹೇಳುತ್ತದೆ ಅದನ್ನು ಕೇಳುವ ಸೌಜನ್ಯವನ್ನು ಸದಸ್ಯರು ತೋರಿಸಬೇಕೆಂದು ಕೇಳುತ್ತಿದ್ದೇನೆ. ನಾನು ಏನು ಇಲ್ಲಿ ಹೇಳುತ್ತಿದ್ದೇನೋ ಅದನ್ನು ಕೇಳಲೂ ಸಹಾನುಭೂತಿ ಇಲ್ಲದಿದ್ದರೆ ಅದು ತಪ್ಪು. ನಮಗೆ ಪೋಲೀಸು ವರದಿ ಕೊಟ್ಟಿದ್ದಾರೆ. ಒಂದು ವೇಳೆ ತಪ್ಪು ವರದಿ ಕೊಟ್ಟಿದ್ದರೆ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸರಕಾರಕ್ಕೆ ಯಾವಾಗಲೂ ಅವಕಾಶ ಇದ್ದೇ ಇರುತ್ತದೆ. ಸರಕಾರಕ್ಕೆ ಅಗತ್ಯವಾದ ವರದಿ ಕೊಟ್ಟಿದ್ದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ : ಪೋಲೀಸು ಅಧಿಕಾರಿಗಳು ಕೊಟ್ಟಿರುವ ವರದಿಯನ್ನೇ ಇಲ್ಲಿ ಹೇಳಬಾರದು.

SRI H. M. CHANNABASAPPA : I am not here to be dictated by you. I am here to say what I want to say.

MADAM SPEAKER : I really feel the abesence of Sri Deve Gowda.

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಈ ವಿಷಯದಲ್ಲಿ ಏನೇನು ಮಾಹಿತಿ ಮಾನ್ಯ ಸದಸ್ಯರಿಗೆ ಗೊತ್ತಿದೆ. ಅದನ್ನು ಆವೇಶಪೂರಿತರಾಗಿ ಇಲ್ಲಿ ಹೇಳುವುದರ ಬದಲು ಯಾರಿಗೆ ಅದನ್ನು ಮುಟ್ಟಿಸಬೇಕೋ ಅವರಿಗೆ ಅದನ್ನು ತಿಳಿಸತಕ್ಕದ್ದು ಸರಿಯಾದ ಮಾರ್ಗವೆಂದು ನಾನು ಮಾನ್ಯ ಹನುಮೇಗೌಡರಲ್ಲಿ ವಿನಂತಿಸಿಕೊಳ್ಳುತ್ತೇನೆ. ವಿಷಯ ಅನೇಕರಿಗೆ ಗೊತ್ತಿರಬಹುದು, ನನಗೆ ಗೊತ್ತಿಲ್ಲದೆ ಇರಬಹುದು. ವಿಷಯಗಳು ಯಾರಿಗೆ ತಲುಪಬೇಕೋ, ಯಾರಿಗೆ ತಲುಪಿಸುವುದರಿಂದ ಹೆಚ್ಚು

ಪ್ರಯೋಜನಕಾರಿಯಾಗುತ್ತದೆ. ಅವರಿಗೆ ತಲುಪಿಸತಕ್ಕ ಪದ್ಧತಿಯನ್ನು ನಾವು ಅನುಸರಿಸಬೇಕು. ಸರ್ಕಾರದ ಪರವಾಗಿ ಹೇಳಿಕೆಯನ್ನು ಮಾಡಬೇಕೆಂದು ಕೇಳಿದರು. ನನಗೆ ಎಷ್ಟು ಮಾಹಿತಿ ಬಂದಿದೆ ಅದನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಇನ್ನು ಕೆಲವು ದಿವಸಗಳಲ್ಲಿ ಹೆಚ್ಚಿನ ಮಾಹಿತಿ ಸಿಕ್ಕಿದರೆ, ಅದನ್ನೂ ಸಭೆಯ ಮುಂದೆ ಇಡಬೇಕು ಎಂದರೆ ಅದನ್ನೂ ಇಡುವುದಕ್ಕೆ ನಾನು ಸಿದ್ಧನಿದ್ದೇನೆ. ಮೆಡಿಕಲ್ ಡಿಪಾರ್ಟ್‌ಮೆಂಟಿನಿಂದ ಬಂದಿರುವ ಮಾಹಿತಿ ಏನಿದೆ ಅದರಲ್ಲಿ ಕೆಮಿಕಲ್ ಎಗ್ಸಾಮಿನೇಷನ್ ಆದ ಮೇಲೆ ನಮ್ಮ ಅಭಿಪ್ರಾಯವನ್ನು ಕೊಡುತ್ತೇವೆಂದು ತಿಳಿಸಿದ್ದಾರೆ. ಅದು ನನ್ನ ಹತ್ತಿರ ರಿಕಾರ್ಡ್‌ನಲ್ಲಿದೆ. ಅದನ್ನು ನಾನು ಓದುತ್ತೇನೆ.

"Opinion of the cause of death:

Opinion reserved pending chemical examination report.

INDRAKUMAR,
Assistant Surgeon,
Chamarajendra Hospital.

ನಾನು ಈಗ ಏನು ಮಾಹಿತಿ ಕೊಟ್ಟಿದ್ದೇನೆ ಅದರ ಜೊತೆಗೆ ಇನ್ನೂ ಕೆಲವು ದಿವಸಗಳಾದ ಮೇಲೆ ಹೆಚ್ಚಿನ ಮಾಹಿತಿ ಕೊಡಬೇಕು ಎಂದರೆ ಸರಕಾರದ ಅಡ್ಡಿ ಇಲ್ಲ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಸರ್ವೇ ಸಾಧಾರಣವಾಗಿ ಪೋಲೀಸ್ ಸ್ಟೇಷನ್‌ನಲ್ಲಿ ನಡೆಯುತಕ್ಕ ಘಟನೆಗಳ ಬಗ್ಗೆ ಸಾಕಷ್ಟು ಸತ್ಯಾಂಶವನ್ನು ನಾವು ಕಂಡುಹಿಡಿಯಲೇಬೇಕು. ನಾವು ಮತ್ತು ನೀವು ಕಂಡು ಹಿಡಿಯಲೇಬೇಕು. ಪೋಲೀಸಿನವರು ಕೊಡುವುದೇ ಸಂಪೂರ್ಣವಾಗಿ ಸತ್ಯವೆಂದು ತಿಳಿದುಕೊಂಡರೆ ಅನೇಕ ವೇಳೆ ಮೋಸ ಹೋಗತಕ್ಕಂಥದ್ದಿದೆ. ಅವರೇ ಕೊಟ್ಟಿರತಕ್ಕ ವರದಿಯ ಪ್ರಕಾರ ಅದು ಸುಳ್ಳು ಎಂದು ಪ್ರತ್ಯೇಕವಾಗಿ ಕಾಣುತ್ತದೆ. ಕೆಮಿಕಲ್ ಎಗ್ಸಾಮಿನರ್ಸ್ ರಿಪೋರ್ಟ್ ಬಂದಿಲ್ಲವೆಂದು ಹೇಳಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ ಬಾಯಲ್ಲಿ ನೊರೆ ಬಂದಿತ್ತು. ಫಿಟ್ ಬಂದಿತು, ಆ ಕಾರಣಕ್ಕಾಗಿ ನೊರೆ ಬಾಯಲ್ಲಿ ಬಂದಿತ್ತು ಎಂದು ಹೇಳುತ್ತಾರೆ. ಫಿಟ್ಸ್ ಬಂದುದರಿಂದ ಬಾಯಲ್ಲಿ ನೊರೆ ಬಂದಿರಬಹುದು, ಇಲ್ಲವೇ ಯಾರಾದರೂ ಆತನ ಮೇಲೆ ಕೈ ಮಾಡಿರಬಹುದು, ಇಲ್ಲವೇ ವಿಷ ತೆಗೆದುಕೊಂಡಿರಬಹುದು. ವಿಷ ತೆಗೆದುಕೊಂಡಿರುವುದಕ್ಕೆ ಸಂಬಂಧಿಸಿದ ಹಾಗೆ ಏನಾದರೂ ಅಲ್ಲಿ ಇತ್ತೇ ಇಲ್ಲವೇ ಎನುವುದನ್ನು ಏನೂ ಹೇಳಿಲ್ಲ. ಪೋಲೀಸಿನವರಿಗೆ ಇಂಥದನ್ನು ಮುಚ್ಚಿ ಹಾಕುವುದು ಹೇಗೆ ಎನ್ನುವುದು

ಶ್ರೀ ಕಾಗೋಡು ತಿಮ್ಮಪ್ಪ

ಗೊತ್ತಿದೆ. ಹಾಸನಕ್ಕೆ ಮಾನ್ಯ ಮಂತ್ರಿಗಳು ಹೋಗಿ ಘಟನೆ ಏನು ನಡೆಯಿತು ಎನ್ನುವುದನ್ನು ಖುದ್ದಾಗಿ ತಿಳಿದುಕೊಳ್ಳಲಿ. ಫಿಟ್ಸ್ ಬರುತ್ತಿತ್ತೇ ಇಲ್ಲವೇ ಎನ್ನುವ ಬಗ್ಗೆ ಆತನ ತಂದೆಯನ್ನು ಕೇಳಿ ತಿಳಿದುಕೊಂಡು ಈ ಸಭೆಗೆ ಒಂದು ಹೇಳಿಕೆಯನ್ನು ಕೊಡಬೇಕು. ಅಧಿಕಾರಿಗಳ ಮೇಲೆ ಮಸಿ ಬಳಿಯತಕ್ಕ ಕೆಲಸ ವಾಗಬಾರದು. ಮಾನ್ಯ ಮಂತ್ರಿಗಳು ಎಲ್ಲ ವಿಚಾರಗಳನ್ನು ತಿಳಿದುಕೊಂಡು ಸಭೆಯಲ್ಲಿ ಹೇಳಿಕೆ ಕೊಡಬೇಕು.

ಅಧ್ಯಕ್ಷರು :– ನನಗೆ ಇನ್ನೂ ಎರಡು ಮೂರು ನೋಟೀಸುಗಳು ರೂಲ್ 312ರ ಪ್ರಕಾರ, ರೂಲ್ 146ರ ಪ್ರಕಾರ ಹೀಗೆ ಬಂದಿವೆ. ಮಾನ್ಯ ಮಂತ್ರಿಗಳು ಒಂದು ಹೇಳಿಯನ್ನು ಕೊಟ್ಟು ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಲೇಬೇಕು, ತಪ್ಪು ಮಾಡಿರುವ ಅಧಿಕಾರಿಗಳ ಪರವಾಗಿ ವಾದಿಸುತ್ತಿದ್ದೇನೆಂದು ಯಾರೂ ತಿಳಿಯಬಾರದು, ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರೂ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ತಿಳಿಸಬಹುದು. ಈ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ನಾನು ನೋಡುತ್ತೇನೆ.

ಶ್ರೀ ಕೆ. ಹೆಚ್ ಹನುಮೇಗೌಡ :- ಪೋಲೀಸ್ ಸ್ಟೇಷನ್‌ನಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದವನನ್ನು ಆಸ್ಪತ್ರೆಗೆ ಒಬ್ಬ ಮೈನರ್ ಹುಡುಗನ ಜಟಕಾ ಗಾಡಿಯಲ್ಲಿ ಹಾಕಿ ಕಳುಹಿಸಿದ್ದಾರೆ. ನಾನು ಕೇಳಿದ ಒಂದೆರಡು ವಿಷಯಗಳಿಗೆ ಮಾನ್ಯ ಮಂತ್ರಿಗಳಿಂದ ಸ್ಪಷ್ಟೀಕರಣ ಬರಲಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ :- ಮಾನ್ಯ, ಸದಸ್ಯರಿಗೆ ಏನು ಮಾಹಿತಿ ಗೊತ್ತಿದೆ ಅದನ್ನು ನನಗೆ ಹೇಳುವುದಕ್ಕೆ ಬದಲು ಇನ್‌ವೆಸ್ಟಿಗೇಟಿಂಗ್ ಆಫೀಸರ್‌ಗೆ ತಲುಪಿಸಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಹುಡುಗ ಎಷ್ಟು ಉದ್ದ ಇದ್ದ. ಅವನು ಮೈನರೇ ಮೇಜರೇ ಇವನ್ನೆಲ್ಲ ಇನ್‌ವೆಸ್ಟಿಗೇಟಿಂಗ್ ಅಧಿಕಾರಿಗಳಿಗೆ ತಿಳಿಸುವುದು ಒಳ್ಳೆಯದು. ಸರ್ಕಾರದ ಅಭಿಪ್ರಾಯದಲ್ಲಿ ಸತ್ಯವನ್ನು ಮುಚ್ಚಿಡಬೇಕು ಎನ್ನುವ ಅಗತ್ಯವಿಲ್ಲ. ಅಂಥ ಪ್ರಮೇಯವು ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :- ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಮಾನ್ಯ ಚನ್ನಬಸಪ್ಪನವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ತಾವು ಹೇಳಿದ್ದಿರಿ ;- ನಾನು ಇವಾಗ ಶ್ರೀ ದೇವೇಗೌಡರ ಗೈರು ಹಾಜರಿಯನ್ನು ಫೀಲ್ ಮಾಡುತ್ತಿದ್ದೇನೆ ಎಂದು.

ಅಧ್ಯಕ್ಷರು :- ನಾನು ಉದ್ವೇಗದಲ್ಲಿ ಹೇಳಿದೆ. I am sorry

(ii) *Re : Increase of fees in Regulated Markets*

SRI T. R. SHAMANNA :- I call the attention of the Minister for Co-operation to the increase of fees in the Regulated Market.

SRI A SHANKER ALVA.—I make the following statement.

According to Section 65 of the Mysore Agricultural Produce Marketing (Regulation) Act 1966, the purchaser of the notified agricultural commodities within the jurisdiction of the Agricultural Produce Market Committee has to pay to the market committee not more than 30 paise as prescribed by the byelaws of the Market Committee as market fees per hundred rupees worth of commodities sold. The Department of Marketing had prepared a project for development of Regulated Markets on modern lines and had presented it to the World Bank for loan assistance. The World Bank has accepted and they have advanced a loan of eight million dollars or Rs. 10 crores: It was felt that unless the market fees were raised, the market committees would not be able to repay the loan required for providing basic amenities in the market yards for the users of the market which is very essential for implementing the provisions of the Act, The World Bank. .... has also imposed a condition for the release of the loan that the market fees should be raised from 30 paise to Rs. 1-00 for one hundred rupees worth of commodities sold. This is to enable the market committees to improve their repaying capacity of the loan to be taken by them under the World Bank Project.

Though the Government have issued an ordinance to raise market fees to Rs. 1-00 this would not come automatically into effect unless and until the market committees pass a resolution to that effect, in consideration of the amenities they extend to the producers and the traders.

(Sri A Shanker Alva)

The Mysore High Court has held (AIR 1970 Mysore 114) that the character of the impost under Section 65 is that of a fees and not that of a tax. It is therefore necessary that there should be necessary correlation between the service rendered and the fees levied. As the fees to be paid should be specified in the bye-laws, the market committees will have to ensure that the fees specified have necessary correlation to the service actually rendered.

In order to facilitate the market committees to raise fees commensurate with the additional facilities proposed to be provided. provision has to be made in the Act to raise fees to maximum of Rs. 1-00. In this background and in consideration of the agreement entered into with the I.D.A. by this State Government, an ordinace has been issued.

As the I.D.A. has to be intimated before 7th September, 1973, about the fulfillment of the conditions of the agreement and since Legislature was not in session it become imperative to promulgate ordinace 5 of 1973.

It is not true that the Bangalore Market Committee has several lakhs of rupees as accumulated money with them. The amount which they have collected by way of market fees will be utilised for providing facilities in the new market yard at Yeshwanthapur.

The trade in the Bangalore market area has not yet been shifted to the new market yard at at Yeshwanthapur, because all the facilities required for shifting the trade are yet to be provided in the market yard and the Commission Agents and Traders, who have been allotted sites in the market yard are still to construct their shops-cum-godowns. Provision has been made in the World Bank project to give loans to these market functionaries for construction of shops-cum-godowns. It is hoped that within an year of the starting of the Project it

should be possible to shift the trade from the existing bazar to the new market yard at Yeshwanthapur.

In Government Notification No. D.P.C.343.C.M.D. 71 dated 2nd November 1971 a preliminary Notification calling for objections in respect of the following commodities has been issued :

> Peas, tomatoes brinjal, cauliflower, carrot, ladies-fingers, pumpkin, water-gaurd, ribbedgourd, sanke-gourd, bittergourd, cucumber, cabbage, knowl-kowl. raddish, beatroot, beans, cow-beans, leampn green chillies, suvarnaroot, avarkekai chow-chow, wet ginger grapes, oranges, plantains, pine-apple, mangoes guaves and moosambin (hitherto not regulated).

Innumerable representations have been received objecting the levy of market fees in respect of those commodities.

The question of issuing a final notification is under consideration in consultation with the Chief Marketing Officer.

ಶ್ರೀ ಟಿ. ಆರ್. ಶ್ಯಾಮಣ್ಣ : ಮಾನ್ಯ ಸಭಾಪತಿಗಳೇ, ತಮ್ಮ ಮೂಲಕ ಕೆಲವು ಸ್ಪಷ್ಟೀಕರಣಗಳನ್ನು ಕೇಳಬೇಕಾಗಿದೆ. ಒಂದು, ಈಗ ಸೇಲ್ಸ್ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ 30 ಪೈಸೆಯಿಂದ ಒಂದು ರೂಪಾಯಿಗೆ ಏರಿಸುವುದರಿಂದ ಸಾಮಾನು ಗಳ ಬೆಲೆ ಏರುವುದಿಲ್ಲವೇ? ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸೌಕರ್ಯ ಮಾಡಿ ಕೊಟ್ಟರೆ, ವರ್ತಕರಿಂದ ಹಣ ವಸೂಲು ಮಾಡುವುದಕ್ಕೆ ಆಗುವುದಿಲ್ಲವೆ? ಮಾರ್ಕೆಟ್ ಫೀ ಹಾಕಿದರೆ ನೇರವಾಗಿ ಬೆಲೆಗಳು ಏರುವುದಿಲ್ಲವೇ ?

ಶ್ರೀ ಎ. ಶಂಕರ್ ಆಳ್ವ : 65ನೇ ಆಕ್ಟ್‌ನಲ್ಲಿ 30 ಪೈಸೆಗಿಂತ ಜಾಸ್ತಿ ವಸೂಲು ಮಾಡಕೂಡದು ಎಂದು ಇದೆ, ಹೈಯರ್ ಮಿನಿಮಂ ಇಟ್ಟುಕೊಂಡಿದ್ದಾರೆ. ಪಂಜಾಬಿನಲ್ಲಿ ನೋಡಿದರೆ ಒಂದೂವರೆ ರೂಪಾಯಿ ಆಕ್ಟ್‌ನಲ್ಲಿ ಹಾಕಿದ್ದಾರೆ. ಹರಿಯಾಣದಲ್ಲಿ ಒಂದು ರೂಪಾಯಿ ಇದೆ. ನಾವು ಒಂದು ರೂಪಾಯಿ ಹಾಕಿದರೂ ಮಾರ್ಕೆಟ್ ಕಮಿಟಿಯವರು ಅವರ ಬೈಲಾಸ್‌ನಲ್ಲಿ ಹಾಕಿಕೊಳ್ಳಬೇಕು

(ಶ್ರೀ ಎ. ಶಂಕರ್ ಆಳ್ವ)

ಅದೂ ಅಲ್ಲದೇ ವರ್ಲ್ಡ್ ಬ್ಯಾಂಕ್‌ನವರು ಜೊತೆಗೆ ಅಗ್ರಿಮೆಂಟ್ ಮಾಡಿಕೊಳ್ಳುವಾಗ ಅವರು ಒಂದು ಶರತ್ತು ಹಾಕಿದ್ದಾರೆ ಅವರು ಸಾಲ ಕೊಟ್ಟರೆ ವಾಪಸ್ಸು ಕೊಡಬೇಕು. ಅದಕ್ಕೆ ಮಾರ್ಕೆಟ್ ಆಕ್ಟ್‌ನಲ್ಲಿರುವಂತೆ ವಸೂಲು ಮಾಡಿದರೆ ಸಾಲ ವಾಪಸ್ಸು ಕೊಡುವುದಕ್ಕೆ ಸಾಕಾದಷ್ಟು ಹಣ ಬರುವುದಿಲ್ಲ. ಕಂತು ಕೊಡುವುದಕ್ಕಾಗುವುದಿಲ್ಲ. ಒಂದು ರೂಪಾಯಿ ಏರಿಸದಿದ್ದರೆ ವರ್ಲ್ಡ್ ಬ್ಯಾಂಕ್‌ನವರು ಲೋನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಮಾರ್ಕೆಟ್ ಇಂಪ್ರೂವ್ ಮಾಡುವುದಕ್ಕಾಗುವುದಿಲ್ಲ. ಅದೂ ಅಲ್ಲದೆ ಒಂದು ರೂಪಾಯಿಗೆ ನಾವು ಏರಿಸಿದರೆ, ಎಷ್ಟು ಪ್ರಯೋಜನ ದೊರೆಯುತ್ತದೆ. ಅಷ್ಟಕ್ಕೆ ಮಾತ್ರ ವಸೂಲು ಮಾಡಬೇಕು. It is only a fee. ಟ್ಯಾಕ್ಸ್ ಆಗಿ ಕಲೆಕ್ಟ್ ಮಾಡುವುದಿಲ್ಲ, ಒಂದು ರೂಪಾಯಿ ಆರ್ಡಿನೆನ್ಸ್ ಮೂಲಕ ನಿಗದಿ ಮಾಡಿದ್ದೇವೆ. ಅದು ಇರದಿದ್ದರೆ ಮಾರ್ಕೆಟ್ ಇಂಪ್ರೂವ್ ಮಾಡುವುದಕ್ಕಾಗುವುದಿಲ್ಲ. ಅದನ್ನು ವ್ಯಾಪಾರಸ್ಥರು ಕೊಡಬೇಕೆಂದು ಹೇಳುತ್ತೇವೆ. ವ್ಯಾಪಾರ ಮಾಡುವಾಗ ಫೆಸಿಲಿಟೀಸ್ ಕೊಡುತ್ತಾರೆ. ವ್ಯಾಪಾರಸ್ಥರು ಮಳಿಗೆ ಹಾಕಿಕೊಳ್ಳಬಹುದು ಅದಕ್ಕೆ ಶೇಕಡ 75 ರಷ್ಟು ವರ್ಲ್ಡ್ ಬಾಂಕಿನವರು ಸಾಲ ಕೊಡುತ್ತಾರೆ.

ಶ್ರೀ ಟಿ. ಆರ್ ಶ್ಯಾಮಣ್ಣ :— ಯಶವಂತಪುರದಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರೆಗ್ಯುಲೇಟೆಡ್ ಮಾರ್ಕೆಟನ್ನು ಕಟ್ಟಿಸಿ ಎರಡು ವರ್ಷಗಳಾದರೂ ಕೂಡ ಅದು ಇನ್ನೂ ಐಡಲ್ ಆಗಿ ಕೂತಿಲ್ಲವೇ ? ಅಲ್ಲಿಗೆ ಬೇಗ ಮಾರ್ಕೆಟನ್ನು ಶಿಫ್ಟ್ ಮಾಡುವುದಕ್ಕೆ ಏರ್ಪಾಡು ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎ. ಶಂಕರ ಆಳ್ವ :—ಅಲ್ಲಿ ಗೋಡೌನ್ ಆಗಿಲ್ಲ, ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್‌ನಲ್ಲಿ ಇದ್ದರೆ ಅಮೆನಿಟೀಸ್ ಕೊಡುತ್ತಾರೆ. ಒಂದು ವರ್ಷದೊಳಗೆ ಷಿಫ್ಟ್ ಮಾಡುವ ಆಲೋಚನೆ ಉಂಟು.

ಶ್ರೀ ಟಿ. ಆರ್. ಶ್ಯಾಮಣ್ಣ :— ಮಾರ್ಕೆಟಿನಲ್ಲಿ ರೈತರು ತರತಕ್ಕ ತರಕಾರಿ ಮತ್ತಿತರ ಸಾಮಾನುಗಳಿಗೆ ಸರಿಯಾದಂಥ ತೂಕ ಕೊಡದೆ, ಅದಕ್ಕೆ ತಕ್ಕ ಬೆಲೆ ಕೊಡದೆ ಅನೇಕ ತೊಂದರೆಗಳು ಆಗುತ್ತಿವೆ. ತರಕಾರಿ ಇತರ ಸಾಮಾನುಗಳನ್ನು ರೆಗ್ಯುಲೇಟೆಡ್ ಮಾರ್ಕೆಟಿಗೆ ಕಳುಹಿಸಬೇಕು ಎಂಬ ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ದಳ್ಳಾಳಿಗಳ ಒತ್ತಡದಿಂದ ತಡವಾಗುತ್ತದೆ. ರೆಗ್ಯುಲೇಟೆಡ್ ಮಾರ್ಕೆಟ್ ಮುಂದೆ ಪದಾರ್ಥಗಳನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ :— ಆದಷ್ಟು ಬೇಗ ಮಾಡುತ್ತೇವೆ ಆದರೆ ನೋಟಿಫಿಕೇಷನ್ ಮಾಡಬೇಕು, ಆಕ್ಷೇಪಣೆಗಳನ್ನು ತೆಗೆದುಕೊಳ್ಳಬೇಕು, ಅ

ಮೇಲೆ ಹುಕುಂ ಮಾಡಬೇಕು, ಆದುದರಿಂದ ಸ್ವಲ್ಪ ಸಮಯ ಬೇಕಾಗುತ್ತದೆ. ಅಳತೆ ಮತ್ತು ತೂಕದ ಇಲಾಖೆಯವರು ಆಗಾಗ್ಗೆ ತನಿಖೆ ನಡೆಸುತ್ತಾರೆ. ಅವರು ಹೆಚ್ಚು ಕಡಿಮೆ ಆಗದಹಾಗೆ ನೋಡಿಕೊಳ್ಳುತ್ತಾರೆ.

PERSONAL STATEMENT OF THE MINISTER OF STATE FOR YOUTH SERVICES

Re: Allegation of his involvement in a murder case

SRI V. S. KOUJALAGI (Minister of State for Youth Services).—With reference to the news that appeared in the newspapers dated 4-9-1973 regarding the murder of one Sri Nagappa Basappa Hatta in Benchanmaradi Village of Gokak Taluk on 19-7-1973, I wish to furnish my personal explanation that I am not aware of the happenings leading to the alleged murder of the said person.

SRI M. S. KRISHAN.—On a point of Order. I wanted to raise it under a particular provision of the Rules of Procedure.

ಅಧ್ಯಕ್ಷರು.—ಪತ್ರಿಕೆಯಲ್ಲಿ ಬಂದಿರುವುದನ್ನು ಮಾನ್ಯ ಮಂತ್ರಿಗಳು ಉಲ್ಲೇಖಿಸುತ್ತಿದ್ದಾರೆ.

SRI M. S. KRISHAN.—Honourable Minister has referred to me.

ಅಧ್ಯಕ್ಷರು.—ಪೇಪರ್‌ನಲ್ಲಿ ಬಂದ ಬಗ್ಗೆ ಅವರ personal explanation ಕೊಡುತ್ತಿದ್ದಾರೆ.

SRI M. S. KRISHNAN.—My submission is I had given notice of a motion to you stating that I would like to make a statement to be made on this question. After hearing me in regard to that particular notice, hon. minister may make his statement. I have not been given an opportunity at all to speak.

ಅಧ್ಯಕ್ಷರು.—ತಾವು ಹೇಳುವುದನ್ನು ಹೇಳಿ ಬಿಟ್ಟಿರಿ. ಅದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಹತ್ತಿರ ಅಫಿಡವಿಟ್ ಕಾಪಿ ಇದೆ. ಅದರ ಕಾಪಿಯನ್ನು ತಮಗೂ ಕಳುಹಿಸಿದ್ದಾರೆಂದು ಹೇಳಿದ್ದೇನೆ. It is a very ghastly murder that has taken place and I wanted the entire thing to be told here but unfortunately the Chair has not permitted me to say that.

MADAM SPEAKER.—The law will take its own course

SRI M. S. KRISHNAN.—You have withheld consent to me to make a statement.

MADAM SPEAKR.—You have said whatever you want to say the other day.

SRI M. S. KRISHNAN.—The Chair has not given me opportunity to hear me. I have to state what is contained in the affidavit.

MADAM SPEAKER.—I am not concerned with the affidavit. The law will take its own course. The hon. minister may make his personal explanation.

SRI M. S. KRISHNAN.—Unless and until I am heard about the notice for which I have sent, I do not know how the minister is competent to refer to me and refer the particular thing which appeard in my name even in the papers Let him not refer to me. If he refers to me, then I have go to texplain. Let me also be given sufficient time.

SRI V. S. KOUJALGI.—Further I am in no way concerned with the above incident. The involvement of my name in this case is merely motivated and with bad intention by some persons prejudiced against me.

I could not make this statement yesterday with the permission of the Chair as the house was adjourned.

SRI M. S. KRISHNAN.—Here is a Minister against whom grave allegations are made and the press written about it and I have raised it on the floor of the house. The Government have been requested to grant permission to prosecute him. He is implicated in the murder.

MADAM SPEAKER.—That is what the hon. member said the order day also. I had not given him the consent yet he had said whatever he wanted to say. Now the minister has given his personal explanation, there is no debate about it.

SRI M. S. KRISHNAN.—May I make a submission?

MADAM SPEAKER.—I have not given the hon. member any permission for that.

2-30 P. M.

STATEMENT BY THE MINISTER FOR AGRICULTURE AND FORESTS

Re:-Distribution of fertilizers in the State

SRI K. H. PATIL (Minister for Agriculture):—Sir, I make the following Statement:

In exercise of the power conferred by Section 3 of the essential commodity Act 1955, fertiliser has been declared as essential commodity by the Government of India in Notification SRO 1048, dated 29-3-57. During the period from 1956 to 1967, the Government at the centre and the states exercised full control and supervision over the manufacture and the distribution of fertilisers in the State and the country. During that period the responsibility for marketing of fertilisers in Mysore State was solely entrusted to the State Marketing Federation as whole-saler and the net-work of Co-operative selling points at the retail level. Since 1967 in view of the

(Sri K. H. Patil)

improvements in the supply position of fertiliser and in order to encourage domestic manufactures to step up more production of fertilisers, there has been a change in the fertiliser distribution policy of the Government of India resulting in gradual switch over to de-control of fertilisers. During the period from 1967 to 1972, the manufacturers were given the discretion to market their products through their authorised dealers.

Since 1972 when world shortage of fertilisers was noticed and in view of the difficulties experienced in obtaining adequate imports, the Government of India again introduced certain amount of control over production and distribution of fertilisers fertiliser supplies to each state were regulated as per the advance programme of supplies drawn up by the zonal conference of the representatives of the Government of India, State Governments and the domestic manufacturers. The quota of supplies by each manufacturer was fixed and the residual of the balance quantities required to meet the State requirement were supplied by the Government of India from out of the imports as "Pool". The pool supplies at present represent only about 30% of the state allotments, the balance 70% being supplied by the domestic manufacturers as per the supply programme fixed by the Government of India.

With a view to ensure equitable distribution of fertilisers, to meet the challenge posed by the general shortages and to eliminate malpractices, the State Government in G O. No AF. 70 AFT 72, dated 30-5-72 have constituted District and Taluk Fertiliser allotment, committees and introdueed permit system for distribution of "Pool" fertilisers hitherto. The jurisdiction of the above committees was confined to allotment and distribution of pool fertilisors. In view of the complaints received regarding mal-practices in distribution of non pool fertilisers, the Government after careful review of

the fertilisers distribution policy have in their order No AF. 70 AFT 72, dated 16-8-73 revised the distribution system to bring all fertilisers both pool and non-pool within the perview of the District and Taluk Allotment Committees and the permit system The Districtwise programme of supply has been drawn up and communicated to the domestic manufacturers and the programme implementing agencies at district and taluk levels. The new distribution system provides for advance intimation of supplies by the manufacturers declaration of stocks by the dealers and sale of fertilisers only against permits issued by the Agriculture Department.

Hitherto considerable quantities of straight fertilisers were deverted to plantation crops. On representation made by the State Government, the Government of India have fixed separate quota for the Commodity Boards for supply to plantation crops like Coffee, Tea etc., and instructions have been issued that the fertilisers suppli ed through normal trade channels are not to be issued to plantation crops. In view of this and in view of revised distribution system, ordered by the Government, it is hoped that the farmers will obtain their requirements of fertilisers in a smooth and efficient manner.

DEPARTMENT OF AGRICULTURE

Statement showing the consumption of fertilisers in Mysore State from 1956-57 to 1972-73 in terms of N.P.K. wise In M. Tonnes)

Year	N	P	K
1956-57	3984	....	....
195 -58	6048	...	...
1958-59	9390	....	....
1959-60	6870	3000	4200
1960-61	13000	4330	4620
1961-62	17900	4520	4300

(SRI K. H. PATIL)

Year	N	P	K
1962-63	20020	5750	5090
1963-64	21430	8270	6970
1964-65	19200	9230	9570
1965-66	22880	8020	7200
1966-67	31450	9808	12240
1967-68	51000	12240	15240
1968-69	69200	24850	14650
1969-70	87000	31000	14050
1970-71	92510	37200	26080
1971-72	98000	41500	27000
1972-73	109008	52873	34693

PROCEEDINGS OF THE GOVERNMENT OF MYSORE

Sub:—Distribution of Fertilisers through District Allotment Committees.

Order No. AF. 70 AFT. 72, Bangalore dated 16th August 1973.

Preamble: --For the purpose of proper planning and implementation of the different agricultural production programmes in Mysore State, it is necessary to know in advance the position of availability of inputs, especially fertilisers in the different districts of the State. A systematic planning of supplies of inputs assumes considerable importance when the required inputs are in short supply. At present fertilisers which are one of the most important inputs are not available in adequate quantities and therefore it is necessary to regulate their distribution by a proper distribution plan. An advance programme of distribution of fertilisers necessitates regulating supplies of pool fertilisers to be made through Government institutions and agencies likewise, it would also be necessary to

draw up a distribution plan for non-pool fertilisers, keeping in view the fact that the supply of fertilisers both pool and non-pool to the State is far below the actual requirements. It is therefore essential that a programme of supply of fertilisers from both the pool and non-pool sources is prepared well in advance and the pattern of distribution is indicated to the District Officers who are the authorities concerned with fertiliser distribution at the field level. In Government Order No. AF. 70 AFT. 72 dated: 30-5-1972, District Fertiliser Allotment Committees have been set up and these committees have been charged with the responsibility of allocation and distribution of fertilisers. These committees have been allocating pool fertilisers and they have so far not been made fully responsible for controlling the distribution of non-pool fertilisers made available to the State by the manufacturers under allocations arranged by the Central Government.

According to the present procedure, the Central Government meets the representatives of all the State Governments and the representatives of manufacturers and decides the overall supply of fertilisers from the pool as well as non pool sources to each of the States. It is then left to the State Government concerned to regulate the further distribution of fertilisers from both these sources. So far the distribution of non-pool fertilisers has not been placed on any systematic footing and except for obtaining certain returns and keeping a general control over the arrivals from non-pool sources, the District authorities have not been taking control over the non-pool fertilisers in arranging their distribution system.

In consideration of the fact that this system has meant inequitable distribution of fertilisers especially from non-pool sources, resulting in avoidable pressure on the fertiliser stocks from pool sources, and also as Government of India have made the non-pool fertilisers also a commodity controlled by the Essential Commodities Act, it is found necessary that efforts should be made to draw up

a proper advance plan for the distribution of total fertilisers received in the State both from the pool and non pool sources.

This entire question of regulating supplies of fertilisers to the districts from the pool and non-pool, sources was discussed with the representatives of the Department of Agriculture, the Agro Industries corporation, the Co-operative Marketing Federation as well as with the representatives of manufactures in a meeting held on 14th August, 1973. The decisions taken in this meeting are to the effect that hereafter the manufacturers will submit themselves to a control of the distribution of their supplies of fertilisers and that to facilitate this the manufacturers would furnish to Government a month to month, district to district and product-wise supply programme before the commencement of the agricultural season.

Taking into account the various points that emerged in the discussions, the following orders are issued. These orders will take effect forthwith.

ORDER

1. A supply plan for the total quantity of fertilisers allocated to the State by Central Government will be drawn up by the Director of Agriculture, Bangalore or each district for both the kharif and rabi seasons. (For the current rabi season, the period would commence from 1st August 1973 and end with 31st January 1974), This supply plan will indicate the actual quantities of fertilisers to be supplied to each of the districts both from the pool and non-pool sources; in respect of the non-pool sources the quantities to be made available by each manufacturing unit will be indicated.

2. Supplies of nitrogenous fertilisers by the domestic manufacturers through their appointed dealers will

be brought under the purview of the District Allotment Committees. Where necessary, the Deputy Commissioner will invoke the provisions of the Essential Commodities Act and the Defence of India Rules to requisition and regulate the supplies to be made by the manufacturers.

3. The District Allotment Committees will work out an advance plan of distribution of fertilisers to each of the taluks under their control taking into account the total quantity of fertiliser allotted to the District from both the pool and non-pool sources. In arranging such a distribution, the District Allotment Committees will take into account the priorities that have been indicated by the Government in their earlier orders.

4. Each manufacturer will furnish to the Director of Agriculture to the Deputy Commissioner and the Deputy Director of Agriculture of the District concerned a product-wise statement of fertilisers to be supplied to the district concerned each month. Such a statement indicating the monthwise allotments of fertilisers will be made available to the authorities at least one month in advance of the arrivals of the fertilissers.

5. Each manufacturer would immediately and in any case not later than 20th August 1973 furnish to the Director of Agriculture, a copy of the advance plan of supplies of fertilisers to the Districts, for the six months period from 1-8-1973 to 31st Jan. 1974.

6. Each manufacturer will furnish to the Director of Agriculture and to the Deputy Commissioner and the Deputy Director of Agriculture a list of dealers in each of the Districts and the quantities of each type of fertilisers given to such dealers during each of the months of the period in question. The manufacturer will also furnish details of the supplies made, quantity-wise and the actual dates of despatch.

7. Each dealer in the District, on receiving stocks of fertilisers from the manufacturer will declare such stocks of fertilisers to the District Allotment Committee and will undertake distribution of stock of nitrogenous fertilisers permits to be issued by the officials of the Agricultural Department in accordance with the procedure laid down by the Government. There will however he no need to insist on issue of permits in cases of farmers who have got loans from Co-operative or Commercial Banks. In their cases fertilisers may be issued to the extent of B component by the dealers.

8. As regards the complexes and other non nitrogenous types of fertilisers, the District Allotment Committees will have full discretion to regulate supplies either by issue of permits or otherwise.

The District Fertiliser Allotment Committees must meet regularly and at least one month before the commencement of the Agricultural season to finalise advance planning of supplies of fertilisers to the taluks. These plans will be drawn up in consultation with the representatives of the manufacturers or their delaers in the district. These committees will also meet every fortnight to review the supply position both from pool and non pool sources and to ensure that the domestic manufacturers are supplying fetirlisers are supplying fertilisers in accordance with the programme of supplies indicated by the, in their advance plans.

A programme of supplies of fertilisers for the 19 Districts of the State drawn up by the Director of Agriculture in consultation with the domestic manufacturers in respect of 68,600 tonnes of nitrogenous fertilisers allotted by the Government of India for the rabi season from 1st August 1973 to 31st January 1974 is enclosed herewith for information and necessary further action.

The procedure indicated above will be followed scrupulously by the manufacturers, and other agencies in charge of fertiliser distribution and by the District Allotment Committees.

The Director of Agriculture will ensure that these instructions are properly implemented by arranging for frequent inspections, review and issue of supplementary instructions to remove doubts or difficulties.

By order and in the name of the Governor of Mysore

(Sd.)
M. A. SINGRAIYENGAR,
Under Secretary to Government,
Agriculture & Forest Department.

No. SM2/DEV/FRP/9/1973-74.

Bangalore Dt: 18-8-1973.

Copy to All the Joint Directors of Agriculture.

Copy to All the Deputy Directors of Agriculture.

Copy to All the Assistant Director of Agriculture for information and necessary action.

(Sd.)
18-8-73 for Director of Agriculture.

PROGRAMME OF SUPPLIES OF FERTILISERS UNDER NON-POOL SOURCES IN TERMS OF 'N' IN METRIC TONNES TO EACH DISTRICT

Sl. No.	Name of the Domestic Manufactures	Bangalore	Chitradurga	Kolar	Shimoga	Tumkur	Mysore	Mandya	Mangalore	Chicka-magalur
1	2	3	4	5	6	7	8	9	10	11
1	Zuari Agro Chemicals Goa	500	2000	700	800	400	1100	700	500	600
2	Madras Fertilisers	800	1200	800	1500	700	500	1000	—	200
3	E. I. '. Parry	80	230	200	100	100	100	411	...	—
4	FACT. Alway	300	—	200	200	100	100	400	470	200
5	F.C.I. Trombay	800	1000	—	400	800	700	1000	500	300
6	Coramandal	100	284	—	187	—	118	245	—	...
	Total Programme	2580	4714	1900	3187	2100	2618	3756	1470	1300
	Pool	920	786	600	813	400	1382	4244	1130	700
	Total	3500	5500	2500	4000	2500	4000	8000	2600	2000

	Coorg	Hassan	Belgaum	Bijapur	Dharwar	N. Kanara	Gulbarga	Bellary	Bidar	Raichur	Total in M. Tonnes
	12	13	14	15	16	17	18	19	20	21	22
1 Zuari Agro Chemicals Goa	200	800	1900	2000	1600	500	400	3200	500	2500	20900
2 Madras Fertilisers	—	400	900	—	764	...	300	1650	—	1750	12464
3 E.I.D. Parry	—	50	—	...	—	...	—	250	...	400	1921
4 FACT Alway	200	200	200	200	200		200	100	200	100	3570
5 F C.I. Trombay	300	800	50	—	150	200	...	200	—	...	7200
6 Coramandal	...	111	—	—	—		—	300	—	200	1545
Total Programme	700	2361	3050	2200	2714	700	900	5700	700	4950	47600
Pool	300	1139	950	1300	1286	300	10	1800	300	2[illegible]50	21000
Total	1000	3500	4000	3500	4000	1000	1000	7500	1000	7500	68600

(K. H. PATIL)

It is a fact that in no year, after the formation of a United Karnatak, so much of fertiliser has been supplied to our State. I am extremely thankful to the Central Government for having supplied 71,000 tonnes of fertilisers in the form of 'N' which may be converted into nitrogeneous fertilies. Thereiore I am very happy that this year, the fertiliser position would be improved At the same time the agricnlturist today has come forward to say that he wants fertiliser for all the land that he has got. Therefore it will be very difficult to meet all his requirement because, as you know *M*adam, there is no Fertiliser Plant located here. We are to wait for Mangalore; we are also to wait for some other plant to be located here in Mysore with the permission of the Central Government. This is all the position. However, we have taken due care to see that the procedure should also be simplified. I am also thinking seriously to experiment in one or two districts to supply the fertiliser on the basis of acreage. But it all takes more time. However, wherever the inconvenience is noticed by the Hon. members, I have instructed the Director and the subordinate officers of the Department to see that they are rectified immediately.

ಶ್ರೀ ಕೆ. ಎಚ್. ಹನುಮೇಗೌಡ.-1973ನೇ ಇಸವಿಯಿಂದ 1956ನೇ ಇಸವಿಯುಗವರೆ ಎಷ್ಟೆಷ್ಟು ನೈಟ್ರೋಜನ್ ಸಪ್ಲೈ ಮಾಡಿದ್ದಾರೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಈ ವರ್ಷ ಅತಿ ಹೆಚ್ಚಿನ ಗೊಬ್ಬರ ಸಪ್ಲೈ ಮಾಡಿದ್ದಾರೆ. ಆದರೂ ಕೂಡ ಈ ವರ್ಷ ಯಾವ ರೀತಿಯಲ್ಲೂ ರೈತರಿಗೆ ಗೊಬ್ಬರ ಸಿಕ್ಕಲಿಲ್ಲ. ಬ್ಲಾಕ್‌ಮಾರ್ಕೆಟ್ಟಿನಲ್ಲಿ ಒಂದಕ್ಕೆ ಎರಡರಷ್ಟು ರೇಟ್ ಕೊಟ್ಟರೆ ಎಷ್ಟು ಬೇಕಾದರೂ ಸಿಗುತ್ತದೆ. ಕಂಟ್ರೋಲ್ ರೇಟಿನಲ್ಲಿ ಗೊಬ್ಬರ ದೊರೆಯುವುದು ಅಭಾವವೇ ವಿನಾ ಬ್ಲಾಕ್ ಮಾರ್ಕೆಟ್ಟಿನಲ್ಲಿ ಎಷ್ಟು ಟನ್ ಬೇಕಾದರೂ ಸಿಗುತ್ತದೆ. ಅದಕ್ಕೆ ಕಾರಣ ಏನು ?

ಎರಡನೆಯದು, ಸೆಂಟ್ರಲ್ ಪೂಲಸಿಂದ ಒಟ್ಟಿಗೆ ಹಂಚುತ್ತೇವೆಂದು ಹೇಳುತ್ತೀರಿ. ಯಾವ ಯಾವ ಗೊಬ್ಬರ ಇದರಲ್ಲಿ ಸೇರುತ್ತದೆ. ಕಾಂಪ್ಲೆಕ್ಸ್

ಮನ್ಯೂರ್, ನೈಟ್ರೋಜನ್ಸ್ ಮನ್ಯೂರ್ ಸೇರುತ್ತದೆಯೇ? ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಟಿ ವಿ. ಕೃಷ್ಣಪ್ಪ (ಚನ್ನಪಟ್ಣ)—ಈಗ ಪೂಲ್ ಮತ್ತು ನಾನ್‌ಪೂಲ್ ಫರ್ಟಿಲೈಸರ್ಸ್ ವ್ಯವಸ್ಥೆ ಏನು ಇದೆ ಅದರಿಂದ ಈ ಗೊಬ್ಬರದ ಅಭಾವ ಕೃತಕವಾಗಿದೆ ಎಂದು ನನ್ನ ಭಾವನೆ. ಈ ಪೂಲ್ ಕೋಟಾ ಏನು ಇದೆ ಅದು ಸಂಪೂರ್ಣವಾಗಿ ಸಹಕಾರ ಸಂಘಗಳ ಮುಖಾಂತರ ಹಂಚಿಕೆಯಾಗತಕ್ಕದ್ದು. ಮತ್ತು ನಾನ್ ಪೂಲ್ ಕೋಟಾ ಏನು ಇದೆ ಇದು ವ್ಯಾಪಾರಸ್ಥರ ಮುಖಾಂತರ ಗೊಬ್ಬರ ಹಂಚಿಕೆಯಾಗತಕ್ಕದ್ದು. ಆದ್ದರಿಂದ ಈ ಗೊಬ್ಬರದ ಅಭಾವ ಸೃಷ್ಟಿಯಾಗಿದೆ. ನೀವು ಅವರ ಮೇಲೆ ಯಾವ ರೀತಿಯಾದ ಕ್ರಮಗಳನ್ನು ತೆಗೆದು ಕೊಂಡರೂ ಕೂಡ ಅವರ ಕಸಬನ್ನು ತಪ್ಪಿಸುವುದರಲ್ಲಿ ನೀವು ಯಶಸ್ವಿಯಾಗಿಲ್ಲ. ಆದುದರಿಂದ ಈ ಎರಡು ವಿಧವಾದ ನೀತಿ ಇದೆಯಲ್ಲಾ ಇದನ್ನು ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ? ಹಾಗಿಲ್ಲದೇ ಹೋದರೆ ಶ್ರೀಮಾನ್ ಹನುಮೇಗೌಡರು ಹೇಳಿದ ಹಾಗೆ ಬರೀ ಅವರ ಮೇಲೆ ದೂರು ಹೇಳಿದ ಹಾಗಾಗುತ್ತದೆ. ಆ ಲಾಭಕೋರರನ್ನು ಒಂದು ಹಿಡಿತದಲ್ಲಿ ಇಟ್ಟು ಬಡವರನ್ನು ಕಾಪಾಡುವುದು ಕಷ್ಟವಾಗುತ್ತದೆ. ಆದುದರಿಂದ ಈ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ ಹೆಚ್. ಹನುಮೇಗೌಡ.—ಸ್ವಾಮಿ, ಹಿಂದೆ ಈ ಬಗ್ಗೆ ತ್ರೀ ಟೈರ್ ಸಿಸ್ಟಂ ಇತ್ತು. ಈಗ ಅದನ್ನು ತೆಗೆದು ಟೂ ಟೈರ್ ಸಿಸ್ಟಂ ಜಾರಿಗೆ ತಂದಿದ್ದೀರಿ. ಅಂದರೆ ಸೆಂಟ್ರಲ್ ಗೋಡೌನ್‌ನಿಂದಲೇ ಎಲ್ಲ ಸಹಕಾರ ಸಂಘಗಳಿಗೂ ಅಲಾಟ್ ಮಾಡುತ್ತಿದ್ದೀರಿ ಇದರಿಂದ ವಿಲೇಜ್ ಸೊಸೈಟಿಗಳಿಗೆ ಸರಿಯಾಗಿ ಹೋಗುತ್ತಾ ಇಲ್ಲ. ಆದುದರಿಂದ ಈ ಬಗ್ಗೆ ನಾನು ಹೇಳುವುದು ಏನೆಂದರೆ ನೇರವಾಗಿಯೇ ಬಾಗಿಲಿನಿಂದ ಬಾಗಿಲಿಗೆ ತಲುಪುವ ಹಾಗೆ, ತಾಲ್ಲೂಕು ಸೊಸೈಟಿ ಮುಖಾಂತರ ವಿಲೇಜ್ ಸೊಸೈಟಿಗೆ ಹೋಗುವಂತೆ ವ್ಯವಸ್ಥೆ ಮಾಡುತ್ತೀರಾ? ಮತ್ತು ಈಗ ಏತಕ್ಕೆ ಈ ರೀತಿ ಮಾಡಿದಿರಿ?

2ನೆಯದಾಗಿ ಹಾಸನ ಜಿಲ್ಲೆಗೆ 3500 ಟನ್ ಗೊಬ್ಬರ ಅಲಾಟ್ ಮಾಡಿದೆ ಎಂದು ತಿಳಿಸಿದಿರಿ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ ಇದರಿಂದ ನಮ್ಮ ಜಿಲ್ಲೆಯಲ್ಲಿ 25 ಸಾವಿರ ಎಕರೆಯಲ್ಲಿ ಆಲೂಗಡ್ಡೆ ಬೆಳೆದು ಕೋಟ್ಯಾಂತರ ರೂಪಾಯಿನ ಬೆಳೆ ಬಂದಿದೆ. ಮತ್ತು ಈಗ ನಮ್ಮ ಜಿಲ್ಲೆಯಲ್ಲಿ ಗದ್ದೆ ನಾಟಿ ಮಾಡುತ್ತಿದ್ದಾರೆ. ಅದಕ್ಕೆ ಕೊನೇ ಪಕ್ಷ ಒಂದು ಎಕರೆಗೆ ಒಂದು ಮೂಟೆ ಗೊಬ್ಬರ ಕೊಟ್ಟರೆ ಒಂದಕ್ಕೆರಡರಷ್ಟು ಬೆಳೆ ಬೆಳೆದು ದೇಶಕ್ಕೆ ಅನುಕೂಲವಾಗುತ್ತದೆ. ಅದರಿಂದ ಅಹಾರದ ಅಭಾವವೂ ಕಡಿಮೆಯಾಗಿ ರೇಟು ಕೂಡ

(ಶ್ರೀ ಕೆ. ಹೆಚ್. ಹನುಮೇಗೌಡ)

ಕಡಿಮೆಯಾಗುತ್ತದೆ. ಆ ರೀತಿ ಒಂದು ವ್ಯವಸ್ಥೆ ಮಾಡುತ್ತೀರಾ ? ಮತ್ತು ಈಗ ಗೊಬ್ಬರಕ್ಕೆ ಪರ್ಮಿಟ್ ಸಿಸ್ಟಂ ಮಾಡಿದ್ದೀರಿ. ವಿಲೇಜ್ ಸೊಸೈಟಿಗಳಲ್ಲಿ ಗೊಬ್ಬರದ ಪರ್ಮಿಟ್ಟನ್ನು ಕೊಡುವುದಕ್ಕೆ ಸೊಸೈಟಿ ಸೆಕ್ರೆಟರಿಯವರಿಗೆ ಕೊಟ್ಟಿದ್ದೀರಿ. ಅವರನ್ನು ನೋಡಲು ಹೋದರೆ ಅವರು ಊರಿನಲ್ಲಿ ಇಲ್ಲ ಎಂದು ಹೇಳುತ್ತಾರೆ. ಇದರಿಂದ ಕಾಲಕ್ಕೆ ಸರಿಯಾಗಿ ಗೊಬ್ಬರ ಸಿಕ್ಕುವುದೇ ಕಷ್ಟವಾಗುತ್ತದೆ. ಆದುದರಿಂದ ಈ ಪರ್ಮಿಟ್ ಸಿಸ್ಟಂನ್ನು ತಪ್ಪಿಸಬೇಕು ಮತ್ತು ತಾಲ್ಲೂಕು ಸೊಸೈಟಿ ಮುಖಾಂತರ ಗೊಬ್ಬರವನ್ನು ನೇರವಾಗಿ ವಿಲೇಜ್ ಸೊಸೈಟಿಗೆ ಹೋಗುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಮಾದೇಗೌಡ.- ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾ ಹೇಳಿದರು. ಸ್ಟೇಟ್ ಕಮಿಟಿ, ಡಿಸ್ಟ್ರಿಕ್ಟ್ ಕಮಿಟಿ ಮತ್ತು ತಾಲ್ಲೂಕು ಕಮಿಟಿಗೆ ಒಂದು ಜಿ. ಓ. ಹೊರಡಿಸಿದ್ದೇವೆ ಎಂದು. ಆ ಪ್ರಕಾರ ನನಗೆ ತಿಳಿದ ಮಟ್ಟಿಗೆ ಆಯಾಯ ಕಮಿಟಿಯವರಿಗೇನೇ ಗೊಬ್ಬರವನ್ನು ಅಲಾಟ್ ಮಾಡತಕ್ಕಂಥ ಅಧಿಕಾರವನ್ನು ಸರ್ಕಾರ ಕೊಟ್ಟಿದೆ ಅದಕ್ಕೆ ನಾನು ಹೇಳುತ್ತೇನೆ. ಹೀಗೆ ಸರ್ಕಾರ ಅವರಿಗೆ ಅಧಿಕಾರ ಕೊಟ್ಟಮೇಲೆ ಆ ಕಮಿಟಿಯ ಅಧಿಕಾರವನ್ನು ಸರ್ಕಾರ ವಯಲೇಷನ್ ಮಾಡುತ್ತಾ ಇದೆ ಎಂದು. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಒಂದು ಕೇಸಿನಲ್ಲಿ ತಾಲ್ಲೂಕು ಕಮಿಟಿಯವರು ಅಲಾಟ್ ಮಾಡ ತಕ್ಕದ್ದನ್ನು, ಸ್ಟೇಟ್ ಅಗ್ರಿಕಲ್ಚರಲ್ ಡೈರೆಕ್ಟರ್ ಕೂಡ ಅಲಾಟ್ ಮಾಡಿ ಇದು ಕನ್‌ಫ್ಯೂಷನ್ ಆಗಿ ಹೋಗಿದೆ. ಏತಕ್ಕೆ ಹೀಗೆ ಮಾಡಿದರು ? ತಮ್ಮ ಆರ್ಡರ್ ಪ್ರಕಾರ ಡಿಸ್ಟ್ರಿಕ್ಟ್ ಸೊಸೈಟಿಯವರು ತಾಲ್ಲೂಕು ಸೊಸೈಟಿಗೆ ಫುಲ್ ಕೋಟಾವನ್ನು ಅಲಾಟ್ ಮಾಡುತ್ತಾರೆ. ತಾಲ್ಲೂಕ್ ಸೊಸೈಟಿಯವರು ಸರ್ವಿಸ್ ಸೊಸೈಟಿಗೆ ಅಲಾಟ್ ಮಾಡುತ್ತಾರೆ ಮತ್ತು ಇಂಡಿವಿಜುಯಲ್ ಕಲ್ಟಿವೇಟರಿಗೂ ಅಲಾಟ್ ಮಾಡತಕ್ಕಂಥ ಅಧಿಕಾರವೂ ಅವರಿಗೆ ಕೊಟ್ಟಿದೆ. ಆದರೆ ಒಂದು ಕೇಸಿನಲ್ಲಿ ಟಿ. ನರಸೀಪುರದಲ್ಲಿರುವ ಒಂದು ಸರ್ವಿಸ್ ಸೊಸೈಟಿಗೆ ಸ್ಟೇಟ್ ಡೈರೆಕ್ಟರ್ ಆಫ್ ಅಗ್ರಿಕಲ್‌ಚರಲ್ ಅವರು ಫುಲ್ ಕೋಟಾವನ್ನು ಅಲಾಟ್ ಮಾಡಿದ್ದಾರೆ ತಾಲ್ಲೂಕ್ ಕಮಿಟಿಗೆ ಗೊಬ್ಬರ ಅಲಾಟ್ ಮಾಡತಕ್ಕಂಥ ಅಧಿಕಾರ ಕೊಟ್ಟಮೇಲೆ ಇವರು ಏತಕ್ಕೆ ಹೀಗೆ ಮಾಡಿದರು ? ಇದು ಕನ್‌ಫ್ಯೂಷನ್‌ಗೆ ಬಂದಿದೆ. ಸರ್ಕಾರದವರು ಆಯಾಯ ಕಮಿಟಿಯವರಿಗೆ ಅಲಾಟ್ ಮಾಡತಕ್ಕಂಥ ಅಧಿಕಾರ ಕೊಟ್ಟಮೇಲೆ ಇದನ್ನು ಪುನಃ ವಯಲೇಷನ್ ಮಾಡಿದ್ದು ಏತಕ್ಕೆ ? ಹಾಗಾದರೆ ನೀವು ಮಾಡತಕ್ಕಂಥ ಗೌರ್ನಮೆಂಟ್ ಆರ್ಡರಿಗೆ ಏನು ಬೆಲೆ ಬಂದ ಹಾಗಾಯಿತು ?

ಎರಡನೆಯದಾಗಿ ತಾಲ್ಲೂಕು ಕಮಿಟಿಯಲ್ಲಿ ಅಸಿಸ್ಟೆಂಟ್ ಅಗ್ರಿಕಲ್‌ಚರಲ್ ಆಫೀಸರರನ್ನು ಛೇರ್ಮನ್ ಮಾಡಿ ಕಮಿಟಿಯನ್ನು ಮಾಡಿದ್ದೀರಿ. ಅವರ ಆರ್ಡರ್

ಪ್ರಕಾರ ಕಮಿಟಿಯವರೇ ಇಂಡಿವಿಜೂಯಲ್ ಕಲ್ಟಿವೇಟರ್‌ಗೂ ಕೂಡ ಕೊಡಬೇಕು ಎಂದು ಇದೆ. ಈಗ ಹಂಚಿಕೆಯಾಗುತ್ತಿರುವುದು ಈ ಆರ್ಡರಿನ ವ್ಯತಿರಿಕ್ತವಾಗಿ ನಡೆಯುತ್ತಾ ಇದೆ. ಆದುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಮೂರನೆಯದಾಗಿ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುತಕ್ಕಂಥ ಕಲ್ಟಿವೇಟರ್ಸ್‌ಗೆ ಗೊಬ್ಬರ ಕೊಡಕೂಡದು ಎಂದು ಗೌರ್ನಮೆಂಟ್ ಆರ್ಡರ್ ಮಾಡಿದ್ದೀರಿ. ಅದಕ್ಕೆ ನಾನು ಹೇಳುತ್ತೇನೆ. ಷುಗರ್‌ಕೇನ್ ಮತ್ತು ಮಲ್ಬರಿ ಇವು ಕಮರ್ಷಿಯಲ್ ಕ್ರಾಪ್ಸ್ ಎಂದು ಏನು ಇಟ್ಟುಕೊಂಡಿದ್ದಾರೆ ಅದರಲ್ಲಿ ಕಬ್ಬು ಕಮರ್ಷಿಯಲ್ ಕ್ರಾಪ್ ಅನ್ನುವುದನ್ನು ಬಹುಶಃ ಒಪ್ಪೋಣ. ಆದರೆ ಮಲ್ಬರಿ ಬೆಳೆಯುವುದು ಬರೀ ಡ್ರೈಲ್ಯಾಂಡ್ಸ್‌ನಲ್ಲಿ ಮಾತ್ರ. ಇದನ್ನು ಬೆಳೆಯುವವರು ಬಹಳ ಬಡವರು. ಮಲ್ಬರಿ ಬೆಳೆಯುತಕ್ಕಂಥಾವರಿಗೆ ಗೊಬ್ಬರ ಕೊಡಕೂಡದು ಎಂದರೆ ಅವರು ಹೇಗೆ ಜೀವನ ಮಾಡಬೇಕು. ಆದುದರಿಂದ ಅವರಿಗೆ ಗೊಬ್ಬರ ಕೊಡುವುದನ್ನು ಸರ್ಕಾರ ಪರಿಶೀಲನೆ ಮಾಡಬೇಕು ಎಂದು ಕೇಳುತ್ತೇನೆ.

ಶ್ರೀ ಬಿ ಎಸ್. ವೀರಭದ್ರಪ್ಪ : ಈ ಬಗ್ಗೆ ಒಂದು ವಿಷಯ ಹೇಳುವುದಾದರೆ ಫರ್ಟಿಲೈಸರ್ಸ್ ಕಮಿಟಿಯಲ್ಲಿ ಲೆಜಿಸ್ಲೇಟರ್ಸ್‌ಗೂ ಒಂದು ಜಾಗ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಸಿರಿಕಲ್ಚರ್‌ಗೆ ಗೊಬ್ಬರ ಕೊಡುತ್ತಾ ಇಲ್ಲ. ಈ ಸಿರಿಕಲ್ಚರ್‌ನಿಂದ ನಮ್ಮ ದೇಶಕ್ಕೆ ಹೆಚ್ಚು ಫಾರಿನ್ ಎಕ್ಸ್‌ಛೇಂಜ್ ಬರುತ್ತಾ ಇರುವುದರಿಂದ ಇದಕ್ಕೆ ಗೊಬ್ಬರ ಕೊಡದೇ ಹೋದರೆ ಬೆಳೆ ಕಡಿಮೆಯಾಗಿ ಫಾರಿನ್ ಎಕ್ಸ್‌ಚೇಂಜ್ ಕೂಡ ಕಡಿಮೆಯಾಗುತ್ತದೆ. ಆದುದರಿಂದ ಈ ಸಿರಿಕಲ್ಚರ್‌ಗೂ ಗೊಬ್ಬರ ಕೊಡಿಸತಕ್ಕಂಥ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಗೊಬ್ಬರ ಸಿಕ್ಕಬೇಕಾದರೆ ಗ್ರಾಮ ಸೇವಕರಿಂದ ಬರೆಸಿಕೊಂಡು ಬರಬೇಕು ಎಂದು ಹೇಳುತ್ತಾರೆ. ಇದು ಬಹಳ ಕಷ್ಟದ ವಿಷಯ. ಅದುದರಿಂದ ರೈತನಿಗೆ ಸುಲಭವಾಗಿ ಸಿಗುವಂತೆ ಆಗಲು ಈ ಪದ್ಧತಿಯನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತೇವೆ.

ಶ್ರೀ ಎನ್. ಬಸವಯ್ಯ.—ಇನ್ನು ಈಗ ಅಡಿಕೆ ಮತ್ತು ತೆಂಗು ಇವಕ್ಕೆ ಗೊಬ್ಬರ ಕೊಡುತ್ತಾ ಇಲ್ಲ. ಇದಕ್ಕೂ ಕೂಡ ಗೊಬ್ಬರ ಕೊಡಿಸತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಬಿ. ಚೆನ್ನಪ್ಪ : (ಮಾಗಡಿ) ಈಗ ಕೆಲವು ಡಿಸ್ಟ್ರಿಕ್ಟ್‌ಗಳಿಗೆ ಹೆಚ್ಚು ಗೊಬ್ಬರವನ್ನು ಅಲಾಟ್ ಮಾಡಿದ್ದಾರೆ. ಇನ್ನು ಕೆಲವು ಡಿಸ್ಟ್ರಿಕ್ಟ್‌ಗಳಿಗೆ ಕಡಿಮೆ ಗೊಬ್ಬರವನ್ನು ಅಲಾಟ್ ಮಾಡಿದ್ದಾರೆ. ಈಗ ಬೆಂಗಳೂರು ಜಿಲ್ಲೆಗೆ 3 ಸಾವಿರ

(ಶ್ರೀ ಹೆಚ್. ಬಿ. ಚನ್ನಪ್ಪ)

ಟನ್ ಗೊಬ್ಬರ ಕೊಟ್ಟಿದ್ದಾರೆ. ಈ ರೀತಿ ತಾರತಮ್ಯ ಏತಕ್ಕೆ ಮಾಡುತ್ತಿದ್ದಾರೋ ಅರ್ಥವಾಗುವುದಿಲ್ಲ. ಈ ಸಾರಿ ಸಾಮಾನ್ಯವಾಗಿ ಎಲ್ಲಾ ಕಡೆಯೂ ಅತಿವೃಷ್ಟಿ ಮಳೆಯಾಗಿದೆ. ಡ್ರೈಲ್ಯಾಂಡಿನಲ್ಲಿರತಕ್ಕ ಪೈರುಗಳು ಕೆಂಚು ಬಂದು ಗೊಬ್ಬರ ಇಲ್ಲದೆ ಎಲ್ಲಾ ಬೆಳೆಯು ಹಾಳಾಗಿ ಹೋಗುತ್ತಾ ಇದೆ. ಇದಕ್ಕೆ ತಕ್ಷಣ ನೈಟ್ರೋಜನ್ ಫರ್ಟಿಲೈಸರ್ಸನ್ನು ಒದಗಿಸದೇ ಹೋದರೆ ರೈತ ಕಷ್ಟಕ್ಕೆ ಈಡಾಗತಕ್ಕಂಥ ಪರಿಸ್ಥಿತಿ ಬಂದು ಮುಂದೆ ಬರತಕ್ಕಂಥಾ ಕ್ಷಾಮವನ್ನೂ ಸಹ ಎದುರಿಸಬೇಕಾದ ಪರಿಸ್ಥಿತಿ ಬರುತ್ತದೆ. ಈಗ ನೈಟ್ರೋಜಿನ್ ಗೊಬ್ಬರ ಅನೇಕ ಕಡೆಗಳಲ್ಲಿ ಹೆಚ್ಚು ದುಡ್ಡು ಕೊಟ್ಟರೆ ಸಿಕ್ಕುತ್ತಾ ಇದೆ. ಆದರೆ ಸೊಸೈಟಿಗಳಲ್ಲಿ ಸಿಕ್ಕುತ್ತಾ ಇಲ್ಲ. ಒಂದು ಉದಾಹರಣೆ ಹೇಳುವುದಾದರೆ ಒಂದು ಸೊಸೈಟಿಗೆ 2 ಟನ್ ಅಲಾಟ್ ಮಾಡಿದ್ದಾರೆ. ಆದರೆ ಅದು 20 ಮೂಟೆಯಾಗುತ್ತದೆ ಅದನ್ನು ಆ ಸೊಸೈಟಿಯ ಪ್ರೆಸಿಡೆಂಟರು ಮತ್ತು ಸೆಕ್ರೆಟರಿ ತೆಗೆದುಕೊಂಡು ಯಾರಿಗ ಕೊಡುತ್ತಾರೆ ಎಂದರೆ ತಮಗೆ ಬೇಕಾದವರಿಗೆ 5 ಕೆ ಜಿ. ಅಥವಾ 10 ಕೆ. ಜಿ. ಯಂತೆ ಕೊಟ್ಟು ಬಿಟ್ಟು ಮುಗಿದು ಹೋಯಿತು ಎಂದು ಹೇಳಿ ಬಿಡುತ್ತಾರೆ. ಅಥವಾ ಇನ್ನೊಂದು 'ಕೆಲಸ' ಏನು ಮಾಡುತ್ತಾರೆ ಎಂದರೆ ತಿಂಗಳ ಕೊನೆಯವರೆಗೂ ನಮಗೆ ಅಲಾಟ್‌ಮೆಂಟ್ ಬಂದಿಲ್ಲ, ಅಲಾಟ್‌ಮೆಂಟ್ ಬಂದಿಲ್ಲ ಎಂದು ಹೇಳಿಕೊಂಡು ಮುಂದಿನ ತಿಂಗಳ ಒಂದನೇ ತಾರೀಕು ಆದ ಮೇಲೆ ಆ ಕೋಟಾವನ್ನು ತೆಗೆದುಕೊಂಡು ಹಿಂದಿನ ಕೋಟಾವನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಕೊಟ್ಟು ಬಿಡುತ್ತಾರೆ. ಆದುದರಿಂದ ಈ ಕಮಿಟಿಗಳಿಗೆ ನಾನ್ ಆಫಿಷಿಯಲ್ಸನ್ನು ಹಾಕಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಈ ಸಹಕಾರ ಸಂಘಗಳಲ್ಲಿ ಗೊಬ್ಬರ ಬೇಕಾದರೆ ಆ ಸೊಸೈಟಿಯಲ್ಲಿ ಯಾರು ಸಾಲ ತೆಗೆದುಕೊಂಡಿರುತ್ತಾರೋ ಮತ್ತು ಯಾರು ಮೆಂಬರ್ ಆಗಿರುತ್ತಾರೋ ಅಂಥಾವರಿಗೆ ಎ. ಕಾಂಪ್ಲೆಕ್ಸ್ ಮತ್ತು ಬಿ. ಕಾಂಪ್ಲೆಕ್ಸ್ ಗೊಬ್ಬರ ಕೊಡುತ್ತಿದ್ದಾರೆಯೋ ಹೊರತು ಬೇರೆಯವರಿಗೆ ಕೊಡುತ್ತಾ ಇಲ್ಲ. ಇದನ್ನು ಅಸಿಸ್ಟೆಂಟ್ ಡೈರೆಕ್ಟರ್‌ರವರೂ ಕೂಡ ಹೇಳುತಾರೆ. ಆದುದರಿಂದ ಇದರಲ್ಲಿ ಗೊಬ್ಬರವನ್ನು ಬೇರೆಯವರಿಗೂ ಕೂಡ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಸೊಸೈಟಿ ಸಾಲ ಪಡೆದಿರುವವರಿಗೆ ಮಾತ್ರ ಗೊಬ್ಬರ ಕೊಡುವುದು ಎಂದು ಹೇಳಿದರೆ ಸರ್ಕಾರದಲ್ಲಿ ಪ್ರತಿಯೊಬ್ಬ ರೈತನು ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಈ ರೀತಿ ಸಾಲ ತೆಗೆದುಕೊಂಡವರಿಗೆ ಮಾತ್ರ ಅಲ್ಲ ಎಲ್ಲರಿಗೂ ಗೊಬ್ಬರವನ್ನು ಕೊಡಬೇಕೆಂದು ತಾವು ಆದೇಶ ಕೊಡಬೇಕೆಂದು ಹೇಳುತ್ತೇನೆ ಮತ್ತು ಪ್ರತಿಯೊಬ್ಬರಿಗೂ ಗೊಬ್ಬರವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಪಿ. ಎಂ. ಭಂಗಿ:— (ಜಮ್‌ಖಂಡಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ವಿಜಾಪುರ ಜಿಲ್ಲೆಗೆ ಮೂರು ಸಾವಿರ ಟನ್ ಫರ್ಟಿಲೈಷರ್ ಅಂದರೆ ನೈಟ್ರೋಜನ್ ಗೊಬ್ಬರವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ ಅದರಲ್ಲಿ ಯಾವ ಯಾವ ಕಡೆಗೆ ಕೊಟ್ಟಿದ್ದಾರೆ ಮತ್ತು ಯಾವಯಾವ ಕಡೆಗೆ ಕೊಟ್ಟಿಲ್ಲವೋ. ಗೊತ್ತಿಲ್ಲ ಕೇವಲ ಒಂದು ಜಮ್‌ಖಂಡಿ ತಾಲ್ಲೋಕಿಗೆ ಪರ್ಟಿಲೈಷರ್ ಅಲ್ಲ ಪ್ರತಿಯೊಂದು ತಾಲ್ಲೋಕಿಗೂ ಮತ್ತು ಪ್ರತಿಯೊಂದು ಜಿಲ್ಲೆಗೂ ಒದಗಿಸಬೇಕಾಗುತ್ತದೆ, ಆದರೆ ಎಲ್ಲಾ ಕಡೆ ರೈತರು ಗೊಬ್ಬರದ ಬಗ್ಗೆ ಕೂಗುತ್ತಿರುವುದು ಇಲ್ಲಿಯವರೆಗೆ ಕೇವಲ 20ಟನ್ ಫರ್ಟಿಲೈಷರ್ ನೈಟ್ರೋಜನ್ ನಮ್ಮ ತಾಲ್ಲೋಕಿಗೆ ದೊರೆತಿದೆಯೆಂದು ಗೊತ್ತಾಗಿದೆ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಇದರ ಕಡೆಗೆ ಸರಿಯಾದ ಗಮನಕೊಟ್ಟು ಅದರಲ್ಲೂ ವಿಶೇಷವಾದ ಗಮನವನ್ನು ಜಮಖಂಡಿ ಮುಧೋಲ್ ಮತ್ತು ಬೀಳಗಿ ತಾಲ್ಲೋಕುಗಳಲ್ಲಿ ನೈಟ್ರೋಜನ್ ಗೊಬ್ಬರದ ಅವಶ್ಯಕತೆ ಹೆಚ್ಚಾಗಿದೆ ನಮ್ಮ ತಾಲ್ಲೂಕುಗಳಲ್ಲಿ ನೀರಾವರಿ ಸೌಕರ್ಯವಿದೆ. ಆದ್ದರಿಂದ ಆ ಕಡೆಗೆ ಹೆಚ್ಚಿನ ಗಮನಕೊಟ್ಟು ಫರ್ಟಿಲೈಷರ್ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳಿದ್ದನ್ನು ಗಮನಿಸಬೇಕೆಂದು ಅವರಿಗೆ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಅಧ್ಯಕ್ಷರೇ ಸರ್ಕಾರದಿಂದ ಮತ್ತು ಸೊಸೈಟಿಗಳಿಂದ ಸಾಲ ತೆಗೆದುಕೊಂಡರೆ ಮಾತ್ರ ಗೊಬ್ಬರವನ್ನು ಕೊಡುತ್ತೇವೆ ಇಲ್ಲದಿದ್ದರೆ ಕೊಡುವುದಿಲ್ಲ ಎನ್ನುವುದನ್ನು ಮೊದಲು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ :- ಗೊಬ್ಬರದ ಬಗ್ಗೆ ಮಾನ್ಯ ಸದಸ್ಯರು ಅನೇಕರು ಬಹಳ ಸೂಕ್ತವಾದ ಸಲಹೆಗಳನ್ನು ಮತ್ತು ಅದರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವರು ಟೀಕೆಗಳನ್ನು ಉಗ್ರವಾಗಿ ಮಾಡಿದ್ದಾರೆ. ಆದರೆ ಅವರು ಸ್ವಲ್ಪ ಟೀಕೆ ಮಾಡಿದರೂ ಕೂಡ ನಿಜವಾಗಿಯೂ ಗೊಬ್ಬರದ ಅಭಾವವನ್ನು ನೀಗಲು ಸಮರ್ಪಕವಾಗಿ ಆಗಿಲ್ಲವೆಂದು ಅವರ ಅಭಿಪ್ರಾಯವಾಗಿದೆ. ಮಾನ್ಯ ಸದಸ್ಯರು ಒಂದು ಮಾತನ್ನು ಗಮನಿಸಬೇಕು ಹೇಳುವ ಭರದಲ್ಲಿ ಯಾವುದೂ ಸಮರ್ಪಕವಾಗಿಲ್ಲವೆಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವಾಗಲೂ ಟೀಕೆಗಳನ್ನು ಮಾಡಬೇಕಾದರೆ ಅದರಲ್ಲಿರುವ ಅಂಶಗಳನ್ನು ಪರಿಶೀಲನೆ ಮಾಡಿ ಆದರ ಸಾಧ್ಯಸಾಧ್ಯತೆಗಳನ್ನು ಪರಿಶೀಲನಮಾಡಿ ಹಿಂದೆ ಆಗಿರುವುದು ಏನು? ಈಗ ಯಾವ ಸ್ಥಿತಿಯಲ್ಲಿವೆಯೆಂದು ನೋಡಿ ಸೂಕ್ತವಾದ ಸಲಹೆಮಾಡಿದರೆ ಒಳ್ಳೆಯದು. ಇಲ್ಲದೆ, ಸರಿಯಾಗಿ ವಿವೇಚನೆ ಮಾಡದೆ, ನನ್ನ ಮತ್ತು ಅವರ ಅಮೂಲ್ಯವಾದ ಸಮಯವನ್ನು ಹಾಳು ಮಾಡಿಕೊಂಡರೆ ಏನು

(ಶ್ರೀ ಕೆ. ಹೆಚ್. ಪಾಟೀಲ್)

ಉಪಯೋಗುತ್ತದೆ ಎಂಬುದನ್ನು ಯೋಚನೆ ಮಾಡಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಮಾಡಿದರೆ ಅದನ್ನು ಸ್ವಾಗತಿಸುತ್ತೇನೆ. ಮಾನ್ಯ ಸದಸ್ಯರು ಮೂರು ವಿಷಯಗಳನ್ನು ಹೇಳಿದರು. ಗೊಬ್ಬರ ಎಲ್ಲರಿಗೂ ಬೇಕು, ರೇಷ್ಮೆಗೂ ಬೇಕು, ಕಬ್ಬಿಗೂ ಬೇಕು ಎಲ್ಲದಕ್ಕೂ ಬೇಕು. ಗೊಬ್ಬರವಿಲ್ಲದೆ ಯಾವ ಬೆಳೆಯನ್ನೂ ಬೆಳೆಯಲು ಸಾಧ್ಯವಿಲ್ಲವೆನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ಆದರೆ ನಮ್ಮ ಸ್ಟೇಟಿಗೆ ಮ್ಯೂರುಕೋಟಿ ಎಕರೆ ಭೂಮಿ ಇದೆ. ಆದರಲ್ಲಿ ಒಂದು ಎಕರೆಗೆ ಅರ್ಧ ಚೀಲ ಗೊಬ್ಬರ ಕೊಡಿ ಎಂದು ಆರ್ಡರ್ ಮಾಡಿದರೆ ಸುಮಾರು ನಮಗೆ ಒಂದೂವರೆಕೋಟಿ ಅಥವಾ ಒಂದುಕೋಟಿ 5 ಲಕ್ಷ ಟನ್ ಗೊಬ್ಬರ ಬೇಕಾಗುತ್ತದೆ ಅದು ಸಾಧ್ಯವಿಲ್ಲ. ನಮಗೆ ಗೊಬ್ಬರದ ಅಭಾವ ಇರುವಾಗ ಇರುವುದನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ಯಾವುಯಾವುದಕ್ಕೆ ಗೊಬ್ಬರ ಕೊಡುವುದು ಎನ್ನುವುದೇ ಒಂದು ಸಮಸ್ಯೆಯಾಗಿದೆ ಶುಗರ್‌ಕೇನ್ ಬೆಳೆಗೆ ಕೊಡಬೇಕು, ಫುಡ್‌ಗ್ರೈನ್ಸ್ ಬೆಳೆಯಲು ಕೂಡ ಕೊಟ್ಟರೆ ಅಧಿಕ ಬೆಳೆ ತೆಗೆಯಬಹುದು ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಜನರ ಅವಶ್ಯಕತೆಗೆ ಎಷ್ಟು ಕೊಡಬೇಕೋ ಅಷ್ಟನ್ನೂ ಕೊಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಎಲ್ಲೆಲ್ಲಿ ಗೊಬ್ಬರದ ಜರೂರಾದ ಅವಶ್ಯಕತೆ ಇದೆ, ಗೊಬ್ಬರವಿಲ್ಲದೆ ಬೆಳೆಯನ್ನು ತೆಗೆಯಲು ಸಾಧ್ಯವಿಲ್ಲವೆಂದು ಬೆಳೆಯನ್ನು ಇಡದೆ ಇದ್ದಾರೆ. ಅದನ್ನು ನೋಡಿ ಸೂಕ್ತವಾಗಿ ನಿಮ್ಮ ವಿವೇಚನೆ ಉಪಯೋಗ ಮಾಡಿ ಗೊಬ್ಬರವನ್ನು ಕೊಡಬೇಕೆಂದು ಆರ್ಡರ್ ಮಾಡಿದ್ದೇವೆ. ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿ ಡೆಪ್ಯುಟಿ ಕಮಿಷನರ್‌ರವರನ್ನು ಚೇರ್‌ಮನ್ ಆಗಿ ಮಾಡಿ ತಾಲ್ಲೋಕು ವೈಸ್ ಅಲಾಟ್ ಮಾಡಬೇಕೆಂದು ಮಾಡಿದ್ದೇವೆ. ಸಣ್ಣ ಸಣ್ಣ ಅಧಿಕಾರಿಗಳು ಇದ್ದರೆ ದುರುಪಯೋಗವಾಗಬಹುದು ಎಂದು ಡೆಪ್ಯುಟಿ ಕಮಿಷನರ್‌ರವರನ್ನು ಉದ್ದೇಶಪೂರ್ವಕವಾಗಿ ಹಾಕಿದ್ದೇವೆ. ಇವರನ್ನು ಕಮಿಟಿಯ ಚೇರ್‌ಮನ್ ಆಗಿ ಮಾಡಿದರೆ ಇನ್ನು ಎಫಿಷಿಯೆಂಟ್ ಆಗಿ ಕೆಲಸ ಕಾರ್ಯಗಳು ಆಗಬಹುದು ಎಂದು ಈ ಕಮಿಟಿಗಳನ್ನು ಮಾಡಿದ್ದೇವೆ. ಕೆಲವು ಮಾನ್ಯ ಸದಸ್ಯರು ಆ ಕಮಿಟಿಗಳಲ್ಲಿ ನಾನ್ ಆಫಿಷಿಯಲ್ಸ್ ಹಾಕಬೇಕೆಂದು ಸಲಹೆ ಮಾಡಿದ್ದಾರೆ. ಇದನ್ನು ನಾವು ಮಾಡಿದರೆ ಆ ಮೇಲೆ ಒಂದು ಪಕ್ಷದವರನ್ನೇ ಹಾಕಿದ್ದಾರೆಂದು ಅದರ ಮೇಲೆ ಟೀಕೆಗಳು ಬರಬಹುದು ಎಂದು ಆಫೀಸರ್ಸ್ ಟಿ.ಡಿ.ಬಿ. ಪ್ರೆಸಿಡೆಂಟ್ ಮತ್ತು ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಪ್ರೆಸಿಡೆಂಟರನ್ನು ಕಮಿಟಿಯ ಸದಸ್ಯರನ್ನಾಗಿ ಹಾಕಿದ್ದೇವೆ. ಮೂರನೆಯದಾಗಿ ಸಾಲಗಾರರಿಗೆ ಮಾತ್ರ ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಇನ್ನು ಇತರರು ಹೇಳಿದ್ದಾರೆ. ಮತ್ತೆ ಅಧಿಕಾರಿಗಳನ್ನು ಹಾಕಿದರೆ ತಮ್ಮ ಪವರನ್ನು ಚಲಾಯಿಸಬಹುದು ಎಂದು ಹೇಳಿ ಆ ರೀತಿ ಹಾಕಿದ್ದಾರೆಂದು ಹೇಳಿರುವುದನ್ನು

ಕೇಳಿ ಅದರ ಬಗ್ಗೆ ನಾನು ವಿಷಾದಪಡುತ್ತೇನೆ. ಈ ಸದನದ ಮೂಲಕ ಹೇಳುವುದೇನೆಂದರೆ ಮೈಸೂರು ರಾಜ್ಯದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯ ಕೆಲಸ ಕಾರ್ಯಗಳಲ್ಲಿ ಮಾನ್ಯ ಸದಸ್ಯರು ಯಾವುದೇ ಸಲಹೆ ಮಾಡಿದರೆ ಅದಕ್ಕೆ ಪುರಸ್ಕಾರ ಕೊಡಬಾರದೆಂದು ಇಲ್ಲ ಪ್ರತಿಯೊಂದನ್ನು ತೀವ್ರವಾದ ರೀತಿಯಲ್ಲಿ ಪರಿಶೀಲಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಸಮಸ್ತರಿಗೂ ಗೊಬ್ಬರ ಸಿಕ್ಕಬೇಕು ಮತ್ತು ಪರ್ಮಿಟ್ ಸಿಕ್ಕಬೇಕು ಎಂದು ಗ್ರಾಮಸೇವಕರು ಪ್ರತಿಯೊಂದು ಮನೆ ಮನೆಗೂ ಹೋಗಿ ಕೇಳಬೇಕು ಎಂದು ಇದೆ. ದುರದೃಷ್ಟವಶ ನಮ್ಮ ಅಧಿಕಾರಿಗಳು ಆ ರೀತಿ ಮಾಡದೆ ಇದ್ದರೆ ಮಾನ್ಯ ಸದಸ್ಯರು ನನಗೆ ಸಹಕಾರಕೊಟ್ಟು ಯಾವುದಾದರೂ ಕುಂದುಕೊರತೆಗಳು, ಲೋಪ ದೋಷಗಳು ಕಂಡುಬಂದರೆ ಅವುಗಳನ್ನು ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸಲು ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಕೆಲವು ಸಂಘಗಳು ಮಾತ್ರ ಗೊಬ್ಬರವನ್ನು ಕೊಡುತ್ತಿದ್ದಾರೆ ಇನ್ನು ಕೆಲವು ಕಡೆಗಳಲ್ಲಿ ಸರಿಯಾಗಿ ಕೊಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅಂಥ ಕಡೆಗಳಲ್ಲಿ ಸರಿಯಾಗಿ ಹಂಚಿಕೆಯಾಗುವಂತೆ ಮಾಡುತ್ತೇವೆ. ಕೆಲವು ತಾಲ್ಲೋಕುಗಳಲ್ಲಿ 1—2 ಟನ್ನುಗಳನ್ನು ಕೊಡುತ್ತಿದ್ದಾರೆ ನಾನು ಹೋದ ಕಡೆಯಲ್ಲಿ ಡೈರೆಕ್ಟರ್‌ಗಳನ್ನು ಕೇಳಿ ಸರಿಯಾಗಿ ಹಂಚಿಕೆಯಾಗುತ್ತಿದೆಯೇ ಎಂದು ವಿಚಾರಿಸಿ ಅದಕ್ಕೆ ಸರಿಯಾದ ವ್ಯವಸ್ಥೆಗಳನ್ನು ಮಾಡಿದ್ದೇನೆ. ಯಾವ ತಾಲ್ಲೋಕಿನಲ್ಲಿ ಅವಶ್ಯಕತೆ ಜಾಸ್ತಿಯಿದೆಯೆಂದು ನೋಡಿ ನಿಮ್ಮ ವಿವೇಚನೆ ಉಪಯೋಗ ಮಾಡಬೇಕೆಂದು ಹೇಳಿದ್ದೇನೆ. ಜಮಖಾಡಿ, ಬಿಜಾಪುರ್, ಇಂಥ ಕಡೆಗಳಲ್ಲಿ ಅವಶ್ಯಕತೆ ಜಾಸ್ತಿ ಇದ್ದರೆ ಅಲ್ಲಿಗೆ ಕೊಡಲು ಆದೇಶ ಕೊಡಲಾಗಿದೆ. ಆ ರೀತಿ ಮಾಡದೆ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಮತ್ತೆ ಅದನ್ನು ಚುರುಕು ಮಾಡುವ ಹಾಗೆ ಮಾಡುತ್ತಿದ್ದೇವೆ. ಗೊಬ್ಬರ ಸಿಕ್ಕದೆ ಇದ್ದರೆ ಬ್ಲಾಕಿನಲ್ಲಿ ಕೊಂಡುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಬ್ಲಾಕಿನಲ್ಲಿ ಗೊಬ್ಬರ ಸಿಕ್ಕುತ್ತದೆ ಆದರೆ ಕಂಟ್ರೋಲ್ ರೇಟಿನಲ್ಲಿ ಸಿಕ್ಕುತ್ತಾ ಇಲ್ಲವೆಂದು ಹೇಳಿದರು. ಇದಕ್ಕೆ ನಾನು ಒಂದು ಮಾತು ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಅವರವರ ಹೃದಯವನ್ನು ಬಿಚ್ಚಿನೋಡಿ ಹೇಳಬೇಕು. ಗೌರ್ನಮೆಂಟ್ ಏಜೆನ್ಸಿ ಮುಖಾಂತರ ಏನಾದರೂ ತಪ್ಪು ನಡೆದಿದ್ದರೆ ಹೇಳಬೇಕು.

ಒಬ್ಬ ಸದಸ್ಯರು :—ಯಾವುದಾದರೂ ಒಂದು ಟೌನ್‌ಗೆ ಹೋಗಿ ನೋಡಿ?

ಶ್ರೀ ಕೆ. ಹೆಚ್. ಹನುಮೇಗೌಡ :—ತಾವು ಯಾವುದಾದರೂ ಒಂದು ಟೌನಿಗೆ ಹೋಗಿ ನೋಡಿ ಹೇಳಿ. ಅಲ್ಲಿ ಬ್ಲಾಕ್ ಮಾರ್ಕೆಟ್ ಮಾಡುವ ವ್ಯವಹಾರ ಹೇಗೆ ನಡೆಯುತ್ತಿದೆ ಎಂದು ತಮಗೆ ತಿಳಿಯುತ್ತಿದೆ.

ಶ್ರೀ ಕೆ. ಹೆಚ್. ಪಾಟೀಲ್ :—ನನ್ನ ಕೈಯಲ್ಲಿ ಏನು ಇದೆ, ನೀವು ನನ್ನ ಸ್ಥಾನದಲ್ಲಿ ಕೂತಿದ್ದರೆ ಆಗ ಏನು ಮಾಡುವುದಕ್ಕೆ ಸಾಧ್ಯವೆಂದು ಯೋಚನೆ ಮಾಡಿ ಹೇಳಿ.

ಒಬ್ಬ ಸದಸ್ಯರು :—ನಮಗೆ ಅವಕಾಶ ಕೊಟ್ಟು ನೋಡಿದರೆ ಆಮೇಲೆ ತಮಗೆ ಗೊತ್ತಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್ :—ಅದು ನಮ್ಮ ಕೈಯಲ್ಲಿ ಇಲ್ಲ. ತಾವು ಜನತೆಯ ಮನವನ್ನು ಒಲಿಸಿಕೊಂಡು ಈ ಸ್ಥಾನವನ್ನು ಪಡೆಯಬಹುದು. ನಾವು ಹಾಗೆ ನಿಮಗೆ ಕೊಡುವುದಕ್ಕೆ ಬರುವುದಿಲ್ಲ. ಫರ್ಟಿಲೈಸರ್ ಕಂಪೆನಿಯವರು. ಖಾಸಗಿಯಾಗಿ ಮಾರುವುದಕ್ಕೆ ಅವಕಾಶವಿದೆ. ಫ್ಯಾಕ್ಟರಿಯವರು ಮಾರುವುದಕ್ಕೆ ಅವಕಾಶವಿದೆ. ಎಫ್. ಸಿ. ಐ. ನವರು ಮಾರುತ್ತಿದ್ದಾರೆ. 100ಕ್ಕೆ 70ರಷ್ಟು ಫರ್ಟಿಲೈಸರ್‌ನ್ನು ಅವರು ಮಾರಬಹುದು. ನಮ್ಮ ಹತೋಟಿಯಲ್ಲಿ 30 ರಷ್ಟು ಮಾತ್ರ ಇದೆ. ಯಾರಿಗೆ ಕೊಡುವುದು ?. ಅದನ್ನು ಖಾಸಾಗಿಯವರಿಗೆ ಕೊಡಬೇಕೆ ? ನಮಗೆ ಇರುವುದನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನವರಿಗೆ ಮತ್ತು ಸಹಕಾರ ಸಂಘಗಳಿಗೆ ಕೊಡಬೇಕು ಎಂದು ತಿಳಿಸಿದ್ದೇವೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೋ ಅಪರೇಟೀವ್ ಸೊಸೈಟಿಗಳಲ್ಲಿ ಕದೀಮರು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ತಮ್ಮೆಲ್ಲರ ಸಹಕಾರ ಬೇಕೆಂದು ಕೇಳಿಕೊಳ್ಳುತ್ತೇನೆ. ಅನೇಕ ಸದಸ್ಯರು ಅಲ್ಲಿ ಇಲ್ಲಿ ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಾರೆಂದು ಹೇಳಿದ ಕಡೆ ಹೋಗಿದ್ದೇನೆ ಎಲ್ಲಿ ಆ ರೀತಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ ಆ ಗಳಿಗೆಯಲ್ಲಿ ಅದನ್ನು ಪತ್ತೆ ಹಚ್ಚಿ ಹಿಡಿದಿದ್ದೇನೆ. ಅವರಿಗೆ ಗೊಬ್ಬರದ ಲೈಸೆನ್ಸ್ ಇದ್ದರೆ ಅದನ್ನು ರದ್ದು ಮಾಡಿದ್ದೇನೆ. ತಾವು ಹೇಳಿರುವ ಸಲಹೆಗಳನ್ನು ಮತ್ತು ಟೀಕೆಗಳನ್ನು ನಾನು ಗಮನದಲ್ಲಿಟ್ಟುಕೊಂಡು ಯಾವುದಾದರೂ ಉಗ್ರವಾದ ತಪ್ಪುಗಳನ್ನು ಮಾಡಿದ್ದು ಕಂಡು ಬಂದರೆ ಅವರಿಗೆ ಉಗ್ರವಾದ ಶಿಕ್ಷೆಗಳನ್ನು ಕೊಡುವುದರಲ್ಲಿ ಹಿಂದೆ ಮುಂದೆ ನೋಡದೆ ನನಗೆ ಇರುವ ಅವಕಾಶವನ್ನು ಉಪಯೋಗ ಮಾಡುತ್ತೇನೆಂದು ಹೇಳುತ್ತೇನೆ. 71 ಸಾವಿರ ಟನ್ ಬಂದಿರುವುದರಲ್ಲಿ 69 ಸಾವಿರ ಟನ್ ಹಂಚಿಕೆಯಾಗಿದೆ. ನಮಗೆ ಬಂದಿರುವ ಗೊಬ್ಬರ ರಾಜ್ಯಕ್ಕೆ 68 ಸಾವಿರ ಟನ್ ಯೂರಿಯಾ ಮತ್ತು 69 ಸಾವಿರ ಟನ್ ನೈಟ್ರೋಜನ್ ಕೊಟ್ಟಿದ್ದಾರೆ. ಖರೀಫ್‌ಗಾಗಿ 60 ಸಾವಿರ ಟನ್ ಕೊಟ್ಟಿದ್ದಾರೆ. ಪೂಲ್ ಫರ್ಟಿಲೈಸರ್ ಮತ್ತು ನಾನ್ ಪೂಲ್ ಫರ್ಟಿಲೈಸರ್ ನಮ್ಮ ಕಂಟ್ರೋಲಿಗೆ ಬಂದಿದೆ. ಇನ್ನು ಕೆಲವು ದಿವಸಗಳಲ್ಲಿ ಎಲ್ಲೆಲ್ಲಿ ಗೊಬ್ಬರ ಕಡಿಮೆಯಾಗುತ್ತದೆ ನೋಡಿ, ಒಂದು ಕಡೆಗೆ ಹೆಚ್ಚಿಗೆ ಆಗಿರಬಹುದು ಇನ್ನೊಂದು ಕಡೆಗೆ ಕಡಿಮೆಯಾಗಿರಬಹುದು ಎಷ್ಟು ಉಪಯೋಗ ಮಾಡಿದ್ದಾರೆ ನೋಡಿ ಅದಕ್ಕೆ ಸರಿಯಾದ ರೀತಿಯಲ್ಲಿ ಹಂಚಿಕೆಯಾಗುವಂತೆ ಮಾಡುತ್ತೇವೆ. ಇಲ್ಲಿಯತನಕ ಗೊಬ್ಬರದ ಹೆಚ್ಚು ಉಪಯೋಗ

ವನ್ನು ಮಾಡದೇ ಇರುವುದು ಎಂದರೆ ಬೀದರ್. ಅಲ್ಲಿಯ ಜನತೆಗೆ ಗೊಬ್ಬರ ಹಾಕುವುದು ಅಷ್ಟು ಅವರ ಮನಸ್ಸಿಗೆ ಬಂದಿರಲಿಲ್ಲ. ಈಗ ಅವರು ಗೊಬ್ಬರ ಉಪಯೋಗಮಾಡುವುದನ್ನು ಕಲಿತಿದ್ದಾರೆ.

ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಹೆಚ್ಚು ಗೊಬ್ಬರವನ್ನು ಕೊಟ್ಟಿಲ್ಲ. ಹೆಚ್ಚು ಮಾಡೋಣ. ಬೇರೆ ಯಾವ ಮಾರ್ಗದಿಂದ ಫರ್ಟಿಲೈಸರ್ ಅನ್ನು ಪಡೆಯಬಹುದೋ ಅವೆಲ್ಲದರಿಂದಲೂ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಸದಸ್ಯರುಗಳು ನಮ್ಮ ತಾಲ್ಲೂಕಿನಲ್ಲಿ ನನ್ನ ಕ್ಷೇತ್ರದಲ್ಲಿ ಗೊಬ್ಬರ ಕಡಿಮೆಯಾಗಿದೆ ಎಂದು ನನಗೆ ಪತ್ರ ಬರೆದರೆ, ನನ್ನ ಕಡೆಯಿಂದ ಎಷ್ಟು ಸಾಧ್ಯವಿದೆಯೋ ಅಷ್ಟನ್ನು ರೀ-ಅಲಾಟ್‌ಮೆಂಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

3-00 R. M.

ಇನ್ನು ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರು 70 ಸಾವಿರ ಟನ್ ಗೊಬ್ಬರವನ್ನು ಒಂದೇ ಸೊಸೈಟಿಗೆ ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರೊಬ್ಬರು ಹೇಳಿದ್ದಾರೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇವತ್ತಿನ ದಿವಸ ಫರ್ಟಿಲೈಸರ್ ಅನ್ನು ಕೊಡುವಾಗ, ಕೆಲವು ಸೊಸೈಟಿಗಳವರು ಒಯ್ದಿದ್ದಾರೆ, ಕೆಲವು ಸೊಸೈಟಿಗಳವರು ಗೊಬ್ಬರವನ್ನು ಒಯ್ಯುವುದಿಲ್ಲ. ನಮ್ಮ ಸರ್ಕಾರದ ಏಜನ್ಸಿಯಿಂದ ಈ ಕೆಲಸ ನಡೆಯುತ್ತಾ ಇರುವುದರಿಂದ ಸ್ಟಾಕ್ ಇರುವತನಕ ಗೊಬ್ಬರವನ್ನು ಮಾರಾಟ ಮಾಡಬೇಕು. ಫೇರ್‌ಬೋರ್ಡ್ ಹಚ್ಚಿ ಫರ್ಟಿಲೈಸರ್ ಅನ್ನು ಡಿಸ್ಟ್ರಿಬ್ಯೂಟ್ ಮಾಡಬೇಕು.

ಮಾನ್ಯ ಸದಸ್ಯರನೇಕರು, ಕೆಲವು ಸೊಸೈಟಿಯವರು ಪರ್ಮಿಟ್ ಒಯ್ದು ಬೇರೆಯವರಿಗೆ ಮಾರುತ್ತಾರೆ ಎಂದು ಉಗ್ರವಾಗಿ ಹೇಳಿದರು. ಇವರ ಬಗ್ಗೆ ನಾನು ವಿಷಾದದಿಂದ ಹೇಳುತ್ತೇನೆ, ಮುಂದೆಯಾದರೂ ಇಂಥ ಫರ್ಟಿಲೈಸರ್ ಡೀಲರ್ಸ್ ನಮ್ಮ ದೇಶದಲ್ಲಿ ಇಲ್ಲದಂತೆ ಮಾಡಲು ತಮ್ಮ ಸಹಾಯ ಮತ್ತು ಸಹಕಾರವನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತೆ ಕೆಲವು ಸದಸ್ಯರು ಗೊಬ್ಬರವನ್ನು ವಿತರಣೆ ಮಾಡುವಲ್ಲಿ 3 ಟೈರ್ ಸಿಸ್ಟಂ ಇದೆ, 2 ಟೈರ್ ಸಿಸ್ಟಂ ಇದೆಯೆಂದು ಹೇಳಿದರು. ಈ ಬಗ್ಗೆ ಮಾನ್ಯ ಸದಸ್ಯರು ಗವರ್ನಮೆಂಟ್ ಆರ್ಡರ್ಸ್ ಓದಿದರೆ ಗೊತ್ತಾಗಬಹುದು. 3 ಟೈರ್ ಸಿಸ್ಟಂ ಮಾಡಿ ಎಂದು ನಾನು ಎಲ್ಲಿಯೂ ಹೇಳಿಲ್ಲ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು 3 ಟೈರ್ ಸಿಸ್ಟಂನಲ್ಲಿ ಗೊಬ್ಬರವನ್ನು ವಿತರಣೆ ಮಾಡುತ್ತಾರೆ, ಅದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ಗೊಬ್ಬರ ರೈತನಿಗೆ ಮುಟ್ಟಬೇಕು. ಇದರ ಬಗ್ಗೆ ನಾವು ರೇಟನ್ನೂ ನಿಗದಿ ಮಾಡಿದ್ದೇವೆ. ಸೊಸೈಟಿಗಳವರು ಅವರ ಅನುಕೂಲ ನೋಡಿಕೊಂಡು 4 ಟೈರ್ ಸಿಸ್ಟಂ ಮಾಡುತ್ತೇವೆಂದರೆ ನಾವು ಬೇಡ ಎಂದು ಹೇಳುವುದಿಲ್ಲ. ಮತ್ತೆ ಈ ಬಗ್ಗೆ

(ಶ್ರೀ ಕೆ. ಹೆಚ್. ಪಾಟೀಲ್)

ಏನಾದರೂ ಸಲಹೆಗಳು ಇದ್ದರೆ, ಈ ಹೌಸ್‌ನಲ್ಲಿಯೇ ಹೇಳಬೇಕು ಎಂದು ನಾನು ಇಷ್ಟಪಡುವುದಿಲ್ಲ ; ಡಿಪಾರ್ಟ್‌ಮೆಂಟ್ ಮೆಷಿನರಿಯಲ್ಲಿ ನ್ಯೂನತೆಗಳು ಇದ್ದರೆ, ಮಂತ್ರಿಯಾದ ನಾನು ಹಾಕಿದಂಥ ಪಾಲಿಸಿಯಲ್ಲಿ ನ್ಯೂನತೆಗಳು ಇದ್ದರೆ, ಅವುಗಳನ್ನು ನನ್ನ ಗಮನಕ್ಕೆ ತಂದರೆ, ನಾನು ಹೆಚ್ಚು ಸಮಯವನ್ನು ಕಳೆಯದೆ ತಿದ್ದಿಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ : ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಒಂದು ವಿಚಾರವನ್ನು ಹೇಳಿದರು. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಖದೀಮರು ಇದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ, ಇರುವವರನ್ನು ತೋರಿಸಿಕೊಟ್ಟರೆ ನಾನು ಶಿಕ್ಷೆ ಮಾಡುತ್ತೇನೆ. ಎಂದು ಹೇಳಿದರು. ಆ ವಿಚಾರವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಸ್ಟೇಟ್‌ಮಾರ್ಕೆಟಿಂಗ್ ಸೊಸೈಟಿಯ ಬ್ರಾಂಚುಗಳು ಎಲ್ಲಾ ಕಡೆಯೂ ಇವೆ. ಸ್ಟೇಟ್‌ನಿಂದ ತಾಲ್ಲೂಕ್ ಲೆವೆಲ್, ವಿಲೇಜ್ ಲೆವೆಲ್‌ನಲ್ಲಿಯೂ ಇವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇತ್ತೀಚೆಗೆ ಬಂದಂಥ ಸಂಸ್ಥೆ. ಗೊಬ್ಬರದ ವಿತರಣೆಯನ್ನು ಎರಡು ಸಂಸ್ಥೆಗಳು ಹಂಚಿಕೊಳ್ಳುವುದಕ್ಕೆ ಕಾರಣ ಏನು ? ಇದರಿಂದ ಅನಾವಶ್ಯಕವಾಗಿ ಗೊಬ್ಬರ ಸೋರಿ ಹೋಗುವುದಕ್ಕೆ ಅವಕಾಶವಾಗುವುದಿಲ್ಲವೇ ? ಅಥವಾ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ, ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ, ಸರ್ವೀಸ್ ಕೋ ಆಪರೇಟೀವ್ ಸೊಸೈಟಿಗಳು ಈ ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಅವಕ್ಕೆ ಸಾಮರ್ಥ್ಯ ಇಲ್ಲ ಅವರಿಗೆ ಸಾಕಷ್ಟು ಸಿಬ್ಬಂದಿ ಇಲ್ಲ ಎನ್ನುವುದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಕೆ. ಹೆಚ್. ಪಾಟೀಲ್ : ಮಾನ್ಯ ಹಿರಿಯ ಸ್ನೇಹಿತರು, ಬಹಳ ಸ್ಯೋಗಸಾದಂಥ ಅತ್ಯಂತ ಮಹತ್ವವಾದಂಥ ಪ್ರಶ್ನೆಯನ್ನು ಎತ್ತಿದರು. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ಬಹಳ ದಿವಸಗಳವರೆಗೆ ಗೊಬ್ಬರ ಉಳಿದಿದ್ದು, ಅದಕ್ಕೆ ಸ್ಟೆಬಿಲಿಟಿ ಇಲ್ಲದೆ, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಬಾಕಿ ಉಳಿದು, ಅವರಿಂದ ಸಮರ್ಪಕವಾಗಿ ಈ ಕೆಲಸ ನಡೆದಿಲ್ಲ. ಆದ್ದರಿಂದ ಗೊಬ್ಬರದ ವಿತರಣೆಯನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಒಪ್ಪಿಸಿದರು. ಅದಕ್ಕಿಂತ ಮೊದಲು, ಡಿಪಾರ್ಟ್‌ಮೆಂಟಿನವರೇ ಗೊಬ್ಬರವನ್ನು ಖರಿದಿ ಮಾಡುವಂಥ ಯೋಚನೆ ಇತ್ತು. ನಾವು ಬಂದ ನಂತರ ಇದನ್ನು ಬರೀ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಮಾಡಿ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಸ್ಟೇಟ್ ಮಾರ್ಕೇಟಿಂಗ್ ಸೊಸೈಟಿಗೆ ಬರುವುದು ಸೂಕ್ತವಲ್ಲ ಎಂದು, ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳು ಸಹಕಾರಿ ರಂಗದೊಳಗೆ ಇರುವುದರಿಂದ, ಅವೂ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ನಾವು ಅವರೂ ಅರ್ಧ ಭಾಗ ವಿತರಣೆ

ಮಾಡಬೇಕು ಎಂದು ಮಾಡಿದ್ದೇವೆ. ಮಾರ್ಕೆಟಿಂಗ್ ಸೊಸೈಟಿ ಫೆಡರೇಷನ್ ಅನ್ನು ಪೂರ್ತಿಯಾಗಿ ತೆಗೆದುಕೊಂಡಾಗ, ನಮ್ಮ ಮನಸ್ಸಿನಲ್ಲಿ ಅವರು ಸಮರ್ಪಕವಾಗಿ ಕೆಲಸ ಮಾಡುತ್ತಾರೆ ಎಂದು ಇದ್ದರೂ ಸಹಿತ, ಸಧ್ಯದ ಪರಿಸ್ಥಿತಿಯಲ್ಲಿ ಆಗ್ರೋ ಇಂಡಸ್ಟ್ರೀಸ್ ಸಂಸ್ಥೆಗೆ, ಇದು ಅನಿವಾರ್ಯವಾಗಿ ಬಂದಿದೆ. ಅಗ್ರೋ ಇಂಡಸ್ಟ್ರೀಸ್ ಸಂಸ್ಥೆ, ತಮಗೆ ಗೊತ್ತಿರುವಂತೆ, ಇನ್ನೂ ಸ್ವಲ್ಪ ಕಾಲಾವಧಿಯ ಮೇಲೆ ಒಂದೊಂದು ಕ್ಷೇತ್ರಕ್ಕೂ ಅದರ ಒಂದು ಕೇಂದ್ರವನ್ನು ತೆಗೆಯಬೇಕು ಎಂದು ನಮ್ಮ ಉದ್ದೇಶ ಇದೆ ನಿರುದ್ಯೋಗಿ ಇಂಜಿನಿಯರ್‌ಗೆ ತರಬೇತಿ ಕೊಟ್ಟು ಎಲ್ಲಿ ಅಗ್ರೋ ಇಂಡಸ್ಟ್ರೀಸ್ ಕೇಂದ್ರಗಳನ್ನು ತೆಗೆಯಬೇಕು ಎಂದು ಯೋಚನೆ ಮಾಡುತ್ತಿದ್ದೇನೆ.. ಎಲ್ಲಿ ಕೋ-ಆಪರೇಟೀವ್ ಸೊಸೈಟಿಗಳು ಯಾವ ಕೊರತೆಯಿಂದಾಗಲೀ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೋ ಅಂಥಕಡೆ ಆಗ್ರೋ ಇಂಡಸ್ಟ್ರೀಸ್ ಕೇಂದ್ರಗಳನ್ನು ಪ್ರಾರಂಭ ಮಾಡಬೇಕು ಎಂದು ಹೇಳಿದ್ದೇವೆಯೇ ವಿನಹ ಕೋ-ಆಪರೇಟೀವ್ ಸೊಸೈಟಿಗಳ ಕೂಡ ಕಂಪ್ಲೀಟ್ ಮಾಡಬೇಕು ಎಂದು ನಾನು ಸಲಹೆ ಕೊಟ್ಟಿಲ್ಲ, ಕೊಡುವುದೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :— ಇವತ್ತಿನ ದಿವಸ ನಮ್ಮ ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರ ದಿನಾಚರಣೆಯನ್ನು ಆಚರಿಸುತ್ತಿದ್ದಾರೆ. ಅವರ ಬೇಡಿಕೆಗಳ ಬಗ್ಗೆ ಸರ್ಕಾರ ಕೊಟ್ಟ ಆಶ್ವಾಸನೆಯನ್ನು ಈಡೇರಿಸಿಲ್ಲ....

ಅಧ್ಯಕ್ಷರು :—ತಾವು ದಯವಿಟ್ಟು ಕೂತುಕೊಳ್ಳಿ. ತಾವು ಕಳುಹಿಸಿದ್ದನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ ಕನ್‌ವರ್ಟ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೇನೆ, ಮಂತ್ರಿಗಳು ನಾಳೆ ಬೇರೊಂದು ಕಾಲ್ ಅಟೆನ್‌ಷನ್ ಮೇಲೆ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದಾರೆ. ಅದರ ಜೊತೆಯಲ್ಲಿ, ಇಲ್ಲದೆ ಹೋದರೆ ನಾಡಿದ್ದು ಇದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :— ಬನುಮಯ್ಯ ಕಾಲೇಜಿನ ನೌಕರರ ಇನ್‌ಷೂರೆನ್ಸ್ ಪ್ರೀಮಿಯಂ ಅನ್ನು ಆಡಳಿತ ವರ್ಗದವರು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಅನೇಕ ಸಾರಿ ಅಲ್ಲಿಯ ನೌಕರರು ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಅದರ ಬಗ್ಗೆ ಏನೂ ಆಗಿಲ್ಲ. ಈ ಬಗ್ಗೆ ನಾನು ನೋಟೀಸ್ ಕೊಟ್ಟು 3 ದಿವಸವಾಗಿದೆ.

ಅಧ್ಯಕ್ಷರು :—ಅದನ್ನು ನಾನು ನೋಡುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ :—ಇನ್‌ಷೂರೆನ್ಸ್ ಕಂಪೆನಿಯವರು ತಗಾದೆ ಮಾಡುತ್ತಾರೆ, ನೌಕರರು ಪ್ರೀಮಿಯಂ ಕಟ್ಟದಿದ್ದರೆ ಡಿಫಾಲ್ಟರ್ಸ್ ಆಗಿ, ಅವರ ಪಾಲಿಸಿ ವಜಾ ಆಗುತ್ತದೆ ಎಂದು ಕಂಪನಿಯವರು ಹೇಳುತ್ತಿದ್ದಾರೆ. ನೌಕರರಿಂದ ವಸೂಲು ಮಾಡಿಕೊಂಡಿರುವ ಹಣವನ್ನು ತಿಂದು ಹಾಕಿ ಇನ್‌ಷೂರನ್ಸ ಕಂಪನಿಗೆ ಹಣ ಕಟ್ಟಿಲ್ಲ. ಇದಕ್ಕೆ ಯಾರು ಹೊಣೆಗಾರರು ?

ಶ್ರೀ ಬಾಪೂಗೌಡ ರಾಯಪ್ಪ :—ನಾನೂ ಒಂದು ನೋಟೀಸ್ ಕೊಟ್ಟು ನಾಲ್ಕು ದಿವಸವಾಗಿದೆ.

ಅಧ್ಯಕ್ಷರು :—ತಮ್ಮ ನೋಟೀಸನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ, ಉತ್ತರ ಬಂದ ತಕ್ಷಣ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ :—ಈ ತಿಂಗಳ ಎರಡನೆಯ ತಾರೀಖು ರಾಜ್ಯದಾದ್ಯಂತ ಎನ್. ಜಿ. ಓ. ಗಳು ಧರಣಿ ಮುಷ್ಕರ ಮಾಡಿದರು. ಇದರ ಬಗ್ಗೆ ಸರ್ಕಾರದ ನೀತಿ, ನಿಲುವು ಏನು ಎನ್ನುವುದನ್ನು ಆದಷ್ಟು ಬೇಗ ಹೇಳಬೇಕಾಗಿದೆ.

ಅಧ್ಯಕ್ಷರು. ಸರ್ಕಾರಕ್ಕೆ ಅದನ್ನೂ ಕಳುಹಿಸಿಕೊಟ್ಟಿದ್ದೇನೆ

ಶ್ರೀ ಬಿ. ಪುಟ್ಟಸ್ವಾಮಯ್ಯ.— ಅಧ್ಯಕ್ಷರೇ, ಇಲ್ಲಿಂದ ಸರ್ಕಾರಕ್ಕೆ ಹೋದ ನೋಟೀಸುಗಳಿಗೆ ಇಷ್ಟು ದಿವಸದಲ್ಲಿ ಜವಾಬು ಕಳುಹಿಸಬೇಕು ಎಂದು ಕಾಲ ನಿಗಧಿ ಮಾಡಬೇಕು.

ಅಧ್ಯಕ್ಷರು.— ಮಾಡಿದ್ದೇವೆ

ಶ್ರೀ ಹೆಚ್. ಟಿ. ಕೃಷ್ಣಪ್ಪ : ಬಹಳ ಮುಖ್ಯವಾದ ಒಂದು ವಿಷಯವನ್ನು ನಾನು ಪ್ರಸ್ತಾಪಿಸಬೇಕಾಗಿದೆ. ಉದಕಮಂಡಲ, ಮೈಸೂರು ಮತ್ತು ಬೆಂಗಳೂರುಗಳಲ್ಲಿ ಮೈಸೂರು ಮಹಾರಾಜರಿಗೆ ಸಂಬಂಧಪಟ್ಟ ಮೂರು ಅರಮನೆಗಳಿವೆ. ಈ ಮೂರನ್ನೂ ಪರಭಾರೆ....

ಅಧ್ಯಕ್ಷರು : — ತಾವು ಕಳುಹಿಸಿರುವ ಸೂಚನೆಯನ್ನು ಕಾಲ್ ಅಟೆನಷನ್ ನೋಟೀಸ್ ಆಗಿ ಪರಿವರ್ತನೆ ಮಾಡಿ ಕಳುಹಿಸಿದ್ದೇನೆ. ಅದರ ಬಗ್ಗೆ ಸ್ಟೇಟಮೆಂಟ್ ಮಾಡುತ್ತಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ :— ಅರಮನೆಗಳನ್ನು ಮಾರಾಟ ಮಾಡುವುದಕ್ಕೆ ಸರಕಾರ ಒಪ್ಪಿಗೆ ಕೊಟ್ಟಿರುವುದಾಗಿ ಗೊತ್ತಾಯಿತು. ಅದಕ್ಕೆ ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ಅರಮನೆಯಲ್ಲಿರುವ ಮುಖ್ಯವಾದ ಸಾಮಾನುಗಳನ್ನು ಮಾರಾಟಮಾಡುವ ವಿಚಾರದಲ್ಲಿ ನಾನು ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೇನೆ. ಮಾರಾಟ ಮಾಡುವುದನ್ನು ಮುಖ್ಯಮಂತ್ರಿಗಳು ತಡೆ ಹಿಡಿದಿರುವುದಾಗಿ ವರದಿ ಬಂತು. ಪುನಃ ಮಾರಾಟ ಮಾಡಲು ಅವರು ಅವಕಾಶ ಕೊಟ್ಟಿರುವುದಾಗಿ ತಿಳಿದು ಬಂದಿದೆ. ಅಲ್ಲಿ ಬೆಲೆ ಬಾಳುವ ಪ್ರಾಚೀನವಾದ, ಸಾಮಾನುಗಳಿವೆ. ಅವನ್ನು ಮಾರಾಟಮಾಡಿದರೆ ಇಡೀ ರಾಷ್ಟ್ರದಲ್ಲಿ ಅವು ಸಿಕ್ಕುವುದಿಲ್ಲ., ಅವು ಬಹಳ ಅಪರೂಪವಾದ ವಸ್ತುಗಳು. ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ಯಾವ ವಿಧವಾದ ನಿಲುವು ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಆ ವಸ್ತುಗಳು ಹೊರದೇಶಕ್ಕೆ ಹೋದ ಮೇಲೆ ಏನು ಮಾಡಲು ಸಾಧ್ಯ ? ಮುಖ್ಯ ಮಂತ್ರಿಗಳು ಬಂದು ಹೇಳಿಕೆ ಕೊಡುವಷ್ಟರಲ್ಲಿ ಈ ವಸ್ತುಗಳು ಹೊರದೇಶ ಸೇರಿರುತ್ತವೆ. ಉಪ ಮುಖ್ಯಮಂತ್ರಿಗಳಿದ್ದಾರೆ, ಅವರು ತ್ವರಿತವಾಗಿ ಹೇಳಿಕೆ ಕೊಡಬೇಕು. ಅರಮನೆಯಲ್ಲಿ ಇರುವ ಬಹಳ ಪ್ರಾಚೀನವಾದ ವಸ್ತುಗಳು ಹೊರಕ್ಕೆ ಹೋದಮೇಲೆ ಮತ್ತೆ ಸಿಕ್ಕುವುದಿಲ್ಲ. ಅವನ್ನು ರಕ್ಷಣೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ಹೇಳಿಕೆ ಸರಕಾರ ಕೊಡಬೇಕಾದ ಅಗತ್ಯವಿದೆ. ಇದರ ಬಗ್ಗೆ ಒತ್ತಾಯ ಮಾಡುತ್ತೇನೆ.ಸಾಧ್ಯವಾದರೆ ನಾಳೆಯೇ ಹೇಳಿಕೆ ಕೊಡುವಂತೆ ಆಜ್ಞೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ .— ಇದು ಬಹಳ ಮುಖ್ಯವಾದ ವಿಚಾರ

ಶ್ರೀ ವಾಟಾಳ್ ನಾಗರಾಜ್ :— ಅರಮನೆಗಳ ವಿಷಯದಲ್ಲಿ ನಾನೊಂದು ನೋಟೀಸು ಕಳಿಸಿದ್ದೇನೆ. ಅದರ ವಿಚಾರವನ್ನು ಗಮನಕ್ಕೆ ತರುತ್ತೇನೆ, ಸಾರಿಗೆ ಸಚಿವರು ಮೈಸೂರಿಗೆ ಈ ಮಧ್ಯೆ ಹೋಗಿ ಮಾಜಿ ಮಹಾರಾಜರ ಜೊತೆ ಮಾತನಾಡಿದರು. ಅರಮನೆಯನ್ನು ವಸ್ತು ಸಂಗ್ರಹಾಲಯವನ್ನಾಗಿ ಪರಿವರ್ತನೆ ಮಾಡಬೇಕೆಂಬ ಉದ್ದೇಶ ಉಳ್ಳವರಾಗಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇದರ ವಿಷಯ ಸರಿಯಾಗಿ ತಿಳಿಯಬೇಕಾಗಿದೆ. ಇದರ ಬಗ್ಗೆ ಸರಿಯಾದ ತಿಳುವಳಿಕೆ ಹೇಳುವವರಾರೂ ಇಲ್ಲವೇ ? ರಾಜ್ಯವು ನಿರ್ಭಾಗ್ಯವಾಯಿತೇ ? ಮುಖ್ಯಮಂತ್ರಿಗಳಿಲ್ಲದಿದ್ದರೆ ಉಪ ನಾಯಕರಿಲ್ಲವೇ ?

ಅಧ್ಯಕ್ಷರು :— ಸರಕಾರ ಸ್ಟೇಟ್‌ಮೆಂಟ್ ಮಾಡಲಿ, ತಾವು ಆ ಮೇಲೆ ಕೇಳಬಹುದು.

MYSORE URBAN WATER SUPPLY AND DRAINAGE BOARD BILL, 1973

Motion to consider

(Debate Continued)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) —ಸನ್ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಗಳ ಸಚಿವರ ಗೈರುಹಾಜರಿಯಲ್ಲಿ ಅವರು ತಂದಿರುವ ಮೈಸೂರು ವಾಟರ್ ಸಪ್ಲೈ ಅಂಡ್ ಡ್ರೈನೇಜ್ ಬಿಲ್ ಏನು ನಮ್ಮ ಮುಂದಿದೆ ಅದನ್ನು ತತ್ವತಃ ಒಪ್ಪುವುದಾದರೂ ಈ ಬಿಲ್ಲನ್ನು ಅವರೇನು ಉದ್ದೇಶವಿಟ್ಟುಕೊಂಡು ತಂದಿದ್ದಾರೆಂಬುದನ್ನು ನೋಡಬೇಕಾಗಿದೆ ಬಹುಶಃ ಈ ಬಿಲ್ಲನ್ನು ಸಂಪೂರ್ಣವಾಗಿ ನೋಡಿದಾಗ ಪ್ರತಿಯೊಂದು ಸೆಕ್ಷನ್ನನ್ನೂ ನೋಡಿದಾಗ ಇದೊಂದು ರೀತಿಯಲ್ಲಿ ಪೋಲೀಸ್ ಆಕ್ಟ್ ಇದ್ಧಹಾಗಿದೆಯೆಂದು ಕಂಡುಬರುತ್ತದೆ. ಪೋಲೀಸಿನವರಿಗೆ ಎಷ್ಟು ಅಧಿಕಾರ ಕೊಟ್ಟಿದ್ದೇವೋ ಅದೇ ರೀತಿಯಲ್ಲಿ ಅಷ್ಟೇ ಅಧಿಕಾರ ಇಲ್ಲಿ ಕೊಟ್ಟಿರುವಂತೆ ಕಂಡುಬರುವುದು. ಸೆಕ್ಷನ್ ೮ರ ಪ್ರಕಾರ ಚೇರ್ಮನ್ನರನ್ನು ಯಾವಾಗ ಬೇಕಾದರೂ ತೆಗೆದುಹಾಕಬಹುದು, ಅವರಿಗೆ ಇಷ್ಟಬಂದಹಾಗೆ ಅರೋಪ ಹೊರಿಸಿ ಅವರನ್ನು ತೆಗೆದುಹಾಕಬಹುದು. ಮತ್ತು ಸದಸ್ಯರನ್ನು ಬೇಕಾದವರನ್ನು ನಾಮಕರಣ ಮಾಡಬಹುದು. ಇಂಥ ವಿಷಯ ಈ ಸೆಕ್ಷನ್ನಿನಲ್ಲಿದೆ ಇದು ಪ್ರಜಾಪ್ರಭುತ್ವಕ್ಕೆ ಹೊಂದಿಕೊಳ್ಳುವುದಲ್ಲ ಎಂದು ನನಗನ್ನಿಸುತ್ತದೆ. ಈ ಬಿಲ್ಲನ್ನು ತರುವ ಉದ್ದೇಶ ಅನುಕೂಲವಾಗಬೇಕೆಂದಿದ್ದರೂ ಇದರೊಳಗೆ ಅಡಕವಾಗಿರುವ ಪ್ರತಿಯೊಂದು ಸೆಕ್ಷನ್ನನ್ನು ನೋಡಿದರೆ ಇದು ಸಂಪೂರ್ಣವಾಗಿ ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಹಾಕಿದಂತಿದೆ ಎಂದು ನನಗನ್ನಿಸುತ್ತದೆ. ಈ ಮಾರ್ಗವನ್ನು ಕೈ ಬಿಡದೆ ಇದ್ದರೆ ಇದರಿಂದೇನೂ ಅನುಕೂಲವಾಗುವುದಿಲ್ಲ.

ಸೆಕ್ಷನ್ 48 ಮತ್ತು 49 ನೋಡಿದರೆ ಪೋಲೀಸರಿಗೆ ಹೆಚ್ಚು ಅಧಿಕಾರ ಕೊಡುತ್ತಿರುವುದು ಕಂಡುಬರುವುದು. ಪೋಲೀಸರಿಗೆ ವಿಶೇಷ ಅಧಿಕಾರ ಬೇರ ಕಡೆ ಈಗಾಗಲೆ ಇದೆ. ಆದರೂ ಕೂಡ ಬೋರ್ಡ್ ಮೂಲಕ ಅವರಿಗೇಕೆ ಹೆಚ್ಚು ಅಧಿಕಾರ ಕೊಡಲಾಗುತ್ತಿದೆ? ಇದನ್ನು ನೋಡಿದಾಗ ನಿಮ್ಮ ಉದ್ದೇಶ ಈ ಬೋರ್ಡು ನಮ್ಮ ಹತೋಟಿಯಲ್ಲಿರಬೇಕು, ನಾಳೆ ಬೋರ್ಡಿನಲ್ಲಿ ಏನೇ ಅನ್ಯಾಯ ವಾದರೂ ಅದು ಬೋರ್ಡಿಗೆ ಸೇರಿದ್ದು ಆದಕ್ಕೆ ಸಂಬಂಧಪಟ್ಟಿರುವುದು ಎಂದು ಹೇಳಬಹುದು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಸರಕಾರ ಇಂಥ ಬೋರ್ಡುಗಳನ್ನು ರಚಿಸುತ್ತಿದೆ. ಅದರ ಅಧಿಕಾರ ಪೂರ್ಣವಾಗಿ ಸರಕಾರದ ಕೈಲಿರುವುದು ಬೋರ್ಡಿನ ವಿಶಿಷ್ಟ ಅಧಿಕಾರವನ್ನೂ ಸರಕಾರ ತನ್ನ ಕೈಲಿಟ್ಟು

ಕೊಳ್ಳಲು ಈ ಬಿಲ್ಲನ್ನು ತಂದಿದೆ. ಬೋರ್ಡು ಸರಕಾರ ಹೇಳಿದ ಹಾಗೆ ಕೇಳುವಂತೆ ಅವಕಾಶ ಮಾಡಿಕೊಂಡಿದ್ದಾರೆ. ಸ್ಥಳೀಯ ಸಂಸ್ಥೆಗಳಿಗಿದ್ದ ಶೇಕಡ 99 ಭಾಗದ-ಅಧಿಕಾರವನ್ನು ಸರಕಾರ ಈಗಾಗಲೆ ಕಸಿದುಕೊಂಡಿದೆ. ಸರಕಾರ ಹೇಳುವಂತೆ ಸ್ಥಳೀಯ ಸಂಸ್ಥೆಗಳು ಕಾರ್ಯ ನಿರ್ವಹಿಸಬೇಕಾಗಿದೆ. ಈ ದಿವಸ ವಾಟರ್ ಬೋರ್ಡಿಗೆ ಇರುವ ಅಧಿಕಾರವನ್ನು ಕಿತ್ತುಕೊಳ್ಳುತ್ತಾ ಇದ್ದಾರೆ. 50 ಸಾವಿರಕ್ಕೆ ಮೇಲ್ಪಟ್ಟು ಖರ್ಚಾಗುವ ಡ್ರೈನೇಜ್ ಕೆಲಸ ಮಾಡಲು ಬೋರ್ಡಿಗೆ ಅಧಿಕಾರವಿಲ್ಲ. ಅದನ್ನು ಮಾಡಬೇಕಾದರೆ ಸರಕಾರವನ್ನು ಕೇಳಬೇಕು. ಸರಕಾರದ ಅಪ್ಪಣೆ ಪಡೆಯಬೇಕು. ಈ ಬೋರ್ಡುಗಳಿಂದ ಒಂದು ವಿಧದಲ್ಲಿ ಅನುಕೂಲವೆಂದು ಕಂಡರೂ ಸರಕಾರ ಅವುಗಳನ್ನು ತನ್ನ ಇಲಾಖೆಯಂತೆ ನಡೆಸಿಕೊಳ್ಳುವುದಕ್ಕೆ ಅವಕಾಶಮಾಡಿಕೊಂಡಿದೆ ಎಂದು ನನಗನ್ನಿಸುವುದು.

(Mr Deputy Speaker in the Chair) .

ಇವತ್ತು ಫಾರೆಸ್ಟ್ ಕಾರ್ಪೊರೇಷನ್, ಲೇಬರ್ ಕಾರ್ಪೊರೇಷನ್ ಮುಂತಾದುವುಗಳನ್ನು ಸರಕಾರ ರಚಿಸಿದೆ ಅನೇಕ ಜನರನ್ನಿಟ್ಟುಕೊಂಡು ರೈಲ್ವೆ ಬೋಗಿಗಳಂತೆ ಮಾಡಿಕೊಂಡಿದ್ದಾರೆ. ಈ ಬೋರ್ಡುಗಳನ್ನು ಸ್ಥಾಪಿಸುವ ಉದ್ದೇಶ ನಿರಾಶ್ರಿತರಾದ ರಾಜಕಾರಣಿಗಳಿಗೆ, ಚುನಾವಣೆಗಳಲ್ಲಿ ಸೋತವರಿಗೆ ಡೆಡ್ ಹಾರ್ಸ್‌ಗಳಿಗೆ, ತಮಗೆ ಬೇಕಾದವರಿಗೆ ಅನುಕೂಲಮಾಡಿಕೊಡಲು ಈ ಬೋರ್ಡುಗಳನ್ನು ರಚಿಸುವಂತೆ ಕಂಡುಬರುವುದು.

ನಾವು ಅನೇಕ ಈ ಬೋರ್ಡುಗಳಲ್ಲಿರತಕ್ಕ ಅಧ್ಯಕ್ಷರನ್ನು ನೋಡಿದರೆ ಅವರು ಯಾರೆಂದರೆ, ಯಾರು ಜನರನ್ನು ಕಳೆದ ಶಾಸನಸಭಾ ಚುನಾವಣೆಗಳಲ್ಲಿ ಇಲ್ಲವೇ ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳನ್ನು ಜನರನ್ನು ಹೊರಗೆ ಹಾಕಿದ್ದಾರೆ ಅಂದರೆ ಯಾರು ಆ ಚುನಾವಣೆಗಳಲ್ಲಿ ಸೋತಿದ್ದಾರೆ ಅವರು ಇಲ್ಲಿ ಚೇರ್ಮನ್ನರುಗಳಾಗಿದ್ದಾರೆ. ಇದರಿಂದ ಏನೊಂದು ಆಡಳಿತ ಪಕ್ಷಕ್ಕೆ ಅನುಕೂಲವಾಗಿದೆ ಎಂದರೆ ಮುಂದೆ ಚುನಾವಣೆಗಳು ನಡೆಯುತಕ್ಕ ಕಾಲದಲ್ಲಿ ಈ ಬೋರ್ಡುಗಳಿಂದ ಇವರ ಪಕ್ಷದ ಚುನಾವಣೆಗೆ ಫಂಡನ್ನು ಕಲೆಕ್ಟ್ ಮಾಡುವುದಕ್ಕೆ ಇವರಿಂದ ಸಹಾಯ ವಾಗುವುದಕ್ಕೆ ಎಷ್ಟು ಬೇಕೋ ಅಷ್ಟನ್ನೂ ಮಾಡಿಕೊಂಡಿದ್ದಾರೆ. ಆದರೆ ಇಂಥ ಬೋರ್ಡುಗಳನ್ನು ಮಾಡತಕ್ಕ ಉದ್ದೇಶ ಸ್ವಾಗತಾರ್ಹವಾದರೂ ಅವುಗಳಲ್ಲಿ ಸಾಗತಕ್ಕ ಕೆಲಸದಿಂದ ಜನತೆಗೇನೂ ಅನುಕೂಲವಾಗುವುದಿಲ್ಲ. ಆದರೆ ಮಾನ್ಯ ಸಚಿವರೇನೋ ಸದ್ಯದಲ್ಲಿ ಕೆಲವೊಂದು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದರೆ ಇವರು ಬಂದ ಮೇಲೆ 120 ಮುನಿಸಿಪಾಲಿಟಿಗಳು ರದ್ದಾದುವು. ಅದರಂತೆ ಈಗ ಈ ಬೋರ್ಡುಗಳ ಮೇಲೂ ಮಾನ್ಯ ಸಚಿವರು ತಮ್ಮ ಸಂಪೂರ್ಣಾಧಿಕಾರವನ್ನು ಇಟ್ಟುಕೊಳ್ಳುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಇದರಲ್ಲಿ ಅಡಕ

(ಶ್ರೀ ವಾಟಾಳ್ ನಾಗರಾಜ್)

ಮಾಡಿದ್ದಾರೆ. ಈ ಕಾನೂನು ಪ್ರಕಾರ ಇವರು ಯಾರನ್ನು ಬೇಕಾದರೂ ರದ್ದು ಮಾಡಿ ಯಾವಾಗ ಯಾರನ್ನು ಬೇಕಾದರೂ ಅಲ್ಲಿಗೆ ನಾಮಕರಣ ಮಾಡತಕ್ಕ ಅಧಿಕಾರ ಇವರಿಗಿದೆ. ಆದುದರಿಂದ ಈ ಮಸೂದೆ ಒಂದು ಪೊಲೀಸ್ ಆಕ್ಟ್ ಇದ್ದ ಹಾಗಿದೆ. ಅದರಲ್ಲೂ ಆ ಪೊಲೀಸ್ ಆಕ್ಟಿನ ಸೆಕ್ಷನ್ 107 ಏನಿದೆ ಅದರಂತೆ ಈ ಕಾನೂನು ಇದೆ. ಏನೇನೋ ಕೆಲವು ನೆಪಗಳನ್ನು ಹೇಳಿ ಇಷ್ಟೊಂದು ಅಧಿಕಾರ ವನ್ನು ತಮಗೆ ಇರಬೇಕೆಂದು ಹೇಳಿದ್ದಾರೆ. ಆದುದರಿಂದ ಈ ಬಿಲ್ಲಿನಲ್ಲಿ ಅಡಕ ಮಾಡಿರತಕ್ಕ ವಿಷಯಗಳು ಸರಿಯಾಗಿಲ್ಲ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಆದರೆ ಮಾನ್ಯ ಸಚಿವರು ಕೆಲವು ಕಾಲ ಅಧಿಕಾರದಲ್ಲಿರಬಹುದು. ಇವರೇ ಸದಾ ಕಾಲದಲ್ಲೂ ಇದೇ ಸ್ಥಾನದಲ್ಲಿರುವುದಕ್ಕಾಗುವುದಿಲ್ಲ. ಆದುದರಿಂದ ಪ್ರಜಾ ಪ್ರಭುತ್ವದಲ್ಲಿ ಅಧಿಕಾರ ಒಬ್ಬರ ಕೈಲಿದ್ದರೆ ಅಷ್ಟು ಪ್ರಯೋಜನ ಜನತೆಗಾಗು ವುದಿಲ್ಲ. ಆದಕಾರಣ ಈ ಬೋರ್ಡುಗಳಿಗೆ ಸಂಪೂರ್ಣಾಧಿಕಾರ ಕೊಡಬೇಕು, ಇದರಲ್ಲಿ ಸರ್ಕಾರದವರ ಹಸ್ತಕ್ಷೇಪವಿರಬಾರದು. ಆದರೆ ಈ ದಿವಸ ಈ ಬಿಲ್ಲಿನಲ್ಲಿ ರತಕ್ಕ ಮುಕ್ಕಾಲುಪಾಲು ಸೆಕ್ಷನ್ನುಗಳೆಲ್ಲಾ ಮಾನ್ಯ ಮಂತ್ರಿಗಳಿಗೆ ಅಧಿಕಾರ ಕೊಡತಕ್ಕವುಗಳಾಗಿದೆ. ಇದರಿಂದ ಅಧಿಕಾರ ಒಬ್ಬರಲ್ಲಿ ಕೇಂದ್ರೀಕೃತವಾಗುತ್ತದೆ. ಆದುದರಿಂದ ನಾನು ಇದನ್ನು ಸಂಪೂರ್ಣವಾಗಿ ವಿರೋಧಿಸಿ, ಬೋರ್ಡನ್ನು ಸ್ಥಾಪಿಸತಕ್ಕ ಉದ್ದೇಶ ಸದುದ್ದೇಶವಾದರೂ ಸಚಿವರು ಹೊರಟಿರತಕ್ಕ ಮಾರ್ಗ ಸರಿಯಾದ್ದಲ್ಲವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಪೌರಾಡಳಿತ ಶಾಖೆಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿನ ಮೇಲೆ ಅನೇಕ ಜನ ಮಾನ್ಯ ಸದಸ್ಯರು ಸೂಕ್ತ ಸಲಹೆ ಗಳನ್ನು ಕೊಟ್ಟಿದ್ದಾರೆ. ಈ ಬಿಲ್ಲಿನ ಬಗ್ಗೆ ಅಂದರೆ ಇದರಲ್ಲಿ ಅಡಕವಾಗಿರುವ ಉದ್ದೇಶದ ಬಗೆ ಯಾರೂ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿಲ್ಲ. ಆದರೆ ಕೆಲವು ಮಾನ್ಯ ಸದಸ್ಯರುಗಳು ಒಂದೆರಡು ಕಲಂಗಳ ಬಗ್ಗೆ ಬಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಈ ಸಾಮಾನ್ಯ ಚರ್ಚೆಯ ಕಾಲದಲ್ಲಿ ನಾನು ಅವುಗಳಿಗೆ ಉತ್ತರವನ್ನು ಕೊಡಬೇಕಾಗಿದೆ. ನಾನು ಮೊಟ್ಟ ಮೊದಲನೇಯ ದಾಗಿ ಎಲ್ಲ ಮಾನ್ಯ ಸದಸ್ಯರಿಗೂ ಋಣಿಯಾಗಿದ್ದೇನೆ ಈ ಮಸೂದೆಯ ಬಗ್ಗೆ ಯಾರೂ ಅಷ್ಟು ಹೆಚ್ಚಿಗೆ ತರ್ಕ ಮಾಡಿಲ್ಲ. ನಮ್ಮ ದೇಶದಲ್ಲಿ ಎಷ್ಟೋ ಮುನಿಸಿ ಪಾಲಿಟಿಗಳಿವೆ. ಅಂಥ ಕಡೆಗಳಲ್ಲೆಲ್ಲಾ ಜನತೆಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಒಳಚರಂಡಿಯ ವ್ಯವಸ್ಥೆಯನ್ನು ಮಾಡಬೇಕೆಂಬುದು ಎಲ್ಲ ಸದಸ್ಯರ ಹಾಗೂ ಸರ್ಕಾರದವರ ಉದ್ದೇಶವಾಗಿದೆ. ಅದಕ್ಕಾಗಿ ಈ ಮೈಸೂರು ಅರ್ಬನು ಡೆವಲಪ್ ಮೆಂಟ್ ಮತ್ತು ವಾಟರು ಸಪ್ಲೆ ಮತ್ತು ಡ್ರೈನೇಜ್ ಬೋರ್ಡನ್ನು ಮಾಡಬೇಕಾ ಯಿತು. ಅದರೆ ಈಗಾಗಲೇ ಈ ಮೈಸೂರು ಅರ್ಬನ್ ಡೆವಲಪ್‌ಮೆಂಟ್

ಬೋರ್ಡನ್ನು ಮಾಡಲಾಗಿದೆ. ಈ ಬೋರ್ಡಿಗೆ ನಾನೇ ಅಧ್ಯಕ್ಷ. ಇದರ ಬಂಡವಾಳ 15 ಲಕ್ಷ ರೂಪಾಯಿ. ಆದರೆ ಎಂದು ಈ ಬೋರ್ಡನ್ನು ಸ್ಥಾಪನೆ ಮಾಡಲಾಯಿತೋ ಅಂದಿನಿಂದ ಇಂದಿನವರೆಗೆ ಜನತೆಗೇನೂ ಪ್ರಯೋಜನವಾಗಲಿಲ್ಲ. ನಾವು ಯಾವ ಒಂದು ಉತ್ತಮ ಕೆಲಸವನ್ನೂ ಕೂಡ ಮಾಡುವುದಕ್ಕಾಗಲಿಲ್ಲ. ಅದಕ್ಕೆ ಮುಖ್ಯ ಕಾರಣ ಬಂಡವಾಳ ದೊರೆಯದೇ ಇದ್ದದ್ದು. ಅದಕ್ಕಾಗಿ ನಾವು ಬೇರೆ ಆಲೋಚನೆಗಳನ್ನು ನಡೆಸಿ ನಮ್ಮ ಅಕ್ಕದ ಪಕ್ಕದ ರಾಜ್ಯವಾದ ಮದ್ರಾಸಿನಲ್ಲಿ ಈ ವಿಚಾರದಲ್ಲಿ ಏನು ಮಾಡಿದ್ದಾರೆಂಬುದನ್ನು ಪರಿಶೀಲನೆ ಮಾಡಿದ ನಂತರ, ಅಲ್ಲಿನ ಹಾಗೆ ನಮ್ಮ ರಾಜ್ಯದಲ್ಲೂ ಕೆಲಸಗಳನ್ನು ಕೈಗೊಳ್ಳಶಕ್ಯ ಉದ್ದೇಶದಿಂದ ಈಗ ಈ ಬಿಲ್ಲನ್ನು ತಯಾರಿಸಿ ತಮ್ಮ ಒಪ್ಪಿಗೆಗಾಗಿ ಇಲ್ಲಿ ತರಲಾಗಿದೆ ಈ ಮಸೂದೆಯ ಮುಖ್ಯ ಉದ್ದೇಶ ಎಲ್. ಐ. ಸಿ. ಇಂದ ಧನ ಸಹಾಯವನ್ನು ಪಡೆದು ಪ್ರತಿಯೊಂದು ಮುನಿಸಿಪಲ್ ಸರಹದ್ದಿನಲ್ಲೂ ಜನತೆಗೆ ಈ ಒಂದು ಅನುಕೂಲವನ್ನು ಒದಗಿಸಬೇಕೆಂದು ಒಂದು ಸದುದ್ದೇಶ ಇಟ್ಟುಕೊಂಡು ಇದನ್ನು ತರಲಾಗಿದೆ. ಆದರೆ ಇದನ್ನು ಒಂದು ವರ್ಷಕಾಲ ತಾರದೇ ಕಾಲಹರಣೆಯಾದುದಕ್ಕೆ ನಾನು ವಿಷಾದಪಡುತ್ತೇನೆ. ನಮ್ಮ ದೇಶದಲ್ಲಿ ಒಳ್ಳೆಯ ಕೆಲಸಗಳು ಇನ್ನೂ ಅನೇಕವಾಗಿ ಆಗಬೇಕಾಗಿದೆ. ಈ ಮಸೂದೆಗೆ ಎಲ್ಲ ಮಾನ್ಯ ಸದಸ್ಯರೂ ಸಂಪೂರ್ಣ ಬೆಂಬಲ ಕೊಟ್ಟಿರುವುದಕ್ಕಾಗಿ ನಾನು ಎಲ್ಲರಿಗೂ ನನ್ನ ಅಭಿನಂದನೆಗಳನ್ನರ್ಪಿಸುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಚ್. ಡಿ. ದೇವೇಗೌಡರು ಕಲಂ 4 ಮತ್ತು 6 ಬಗ್ಗೆ ತಮ್ಮ ತೀವ್ರ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗೇ ಶ್ರೀ ಟಿ. ಆರ್. ಶ್ಯಾಮಣ್ಣನವರೂ, ಶ್ರೀ ಎಂ. ಎಸ್. ಕೃಷ್ಣನ್ ಅವರೂ ಮತ್ತು ಶ್ರೀ. ವಾಟಾಳ್ ನಾಗರಾಜ್ ಇವರೆಲ್ಲರೂ ಕೆಲವು ಕಲಂಗಳ ಬಗ್ಗೆ ತಮ್ಮ ತೀವ್ರ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಮಸೂದೆಯಲ್ಲಿ During the pleasure of the Government ಎಂದು ಇದೆ. ಇದರ ಬಗ್ಗೆ ನಾನು ಕೆಲವು ವಿವರಣೆಗಳನ್ನು ಕೊಡಬೇಕಾಗಿದೆ. ಆದರೆ ಹೀಗೆ ಹಾಕುವುದು ಇದೇನೂ ಒಂದು ಹೊಸ ಪದ್ಧತಿಯಲ್ಲ. ಅನೇಕ ವಿಧೇಯಕಗಳಲ್ಲಿ ಇದು ಇದ್ದೇ ಇದೆ. ಉದಾಹರಣೆಗೆ ಇದು ನಮ್ಮ ಟ್ರಸ್ಟ್‌ಬೋರ್ಡ್ ಆಕ್ಟಿನಲ್ಲೂ ಇದೆ. ಆದರೆ ಇದನ್ನು ಹಾಕಿರತಕ್ಕ ಉದ್ದೇಶ ಸರ್ಕಾರ ತನಗೆ ಸರ್ವಾಧಿಕಾರತ್ವವನು ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದ ಇದನ್ನು ಹಾಕಿಲ್ಲ. ಅದರೆ ಈ ಕಾರ್ಪೊರೇಷನ್ನುಗಳಲ್ಲಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಹಾಕಿರುತ್ತದೆ. ಅದು ಸಾರ್ವಜನಿಕರಿಂದ ಎತ್ತಿದ ಹಣ. ಅದು ಸದ್ವಿನಿಯೋಗವಾಗಬೇಕು; ದುರ್ವಿನಿಯೋಗವಾಗಬಾರದು ಎಂಬ ಉದ್ದೇಶದಿಂದ ಈ ಕೆಲವು ನಿಬಂಧನೆಗಳನ್ನು ಮಾಡಿದೆ. ಇಂಥ ಸಂಸ್ಥೆಗಳಲ್ಲಿ ಯಾರು ಅಧ್ಯಕ್ಷರಿರುತ್ತಾರೆ ಅಂಥವರಿಂದ ಅಲ್ಲಿ ಹಣ ದುರುಪಯೋಗುವುವಕ್ಕೆ ಅವಕಾಶವಿರುತ್ತದೆ. ಇಂಥ ಅನೇಕ ನಿದರ್ಶನಗಳು

ನನ್ನ ಗಮನಕ್ಕೆ ಬಂದಿವೆ. ಅಂಥದಕ್ಕೆ ಒಂದು ತಡೆಯನ್ನು ಹಾಕುವುದಕ್ಕೆ ಇದನ್ನು ಮಾಡಿದೆ. ಆದುದರಿಂದ ಇಲ್ಲಿ 'During the pleasure of the Government' ಎಂಬುದನ್ನು ಹಾಕಿದೆ. ಇಲ್ಲಿ ಇದರ ಅಗತ್ಯ ಬಹಳವಾಗಿದೆ ಆದರೆ ಮಾನ್ಯ ಸದಸ್ಯರುಗಳಿಗೆ ರಾಜ್ಯದ ಎಲ್ಲ ವ್ಯವಹಾರಗಳೂ ಹೇಗೆ ಪ್ರಜಾಪ್ರಭುತ್ವ ತತ್ವಗಳ ಮೇಲೆ ನಡೆಯಬೇಕೆಂಬ ಒಂದು ಆಕಾಂಕ್ಷೆ ಇದೆಯೋ ಅದೇ ರೀತಿಯಲ್ಲಿ ಈ ಸಂಸ್ಥೆಗಳಲ್ಲೂ ಕೆಲಸ ಕಾರ್ಯಗಳು ಪ್ರಜಾಪ್ರಭುತ್ವ ತತ್ವದ ಮೇಲೆ ನಡೆಯಲೆಂಬ ಆಕಾಂಕ್ಷೆ ಸರಕಾರಕ್ಕೂ ಇದೆ. ಜನರ ಕಲ್ಯಾಣ ಸಾಧನೆಗಾಗಿಯೇ ಕೆಲವರನ್ನು ಇಂಥ ಸಂಸ್ಥೆಗಳಿಗೆ ನಾಮಿನೇಟ್ ಮಾಡಲಾಗುವುದು.

3-30 P. M.

ಶ್ರೀ ಎಂ ಎಸ್. ಕೃಷ್ಣನ್ :—ನಾನು ಅವರನ್ನು ಕೇಳಿಕೊಳ್ಳುವುದೇನೆಂದರೆ, ಪ್ರಜಾಪ್ರಭುತ್ವ ರೀತಿ ನೀತಿ ಏನೆಂಬುದನ್ನು ತಿಳಿದು ಎಲ್ಲರಿಗೂ ಒಂದೇ ಸಮನಾಗಿ ಅವಕಾಶ ಮಾಡಿಕೊಡಬೇಕು. ಆದರೆ ಎಲ್ಲಾ ಅಧಿಕಾರವನ್ನೂ ನೀವೇ ಇಟ್ಟುಕೊಳ್ಳಬೇಕೆಂದು ಹೇಳುವುದು ಖಂಡಿತವಾಗಿ ಸರಿಯಾದುದಲ್ಲ.

ಶ್ರೀ ಬಿ. ಬಸವಲಿಂಗಪ್ಪ :—ಈಗ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಉದಾಹರಣೆಯನ್ನು ತೆಗೆದುಕೊಳ್ಳಿ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ಅಲ್ಲಿನ ಅಧ್ಯಕ್ಷರಾಗಿರುವವರು ಸ್ವೇಚ್ಛಾವರ್ತನೆಯಿಂದ ಅಲ್ಲಿನ ಹಣವನ್ನು ದುರ್ವಿನಿಯೋಗ ಮಾಡುವುದಾದರೆ, ಅವರನ್ನು ನಾವು ಆಡಳಿತದಲ್ಲಿ ಒಂದು ಕ್ಷಣಮಾತ್ರ ಇಟ್ಟುಕೊಳ್ಳುವುದಕ್ಕಾದುವುದಿಲ್ಲ. ಅಂತಹ ಸಂದರ್ಭದಲ್ಲಿ ಒಂದು ಕ್ಷಣ ಮಾತ್ರದಲ್ಲಿ ಅಂತವರನ್ನು ಕಿತ್ತುಹಾಕಿದ್ದೇವೆ. ಅದಕ್ಕೆ ಮೈಸೂರಿನ ಒಂದು ನಿದರ್ಶನ ಇದೆ. ಅಲ್ಲಿ ಅವರನ್ನು ಕಿತ್ತುಹಾಕಬೇಕಾಯಿತು, ಕಿತ್ತುಹಾಕಿದ್ದೇವೆ. ಇಲ್ಲಿಯೂ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನಲ್ಲಿ ಅನುಮಾನ ಬಂದಾಗ, ಅವರಿಂದ ಸರಿಯಾಗಿ ಅಧಿಕಾರ ನಡೆಯುವುದಿಲ್ಲವೆಂದು ಗೊತ್ತಾದರೆ, ಏನಾದರೂ ಒಂದು ದುರ್ವ್ಯಯವಾಗಿ ಅಲ್ಲಿನ ಚೇರ್ಮನ್ನರೂ ಸಹ ಸ್ವೇಚ್ಛಾಮನೋವೃತ್ತಿಯಿಂದ ಆಡಳಿತವನ್ನು ನಡೆಸಿದ್ದೇ ಆದರೆ, ಅಲ್ಲಿನ ಹಣವನ್ನು ದುರ್ವಿನಿಯೋಗ ಮಾಡಿದ್ದೇ ಆದರೆ ನಾನಂತೂ ಅಂತಹ ಅಧಿಕಾರಿ ಯಾರೇ ಆಗಲಿ, ಅವರನ್ನೂ ಸಹ ಅಧಿಕಾರದಿಂದ ಕಿತ್ತು ಹಾಕುವುದಕ್ಕೆ ಒಂದು ಕ್ಷಣ ತಡಮಾಡುವುದಿಲ್ಲ. ಅಂದಮಾತ್ರಕ್ಕೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡನ್ನು ಎಷ್ಟೋಸಾರಿ ಕಿತ್ತು ಹಾಕಬೇಕೆಂದು ಹೇಳಿದರೂ ನಾವು ಕಿತ್ತು ಹಾಕುವುದಿಲ್ಲ. ಅವರಿಗೂ ಅಲ್ಲಿ ಅಧಿಕಾರ ನಡೆಸುವಾಗ ಹೆದರಿಕೆ ಇರಬೇಕು ಅಲ್ಲಿಗೆ ಮೆಂಬರಗಳನ್ನೂ ನಾಮಕರಣ ಮಾಡುತಾರೆ ಎಂದಾಗ ಅವರಿಗೆ ಅದರ ಆಡಳಿತದ ಬಗ್ಗೆ ಒಂದು ಹೆದರಿಕೆ ಇರುತ್ತದೆ. ಅವರೂ ಸಹ ಸಾರ್ವಜನಿಕರ

ಹಣದ ಮೇಲೆ ಹತೋಟಿ ಇಡಬೇಕು. ಅವರು ಒಂದು ಅಂಶವನ್ನು ತಿಳಿದುಕೊಳ್ಳ ಬೇಕು. ತಮ್ಮ ಸ್ವಂತ ಹಣವನ್ನು ಖರ್ಚು ಮಾಡುವಾಗ ಎಷ್ಟು ಜಾಣತನವನ್ನು ಉಪಯೋಗಿಸುತ್ತಾರೋ ಅಷ್ಟೇ ಜಾಣತನದಿಂದ ಸಾರ್ವಜನಿಕರ ಹಣವನ್ನು ಖರ್ಚು ಮಾಡುವಾಗಲೂ ಎಚ್ಚರಿಕೆ ವಹಿಸಬೇಕು. ಸಾರ್ವಜನಿಕರ ಹಣವನ್ನು ಖರ್ಚು ಮಾಡುವಾಗ ಕಣ್ಣಲ್ಲಿ ಕಣ್ಣು ಟ್ಟು ಕೊಂಡು ಹಣ ದುರ್ವ್ಯಯವಾಗದಂತೆ ನೋಡಿಕೊಳ್ಳಬೇಕು. ಆದ್ದರಿಂದ ಅದಕ್ಕೆ ಸಂಬಂಧ ಪಟ್ಟ ಹಾಗೆ ಕೆಲವು ಕಲಂಗಳನ್ನು ಈ ಮಸೂದೆಯಲ್ಲಿ ಸೇರಿಸಿದ್ದೇವೆ. ಅದಕ್ಕೆ ಮಾನ್ಯ ಸದಸ್ಯರು ಬೆಂಬಲ ಕೊಡಬೇಕು. ಅತಿ ಜಾಗ್ರತೆಯಾಗಿ ದೇಶಾದ್ಯಂತ ಎಲ್ಲಾ ಮುನಿಸಿಪಾಲಿಟಿಗಳಲ್ಲಿ ಕುಡಿಯುವ ನೀರಿನ ಯೋಜನೆ ಮತ್ತು ಒಳಚರಂಡಿ ಯೋಜನೆ ಕಾರ್ಯಗಳು ಕಾರ್ಯಗತವಾಗುವಂತೆ ಮಾಡಬೇಕೆಂದಿದ್ದೇವೆ. ಬೆಂಗಳೂರಿಗೆ ಕಾವೇರಿ ನೀರನ್ನು ತರಬೇಕೆಂದು ಅದಕ್ಕಾಗಿಯೇ ಪ್ರತ್ಯೇಕ ಕಾನೂನನ್ನು ಮಾಡಿದ್ದೇವೆ. ಆ ಯೋಜನೆ ಈಗ ಕೊನೆಯ ಹಂತದಲ್ಲಿದೆ. ಡಿಸೆಂಬರ್ ಕೊನೆಯಲ್ಲಿ ಆ ನೀರನ್ನು ಕುಡಿಸುತ್ತೇವೆಂದು ಹೇಳಿದ್ದೇವೆ. ಅದಾದ ನಂತರ ಅವಶ್ಯವಾದರೆ ಎರಡನೆಯ ಯೋಜನೆಯನ್ನು ಮಾಡಬೇಕಾಗುತ್ತದೆ ಅದು ಮುಂದೆ ಹಾಗೆಯೇ ಮುಂದುವರಿಯುತ್ತದೆ. ಪುನಃ ಮುಂದುವರಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಅದಕ್ಕೆ ಬೇರೆ ಇನ್ನು ಹತ್ತು ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :— ಯಾರು ತಣ್ಣೀರು, ಬಿಸಿನೀರು ಕುಡಿಯುತ್ತಾರೋ ಅವರು ಅದಕ್ಕಾಗಿ ಹಣವನ್ನು ಕೊಡಬೇಕಾಗುತ್ತದೆ

ಶ್ರೀ ಎಂ ಎಸ್. ಕೃಷ್ಣನ್ :—ಮತ್ತೆ ನೀರಿನ ಬಗ್ಗೆ ಬೇರೆ ಚಳುವಳಿಯನ್ನು ನಡೆಸಬೇಕಾಗುತ್ತದೆ.

ಉಪಾಧ್ಯಕ್ಷರು :—ಆರ್ಡರ್, ಆರ್ಡರ್

ಶ್ರೀ ಬಿ. ಬಸವಲಿಂಗಪ್ಪ : ಈ ರೀತಿಯಾಗಿ ಮಧ್ಯೆಮಧ್ಯೆ ಮಾನ್ಯ ಸದಸ್ಯರು ಕೇಳಿದ್ದಕ್ಕೆಲ್ಲಾ ನಾನು ಉತ್ತರಗಳನ್ನು ಕೊಡುತ್ತಾ ಹೋದರೆ, ಜಾಸ್ತಿ ಕಾಲಾವಕಾಶ ಬೇಕಾಗುತ್ತದೆ. ಪಟ್ಟಣದಲ್ಲಿ ಹೆಚ್ಚಿಗೆ ಜನಗಳು ಬಂದು ಸೇರುವುದು ಉಂಟು. ಆದರೆ ಈ ದೇಶದಲ್ಲಿ ಹಳ್ಳಿಗಾಡಿನ ಪರಿಸ್ಥಿತಿ ಸ್ವಲ್ಪ ಕಷ್ಟತರವಾಗಿದೆ. ಯಾರ್‍ಯಾರು ಬಡವರು ಈಗ ಹಳ್ಳಿಗಾಡಿನಲ್ಲಿದ್ದಾರೋ ಅವರಿಗೆ ಅಲ್ಲಿ ಇರಬೇಕೋ ಬೇಡವೋ ಎಂಬುದಾಗಿ ಜಿಜ್ಞಾಸೆ ಬಂದಿದೆ. ಏಕೆಂದರೆ ಅಲ್ಲಿರ

(ಶ್ರೀ ಬಿ. ಬಸವಲಿಂಗಪ್ಪ)

ತಕ್ಕವರಿಗೆ ಏನೂ ಸೌಲಭ್ಯವೂ ಸಿಗುವುದಿಲ್ಲ. ಆದ್ದರಿಂದ ಹಳ್ಳಿಗಾಡಿನ ಜನರು ಅಲ್ಲಿಂದ ಬಾರದಂತೆ ಅಲ್ಲಿಯೇ ವಾಸಮಾಡುವುದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸುವ ಒಂದು ವಾತಾವರಣವನ್ನು ನಿರ್ಮಾಣಮಾಡುವುದಕ್ಕೆ ನಿಮ್ಮೆಲ್ಲರ ಜವಾಬ್ದಾರಿ ಇದೆ. ಕರ್ತವ್ಯವೂ ಆಗಿದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಈಗ 26 ವರ್ಷಗಳಾಗಿವೆ. ಅಂತಹ ವಾತಾವರಣ ಈಗ ಹಳ್ಳಿಗಳಲ್ಲಿ ಉದ್ಭವವಾಗಿದೆಯೇ ಎಂದು ಯಾರಾದರೂ ಪ್ರಶ್ನೆಹಾಕಿದರೆ ಅದಕ್ಕೆ ಉತ್ತರ ಹೇಳುವುದಕ್ಕೆ ಈಗ ಸ್ವಲ್ಪ ಮಟ್ಟಿಗೆ ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಾ ಹಳ್ಳಿಗಳಲ್ಲಿಯೂ ಆರೋಗ್ಯ ಮತ್ತು ನೈರ್ಮಲ್ಯದ ಕಡೆಗೆ ಸರ್ಕಾರ ಹೆಚ್ಚಿಗೆ ಗಮನ ಕೊಡಲು ನೀರು ಸರಬರಾಜು, ಒಳಚರಂಡಿ ಯೋಜನೆಗಳ ಕಡೆಗೆ ಹೆಚ್ಚಿನ ಜವಾಬ್ದಾರಿಯನ್ನು ಸರ್ಕಾರ ವಹಿಸಬೇಕಾದುದು ಆದ್ಯ ಕರ್ತವ್ಯವಾಗಿದೆ. ಹಳ್ಳಿಗಾಡಿನ ಬೆಳವಣಿಗೆ ಮತ್ತು ಪಟ್ಟಣಗಳ ಬೆಳವಣಿಗೆಗೆ ಪ್ರತ್ಯೇಕವಾದ ಯೋಜನೆಗಳನ್ನು ಹಾಕಿಕೊಂಡು ಒಂದು ಕ್ರಮವಾಗಿ ಕೆಲಸಗಳನ್ನು ನಿರ್ವಹಿಸಬೇಕಾಗಿದೆ. ಇಷ್ಟು ಮಾತ್ರ ಹೇಳಿ, ಮಾನ್ಯ ಸದಸ್ಯರು ಈ ಬಿಲ್ಲನ್ನು ಒಪ್ಪಬೇಕೆಂದು ನಾನು ಹೇಳುತ್ತೇನೆ.

SRI K. PUTTASWAMY :—I have no quarrel with the Government for exercising their pleasure. I only wanted to know what were the grounds on which they have exercised the pleasure.

SRI B. BASAVALINGAPPA :—We have exercised the pleasure after taking into consideration all the circumstances of the case. ಮೊದಲನೆಯ ಪ್ರಶ್ನೆಗೆ ಉತ್ತರವಾಗಿ, ದುರ್ವ್ಯವಹಾರ ಯಾರಾದರೂ ನಡೆಸಿದ್ದೇ ಆದರೆ, ಅಂತಹವರನ್ನು ಅಧಿಕಾರದಿಂದ ತೆಗೆಯುತ್ತೇವೆ. ಇನ್ನೂ ಒಂದು ಕಾರಣವೇನೆಂದರೆ, ಅಂತಹವರು ಸರಿಯಾಗಿ ಕೆಲಸಮಾಡದಿದ್ದರೂ ಕೂಡ ಆಗಲೂ ಅವರನ್ನು ತೆಗೆಯಬೇಕಾಗುತ್ತದೆ. ನಮ್ಮ ಪಾರ್ಟಿ ಕಾರ್ಯಕ್ರಮದ ಪ್ರಕಾರ ಅಂತಹ ಅಧಿಕಾರಿಗಳಿಂದ ನಿರೀಕ್ಷಣೆ ಮಾಡಿದ ಪ್ರಕಾರ ಕೆಲಸಕಾರ್ಯಗಳು ಆಗದಿದ್ದರೆ, ಅವರು ಸರಿಯಾಗಿ ಕೆಲಸಮಾಡದೇ ಹೋದರೆ, ಅಂತಹವರನ್ನೂ ಸಹ ಅಧಿಕಾರದಿಂದ ತೆಗೆಯಬೇಕಾಗುತ್ತದೆ. ಈಗಾಗಲೇ ತೆಗೆಯುತ್ತಿದ್ದೇವೆ. ಇನ್ನೂ ತೆಗೆಯುತ್ತೇವೆ. ನೋಟಿಫಿಕೇಷನ್ ಸಹ ಅದರ ಬಗ್ಗೆ ಇಷ್ಯೂ ಆಗುತ್ತದೆ.

SRI K. PUTTASWAMY :—The point that I raised was the grounds on which this provision is brought in the

Bill. I did not ask the Hon. Minister to justify the provision that he has brought. I have not expressed my opinion on the merits at all. I just wanted the Hon. Minister to kindly let me know whether there is any statute of this kind either in this State or in any other State or the Centre. We are entitled to know that.

ಶ್ರೀ ಬಿ. ಬಸವಲಿಂಗಪ್ಪ :—ಈ ಬೋರ್ಡಿನ ವ್ಯವಹಾರದಲ್ಲಿ ಏನಾದರೂ ದುರುಪಯೋಗವಾದರೆ, ಪ್ಲೆಷರ್ ಆಫ್ ಗವರ್ನಮೆಂಟ್ ಪ್ರಕಾರ ಅಲ್ಲಿನ ಚೇರ್‌ಮನ್‌ರನ್ನೂ ತೆಗೆಯಬಹುದು ಮತ್ತು ಬೋರ್ಡನ್ನೇ ತೆಗೆಯುವುದಕ್ಕೆ ಒಂದು ಅವಕಾಶವನ್ನು ಇದರಲ್ಲಿ ಮಾಡಿಕೊಟ್ಟಿದ್ದೇವೆ. ಅದನ್ನೇ ನಾನು ಮೊದಲು ಹೇಳಿದ್ದು. 1944ನೇ ಇಸವಿಯಿಂದಲೇ ಈ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಬಂದಿದೆ. ಇದುವರೆಗೂ ಅಂತಹ ಅವಕಾಶ ಮಾಡಿ ಕೊಟ್ಟಿಲ್ಲ. ಈಗ ಇದರ ಬಗ್ಗೆ ಒಂದು ಕಲಂನ್ನು ತಂದಿದ್ದೇವೆ. ಕೆಲವು ಜನ ಡೈರೆಕ್ಟರ್ ಆಗಿರುವವರು ಅಥವಾ ಮೆಂಬರ್ ಆಗಿರವವರು ಸರಿಯಾಗಿ ವ್ಯವಹಾರ ಮಾಡುವುದನ್ನು ಬಿಟ್ಟು ದುರ್ವ್ಯವಹಾರ ಮಾಡುವುದಕ್ಕೆ ಪ್ರಯತ್ನಮಾಡಿದರೆ, ಸರಿಯಾದ ದಾರಿ ಬಿಟ್ಟು ಅಡ್ಡದಾರಿ ಹಿಡಿದರೆ ಅಂತಹವರನ್ನು ಅಧಿಕಾರದಿಂದ ತೆಗೆಯುವುದಕ್ಕೆ ಸಾಕಷ್ಟು ಈ ಬಿಲ್ಲಿನಲ್ಲಿ ಅವಕಾಶವಿಲ್ಲದಿದ್ದರೆ ಆಡಳಿತವನ್ನು ಹೇಗೆ ನಡೆಸಿಕೊಂಡು ಹೋಗುವುದಕ್ಕಾಗುತ್ತದೆ?

SRI K. PUTTASWAMY :—Mr. Deputy Speaker, I want a clarification....

SRI B. BASAVALINGAPPA :—I am not yielding Sir.

ಉಪಾಧ್ಯಕ್ಷರು :—ಅವರು ಒಪ್ಪುವುದಿಲ್ಲ.

SRI K. PUTTASWAMY:—I want a clarification from the Hon. Minister on two points. He cited the instance of the City Improvement Trust Board for a provision of this type "during the pleasure of the Government". I would like to know from the Hon. Minister whether there is any statute either in this State or anywhere else including the Centre where the entire board's term is co-extensive with the pleasure of the Government. The term depends entirely on the pleasure of the Government. In the City Improvement Trust

(SRI K. PUTTASWAMY)

Board, no doubt the term of the Chairman depends on the pleasure of the Government - not the term of the entire Board, as I know. That is one point.

Secondly, while explaining, the Hon. Minister made a passing reference to the removal of the Chairman of the Mysore City Improvement Trust Board. He said ತೆಗೆಯು ಬೇಕಾಗಿತ್ತು. ತೆಗೆದಿದ್ದೇವೆ. I would like to be kindly enlightened: what were the compelling reasons for exercising the pleasure of the Government for the removal of the Chairman.

ಶ್ರೀ ಬಿ. ಬಸವಲಿಂಗಪ್ಪ: ಅಲ್ಲಿ ಸುಮಾರು 40-50 ಕೋಟಿ ರೂಪಾಯಿಗಳ ವ್ಯವಹಾರ ನಡೆಯುವಾಗ ದಾರಿಬಿಟ್ಟು ತಪ್ಪು ದಾರಿಯಲ್ಲಿ ಕೆಲಸ ಮಾಡುತ್ತಿದ್ದರೆ, ಅಂತಹವರನ್ನು ಅಧಿಕಾರದಿಂದ ತೆಗೆಯಬಾರದೆಂದು ಹೇಳಿದರೆ ಹೇಗೆ? ಚೇರ್‌ಮನರನ್ನು ತೆಗೆಯಿರಿ. ಮೆಂಬರುಗಳನ್ನು ಹಾಗೆಯೇ ಇಟ್ಟುಕೊಳ್ಳಿ ಎಂದು ಹೇಳಿದ ಹಾಗಾಗುತ್ತದೆ. ಆದ್ದರಿಂದ ನಮ್ಮ ಹಿಂದಿನ ಅನುಭವದ ಮೇಲೆ, ಕೊನೆಯ ಪಕ್ಷ ಅಂತಹ ದುರ್ವ್ಯವಹಾರ ನಡೆದದ್ದೇ ಆದರೆ, ಬೋರ್ಡನ್ನೂ ಸಹ ತೆಗೆಯುವುದಕ್ಕೂ ಅವಕಾಶ ಇರಬೇಕೆಂದು ಇದರಲ್ಲಿ ಹೇಳಿದ್ದೇವೆ. ಸ್ವಾಮಿ, ಜನತೆಗೆ ಪ್ರಯೋಜನವಾಗಬೇಕೆಂದು ನಾವು ಇಂಥ ವ್ಯವಸ್ಥೆಗಳನ್ನು ಮಾಡುತ್ತಿದ್ದೇವೆ. ನಾವು ಎಲ್ಲಿ ಇದೆ, ಎಲ್ಲಿ ಇಲ್ಲವೆಂದು ನೋಡುವುದಕ್ಕೆ ಹೋಗಿಲ್ಲ. ಮದ್ರಾಸಿನಲ್ಲಿ ಇಂಥ ಬೋರ್ಡು ಇದೆ. ನಾವು ಅನೇಕ ಹಿರಿಯ ವ್ಯಕ್ತಿಗಳ ಮತ್ತು ಇದರಲ್ಲಿ ಇದ್ದಂತಹ ಮಹನೀಯರ ಅನುಭವಗಳನ್ನು ತೆಗೆದುಕೊಂಡು ಇಂಥ ಬಿಲ್ ತಂದಿದ್ದೇವೆ. ಇದರಿಂದ ಎಲ್ಲರಿಗೂ ಕಲ್ಯಾಣವಾಗುತ್ತದೆ.

Sri K. PUTTASWAMY.— I do not dispute the right of the Government to make our statute an improvement over other statutes.

Sri M. S. KRISHNAN.— The point that we have to elicit from the Hon. Minister is: whether there are such enactments in other parts of the country in other States which h ve got such provisions. I think on that specific point,

namely, the Chairman, the Managing Director and non-official Directors shall hold office at the pleasure of Government, answer has not been received.

ಶ್ರೀ ಬಿ. ಬಸವಲಿಂಗಪ್ಪ : ನಾನು ಮೊದಲೇ ಉತ್ತರ ಕೊಡುವಾಗ ಹೇಳಿದ್ದೇನೆ. ಸಿ. ಐ. ಟಿ. ಬೋರ್ಡ್ ಸ್ಥಾಪನೆ 1944ರಲ್ಲಿ ಅದರೂ ಕೂಡ ಇಂಥ ಒಂದು ಪ್ರೊವಿಜನ್ ಇಲ್ಲಿಯು ವರೆಗೆ ಮಾಡಿಲ್ಲ. ನಮಗೆ ಇವರ ಮೇಲೆ ಹತೋಟಿ ಇಟ್ಟುಕೊಳ್ಳಬೇಕೆಂದು ಇದನ್ನು ತಂದಿದ್ದೇವೆ.

Sri K. PUTTASWAMY.— The Hon. Minister made a passing reference to the removal of the Chairman, Mysore City Improvement Trust Board and I asked for clarification.

Mr. DEPUTY SPEAKER.— I think the Hon. Minister has broadly answered both the queries.

ಶ್ರೀ ಕಾಗೋಡು ತಿಮ್ಮಪ್ಪ : ಇವರು ಹೇಳುವುದು ವ್ಯಾಪಕವಾಗಿ. ಮಾನ್ಯ ಪುಟ್ಟಸ್ವಾಮಿಯವರು ಸ್ಪೆಸಿಫಿಕಾಗಿ ಕೇಳಿದ್ದಾರೆ.

Mr. DEPUTY SPEAKER.— As a matter of fact, the Hon. Minister was not entitled to refer to it because it does not come within the scope of the Bill. He made a passing reference and the Hon. member Sri Puttaswamy just relied upon that passing reference and wanted clarification.

Sri M. S. KRISHNAN.— From the way the question was asked by the Hon. member Sri Puttaswamy and the reply given by the Hon. Minister, there seems to be something very, very, very deep. We do not know what it is. The Hon. member of the House are entitled to know what that deep thing is.

Mr. DEPUTY SPEAKER.— If some X-ray machine is broutht, it can be known.

ಶ್ರೀ ಎಸ್. ಬಂಗಾರಪ್ಪ :— ಅದನ್ನು ಇಟ್ಟುಕೊಳ್ಳುವುದಾದರೆ, ಇಟ್ಟುಕೊಳ್ಳಲಿ. ಆದರೆ ಅದಕ್ಕೆ ಏನು ಕಾರಣವೆಂದು ಹೇಳಬಹುದಲ್ಲ.

MR. DEPUTY SPEAKER :—The whole thing is not within the scope of the Bill.

ಶ್ರೀ ಕಾಗೋಡು ತಿಮ್ಮಪ್ಪ :—ಇದು ಕೇವಲ ಒಂದು ಮಸೂದೆಯಲ್ಲಿ ಮಾತ್ರವಲ್ಲ. ಇದೇ ರೀತಿ ಇನ್ನುಳಿದ ನಾಲ್ಕಾರು ಶಾಸನಗಳಲ್ಲಿಯೂ ಇಂಥ ತಿದ್ದುಪಡಿಯನ್ನು ತಂದಿದ್ದಾರೆ. ಆದ್ದರಿಂದ ಇದಕ್ಕೆ ಇಂಥ ಅನಿವಾರ್ಯಪ್ರಸಂಗ ಏನು ಬಂದಿದೆ ಎಂದು ಹೇಳಬೇಕು.

MR. DEPUTY SPEAKER :—The hon. member can get an occasion in some way or the other under the Rules of Procedure. After creating such occasion, he can raise it. That is the way to pinpoint things.

MR. DEPUTY SPEAKER.— The question is :

"That the Mysore Urban Water Supply and Drainage Board Bill, 1973, be taken into consideration."

The motion was adopted

Clauses 2 and 3

MR. DEPUTY SPEAKER : The question is;

"That Clauses 2 and 3 do stand part of the Bill."

The motion was adopted.

Clauses 2 and 3 were added to the Bill

CLAUSE 4

SRI B. BASAVALINGAPPA : I beg to move :

"That for clause 4 the following clause shall be substituted, namely .—

"4. Constitution of the Board :— (1) The Board shall consist of,—

a) a Chairman;

b) a Managing Director;

c) three Directors to represent respectively the Government Secretariat Department dealing in

i) Finance,

ii) Health and Municipal Administration,

iii) Public Works;

d) four Directors to represent the local authorities, one from each Revenue Division;

e) eight other Directors of whom four shall be persons possessing wide experience in the field of public health engineering with reference to water supply or drainage or disposal of industrial wastes, who are not employed by the Government or a local authority or a Corporation owned or controlled by the Government.

(2) The Chairman and the managing Director shall possess the prescribed qualifications, They and the other directors shall be appointed by the Government.

MR. DEPUTY SPEAKER: —Amendment moved.—

"That for clause 4 the following clause shall be substituted, namely :—

"*Constitution of the Board* :—The Board shall consist of:—

(a) a Chairman;

(b) a Managing Director;

(c) three Directors to represent respectively the Government Secretariat Department dealing in

(i) Finance,

(ii) Health and Municipal Administration,

(iii) Public Works;

(d) four Directors to represent the local auhorities, one from each Revenue Division;

(e) eight other Directors of whom four shall be persons possessing wide experience in the field of public health engineering with reference to water supply or drainage or disposal of industrial wastes, who are not employed by the Government or a local authority or a Corporation owned or controlled by the Government.

(2) The Chairman and the Managing Director shall possess the prescribed qualifications. They and the other directors shall be appointed by the Government.

SRI M. S. KRISHNAN :—Sir, I beg to move:

"That at page 4, in sub-section 1 (a) after the word "Chairman," the word "who shall be the Minister for Municipal Administration" shall be inserted"

MR. DEPUTY SPEAKER :—Amendment moved:

"That at page 4, in sub-section 1 (a) after the words "Chairman," the words "who shall be the Minister for Municipal Administration" shall be inserted."

SRI T. R. SHAMANNA : Sir I beg to move :

ನಿರ್ಮೂಲ ಮಾಡಿ ಇಲ್ಲಿ ವಾಸ ಮಾಡುವ ಜನಕ್ಕೆ ಅನುಕೂಲ ಮಾಡಬೇಕಾಗಿದೆ. ಇಂತಹ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಲು ಸರಕಾರಕ್ಕೆ ಎರಡು ವಿಧವಾದ ಅತಂಕಗಳಿವೆ. ಕೆಲವು ಕೊಳಚೆ ಪ್ರದೇಶಗಳು ಖಾಸಗಿಯವರ ಜಮೀನು ಗಳಲ್ಲಿರುತ್ತವೆ ಮತ್ತು ಕೆಲವು ಕಡೆ ಇರುವ ಕೊಳಚೆ ಪ್ರದೇಶಗಳು ಸರಕಾರದ ಜಮೀನುಗಳಲ್ಲಿರುತ್ತವೆ. ಸರಕಾರದ ಜಮೀನುಗಳಲ್ಲಿರುವ ಕೊಳಚೆ ಪ್ರದೇಶ ಗಳನ್ನು ನಿರ್ಮೂಲ ಮಾಡುವುದು ಸುಲಭ. ಆದರೆ ಖಾಸಗಿಯವರ. ಜಮೀನು ಗಳಲ್ಲಿರುವ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡುವುದು ಅಸಾಧ್ಯವಾಗಿದೆ. ಮತ್ತು ಈ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಜನಕ್ಕೆ ಖಾಸಗಿ ಜನರು ಕೊಡುತ್ತಿರುವ ಕಷ್ಟಗಳನ್ನು ನಾವು ಬಹಳ ವರ್ಷಗಳಿಂದಲೂ ಕೇಳುತ್ತಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರಿಗೂ ಇದು ಗೊತ್ತಿದೆ. ಸಿಟಿಯಲ್ಲಿರುವ ಹಾಗೂ ಇಂಡಸ್ಟ್ರಿಯಲ್ ಏರಿಯಾದ ಬಳಿ ಇರುವ ಕೊಳಚೆ ಪ್ರದೇಶಗಳಲ್ಲಿರುವ ಜನರು ಯಾವ ರೀತಿ ಕಷ್ಟಗಳನ್ನು ಅನುಭವಿಸುತ್ತಾ ಬರುತ್ತಿದ್ದಾರೆ ಎನ್ನುವುದು ಮನನೀಯವಾಗಿದೆ. ಖಾಸಗಿ ಜನರು ಈ ಬಡ ಜನಕ್ಕೆ ಬಹಳವಾದ ಕಷ್ಟಗಳನ್ನು ಕೊಡುತ್ತಿದ್ದಾರೆ. ಖಾಸಗಿಯವರ ಜಮೀನುಗಳ ಮೇಲೆ ಇರುವ ಕೊಳಚೆ ಪ್ರದೇಶ ಗಳನ್ನು ತಗೆಯಬೇಕಾದರೆ ಅವಕ್ಕೆ ಹೆಚ್ಚು ಖರ್ಚು ಕೊಡಬೇಕಾಗುತ್ತದೆ. ಈ ಕೊಳಚೆ ಪ್ರದೇಶಗಳನ್ನು ಸರಕಾರವೇ ಆಗಲೀ ಕಾರ್ಪೊರೇಷನ್ನಾಗಲೀ ಟ್ರಸ್ಟ್ ಬೋರ್ಡೇ ಆಗಲಿ ಇಂತಹ ಜಮೀನುಗಳನ್ನು ಅಕ್ವೈರು ಮಾಡಬೇಕಾದರೆ ಹೆಚ್ಚು ಹಣ ಖರ್ಚು ಮಾಡಿ ಇಲ್ಲಿರುವ ಜನ ಸುಖವಾಗಿ ಜೀವನ ಮಾಡಲು ಅನುಕೂಲ ಮಾಡಬೇಕಾಗಿದೆ. ಇದರಿಂದ ಒಂದು ದೊಡ್ಡ ಸಮಸ್ಯೆ ಉದ್ಭವವಾಗುತ್ತಿದೆ. ಖಾಸಗಿಯವರಲ್ಲಿರುವ ಜಮೀನುಗಳನ್ನು ಅಕ್ವೈರು ಮಾಡಿಕೊಳ್ಳಬೇಕಾದರೆ ಅದಕ್ಕೆ ವಿಪರೀತ ಬೆಲೆ ಕೊಡಬೇಕಾಗ್ಗಿ ಬಂದಿದೆ. ಇದಕ್ಕೆ ಮೊದಲು ನಾವು ಕಾಂಪೆನ್ ಸೇಷನ್ ಎಂದು ಕೊಡುತ್ತಿದ್ದೆವು. ಇದರಿಂದ ನಮ್ಮ ಸರಕಾರಕ್ಕೆ ಬಹಳತೊಂದರೆ ಗಳಾಗುತ್ತಿದ್ದವು. ಈಚೆಗೆ ಕೇಂದ್ರ ಸರಕಾರದವರು ಕಾನ್ಸ್‌ಟಿಟ್ಯೂಷನ್ನಿಗೆ ತಿದ್ದುಪಡಿ ಮಾಡಿ ಇಂತಹ ಕಾಂಪೆನ್‌ಸೇಷನ್ ಕೊಡುವುದಕ್ಕೆ ಬದಲು ಕಾರ್ಪೊರೇಷನ್ ಟ್ಯಾಕ್ಸ್ ಏನಿದೆ ಅದರ ಪ್ರಕಾರ ಇಂತಿಷ್ಟು ಅಮೌಂಟು ಕೊಡ ಬೇಕೆಂದು ಮಾಡಿದ್ದಾರೆ. ಇದೊಂದು ಒಳ್ಳೆಯ ಸಲಹೆ ಬಂದುದರಿಂದ ಇಂತಹ ಒಂದು ಬಿಲ್ಲನ್ನು ಇಲ್ಲಿ ತರಲು ಅನುಕೂಲವಾಯಿತು. ಇನ್ನು ಮುಂದೆ ಕಾಂಪೆನ್ ಸೇಷನ್ ಎಂದು ಕೊಡುವ ಅಗತ್ಯವಿಲ್ಲ. ಇದಕ್ಕೆ ನಿಗದಿಯಾಗಿರುವ ಅಧಿ ಕಾರಿಗಳು ಎಂದರೆ ಜಿಲ್ಲಾಧಿಕಾರಿಗಳು ಏನು ಹಣ ಕೊಡಬೇಕೆಂದು ನಿಗದಿ ಮಾಡುತ್ತಾರೋ ಅದರಂತೆ ಹಣ ಕೊಟ್ಟು ಜಮೀನನ್ನು ಅಕ್ವೈರ್ ಮಾಡಿ ಕೊಳ್ಳಬಹುದು. ಈ ಬಿಲ್ಲಿನಲ್ಲಿ ಯಾವ ರೀತಿ ಹಣ ಕೊಡಬೇಕು ಎನ್ನುವುದನ್ನು ವಿವರಿಸ ಲಾಗಿದೆ. ಇದೊಂದು ಮಹತ್ವವಾದ ಸಾಧನೆ ಎಂದು ನಾನು ಇಲ್ಲಿ ಹೇಳಬೇಕಾ ಗಿದೆ. ಇಂದು ತಮಗೆಲ್ಲಾ ಗೊತ್ತಿರುವ ಹಾಗೆ ಬೆಂಗಳೂರು ಸಿಟಿಯಲ್ಲಿ

(ಶ್ರೀ ಬಿ. ಬಸವಲಿಂಗಪ್ಪ)

ಒಂದು ಎಕರೆ ಭೂಮಿಯನ್ನು ಅಕ್ವೈರು ಮಾಡಿಕೊಳ್ಳಬೇಕಾದರೆ ಅದಕ್ಕೆ ಸುಮಾರು ಮೂರು ಇಲ್ಲವೇ ನಾಲ್ಕು ಲಕ್ಷ ರೂಪಾಯಿಗಳಷ್ಟು ಬೆಲೆ ಕೊಡುವ ಸನ್ನಿವೇಶಗಳೂ ಇವೆ. ಇಷ್ಟು ಹಣ ಕೊಟ್ಟು ಇಂತಹ ಬಡ ಜನರಿಗೆ ವಸತಿ ಸೌಕರ್ಯವನ್ನು ಮಾಡಿಕೊಡಬೇಕೆಂದರೆ ಕಷ್ಟವಾಗುತ್ತದೆ. ಇದು ವರೆಗೆ ಯಾವ ಸರಕಾರವೂ ಇಂತಹ ಒಂದು ಸೌಕರ್ಯವನ್ನು ಮಾಡಿಕೊಟ್ಟಿಲ್ಲ. ಕಾರ್ಪೋರೇಷನ್ ಹಾಗೂ ಟ್ರಸ್ಟು ಬೋರ್ಡಿನವರು ಈಗಿರುವ ಪರಿಸ್ಥಿತಿಯಲ್ಲಿ ಇಂತಹ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಲು ಯಾವ ರೀತಿ ಹಣ ಕೊಡಬೇಕೆಂದು ಈ ಬಿಲ್ಲಿನಲ್ಲಿ ಹೇಳಲಾಗಿದೆ ಇದರಂತೆ hunder times of the taxes payable ಎಂದು ಇದರಲ್ಲಿ ಅಳ ವಡಿಸಲಾಗಿದೆ. ಇದನ್ನು ಅಧಿಕಾರಿಗಳು ಸರಿಯಾಗಿ ನಿಗದಿ ಮಾಡಿ ತೀರ್ಮಾನ ಮಾಡಲೇಬೇಕು. ಹಿಂದೆ ಕಾಂಪೆನ್‌ಸೇಷನ್ ಎಂದು ಕೊಡುವಾಗ ಅದಕ್ಕೆ ಮಾರ್ಕೆಟ್ ವ್ಯಾಲ್ಯೂ ಕೊಡಬೇಕು ಇಲ್ಲವೇ ಅಕ್ಕ ಪಕ್ಕದ ಜಮೀನುಗಳ ಬೆಲೆ ಏನಿದೆ ಅದನ್ನು ನೋಡಿಕೊಂಡು ಕೊಡಬೇಕು ಎಂದು ಹಾಗೂ ಕೆಲವು ಅಡ್ಡಿ ಆತಂಕ ಗಳೂ ಇದರಲ್ಲಿ ಬರುತ್ತಿದ್ದವು. ಇದಕ್ಕಾಗಿ ಇದರಲ್ಲಿ Multiples of the taxes payable to the Municipality ಎಂದು ಮಾಡಲಾಗಿದೆ. ಇದನ್ನು ಬೋರ್ಡಿನವರು ನಿಗದಿ ಮಾಡಿಕೊಡಬೇಕಾಗುತ್ತದೆ, ಇದೊಂದು ಹೆಚ್ಚು ಮಹತ್ವ ವಾದ ಸಾಧನೆ ನಾವು ಮಾಡಿದಂತಾಗಿದೆ. ಬೆಂಗಳೂರು ಸಿಟಿ, ಮೈಸೂರು ಸಿಟಿ, ಹುಬ್ಬಳ್ಳಿ ಹಾಗೂ ಧಾರವಾಡ ಸಿಟಿ ಇಂತಹ ಕಡೆಗಳಲ್ಲಿ ಖಾಸಗಿ ಜನರು ಜಮೀನು ಇಟ್ಟುಕೊಂಡು ಅದನ್ನು ವ್ಯಾಪಾರ ಮಾಡಿ ಹೆಚ್ಚು ಸಂಪಾದನೆ ಮಾಡುತ್ತಿರುವುದು ಸರಕಾರದ ಗಮನಕ್ಕೂ ಬಂದಿದೆ ಹಾಗೂ ತಮ್ಮ ಗಮನಕ್ಕೂ ಬಂದಿವೆ. ಇದರಿಂದ ಲಕ್ಷಾಂತರ ರೂಪಾಯಿಗಳ ವ್ಯವಹಾರ ಮಾಡಿ ಒಂದು ರೀತಿಯಾದ ಸ್ಪೆಕ್ಯುಲೇಷನ್‌ಗೆ ಅವಕಾಶ ಮಾಡಿರುವುದು ತಮಗೆ ಗೊತ್ತಿದೆ. ಇಂತಹ ವ್ಯಕ್ತಿಗಳು ಇವರಲ್ಲಿ ಕೇವಲ ಎರಡು ಮೂರು ಎಕರೆ ಜಮೀನು ಇದ್ದರೆ ಅದನ್ನು ಕನ್‌ವರ್ಷನ್ ಮಾಡಿ ಕೊಂಡು ಎಂದರೆ ಅಗ್ರಿಕಲ್‌ಚರು ಲ್ಯಾಂಡನ್ನು ನಾನ್ ಅಗ್ರಿಕಲ್‌ಚರು ಲ್ಯಾಂಡು ಎಂದು ಕನ್‌ವರ್ಟು ಮಾಡಿ ಸೈಟುಗಳಾಗಿ ಮಾಡಿ ಅಧಿಕಾರಿಗಳ ಮೇಲೆ ತಾವೇನು ವಶೀಲಿ ಬಾಜಿ ಎಂದು ಹೇಳುತ್ತೀರಿ ಆ ರೀತಿ ಮಾಡಿಕೊಂಡು ಲಕ್ಷಾಂತರ ರೂಪಾ ಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ಈಗ ಸೋಷಿಯಲೈಸೇಷನ್ ಆಫ್ ಅರ್ಬನ್ ಲ್ಯಾಂಡ್ಸ್ ಎಂದು ನಮ್ಮ ಸರಕಾರದವರು ಮಾಡಬೇಕೆಂದು ಮತ್ತು ಈ ಉದ್ದೇಶ ಸಾಧನೆ ಮಾಡುವ ಸಲುವಾಗಿ ಇಂತಹ ಒಂದು ಬಿಲ್ಲನ್ನು ಇಲ್ಲಿತರಲಾಗಿದೆ. ಇದರಲ್ಲಿ ಯಾವ ರೀತಿ ಕಾರ್ಯಕ್ರಮಗಳನ್ನು ಜಮೀನು ತೆಗೆದುಕೊಳ್ಳುವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ತೀವ್ರವಾಗಿ ಆಲೋಚನೆ ಮಾಡಿ ಈ ಬಿಲ್ಲನ್ನು ತರಲಾಗಿದೆ, ಇದರ ಮೂಲಕ ಕೊಳಚೆ ಪ್ರದೇಶ ಗಳನ್ನು ನಿರ್ಮೂಲ ಮಾಡಬೇಕೆಂದು ಇದರ ಉದ್ದೇಶ.ನಾವು ಪಟ್ಟಿಯಲ್ಲಿ ಕೊಟ್ಟಿರು ವಂತೆ ಬೆಂಗಳೂರು ನಗರದಲ್ಲಿ 129 ಸ್ಲಂ ಗಳಿವೆ. ಆದರೆ ಈಗ ಇದಕ್ಕಿಂತ ಇನ್ನೂ ಸ್ವಲ್ಪ ಜಾಸ್ತಿಯಾಗಿದೆ ಎನ್ನುವ ಒಂದು ಅಭಿಪ್ರಾಯವೂ ನನಗೆ ಉಂಟು.

ಆದರೆ ಕೊಳಚೆ ಪ್ರದೇಶಗಳ ನಿರ್ಮಾಣ ಬಹಳ ಜಾಗ್ರತೆಯಾಗಿ ಆಗುತ್ತಿದೆ. ಇದು ಈಗ ವ್ಯವಸ್ಥಿತವಾದ ರೀತಿಯಲ್ಲಿ ಆಗುತ್ತಿದೆ. ನಿವೇಶನವಿಲ್ಲದವರಿಗೆ ನಿವೇಶನಗಳನ್ನು ಕೊಡುವುದಾಗಿ ಪ್ರಕಟಣೆ ಮಾಡಿದ ಕೂಡಲೇ ಕಂಟ್ರಾಕ್ಟ್‌ದಾರ ವರ್ಗವೇ ಇದರಲ್ಲಿ ಉತ್ಪತ್ತಿಯಾಯಿತು. ಸುಮಾರು 20-30 ಸಂಸಾರಗಳಿಗೆ, ಕೊಳಚೆ ಪ್ರದೇಶಗಳಲ್ಲಿರುವವರಿಗೆ ಸರ್ಕಾರದ ಜಮೀನಿನಲ್ಲಾಗಲೀ ಖಾಸಗಿ ಜಮೀನಿನಲ್ಲಾಗಲೀ ಮನೆಗಳನ್ನು ಕಟ್ಟಿಕೊಟ್ಟು ಅವರಿಂದ ದುಡ್ಡು ವಸೂಲು ಮಾಡತಕ್ಕ ಕಂಟ್ರಾಕ್ಟರುಗಳು ಉತ್ಪತ್ತಿಯಾದರು, ಬೆಂಗಳೂರು, ಮೈಸೂರು ನಗರದಂಥ ಪಟ್ಟಣಗಳಲ್ಲಿ ಕೊಳಚೆ ಪ್ರದೇಶಗಳು ವ್ಯವಸ್ಥಿತ ರೀತಿಯಲ್ಲಿ ಉತ್ಪತ್ತಿಯಾಗುವುದಕ್ಕೆ ಅವಕಾಶಗಳಿವೆ. ಇದೆಲ್ಲವನ್ನೂ ನಾವು ತಪ್ಪಿಸಬೇಕಾಗಿದೆ. ಪಟ್ಟಣಗಳಲ್ಲಿ ದುರದೃಷ್ಟವಂತರಿದ್ದಾರೆ. ಅವರಿಗೆ ಮನೆಗಳನ್ನು ಕಟ್ಟುವುದಕ್ಕೆ ನಿವೇಶನಗಳನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ. ಅಂಥವರು ಬೆಂಗಳೂರು ನಗರದಲ್ಲಿಯೇ ಸುಮಾರು 25 ಸಾವಿರ ಸಂಸಾರಗಳಿವೆ. ಫ್ಲೋಟಿಂಗ್ ಪಾಪ್ಯುಲೇಷನ್ ಎಲ್ಲ ಸೇರಿಕೊಂಡರೆ 30 ಸಾವಿರ ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕ ಸಂಸಾರಗಳು ಬೆಂಗಳೂರಿನಲ್ಲಿವೆ. ಹಾಗೆಯೇ ಹುಬ್ಬಳ್ಳಿ ಧಾರವಾಡ, ಮೈಸೂರು ಮುಂತಾದ ನಗರಗಳಲ್ಲಿ ಇವೆ.

1969ನೇ ಇಸವಿಯಲ್ಲಿ ಏನೊಂದು ಕಾನೂನಿತ್ತು, ಅದರಲ್ಲಿನ ಮೂರನೆಯ ಕಲಮನ್ನು ಹೈಕೋರ್ಟಿನವರು ಇಲ್ಲೀಗಲ್, ಅನ್‌ಕಾನ್‌ಸ್ಟಿಟ್ಯೂಷನಲ್ ಎಂದು ವಜಾ ಮಾಡಿದರು. ಸುಪ್ರೀಂ ಕೋರ್ಟಿನವರು ಕೂಡ ಅದನ್ನೇ ಎತ್ತಿ ಹಿಡಿದರು. ಆದ್ದರಿಂದ ಅದನ್ನೂ ಅಳವಡಿಸಿಕೊಂಡು, ತಿದ್ದುಪಡಿ ಮಾಡಿ ಹೊಸದಾಗಿ ಮಸೂದೆಯನ್ನು ತರಲಾಗಿದೆ. ಇದರಿಂದ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಜನರಿಗೆ ಅನುಕೂಲವಾದೀತು ಎಂದು ನನ್ನ ಆಸೆ.

ಕೊಳಚೆ ಪ್ರದೇಶಗಳ ನಿರ್ಮೂಲನೆ ಮಾಡುವ ಸಂಬಂಧದಲ್ಲಿ ಎರಡು ಯೋಜನೆಗಳನ್ನು ಮಾಡಲಾಗಿದೆ. ಒಂದು ಎನ್‌ವಿರಾನ್‌ಮೆಂಟಲ್ ಇಂಪ್ರೂವ್‌ಮೆಂಟ್ ಸ್ಕೀಂ ಮತ್ತು ಎರಡನೆಯದು ಸ್ಲಂ ಕ್ಲಿಯರೆನ್ಸ್ ಸ್ಕೀಂ. ಎನ್‌ವಿರಾನ್‌ಮೆಂಟಲ್ ಇಂಪ್ರೂವ್‌ಮೆಂಟ್ ಸ್ಕೀಂ ಎಂದರೆ ಎಲ್ಲೆಲ್ಲಿ ಕೊಳಚೆ ಪ್ರದೇಶಗಳಿವೆ ಅಲ್ಲೆಲ್ಲ ದೀಪದ ವ್ಯವಸ್ಥೆ ಮಾಡತಕ್ಕದ್ದು, ರಸ್ತೆ ಮಾಡತಕ್ಕದ್ದು, ಒಳಚರಂಡಿ ವ್ಯವಸ್ಥೆ ಮಾಡತಕ್ಕದ್ದು, ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕದ್ದು ಇವೆಲ್ಲ ಸೇರುತ್ತದೆ ಮತ್ತು ಇದಕ್ಕೆ ತಗಲುವ ಪೂರ್ತಾ ಹಣವನ್ನು ಕೇಂದ್ರ ಸರ್ಕಾರದವರು ಸಹಾಯ ಧನವಾಗಿ ಕೊಡಲು ಒಪ್ಪಿದ್ದಾರೆ. ಹೋದ ವರ್ಷ ಸುಮಾರು ಒಂದೂವರೆ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದರಲ್ಲಿ 40-43 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಯಾರಾದರೂ ಮಾನ್ಯ ಸದಸ್ಯರು ಇಷ್ಟಪಟ್ಟರೆ ಕೊಳಚೆ ಪ್ರದೇಶದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ನೋಡಿ, ಅದರಲ್ಲಿ

(ಶ್ರೀ ಬಿ. ಬಸವಲಿಂಗಪ್ಪ)

ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಬೇಕು, ಇನ್ನೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾಗಿತ್ತು ಎಂದು ಅಭಿಪ್ರಾಯ ಪಟ್ಟರೆ ಅದನ್ನು ಕೂಡ ಗಣನೆಗೆ ತೆಗೆದುಕೊಂಡು ಕೆಲಸವನ್ನು ಒಳ್ಳೆಯ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೊಳಚೆ ಪ್ರದೇಶಗಳಲ್ಲಿರುವ ಜನಗಳ ಜೀವನ ಕನಿಷ್ಠತರಹದ್ದಾಗಿದ್ದು ಅದನ್ನು ಒಳ್ಳೆಯ ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸ್ಲಂ ಕ್ಲಿಯರೆನ್ಸ್ ಸ್ಕೀಂ ಎಂದು ಏನಿದೆ ಆದರ ಪ್ರಕಾರ ಅವಶ್ಯಕವಾಗಿರತಕ್ಕ ಅನುಕೂಲಗಳನ್ನು ಒದಗಿಸಬೇಕೆಂದು ನಾನು ಆಗಲೇ ಏನು ಹೇಳಿದೆ ಆದರ ಜೊತೆಗೆ ಅವರು ಇರುವುದಕ್ಕೆ ಮನೆಗಳ ವ್ಯವಸ್ಥೆಯನ್ನು ಕೂಡ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಪ್ರತಿಯೊಬ್ಬರಿಗೂ ಕೂಡ ವೈಯಕ್ತಿಕವಾಗಿ ಮನೆಗಳನ್ನು ಕಟ್ಟಿಕೊಡತಕ್ಕ ವ್ಯವಸ್ಥೆಯನ್ನೂ ಅಳವಡಿಸಿದ್ದೇವೆ, ಅನೇಕ ಅಂತಸ್ತುಗಳುಳ್ಳ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಅಳವಡಿಸಿದ್ದೇವೆ, ಆದರ ಪ್ರಕಾರ ಕೊಳಚೆ ಪ್ರದೇಶಗಳ ನಿರ್ಮೂಲನ ಮಾಡಬೇಕು, ಆ ಪ್ರದೇಶಗಳ ಅಭಿವೃದ್ಧಿ ಮಾಡಬೇಕು ಎನ್ನುವ ಯೋಜನೆಯನ್ನು ಈ ಮಸೂದೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಈಗ ತಂದಿರುವ ಮಸೂದೆಗೆ ಮಾನ್ಯ ಸದಸ್ಯರು ಸಂಪೂರ್ಣವಾಗಿ ಬೆಂಬಲ ಕೊಟ್ಟು ಅತಿ ಜಾಗ್ರತೆಯಾಗಿ ಕೊಳಚೆ ಪ್ರದೇಶಗಳಲ್ಲಿರುವ ನತದೃಷ್ಟ ಜನರ ಯೋಗಕ್ಷೇಮವನ್ನು ಕಾಪಾಡಲು ಜಾಗ್ರತೆಯಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(Mr. Deputy Speaker in the Chair)

‡ ಶ್ರೀ ಟಿ. ಆರ್. ಶಾಮಣ್ಣ : (ಕೋಟೆ)—ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಮಂತ್ರಿಗಳಿಗೆ ಮೊಟ್ಟ ಮೊದಲು ಒಂದು ಆಶ್ವಾಸನೆಯನ್ನು ಕೊಡುತ್ತೇನೆ. ಅವರು ತರತಕ್ಕ ಪ್ರಕಿಯೊಂದು ಮಸೂದೆಯ ಮೇಲೂ ತಿದ್ದುಪಡಿಗಳನ್ನು ನಾನು ತರುತ್ತಾ ಇದ್ದೇನೆಂದು ಅವರು ಹೇಳಿದರು ಇದರ ಮೇಲೆ ನಾನು ಯಾವ ತಿದ್ದುಪಡಿಯನ್ನೂ ತರುವುದಿಲ್ಲವೆನ್ನುವ ಆಶ್ವಾಸನೆಯನ್ನು ಮೊದಲು ಕೊಡ ಬಯಸುತ್ತೇನೆ.

ಬೆಂಗಳೂರು ನಗರಕ್ಕೆ ಇರತಕ್ಕ ಮೂರು ಮುಖ್ಯವಾದ ತೊಂದರೆಗಳೆಂದರೆ ಒಂದು ನೀರಿನ ಸಮಸ್ಯೆ, ಎರಡನೆಯದು ಸೊಳ್ಳೆ ಕಾಟದ ಸಮಸ್ಯೆ, ಮೂರನೆಯದು ಸುಂದರ ಬೆಂಗಳೂರು ನಗರದ ಸೌಂದರ್ಯವನ್ನು ಹಾಳು ಮಾಡತಕ್ಕ ಕೊಳಚೆ ಪ್ರದೇಶಗಳು. ಇವುಗಳ ಪೈಕಿ ಕಾವೇರಿ ಯೋಜನೆಯ ಪ್ರಕಾರ

ಡಿಸೆಂಬರ್ ತಿಂಗಳಿನ ಹೊತ್ತಿಗೆ ಬೆಂಗಳೂರಿನ ನಾಗರಿಕರಿಗೆ ಕಾವೇರಿ ನೀರು ಬರುವ ಹಾಗೆ ಏರ್ಪಾಡು ಮಾಡಬೇಕೆಂಬ ತೀರ್ಮಾನವನ್ನು ಕೈಕೊಂಡಿದ್ದೇವೆ ಎಂದು ಹೇಳಿದ್ದಾರೆ. ಪಡೆಯುತ್ತಿರತಕ್ಕ ಕೆಲಸದ ರಭಸವನ್ನು ನೋಡಿದರೆ ಅವರು ಹೇಳಿರುವಂತೆ ಆಗುವುದಕ್ಕೆ ಯಾವ ಸಂದೇಹವೂ ಇಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ. ಆಗ ಬೆಂಗಳೂರಿನ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಆದರೆ ನೀರಿನ ದರ ಮಾತ್ರ ಬಹಳ ಜಾಸ್ತಿಯಾಗುತ್ತದೆ. ಬಡವರಿಗೆ ಅನಾನುಕೂಲ ವಾಗದ ಹಾಗೆ ನೀರಿನ ದರದ ಬಗ್ಗೆ ಸ್ವಲ್ಪ ಗಮನ ಕೊಡಬೇಕೆಂದು ಹೇಳುತ್ತೇನೆ.

ಎರಡನೆಯದು ಬೆಂಗಳೂರು ನಗರಕ್ಕೆ ಅಂಟಿಕೊಂಡಿರುವ ದೊಡ್ಡ ಜಾಡ್ಯ ಸೊಳ್ಳೆ ಕಾಟ. ಇದನ್ನು ತಪ್ಪಿಸುವುದಕೋಸ್ಕರ ಸ್ಯೂಯರೇಜ್ ಬೋರ್ಡಿನವರು ಸ್ಯೂಯರೇಜ್ ಫ್ಲಾಂಟ್ ಕೂಡ ಹಾಕಿ ಸೊಳ್ಳೆ ಕಾಟವನ್ನು ತಪ್ಪಿಸುವುದಕ್ಕೆ ಸಾಕಾದಷ್ಟು ಪ್ರಯತ್ನಪಡುತ್ತಿದ್ದಾರೆ. ಆದರಿಂದ ಸೊಳ್ಳೆ ಕಾಟ ತಪ್ಪಿದರೆ ಬೆಂಗಳೂರಿನ ನಾಗರಿಕರಿಗೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ನನಗೆ ಇದೆ.

ಮೂರನೆಯ ಅಂಶ ಕೊಳಚೆ ಪ್ರದೇಶಗಳ ನಿರ್ಮೂಲನ. ಇದಕೆ ಕೆಲಸ ಆಗು ವುದರಲ್ಲಿಯೂ ಯಾವ ಸಂದೇಹವೂ ಇಲ್ಲವೆಂದು ನಾನಾದರೂ ಹೇಳುತ್ತೇನೆ ಆದರೆ ಕೊಳಚೆ ಪ್ರದೇಶಗಳ ಬಗ್ಗೆ ಕೆಲವು ಮಾಹಿತಿಗಳನ್ನು ಮಾತ್ರ ನಾನು ಕೊಡು ವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಗರದಲ್ಲಿ 1942 ರಿಂದ ಕೊಳಚೆ ಪ್ರದೇಶಗಳ ನಿರ್ಮೂಲನ ಕಾರ್ಯ ನಡೆಯುತ್ತಿದೆ. ಸುಮಾರು ಎರಡು ಕೋಟಿ ರೂಪಾಯಿನಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆದರೆ 1942ರಲ್ಲಿ 60 ಕೊಳಚೆ ಪ್ರದೇಶಗಳಿದ್ದರೆ 1972ರಲ್ಲಿ ಅವು 140 ಆಗಿವೆ. ಕೊಳಚೆ ಪ್ರದೇಶಗಳ ಬೆಳವಣಿಗೆಯಾಗಿರುವುದು ಅವು ಹೆಚ್ಚಾಗುತ್ತಿರುವುದು ನಮಗೆ ಕಂಡು ಬರುತ್ತದೆ. ಕೊಳಚೆ ಪ್ರದೇಶಗಳ ನಿರ್ಮೂಲನ ಮಾಡಬೇಕೆಂದು ತೀವ್ರವಾದ ಕಾರ್ಯಕ್ರಮವನ್ನು ತೆಗೆದು ಕೊಂಡರೂ ಅನೇಕ ಹೊಸ ಕೊಳಚೆ ಪ್ರದೇಶಗಳ ಉದ್ಭವವಾಗಿ ಬೆಂಗಳೂರು ನಗರಕ್ಕೆ ಕಳಂಕವನ್ನುಂಟುಮಾಡುತ್ತಿವೆ. ಅದರಲ್ಲಿಯೂ ಕೂಡ ಬೆಂಗಳೂರಿಗೆ ರೈಲಿನಲ್ಲಿ ಬರುವಾಗ ಅಲ್ಲಿನ ಬೆಳಗಿನ ದೃಶ್ಯವನ್ನು ಬೆಳಗಿನ ಹೊತ್ತು ನೋಡಿದರೆ ನಿಜವಾಗಿಯೂ ಮನಸ್ಸಿಗೆ ಬಹಳ ವ್ಯಥೆ ಮತ್ತು ಖೇದವನ್ನುಂಟು ಮಾಡುತ್ತದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮಾನ್ಯ ಮಂತ್ರಿಗಳ ಮತ್ತು ಸಭೆಯ ಗಮನಕ್ಕೆ ತರಬೇಕಾದ್ದು ಅತೀ ಮುಖ್ಯವಾದುದು. ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕ ಜನ ಸಾಧಾರಣವಾಗಿ ನೆರೆ ರಾಜ್ಯಗಳಿಂದ ಬಂದಂಥವರೇ ಹೆಚ್ಚು. ನಮ್ಮ ರಾಜ್ಯದ ಕನ್ನಡಿಗರಲ್ಲಿ ಅನೇಕರು ಇನ್ನೂ ಹೆಚ್ಚಿನ ಕಷ್ಟ ಪರಿ ಸ್ಥಿತಿಯಲ್ಲಿದ್ದರೂ ಕೂಡ ಹೆಚ್ಚಿನ ಅನುಕೂಲ ದೊರೆಯದೆ ಇರತಕ್ಕದ್ದು ಬಹಳ ಶೋಚನೀಯವಾದ ವಿಚಾರ. ನೆರೆ ರಾಜ್ಯದ ಜನಗಳು ಹೆಚ್ಚಿನ ರೀತಿಯಲ್ಲಿ ಬಂದು ಕೊಳಚೆ ಪ್ರದೇಶಗಳಲ್ಲಿ ಸೇರಿಕೊಂಡಿದ್ದರೆ ಅವರಿಗೆ ಅನುಕೂಲ ಮಾಡಿ

(ಶ್ರೀ. ಟಿ. ಆರ್ ಶಾಮಣ್ಣ)

ಕೊಡುತ್ತಿದ್ದೇವೆ. ಅವರಿಗೆ ಅನುಕೂಲ ಮಾಡಿಕೊಡುವುದರಲ್ಲಿ ಅಡ್ಡಿ ಇಲ್ಲ. ಆದರೆ ನಮ್ಮ ಕನ್ನಡಿಗರ ಬಗ್ಗೆ ಹೆಚ್ಚಿನ ಮಮತೆಯನ್ನು ತೋರಿಸಿ ಕನ್ನಡ ರಾಜ್ಯದಲ್ಲಿರುವ ಬಡವರಿಗೂ ಕೂಡ ಮನೆಗಳ ಸೌಕರ್ಯವನ್ನು ಒದಗಿಸಲು ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಕೊಳಚೆ ಪ್ರದೇಶಗಳು ಬೆಳವಣಿಗೆಯಾಗತಕ್ಕ ಕೆಲಸಕ್ಕೆ ಕಾರಣಕರ್ತರು ರಾಜಕಾರಣಿಗಳು ಎಂದರೆ ತಪ್ಪಾಗಲಾರದು. ವೋಟು ಪಡೆಯುವ ಉದ್ದೇಶದಿಂದ ಮತ್ತು ತಮ್ಮ ಸ್ಥಾನಮಾನಗಳನ್ನು ಭದ್ರಮಾಡಿಕೊಳ್ಳುವ ಉದ್ದೇಶದಿಂದ, ನನ್ನನ್ನೂ ಸೇರಿಸಿಕೊಂಡು ಕೊಳಚೆ ಪ್ರದೇಶಗಳ ಬೆಳವಣಿಗೆಗೆ ರಾಜಕಾರಣಿಗಳು ಅನುಕೂಲ ಮಾಡಿಕೊಡುತ್ತಿರುವುದು ಮೊದಲಿನಿಂದಲೂ ಬಂದಿರತಕ್ಕ ರೂಢಿ.

ಈಗ ತಾವು ಈ ಸ್ಲಮ್ಸ್ ಕ್ಲಿಯರೆನ್ಸ್ ಮತ್ತು ಇಂಪ್ರೂವ್‌ಮೆಂಟ್ ಮಾಡಬೇಕು ಅಂತ ಏನು ಒಂದು ಬೋರ್ಡು ಮಾಡುತ್ತೀರೋ ಆದರಿಂದ ಅದಷ್ಟೂ ಕೂಡ ರಾಜಕಾರಣಿಗಳನ್ನು ದೂರ ಇಡಬೇಕು ಎಂದು ಹೇಳುತ್ತೇನೆ. ಮತ್ತು ಈ ಸ್ಲಮ್ಸ್‌ಗಳನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಪಡಿಸಬೇಕು ಮತ್ತು ಈ ಸ್ಲಮ್ಸ್ ಕ್ಲಿಯರೆನ್ಸ್‌ನಲ್ಲಿ ಯಾರಿಗೆ ಹೆಚ್ಚು ಆಸಕ್ತಿ ಇದೆಯೋ ಅಂಥಾವರನ್ನು ಆ ಬೋರ್ಡಿಗೆ ಹಾಕಬೇಕು ಎಂದು ಹೇಳುತ್ತೇನೆ. ಈಗ ಅನೇಕ ಬೋರ್ಡುಗಳು ಸೃಷ್ಟಿಯಾಗಿವೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮತ್ತು ಹೌಸಿಂಗ್ ಬೋರ್ಡ್ ಈ ರೀತಿ ಅನೇಕ ಬೋರ್ಡುಗಳು ಆಗಿ ಅವರು ಅಲ್ಲಿರತಕ್ಕಂಥ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಆ ರೀತಿಯಾದಂಥ ಬೋರ್ಡುಗಳನ್ನು ಮಾಡಬೇಡಿ ಎಂದು ನಾನು ವಿನಂತಿಯಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ, ಈ ಬೋರ್ಡ್ ಮಾಡಿದರೆ ಬಡವರಿಗೆ ಒಳ್ಳೆಯದು ಮಾಡಬೇಕು. ಆದಕ್ಕಾಗಿ ನಾನು ಹೇಳುವುದು ಏನೆಂದರೆ ಯಾರಿಗೆ ಇದರಲ್ಲಿ ಹೆಚ್ಚು ಆಸಕ್ತಿ ಇದೆಯೋ ಮತ್ತು ಈ ಬಗ್ಗೆ ಒಂದು ಸೇವಾ ಮನೋಭಾವನೆ ಇದೆಯೋ ಅಂಥಾವರನ್ನು ಈ ಬೋರ್ಡಿನಲ್ಲಿ ಹಾಕುವುದಕ್ಕೆ ಪ್ರಯತ್ನ ಪಡಬೇಕು. ಹಾಗಾದರೆ ಈ ಕೆಲಸ ಆದಷ್ಟು ಬೇಗ ಕಾರ್ಯಗತವಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಹೇಳಿದರು ಬೆಂಗಳೂರು ನಗರದಲ್ಲಿ 120 ಸ್ಲಮ್ಸ್‌ಗಳು ಇವೆಯೆಂದು. ನನ್ನ ಲೆಕ್ಕದ ಪ್ರಕಾರ 140 ಸ್ಲಮ್ಸ್‌ಗಳು ಇವೆ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಇದರಿಂದ ಸುಮಾರು 20–25 ಸಾವಿರ ಸಂಸಾರಗಳು

ವಾಸವಾಗಿವೆ. ಇದರಲ್ಲಿ ಒಂದು ವಿಚಾರ ನಾನು ಹೇಳಬೇಕಾಗಿದೆ. ಇದರಲ್ಲಿ ಏನಾಗಿದೆ ಎಂದರೆ ಕೆಲವು ಸ್ಲಮ್ಸ್‌ಗಳು ಟ್ರಸ್ಟ್ ಬೋರ್ಡ್ ಏರಿಯಾದಲ್ಲಿ ಇವೆ, ಕೆಲವು ಸ್ಲಮ್ಸ್‌ಗಳು ಕಾರ್ಪೊರೇಷನ್ ಏರಿಯಾದಲ್ಲಿ ಇವೆ. ಕೆಲವು ಸ್ಲಮ್ಸ್‌ಗಳು ಸರ್ಕಾರಕ್ಕೆ ಸೇರಿದ ಜಾಗದಲ್ಲಿ ಇವೆ. ಸ್ವಲ್ಪ ಹೆಚ್ಚು ಕಡಿಮೆ ಅರ್ಧ ಭಾಗದಷ್ಟು ಸ್ಲಮ್ಸ್‌ಗಳು ಖಾಸಗೀ ಜಮೀನಿನಲ್ಲಿ ಇವೆ. ಇದು ಒಂದು ದೊಡ್ಡ ತಲೆನೋವು ಆಗಿದೆ. ಈಗ ಖಾಸಗೀ ಜಮೀನನ್ನು ಸರ್ಕಾರಕ್ಕೆ ವಶಕ್ಕೆ ತೆಗೆದುಕೊಂಡು ಅದನ್ನು ಅಭಿವೃದ್ಧಿಪಡಿಸಿ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಈ ಬಿಲ್ಲಿನಲ್ಲಿ ಕೆಲವು ನಿಬಂಧನೆಗಳನ್ನು ತೆಗೆದುಕೊಂಡು ಬಂದಿದ್ದೀರಿ. ಆದುದರಿಂದ ಇದು ಸ್ವಾಗತಾರ್ಹವಾದ ವಿಚಾರ. ಆದರೆ ಈ ಕೆಲಸ ತ್ವರಿತಗತಿಯಿಂದ ನಡೆಯಬೇಕು. ಇದರಲ್ಲಿ ಒಂದು ಕೆಲಸ ಏನಾಗಿದೆ ಎಂದರೆ ನನಗೆ ತಿಳಿದ ಹಾಗೆ 2 ಕೋಟಿ ರೂಪಾಯಿಯಷ್ಟು ಹಣ ಕಾರ್ಪೊರೇಷನ್ ಮತ್ತು ಸರ್ಕಾರದ ಹಣ ಈ ಸ್ಲಮ್ಸ್‌ಗಳಿಗೆ ಖರ್ಚಾಗಿದೆ ಆದರೆ ಇದರ ಕೆಲಸ ಸರಿಯಾಗಿ ಆಗಲಿಲ್ಲಾ. ಒಂದು ಸ್ಲಮ್ ತೆಗೆದರೆ ಇನ್ನೊಂದು ಸ್ಲಮ್ ಬೇರೆಕಡೆ ಸೃಷ್ಟಿಯಾಗುತ್ತಾ ಇದೆ. ಉದಾಹರಣೆಗೆ ಕಲಾಸಿ ಪಾಳ್ಯಂನಲ್ಲಿ ಮೊದಲು ಇದ್ದ ಒಂದು ಸ್ಲಂನ್ನು ತೆಗೆದು ಜಯನಗರಕ್ಕೆ ಹಾಕಿದರು. ಜಯನಗರ ಒಂದು ಸುಂದರವಾದ ಎಕ್ಸ್‌ಟೆನ್‌ಷನ್. ಅಲ್ಲಿಗೆ ಈ ಬಡವರನ್ನು ಹಾಕಬೇಕಾದರೆ ಅವರಿಗೆ ಅಲ್ಲಿ ಸರಿಯಾದ ಮನೆಗಳನ್ನು ಕಟ್ಟಿಸಿ ಅವರನ್ನು ಅಲ್ಲಿಗೆ ಹಾಕಿದ್ದರೆ ಚೆನ್ನಾಗಿರುತ್ತಿತ್ತು. ಇದರಿಂದ ಏನು ಆಯಿತು ಎಂದರೆ ಒಂದು ಸ್ಲಂ ಹೋಗಿ ಮತ್ತೊಂದು ಸ್ಲಂ ಉಂಟಾಯಿತು. ಆದುದರಿಂದ ಮುಂದೆಯಾದರೂ ಕೂಡ ಈ ಬಗ್ಗೆ ಒಂದು ಸ್ಕೀಂ ಅನ್ನು ತೆಗೆದುಕೊಂಡು ಬನ್ನಿ. ಯಾವ ರೀತಿ ಎಂದರೆ ಮದ್ರಾಸ್ ಮತ್ತು ಕಾನ್‌ಪೂರ್‌ನಲ್ಲಿರುವ ಹಾಗೆ ಒಂದು ಜಾಗದಲ್ಲಿ ಒಂದು ಸ್ಲಂ ಅನ್ನು ತೆಗೆದು ಹಾಕಿದರೆ ಆ ಜಾಗದಲ್ಲಿ ಮತ್ತೊಂದು ಸ್ಲಂ ಆಗದೇ ಇರುವ ಹಾಗೆ ಅವರಿಗೆ ಸರಿಯಾದಂಥ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಏರ್ಪಾಡು ಮಾಡಬೇಕು. ನಾನು ಕೆಲವು ದಿವಸದ ಹಿಂದೆ ಕಾನ್‌ಪೂರ್‌ಗೆ ಹೋಗಿದ್ದೆ. ಅಲ್ಲಿ ಏನು ಮಾಡುತ್ತಿದ್ದಾರೆ ಎಂದರೆ ಸ್ಲಂ ಕ್ಲಿಯರೆನ್ಸ್ ಅಥಾರಿಟಿ ಎಂದು ಒಂದು ಅಥಾರಿಟಿ ಕ್ರಿಯೇಟ್ ಮಾಡಿದ್ದಾರೆ. ಆ ಅಥಾರಿಟಿಯವರು ಮೊದಲು ಒಂದು ಸ್ಲಂ ಅನ್ನು ಇಂಟರ್‌ಮೀಡಿಯೇಟ್‌ಗೆ ವರ್ಗಾವಣೆ ಮಾಡುತ್ತಾರೆ. ಆನಂತರ ಅವರಿಗೆ ಒಂದು ಹೊಸ ಜಾಗದಲ್ಲಿ ಮನೆಗಳನ್ನು ಕಟ್ಟಿಸಿದ ಮೇಲೆ ಆ ಇಂಟರ್‌ಮೀಡಿಯೇಟ್ ಜಾಗದಿಂದ ಆ ಹೊಸ ಜಾಗಕ್ಕೆ ಅದನ್ನು ಬದಲಾಯಿಸಿ ಕೊಡುತ್ತಾರೆ. ಆ ರೀತಿ ಮಾಡಿದರೆ ಒಬ್ಬ ಕಾರ್ಪೊರೇಟರೇ ಆಗಲಿ, ಒಬ್ಬ ಅಸೆಂಬ್ಲಿ ಮೆಂಬರೇ ಆಗಲಿ ಅಥವಾ ಬೇರೆ ಯಾವ ಅಧಿಕಾರಿಗಳಿಗೇ ಆಗಲಿ ಆ ಬಗ್ಗೆ ಇಂಟರ್‌ಫಿಯರ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಕಂಟೋನ್‌ಮೆಂಟ್ ಏರಿಯಾದಲ್ಲಿರುವ ಮರ್ಫಿ ಟೌನ್ ಮತ್ತು ಆಸ್ಟಿನ್ ಟೌನ್ ತೆಗೆದುಕೊಂಡರೆ ಅದು ಒಂದು ಸ್ಲಂ ಏರಿಯಾ ಆಗಿದ್ದಿತು. ಹಿಂದೆ ಬ್ರಿಟಿಷರು ಇದ್ದ ಕಾಲದಲ್ಲಿ ಆ ಸ್ಲಂಸ್‌ನ್ನು ತೆಗೆದು

(ಶ್ರೀ ಟಿ. ಆರ್ ಶಾಮಣ್ಣ)

ಅಲ್ಲಿ ಮಾದರಿ ಮನೆಗಳನ್ನು ಕಟ್ಟಿಸಿದ್ದಾರೆ. ಅದೇ ರೀತಿ ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಂಡು ಈ ಕೆಲಸ ಮಾಡಬೇಕು. ಅದು ಬಿಟ್ಟು ಅಲ್ಲಿ ಇದ್ದಂಥ ಗುಡಿಸಲುಗಳನ್ನು ಕಿತ್ತು ಬೇರೆ ಕಡೆ ಗುಡಿಸಲುಗಳನ್ನು ಕಟ್ಟಿಸಿದ ಪಕ್ಷದಲ್ಲಿ ಅದರಿಂದ ಯಾವ ವಿಧವಾದ ಪ್ರಯೋಜನವೂ ಆಗುವುದಿಲ್ಲ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಈ ಬಗ್ಗೆ ನಾನು ಕೆಲವು ಸಲಹೆಗಳನ್ನು ಹೇಳುತ್ತೇನೆ.

ಒಂದನೆಯದಾಗಿ ನನ್ನ ಮೊದಲನೇ ಪ್ರಶ್ನೆ ಏನೆಂದರೆ ಈ ಸ್ಲಂ ಕ್ಲಿಯರೆನ್ಸ್ ಸ್ಕೀಂಗೆ ಸುಮಾರು ಕಡೇ ಪಕ್ಷ 30 ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ. ಹಾಗಿದ್ದ ಪಕ್ಷದಲ್ಲಿ ಮಾತ್ರ ಈ ಬಗ್ಗೆ ಏನಾದರೂ ಒಂದು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದುದರಿಂದ ಸರ್ಕಾರದವರು ಈ ಬಗ್ಗೆ ಹಣದ ವ್ಯವಸ್ಥೆಯನ್ನು ಯಾವ ರೀತಿ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಏತಕ್ಕೆಂದರೆ ಈ ಕೆಲಸವನ್ನು ತೀವ್ರಗತಿಯಿಂದ ತೆಗೆದುಕೊಂಡು ಮಾಡಬೇಕೇ ಹೊರತು ನಿದಾನ ಮಾಡಿದಷ್ಟೂ ಕೂಡ ನಮ್ಮ ಹಣ ವ್ಯಯವಾಗುತ್ತದೆಯೇ ವಿನಾ ಅದರಿಂದ ಏನೂ ಪ್ರಯೋಜನವಾದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇದಕ್ಕೆ ಬೇಕಾದಂಥ 30 ಕೋಟಿ ರೂಪಾಯಿಗಳನ್ನು ಹೇಗೆ ಒದಗಿಸುತ್ತೀರಿ ಎಂಬುದಕ್ಕೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು ಎಂದು ನಾನು ಕೇಳುತ್ತೇನೆ.

ಇನ್ನು 2ನೆಯದಾಗಿ ಆ ಜಾಗದಲ್ಲಿ ಹೊಸ ಸ್ಲಂಸ್‌ಗಳು ಆಗದೇ ಇರುವ ಹಾಗೆ ತಕ್ಕ ಕಾರ್ಯಕ್ರಮವನ್ನು ಸರ್ಕಾರದವರು ಶೀಘ್ರವಾಗಿ ತೆಗೆದುಕೊಳ್ಳಬೇಕು. ಮತ್ತು ಅದಕ್ಕೆ ತಕ್ಕ ಹಣದ ವ್ಯವಸ್ಥೆ ಆಗಬೇಕು. ಮತ್ತು ಹೊಸ ಸ್ಲಂಸ್‌ಗಳು ಹುಟ್ಟದೇ ಇರುವ ಹಾಗೆ ನೋಡಿಕೊಳ್ಳಬೇಕು. ಮತ್ತು ಒಂದು ಸ್ಲಂಸ್‌ನ್ನು ತೆಗೆದು ಹಾಕುವಾಗ ಇನ್ನೊಂದು ಸ್ಲಂಸ್ ಮಾಡುವ ಹಾಗೆ ಅವಕಾಶ ಕೊಡ ಕೂಡದು. ಹಿಂದೆ ಕಳಾಸಿಪಾಳ್ಯದ ಸ್ಲಂಸ್‌ನ್ನು ಜಯನಗರಕ್ಕೆ ಷಿಫ್ಟ್ ಮಾಡಿದಾಗ ಇನ್ನೊಂದು ಸ್ಲಂಸ್ ಹುಟ್ಟಿಕೊಂಡಿತು. ಆ ರೀತಿ ಆಗಬಾರದು. ಮದ್ರಾಸ್‌ನಲ್ಲಿ ಡಿ. ಎಂ. ಕೆ ಯವರು ಏನು ಮಾಡಿದ್ದಾರೆ ಎಂದರೆ ಅವರಿಗೆ ಸ್ಲಂಸ್‌ನವರಿಂದ ಓಟು ಬರಬೇಕು ಎಂಬ ಉದ್ದೇಶದಿಂದಾಗಲಿ ಅಥವಾ ಬಡವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದಾಗಲಿ ಅವರು ಅನೇಕ ಸ್ಲಂಸ್‌ಗಳನ್ನು ಸರಿಮಾಡಿ ಅದಕ್ಕೆ ಹೊಸದಾಗಿ ಆಸ್ಬರ್ ಷೀಟ್ ಇಲ್ಲವೇ ಜಂಕ್ಷೀಟ್‌ಗಳನ್ನು ಹಾಕಿ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ನೋಡಿಕೊಂಡು ಬಂದಿರಬಹುದು. ಆದರೆ ನಾನು ಕಾನ್‌ಪೂರ್‌ನಲ್ಲಿ ಹೇಗಿದೆ ಎನ್ನುವುದನ್ನು ನೋಡಿದ್ದೇನೆ, ಆದುದರಿಂದ ಕಾನ್‌ಪೂರ್‌ನಲ್ಲಿ ಮಾಡಿರುವ

ಹಾಗೆ ಮಾಡಿದ್ದರೆ ಅವರು ಮನೆಗಳನ್ನು ಚೊಕ್ಕಟವಾಗಿ ಇಟ್ಟುಕೊಳ್ಳುತ್ತಾರೆ ಮತ್ತು ನೀವು ಮಾಡತಕ್ಕಂಥ ಕೆಲಸ ಪ್ರಯೋಜನಕ್ಕೆ ಬರುತ್ತದೆ. ಅದು ಬಿಟ್ಟು ಅಲ್ಲಿ ಸ್ಲಂಸ್ ಕಿತ್ತು ಬೇರೆಕಡೆ ಸ್ಲಂಸ್ ಬರುವ ಹಾಗೆ ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಸ್ವಲ್ಪ ಬೆಲೆಯಲ್ಲೇ ಅವರಿಗೆ ಭದ್ರವಾದ ಗುಡಿಸಲುಗಳನ್ನು ಕಟ್ಟಿಸುವುದಕ್ಕೆ ಸರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಹೇಳುತ್ತೇನೆ.

ಇನ್ನು ಇದರಲ್ಲಿ ಒಂದು ವಿಚಾರ ಏನೆಂದರೆ ಸ್ಲಂಸ್‌ಗಳನ್ನು ತೆಗೆದು ಹಾಕಿದಾಗ ಅದರ ಪಕ್ಕದಲ್ಲೇ ಮತ್ತೊಂದು ಜೋಪಡಿಯನ್ನು ಹಾಕುವುದಕ್ಕೆ ಅವಕಾಶ ಕೊಡಬೇಕು. ಯಾವುದನ್ನು ಮಾಡಬೇಕಾದರೂ ಕೂಡಾ ಒಂದು ಪ್ಲಾನ್‌ನಂತೆ ನಡೆದುಕೊಂಡರೆ ಒಳ್ಳೆಯ ಪ್ರಗತಿಯಾಗುತ್ತದೆ. ಆದುದರಿಂದ ಈ ಸ್ಕೀಮನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ಪ್ಲಾನ್‌ನಂತೆ ನಡೆಯುವುದನ್ನು ನೋಡಿಕೊಳ್ಳಬೇಕು. ಇಲ್ಲದೇ ಹೋದ ಪಕ್ಷದಲ್ಲಿ ಒಂದು ಸ್ಲಂಸ್ ತೆಗೆದರೆ ಅದರ ಪಕ್ಕದಲ್ಲಿ ಇನ್ನೊಂದು ಸ್ಲಂಸ್ ಹುಟ್ಟಿಕೊಂಡರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಈಗ ನಮಗೆ ಇರತಕ್ಕಂಥ ತೊಂದರೆ ಏನು ಎಂದರೆ ಸುಮಾರು 50 ಸ್ಲಂಸ್‌ಗಳು ಖಾಸಗೀ ಜಮೀನಿನಲ್ಲಿ ಇವೆ. ಆ ಜಮೀನಿನ ಖಾಸಗೀ ಮಾಲೀಕರು ಏನು ಮಾಡುತ್ತಿದ್ದಾರೆ ಎಂದರೆ ಒಂದೊಂದು ಗುಡಿಸಲಿಗೆ 10-15 ರೂಪಾಯಿ ಬಾಡಿಗೆ ತೆಗೆದುಕೊಂಡು ಹೆಚ್ಚಿನ ಲಾಭ ಅದರಿಂದ ಸಂಪಾದನೆ ಮಾಡುತ್ತಿದ್ದಾರೆ. ಆದುದರಿಂದ ಸೆಕ್ಷನ್ 3ರ ಪ್ರಕಾರ ಅವರಿಗೆ ಮೊದಲು ನೋಟೀಸ್ ಕೊಡಬೇಕು. ಯಾವ ಯಾವ ಖಾಸಗೀ ಜಮೀನಿನಲ್ಲಿ ಸ್ಲಂಸ್‌ಗಳು ಇವೆ ಅವರಿಗೆ ಸೆಕ್ಷನ್ 3ರ ಪ್ರಕಾರ ನೋಟೀಸ್ ಕೊಟ್ಟು ಸ್ಲಂ ಏರಿಯಾಸ್ ಎಂದು ಡಿಕ್ಲೇರ್ ಮಾಡುವುದಕ್ಕೆ ಮೊದಲು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈಗಾಗಲೇ ಈ ಬಗ್ಗೆ ಬಿಲ್ಲು ಬರುತ್ತಾ ಇದೆ ಎಂದು ತಿಳಿದುಕೊಂಡು ಅನೇಕರು ಅದನ್ನು ಪರಭಾರೆ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಆದುದರಿಂದ ಮೊದಲು ನೀವು ಅದನ್ನು ಡಿಕ್ಲರೇಷನ್ ಆಫ್ ಸ್ಲಂ ಏರಿಯಾಸ್ ಎಂದು ಘೋಷಣೆ ಮಾಡಿದರೆ ಅವಾಗ ಅವರು ಅದನ್ನು ಪರಭಾರೆ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಮಾಡಿದರೆ ಈ ಬಿಲ್ಲು ಆಕ್ಟ್ ಆದ ತಕ್ಷಣ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಎಂದು ತಿಳಿಸುತ್ತೇನೆ. ಅದುದರಿಂದ ನಾನು ಮೊದಲೇ ಹೇಳಿದಂತೆ ಅವರಿಗೆ ಸೆಕ್ಷನ್ 3 ರ ಪ್ರಕಾರ ನೋಟೀಸ್ ಕೊಡುವುದನ್ನು ಜಾರಿಗೆ ಮೊದಲು ತರಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ)

3-30 P. M.

ಕ್ಲಾಜ್ 4ರ ಪ್ರಕಾರ ಪ್ರಿವೆನ್‌ಷನ್ ಆಫ್ ಗ್ರೋತ್ ಆಫ್ ಸ್ಲಮ್ಸ್ ಬಗ್ಗೆ ಇದೆ. ಇದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಹೊಸ ಸ್ಲಮ್ಸ್ ಬರದ ಹಾಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಹೊಸ ಸರ್ಕಾರದ ಬಂದಮೇಲೆ ಬಸವಲಿಂಗಪ್ಪನವರು ಸ್ವಲ್ಪ ಬಡವರ ಬಗ್ಗೆ ಅನುತಾಪ ತೋರಿಸುತ್ತಾರೆಂದು ತಿಳಿದುಕೊಂಡು, 20-25 ಸ್ಲಮ್ಸ್ ಸೃಷ್ಟಿಯಾಗಿದೆ. ಬಡವರ ಬಗ್ಗೆ ಅನುಕಂಪ ಇದ್ದರೂ ಬಹಳ ಎಚ್ಚರಿಕೆಯಿಂದ ಇರಬೇಕೆಂದು ಹೇಳುತ್ತೇನೆ. ಏಕೆಂದರೆ ಅನೇಕ ಮನೆ ಮಠ ಇರತಕ್ಕವರು ತಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟು ಸ್ಲಮ್‌ನಲ್ಲಿ ಗುಡಿಸಲು ಹಾಕಿಕೊಂಡು ಮನೆಗಳನ್ನು ಮಾಡಿಕೊಂಡಿದ್ದಾರೆ. ಎಷ್ಟೋ ಜನ ಮನೆಗಳನ್ನು ಬಾಡಿಗೆಗೆ ಕೊಟ್ಟು ಸ್ಲಮ್‌ಗಳಲ್ಲಿ ವಾಸ ಮಾಡುತ್ತಾ ಅಲ್ಲಿ ಜಾಗ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಹೊಸ ಸ್ಲಮ್ ಸೃಷ್ಟಿ ಆಗದೇ ಇರುವಂತೆ ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು ಬಸವಲಿಂಗಪ್ಪನವರು ರಕ್ಷಣೆ ಕೊಡಬಲ್ಲರು, ದಕ್ಷತೆಯಿಂದ, ಕಠಿಣವಾಗಿ ಕಾರ್ಯಕ್ರಮವನ್ನು ಹೊಸ ಸ್ಲಮ್ ಸೃಷ್ಟಣೆ ಆಗದೇ ಇರುವುದಕ್ಕೆ ಏನೇನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಿ ಹೇಳುತ್ತೇನೆ ಒಂದು ಕಡೆ ಸ್ಲಮ್ ನಿರ್ಮೂಲ ಮಾಡುತ್ತೇವೆಂದು ಹೇಳುವುದು ಇನ್ನೊಂದು ಕಡೆ ಹೊಸದಾಗಿ ಸೃಷ್ಟಣೆ ಆದರೆ ಅದರಿಂದ ಪರಿಸ್ಥಿತಿ ಬದಲಾವಣೆಯಾಗುವುದಿಲ್ಲ. ಟ್ರಸ್ಟ್ ಬೋರ್ಡಿನವರು ಸೈಟುಗಳನ್ನು ಬಡವರಿಗೆ ಕೊಡುವಾಗ, ಹೊಸ ರೂಲ್ಸ್‌ಗಳನ್ನು ತೆಗೆದುಕೊಂಡು ಬಂದು ಬಡವರಿಗೆ ಅರ್ಧ ಬೆಲೆಯಲ್ಲಿ ಕೊಡಬೇಕು. ಶೆಡ್ಯೂಲ್ ಕ್ಲಾಸ್ಸಿನವರು ಕಂತುಗಳಲ್ಲಿ ದುಡ್ಡು ಕಟ್ಟಬೇಕು ಎಂದು ಹೇಳಿರುವುದನ್ನು ಸ್ವಾಗತ ಮಾಡುತ್ತೇನೆ. ಆದರೆ ಸ್ಲಮ್‌ಗಳಿಂದ ಅನುಕೂಲ ಪಡೆದುಕೊಳ್ಳುವ ಆಸೆ ಪಡುವವರಿಗೆ ಅವಕಾಶ ಕೊಡಕೂಡದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಮುಖ್ಯವಾಗಿ ಸ್ಲಮ್ಸ್‌ಗಳ ಬಗ್ಗೆ ತಂದಿರತಕ್ಕ ಕಲಮ್‌ಗಳಲ್ಲಿ ಓನರ್ಸ್ ಎಷ್ಟರಮಟ್ಟಿಗೆ ಮಾಡುತ್ತಾರೆಂದು ನನಗೆ ನಂಬಿಕೆಯಿಲ್ಲ. ಓನರ್ಸ್‌ಗೆ ಅವಕಾಶ ಕೊಡಬೇಕೆಂಬ ಉದ್ದೇಶದಿಂದ, ಓನರ್ಸ್ ಇಂಪ್ರೂವ್‌ಮೆಂಟ್ ಮಾಡಿ ತನ್ನ ಸ್ವಂತ ಖರ್ಚಿನಲ್ಲಿ ಮಾಡಬೇಕೆಂದು ಇದೆ. ಅಂಥವನಿಗೆ ಜಾಗ ಕೊಡಬೇಕು ಎಂದು ನಿಬಂಧನೆ ತೆಗೆದುಕೊಂಡು ಬಂದು ಅವನಿಗೆ ಹಾಕತಕ್ಕ ಬಾಡಿಗೆಗೆ ಒಂದು ಲಿಮಿಟ್ ಹಾಕಬೇಕು, ಅಂದರೆ ಸಿಕ್ಕಾಬಟ್ಟೆ ಬಾಡಿಗೆ ಹೆಚ್ಚಿಸಿದರೆ ಅನಾನುಕೂಲವಾಗುತ್ತದೆ. ಮಾಡತಕ್ಕ ರೂಲ್ಸ್‌ಗಳಲ್ಲಿ ನಿಬಂಧನೆಯಲ್ಲಿ ಅವರಿಗೆ ಅಲ್ಲಿರತಕ್ಕಂಥ ಮತ್ತು ಮಾಡಿರತಕ್ಕ ಜಾಗದಲ್ಲಿರತಕ್ಕ ಸ್ಲಮ್ ಡ್ವೆಲರ್ಸ್‌ಗಳಿಗೆ ಕೊಡಬೇಕು. ಬಾಡಿಗೆಯನ್ನು ಹೆಚ್ಚಿನ ರೀತಿಯಲ್ಲಿ ಹಾಕಕೂಡದು ಎಂದು ಹೇಳಿದೆ. ನಿಬಂಧನೆಗೆ ಸರಿಯಾದ

ರೀತಿಯಲ್ಲಿ ಹಾಕುವುದಕ್ಕೆ ಏರ್ಪಾಡು ಮಾಡಬೇಕು. ಈಗ ಬೆಂಗಳೂರಿನಲ್ಲಿರ ತಕ್ಕ ಸ್ಲಮ್ ಏರಿಯಾದ ಸರ್ವೆ ನಡೆಸಿದ್ದಾರೆ, ಪ್ರತಿಯೊಂದು ಸ್ಲಮ್ಮಿಗೂ ಹಾಗೂ ಸ್ಲಮ್‌ನಲ್ಲಿರತಕ್ಕವರ ಫೋಟೋ ತೆಗೆದುಕೊಂಡು ಯಾರು ಯಾರು ಇದ್ದರು ಎನ್ನತಕ್ಕ ಸರ್ವೆ ನಡೆಸಿದ್ದಾರೆ, ಸರ್ವೆಗಾಗಿ ಹಣ ಖರ್ಚಾದರೂ ಧಾಖಲೆ ಈಗ ಸಿಗುತ್ತದೆ. ಆದುದರಿಂದ ಈಗ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಆಕ್ಟ್ ಆಗಿ ಜಾರಿಗೆ ಬರುವ ಹೊತ್ತಿಗೆ ಪ್ಲಾನ್ ಪ್ರಿಪೇರ್ ಮಾಡಿ, ಯಾವ ಯಾವ ಸ್ಲಮ್ಸ್ ಯಾವರೀತಿ ತೆಗೆಯಬೇಕೆಂದು ಫಾಸ್ಟ್ ಪ್ರೋಗ್ರಾಮ್ ಹಾಕಿಕೊಳ್ಳಬೇಕು. ಪ್ರೋಗ್ರಾಮ್ಸ್ ಹೇಗೆ ಪ್ರೋಗ್ರೆಸ್ ಆಗಿದೆ ಎಂದು ನೋಡುವುದಕ್ಕೆ ಅನುಕೂಲ ವಾಗುತ್ತದೆ. ಫಸ್ಟ್ ಫೇಜಿನಲ್ಲಿ, ಎರಡನೆಯ ಫೇಜಿನಲ್ಲಿ, 3 ನೇ ಫೇಜಿನಲ್ಲಿ ಯಾವಾಗ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಸಮಗ್ರ ಪ್ರೋಗ್ರಾಮ್ ಹಾಕಿ ಕೊಂಡು ಅದರ ಪ್ರಕಾರ ನಡೆಸಿಕೊಂಡು ಬರಬೇಕು. ಎಲ್ಲಾ ಕೆಲಸಗಳನ್ನು ಒಟ್ಟಿಗೆ ತೆಗೆದುಕೊಂಡರೆ ಯಾವ ಕೆಲಸಗಳೂ ಸಮರ್ಪಕವಾಗುವುದಿಲ್ಲ. ಆದುದ ರಿಂದ ಪ್ರೋಗ್ರಾಮ್ ಹಾಕಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಸ್ಲಮ್‌ಗಳಲ್ಲಿ ಸರಿಯಾಗಿ ಇಲ್ಲದೆ ಇರತಕ್ಕಂಥದನ್ನು ಡೆಸಿಮೆಂಟಲ್ ಮಾಡಬೇಕು. ಗುಡಿಸಲು ಗಳು ಅದರಲ್ಲಿ ಬರುತ್ತದೆಯೋ ಎಂದು ನೋಡಬೇಕು.

ಇನ್ನೊಂದು ಪ್ರಶ್ನೆ, ಮುಖ್ಯವಾಗಿ ತೀರ್ಮಾನ ತೆಗೆದುಕೊಳ್ಳಬೇಕು. ಮಲ್ಟಿ ಸ್ಟೋರೆಡ್ ಬಿಲ್ಡಿಂಗ್ ಆಗಬೇಕೇ ಅಥವಾ ಟೆನಮೆಂಟಲ್ ಕ್ವಾರ್ಟರ್ಸ್ ಆಗಬೇಕೇ ಎಂದು ತೀರ್ಮಾನ ತೆಗೆದುಕೊಳ್ಳಬೇಕು ಅದರಲ್ಲಿ ಮುಖ್ಯವಾದ ಅಡಚಣೆ ಏನು ಎಂದರೆ ಅನೇಕ ಸ್ಲಮ್‌ಗಳಲ್ಲಿ ವಾಸಮಾಡತಕ್ಕ ಜನ ಸಾಧಾರಣವಾಗಿ ಮಾರ್ಕೆಟಿ ನಲ್ಲಿ, ಮಂಡಿಯ ಪೇಟೆಯಲ್ಲಿ ಕೆಲಸ ಮಾಡುವವರು ಅಲ್ಲಿಯೇ ಹತ್ತಿರದಲ್ಲಿರ ಬೇಕೆಂದು ಪ್ರಯತ್ನ ಪಡುತ್ತಾರೆ. ಅಂಥ ಜಾಗದಲ್ಲಿ ಮಲ್ಟಿ ಸ್ಟೋರೆಡ್ ಬಿಲ್ಡಿಂಗ್ ಇರಬೇಕು. ಪಟ್ಟಣದ ಮತ್ತಮುತ್ತ ಮಲ್ಟಿ ಸ್ಟೋರೆಡ್ ಬಿಲ್ಡಿಂಗ್ ಇದ್ದು, ಪೇಟೆಯಿಂದ ಹೊರಗಡೆ ಕಟ್ಟಬೇಕಾದರೆ ಟೆನಮೆಂಟಲ್ ಕ್ವಾರ್ಟರ್ಸ್ ಮಾಡುವುದು ಒಳ್ಳೆಯದು ಎಂದು ಇಟ್ಟುಕೊಳ್ಳಬೇಕು. ಸಿಟಿಗಳಲ್ಲಿ ಜನಸಂಖ್ಯೆ ಜಾಸ್ತಿ. ಅಲ್ಲಿ ಮಲ್ಟಿ ಸ್ಟೋರೆಡ್ ಬಿಲ್ಡಿಂಗ್ ಆಗಬೇಕು ಅಗದೇ ಹೋದ ಪಕ್ಷದಲ್ಲಿ ಅಲ್ಲಿರತಕ್ಕ ಎಲ್ಲರಿಗೂ ಜಾಗ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಯಾರಿಗೆ ಮಲ್ಟಿ ಬಿಲ್ಡಿಂಗ್ ವಾಸ ಮಾಡುವುದಕ್ಕೆ ಸಾಧ್ಯ ವಿಲ್ಲ. ಅಂಥವರಿಗೆ ಹೊರಗಡೆ ಹೊಸದಾಗಿ ಹೊಸ ಮನೆಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಬೇಕು. ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಜವಾಬ್ದಾರಿ ಈಗ ಕಾರ್ಪೋರೇಷನ್ ಮೇಲೆ ಸ್ವಲ್ಪ ಇದೆ. ಟ್ರಸ್ಟ್ ಬೋರ್ಡಿನ ಮೇಲೂ ಸ್ವಲ್ಪ ಇದೆ, ಸರ್ಕಾರದ ಮೇಲೂ ಸ್ವಲ್ಪ ಜವಾಬ್ದಾರಿ ಇದೆ. ಆದುದರಿಂದ ಡಿಫಿಕಲ್ಟಿ ಅಥಾರಿಟೀಸ್ ಎಲ್ಲಾ ತೆಗೆದು ಸ್ಲಮ್ ಕ್ಲಿಯರೆನ್ಸ್ ಆದ ತಕ್ಷಣ ಸ್ಲಮ್‌ಗೆ ಸಂಬಂಧ ಪಟ್ಟ ವಿಚಾರವನ್ನು ಎಲ್ಲಾ ಪೂರ್ಣವಾಗಿ ಯಾವ ರೀತಿ ಬಂದು ವಾಟರ್ ಸಪ್ಲೈ

(ಶ್ರೀ ಟಿ. ಆರ್ ಶಾಮಣ್ಣ)

ಬೋರ್ಡಿಗೆ ಪೂರ್ಣವಾದ ನೀರಿನ ಸರಬರಾಯಿ ಮತ್ತು ಹಂಚಿಕೆಗೆ ಯಾವ ರೀತಿ ಒಪ್ಪಿಸಿದ್ದಾರೆ, ಅದೇ ರೀತಿ ಸ್ಲಮ್ಸ್‌ಗೆ ಸಂಬಂಧಪಟ್ಟ ವಿಚಾರವನ್ನು ಪೂರ್ತಿಯಾಗಿ ಒಂದು ಬೋರ್ಡಿಗೆ ವಹಿಸಬೇಕು. ಅನೇಕ ವಿಧವಾದ ಸಂಸ್ಥೆಗಳು ಕೆಲಸ ಮಾಡುತ್ತಿದ್ದರೂ ಕೆಲಸಗಳು ತೀವ್ರವಾಗಿ ಆಗುವುದಿಲ್ಲ. ಆದುದರಿಂದ ಸ್ಲಮ್ಸ್ ಕ್ಲಿಯರ್ ಪೂರ್ತಿ ಆದ ಮೇಲೆ ಟ್ರಸ್ಟ್ ಬೋರ್ಡ್, ಕಾರ್ಪೊರೇಷನ್‌ಗೆ ಹ್ಯಾಂಡ್ ಓವರ್ ಆಗುವ ತನಕ ಬೋರ್ಡ್ ಪೂರ್ತಿ ಕೆಲಸವನ್ನು ನಡೆಸಿಕೊಂಡು ಹೋಗಬೇಕು. ಈ ಸಮಸ್ಯೆ ಬಗೆಹರಿಸುವ ತನಕ ಬೋರ್ಡಿಗೆ ಅಧಿಕಾರ ಕೊಡಬೇಕು. ನಮ್ಮಲ್ಲಿ ಲೋಕಲ್ ಬಾಡಿಸ್ ಕೆಲಸ ತಡವಾಗುವುದರಿಂದ ಬೋರ್ಡಿಗೆ ಕೊಡಬೇಕು ಕಾರ್ಪೊರೇಷನ್ ಆಕ್ಟ್ ತಿದ್ದುಪಡಿ ತರಬೇಕಾದ ಪಕ್ಷದಲ್ಲಿ, ಟ್ರಸ್ಟ್ ಬೋರ್ಡ್ ಆಕ್ಟ್ ತಿದ್ದುಪಡಿ ತರಬೇಕಾದ ಪಕ್ಷದಲ್ಲಿ ಒಂದು ಸಮಗ್ರ ಕೆಲಸಗಳನ್ನು ಬೋರ್ಡಿಗೆ ಕೊಟ್ಟರೆ ಕೆಲಸಕ್ಕೆ ಅಡಚಣೆಯಾಗುವುದಿಲ್ಲ. ಸ್ಲಮ್ ಕ್ಲಿಯರೆನ್ಸ್ 20 ವರ್ಷದಲ್ಲಿ ಕ್ಲಿಯರ್ ಆಗುತ್ತದೆ. ಆದುದರಿಂದ ಒಂದು ಪಾಸ್ಟ್ ಪ್ರೋಗ್ರಾಮ್ ಹಾಕಿಕೊಳ್ಳಬೇಕು. ಬಸವಲಿಂಗಪ್ಪನವರಿಗೆ ಇರುವ ಶ್ರದ್ಧೆ ಮುಂದೆ ಬರುವ ಮಂತ್ರಿಗಳಿಗೆ ಇಲ್ಲದೇ ಹೋಗಬೇಕು. ಒಂದು ಪಾಸ್ಟ್ ಮಾಸ್ಟರ್ ಪ್ಲಾನ್ ರೀತಿಯಲ್ಲಿ ಪ್ರಿಪೇರ್ ಮಾಡಿ ಅದೇ ಪ್ರಕಾರ ನಡೆಯಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಟ್ಟು ಹೋದರೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಫೈನಾನ್ಸ್ ಪ್ರೋಗ್ರಾಮ್ ಮತ್ತು ಇದನ್ನು ಯಾವ ರೀತಿ ನಡೆಸಬೇಕು ಎನ್ನತಕ್ಕದ್ದು ಎಲ್ಲಕ್ಕಿಂತ ಹೆಚ್ಚಾಗಿ ಸ್ವಲ್ಪ ಮಟ್ಟಿಗೆ, ನೀರಿನ ಸೌಕರ್ಯ ಮತ್ತು ಚೊಕ್ಕಟವಾಗಿ ಇಟ್ಟುಕೊಂಡಿರತಕ್ಕದರ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದ ಇರಬೇಕು ಇದರ ಬಗ್ಗೆ ಕನಿಕರ ತೋರಿಸುವುದರಿಂದ ಖಂಡಿತ ಒಳ್ಳೆಯದಾಗುವುದಿಲ್ಲ.

ಸಾಧಾರಣವಾಗಿ ಸ್ಲಂ ಏರಿಯಾದಲ್ಲಿರತಕ್ಕವರಿಗೆ ಮನೆಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳತಕ್ಕ ಅಭ್ಯಾಸ ಇರುವುದಿಲ್ಲ. ಆದುದರಿಂದ ಇಲ್ಲಿ ಸ್ಲಂ ಅನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದಕ್ಕೆ ಏನ ದರೂ ಒಂದು ರೆಗ್ಯುಲೇಷನ್ ಮಾಡಿದರೆ, ಇದು ಒಂದು ಉತ್ತಮವಾದ ಕೆಲಸ ಎಂದು ಕಾಣುತ್ತದೆ. ಸ್ಲಂ ನಲ್ಲಿ ವಾಸಮಾಡತಕ್ಕವರಿಗೆ ದುರ್ನಾತ, ಕೊಳಚೆ ಪ್ರದೇಶದಲ್ಲಿ ವಾಸ ಮಾಡುವುದು ಅಭ್ಯಾಸವಾಗಿದೆ. ನಗರದಲ್ಲಿ ಚೊಕ್ಕಟವಾಗಿ ಇರುವ ರೂಢಿ ಬಂದಿರುವುದಿಲ್ಲ. ಚೊಕ್ಕಟವಾಗಿ ಇರುವ ರೂಢಿ ಬರುವ ತನಕ ಸರಿಯಾದ ರೀತಿಯಲ್ಲಿ ಸ್ಲಂ ಗಳನ್ನು ಇಟ್ಟುಕೊಳ್ಳುವುದಕ್ಕೆ ತಕ್ಕ ರೂಲ್ಸ್ ರೆಗ್ಯುಲೇಷನ್ಸ್ ಮಾಡಬೇಕು. ಆಗಿಂದಾಗ್ಯೆ ಸ್ಲಂ ಗಳನ್ನು ಚೊಕ್ಕಟವಾಗಿ ಇಟ್ಟುಕೊಂಡ ಪಕ್ಷದಲ್ಲಿ ಸ್ಲಂನಲ್ಲಿ ಚೊಕ್ಕಟವಾಗಿ ಇರುವುದಕ್ಕೆ ಅನುಕೂಲವಾಗುತ್ತದೆ. ಅದರ ಬಗ್ಗೆ ರೂಲ್ಸ್ ಮಾಡಬೇಕು.

ಎಂದು ಹೇಳುತ್ತೇನೆ. ಅಮೆಂಡ್‌ಮೆಂಟ್ ಪೇಯಬಲ್ ಎನ್ನುವ ಬಗ್ಗೆ ಆಗಲೇ ಮಾನ್ಯ ಮಂತ್ರಿಗಳು ತಿಳಿಸಿದ ಹಾಗೆ 100 ಟೈಮ್ಸ್ ಪ್ರಾಪರ್ಟಿ ಟ್ಯಾಕ್ಸ್ ಎಂದು ತಿಳಿಸಿದ್ದಾರೆ. ಮುನಿಸಿಪಾಲಿಟಿಗೆ ಕನ್‌ವರ್ಟ್ ಆಗಿರತಕ್ಕವರು ಪ್ರಾಪರ್ಟಿ ಟ್ಯಾಕ್ಸ್ ಕೊಡುತ್ತಾರೆ. ಅನೇಕ ಲ್ಯಾಂಡ್ಸ್ ಇನ್ನೂ ಕೂಡ ರೆವಿನ್ಯೂ ಸರ್ವೆ ನಂಬರಿನಲ್ಲೇ ಇವೆ. ರೆವಿನ್ಯೂ ಸರ್ವೆ ನಂಬರ್ ಬಗ್ಗೆ ಭೂಕಂದಾಯ ಏನು ತೆಗೆದುಕೊಳ್ಳುತ್ತಾರೆ, ಅದರ ಬಗ್ಗೆ ಬೇರೆ ಏನಾದರೂ ಯೋಚನೆ ಮಾಡುತ್ತಾರೆಯೋ ಎಂದು ನೋಡಬೇಕಾಗುತ್ತದೆ. ಕನ್‌ವರ್ಟ್ ಆಗಿದ್ದರೆ ಮುನಿಸಿಪಲ್ ಟ್ಯಾಕ್ಸ್ ಜಾಸ್ತಿಯಾಗಿರುತ್ತದೆ. ಸರ್ವೆ ನಂಬರ್ ಆಗಿದ್ದರೆ, ಎಕರೆಗೆ ಒಂದೆರಡು, ಮೂರು ರೂಪಾಯಿ ಇರುತ್ತದೆ. ಅನೇಕ ಸರ್ವೆ ನಂಬರಗಳಲ್ಲಿ ಸ್ಲಂ ಇರುವುದು ಗೊತ್ತಿದೆ. ಸರ್ವೆ ನಂಬರ್ ಇರುವ ಬಗ್ಗೆ ಒಂದು ಎನೇಬಲ್ ಕ್ಲಾಸ್ ಕೊಟ್ಟಿದ್ದೀರಿ. ಯಾವುದಾದರೂ ಜಾಗಕ್ಕೆ ಟ್ಯಾಕ್ಸ್ ಹಾಕುವುದಕ್ಕೆ ಆಗದೇ ಹೋದ ಪಕ್ಷದಲ್ಲಿ ನೈಬರಿಂಗ್ ಏರಿಯಾದಲ್ಲಿ ಇದ್ದ ಹಾಗೆ ಕೊಡಬೇಕು ಎಂದು ಹೇಳಿದ್ದೀರಿ. ಅದರ ಬಗ್ಗೆ ನ್ಯೂನತೆ ಇದ್ದರೆ, ಸರಿಯಾದ ರೀತಿಯಲ್ಲಿ ಸರ್ವೆ ನಂಬರ್ ಬಗ್ಗೆ ಏನು ಮಾಡಬೇಕು ಎಂದು ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆ ಮೇಲೆ ಅಕ್ವಿಸಿಷನ್ ಬಗ್ಗೆ ಕೇಸ್‌ಗಳು ಸರ್ಕಾರದ ಪರವಾಗಿ ಸುಪ್ರೀಂ ಕೋರ್ಟಿಗೆ, ಹೈಕೋರ್ಟಿಗೆ ಹೋಗಿ ಫೈಲ್ ಆಗಿವೆ. ಆದುದರಿಂದ ಲಾ ಡಿಪಾರ್ಟ್‌ಮೆಂಟ್ ಕನ್‌ಸಲ್ಟ್ ಮಾಡಿ ಅಕ್ವಿಸಿಷನ್‌ನಲ್ಲಿ ಪುನಃ ಯಾವ ಅಡಚಣೆ ಬಾರದಹಾಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಈ ಬಿಲ್ ಬಂದಮೇಲೂ ಕೂಡ ಯಾವುದಾದರೂ ಲೋಪದೋಷ ಇದ್ದರೆ, ಸರಿಯಾದ ರೀತಿಯಲ್ಲಿ ನಡೆಯದೇ ಹೋದರೆ ಅಕ್ವಿಸಿಷನ್ ತೊಂದರೆ ಬರುವಂಥಾದ್ದು ಇದೆ. ಅನೇಕರು ತಡಮಾಡುವ ಉದ್ದೇಶದಿಂದ ಅನೇಕರು ಇಂಟರೆಸ್ಟ್ ಆಗಿರುತ್ತಾರೆ. ಆದುದರಿಂದ ಅಕ್ವಿಸಿಷನ್ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಆ ಮೇಲೆ 28ನೇ ಕ್ಲಾಸ್‌ನಲ್ಲಿ Proceedings for eviction of tenants not to be taken without permission of the prescribed authority ಎಂದು ಹೇಳಿದ್ದೀರಿ. ಬಲ ಇರುವವರು ದುಡ್ಡು ಇರುವವರು ನಾನಾ ಕಾರಣಗಳಿಂದ ಎವಿಕ್ಟ್ ಮಾಡುವ ಬಗ್ಗೆ ಸಾಕಾದಷ್ಟು ಪ್ರಭಾವವನ್ನು ಬೀರುತ್ತಾರೆ. ಅವರು ಎವಿಕ್ಟ್ ಆಗದ ಹಾಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

(ಶ್ರೀ ಟಿ. ಆರ್. ಶಾಮಣ್ಣ)

Rent of building in slum areas ಬಗ್ಗೆ ಒಂದು ವಿಚಾರ ಹೇಳ ಬೇಕಾಗಿದೆ. ಈಗ ಕಾರ್ಪೊರೇಷನ್‌ವನರು ಅನೇಕ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ಸ್ ಮತ್ತು ಅನೇಕ ಟೆನ್‌ಮೆಂಟಲ್ ಕ್ವಾಟರ್ಸ್ ಕಟ್ಟಿದ್ದಾರೆ. ನಾನು ಹೇಳುವುದಾದರೆ ಮುನಿಸಿಪಲ್ ಪ್ರಾಪರ್ಟಿ ಈಸ್ ನೋ ಮೆನ್ ಪ್ರಾಪರ್ಟಿ ಎನ್ನುವುದು ಆಗಿದೆ. ಬೆಂಗಳೂರು ನಗರದಲ್ಲಿ 2500 ಮನೆಗಳಿವೆ. ಆ ಮನೆ ಗಳ ಬಾಡಿಗೆ ಒಂದು, ಒಂದೂವರೆ ರೂಪಾಯಿನಿಂದ ಹಿಡಿದು 50 ರೂಪಾಯಿನ ವರೆಗೆ ಇದೆ. ಒಟ್ಟು ಬರತಕ್ಕ ಬಾಡಿಗೆ ಒಂದು ಲಕ್ಷ, 25,000. ರಿಪೇರಿ 1 ಲಕ್ಷ, 30,000. ಅದರ ಜೊತೆಗೆ ಲಾಸ್ ಆಫ್ ಪ್ರಾಪರ್ಟಿ ಟ್ಯಾಕ್ಸ್ 6 ಲಕ್ಷ ರೂ. ಮನೆ ಫ್ರೀ ಕೊಟ್ಟರೂ ಕೂಡ ಕಾರ್ಪೊರೇಷನ್‌ಗೆ 6 ಲಕ್ಷ ರೂಪಾಯಿ ಪ್ರಾಪರ್ಟಿ ಟ್ಯಾಕ್ಸ್ ಬರುತ್ತದೆ. ಅನೇಕ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್‌ನ್ನು ಸ್ಲಂನಲ್ಲಿ ವಾಸ ಮಾಡತಕ್ಕವರಿಗೆ ಕೊಟ್ಟಿದ್ದಾರೆ. ಸುಮಾರು 18 ಲಕ್ಷ ರೂಪಾಯಿಗಳು ಬಾಕಿ ಇವೆ. ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ಮತ್ತು ಬೇರೆ ಕಡೆ ಕೆಲವು ಲಕ್ಷ ರೂಪಾಯಿಗಳು ಬಾಕಿ ಇದೆ. ಇದು ಹೀಗೇ ಬೆಳೆದುಕೊಂಡು ಹೋದ ಪಕ್ಷದಲ್ಲಿ ಬಾಕಿ ಕೊಡುವು ದಕ್ಕೂ ಕಷ್ಟವಾಗುತ್ತದೆ, ವಸೂಲು ಮಾಡುವುದಕ್ಕೂ ಕಷ್ಟವಾಗುತ್ತದೆ. ಎಷ್ಟು ಕಡಿಮೆ ಬೇಕಾದರೂ ಬಾಕಿ ಫಿಕ್ಸ್ ಮಾಡಿ ಆದರೆ ಬಾಕಿ ಸರಿಯಾದ ರೀತಿ ಯಲ್ಲಿ ವಸೂಲು ಮಾಡದೇ ಹೋದ ಪಕ್ಷದಲ್ಲಿ ಅದು ಭೂತಕಾರವಾಗಿ ಬೆಳೆದು ಅವರಿಗೆ ಬಾಕಿ ಕೊಡುವುದಕ್ಕೆ ಕಷ್ಟವಾಗುತ್ತದೆ ಬೇರೆಯವರ ಮನೆಯಾದರೆ ಬಾಕಿ ಬಾಡಿಗೆ ಕೊಡುತ್ತಾರೆ. ಕಾರ್ಪೊರೇಷನ್ ಮನೆ ಆಯಿತೋ ಖಂಡಿತ ಬಾಕಿ ಕೊಡುವುದಿಲ್ಲ. ಬಾಕಿ ವಸೂಲು ಮಾಡುವ ಬಗ್ಗೆ ತೀವ್ರ ಕ್ರಮ ತೆಗೆದು ಕೊಳ್ಳದೇ ಹೋದ ಪಕ್ಷದಲ್ಲಿ, ಅದರಿಂದ ಬಾಕಿ ಬಾರದೇ ಅನಾನುಕೂಲವಾಗು ತ್ತದೆ. ಬಾಕಿ ಎಷ್ಟು ಬೇಕಾದರೂ ಮಿನಿಮಂ ಫಿಕ್ಸ್ ಮಾಡಿ. ಆದರೆ ಅದನ್ನು ವಸೂಲು ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದ ಪಕ್ಷದಲ್ಲಿ ಕೋಟ್ಯಾಂತರ ರೂಪಾಯಿ ಬಾರದೇ ಹೋಗಿ, ಆ ಹೊರೆಯನ್ನು ಲೋಕಲ್ ಬಾಡೀಸ್ ಮತ್ತು ಸರ್ಕಾರ ಹೊರಬೇಕಾದ ಪ್ರಮೇಯ ಬರುತ್ತದೆ. ಆದುದರಿಂದ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಮೈಸೂರು ಸ್ಲಂ ಕ್ಲಿಯರನ್ಸ್ ಬೋರ್ಡ್ ಸ್ಥಾಪನೆ ಆಗಬೇಕು. ಅರ್ಬನ್ ಕ್ಲಿಯರನ್ಸ್ ಬೋರ್ಡ್ ಬಗ್ಗೆ ಸಾಕಷ್ಟು ಟೀಕೆ ಮಾಡಿ, ಲೋಕಲ್ ಬಾಡೀಸ್ ಇಗ್ನೋರ್ ಮಾಡಿ ಪೂರ್ಣ ಅಧಿಕಾರ ಅವರು ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ. ಇದರ ಎಸ್ಟಾಬ್ಲಿಷ್‌ಮೆಂಟ್ ಬಗ್ಗೆ ಹೆಚ್ಚು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಕಾನ್‌ಪುರ ಸ್ಲಂ ಕ್ಲಿಯರಿಂಗ್ ಅಥಾರಿಟಿಗೆ ಪೂರ್ತಿಯಾಗಿ ಅಧಿಕಾರ ಕೊಟ್ಟಿರು ವುದರಿಂದ ಅಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಾ ಇದೆ. ಒಳ್ಳೆಯ ಕೆಲಸ ನಡೆಯ ಬೇಕಾದ ಪಕ್ಷದಲ್ಲಿ, ದಕ್ಷರಾದ ಅಧಿಕಾರಿಗಳು ಇರಬೇಕು, ನಿಷ್ಪಕ್ಷಪಾತವಾಗಿ ಲಂಚ

ರುಷುವತ್ತು ತೆಗೆದುಕೊಳ್ಳದೇ ಕೆಲಸವನ್ನು ಸಮರ್ಪಕವಾಗಿ ಮಾಡುವವರು ಇರಬೇಕು. ನಿಮ್ಮ ಕೆಲಸ ಶಾಶ್ವತವಾಗಿ ಆಗಬೇಕಾದರೆ, ಚೆನ್ನಾಗಿ ಆಗಬೇಕಾದರೆ, ಜಾಗ್ರತೆ ಆಗಬೇಕಾದರೆ, ಒಳ್ಳೆಯ ಹೆಸರು ಬರಬೇಕಾದ ಪಕ್ಷದಲ್ಲಿ, ತಮ್ಮ ಬೋರ್ಡಿನಲ್ಲಿ, ದಾಕ್ಷಿಣ್ಯಕ್ಕಾಗಲೀ, ಒತ್ತಡಕ್ಕಾಗಲೀ, ರಾಜಕೀಯ ಕಾರಣಕ್ಕಾಗಲೀ, ಬೋರ್ಡ್ ಸೃಷ್ಟನೆ ಮಾಡುವುದಕ್ಕೆ ಹೋಗಬೇಡಿ. ಯಾರು ನಿಷ್ಠೆಯಿಂದ ಕೆಲಸ ಮಾಡುತ್ತಾರೆ, ಶ್ರದ್ಧೆಯಿಂದ ಯಾರು ಇರುತ್ತಾರೆ, ಮತ್ತು ಯಾರು ಕೆಲಸವನ್ನು ಸಮರ್ಥನೆಯಿಂದ ಮಾಡಿಕೊಂಡು ಹೋಗುತ್ತಾರೆ, ಅಂಥವರನ್ನು ಹಾಕುವುದಕ್ಕೆ ತಾವು ದಯವಿಟ್ಟು ಪ್ರಯತ್ನ ಪಡಬೇಕು. ನನ್ನ ಅನುಭವದಲ್ಲಿ ಟ್ರಸ್ಟ್ ಬೋರ್ಡ್‌ನಲ್ಲಿ ಅಗಲಿ, ಹೌಸಿಂಗ್ ಬೋರ್ಡ್‌ನಲ್ಲಿ ಆಗಲಿ ಸಮರ್ಪಕವಾಗಿ ಕೆಲಸ ನಡೆಯುತ್ತಾ ಇಲ್ಲ. ಅಲ್ಲಿ ಲಂಚರುಷುವತ್ತುಗಳ ಹಾವಳಿಯಿಂದ ಕೆಲಸಕಾರ್ಯಗಳಿಗೆ ಧಕ್ಕೆ ಬಂದಿರತಕ್ಕದ್ದನ್ನು ನಾನು ವ್ಯಕ್ತಪಡಿಸದೇ ಹೋದರೂ, ನಿನುಗೆ ಅದರ ಮನವರಿಕೆಯಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತಿದೆ. ಇವು ಸ್ಪೆಷಲ್ ಟೈಪ್ ವರ್ಕ್, ಪವಿತ್ರವಾದ ಕೆಲಸವಾಗಿರುವುದರಿಂದ, ನಿಷ್ಠೆಯಿಂದ ಇರುವವರನ್ನು, ಹಣಕ್ಕೆ ಆಸೆ ಪಡದೆ ಇರುವವರನ್ನು ನೋಡಿ, ಹುಡುಕಿ ಬೋರ್ಡ್ ಮೆಂಬರ್ಸ್ ಮಾಡಬೇಕು ಮತ್ತು ಒಳ್ಳೆಯ ತಜ್ಞರನ್ನು ಕೂಡಲೇ ಹಾಕಬೇಕು ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಬೋರ್ಡಿನಲ್ಲಿ ತಾವು ಯಾವುದೇ ಆದೇಶಗಳನ್ನು ಕೊಟ್ಟು ಅದರ ಬಗ್ಗೆ ಯಾರು ಏನು ಹೇಳಿದರೂ ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡಬೇಕು. ಎಷ್ಟು ನೀವು ಚೆನ್ನಾಗಿ ಕೆಲಸ ಮಾಡುತ್ತೀರೋ ಅಷ್ಟು ಅನುಕೂಲವಾಗುತ್ತದೆ. ತಾವು ಇದರ ಬಗ್ಗೆ ಪೂರ್ಣ ಅಧಿಕಾರ ವಹಿಸಿ ಪರ್ಸನಲ್ ಇಂಟರೆಸ್ಟ್ ತೆಗೆದುಕೊಂಡು ಕೆಲಸ ಮಾಡಬೇಕೆಂದು ಹೇಳುತ್ತೇನೆ. ಒಂದುವರೆ ಕೋಟಿ ರೂಪಾಯಿ ಉಪಯೋಗಿಸಬೇಕೆಂದು ಹೇಳಿದರೆ ಅಲ್ಲಿ 50 ಲಕ್ಷ ರೂಪಾಯಿ ಕೂಡ ಖರ್ಚು ಮಾಡಿಲ್ಲ ಎಂದು ತಾವೇ ಎಷ್ಟೋ ಸಾರಿ ಮಂತ್ರಿಗಳಾದ ಮೇಲೆ ತೀವ್ರವಾದ ಆಕ್ಷೇಪಣೆ ಮಾಡಿದ್ದೀರಿ ಅದರ ಮೇಲೆ ಇನ್ನು ಮುಂದೆ ಯಾವ ಅಧಿಕಾರಿ ಯಾದರೂ ಸರಿ ಸರಿಯಾಗಿ ಎಷ್ಟು ಕೆಲಸಕಾರ್ಯಗಳು ಮಾಡಬೇಕೆಂದು ಸರ್ಕಾರ ದಿಂದಲೇ ಆಗಲಿ ಸಂಸ್ಥೆಯಿಂದಲೇ ಆಗಲಿ ಆದೇಶವಿದ್ದರೆ ಆ ರೀತಿ ಕೆಲಸಕಾರ್ಯ ಗಳನ್ನು ಮಾಡಬೇಕು. ಆ ರೀತಿ ಮಾಡದೆ ಇದ್ದರೆ ಅವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ತಾವು ಹೇಳಿದ ಕೆಲಸ ಕಾರ್ಯಗಳು ಸರಿಯಾಗಿ ಆಗಬೇಕಾದ ಪಕ್ಷದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿಸುತ್ತೀರೆಂದು ತಮ್ಮಲ್ಲಿ ಪೂರ್ಣ ನಂಬಿಕೆ ಇರುವುದರಿಂದ ಇದನ್ನು ತಾವು ಪರ್ಸನಲ್ ಇಂಟರೆಸ್ಟ್ ತೆಗೆದುಕೊಂಡು ಮಾಡುತ್ತೀರೆಂದು ಹೇಳುತ್ತಿದ್ದೇನೆ. ಬೆಂಗಳೂರಿನಲ್ಲಿ ಇರತಕ್ಕ ಕಷ್ಟಗಳ ಪೈಕಿ ಸೊಳ್ಳೆಗಳ ಕಾಟ ಮೊದಲನೆಯದು, ಕುಡಿಯುವ ನೀರಿನ ತೊಂದರೆ ಎರಡನೆಯದು, ಮೂರನೆಯದು ಸ್ಲಮ್ ಕ್ಲಿಯ

(ಶ್ರೀ ಟಿ. ಆರ್. ಶಾಮಣ್ಣ)

ರೆನ್ಸ್, ಇವುಗಳನ್ನು ನಿವಾರಿಸಿದರೆ ಬೆಂಗಳೂರು ನಾಗರಿಕರಿಗೆ ಬಹಳ ಅನುಕೂಲ ಮಾಡಿದಂತೆ ಆಗುತ್ತದೆ. ಆದ್ದರಿಂದ ಮಾದರಿ ಮನೆಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಬೇಕೇ ಹೊರತು ಈ ಕಡೆ ಇರುವ ಗುಡಿಸಲುಗಳನ್ನು ತೆಗೆದು ಆ ಕಡೆ ಹಾಕುವುದು ಬೇಡ. ಇದರ ಬಗ್ಗೆ ಒಬ್ಬ ಎಕ್ಸ್‌ಪರ್ಟ್ ಕನ್‌ಸಲ್ಟ್ ಮಾಡಿ ಸರಿಯಾದ ರೀತಿಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡಿ ಮನೆಗಳನ್ನು ಕಟ್ಟಬೇಕು. ಸ್ಲಂ ಗಳನ್ನು ಸರಿಯಾಗಿ ಚೊಕ್ಕಟವಾಗಿ ಇಡುವುದಕ್ಕೆ ಅಲ್ಲಿ ಬಾತ್ ರೂಮುಗಳನ್ನೂ ಕಟ್ಟಿಕೊಡಬೇಕು. ಈ ಸ್ಲಂ ಕ್ಲಿಯರ್ ಮಾಡುವ ಕಾರ್ಯಕ್ರಮ 1942ರಲ್ಲಿ ಶುರುಮಾಡಿದ್ದು, ಇಲ್ಲಿಯವರೆಗೆ ಸರಿಯಾದ ರೀತಿಯಲ್ಲಿ ಸ್ಲಂ ಕ್ಲಿಯರ್ ಮಾಡದೆ ಹೇಗೆ ಇತ್ತು ಅದನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈ ಕಾನೂನು ಜಾರಿಗೆ ಬಂದಮೇಲೆ ಕೆಲಸಕಾರ್ಯಗಳು ಸುಗಮವಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ. ಅದರಿಂದ ಬಡ ಜನರಿಗೆ ಅನುಕೂಲವಾಗುತ್ತದೆ ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ) :—ಮಾನ್ಯ ಅಧ್ಯಕ್ಷರೇ, 25 ವರ್ಷಗಳ ನಂತರ ಗುಡಿಸಲು ನಿವಾಸಿಗಳಿಗೆ ಅವರ ಗುಡಿಸಲುಗಳನ್ನು ಅಭಿವೃದ್ಧಿಪಡಿಸುವ ಹಾಗೂ ಹೊಸದಾಗಿ ಮನೆಗಳನ್ನು ನಿರ್ಮಾಣ ಮಾಡತಕ್ಕಂಥ ವಿಶೇಷವಾದ ಒಂದು ಕಾನೂನನ್ನು ಈ ಒಂದು ಬಿಲ್ಲಿನ ರೂಪದಲ್ಲಿ ತಂದಿರತಕ್ಕಂಥದ್ದು ಬಹಳ ಸಂತೋಷವಾದರೂ ಕೂಡ ಇದಕ್ಕೆ ಹಿಂದೆ ಯಾರು ಯಾರು ಜವಾಬ್ದಾರರು ಮತ್ತು ಹಿಂದೆ ಯಾರು ಯಾರು ಸರ್ಕಾರ ನಡೆಸಿದರು ಅವರೆಲ್ಲರೂ ಬಡವರ ಹೆಸರಿನಲ್ಲಿ ಅವರೇ ಅನುಕೂಲಗಳನ್ನು ಮಾಡಿಕೊಂಡಿದ್ದಾರೆ. ಈ ಬಿಲ್ಲನ್ನು ಮೊದಲೇ ತಂದಿದ್ದರೆ ಬಡವರು ಇಷ್ಟು ಹೊತ್ತಿಗೆ ಇನ್ನೂ ಬಹಳ ಉತ್ತಮ ಪರಿಸ್ಥಿತಿಯಲ್ಲಿ ಇರುತ್ತಿದ್ದರು ಎಂದು ಹೇಳುವ ಪರಿಸ್ಥಿತಿಯಲ್ಲಿ ನಾನು ಇದ್ದೇನೆ. ಹಿಂದೆ ಜವಾಬ್ದಾರಿಸ್ಥಾನದಲ್ಲಿದ್ದವರು ಬಡವರ ಹೆಸರಿನಲ್ಲಿ ಸಾಕಾದಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಂಡರೆ ವಿನಃ ಬಡವರಿಗೆ ಯಾವ ರೀತಿಯಾದ ಅನುಕೂಲಗಳು ಸಿಕ್ಕಿಲ್ಲ. ಇಂದು ಬಡವರನ್ನು ನೋಡುವುದಾದರೆ ಅವರ ಸ್ಥಿತಿ ತಮಗೂ ಗೊತ್ತಿದೆ ನಮಗೂ ಗೊತ್ತಿದೆ. ಇವೊತ್ತು ಭಾರತದಲ್ಲಿ 20-30 ಕೋಟಿ ಜನರಿಗೆ ದಿನಕ್ಕೆ ಒಂದೂವರೆ ರೂಪಾಯಿ ಸಂಪಾದನೆ ಇಲ್ಲದೆ ಇರತಕ್ಕಂಥವರು ಇದ್ದಾರೆ. 25 ವರ್ಷಗಳ ನಂತರ ನಮ್ಮ ಮಂತ್ರಿಗಳು ಈ ಬಿಲ್ಲನ್ನು ತಂದಿದ್ದಾರೆ. ಮಂತ್ರಿಗಳಿಗೂ ಗೊತ್ತಿದೆ ಏತಕ್ಕೆಂದರೆ ಅವರು ಸಾಧಾರಣವಾಗಿ ಬಡವರ ಮಧ್ಯೆ ಚುನಾವಣೆಯಲ್ಲಿ ಆರಿಸಿ ಬಂದಿರುವಾಗ ಅವರಿಗೆ ಗೊತ್ತಿಲ್ಲದ ವಿಷಯವೇನೂ ಇಲ್ಲ. ಆದರೆ ಅವರು ಬಂದ ತಕ್ಷಣ ಈ ಬಿಲ್ಲನ್ನು ತಂದಿದ್ದರೆ ಬಹಳ ಅನುಕೂಲವಾಗುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ :— ಹಿಂದೆ ಬಡವರ ಹೆಸರಿನಲ್ಲಿ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ ಎಂದು ಹೇಳಿದಿರಿ. ಯಾರು ಯಾರು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ ಎನ್ನುವುದನ್ನು ಹೇಳುತ್ತೀರಾ? ಮತ್ತೆ ಎಷ್ಟೆಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಕೆ ಶ್ರೀರಾಮುಲು :—ಅದರ ಬಗ್ಗೆ ನಾನು ಈಗ ವಿಚಾರ ಮಾಡಲು ಹೋಗುವುದಿಲ್ಲ. ನನಗೆ ಇರತಕ್ಕ 2-3 ವಿಷಯಗಳನ್ನು ಮಾನ್ಯ ಮಂತ್ರಿಗಳಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಅಕ್ವಿಸಿಷನ್ ಮಾಡಿಕೊಳ್ಳುವಾಗ ಕಂದಾಯ, ಮತ್ತು ಟ್ಯಾಕ್ಸ್ ಕೊಟ್ಟು ಜಮೀನನ್ನು ಅಕ್ವಿಜಿಷನ್ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತೀರಿ. ಆದರೆ ಟ್ರಸ್ಟ್ ಬೋರ್ಡಿನವರು ಸೈಟುಗಳನ್ನು ಮಾಡಬೇಕಾದರೆ 80-120 ಅಡಿ ಸೈಟುಗಳಿಗೆ ಕೆಲವು ಕಡೆ ಒಂದು ಲಕ್ಷ ಎರಡು ಲಕ್ಷ ಅರ್ಜಿಗಳನ್ನು ಹಾಕುತ್ತಾರೆ. 30-40 ಅಡಿ ಸೈಟುಗಳನ್ನು ಮಾಡಿ ಕಡಿಮೆ ದರದಲ್ಲಿ ಅವು ಬಡವರಿಗೆ ಸಿಕ್ಕುವಂತೆ ಮಾಡಿದರೆ ಬಡವರಿಗೆ ಸಹಾಯವಾಗುತ್ತದೆ. ಟ್ರಸ್ಟ್ ಬೋರ್ಡ್ ಮುಖಾಂತರ ಬಡವರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಸೈಟುಗಳನ್ನು ಮಾಡಿಲ್ಲವೆಂದು ನನ್ನ ಮನಸ್ಸಿನಲ್ಲಿ ಇದೆ. ಗುಡಿಸಲು ನಿವಾಸಿಗಳಿಗೆ ಎಲ್ಲೂ ಅನುಕೂಲವಾಗುವಂತಹ ಜಾಗಗಳು ಇಲ್ಲವೆಂದು ಕಾಣುತ್ತದೆ. ಮೊದಲೇ 25 ವರ್ಷಗಳ ಹಿಂದೆಯೇ ಈ ರೀತಿಯ ಒಂದು ಕಾನೂನನ್ನು ಮಾಡಿದ್ದರೆ ಎಷ್ಟೋ ಜನಗಳಿಗೆ ಮನೆಗಳನ್ನು ಕಟ್ಟಿಸಿಕೊಡಬಹುದಾಗಿತ್ತು. ಈಗ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದು ಹಾಗಿರಲಿ, ಅವರಿಗೆ ಒಂದೊಂದು ಬಚ್ಚಲು ಮನೆಗಳನ್ನು ಕಟ್ಟಿಸಿಕೊಡುವುದಕ್ಕೂ ಸ್ಥಳವಿಲ್ಲ. ಈಗಲೂ ಒಂದು ಸಾವಿರದ ಇನ್ನೂರು ಚದುರ ಗಜ ಇರುವ ದೊಡ್ಡ ಸೈಟನ್ನೇ ಫಾರಂ ಮಾಡುತ್ತಾರೆ. ಅದೇ ಸೈಟನ್ನು ಚಿಕ್ಕ ಚಿಕ್ಕದಾಗಿ ಮಾಡಿದರೆ 8 ಸೈಟುಗಳು ಆಗುತ್ತವೆಂದು ಹೇಳುತ್ತೇನೆ. ಬಡವರಿಗೆ ನಿಲ್ಲಲು ಜಾಗವಿಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಅವರಿಗೆ ಪುನರ್ವಸತಿ ಮಾಡುತ್ತೇವೆ ಎಂದು ಹೇಳಿ ಅವರನ್ನು ಎಲ್ಲಿಗೆ ಕಳುಹಿಸುತ್ತೀರಿ? ಸಣ್ಣ ಸಣ್ಣ ಸೈಟುಗಳನ್ನು ಮಾಡಿ ಬಡವರಿಗೆ ಅವಕಾಶ ಮಾಡಿಕೊಡಬೇಕು ಎಂದು ನನ್ನ ಸಲಹೆ. ನಾವು ಎಲ್ಲರೂ ಒಪ್ಪಿಕೊಂಡಿದ್ದೇವೆ. ನಾವು ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿ ಓಟು ಪಡೆದು ಬಂದಿದ್ದೇವೆ. ಇನ್ನು ಸೈಟು ಮಾಡುವಾಗ ಸಾವಿರದ ಇನ್ನೂರು ಚದುರ ಅಡಿಗಳ ಸೈಟುಗಳನ್ನು ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನಿಜವಾಗಿಯೂ ನಿರ್ಗತಿಕರ ಸಮಸ್ಯೆ ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ.. ತಾವು ಧೈರ್ಯಮಾಡಿ 60-40ಕ್ಕಿಂಥ ದೊಡ್ಡ ಸೈಟುಗಳನ್ನು ಮಾಡುವುದಕ್ಕೆ ಅವಕಾಶ ಕೊಡಕೂಡದು, ಬಡವರಿಗೆ ತಾವು ಹೆಚ್ಚಿಗೆ ವಸತಿ ಕಲ್ಪಿಸುವುದಕ್ಕೆ ಬೆಂಗಳೂರು ಪಟ್ಟಣದಲ್ಲಿ, 60-40 ಅಡಿ ಸೈಟಿನ ಅಳತೆ ಮೇಲೆ ಮಾಡಕೂಡದೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿನ ಜನಸಂಖ್ಯೆಯ ಬೆಳವಣಿಗೆಯನ್ನು ನೋಡಿದರೆ ಪರಿಸ್ಥಿತಿ ತುಂಬಾ ಕಠಿಣವಾಗಿದೆ.

(ಶ್ರೀ ಕೆ. ಶ್ರೀರಾಮುಲು)

4-00 ....

ಬೆಂಗಳೂರಿನಲ್ಲಿ ಜನ ಬೆಳೆಯುತ್ತಿದ್ದಾರೆಯೇ ವಿನಹ ಸ್ಥಳ ಬೆಳೆಯುತ್ತಿಲ್ಲ. ಈ ದೃಷ್ಟಿಯಿಂದಲಾದರೂ ಕೂಡ ತಾವು ಯೋಚನೆ ಮಾಡಿ ಟ್ರಸ್ಟ್ ಬೋರ್ಡಿನಲ್ಲಾಗಲೀ ಹೌಸಿಂಗ್‌ಬೋರ್ಡಿನಲ್ಲಾಗಲೀ, ಕಾರ್ಪೋರೇಷನ್‌ನಲ್ಲಾಗಲೀ, ಯಾವುದೇ ಸೈಟ್ ಮಾಡಿದರೂ ಕೂಡ 60-40 ಕ್ಕಿಂತ ಹೆಚ್ಚಾಗಿ ಸೈಟ್ ಮಾಡುವುದಕ್ಕೆ ಅವಕಾಶ ಕೊಡಬಾರದು ಎನ್ನುವುದನ್ನು ತಿಳಿಸಬಯಸುತ್ತೇನೆ. ಹೀಗೆ ನಾನು ಹೇಳುತ್ತೇನೆ ಎಂದು ತಾವು ಅನ್ಯಥಾ ಭಾವಿಸಬಾರದು. ನಾನು ವೈಯುಕ್ತಿಕವಾಗಿ ಯಾರ ಮೇಲೂ ಏನನ್ನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಇಂಥ ಬೋರ್ಡುಗಳಲ್ಲಿ ಸದಸ್ಯರನ್ನು ಹಾಕುವಾಗ ವಿಧಾನಸಭೆಯ ಸದಸ್ಯರನ್ನು, ನನ್ನನ್ನೂ ಸೇರಿಕೊಂಡು ಯಾರನ್ನೂ ಹಾಕಬಾರದು ಎಂದು ವಿನಂತಿ ಮಾಡುತ್ತೇನೆ. ಕಾರಣ ಇಷ್ಟೇ, ನಮ್ಮನ್ನು ಒಂದು ಸಮಿತಿಗೆ ಹಾಕಿದ್ದೀರಿ ಎಂದು ತಿಳಿದುಕೊಳ್ಳೋಣ, ಆ ಒಂದು ಸಮಿತಿ ಈಗ ಪ್ರಯಾಣದಲ್ಲಿದೆ, ಮತ್ತು ಕೆಲವು ಸದಸ್ಯರು ಅಸೆಂಬ್ಲಿಯಲ್ಲಿದ್ದಾರೆ. ಹೀಗೆ ಆಗುವುದಾದರೆ, ಬಹುಶಃ ಕೆಲವರು ಇದರ ಅನುಕೂಲವನ್ನು ಪಡೆಯುವುದಾದರೆ ಇದರಿಂದ ಜನಗಳಿಗೆ ಏನೂ ಅನುಕೂಲವಾಗುವುದಿಲ್ಲ. ಇಂಥ ಸಮಿತಿಗಳಿಂದ ಯಾರೋ ಒಬ್ಬರಿಗೆ ಅನುಕೂಲವಾಗುವುದಾದರೆ ಇದು ಆರ್ಥಿಕ ಸ್ಥಿತಿಯಿಂದ ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಅಷ್ಟುಮಾತ್ರವಲ್ಲ, ತಾವು ಬಡವರ ಬಗ್ಗೆ ಒಳ್ಳೆಯ ಅಭಿಪ್ರಾಯ ಇಟ್ಟುಕೊಂಡಿರತಕ್ಕವರಲ್ಲಿ ಒಬ್ಬರು. ಇದರ ಬಗ್ಗೆ ನನಗೆ ಮೆಚ್ಚುಗೆ ಇದೆ. ಆದರೆ ತಾವುಗಳು ಬೋರ್ಡುಗಳನ್ನು ರಚನೆ ಮಾಡುವಾಗ ಯಾವುದೇ ದೃಷ್ಟಿ ಇಲ್ಲದೆ, ಹಿಂದಿನ ನಮ್ಮ ನಿಮ್ಮ ಸ್ನೇಹಿತರಲ್ಲಿ ಸ್ವಲ್ಪಮಟ್ಟಿಗೆ ಸಮಾಜದಲ್ಲಿ ಏನಾದರೂ ತಪ್ಪು ವ್ಯವಹಾರಗಳು ಇದ್ದರೆ ಅಂಥವರನ್ನು ಈ ಬೋರ್ಡುಗಳಿಂದ ದೂರ ಇಡುವುದು ಒಳ್ಳೆಯದು. ಕಾರಣ ಇಷ್ಟೇ ಬೋರ್ಡಿನ ಸದಸ್ಯರು ಇವರು ಎಂದು ಸಾರ್ವಜನಿಕರ ಮುಂದೆ ಹೇಳಿದಾಗ ಅವರ ವೈಯುಕ್ತಿಕತೆಯ ಬಗ್ಗೆ ಜನ ಆಡತಕ್ಕ ಮಾತು ಇದೆಯೆಲ್ಲಾ ಅದರಿಂದ ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ, ಮತ್ತು ಇಂಥಾದ್ದು ಆಗಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತೇನೆ. ದೇಶದ ಹಿತದೃಷ್ಟಿಯಿಂದಲೂ ಇದು ಒಳ್ಳೆಯದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈಗ ಗುಡಿಸಲುಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ಬೋರ್ಡನ್ನು ರಚನೆ ಮಾಡುತ್ತಿದ್ದೀರಿ. ಹಿಂದೆ ಅನೇಕ ಸಂದರ್ಭಗಳಲ್ಲಿ, ಬಡ್ಜೆಟ್ ಸೆಷನ್‌ನಲ್ಲಿ ಇದಕ್ಕೋಸ್ಕರ ಹಣವನ್ನು ಒದಗಿಸಿಲ್ಲ ಎಂದು ನಾನು ಭಾಷಣ ಮಾಡಿದ್ದೆನು. ಇವತ್ತು ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ಇದಕ್ಕೋಸ್ಕರ ದುಡ್ಡಿನ ವಿಷಯವಾಗಲೀ, ಎಸ್ಟಿಮೇಟಿನ ವಿಷಯವಾಗಲೀ ಯಾವುದೂ ಗೊತ್ತಾಗುತ್ತಿಲ್ಲ. ಈ ಸ್ಟೇಜಿನಲ್ಲಿ

ಅದನ್ನು ತಿಳಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಯಾವುದೇ ಒಂದು ಬೋರ್ಡ್, ಯಾವುದೇ ಒಂದು ಕಾನೂನು ಬರಬೇಕಾದರೆ ಇವುಗಳೆಲ್ಲವನ್ನೂ ಒಮ್ಮೆಗೆ ಇಟ್ಟು ಬಿಲ್ಲನ್ನು ತಂದರೆ ಅನುಕೂಲವಾಗುತ್ತದೆ. ಒಂದು ಸಲ ಬೋರ್ಡನ್ನು ರಚನೆಮಾಡುವುದನ್ನು ಮಾಡಿ ದುಡ್ಡನ್ನು ಎಲ್ಲಿದೆ ಎಂದು ಹುಡುಕಿ ಕೊಂಡು ಹೋಗುವುದಾದರೆ, ಚೇರ್ಮನ್ ಮೆಂಬರ್ಸ್ ಅಪಾಯಿಂಟ್‌ಮಾಡಿ, ಅವರು ಮೀಟಿಂಗ್ ಕೂತುಕೊಂಡು, ಅದು ಖರ್ಚಿನ ಬಾಬತ್ತು ಆಗುತ್ತದೆಯೇ ವಿನಹ ಈ ಕೆಲಸಗಳಿಂದ ಬಡವರಿಗೆ ಅನುಕೂಲವಾಗುವುದಿಲ್ಲ. ನಮಗೆ ಒಳ್ಳೆಯ ಹೆಸರು ತರತಕ್ಕ ಕೆಲಸವಾಗುವುದಿಲ್ಲ. ದುಡ್ಡು ಇರಬೇಕು, ಪ್ಲಾನು ಇರಬೇಕು. ಬೋರ್ಡನ್ನು ರಚನೆ ಮಾಡುವಾಗ ದುಡ್ಡಿನ ವ್ಯವಸ್ಥೆಯನ್ನು ಮಾಡಿಕೊಂಡು ಮಾಡಿದರೆ ಅದು ಎಲ್ಲಾ ದೃಷ್ಟಿಯಿಂದ ಕೂಡ ಒಳ್ಳೆಯದು. ಬೋರ್ಡ್ ರಚನೆ ಮಾಡಿ, ಆಫೀಸುಗಳನ್ನು ಒದಗಿಸುವುದಕ್ಕೆ ಎಷ್ಟೋ ದಿವಸಗಳು ಬೇಕಾಗುತ್ತದೆ. ಮಾನ್ಯ ಐ.ಡಿ.ಪಿ ಸಾಲಪ್ಪನವರಿಗೆ ಒಂದು ಆಫೀಸ್ ಕೊಡಬೇಕಾದರೆ ಒಂದು ವರ್ಷ ಬೇಕಾಯಿತು. ಈ ರೀತಿಯಾದರೆ ಬೋರ್ಡಿನವರು ಯಾವ ಕಡೆ ಸೇರಬೇಕು, ಏನು ಮಾಡುವುದು ? ತಾವು ಏನೋ ಒಳ್ಳೆಯ ಮನಸ್ಸಿನಿಂದ ಬೋರ್ಡನ್ನು ಸ್ಯಾಂಕ್ಷನ್ ಮಾಡುತ್ತೀರಿ. ಆದರೆ ಅಷ್ಟೇ ಮನಸ್ಸಿನಿಂದ ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಆದರಿಂದ ನನ್ನ ಅನುಭವದಲ್ಲಿ ಕಂಡಂತೆ, ಬೋರ್ಡನ್ನು ರಚನೆ ಮಾಡುವಾಗ ಸಾಕಾದಷ್ಟು ವ್ಯವಸ್ಥೆ ಮಾಡಿ, ಕಾನೂನು ತಂದು, ತಕ್ಷಣ ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಬಹುಶಃ ಇಂಥವರ ಕಾಲದಲ್ಲಿ ಒಳ್ಳೆಯ ಕೆಲಸವಾಯಿತು ಎಂದು ಜನ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮತ್ತು ಯಾವ ಸರ್ಕಾರ ಇದನ್ನು ಮಾಡಿತ್ತೋ ಅದಕ್ಕೆ ಒಳ್ಳೆಯ ಹೆಸರು ಬರುತ್ತದೆ. ಈ ಸರ್ಕಾರ ಒಂದು ಸ್ಲಂ ಕ್ಲಿಯರೆನ್ಸ್ ಬೋರ್ಡ್ ಮಾಡುವುದು, ಇನ್ನೊಂದು ಸರ್ಕಾರ ಒಂದು ರಾಜಕೀಯ ಬಣ್ಣದಿಂದ ತಡೆ ಮಾಡುವುದಾದರೆ ಏನೂ ಪ್ರಯೋಜನವಿಲ್ಲ. ಈ ರೀತಿ ಮಾಡಿದರೆ ಹೆಸರು ಮಾತ್ರ ಉಳಿಯುತ್ತದೆ ಬಡವರಿಗೆ ಹೆಚ್ಚಿನ ಅನುಕೂಲವಾಗುವುದಿಲ್ಲ. ತಾವು ಬಂದು 18 ತಿಂಗಳು ಅದಮೇಲೆ ಈ ಬಿಲ್ ಬಂದಿದೆ, 18 ತಿಂಗಳು ನಿಧಾನವಾಗಿದೆ, ಇನ್ನು ಒಂದು ವರ್ಷದಲ್ಲಿ ಬಹು ಬೇಗನೆ ಕೆಲಸಗಳು ಆಗುವುದಕ್ಕೆ ಯಾವುದೇ ತರಹದ ಅಡಚಣೆಯಾದರೂ ಸಹಿತ, ಯಾರಿಗೋಸ್ಕರ ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರೋ, ಆ ಜನಕ್ಕೆ ತಮ್ಮ ಕಾಲದಲ್ಲಿ ಒಳ್ಳೆಯದು ಆಗುವುದಕ್ಕೆ ತಾವು ಪ್ರಯತ್ನ ಪಡಬೇಕಾಗಿದೆ.

ಹಿಂದೆ ಟ್ರಸ್ಟ್ ಬೋರ್ಡಿನಲ್ಲಿ ನನ್ನ ಸದಸ್ಯನನ್ನಾಗಿ ಹಾಕಿದ್ದಾಗ, ಕಿರ್ಲೋಸ್ಕರ ಫ್ಯಾಕ್ಟರಿಯ ಹತ್ತಿರ 15 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ 30-40 ಸೈಟಿನ ಮನೆಗಳನ್ನು ಮಾಡಿಕೊಟ್ಟಿದ್ದೇವೆ. ಅಂದು 30 ಕೋಟಿ ರೂಪಾಯಿಗಳ

(ಶ್ರೀ ಕೆ. ಶ್ರೀರಾಮುಲು)

ಎಸ್ಟಿಮೇಟ್ ಮಾಡಿ ಇಡೀ ಬೆಂಗಳೂರಿನಲ್ಲಿರತಕ್ಕವರಿಗೆ ಇಂಥ ವ್ಯವಸ್ಥೆ ಮಾಡಬೇಕು ಎಂದು ಟ್ರಸ್ಟ್‌ಬೋರ್ಡಿನಲ್ಲಿ ತೀರ್ಮಾನವಾಗಿತ್ತು. ಅದರ ಬಗ್ಗೆ ಪ್ರಶ್ನೆ ಕೇಳಿದಕ್ಕೆ ನನಗೆ ಗೊತ್ತಿಲ್ಲ ಎಂದು ಉತ್ತರ ಹೇಳಿದ್ದೀರಿ. ಇದಕ್ಕೋಸ್ಕರ 30 ಕೋಟಿ ರೂಪಾಯಿಗಳ ಎಸ್ಟಿಮೇಟನ್ನು 1960ರಲ್ಲಿ ಮಾಡಿದ್ದೆವು. 30 ಕೋಟಿ ರೂಪಾಯಿಗಳು ಎಲ್ಲಿದೆ, ಎನ್ನುವುದಕ್ಕೆ ಅವಕಾಶ ಕೊಡಬಾರದು. ಇದನ್ನು ತಾವು ಮಾಡಬೇಕು ಎಂದು ಹೇಳಿ ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪೌರಾಡಳಿತ ಸಚಿವರು ಮೈಸೂರು ಸ್ಲಂ (ಇಂಪ್ರೂವ್‌ಮೆಂಟ್ ಅಂಡ್ ಕ್ಲಿಯರರೆನ್ಸ್) ಬಿಲ್ 1973 ಎನ್ನುವುದನ್ನು ಕಂದಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಒಂದೊಂದು ಸಾರಿ ಶ್ರೀಮಾನ್ ಬಸಲಿಂಗಪ್ಪನವರು ಒಳ್ಳೆಯ ಕೆಲಸ ಮಾಡುತ್ತಾರೆ. ಅದರ ಬಗ್ಗೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಅವರು ಮಾಡಿರುವ ಒಳ್ಳೆಯ ಕೆಲಸಗಳಲ್ಲಿ ಇದು ಎರಡನೆಯದು. ಮೊದಲನೆಯದು, ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿರತಕ್ಕದ್ದು, ಎರಡನೆಯದು, ಸ್ಲಂ ಕ್ಲಿಯರೆನ್ಸ್‌ಗೆ ಸಂಬಂಧಪಟ್ಟಂತೆ ಈಗ ಒಂದು ಕಾಯಿದೆಯನ್ನು ತಂದಿರತಕ್ಕದ್ದು. ಇದರಲ್ಲಿ ಯಾವ ಪಕ್ಷದ ದೃಷ್ಟಿಯಿಂದ, ಯಾವುದೇ ದೃಷ್ಟಿಯಿಂದ ಭೇದ ದೃಷ್ಟಿ ಇಲ್ಲದೆ ಪ್ರತಿಯೊಬ್ಬನೂ ಇದನ್ನು ಮೆಚ್ಚಬೇಕಾದದ್ದು ಅನಿವಾರ್ಯ ಅವಶ್ಯಕ. ಈ ದೃಷ್ಟಿಯಿಂದ ಅವರ ವಿಧೇಯಕವನ್ನು ಸ್ವಾಗತಿಸಿ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಕೊಳಚೆ ಪ್ರದೇಶದಲ್ಲಿ ವಾಸಮಾಡತಕ್ಕ ಜನರ, ಸ್ಥಿತಿಗತಿಗಳ ವಿಷಯಗಳನ್ನು ನಾವು ಸ್ವಲ್ಪ ಅವಲೋಕನ ಮಾಡಿದರೆ, ಅಂಥ ಜನರು ನಮ್ಮ ರಾಷ್ಟ್ರದಲ್ಲಿ ಈ ದೇಶದಲ್ಲಿ ನೂರಕ್ಕೆ 90-95 ಜನ ಇದ್ದಾರೆ, ಅಂದರೆ ಯಾರಿಗೆ ವಿದ್ಯೆಯಿಲ್ಲ, ಯಾರಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನಗಳು ಇಲ್ಲ, ಸ್ವಾತಂತ್ರ್ಯ ಬಂದಾಗಿನಿಂದ ನೆಲಕ್ಕೆ ತುಳಿಯಲ್ಪಟ್ಟಂಥ ಜನ ರಾಜ್ಯದಲ್ಲಿ ಮಾತ್ರವಲ್ಲ, ರಾಷ್ಟ್ರದಲ್ಲಿಯೂ ಇದ್ದಾರೋ, ಅವರು ಬಹು ಸಂಖ್ಯೆಯಲ್ಲಿದ್ದಾರೆ ಸ್ವಾತಂತ್ರ್ಯ ಬಂದ 25ವರ್ಷಗಳಿಂದ ಈಚೆಗೆ ಪ್ರಗತಿಗಾಮಿಗಳು ಪರಿಣಾಮಕಾರಿಯಾದ ಕ್ರಮವನ್ನು ಹಾಕಿಕೊಳ್ಳದೆ ಇರತಕ್ಕದ್ದನ್ನು ನಾವು ಕಂಡು ಕಂಡು ಬಂದಿದ್ದೇವೆ. ಹೊಸ ಕಾಂಗ್ರೆಸ್ಸಿಗರು ಈಚೆಗೆ ಅಧಿಕಾರಕ್ಕೆ ಬಂದನಂತರ ಇದನ್ನು ತಂದಿದ್ದಾರೆ. ಕಾಂಗೆಸ್ ಓ ನಲ್ಲಿದ್ದವರು, ಈಗ ಕಾಂಗ್ರೆಸ್ಸಿನಲ್ಲಿ ಅಧಿಕಾರದಲ್ಲಿದ್ದಾರೆ. 25 ವರ್ಷಗಳಿಂದ ಅವರ ಇತಿಹಾಸವು ರಾಷ್ಟ್ರದ ಬಹು ಸಂಖ್ಯಾತ ಜನರನ್ನು ಅಧೋಗತಿಗೆ ತೆಗೆದುಕೊಂಡು ಹೋಗಲಿಕ್ಕೆ ಕಾರಣಕರ್ತವಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ನಾನು

ಅರೋಪಿಸುವುದಿಲ್ಲ, ಸತ್ಯವಾಗಿರುವ ಸಂಗತಿಯನ್ನು ಹೇಳಬೇಕಾದ್ದು ನನ್ನ ಕರ್ತವ್ಯ ತುಳಿದ ಜನರನ್ನು ಮೇಲಕ್ಕೆತ್ತುವ ಈ ಕೆಲಸ ಕಳೆದ 25 ವರ್ಷಗಳಿಂದಲೂ ಆಗಿಲ್ಲ. ಈ ರೀತಿ ಪಟ್ಟಣದ ಕೊಳಚೆ ಪ್ರದೇಶದಲ್ಲಿರುವ ಜನರನ್ನು ಉದ್ಧಾರಮಾಡುವುದಕ್ಕೆ ಅವರನ್ನು ಮನುಷ್ಯರನ್ನಾಗಿ ಮಾಡಲು ತಂದಿರುವ ಈ ಮಸೂದೆಯನ್ನು ಸ್ವಾಗತಿಸುವುದು ನಮ್ಮ ಕರ್ತವ್ಯ ಮತ್ತು ಧರ್ಮ. ತುಳಿತಕ್ಕೆ ಒಳಪಟ್ಟಿರುವ ಜನರನ್ನು ಮೇಲಕ್ಕೆ ಎತ್ತಲು ಯಾರು ಮುಂದೆ ಬರುವರು ಎಂದು ಜನರು ನೋಡುತ್ತಿದ್ದಾರೆ. ಒಟ್ಟು 16 ಪಟ್ಟಣಗಳಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಜನರಿಗೆ ಅನುಕೂಲ ಮಾಡಿದರೆ ಸಾರ್ಥಕವಾಯಿತು ಎಂದು ನಾನು ಭಾವಿಸುವುದಿಲ್ಲ. ಅವರ ಉದ್ಧಾರವಾಗಬೇಕು. ಇದರ ಬಗ್ಗೆ ನಿಮ್ಮ ಕಾಯಿದೆ ಎಷ್ಟುಮಟ್ಟಿಗೆ ಸಾರ್ಥಕವಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಕಳೆದ 25 ವರ್ಷಗಳಿಂದ ಪಂಡಿತ ಜವಹಿರಲಾಲ್ ನೆಹರೂರವರು ಪ್ರಥಮ ಪ್ರಧಾನಿಯಾದಾಗಿನಿಂದ ಬಹಳ ದೊಡ್ಡ ಮಾತುಗಳನ್ನು ಬಡವರ ಬಗ್ಗೆ ಹೇಳಿದ್ದಾರೆ. ಈಗಲೂ ಕೂಡ ಶ್ರೀಮತಿ ಇಂದಿರಾ ಗಾಂಧಿಯವರು ಅದನ್ನು ಹೇಳುತ್ತಿದ್ದಾರೆ. ಆದರೆ ಆಗುತ್ತಿರುವುದೇ ಬೇರೆ. ಅದೇನೇ ಇರಲಿ, ಇಲ್ಲಿ ಶ್ರೀಮಾನ್ ಬಸವಲಿಂಗಪ್ಪನವರು ತಂದಿರುವ ಬಿಲ್ಲು ಬಹಳ ಒಳ್ಳೆಯದು ಬಡವರನ್ನು ಉದ್ಧಾರ ಮಾಡಿ ಅವರ ಬಡತನವನ್ನು ನೀಗಿ ಅವರನ್ನು ಮಾನವರನ್ನಾಗಿ ಬಾಳುವಂತೆ ಮಾಡುವುದು ಸರಕಾರದ ಕರ್ತವ್ಯ. ಇಂದು ಪಟ್ಟಣಗಳಲ್ಲಿ, ಹುಬ್ಬಳ್ಳಿ, ಬೆಂಗಳೂರು, ಧಾರವಾಡ, ಮೈಸೂರು, ಬೆಳಗಾಂ, ಶಿವಮೊಗ್ಗ, ಭದ್ರಾವತಿ, ಕೆ.ಜಿ.ಎಫ್. ಮುಂತಾದ ಪಟ್ಟಣಗಳಲ್ಲಿರುವ ಜನಸಂಖ್ಯೆ 38 ಲಕ್ಷ 37 ಸಾವಿರದ 464. ಕೊಳಚೆ ಪ್ರದೇಶದಲ್ಲಿರುವವರ ಸಂಖ್ಯೆಗೊತ್ತಿಲ್ಲ. ಅವರ ಉದ್ಧಾರಕ್ಕಾಗಿ ಕೋಟ್ಯಾಂತರ ರೂಪಾಯಿ ವ್ಯಯ ಮಾಡುತ್ತೀರೆಂದು ಕಾಣುತ್ತದೆ. ಅದನ್ನು ಎಲ್ಲಿಂದ ತರುವರೋ ತಿಳಿಯದು. ಅದರ ಬಗ್ಗೆ ವಿವರಣೆ ಕೊಟ್ಟಿಲ್ಲ. ನಮ್ಮ ದೇಶದಲ್ಲಿರುವ 3 ಕೋಟಿ ಜನರಲ್ಲಿ ಸುಮಾರು 10 ಲಕ್ಷ ಜನರಿಗೆ ಒಳ್ಳೆಯದನ್ನು ಮಾಡುವುದನ್ನು ಒಪ್ಪುತ್ತೇವೆ. ಆದರೆ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಿದರೆ ಅಪ್ರಕೃತವಾಗಲಾರದು. ಒಟ್ಟು ನಮ್ಮ ರಾಜ್ಯದಲ್ಲಿ ಒಂದು ಲಕ್ಷ ಮತ್ತು ಅದಕ್ಕೆ ಕಡಿಮೆ ಇರುವ ಪಟ್ಟಣಿಗರ ಜನಸಂಖ್ಯೆ 71 ಲಕ್ಷ 21 ಸಾವಿರದ 93. ಆದರೆ ಹಳ್ಳಿಗರ ಜನಸಂಖ್ಯೆ 2 ಕೋಟಿ 21 ಲಕ್ಷ 76 ಸಾವಿರದ 921. ಈಗ ಇಡೀ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 80 ಭಾಗವನ್ನು ಪಟ್ಟಣಗಳಿಗೆ ಮೀಸಲಾಗಿಡುವರು, ಉಳಿದ 20 ಭಾಗ ಹಳ್ಳಿಗಳಿಗೆ ಕೊಡುವರು. ಜನಸಂಖ್ಯೆ ನೋಡಿದರೆ ಶೇಕಡ 80 ಭಾಗ ಹಳ್ಳಿಗಳಲ್ಲಿದ್ದಾರೆ, ಉಳಿದ 20 ಭಾಗ ಪಟ್ಟಣಗಳಲ್ಲಿದ್ದಾರೆ. ಹಳ್ಳಿಗಳಲ್ಲಿ ಜಾಸ್ತಿ ಜನರಿದ್ದರೂ ಅವರನ್ನು ಕೇಳುವವರು ಯಾರು? ಬಾಯಲ್ಲಿ ಹೇಳುವುದು ಸಮಾಜವಾದ ಜಾರಿಗೆ ತರುತ್ತೇವೆಂದು, ಮಾಡುವುದು ಹೀಗೆ. ಇಂದು ಪ್ರತಿ ಗ್ರಾಮದಲ್ಲೂ ಕೊಳಚೆ ಪ್ರದೇಶವಿದೆ. ಆ ಗ್ರಾಮಗಳ ಕೊಳಚೆ ಪ್ರದೇಶ ನಿರ್ಮೂಲ ಮಾಡಲು, ಅಲ್ಲಿನವರನ್ನು ಉದ್ಧಾರ

(ಶ್ರೀ ಕೋಣಂದೂರು ಲಿಂಗಪ್ಪ)

ಮಾಡಲು ಏನು ಕಾರ್ಯಕ್ರಮವಿದೆ? ಗ್ರಾಮಾಂತರಗಳಲ್ಲಿ ಕೊಳಚೆ ಪ್ರದೇಶದಲ್ಲಿರುವವರ ಉದ್ಧಾರ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ? ಪಟ್ಟಣಗಳಲ್ಲಿರುವವರಾದರೆ ಬೇಕಾದಾಗ ಒಂದು ಸರಕಾರಕ್ಕೆ ತಮ್ಮ ಕುಂದುಕೊರತೆ ಹೇಳಿಕೊಳ್ಳಲು ಅವಕಾಶವಿದೆ. ಅವರು ಬೇಕಾದರೆ ಧರಣಿ ಮಾಡುವರು. ಅದೇ ಹಳ್ಳಿಗಳವರು ಪೇಟೆಗೆ ಒಂದು ತಮ್ಮ ಕಷ್ಟಸುಖಗಳನ್ನು ಗಮನಕ್ಕೆ ತರುವ ಶಕ್ತಿ ಅವರಲಿಲ್ಲ. ಅವರನ್ನು ಇಂದು ಕೇಳುವವರು ಯಾರು? ಆದುದರಿಂದ ಒಂದು ಸೂಚನೆ ಕೊಟ್ಟರೆ ಸಲಹೆ ಕೊಟ್ಟರೆ ಅದನ್ನು ಅಂಗೀಕರಿಸುವಿರಿ ಎಂದು ನಂಬುತ್ತೇನೆ. ಒಟ್ಟು ವರಮಾನದಲ್ಲಿ ಹಳ್ಳಿಗಳಲ್ಲಿರುವ ಶೇಕಡ 80 ಜನರಿಗೆ ಶೇಕಡ 80 ಭಾಗದ ವರಮಾನವನ್ನು ವಿನಿಯೋಗಿಸಿ ಉಳಿದ ಶೇಕಡ 20 ಭಾಗವನ್ನು ಪಟ್ಟಣಗಳ ಅನುಕೂಲಕ್ಕೆ ಉಪಯೋಗ ಮಾಡಬೇಕು. ಈ ರೀತಿ ಮಾಡಿ ತುಳಿಯಲ್ಪಟ್ಟಿರುವ ಹಳ್ಳಿಗರನ್ನು ಮೇಲಕ್ಕೆತ್ತಿ ಅವರನ್ನು ಉದ್ಧಾರ ಮಾಡಲು ಶ್ರಮಿಸಬೇಕೆಂದು ಹೇಳಿಕೊಳ್ಳುತ್ತೇನೆ.

ಇನ್ನು ಕಾಂಪೆನ್ಸೇಷನ್ ಕೊಡುವ ಬಗ್ಗೆ ಒಂದು ಮಾತು ಹೇಳಿದ್ದಾರೆ. ಹಿಂದೆ ಸರಕಾರ ತನಗೆ ಬೇಕಾದ ಜಾಗವನ್ನು ವಶಪಡಿಸಿಕೊಂಡಾಗ ಹೇಗೆ ಪರಿಹಾರ ನೀಡಿದೆ ಎಂಬುದರ ಬಗ್ಗೆ ಉದಾಹರಣೆಗಳಿವೆ. ಸರಕಾರ ತನಗೆ ಬೇಕಾದವರಿಗೆ ಒಂದು ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಂಡರೂ ಕೂಡ ಅದಕ್ಕೆ 10 ಸಾವಿರ ರೂಪಾಯಿ ಕೊಟ್ಟಿರುವ ನಿದರ್ಶನಗಳಿವೆ, ಒಂದು ಎಕರೆಗೆ ಲಕ್ಷಗಟ್ಟಲೆ ಕೊಟ್ಟಿರುವ ಉದಾಹರಣೆಗಳಿವೆ, ದಾಖಲೆಗಳಿವೆ. ಹೀಗೆ ಪರಿಹಾರ ಕೊಡುತ್ತಾ ಹೋದರೆ ಸಂಪೂರ್ಣವಾಗಿ ಖಜಾನೆ, ಸರಕಾರ ದಿವಾಳಿಯಾಗುವುದು. ಆದುದರಿಂದ ಸಮಾಜವಾದಿಗಳೆಂದು ಹೇಳಿಕೊಳ್ಳುವವರು ಪರಿಹಾರ ಕೊಡಬೇಕಾಗಿಲ್ಲ. ಅದಕ್ಕೆ ಬದಲಾಗಿ ಯಾರಿಂದ ಭೂಮಿ ತೆಗೆದುಕೊಂಡಿರುವಿರೋ ಅವರಿಗೆ ಅವಶ್ಯಕತೆಯಿದ್ದರೆ ಬೇರೆ ಭೂಮಿ ಕೊಟ್ಟು ಅವರ ಪುನರ್ವಸತಿಗೆ ವ್ಯವಸ್ಥೆ ಮಾಡಬೇಕು. ಮನೆಯನ್ನು ಆಕ್ವೈರ ಮಾಡಿಕೊಂಡರೆ ಬೇರೆ ಮನೆ ಕಟ್ಟಿಸಿಕೊಡಬೇಕು. ಈ ರೀತಿಯಾಗಿ ಪುನರ್ವ್ಯವಸ್ಥೆ ಮಾಡಬೇಕೇ ಹೊರತು ಪರಿಹಾರ ಕೊಡಬಾರದು. ಖಜಾನೆ ಈಗಾಗಲೇ ಖಾಲಿಯಾಗಿದೆ, ಇನ್ನು ಮುಂದೆ ಖಜಾನೆಯನ್ನೇ ಮಾರಾಟ ಮಾಡಬೇಕಾಗುತ್ತದೆ. ಈ ಸ್ಥಿತಿ ಬರುವುದು. ಆದುದರಿಂದ ಪರಿಹಾರ ಕೊಡದೆ ಪುನರ್ವಸತಿಗೆ ಅವಕಾಶ ಮಾಡಬೇಕು ಎಂದು ಸೂಚಿಸಬಯಸುತ್ತೇನೆ. ಇದಲ್ಲದೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ ತಲಾ ಆದಾಯ ಸುಮಾರು 50 ಪೈಸೆ ಕೂಡ ಇಲ್ಲ. ಒಂದು ದಿವಸಕ್ಕೆ 50 ಪೈಸೆ ಕೂಡ ವರಮಾನವಿಲ್ಲದಿರುವವರಿಗೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು, ಅವರಿಗೆ ಉದ್ಯೋಗ ಮತ್ತು ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಹಾಗೆ ಮಾಡದಿದ್ದರೆ ಸರಕಾರ ತನ್ನ ಕರ್ತವ್ಯದಲ್ಲಿ ಲೋಪ ಮಾಡಿದಂತಾಗುವುದು. ಅವರ ಆರ್ಥಿಕ

ಪರಿಸ್ಥಿತಿಯನ್ನು ಉತ್ತಮ ಪಡಿಸುವುದರ ಜೊತೆಗೆ ಅವರನ್ನು ಮಾನವರಾಗಿ ಬಾಳಲು ಸೂಕ್ತ ಕ್ರಮ ಕೈಕೊಳ್ಳಬೇಕು. ಅವರಲ್ಲಿ ಹೊಸ ಚೈತನ್ಯ ತುಂಬಬೇಕು. ಅವರ ಸ್ಥಿತಿ ಇಂದೇನಾಗಿದೆಯೆಂದರೆ ಅವರಿಗೆ ತಾನೂ ಒಬ್ಬ ವ್ಯಕ್ತಿ, ತನಗೆ ಯೋಗ್ಯತೆ ಇದೆ ಎಂಬ ಪ್ರಜ್ಞೆ ಇಲ್ಲ. ಇದಕ್ಕೆ ಶತಮಾನದ ಇತಿ ಹಾಸವೇ ಕಾರಣ. ಅವರನ್ನು ಐದು ಸಾವಿರ ವರ್ಷಗಳಿಂದ ತುಳಿದು ಪಾತಾಳಕ್ಕೆ ಇಳಿಸಿದ್ದೇವೆ. ಆದುದರಿಂದ ಅವರಲ್ಲಿ ಹೊಸ ಚೈತನ್ಯ ತುಂಬಬೇಕಾದ್ದು ಅಗತ್ಯವಾಗಿದೆ, ಆರ್ಥಿಕವಾಗಿ ಅವರನ್ನು ಬಲಪಡಿಸಬೇಕು. ಜೊತೆಗೆ ಅವರಿಗೆ ಆತ್ಮ ಗೌರವ ತಂದುಕೊಡಬೇಕು

ಇವತ್ತು ಆ ಜನರಲ್ಲಿ ಆತ್ಮಗೌರವ ಹಾಗೂ ಸ್ವಾಭಿಮಾನಗಳು ಮೂಡು ವಂತೆ ತಾವು ಪ್ರಯತ್ನಗಳನ್ನು ಮಾಡಬೇಕು. ನನಗೆ ತಿಳಿದು ಬಂದಿರುವ ಪ್ರಕಾರ ನಮ್ಮ ಕನ್ನಡಿಗರಿಗೆ ಸ್ವಲ್ಪ ಹೆಚ್ಚು ಕಡಮೆಯಾಗಲ್ಲೂ ಈ ಸಿಟ್ಟು ಎಂಬುದೇ ಇರು ವುದಿಲ್ಲ. ಅದು ಇದ್ದಿದ್ದರೆ ನಮ್ಮ ಪರಿಸ್ಥಿತಿ ಹೀಗಾಗುತ್ತಿರಲಿಲ್ಲ. ಆದರೆ ಕೆಲವ ರಲ್ಲಿ ಸಿಟ್ಟಿದೆ, ನನ್ನಲ್ಲದೆ.

ಉಪಾಧ್ಯಕ್ಷರು :—ಮಾನ್ಯ ಬಂಗಾರಪ್ಪನವರಲ್ಲಿ ಸಿಟ್ಟಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ :—ಸ್ವಾಮಿ, ನಾನು ಬೇರೆಯುವರಲ್ಲೂ ಈ ಸಿಟ್ಟು ಬರಲಿ ಎಂದು ಹಾಗೆ ಮಾತನಾಡುತ್ತಿದ್ದೇನೆ, ಅಷ್ಟೇ.

ಶ್ರೀ ಕೋಣಂದೂರು ಲಿಂಗಪ್ಪ :—ಯಾರಲ್ಲಿ ಈ ಸತ್ಯದ ಬಗ್ಗೆ ಪ್ರಾಮಾಣಿ ಕತೆಯ ಬಗ್ಗೆ ಒಂದು ಕಳಕಳಿ ಇರುತ್ತದೋ ಅಂಥವರಲ್ಲಿ ಈ ಸಿಟ್ಟು ಇರಲೇ ಬೇಕು. ಆದರೆ ತಾವೀ ದಿವಸ ಈ ಜನ ಏನಿದೆ ಇವರಲ್ಲಿ ಆತ್ಮಗೌರವದ ಪ್ರಜ್ಞೆ ಮೂಡುವಂತೆ ಮಾಡಬೇಕಾಗಿದೆ. ಅವರ ಸ್ಥಿತಿಗತಿಗಳನ್ನು ಮೇಲಕ್ಕೆ ಎತ್ತಬೇಕಾ ಗಿದೆ. ಅದಕ್ಕಾಗಿ ಸರ್ಕಾರದವರು ಈ ಎಲ್ಲ ಕೆಲಸಗಳನ್ನೂ ಮಾಡಬೇಕು ಎಂದು ಹೇಳಿ ಈ ಮಸೂದೆಗೆ ನನ್ನ ಹೃತ್ಪೂರ್ವಕವಾದ ಸ್ವಾಗತವನ್ನು ನೀಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ. ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ) :—ಸನ್ಮಾನ್ಯ ಸಭಾಧ್ಯಕ್ಷರೇ ; ನಾವು ಈ ದೇಶದಲ್ಲಿ ಏನಾದರೂ ಒಂದು ಕ್ರಾಂತಿಕಾರಕವಾದ ಕೆಲಸವನ್ನು ಮಾಡಿದ್ದೇವೆಯೋ ಎಂಬುದನ್ನು ಆಲೋಚಿಸಿದಾಗ ನಾವೂ ಅಂಥ ಒಂದು ಕೆಲಸವನ್ನು ಮಾಡಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಇಂದು ಶ್ರೀ ಬಸವ ಲಿಂಗಪ್ಪನವರು ತಂದಂಥ ಒಂದು ಮಸೂದೆ ಏನಿದೆ ಅದು ಒಂದು ಅವಕಾಶ ಮಾಡಿಕೊಟ್ಟಿದೆ. ಈ ಮಸೂದೆಯಿಂದ ನಾವು ಬಡವರ ಬಗ್ಗೆ ದೀನದಲಿತರ ಬಗ್ಗೆ

(ಶ್ರೀ ಎಸ್. ಎಂ. ಶೀಠನಾಳಿ ಚಂದ್ರಶೇಖರ)

ಒಂದು ಹೇಳಿಕೊಳ್ಳುವಂಥ ಕೆಲಸವನ್ನು ಮಾಡಿದ್ದೇವೆಂದು ಹೇಳಿಕೊಳ್ಳಬಹುದು. ಇಂಥ ಒಂದು ಮಸೂದೆಯನ್ನು ಶ್ರೀಮಾನ್ ಬಸವಲಿಂಗಪ್ಪನವರು ಸಭೆಯ ಮುಂದೆ ತಂದುದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ದಿವಸ ನಾವೇನು ಈ ಒಂದು ಬಿಲ್ಲನ್ನು ಈ ದಿವಸ ಪಾಸು ಮಾಡುತ್ತಿದ್ದೇವೆ. ಇದರಿಂದ ನಾವು ಯಾವ ಜನತೆಗೆ ಹಿಂದೆ ಒಂದು ವಚನವನ್ನು ಕೊಟ್ಟಿದ್ದೇವೋ ಅದನ್ನು ಈ ದಿವಸ ಸ್ವಲ್ಪ ಮಟ್ಟಿಗಾದರೂ ಪಾಲಿಸಿದಂತಾಗುತ್ತದೆ. ಈ ಬಿಲ್ಲಿನಿಂದ. ನಮ್ಮ ವಚನವನ್ನು ಪಾಲಿಸುವುದು ನಮ್ಮ ಪಕ್ಷದ ಒಂದು ಜವಾಬ್ದಾರಿ. ಅದನ್ನು ನಾವು ಇಂದು ಪರಿಪಾಲಿಸಿದಂತಾಯಿತು ಎನ್ನಬಹುದು. ಇಂಥ ಒಂದು ಉತ್ತಮ ಕಾರ್ಯವನ್ನು ಮಾಡಿ ಪಕ್ಷದ ಕೀರ್ತಿಯನ್ನು ಉಳಿಸಿದ ಮಾನ್ಯ ಬಸವಲಿಂಗಪ್ಪನವರಿಗೆ ಎಷ್ಟು ಶ್ಲಾಘನೆ ಮಾಡಿದರೂ ತೀರದಾಗಿದೆ. ಆದರೆ ಈ ಕಾರ್ಯವನ್ನು ಮಾನ್ಯ ಬಸವಲಿಂಗಪ್ಪನವರು ಅಧಿಕಾರಕ್ಕೆ ಬಂದ ತಕ್ಷಣವೇ ಮಾಡಬೇಕಾಗಿತ್ತು. ಆದರೆ ಇನ್ನಾದರೂ ಈ ಕಾರ್ಯ ಈ ವರ್ಷದಲ್ಲೇ ಜಾರಿಗೆ ಬರುವಂತಾಗಲೆಂದು ನಾನು ಆಶಿಸುತ್ತೇನೆ. ಆದರೆ ನನಗೆ ಕೆಲವು ಕಾಲ ಅಮೇರಿಕಾ ದೇಶದಲ್ಲಿರಬೇಕಾದಂಥ ಒಂದು ಅವಕಾಶ ಸಿಕ್ಕಿತು. ಆಗ ನನ್ನನ್ನು ಅಲ್ಲಿನ ಒಬ್ಬ ವೈದ್ಯರು ಒಂದು ಊಟಕ್ಕೆ ಕರೆದಿದ್ದರು. ಅದಕ್ಕೆ ನಾನು ಹೋಗಿದ್ದೆ. ಆದರೆ ಆ ಕಾಲದಲ್ಲಿ ಅವರು ತಮ್ಮ ಇಂಡಿಯಾ ದೇಶದ ಪ್ರವಾಸದ ಬಗ್ಗೆ ಸಂಗ್ರಹಿಸಿದ್ದ ಒಂದು ಫಿಲಂ ಷೋ ಪ್ರದರ್ಶನ ಮಾಡಿದರು. ಅವರು ಅಲ್ಲಿ ತೋರಿಸಿದಂಥ ಚಿತ್ರಗಳನ್ನು ನೋಡಿದಾಗ ನನಗೆ ಅಲ್ಲಿ ಊಟ ಸೇರಲಿಲ್ಲ. ನಾನು ಹಾಗೇ ಊಟ ಮಾಡದೆ ಅಲ್ಲಿಂದ ಹೊರಟು ಬಂದೆ. ಸಾಮಾನ್ಯವಾಗಿ ನಾವು ಯಾವುದಾದರೂ ಒಂದು ದೇಶಕ್ಕೆ ಹೋದರೆ ಅಲ್ಲಿಯ ಒಳ್ಳೆಯ ದೃಶ್ಯಗಳನ್ನು ಫೋಟೋ ಹಿಡಿದುಕೊಂಡು ಬರುವುದು ವಾಡಿಕೆ. ಆದರೆ ಆತ ಹಾಗೆ ಮಾಡಿರಲಿಲ್ಲ. ಆತನು ಇಂಡಿಯಾ ದೇಶದಲ್ಲಿ ಈ ಕೊಳಚೆ ಪ್ರದೇಶಗಳಲ್ಲಿ ಯಾವ ಜನ ವಾಸ ಮಾಡುತ್ತಿದ್ದಾರೆ ಅವರ ಚಿತ್ರವನು ಹಿಡಿದುಕೊಂಡಿದ್ದು, ಅವರ ಸ್ಥಿತಿಗತಿಗಳನ್ನೂ, ಅವರು ಗುಡಿಸಿಲುಗಳಲ್ಲಿ ವಾಸ ಮಾಡತಕ್ಕ ಸ್ಥಿತಿಯನ್ನೂ ಫೋಟೋ ಹಿಡಿದುಕೊಂಡು ಬಂದು ಅವುಗಳನ್ನು ಆ ದಿವಸ ಅಲ್ಲಿ ಪ್ರದರ್ಶನ ಮಾಡಿದ. ಅದನ್ನು ನೋಡಿದಾಗ ಆ ದೃಶ್ಯ ಹೇಗಿತ್ತೆಂದರೆ ಯಾವ ಭಾರತೀಯನಿಗಾದರೂ ಅದು ತಲೆ ತಗ್ಗಿಸುವಂಥದಾಗಿತ್ತು. ನಮ್ಮ ಪಕ್ಷ ಅಧಿಕಾರಕ್ಕೆ ಬಂದು ಅನೇಕ ವರ್ಷಗಳಾಗಿದ್ದರೂ ನಾವು ಇಂಥ ಪ್ರಾಮುಖ್ಯವಾದ ಯಾವ ಒಂದು ಉತ್ತಮ ಕೆಲಸಗಳನ್ನೂ ಇಲ್ಲಿಯ ತನಕ ಮಾಡಲಿಲ್ಲ. ಈ ದಿವಸ ನಮ್ಮ ಇದೇ ಬೆಂಗಳೂರು ನಗರದಲ್ಲಿರತಕ್ಕ ಎರಡು ಬಡಾವಣೆಗಳ ವಿಚಾರ ತೆಗೆದುಕೊಂಡರೆ ಅಂದರೆ ರಾಜಾಜಿನಗರ ಮತ್ತು ವಯ್ಯಾಲಿಕಾವಲ್ ಈ ಎರಡು ಬಡಾವಣೆಗಳಲ್ಲಿರತಕ್ಕ ಸೌಲಭ್ಯಗಳನ್ನು ತುಲನ ಮಾಡಿದಾಗ ಒಂದು ಪೂರ್ವ ಅದರೆ ಇನ್ನೊಂದು ಪಶ್ಚಿಮ ಎಂದು ಹೇಳದೆ ಗತ್ಯಂತರವಿಲ್ಲ.

ಒಂದು ಬಡಾವಣೆಯಲ್ಲಿ ನಾಗರೀಕರಿಗೆ ಅಗತ್ಯವಾದ ಎಲ್ಲ ಸೌಲಭ್ಯಗಳೂ ಇದ್ದು, ಇನ್ನೊಂದು ಬಡಾವಣೆಯಲ್ಲಿ ಇಲ್ಲಿ ಪ್ರಜಾಪ್ರಭುತ್ವ ಇನ್ನೂ ಜಾರಿಗೆ ಬಂದಿದೆಯೋ ಇಲ್ಲವೋ ಅನ್ನತಕ್ಕ ಅನುಮಾನಗಳು ಬರುವಂತಿದೆ. ಅಲ್ಲಿ ಯಾವ ಸೌಲಭ್ಯಗಳೂ ಇರುವುದಿಲ್ಲ. ಆದರೆ ನಮ್ಮ ಪಕ್ಷ ಜನತೆಗೆ ಏನಾದರೂ ಒಂದು ಉತ್ತಮ ಸೇವೆಯನ್ನು ಸಲ್ಲಿಸಿದೆ ಎಂದು ಹೇಳಿಕೊಳ್ಳಬೇಕಾದರೆ ಅದು ಕಳೆದ ಒಂದು ವರ್ಷ ಅಥವಾ ಆರು ತಿಂಗಳುಗಳಲ್ಲಿ ಏನೊಂದು ಕೆಲವು ಕಾರ್ಯಗಳನ್ನು ನಮ್ಮ ಸರ್ಕಾರ ಮಾಡಿದೆ ಅನ್ನುವುದಾದರೆ ಅವು ಯಾವು ಎಂದರೆ—ಪೀಪಲ್ ಹೌಸಿಂಗ್ ಸ್ಕೀಂ ಒಂದು, ಅನಂತರ ಬಡವರಿಗೆ ನಿವೇಶನಗಳ ಹಂಚಿಕೆ, ಅನಂತರ 50 ಮೈಲಿ ರಸ್ತೆಗಳ ಕಾರ್ಯ ಮತ್ತು ಈ ಸ್ಲಂ ಕ್ಲಿಯರೆನ್ಸ್ ಕೆಲಸಗಳು ಬಹಳ ಶ್ಲಾಘನೀಯವಾದ ಕಾರ್ಯಗಳಾಗಿವೆ.

ಇನ್ನು ಪ್ರಸಕ್ತ ಬಿಲ್ಲಿನ ಬಗ್ಗೆ ಎರಡು ಮಾತುಗಳನ್ನು ಹೇಳುವುದಾದರೆ ಇದರಲ್ಲಿ ಕೆಲವು ನ್ಯೂನತೆಗಳನ್ನು ನಾನು ಕಂಡುಕೊಂಡಿದ್ದೇನೆ. ಅವುಗಳನ್ನು ಈಗ ಇಲ್ಲಿ ಹೇಳದೆ ಗತ್ಯಂತರವಿಲ್ಲ.

ಈ ಮಸೂದೆಯಲ್ಲಿ ಸರ್ಕಾರದರು ಪರಿಹಾರದ ವಿಚಾರದಲ್ಲಿ ಕೋರ್ಟಿಗೆ ಅಪೀಲನ್ನು ಹಾಕಿಕೊಳ್ಳುವುದಕ್ಕೆ ಒಂದು ಅವಕಾಶ ಮಾಡಿದ್ದಾರೆ. ಇದಕ್ಕೆ ಹೇಗೆ ಅವಕಾಶ ಸಿಕ್ಕಿತೋ ತಿಳಿಯಲಿಲ್ಲ. ನಮ್ಮ ರಾಜ್ಯಾಂಗಕ್ಕೆ ಇತ್ತೀಚೆಗೆ ಆದ ತಿದ್ದುಪಡಿಯಲ್ಲಿ ಈ ಪರಿಹಾರದ ವಿಚಾರದಲ್ಲಿ ಯಾರಿಗೂ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಲ್ಲ. ಆದಾಗ್ಗೂ ಇಲ್ಲಿ ಒಂದು ಅವಕಾಶ ಈ ಬಿಲ್ಲಿನಲ್ಲಿದೆ. ಆದುದರಿಂದ ಇದು ನಮ್ಮ ರಾಜ್ಯಾಂಗಕ್ಕೇ ತದ್ವಿರುದ್ಧವಾಗಿದೆ ಎಂದು ನನಗೆ ಅನಿಸುತ್ತಿದೆ. ಇದನ್ನು ಸರ್ಕಾರದವರು ಇನ್ನೊಮ್ಮೆ ಪರಿಶೀಲಿಸಬೇಕಾಗಿದೆ.

ಇನ್ನು ಸರ್ಕಾರದವರು ಯಾವುದಾದರೊಂದು ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಡಿಕ್ಲೇರ್ ಮಾಡಿ ಅದನ್ನು ಅಕ್ವಯರ್ ಮಾಡಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಡಿದ್ದಾರೆ. ಆದರೆ ಈ ವಿಚಾರದಲ್ಲಿ ಅಪೀಲಿಗೆ ಸರ್ಕಾರಕ್ಕೆ ಅಪೀಲ್ ಹಾಕಿಕೊಳ್ಳಲು ಅವಕಾಶ ಮಾಡಿದೆ. ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಲ್ಲ. ಆದರೆ ಒಂದು ವಿಚಾರದಲ್ಲಿ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ನೀಡಿ, ಇನ್ನೊಂದು ವಿಚಾರದಲ್ಲಿ ಅವಕಾಶವಿಲ್ಲ ಎನ್ನುವುದು ಹೇಗೆ ಸರಿ? ಮಾನ್ಯ ಬಸವಲಿಂಗಪ್ಪನವರು ಈ ದಿವಸ ಈ ಬಿಲ್ಲನ್ನು ತಂದಿದ್ದಾರೆ. ಆದರೆ ಸದಾಕಾಲದಲ್ಲೂ ಇವರೇ ಇಲ್ಲಿ ಮಂತ್ರಿಗಳಾಗಿರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಮುಂದೆ ಈ ಮಂತ್ರಿಗಳ ಸ್ಥಾನಕ್ಕೆ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ)

ಬರತಕ್ಕ ಜನರೇನಿದ್ದಾರೆ ಅವರಿಗೆ ಯಾವುದಾದರೂ ಒಂದು ಕಡೆ ಯಾರ ಮೇಲಾದರೂ ಒಂದು ದ್ವೇಷವಿದ್ದರೆ ಆಗ ಈ ಬಿಲ್ಲನ್ನು ಅವರು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಆಗಬಹುದು. ಆದುದರಿಂದ ಇಂಥ ಕಲಂಗಳನ್ನು ಹಾಕುವಾಗ ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ಆದುದರಿಂದ ಜನರಿಗೆ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಸರ್ಕಾರದವರು ಸದವಕಾಶಗಳನ್ನು ಮೊಟಕು ಮಾಡಬಾರದು. ಆದುದರಿಂದ ಇಂಥ ಕ್ಲಾಜುಗಳನ್ನು ಹಾಕುವುದು ಸರಿಯಲ್ಲ ಎಂಬುದು ನನ್ನ ಭಾವನೆ. ಮುಂದೆ ಅಧಿಕಾರಕ್ಕೆ ಬರತಕ್ಕವರು ಇದನ್ನು ತಿದ್ದಿ ಬದಲಾವಣೆ ಮಾಡಿದರೆ ಆಗ ನಮ್ಮ ಪ್ರಿಸ್ಟೇಜ್ ಕಡಮೆಯಾಗುತ್ತದೆ.

ಇನ್ನು ರಿಜಿಸ್ಟ್ರೇಷನ್ ಆಫ್ ದಿ ಬಿಲ್ಡಿಂಗ್ಸ್ ಇನ್ ದಿ ಸ್ಲಂ ಏರಿಯಾ ಎಂದಿದ್ದಾರೆ. ಇದನ್ನು ಆ ದೀನದಲಿತರಿಗೆ ಯಾರು ಹೇಳಿಕೊಡತಕ್ಕವರು? ಅವರು ಅದನ್ನು ಮಾಡಿಕೊಳ್ಳದಿದ್ದರೆ ಮುಂದೆ ಅದರ ಪರಿಣಾಮವೇನು? ಅವರ ಪರಿಸ್ಥಿತಿಯೇನು? ಇದನ್ನೆಲ್ಲಾ ತಾವು ತಿಳಿಸಬೇಕು. ಹೀಗಾದರೆ ಮುಂದೆ ಅವರ ಏಳಿಗೆಯನ್ನು ಕೈಗೊಳ್ಳುವುದಕ್ಕೆ ಯಾರು ಇದ್ದಾರೆ? ಆದರೆ ಶ್ರೀ ಶ್ಯಾಮಣ್ಣ ನವರು ಕಾನ್‌ಪುರದ ವಿಚಾರ ಹೇಳಿದರು. ನಾನೂ ಕಾನ್‌ಪುರಕ್ಕೆ ಹೋಗಿದ್ದೇನೆ. ಆದರೆ ಅಲ್ಲಿ ಜನರು ಸ್ಲಂ ಕ್ಲಿಯರ್ ಮಾಡಿ ಅಲ್ಲಿ 7-8 ಅಂತಸ್ತಿನ ಮನೆಗಳನ್ನು ಕಟ್ಟಿದ್ದಾರೆ. ಆದರೆ ಶ್ರೀ ಶ್ಯಾಮಣ್ಣನವರು ಹೇಳಿದ ಆ ಷೆಡ್ಡುಗಳನ್ನು ಕಟ್ಟಿಸ ಬೇಕೆಂದು ಹೇಳಿದ್ದನ್ನು ನಾನು ಒಪ್ಪಲಾರೆ.

4-30 P. M.

ಆದ್ದರಿಂದ ಸ್ಲಂ ಏರಿಯಾಗಳಲ್ಲಿ ವಸತಿ ಸೌಕರ್ಯಗಳನ್ನು ಬಡವರಿಗೆ ಮಾಡಿ ಕೊಡಬೇಕಾದರೆ ಹೆಚ್ಚು ಜಾಗ ನಮಗೆ ಬೇಕಾಗುತ್ತದೆ. ನಮ್ಮಲ್ಲಿ ಅಷ್ಟಾಗಿ ಒಳ್ಳೆಯ ಜಾಗ ಸಿಗದೇ ಇರುವುದರಿಂದ ಅದರ ಬದಲು ಅಲ್ಲಿ 10-15-20 ಅಂತಸ್ತಿನ ಮನೆಗಳನ್ನು ಕಟ್ಟಿಕೊಟ್ಟರೆ ಹೆಚ್ಚಿನ ಜನರು ವಾಸಮಾಡುವುದಕ್ಕೆ ಅವಕಾಶ ವಿರುವುದರಿಂದ, ಈಗ ಇರತಕ್ಕ ಜಾಗ ನಿಜವಾಗಿ ಸಾಕಾಗುತ್ತದೆಯೇ ಎಂಬುದನ್ನು ನಾನು ಕೇಳಬಯಸುತ್ತೇನೆ. ಇನ್ನೊಂದು ವಿಷಯವನ್ನು ನಾನು ಇಲ್ಲಿ ಹೇಳಬೇಕಾಗಿದೆ ಯಾವನಾದರೂ ಒಬ್ಬ ಮನೆಯ ಮಾಲೀಕ ತನಗೆ ತನ್ನ ಮನೆಯನ್ನು ಹೇಗಾದರೂ ಮಾಡಿ ಬಿಡಿಸಿಕೊಳ್ಳಬೇಕೆಂಬ ದೃಷ್ಟಿಯನ್ನು ಇಟ್ಟುಕೊಳ್ಳುವುದಾದರೆ ಅವನೂ ಕೂಡ ಅರ್ಜಿ ಹಾಕಿಕೊಂಡು, ಇದು ಸ್ಲಯಂ ಏರಿಯಾ, ಇದಕ್ಕೆ ಹೆಚ್ಚಿನ ರಿಪೇರಿ ಮಾಡುವ ಅವಶ್ಯಕತೆ ಇದೆ. ಇದರಲ್ಲಿ ತಮ್ಮಿಂದ ಪರವಾನೆ ತೆಗೆದುಕೊಂಡು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದರಿಂದ ಅದರಲ್ಲಿ ಒಂದು ನ್ಯೂನತೆ ಯನ್ನು ನಾನು ಕಂಡುಕೊಂಡಿದ್ದೇನೆ. ಅವನು ಬಾಡಿಗೆಯನ್ನು ಜಾಸ್ತಿ ಮಾಡುವ

ಹಾಗೆ ಇಲ್ಲ. ಟೆನೆನ್ಸಿ ಆಕ್ಟ್ ಪ್ರಕಾರ ಬಾಡಿಗೆಯನ್ನು ಹೆಚ್ಚು ಮಾಡುವುದಕ್ಕೆ ಈ ಒಂದು ಅಸ್ತ್ರವನ್ನು ಉಪಯೋಗಿಸಿಕೊಳ್ಳುವ ಅವಕಾಶವಿದೆ. ಇವತ್ತು ತಾವು ಈ ಕಾನೂನುಗಳನ್ನು ಒಂದು ಒಳ್ಳೆಯ ಉದ್ದೇಶದಿಂದ ತಂದಿದ್ದರೂ, ಅವನ್ನು ಒಂದು ರೀತಿಯಲ್ಲಿ ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳುವ ಹಾಗೆ ಇದೆ. ಬಡವರಾಗಿರುವವರು ಮನೆಯನ್ನು ಬಿಡಿಸಿಕೊಳ್ಳುವುದಕ್ಕಾಗುವುದಿಲ್ಲ ಇದರಲ್ಲಿ ಸ್ಲಂ ಏರಿಯೊದಲ್ಲಿ ಏನಾದರೂ ದುರುಪಯೋಗವಾಗುತ್ತಿದೆಯೋ ಏನೋ ಎಂಬುದನ್ನು ತಾವು ಯೋಚನೆ ಮಾಡಬೇಕು. ನನ್ನ ಈ ಒಂದು ಅಭಿಪ್ರಾಯ ವನ್ನು ನಾನು ಈಗ ತಿಳಿಸಿದ್ದೇನೆ. ಅನಂತರ ನೀವು ಒಂದು ವೇಳೆ ಸ್ಲಂ ಏರಿಯೊದಲ್ಲಿ ಇಂಪ್ರೂವ್‌ಮೆಂಟ್ಸ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡು ಅಲ್ಲಿ ಆಗತಕ್ಕ ಖರ್ಚನ್ನು ಅಲ್ಲಿ ವಾಸ ಮಾಡತಕ್ಕವರ ಮೇಲೆ ಹಾಕಬಹುದೆಂದು ತಾವು ಇದರಲ್ಲಿ ತಿಳಿಸಿದ್ದೀರಿ, ನಮ್ಮಲ್ಲಿ ತಲೆ ಶಿರೋಭಾರ ಎಂಬ ತಕ್ಕ ಒಂದು ಗಾದೆ ಕನ್ನಡದಲ್ಲಿದೆ. ನೀವು ಸಾವಿರ ಗಟ್ಟಲೆ ಖರ್ಚು ಮಾಡಿ ಅಂದರೆ ಒಂದಕ್ಕೆ ಹತ್ತರಷ್ಟು ಖರ್ಚುಮಾಡಿ ಅದನ್ನು ಅಲ್ಲಿ ವಾಸ ಮಾಡತಕ್ಕ ಬಡವರನ್ನು ಕೊಡಿ ಎಂದು ಹೇಳಿದರೆ ಅದರಿಂದ ಬಡವರಿಗೆ ಬಹಳ ಕಷ್ಟವಾಗುತ್ತದೆ. ಯಾವಾಗಲೂ ಸ್ಲಂ ಏರಿಯೊದಲ್ಲಿ ವಾಸ ಮಾಡುವವರಿಗೆ ಒಂದು ಹೊತ್ತಿಗಿದ್ದರೆ ಇನ್ನೊಂದು ಹೊತ್ತಿಗಿರುವುದಿಲ್ಲ. ಅಲ್ಲಿರುವವರು ಸಾಮಾನ್ಯ ವಾಗಿ ಶ್ರೀಮಂತರಾಗಿರುವುದಿಲ್ಲ. ಅಲ್ಲಿರತಕ್ಕ ಸ್ಲಂ ಏರಿಯಾಗಳನ್ನು ಇಡೀ ನೆಲ ಸಮ ಮಾಡಿ ಕೆಡವಿ ತಮ್ಮ ಮೆಷಿನರಿಯಿಂದ ವಿಶೇಷ ಖರ್ಚುಮಾಡಿ ಅಂದರೆ ಒಂದು ರೂಪಾಯಿ ಖರ್ಚು ಆಗುವ ಕಡೆ 10 ರೂಪಾಯಿಗಳನ್ನು ಖರ್ಚುಮಾಡಿದರೆ, ಅದನ್ನು ಆ ಬಡವನ ಮೇಲೆ ಹಾಕಿದರೆ ಅವನು ಎಲ್ಲಿಂದ ತಂದು ಕೊಡಬೇಕು ? ಅವನಿಗೂ ಅಭಿಪ್ರಾಯ ಸ್ವಾತಂತ್ರ್ಯ ಇರಬೇಡವೇ ಎಂಬುದನ್ನು ತಾವು ಯೋಚನೆ ಮಾಡಬೇಕು.

ಇನ್ನು ಕ್ಲಾಜು 10ರಲ್ಲಿ ಡಿಮಾಲಿಷನ್ ಆಫ್ ಬಿಲ್ಡಿಂಗ್ಸ್ ವಿಷಯವಾಗಿ ಹೇಳಿದೆ. ಇದರ ಪ್ರಕಾರ ಮಾಲೀಕನ ಅಥವಾ ಅವನ ಪರವಾಗಿ ಯಾವ ಮನುಷ್ಯ ಇರುತ್ತಾನೋ ಅವನ ಒಪ್ಪಿಗೆ ಇಲ್ಲದಿದ್ದರೂ ಬಲವಂತವಾಗಿ ಮನೆಯೊಳಗೆ ನುಗ್ಗಿ ಮನೆಯ ಸಾಮಾನು ತೆಗೆದುಕೊಂಡು ಮಾರುವ ಒಂದು ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಇಂತಹ ಅವಕಾಶವಿರುವುದು ಸರಿಯೋ ತಪ್ಪೋ ಎಂಬುದನ್ನು ತಾವು ಯೋಚನೆ ಮಾಡಬೇಕು. ಅಲ್ಲಿರತಕ್ಕವರಿಗೆ ಸರಿಯಾದ ಹಾಗೂ ಸುವ್ಯವಸ್ಥಿತವಾದ ರೀತಿಯಲ್ಲಿ ವಾಸಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದರಲ್ಲಿ ಈ ಒಂದು ಕಾನೂನು ಪ್ರಕಾರ ಮುಂದೆ ಏನಾದರೂ ದುರುಪಯೋಗ ವಾದರೆ ಖಂಡಿತವಾಗಿ ನಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಕೆಟ್ಟ ಹೆಸರು ಬರು ತ್ತದೆಯೋ ಏನೋ ಎಂದು ನಾನು ತಿಳಿದಿದ್ದೇನೆ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಇನ್ನು ಕ್ಲಾಜು 11 ಸಬ್ ಸೆಕ್ಷನ್ (2)ರಲ್ಲಿ ಹೇಳಿರುವ ಪ್ರಕಾರ ಒಂದು ವೇಳೆ ನಿಜವಾಗಿ ಒಂದು ಏರಿಯೂ ಕೊಳಚೆ ಪ್ರದೇಶವಾಗಿದ್ದಾಗ, ಮೇಲಧಿಕಾರಿಗಳು ಏನಾದರೂ ಅದು ಕೊಳಚೆ ಪ್ರದೇಶ ಅಲ್ಲವೆಂದು ಹೇಳಿದರೆ, ಅವನು ಬೇರೆ ಕಡೆ ಹೋಗಿ ಆ ರೀತಿಯಾಗಿ ಹೇಳಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶವೇ ಇಲ್ಲ. ಆದ್ದರಿಂದ ಇದರಲ್ಲಿ ಏನೊಂದು ರಿಜಿಡಿಟ್ ಇದೆಯೋ ಅದನ್ನು ತಪ್ಪಿಸಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಕ್ಲಾಜು 29ರ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಹೇಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಬರೀ ಬ್ರಾಡ್ ಫೀಚರ್ ಏನಿವೆಯೋ ಅದರ ಬಗೆ ಮಾತನ್ನಾಡಬೇಕು. ಕ್ಲಾಜ್ ಬೈ ಕ್ಲಾಜ್ ಬಗ್ಗೆ ಚರ್ಚೆ ಬಂದಾಗ ಬೇಕಾದರೆ ಮತ್ತೊಂದು ಸಾರಿ ಮಾತನಾಡಬಹುದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್:—ನಾನು ಬಿಲ್ ಮೇಲೆ ಮಾತನಾಡುತ್ತಿದ್ದೇನೆ. ಕ್ಲಾಜುಗಳ ವಿಷಯವಾಗಿ ಕೆಲವಾರು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಆ ರೀತಿಯಾಗಿ ಮಾತನಾಡುವುದು ಬೇಡವೆಂದರೆ, ನಾನು ಎಲೆಕ್ಷನ್ ಭಾಷಣ ಮಾಡಿದರೆ ಸಾಕೆ!, ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪ ನವರು ಭಾಷಣ ಮಾಡಿದರೇ ಆ ರೀತಿ ಮಾಡಬೇಕೇ ?

ಶ್ರೀ ಕೋಣಂದೂರು ಲಿಂಗಪ್ಪ :— ಮಾನ್ಯ ಸದಸ್ಯರಿಗೆ ಇಲ್ಲಿ ಯಾವ ವಿಷಯದ ಬಗ್ಗೆ ಏನು ಮಾತನಾಡಬೇಕೆಂಬ ಬಗ್ಗೆ ತಿಳುವಳಿಕೆ ಇಲ್ಲದಿದ್ದರೆ ನಾವು ಏನು ಹೇಳೋಣ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್:- ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರಿಂದ ನಾನು ಇಲ್ಲಿ ಹೇಗೆ ಮಾತನಾಡಬೇಕೆಂಬುದನ್ನು ತಿಳಿದುಕೊಳ್ಳ ಬೇಕಾಗಿಲ್ಲ. ಅವರು ಸಮಾಜವಾದಿ ಸಿದ್ಧಾಂತ ಹೇಳಿದರು. ಅವರು ಇದರಲ್ಲಿ ಬಡವರಿಗೆ ಪರಿಹಾರ ಎಲ್ಲಿದೆಯೆಂಬುದನ್ನು ತಿಳಿದುಕೊಳ್ಳಬೇಕು. ಇದು ಸಮಾಜ ವಾದೀ ಸರ್ಕಾರ.

ಉಪಾಧ್ಯಕ್ಷರು :— ಮಾನ್ಯ ಸದಸ್ಯರಾದ ಶ್ರೀ ಕೋಣಂದೂರು ಲಿಂಗಪ್ಪ ನವರ ಹೆಸರನ್ನು ಏಕೆ ಉಚ್ಚಾರ ಮಾಡಿದಿರಿ ?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :— ಏಕೆಂದರೆ, ಅವರು ಮಧ್ಯೆ ಇಂಟರವೀನ್ ಮಾಡಿದರು.

ಶ್ರೀ ಎಸ್. ಬಂಗಾರಪ್ಪ :— ನಿಮ್ಮ ಗರೀಬಿ ಹಟಾವೋ ಸಾಕು. ಅದು ದೇಶಕ್ಕೇ ಈಗ ಗೊತ್ತಿದೆ.

ಉಪಾಧ್ಯಕ್ಷರು: – ದಯವಿಟ್ಟು ಸಂತೋಷವಾಗಿ ಹೇಳಿ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್:— ತಾವು ಇದರ ಬಗ್ಗೆ ಒಂದು ಫೇಜ್ಡ್ ಪ್ರೋಗ್ರಾಂನ್ನು ಹಾಕಿಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಮೊದಲು ಸ್ಲಂ ಏರಿಯಾವನ್ನು ಕ್ಲಿಯರ್ ಮಾಡುವುದಕ್ಕೆ ಬದಲು ಅಲ್ಲಿ ವಾಸ ಮಾಡತಕ್ಕವರಿಗೆ ವಸತಿ ಸೌಕರ್ಯವನ್ನು ಸರಿಯಾಗಿ ಮಾಡಿಕೊಟ್ಟು ಅನಂತರ ಆ ಕಾರ್ಯವನ್ನು ಮಾಡುವುದು ಒಳ್ಳೆಯದೆಂದು ನಾನು ತಿಳಿದಿದ್ದೇನೆ. ನಾನು ಪಾಶ್ಚಿಮಾತ್ಯ ದೇಶಗಳಲ್ಲಿ ನೋಡಿರುವ ಹಾಗೆ ಸ್ಲಂ ಏರಿಯಾಗಳಲ್ಲಿ ವಾಸ ಮಾಡತಕ್ಕವರಿಗೆ ಕಾಲೋನಿಗಳನ್ನು ಕಟ್ಟಿರುತ್ತಾರೆ. ಫ್ಯಾಕ್ಟರಿ ಕೆಲಸಗಾರರಿಗೆ ಮತ್ತು ಸಣ್ಣ ಸಣ್ಣ ಲೇಬರರ್ಸ್‌ಗೆ ಕಾಲೋನಿಗಳನ್ನು ಕಟ್ಟಿ ಕೊಡುವ ಹಾಗೆ ಇಲ್ಲಿಯೂ ಕಟ್ಟಿಕೊಟ್ಟರೆ ಬಹಳ ಒಳ್ಳೆಯದು. ಈ ಒಂದು ಅವಕಾಶವನ್ನು ಮೊದಲು ಮಾಡಿಕೊಟ್ಟು ಅನಂತರ ಸ್ಲಂ ಏರಿಯಾವನ್ನು ಕ್ಲಿಯರ್ ಮಾಡಿದರೆ ಆಗ ಜನರು ನಮ್ಮ ಬಗ್ಗೆ ನಿಜವಾಗಿ ಒಂದು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಈಗಾಗಲೇ ಮಾನ್ಯ ಶ್ರೀ ಬಸವಲಿಂಗಪ್ಪನವರಿಗೆ 'ಬಡವರ ಬಂಧು' ಎಂಬ ಬಿರುದನ್ನು ಜನ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರಿಂದ ನನಗೇನೂ ಗೈಡ್ ಲೈನ್ಸ್ ಬೇಕಾಗಿಲ್ಲ. ನಾನು ಈಗ ಕ್ಲಾಜ್‌ಬೈ ಕ್ಲಾಜ್ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಏಕೆಂದರೆ ನನಗೆ ಮಾನ್ಯ ಅಧ್ಯಕ್ಷರು ಸಾಕಷ್ಟು ಕಾಲಾವಕಾಶವನ್ನು ಕೊಡುವುದಿಲ್ಲ.

ಉಪಾಧ್ಯಕ್ಷರು:— ಮಾನ್ಯ ಸದಸ್ಯರು ರೂಲ್ಸ್ ಆಫ್ ಪ್ರೊಸೀಜರನ್ನು ನೋಡಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್;— ನಾನು ರೂಲ್ಸ್ ಆಫ್ ಪ್ರೊಸೀಜರನ್ನು ಚೆನ್ನಾಗಿ ಓದಿದ್ದೇನೆ.

ಕೊನೆಯದಾಗಿ ಯಾರು ಜೀವನದಲ್ಲಿ ಬೆಳಕನ್ನು ಕಂಡಿರಲಿಲ್ಲವೋ ಅವರ ಬಗ್ಗೆ ಅನುಕಂಪ ತೋರಿಸಿ ತಂದಿರತಕ್ಕ ಈ ಮಸೂದೆಯನ್ನು ಸಂಪೂರ್ಣವಾಗಿ ನಾನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

‡ ಶ್ರೀ ಎಸ್. ಬಂಗಾರಪ್ಪ (ಸೊರಬ) :— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪೌರಾಡಳಿತ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂತಹ ಈ ಮಸೂದೆ

(ಶ್ರೀ ಎಸ್. ಬಂಗಾರಪ್ಪ)

ಯನ್ನು ನಾನು ಸ್ವಾಗತ ಮಾಡುತ್ತಾ ನನ್ನ ಕೆಲವು ಅನುಮಾನಗಳು ಇನಿವೆ, ಅವುಗಳನ್ನು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಬಗೆಹರಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಮಸೂದೆಯಲ್ಲಿ ಕಂಡುಬರತಕ್ಕ ಕೆಲವಾರು ಅಂಶಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರು ಹೇಳಿದ ಎರಡು ಅಂಶಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮಾನ್ಯ ಕೋಣಂದೂರು ಲಿಂಗಪ್ಪನವರು ಪರಿಹಾರ ಹಣಕೊಡತಕ್ಕ ವಿಷಯದಲ್ಲಿ ಅಕ್ವಯರ್ ಮಾಡಿಕೊಂಡ ಆಸ್ತಿಗೆ ಸಂಪೂರ್ಣವಾದ ಹಣ ಕೊಡಬೇಕಾಗಿಲ್ಲವೆಂದು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಮೂಲತ: ಒಬ್ಬ ವ್ಯಕ್ತಿ ಎಷ್ಟು ಆಸ್ತಿ ಇಟ್ಟು ಕೊಂಡಿದ್ದರೂ ಸಮಾಜವಾದವನ್ನು ಜಾರಿಗೆ ತರಬೇಕೆಂದು ಹೇಳುವವರು ಪೂರ್ಣ ಪರಿಹಾರ ಕೊಟ್ಟರೆ, ಅವರನ್ನು ಪುನಃ ನೀವು ಬಂಡವಾಳಶಾಹಿಗಳನ್ನಾಗಿ ಮಾಡಿದ ಹಾಗೆ ಅಗುತ್ತದೆ. ನೀವು ಬಂಡವಾಳಶಾಹಿ ಜನರಿಗೆ ವಿರೋಧವಾಗಿರುತ್ತೇನೆ. ಬಡ ಜನರ ಉದ್ಧಾರ ಮಾಡುತ್ತೇನೆಂದು ಚುನಾವಣೆಯ ಕಾಲದಲ್ಲಿ ಪ್ರಸಾರ ಮಾಡಿರುವಾಗ, ಪೂರ್ಣವಾದ ಪರಿಹಾರ ಕೊಡುವುದನ್ನು ನೀವು ಕೈಬಿಡಬೇಕಾಗು ತ್ತದೆ. ಮಾನ್ಯ ಚಂದ್ರಶೇಖರವರು ಸಹ ಒಂದು ವಿಚಾರವನ್ನು ಹೇಳಿದ್ದಾರೆ. ನಾವು ಮೊನ್ನೆ ತಾನೆ ರಾಜ್ಯಾಂಗಕ್ಕೆ ಒಂದು ತಿದ್ದುಪಡಿ ಮಾಡಿದ್ದನ್ನು ರೆಟಿಫೈ ಮಾಡಿ ಕಳಿಸಿದ್ದೇವೆ. ಅದರ ಪ್ರಕಾರ ಸರ್ಕಾರ ಒಂದು ತೀರ್ಮಾನ ಮಾಡಿದ ಮೇಲೆ ಯಾವ ಅಪೀಲಿಗೂ ಅವಕಾಶ ಇಲ್ಲ ಎಂಬ ರೀತಿಯಲ್ಲಿ ಭಾರತದ ರಾಜ್ಯಾಂಗಕ್ಕೆ ತಿದ್ದುಪಡಿಯಾಗಿದ್ದೆ. ಅದನ್ನು ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ತಂದಿದ್ದಾರೋ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ಅದನ್ನು ಇದರಲ್ಲಿ ಸೇರಿಸದಿದ್ದರೆ, ಪುನಃ ಅದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ, ನಾಳೆ ಯಾರಾದರೂ ಕೋರ್ಟಿಗೆ ಹೋದರೆ ಅದು ಬಿದ್ದುಹೋಗ ಬಹುದು.

ಇನ್ನು ಸ್ಟೇಟ್‌ಮೆಂಟ್ ಆಫ್ ಒಬಜೆಕ್ಟ್ಸ್ ಅಂಡ ರೀಸನ್ಸ್‌ನಲ್ಲಿ ಅಪೀಲ್ ಸುಪ್ರಿಂ ಕೋರ್ಟಿನಲ್ಲಿ ಪೆಂಡಿಂಗ್ ಇದೆ ಎಂಬ ಮಾತನ್ನು ಹೇಳಿದ್ದಾರೆ. ಆ ಮಾತು ಇಲ್ಲಿ ಅನಾವಶ್ಯಕವೆಂದು ತೋರುತ್ತದೆ. ಅಂತೂ ತಾವು ಏನೊಂದು ಮಸೂದೆಯನ್ನು ಇಲ್ಲಿ ಮಂಡಿಸಿದ್ದೀರಿ. ಇದು ನಿಜವಾಗಿಯೂ ಸಂತೋಷಪಡತಕ್ಕ ವಿಚಾರ. ಯಾವ ಒಂದು ವರ್ಗ ಇಷ್ಟು ವರ್ಷಗಳಿಂದಲೂ ಆರ್ಥಿಕವಾಗಿ ತುಳಿತಕ್ಕೆ ಸಿಕ್ಕಿದೆ, ಅಂಥ ಜನರಿಗೆ ಒಂದು ಮೆಟ್ಟಿಲನ್ನು ಹತ್ತುವುದಕ್ಕೆ ಈ ಬಿಲ್ಲು ಸಹಾಯಕ ವಾಗುತ್ತದೆ. ಕಳೆದ 25 ವರ್ಷಗಳಿಂದಲೂ ನಾವು ಗರೀಬಿ ಹಠಾವೋ ಮಾಡು ತ್ತೇವೆ, ಸ್ಲಂ ಕ್ಲಿಯರೆನ್ಸ್ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಚುನಾವಣೆ ಕಾಲದಲ್ಲಿ ಹೇಳಿದರೂ ಸಹ ಯಾರೂ ಅದರ ಕಡೆಗೆ ಗಮನ ಕೊಟ್ಟಿಲ್ಲ. ಈ ವಿಷಯದಲ್ಲಿ ಇಂಥ ಮಸೂದೆಯನ್ನು ತಂದುದಕ್ಕಾಗಿ ಮಾನ್ಯ ಬಸವಲಿಂಗಪ್ಪ

ನವರನ್ನು ಅಭಿನಂದಿಸಬೇಕಾಗಿದೆ. ಇದು ನಿಜವಾಗಿಯೂ ಸಂತೋಷಪಡತಕ್ಕ ಮಸೂದೆ. ಇವತ್ತು ಈ ವರ್ಗವನ್ನು ಎಲ್ಲರೂ ಮೇಲಕ್ಕೆ ಎತ್ತಬೇಕಾಗಿದೆ. ಇಂದು ಸದಾಶಿವನಗರದ ಮನೆಗಳಿಗೂ ಈ ಕೊಳಚೆ ಪ್ರದೇಶದಲ್ಲಿರುವ ಮನೆಗಳಿಗೂ ಇರುವ ವ್ಯತ್ಯಾಸ ಎಷ್ಟು ಎಂಬುದು ಎಲ್ಲರಿಗೂ ಗೊತ್ತಿದೆ. ಆದರೂ ಸಹ ಓಟಿನ ಸಮಯದಲ್ಲಿ ಈ ಜನರು ಕೊಳಚೆ ಪ್ರದೇಶಗಳಿಗೂ ಭೇಟಿ ಕೊಟ್ಟು, ಅಲ್ಲಿ ಮೂಗು ಮುಚ್ಚಿಕೊಂಡು ಗಲೀಜು ಇದ್ದರೂ ಪರವಾಗಿಲ್ಲವೆಂದು ಕಟ್ಟೆಯ ಮೇಲೆ ಕುಳಿತುಕೊಂಡು ಮತವನ್ನು ಗಳಿಸುವುದಕ್ಕೆ ಪ್ರಚಾರ ಮಾಡುತ್ತಿದ್ದ ಜನರು ಅಧಿಕಾರಕ್ಕೆ ಬಂದ ಮೇಲೆ ಆ ಜನರನ್ನು ಸಂಪೂರ್ಣವಾಗಿ ಮರೆತು ಬಿಟ್ಟು ಹಾಳು ಮಾಡಿಬಿಟ್ಟಿದ್ದಾರೆ. ಇಂಥ ವರ್ಗ ದೇಶದಲ್ಲಿ ಬೆಳೆದುಬಿಟ್ಟಿದೆ. ಈ ವರ್ಗ ಆರ್ಥಿಕವಾಗಿ ಹಿಂದುಳಿದ ಜನರನ್ನು ತುಳಿಯುತ್ತಿರುವ ವರ್ಗವಾಗಿದೆ. ಇದನ್ನು ನಾವು ನಿರ್ಮೂಲಗೊಳಿಸಬೇಕು.

ಇನ್ನೊಂದು ವಿಚಾರವನ್ನು ಮಾನ್ಯ ಶಾಮಣ್ಣನವರು ಹೇಳಿದರು. ಹಲವಾರು ರಾಜ್ಯಗಳಿಂದ ಬಂದು ಕೆಲವು ಜನರು ಇಲ್ಲಿ ಕ್ಯಾಂಪ್ ಹಾಕಿಕೊಂಡಿರುತ್ತಾರೆ. ಆದ್ದರಿಂದ ಇಲ್ಲಿರತಕ್ಕಂಥ ಕನ್ನಡಿಗರಿಗೆ ಮೊದಲನೆಯದಾಗಿ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಸಹ ಬೆಂಬಲಿಸುತ್ತೇನೆ. ಮೊದಲಿಗೆ ನಮ್ಮ ರಾಜ್ಯದ ಕನ್ನಡಿಗರಿಗೆ ಪ್ರಾಶಸ್ತ್ಯ ಕೊಡಬೇಕು. ನಾಳೆ ಕಾನೂನು ಪ್ರಕಾರ ಸಿಗತಕ್ಕಂತಹ ಸೌಲಭ್ಯಗಳನ್ನು ಕೊಡುವಾಗ ಮೊದಲಿಗೆ ಕನ್ನಡ ರಾಜ್ಯದ ಕನ್ನಡಿಗರಿಗೆ ಕೊಡಬೇಕು. ಆ ಮೇಲೆ ಬೇರೆಯವರಿಗೂ ಸಹ ಕೊಡಬಾರದು ಎಂದು ಹೇಳುವುದಿಲ್ಲ. ಏಕೆಂದರೆ ಅವರನ್ನು ಸಹ ಬಿಟ್ಟು ಬಿಡಿ ಎಂದು ಹೇಳುವುದಿಲ್ಲ. ಆದರೆ ಈ ಮಸೂದೆಯಲ್ಲಿ ಸ್ಲಂ ಏರಿಯಾಗಳನ್ನು ನೋಟಿಫೈ ಮಾಡಬೇಕಾದರೆ ಇದಕ್ಕೆ ಯಾವ ಒಂದು ರಾಜಕೀಯ ಸೋಂಕು ಸಹ ಇಲ್ಲದ ಹಾಗೆ ಮಾಡಬೇಕು. ಆ ರೀತಿ ಮಾಡತಕ್ಕ ಅಧಿಕಾರಿಯನ್ನು ಇಲ್ಲಿಗೆ ಹಾಕಬೇಕು. ಯಾವ ಅಧಿಕಾರಿಗೆ ಇದರ ಅಧಿಕಾರವನ್ನು ಕೊಡುತ್ತೀರೋ, ಅವರು ಅದನ್ನು ನ್ಯಾಯವಾದ ರೀತಿಯಲ್ಲಿ ಚಲಾಯಿಸುವ ಹಾಗೆ ಇರಬೇಕು. ಮತ್ತು ಇದಕ್ಕೆ ಒಬ್ಬ ದಕ್ಷ ಆಡಳಿತಗಾರರನ್ನು ಹಾಕಬೇಕು. ಅದೇ ರೀತಿ ಇಂಥ ಕೊಳಚೆ ಪ್ರದೇಶಗಳನ್ನು ತೆಗೆದುಕೊಂಡಾಗ ತಾವು ಅವರಿಗೆ ಯಾವ ರೀತಿಯ ಸೌಲಭ್ಯಗಳನ್ನು ಕೊಡುತ್ತೀರಿ ಎಂದು ಸಹ ಹೇಳಬೇಕು. ಕೆಲವರು ಮಲ್ಟಿ ಸ್ಟೋರೀಡ ಕಟ್ಟಡ ಕಟ್ಟಬೇಕೆಂದು ಹೇಳುತ್ತಿದ್ದಾರೆ. ಕೆಲವರು ಸಣ್ಣ ಸಣ್ಣ ಮನೆಗಳನ್ನು ಮಾಡಿಕೊಡಿ ಎಂದು ಹೇಳುತ್ತಿದ್ದಾರೆ. ಅದು ಜಾಗ ವಿಶಾಲವಾಗಿದ್ದರೆ ಮಾಡಬಹುದು. ಆದರೆ ಜಾಗ ಕಡಿಮೆ ಇರುವಂತಹ ಬೆಂಗಳೂರು ನಗರದಂತಹ ಕಡೆಗಳಲ್ಲಿ ಪ್ರತ್ಯೇಕವಾದ ಸಣ್ಣ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಮುಂಬಾಯಿ ನಗರದಲ್ಲಿ

(ಶ್ರೀ ಎಸ್. ಬಂಗಾರಪ್ಪ)

ಸಹ ಮಲ್ಟಿ ಸ್ಟೋರೀಡ ಕಟ್ಟಡಗಳನ್ನು ಕಟ್ಟಿ ಒಂದೊಂದು ಸಂಸಾರಕ್ಕೆ ಅನುಕೂಲವಾಗುವ ಹಾಗೆ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಈಗಿನ ಕಾಲದಲ್ಲಿ ಆಧುನಿಕವಾಗಿ ಎಷ್ಟು ಬೇಕೋ ಅಷ್ಟು ಒದಗಿಸುವುದಕ್ಕೆ ಸಾಧ್ಯವಿದೆ.

ನಾನು ಇದನ್ನು ಮದ್ರಾಸಿನಲ್ಲಿ ನೋಡಿದ್ದೇನೆ. ಯಾವ ದೇಶದಲ್ಲಿ ಯಾಗಲೀ ಬಾರಿ ಬಂಡವಾಳ ಶಾಹಿಗಳು, ತಾತ ಬಿರ್ಲಾಗಳು ಮತ್ತು ಮುಂದ್ರಾ ಗಳು ಒಳ್ಳೆಯ ಜಾಗವನ್ನು ಪಡೆದಿದ್ದಾರೆ. ಆದರೆ ಮದ್ರಾಸಿನಲ್ಲಿ ಸಮುದ್ರಕ್ಕೆ ಮುಖ ವಾಗಿರತಕ್ಕ ಒಳ್ಳೆಯ ಹವ ಇರತಕ್ಕ ಜಾಗವನ್ನು ಯಾವ ಬಂಡವಾಳ ಶಾಹಿಗಳಿಗೂ ಕೊಡದೆ ಕೊಳಚೆ ಪ್ರದೇಶದಲ್ಲಿ ಇದ್ದ ಜನಗಳ ಉಪಯೋಗಕ್ಕಾಗಿ ಕೊಟ್ಟಿದ್ದಾರೆ. ಆದಕ್ಕಾಗಿ ಅದು ಯಾವ ಪಕ್ಷದ ಸರ್ಕಾರವೇ ಆಗಿರಲಿ. ಆ ಸರ್ಕಾರವನ್ನು ನಾವು ಅಭಿನಂದಿಸಬೇಕಾಗಿದೆ. ಆ ಸಮುದ್ರಕ್ಕೆ ಮುಖವಾಗಿರುವ ಜಾಗ ಏನಿದೆ ಅದರ ಪಕ್ಕದಲ್ಲಿ ಮೊದಲು ಕೊಳಚೆ ಪ್ರದೇಶ ಎಂದು ಖಾಯಂ ಆಗಿ ಉಳಿದಿತ್ತು. ಆದರ ಪಕ್ಕದಲ್ಲಿ ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡು ಇದೆ. ಆ ಬೋರ್ಡು ಸುಮಾರು 3-4 ವರ್ಷಗಳ ಹಿಂದೆ ಆಗಿರಬಹುದು ಎಂದು ಕಾಣುತ್ತದೆ. ಆ ಬೋರ್ಡು ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ಆ ಸಮುದ್ರಕ್ಕೆ ಮುಖವಾಗಿರ ತಕ್ಕ ಜಾಗದಲ್ಲಿ ಸ್ಲಮ್‌ಕ್ಲಿಯರೆನ್ಸ್ ಬೋರ್ಡಿನವರು ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಅದರ ಪಕ್ಕದಲ್ಲಿ ಕೊಳಚೆ ಪ್ರದೇಶದಲ್ಲಿ ಗುಡಿಸಲು ಗಳಲ್ಲಿದ್ದವರನ್ನು ಬಿಡಿಸಿ ಈ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳಲ್ಲಿ ವಾಸವಾಗಿರಿ ಎಂದು ಅವರಿಗೆ ಅದನ್ನು ಕೊಟ್ಟಿದ್ದಾರೆ. ಇದು ಬಹಳ ಸಂತೋಷದ ವಿಷಯ. ಅ ಜನಗಳು ಕ್ಲಾಸಿನಲ್ಲಿಯೂ ಅಂಥಾ ಮನೆಗಳನ್ನು ಕಾಣುತ್ತಾ ಇರಲಿಲ್ಲ. ಈಗ ಆ ಜನಗಳಿಗೆ ನಾವು ಟೆರೇಸ್ ಮನೆಯಲ್ಲಿದ್ದೇವೆ ಎನ್ನುವಂತಹ ಒಂದು ಸಮಾಧಾನ ಉಂಟಾಗಿದೆ. ಅವರ ಒಂದು ಆಶೆ ಅಕಾಂಕ್ಷೆ ಏನಿತ್ತೋ ಆದು ಇವೊತ್ತು ಕೈಗೂಡಿದೆ. ಇದು ಎಲ್ಲರೂ ಸಮಾಧಾನ ಪಡತಕ್ಕ ವಿಷಯ. ಮದ್ರಾಸಿನಲ್ಲಿರತಕ್ಕ ಸ್ಲಮ್‌ಕ್ಲಿಯರೆನ್ಸ್ ಬೋರ್ಡ್ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಬಹಳ ಕಡಿಮೆ ಖರ್ಚಿನಲ್ಲಾಗುತ್ತದೆ ಎಂದು ಮದ್ರಾಸಿನಲ್ಲಿ ಯಾವ ರೀತಿ ಮಾಡಿದ್ದಾರೆ ಅದೇ ರೀತಿ ನಮ್ಮ ದೇಶದಲ್ಲಿಯೂ ಮಾಡುವುದು ಒಳ್ಳೆಯದು. ಆ ರೀತಿ ಮಲ್ಟಿ ಸ್ಟೋರಿಡ್ ಬಿಲ್ಡಿಂಗ್‌ಗಳನ್ನು ಕಟ್ಟಿ ಸುವುದರಿಂದ ಸ್ಥಳವನ್ನು ಉಳಿಸಬಹುದು. ನಾನು ಶ್ರೀಮಾನ್ ಬಸವಲಿಂಗಪ್ಪ ಅವರನ್ನು ಕೇಳಿಕೊಳ್ಳುತ್ತೇನೆ ನಮ್ಮ ರಾಜ್ಯದಲ್ಲಿರತಕ್ಕ ಕೊಳಚೆ ಪ್ರದೇಶಗಳಲ್ಲಿ ಒಳ್ಳೊಳ್ಳೆಯ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟಿಸಿ ಅಲ್ಲಿ ಕೊಳಚೆ ಇತ್ತೋ ಇಲ್ಲವೋ ಎಂದು ಆಶ್ಚರ್ಯ ಪಡಬೇಕು. ಈ ಕೆಲಸವನ್ನು ಸರಕಾರದವರು ಮಾಡಿದರೆ ಭಾಕ್ರಾನಂಗಲ್ ಮತ್ತು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳನ್ನು ಕಟ್ಟಿಸಿ

ನಾವು ಎಷ್ಟು ಹೆಮ್ಮೆ ಪಟ್ಟಿದ್ದೇವೆಯೋ ಅದಕ್ಕಿಂತಲೂ ಇದು ಹೆಚ್ಚು ಹೆಮ್ಮೆ ಪಡುವ ವಿಷಯ. ಮಾನವೀಯತೆಯ ಮೌಲ್ಯಗಳ ಆಧಾರದ ಮೇಲೆ ತೀರ್ಮಾನ ಮಾಡತಕ್ಕ ವಿಷಯಗಳಿಗೆ ಸರಕಾರದವರು ಹೆಚ್ಚು ಗಮನ ಕೊಡುವುದು ಅವರ ಆದ್ಯ ಕರ್ತವ್ಯ. ಇದನ್ನು ಮಾಡಿ ರಾಜ್ಯ ಸರಕಾರದವರು ಒಳ್ಳೆಯ ಹೆಸರನ್ನು ಗಳಿಸಬೇಕು; ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರತಕ್ಕ ಜನಗಳಿಗೆ ಅನುಕೂಲತೆಗಳನ್ನು ಒದಗಿಸ ಬೇಕು ಎಂದು ಈ ಬಿಲ್ಲನ್ನು ಸರಕಾರದವರು ತಂದಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದಕ್ಕೆ ರಾಜ್ಯ ಸರಕಾರದವರು ಕೇಂದ್ರ ಸರಕಾರದಿಂದ ಸಹಾಯ ಧನವನ್ನು ಪಡೆಯುವುದು ಬಹಳ ಮುಖ್ಯವಾದ ವಿಷಯ ಎಂದು ನಾನು ಭಾವನೆ ಮಾಡುತ್ತೇನೆ. ಮದ್ರಾಸ್ ಸರಕಾರದವರು ಕೇಂದ್ರ ಸರಕಾರದಿಂದ ಸಹಾಯ ಧನವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ನಾನು ಮಾನ್ಯ ಪೌರಾಡಳಿತ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಲ್ಲಿ ಒತ್ತಡವನ್ನು ತಂದು ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಅಲ್ಲಿಂದ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದವರು ಹೇಳಿರುವ ಪ್ರಕಾರ ನಮ್ಮ ರಾಜ್ಯದಲ್ಲಿ 129 ಕೊಳಚೆ ಪ್ರದೇಶಗಳು ಇವೆ ಎಂದು ಹೇಳಿದ್ದಾರೆ. ಮತ್ತು ಈ ಪ್ರದೇಶದಲ್ಲಿ ಸುಮಾರು 25 ಸಾವಿರ ಸಂಸಾರಗಳು ವಾಸವಾಗಿವೆ ಎಂದು ಹೇಳಿದ್ದಾರೆ, ಶ್ರೀಮಾನ್ ಶಾಮಣ್ಣ ಅವರು ಹೇಳಿರುವ ಪ್ರಕಾರ ಸುಮಾರು 140 ಕೊಳಚೆ ಪ್ರದೇಶಗಳು ಇವೆ, 25 ಸಾವಿರ ಸಂಸಾರಗಳಿಗಿಂತ ಹೆಚ್ಚು ಸಂಸಾರಗಳು ಈ ಕೊಳಚೆ ಪ್ರದೇಶದಲ್ಲಿ ವಾಸವಾಗಿವೆ ಎಂದು ಗೊತ್ತಾಗಿದೆ. ಮೈಸೂರು ರಾಜ್ಯದಲ್ಲಿ ಇಂಡಸ್ಟ್ರಿಯಲ್ ಏರಿಯಾ, ಭದ್ರಾವತಿ, ಹುಬ್ಬಳ್ಳಿ, ಧಾರವಾಡ, ಬೆಳಗಾವ್, ಬೆಂಗಳೂರು ಮತ್ತು ಮೈಸೂರು ಈ ಪ್ರದೇಶಗಳು ಕಾನೂನಿನ ಪರಿಮಿತಿಯಲ್ಲಿ ಬರುತ್ತವೆ. ಸಾವಿರಾರು ಸಂಸಾರಗಳು ಈ ಕಾನೂನಿನ ಪರಿಮಿತಿಯಲ್ಲಿ ಬರುತ್ತವೆ. ಹೆಚ್ಚಿಗೆ ಹಣ ಇಲ್ಲದಿದ್ದರೆ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಆದರಿಂದ ಇದಕ್ಕೆ ಕೇಂದ್ರ ಸರ್ಕಾರದಿಂದ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಶ್ರೀಮಾನ್ ಬಸವಲಿಂಗಪ್ಪನವರು ಇಂಥಾ ಒಂದು ಕಾನೂನ್ನು ತಂದಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಆದರೆ ಈ ಕಾನೂನು ಮಾಡಿ ಅವರು ಶಹಭಾಶಗಿರಿ ತೆಗೆದುಕೊಳ್ಳುವುದಕಾಗುವುದಿಲ್ಲ. ಆದರೆ ಕೇಂದ್ರ ಸರ್ಕಾರದಿಂದ ಹಣವನ್ನು ಪಡೆದು ಈ ಕೆಲಸವನ್ನು ಮಾಡಿ ತೋರಿಸಬೇಕು. ಆದ್ದರಿಂದ ಒಳ್ಳೆಯ ಹೆಸರನ್ನು ಪಡೆಯಬೇಕು. ಕೇಂದ್ರ ಸರ್ಕಾರದಿಂದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಪಡೆಯುವುದಕ್ಕೆ ರಾಜ್ಯ ಸರ್ಕಾರದವರು ಅಪಾರವಾದ ಪ್ರಯತ್ನವನ್ನು ಮಾಡಬೇಕು. ಸ್ಲಂ ಕ್ಲಿಯರೆನ್ಸ್, ಮತ್ತು ಇಂಪ್ರೂವ್‌ಮೆಂಟ್ ಒಳಚರಂಡಿ, ರಸ್ತೆ, ದೀಪ, ಕುಡಿಯುವ ನೀರನ್ನು ಒದಗಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಸೆಂಟ್‌ಪರ್ಸೆಂಟ್ ಹಣ ಬರುತ್ತದೆ ಎಂದು ತಿಳಿಸಿದ್ದಾರೆ. ಕೊಳಚೆ ಪ್ರದೇಶಗಳನ್ನು ನಿರ್ಮೂಲನ

(ಶ್ರೀ ಎಸ್ ಬಂಗಾರಪ್ಪ)

ಮಾಡಿ ಆ ಪ್ರದೇಶದ ಜನಗಳಿಗೆ ಒಳ್ಳೆಯ ಮನೆಗಳು, ರಸ್ತೆಗಳು, ದೀಪ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಆಟದ ಮೈದಾನ ಇತ್ಯಾದಿ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ. ಇದಕ್ಕೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕು ಎಂದು ನಾನು ಭಾವನೆ ಮಾಡುತ್ತೇನೆ. ಈ ಸ್ಲಂ ಕ್ಲಿಯರೆನ್ಸ್ ಮಾಡಿ ಇಂಪ್ರೂವ್‌ಮೆಂಟ್ ಮಾಡಿದರೆ ಸೊಳ್ಳೆಗಳನ್ನೂ ನಿರ್ಮೂಲನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಕೊಳಚೆ ಪ್ರದೇಶದಲ್ಲಿ ಒಂದು ವೇಳೆ ಡಿ. ಡಿ. ಟಿ. ಯನ್ನು ಸ್ಪ್ರೇ ಮಾಡಿದರೂ ಕೂಡ ಸೊಳ್ಳೆಯನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವುದಕ್ಕಾಗುವುದಿಲ್ಲ. ಕೊಳಚೆ ಪ್ರದೇಶದಲ್ಲಿರತಕ್ಕ ಜನಗಳಿಗೆ ಮನೆಗಳನ್ನು ಕಟ್ಟಿಕೊಟ್ಟು ಅವರಿಗೆ ಒಂದು ದೊಡ್ಡ ಸ್ಥಾನವನ್ನು ಕಲ್ಪಿಸಿಕೊಡುವುದು ಆರೋಗ್ಯ ದೃಷ್ಟಿಯಿಂದಲೂ ಒಳ್ಳೆಯದು.

ಈ ಮಸೂದೆಯಲ್ಲಿ ಅನೇಕ ಚಾಪ್ಟರುಗಳನ್ನು ಇಟ್ಟಿದ್ದಾರೆ. ಡಿಕ್ಲರೇಷನ್ ಆಫ್ ಸ್ಲಂ ಏರಿಯಾಸ್, ಪ್ರಿವೆನ್‌ಸನ್ ಆಫ್ ಗ್ರೋತ್ ಆಫ್ ಸ್ಲಮ್ಸ್, ಇಂಪ್ರೂವ್‌ಮೆಂಟ್ ಆಫ್ ಸ್ಲಂ ಏರಿಯಾಸ್ ಇತ್ಯಾದಿ ಚಾಪ್ಟರುಗಳನ್ನು ಇದರಲ್ಲಿ ಇಟ್ಟಿದ್ದಾರೆ. ಈ ಮಸೂದೆಯ ಚಾಪ್ಟರ್ (6) ಕ್ಲಾಜ್ 20ರಲ್ಲಿ Amount payable : The amount payable in respect of any land acquired under this Act shall be one hundred times the property tax payble in respect of such land. ಎಂದು ಹೇಳಿದ್ದಾರೆ. ಇದನ್ನು ಗಣನೆಗೆ ತೆಗೆದುಕೊಳ್ಳುವುದು ಒಳ್ಳೆಯದು. ಈ ಪ್ರಾಪರ್ಟಿ ಲ್ಯಾಂಡ್ ಟಾಕ್ಸ್ ಏನಿದೆ ಇದು ಕಡಿಮೆ ಇದ್ದರೆ ಒಳ್ಳೆಯದು. ಜಾಸ್ತಿ ಕಾಂಪನ್‌ಸೇಷನ್ ಕೊಡುವುದಕ್ಕೆ ಪ್ರಯತ್ನ ಪಡಬಾರದು ಎಂದು ನಾನು ಹೇಳುತ್ತೇನೆ.

ಆ ಮೇಲೆ ಚಾಪ್ಟರ್ 7 ರಲ್ಲಿ Clause (30) Restoration of possession of premises vacated by a tenant. ಇದರಲ್ಲಿ ಕೆಲವು ವಿಷಯಗಳನ್ನು ಸ್ವಲ್ಪ ಗಣನೆಗೆ ತೆಗೆದುಕೊಳ್ಳಬೇಕು. ಇದರಲ್ಲಿ ತಿಳಿಸಿರುವ ವಿಷಯಗಳು ಹೌಸ್ ರೆಂಟ್‌ಕಂಟ್ರೋಲ್ ಆಕ್ಟಿನಲ್ಲಿಯೂ ಬರುತ್ತದೆ. ಇದರಲ್ಲಿ ಕೆಲವು ಕಡೆ ಏನಾಗುತ್ತದೆ ಎಂದರೆ ಮನೆಗಳು ಡಿಲಾಬಿಟೇಷನ್ ಸ್ಥಿತಿಯಲ್ಲಿರುತ್ತವೆ. ಆದ್ದರಿಂದ ಅವುಗಳನ್ನು ಕೆಡವಿಸಿ ಹೊಸದಾಗಿ ಮನೆಗಳನ್ನು ಕಟ್ಟಬೇಕು ಎಂದು ಆ ಮನೆಗಳಲ್ಲಿ ವಾಸವಾಗಿದ್ದ ಟೆನೆಂಟ್‌ಗಳನ್ನು ಬಿಡಿಸುತಾರೆ. ಆ ಮನೆಯನ್ನು ಹೊಸದಾಗಿ ಕಟ್ಟಿದ ನಂತರ ಮೊದಲು ವಾಸವಾಗಿದ್ದ ಟೆನೆಂಟಿಗೆ ರೀಜನಲ್ ರೆಂಟಿಗೆ ಆ ಮನೆಗೆ ಆಗಿರುವ ಖರ್ಚಿನ ಆಧಾರದ ಮೇಲೆ ರೆಂಟ್‌ಅನ್ನು ಫಿಕ್ಸ್ ಮಾಡಿಕೊಡಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಈ ಚಾಪ್ಟರ್ 7 ಕ್ಲಾಜ್ ಏನಿದೆ ಇದನ್ನು ನಾನು ಸ್ವಾಗತ ಮಾಡುತ್ತೇನೆ.

ಚಾಪ್ಟರ್ 8 ರಲ್ಲಿ ಏನು ಹೇಳಿದ್ದಾರೆ ಇದು ಬಹಳ ಪ್ರಾಮುಖ್ಯವಾದ ವಿಷಯ. ಇದು ಈ ಮಸೂದೆಯಲ್ಲಿ ಒಂದು ದೊಡ್ಡ ಅಧ್ಯಾಯದ ಕ್ಲಾಜು. ಇದರಲ್ಲಿ ಮೈಸೂರು ಸ್ಲಮ್ ಕ್ಲಿಯರನ್ಸ್ ಬೋರ್ಡು ಏನಿದೆ ಇದರಲ್ಲಿ ಕೆಲವರು ರಾಜಕೀಯ ಕರ್ಮಕಾಂಡ ಮಾಡುವುದಕ್ಕೆ ಕುಳಿತುಕೊಳ್ಳುತ್ತಾರೆ. ಆದ್ದರಿಂದ ಈ 8 ನೇ ಚಾಪ್ಟರಿನಲ್ಲಿ ಕ್ಲಾಜ್ 42 ಮತ್ತು 44 ರ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ನಾನು ಹೇಳುತ್ತೇನೆ.

5-00 P. M.

ಇಲ್ಲಿ ಛಾಪ್ಟರ್ 8 ರಲ್ಲಿ ಹೇಳಿರುವ ಪ್ರಕಾರ ಚೇರ್‌ಮನ್ ಇರಬೇಕಾಗುತ್ತದೆ, ಅಫೀಷಿಯಲ್ ಮತ್ತು ನಾನ್-ಅಫೀಷಿಯಲ್ ಮೆಂಬರುಗಳು 15 ಜನ ಇರಬೇಕಾಗುತ್ತದೆ. ಇದನ್ನು ನಾನು ಒಪ್ಪುತ್ತೇನೆ. ಆದರೆ ಇಂದು ನಾನಾ ಹೆಸರುಗಳಿಂದ ನಾನಾ ಬೋರ್ಡುಗಳು ರಚನೆಯಾಗಿರುವುದಕ್ಕೆ ಕಾರಣ ತಮ್ಮ ಪಕ್ಷದಲ್ಲಿರುವವರಿಗೆ ಆ ಬೋರ್ಡ್‌ಗಳಲ್ಲಿ ಸ್ಥಾನಮಾನಗಳನ್ನು ಕಲ್ಪಿಸಿಕೊಡುವುದಕ್ಕಾಗಿ ಎಂಬತಕ್ಕಂಥ ಅಪಾದನೆ ಬಂದಿದೆ. ತಮ್ಮ ಪಕ್ಷದವರು ಅಸೆಂಬ್ಲಿಯಲ್ಲಿ ಗಲಾಟೆ ಮಾಡಬಾರದೆಂದು ಕೆಲವು ಸ್ಥಾನಮಾನಗಳನ್ನು ಅವರಿಗೆ ಈ ರೀತಿ ಬೋರ್ಡ್‌ಗಳನ್ನು ರಚನೆ ಮಾಡುವುದರ ಮೂಲಕ ಕಲ್ಪಿಸಿ ಕೊಡುವುದು ನಡೆಯುತ್ತಿದೆ. ಆಡಳಿತ ನಡೆಸಬೇಕಾದರೆ ಬಹುಮತ ಇರಬೇಕಾಗುತ್ತದೆ. ಅದರಂತೆ ತಮ್ಮ ಪಕ್ಷದಲ್ಲಿರುವ ಗುಂಪು ಏನಾದರೂ ಒಡೆದು ಹೋದರೆ ತಮ್ಮ ಸ್ಥಾನಪಲ್ಲಟವಾಗಬಹುದೆಂದು ತಿಳಿದುಕೊಂಡು, ಅದರ ರಿಪೇರಿ ಮಾಡುವುದಕ್ಕೋಸ್ಕರ ಈ ಬೋರ್ಡುಗಳನ್ನು ಉಪಯೋಗಿಸಿಕೊಂಡರೆ, ಅದರಿಂದ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಕಾರಣವಾಗುತ್ತದೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಚಾಪ್ಟರ್ 8 ಏನಿದೆ, ಇದು ಒಂದು ರೀತಿಯಲ್ಲಿ ಒಳ್ಳೆಯದೂ ಹೌದು. ಕೆಲವು ವೇಳೆ ಅಪಾಯವೂ ಹೌದು. ಇದೇ ರೀತಿ ಛಾಪ್ಟರ್ 8, ಕ್ಲಾಸ್ 42 ನ್ನು ನೋಡಿದ್ದೇ ಆದರೆ, ಎಂ. ಎಲ್. ಎ. ಅಥವಾ ಎಂ. ಎಲ್. ಸಿ. ಗೆ ಚಾನ್ಸ್ ಕೊಡುವುದಕ್ಕಾಗಿಯೇ ಕ್ಲಾಸನ್ನು ಇಟ್ಟಿದ್ದಾರೆಂದು ಹೇಳಬಹುದು. ಇಲ್ಲಿ ಹೇಳಿರುವ ಪ್ರಕಾರ ಎಂ ಎಲ್. ಎ ಅಥವಾ ಎಂ.ಎಲ್.ಸಿ. ಗಳನ್ನು ಬಿಟ್ಟು ಮತ್ತೆ ಯಾರೂ ಸಹ ಬರುವುದಕ್ಕೆ ಅವಕಾಶವಿಲ್ಲ. ರಾಜಕೀಯಕ್ಕಾಗಿಯೇ ಈ ಕ್ಲಾಸನ್ನು ಸ್ಪಷ್ಟವಾಗಿ ಇಟ್ಟಿದ್ದಾರೆಂದು ನಾವಾದರೂ ಸಹ ಏತಕ್ಕೆ ಅನುಮಾನ ಪಡಬಾರದೆಂದು ತಮ್ಮನ್ನು ಕೇಳುತ್ತೇನೆ. ಇದೇ ರೀತಿ ಅನುಮಾನ ಬರುವಂತಹ ಕ್ಲಾಸ್ ಎಂದರೆ 44. ಇದರಲ್ಲಿ ಈ ರೀತಿ ಹೇಳಿದ್ದಾರೆ :

44. BOARD TO COMPLY WITH DIRECTORS OF GOVERNMENT.—It shall be the duty of the Board to comply with such directions as the Government may, from time to

(ಶ್ರೀ ಎಸ್ ಬಂಗಾರಪ್ಪ)

time, issue either generally or in regard to any particular matter ಎಂದು. ಬೋರ್ಡಿಗೆ ಪೂರ್ತಾ ಅಧಿಕಾರವನ್ನು ಒಂದು ಸಲ ಕೊಟ್ಟ ಮೇಲೆ, ಅದರ ದಿನನಿತ್ಯದ ವ್ಯವಹಾರದಲ್ಲಿ ಸರ್ಕಾರದ ಹಸ್ತಕ್ಷೇಪವಾದರೂ ಸಹ ಏತಕ್ಕೆ ಎಂದು ಕೇಳುತ್ತೇನೆ. ಈ ಕ್ಲಾಸ್‌ನಲ್ಲಿ ಹೇಳಿರುವುದನ್ನು ನೋಡಿದರೆ, ಈ ಬೋರ್ಡನ್ನು ಬಕಾಸುರನ ಹಾಗೆ ತಮ್ಮ ಒಂದು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಂಡಿದ್ದಾರೆ ಬೇಕಾದರೆ ಸೂಪರ್‌ವಿಷನ್ ಇಟ್ಟುಕೊಳ್ಳಿ. ಅದರೆ ವಿರಾಟ ಸ್ವರೂಪದ ಹಾಗೆ ಸಂಪೂರ್ಣ ಅಧಿಕಾರವನ್ನು ನಿಮ್ಮ ಕೈಗೆ ತೆಗೆದು ಕೊಳ್ಳುವುದಕ್ಕೆ ಹೋಗಬೇಡಿ. ಈ ಕ್ಲಾಸನ್ನು ಸದುದ್ದೇಶದಿಂದಲೇ ಮಾಡಲಾಗಿದೆ ಎಂದು ತಾವು ಹೇಳುವುದಾದರೂ ಸಹ ಮುಂದೆ ಅಧಿಕಾರಕ್ಕೆ ಬರುವವರು ಇದನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳುತ್ತಾರೋ ಎಂಬತಕ್ಕಂಥ ಅನುಮಾನವೂ ಸಹ ನನಗೆ ಇದೆ. ಈ ಕ್ಲಾಸ್–44 ರಲ್ಲಿ ಹೇಳುವುದನ್ನು ನೋಡಿದರೆ, ಇದು ಕೃಷ್ಣಪರಮಾತ್ಮನ ಅಪರಾವತಾರವಿದ್ದಂತೆ ಕಾಣುತ್ತದೆ. ಈ ರೀತಿ ಅಧಿಕಾರವನ್ನು ತಾವು ಇಟ್ಟುಕೊಳ್ಳುವುದರಿಂದ ನಾಳೆ ತಮಗೆ ಯಾರಾದರು ಆಗಲಿಲ್ಲ, ಇಲ್ಲವೇ ತಮ್ಮ ಮಾತನ್ನು ಪಾಲನೆ ಮಾಡಲಿಲ್ಲ ಎಂಬ ಕಾರಣದಿಂದ, ಸಂಬಂಧಬಟ್ಟ ಫೈಲ್ ಗಳನ್ನು ತರಿಸಿ ತಮಗಿಷ್ಟ ಬಂದಂತೆ ಆರ್ಡರ್ ಮಾಡುವುದಕ್ಕೆ ಅವಕಾಶವಿದೆ ಎಂಬ ತಕ್ಕಂಥ ಅನುಮಾನ ನಮಗೆ ಬರುತ್ತದೆ. ಈ ಎಲ್ಲ ಕಾರಣಗಳಿಂದ ನಾನು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ವಿನಯಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ಈ ಕ್ಲಾಸ್-42 ಮತ್ತು ಕ್ಲಾಸ್-44, ಇವೆರಡನ್ನೂ ಡಿಲೀಟ್ ಮಾಡಬೇಕೆಂದು.

ಇನ್ನು ಕ್ಲಾಸ್ 65 ರಲ್ಲಿ ಕಾಂಪೋಜಿಷನ್ ಆಫ್ ಅಫೆನ್‌ಸನ್ ಬಗ್ಗೆ ಹೇಳಿದ್ದಾರೆ. ಇಲ್ಲಿ ಹೇಳಿರುವ ಪ್ರಕಾರ ಕಾಂಪೌಂಡ್ ಮಾಡಿಕೊಳ್ಳುವುದಕ್ಕೆ ಕೆಲವು ಅಧಿಕಾರಗಳನ್ನು ಅಧಿಕಾರಿಗಳಿಗೆ ಕೊಟ್ಟಿದ್ದೀರಿ. ಮೊದಲನೆಯ ಸಲ ತಪ್ಪು ಮಾಡಿದರೆ 3 ತಿಂಗಳ ಸಜಾ, ಎರಡನೆಯ ಸಲ ತಪ್ಪು ಮಾಡಿದರೆ 6 ತಿಂಗಳ ಸಜಾ ಎಂದು ಎಂದು ಇದ್ದರೂ ಸಹ ಕಾಂಪೌಂಡ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಇಲ್ಲಿ ಇಟ್ಟಿದ್ದೀರಿ. ಇದು ಒಂದಕ್ಕೊಂದು ಸಂಬಂಧವಿಲ್ಲ. ಕೋರ್ಟಿಗೆ ಪೂರ್ತಾ ಅಧಿಕಾರ ಕೊಡಿ, ಇಲ್ಲವೇ ಅಧಿಕಾರಿಗಳಿಗೆ ಪೂರ್ತಾ ಅಧಿಕಾರ ಕೊಡಿ ; ಈ ರೀತಿ ಮಾಡದೆ ಕೋರ್ಟಿಗೆ ಅರ್ಧ ಅಧಿಕಾರ ಕೊಟ್ಟರೆ ಕೋರ್ಟಿಗೆ ಬೆಲೆ ಇರುವುದಿಲ್ಲ ವೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಈ 65ನೇ ಕ್ಲಾಜನ್ನು ಸಹ ಕೈಬಿಡ ಬೇಕೆಂದು ಹೇಳುತ್ತೇನೆ. ಒಟ್ಟಾರೆ ನಾನು ಈ ಮಸೂದೆಯನ್ನು ಹೃತ್ಪೂರ್ವಕ ವಾಗಿ ಸ್ವಾಗತ ಮಾಡುತ್ತೇನೆ. ಇದರ ಒಂದು ಉಪಯೋಗವನ್ನು ಸಂಪೂರ್ಣ ವಾಗಿ ಸರ್ಕಾರದವರು ಮಾಡಿಕೊಳ್ಳಬೇಕು ಮತ್ತು ಮಾನ್ಯ ಮಂತ್ರಿಗಳು ಇದರ ಜವಾಬ್ದಾರಿಯನ್ನು ಹೊತ್ತಿರುವುದರಿಂದ, ಸಾಮಾನ್ಯ ಜನತೆ ಇಂದು ಏನು ರಕ್ಷಣೆ

ಯನ್ನು ಕೇಳುತ್ತಿದ್ದಾರೆಯೋ ಆ ಒಂದು ರಕ್ಷಣೆಯನ್ನು ಜಾಗ್ರತೆ ಕಲ್ಪಿಸಿ ಕೊಡುತ್ತೀರಾ ಎಂದು ನಂಬಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸು ವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿ ನಗರ) :—ಮಾನ್ಯ ಅಧ್ಯಕ್ಷರೇ, ನಗರಾಡಳಿತ ಮಂತ್ರಿಗಳು ತಂದಿರತಕ್ಕ ಬಿಲ್‌ನ್ನು ಹೃತ್ಪೂರ್ವಕ ವಾಗಿ ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸಾಧಾರಣವಾಗಿ ಈ ಕೊಳಚೆ ಪ್ರದೇಶಗಳು ನಮ್ಮ ಮಾನ್ಯ ಮಂತ್ರಿಗಳ ಮಾತಿನಲ್ಲಿಯೇ ಹೇಳುವುದಾದರೆ, ಈ ಕೊಳಚೆ ಪ್ರದೇಶಗಳು ಎರಡು ಕಡೆಗಳಲ್ಲಿ ಇರುತ್ತವೆ, ಅಂದರೆ ಸರ್ಕಾರೀ ಅಥವಾ ಸಾರ್ವಜನಿಕ ಕ್ಷೇತ್ರಗಳಲ್ಲಿರು ತ್ತವೆ. ಈ ಕೊಳಚೆ ಪ್ರದೇಶಗಳು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಜಾಗದಲ್ಲಿ, ಕಾರ್ಪೊರೇಷನ್ ಲ್ಯಾಂಡ್‌ನಲ್ಲಿ, ರೆವಿನ್ಯೂ ಲ್ಯಾಂಡ್‌ನಲ್ಲಿ, ಮತ್ತು ಪ್ರೈವೇಟ್ ಲ್ಯಾಂಡ್‌ನಲ್ಲಿ ಇರುತ್ತದೆ. ಇಂದು ಬೆಂಗಳೂರು ನಗರದಲ್ಲಿ ನಮ್ಮ ಮಿತ್ರರು ಹೇಳಿದಂತೆ ಸುಮಾರು 144 ಕೊಳಚೆ ಪ್ರದೇಶಗಳಿವೆ. ಇವು ಏತಕ್ಕೆ ಹುಟ್ಟಿಕೊಂಡವು ಎಂಬುದನ್ನು ನಾವು ಸರಿಯಾಗಿ ಯೋಚನೆ ಮಾಡಬೇಕಾಗಿದೆ. ಈ ಕೊಳಚೆ ಪ್ರದೇಶಗಳು ಬೆಂಗಳೂರು ನಗರದಲ್ಲಿ ಬಂದು ಕ್ಯಾನ್ಸರು ತರಹ ಹುಟ್ಟಿ ಕೊಳ್ಳುತ್ತಿವೆ. ಈ ಸ್ಲಮ್ ಏರಿಯಾಗಳನ್ನು ಗ್ರೇ ಏರಿಯಾ, ಪ್ಲೇಗ್ ಸ್ಪಾಟ್, ಲೋಯರ್ ಇನ್‌ಕಂ ಕ್ಲಾಸ್ ಏರಿಯಾ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿವೆ. ಇವುಗಳು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹುಟ್ಟಿಕೊಳ್ಳುತ್ತಿರುವುದಕ್ಕೆ ಕಾರಣ ವೇನು ಎಂಬುದನ್ನು ಯೋಚನೆ ಮಾಡಬೇಕಾಗಿದೆ ಕಳೆದ 20 ವರ್ಷಗಳ ಹಿಂದೆ ಬೆಂಗಳೂರು ನಗರ ಯಾವ ರೀತಿ ಇತ್ತು, ಇಂದು ಯಾವ ರೀತಿ ಇದೆ ಎಂಬು ದನ್ನು ಚೆನ್ನಾಗಿ ನೋಡಬಹುದು. ಮುಖ್ಯವಾಗಿ ಹೊರಗಡೆಯಿಂದ, ಅಂದರೆ ಗ್ರಾಮಾಂತರ ಪ್ರದೇಶಗಳಿಂದ ಜನರು ವಲಸೆ ಬರುವುದು ನೆಲಸುವುದೇ ಜಾಸ್ತಿ ಯಾಗಿದೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾರು ನೊಂದು ಬೆಂದಿರುತ್ತಾರೋ ಅಂತಹವರು ಪಟ್ಟಣಕ್ಕೆ ಬಂದು ಸೇರುತ್ತಿದ್ದಾರೆ. ಮಾನ್ಯ ಮಂತ್ರಿಗಳು ಹೇಳಿ ದಂತೆ ಇಂದು ದಿಢೀರ್ ಹೌಸ್‌ಗಳು ಹುಟ್ಟಿಕೊಳ್ಳುತ್ತಿವೆ. ಬೆಂಗಳೂರು ಪಟ್ಟಣ ಒಂದು ಪೇಸ್ಡ್ ಪ್ರೊಗ್ರಾಮ್‌ನಿಂದ ಬೆಳೆದಿಲ್ಲ. ಸರ್ಕಾರಕ್ಕೆ ಎಲ್ಲೆಲ್ಲಿ ಸುಲಭ ವಾಗಿ ಲ್ಯಾಂಡ್ ಪೊಜಿಷನ್ ಸಿಕ್ಕಿತೋ ಅಂತಹ ಕಡೆಗಳಲ್ಲಿ ಲೇ ಔಟ್ ಮಾಡಿ ಕೊಂಡು ಬಂದಿದ್ದಾರೆ. ಇಂದು ಬೆಂಗಳೂರು ನಗರದ ಅನೇಕ ಭಾಗಗಳಲ್ಲಿ ಎಕ್ಸ್‌ಟೆನ್‌ಷನ್‌ಗಳು ಬೆಳೆದಿವೆ. ಈ ಎಕ್ಸ್‌ಟೆನ್‌ಷನ್‌ಗಳ ಮಧ್ಯಭಾಗದಲ್ಲಿ ಖಾಲಿ ಜಾಗಗಳು ಏಕಿವೆ ? ಅಲ್ಲೆಲ್ಲಾ ವಲಸೆ ಬಂದಂಥ ಜನರು ರಾತ್ರಿ ಕಾಲದಲ್ಲಿ ದಿಢೀರ್ ಮನೆಗಳನ್ನು ನಿರ್ಮಾಣ ಮಾಡಿಬಿಡುತ್ತಾರೆ. ಇದೇ ಪರಿಸ್ಥಿತಿ ಮುಂದು ವರೆಯುವುದಕ್ಕೆ ಬಿಟ್ಟರೆ 1973ನೇ ಇಸವಿ ಕೊನೆಯೊಳಗೆ ಇವುಗಳ ಸಂಖ್ಯೆ ಸುಮಾರು 200 ಆಗಬಹುದು. ಈಗ ಏನು ಈ ಬಿಲ್ ತಂದಿದ್ದಾರೆ, ಇದನ್ನು

(ಶ್ರೀ ಕೆ ಆರ್ ಶ್ರೀನಿವಾಸುಲುನಾಯ್ಡು)

ಇನ್ನೂ ಮೊದಲೇ ತಂದಿದ್ದರೆ ಬಹಳ ಚನ್ನಾಗಿ ಇರುತ್ತಿತ್ತು ಎಂದು ನನಗೆ ಅನ್ನಿಸುತ್ತದೆ. 1956 ನೇ ಇಸವಿಯಲ್ಲಿ ದಿವಂಗತ ಶ್ರೀ ಗೋವಿಂದ ವಲ್ಲಭ ಪಂತ ಅವರು, ಈ ರೀತಿಯ ಬಿಲ್‌ನ್ನು ಉತ್ತರ ಪ್ರದೇಶದಲ್ಲಿ ಮೊದಲು ತಂದರು. ನಂತರ 1958 ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿಯೂ ತೆಗೆದುಕೊಂಡು ಬಂದರು. ಆದರೆ ಅದು ಹೈಕೋರ್ಟಿನಲ್ಲಿ ಕ್ವ್ಯಾಸ್ ಆಯಿತು. ಈಗ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಈ ಬಿಲ್‌ನ್ನು ತಂದಿದ್ದಾರೆ. ಈ ಬಿಲ್‌ನ್ನು ಈ ದಿನವೇ ಕಾರ್ಯರೂಪಕ್ಕೆ ತಂದರೆ ಬಹಳ ಚೆನ್ನಾಗಿ ಇರುತ್ತದೆಂದು ಹೇಳುತ್ತೇನೆ. "ಗ್ರೋ ಮೋರ್ ಫುಡ್" ಕ್ಯಾಂಪೈನ್ ಎಂದು ಹೇಳುವಹಾಗೆ "ಗೋ ಬ್ಯಾಕ್ ಟು". ವಿಲೇಜ್ ಎನ್ನತಕ್ಕ ಒಂದು ಸ್ಕೀಮನ್ನು ಮಾಡಬೇಕಾದ ಕಾಲ ಬಂದೀತು. ತಮಗೆಲ್ಲಾ ಗೊತ್ತಿರುವ ಹಾಗೆ ಹಿಂದೆ ಬೆಂಗಳೂರಿನಲ್ಲಿ ಎರಡು ಲಕ್ಷ ಪ್ರಜಾ ಸಂಖ್ಯೆ ಇತ್ತು, ಈಗ ಸುಮಾರು ಇದು ಇಪ್ಪತ್ತು ಲಕ್ಷದಷ್ಟು ಹೆಚ್ಚಾಗಿದೆ. ಇಂಡಸ್ಟ್ರೀಗಳು ಕೂಡ ಎಲ್ಲ ಕಡೆಗಳಲ್ಲೂ ಹೆಚ್ಚಾಗಿ ಬೆಳೆಯುತ್ತಾ ಇವೆ. ಅದರಲ್ಲೂ ಇಂತಹ ಕೊಳಚೆ ಪ್ರದೇಶದಲ್ಲಿ ಜನ ಎಷ್ಟು ಕಷ್ಟಪಡುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ, ದೊಡ್ಡ ನಗರಗಳಾದ, ಕಲ್ಕತ್ತಾ, ಕಾನ್ಪುರ ಹಾಗೂ ದೆಹಲಿ ಇಂತಹ ನಗರಗಳಲ್ಲಿ ಹೋಗಿ ನೋಡಿಕೊಂಡು ಬಂದರೆ, ತಮಗೆ ಇದರ ಅನುಭವ ಚೆನ್ನಾಗಿ ಗೊತ್ತಾಗುತ್ತದೆ. ದೆಹಲಿಯಲ್ಲಿ ಲೋಡಿ ಕಾಲೋನಿ ಹೋಗಿ ನೋಡಿದರೆ ಕೊಳಚೆ ಪ್ರದೇಶದ ಜನರಿಗೆ ಯಾವ ರೀತಿ ವ್ಯವಸ್ಥೆ ಮಾಡಿದ್ದಾರೆನ್ನುವುದು ನಮಗೆ ಗೊತ್ತಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ಈ ಕೊಳಚೆ ಪ್ರದೇಶಗಳು ಒಂದು ರೀತಿಯಾದ ಪ್ಲೇಗ್ ಸ್ಪಾಟ್ ಆಗಿದೆ ಮತ್ತು ಇದು ಒಂದು ರೀತಿಯಾದ ಕ್ಯಾನ್ಸರ್‌ನಂತಾಗಿದೆ. ಆದುದರಿಂದ ಇನ್ನು ಮುಂದೆ ನಮ್ಮ ಈ ಬೆಂಗಳೂರು ನಗರದಲ್ಲಿ ಇಂತಹ ಸ್ಲಂಸ್‌ಗಳು ಬೆಳೆಯದಂತೆ ನೋಡಿಕೊಳ್ಳುವುದು ಮೊದಲನೇ ಕರ್ತವ್ಯ. ಎರಡನೇದು, ಇಲ್ಲಿರುವ ಜನರು ಬಹುತೇಕ ಬಡಜನರು ಇವರಿಗೆ ಅನುಕೂಲವಾಗುವ ಹಾಗೆ ಸಿ ಐ. ಬಿ. ಯವರ ಹೌಸಿಂಗು ಸ್ಕೀಂ, ಹಾಗೂ ಇನ್ನಿತರ ಹೌಸಿಂಗು ಸ್ಕೀಂ ಪ್ರಕಾರ ಮನೆಗಳನ್ನು ಕಟ್ಟಿಸಿ ಕೊಡಬೇಕು, ಇದೊಂದು ರೀತಿಯಾದ ನ್ಯಾಷನಲ್ ಪ್ರಾಬ್ಲಂ. ಇದಕ್ಕೆ ತಕ್ಕ ಹಾಗೆ ಮಾನ್ಯ ಮಂತ್ರಿಗಳೂ ಹೇಳಿದ ಹಾಗೆ, ಎನ್‌ವಿರ್ನಮೆಂಟಲ್ ಸ್ಕೀಂ ಎಂದರೆ ಎಲೆಕ್ಟ್ರಿಸಿಟಿ ಕೊಡುವುದು, ನಲ್ಲಿಗಳನ್ನು ಹಾಕಿ ನೀರು ಒದಗಿಸುವುದು ಮತ್ತು ಯೂರಿನಲ್ಸ್‌ಗಳನ್ನು ಒದಗಿಸಿ ಕೊಡುವುದು. ಇವು ಮೂರು ಅತಿ ಮುಖ್ಯವಾಗಿ ಆಗಬೇಕಾದ ಕೆಲಸಗಳು. ಇಂತಹ ಕೊಳಚೆ ಜನಕ್ಕೆ ಅನುಕೂಲವಾಗುವ ಹಾಗ ಒಂದು ಮಾಸ್ಟರು ಪ್ಲಾನನ್ನು ತಯಾರು ಮಾಡಬೇಕು. ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಹೇಳಿದಂತೆ ಹಳ್ಳಿಗಾಡಿನಿಂದ

ಈ ಜನರು ಪಟ್ಟಣಗಳಿಗೆ ಬಂದು ಇಲ್ಲಿ ಕೊಳಚೆ ಪ್ರದೇಶಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದುದರಿಂದ ಇವರಿಗೆ ವಸತಿ ಸೌಕರ್ಯಗಳನ್ನು ಮಾಡಿಕೊಡುವಾಗ ಮೇಲೆ ನಾನು ಹೇಳಿದ ಮೂರು ಮುಖ್ಯ ಕೆಲಸಗಳನ್ನು ಮೊದಲು ಇವರಿಗೆ ಒದಗಿಸಿ ಕೊಡಬೇಕು. ಇಂತಹ ಕೊಳಚೆ ಪ್ರದೇಶಗಳಲ್ಲಿರುವ ಜನ ಅನೇಕ ರೀತಿಯವರು ಇರುತ್ತಾರೆ. ಇವರೆಲ್ಲರೂ ದಿನಗೂಲಿ ಮಾಡಿ ಜೀವಿಸುವವರು. ಕೆಲವರು ಇವರಲ್ಲಿ ಸ್ಟ್ರೀಟ್ ವೆಂಡರ್ಸ್ ಆಗಿ ಇರುತ್ತಾರೆ. ಬೇರೆ ರೀತಿಯ ಜನರೂ ಸಹ ಇರುತ್ತಾರೆ. ಎಲ್ಲರೂ ಒಂದೇ ಕಡೆ ಇರುವುದಿಲ್ಲ. ನಮ್ಮ ಬೆಂಗಳೂರು ನಗರದಲ್ಲಿರುವ ಅವೆನ್ಯೂ ರೋಡಿನಲ್ಲಿ ರಾತ್ರಿ ವೇಳೆ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಅನೇಕ ಜನರು ಅಲ್ಲಿರುವ ಅಂಗಡಿಗಳ ಮುಂದೆಯೇ ವಾಸ ಮಾಡಿ ಜೀವನ ನಡೆಸುತ್ತಿರುತ್ತಾರೆ. ಇವರು ತೀರಾ ಬಡವರಾಗಿರುವುದರಿಂದ ಇವರಿಗೆ ಬೇರೆ ಜಾಗವೂ ಇರುವುದಿಲ್ಲ. ಇದರಲ್ಲಿ ಅನೇಕ ರೀತಿಯ ಅವ್ಯವಹಾರಗಳೂ ಆಗುತ್ತಿರುತ್ತವೆ, ಇದನ್ನು ನೋಡಿದವರಿಗೆ ಎಲ್ಲ ಗೊತ್ತಾಗುತ್ತದೆ. ಇದರಲ್ಲಿ ಕೂಲಿ ಜನಗಳೇ ಹೆಚ್ಚಾಗಿರುತ್ತಾರೆ. ನಾನಾಗಲೇ ಹೇಳಿದ ಹಾಗೆ ಇಂತಹ ಜನರನ್ನು ಸರಿಯಾಗಿ ಸುವ್ಯವಸ್ಥೆ ಮಾಡಲು ಅದಕ್ಕೆ ತಕ್ಕ ವಾತಾವರಣವನ್ನು ಕಲ್ಪನೆ ಮಾಡಿ ಕೊಡಬೇಕು ಇದೊಂದು ರೀತಿಯಾದ ನ್ಯಾಷನಲ್ ಪ್ರಾಬ್ಲಂ ಆಗಿದೆ. ಇದಕ್ಕಾಗಿ ಈಗ ಕೇಂದ್ರ ಸರಕಾರದವರೇ ಒಂದು ಯೋಚನೆ ಮಾಡಿದ್ದಾರೆ, ಇದನ್ನು ನಮ್ಮ ಮಾನ್ಯ ಕೇಂದ್ರದ ಮಂತ್ರಿಗಳಾದ ಶ್ರೀ ಉಮಾಶಂಕರ್ ದೀಕ್ಷಿತರವರು ಇಪ್ಪತ್ತು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನೇ ಮಾಡಿ ಇದರಲ್ಲಿ 12 ಕೇಂದ್ರಗಳನ್ನು ಆರಿಸಿಕೊಂಡಿದ್ದಾರೆ. ಅವುಗಳಲ್ಲಿ ಬೆಂಗಳೂರು ನಗರವೂ ಒಂದಾಗಿ ಸೇರಿಸಿದ್ದಾರೆ. ಅಲ್ಲಿರುವ ಕೊಳಚೆ ನಿರ್ಮೂಲ ಮಾಡಲು ಇದು ಬಹಳ ಸಹಾಯವಾಗಿದೆ. ನಮ್ಮ ಬೆಂಗಳೂರು ನಗರದ ಕಾರ್ಪೋರೇಷನ್‌ನವರು ಒಂದು ಲಕ್ಷ ಖರ್ಚು ಮಾಡಿದರೂ ಕೊಳಚೆ ಪ್ರದೇಶಗನ್ನು ನಿರ್ಮೂಲ ಮಾಡಲು ಆಗಲಿಲ್ಲ. ಡೆಹಲಿಯಲ್ಲಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿ ಇಂತಹ ಕೊಳಚೆ ನಿವಾಸಿಗಳಿಗಾಗಿ ಮೂರು ನಾಲ್ಕು ಅಂತಸ್ತುಗಳ ಮಲ್ಟಿ ಸ್ಟೋರೀಡ್ ಬಿಲ್ಡಿಂಗುಗಳನ್ನು ಕಟ್ಟಿಸಿ ಅನುಕೂಲ ಮಾಡಿದ್ದಾರೆ, ಢೆಹಲಿಯಲ್ಲಿರುವ ಲೋಂಡಿ ಕಾಲೋನಿಯಲ್ಲಿ ಹೋಗಿ ನೋಡಿಕೊಂಡು ಬಂದರೆ ತಮಗೆ ಇದು ಚೆನ್ನಾಗಿ ಗೊತ್ತಾಗುತ್ತದೆ. ಕೋಟಿಗಟ್ಟಲೆ ಖರ್ಚು ಮಾಡಿ ನಾಲ್ಕೈದು ಅಂತಸ್ತುಗಳುಳ್ಳ ಮನೆಗಳನ್ನು ಸಾಲು ಸಾಲಾಗಿ ಕಟ್ಟಿಸಿ ಕೊಡುತಿದ್ದಾರೆ. ಈ ರೀತಿಯಾಗಿ ನಮ್ಮ ನಗರದಲ್ಲೂ ಮೂರು ನಾಲ್ಕಂತಸ್ತುಗಳ ಮನೆಗಳನ್ನು ಕಟ್ಟಿಸಿ ಕೊಡಬೇಕು ಮತ್ತು ಇದರ ಜೊತೆಗೆ ಶ್ರೀ ಶಾಮಣ್ಣನವರು ಆಗಲೇ ಹೇಳಿದ ಹಾಗೆ ಟ್ರಾನ್‌ಸಿಟರಿ ಕ್ಯಾಂಪುಗಳನ್ನು ಮಾಡಿಸಿ ಕೊಡಬೇಕು. ಈ ಕೊಳಚೆ ಪ್ರದೇಶಗಳಲ್ಲಿರುವವರು ಸಾಮಾನ್ಯ ಎರಡು ಮೂರು ತರಹ ಜನರಿರುತ್ತಾರೆ. ಕೆಲವರು ಒಳ್ಳೆಯ ವ್ಯವಹಾರ ಮಾಡುವಂತಹ ಜನರು ಇರುತ್ತಾರೆ. ಕೆಲವರು ತೀರಾ

(ಶ್ರೀ ಕೆ. ಎಸ್ ಶ್ರೀನಿವಾಸುಲು ನಾಯ್ಡು)

ಬಡವರು ಸ್ಟ್ರೀಟು ವೆಂಡರುಗಳು ಮತ್ತೆ ಕೆಲವರು ಪ್ಲಾಟ್‌ಫಾರಂ ವೆಂಡರುಗಳು ಸಹ ಇರುತ್ತಾರೆ. ಇವೆಲ್ಲರನ್ನೂ ಬೆಂಗಳೂರಿಂದ ಆಚೆಗೆ ಅಂದರೆ ನೆಲಮಂಗಲದಲ್ಲಿ ಇಲ್ಲವೇ ಹೊಸಕೋಟೆ ಬಳಿ ಮನೆ ಕಟ್ಟಿಸಿಕೊಡುತ್ತೇವೆ ಎಂದು ಅವರನ್ನು ಅಲ್ಲಿಗೆ ನೀವು ಹೋಗಬೇಕೆಂದರೆ ಇವರುಗಳು ಅಲ್ಲಿಗೆ ಹೋಗುವುದಿಲ್ಲ. ಸಾಮಾನ್ಯವಾಗಿ ಇವರಿರುವ ಜಾಗದಲ್ಲೇ ಇರಲು ಯತ್ನಮಾಡುತ್ತಾರೆ. ಅದಕ್ಕಾಗಿ ಇವರುಗಳನ್ನು ಕೊಳಚೆ ಪ್ರದೇಶಗಳಿಂದ ತೆಗೆಯುವಾಗ ಅವರಿಗೆ ಬೇರೆ ಟ್ರಾನಸಿಟರಿ ಕ್ಯಾಂಪು ವ್ಯವಸ್ಥೆ ಮಾಡಿ ಅವರಿರುವ ಜಾಗದಲ್ಲೇ ಮನೆಗಳು ಆಗುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕಾಗುತ್ತದೆ. ಇದರ ಬಗ್ಗೆ ಸರಕಾರ ಆಲೋಚನೆ ಮಾಡಬೇಕು. ಮತ್ತು ಇವರಿಗೆಲ್ಲಾ ಕಡಿಮೆ ಬಾಡಿಗೆಯಲ್ಲಿ ಮನೆಗಳು ಸಿಗುವಂತೆ ವ್ಯವಸ್ಥೆ ಮಾಡಬೇಕು. ಸಾಮಾನ್ಯವಾಗಿ ಇವೆಲ್ಲರೂ ದಿನಕ್ಕೆ ಒಂದು ಇಲ್ಲವೇ ಎರಡು ರೂಪಾಯಿಗಳಷ್ಟು ಕೂಲಿ ಪಡೆದು ಜೀವನ ಮಾಡುವಂತಹ ಜನರು, ಇಂತಹ ಜನರಿಗೆ ಇನ್ನೊಂದು ಪ್ರಪಂಚವೇ ಸೃಷ್ಟಿಯಾಗಿ ಇದೆ. ಇವರು ಯಾವ ರೀತಿ ಜನ ಜೀವನ ಮಾಡುತ್ತಾರೆಂದರೆ, ಕೆಲವರು ದೊಡ್ಡ ಬೀದಿಗಳಲ್ಲಿರುವ ಅಂಗಡಿಗಳ ಮುಂದೆಯೇ ವಾಸಮಾಡುತ್ತಾರೆ. ಇನ್ನು ಕೆಲವರು ವಾಟರು ಪೈಪುಗಳಲ್ಲಿ ವಾಸಮಾಡುತ್ತಿರುವುದನ್ನು ಸಹ ನೋಡಬಹುದು. ಸುಮಾರು ಇಪ್ಪತ್ತು ಸಾವಿರ ಸಂಸಾರಗಳು ಈ ರೀತಿ ಕೊಳಚೆ ಜಾಗದಲ್ಲಿ ವಾಸಮಾಡುತ್ತಿವೆ. ಇದಕ್ಕಾಗಿ ನಾನು ಮೊದಲೇ ಹೇಳಿದ ಹಾಗೆ ಬೆಂಗಳೂರಿಂದ ಹಳ್ಳಿಗಳಿಗೆ ಪುನಃ ಹೋಗುವ ಯೋಚನೆ ಮಾಡಬೇಕು ಕೊಳಚೆ ಪ್ರದೇಶಗಳು ಹೆಚ್ಚಾಗುವುದರಿಂದ ಆರೋಗ್ಯವೂ ಕೆಡುತ್ತದೆ, ಇದರಿಂದ ಇಂತಹ ಕೊಳಚೆ ಪ್ರದೇಶದಲ್ಲಿರುವ ಜನರ ಹಾಗೂ ಅವರ ಮಕ್ಕಳ ಆರೋಗ್ಯದ ಕಡೆಗೂ ಸಹ ನಾವು ಲಕ್ಷ ಕೊಡಬೇಕು ಎಂದು ಮತ್ತೆ ಒತ್ತಿ ಹೇಳುತ್ತೇನೆ

ಎರಡನೆಯದು ಅನೇಕ ಕಡೆ ಕೊಳಚೆ ಪ್ರದೇಶಗಳು ಪ್ರೈವೇಟು ಲ್ಯಾಂಡು ಮತ್ತು ರೆವಿನ್ಯೂ ಲ್ಯಾಂಡುಗಳಲ್ಲಿರುತ್ತವೆ. ಸುಮಾರು ಇಂತಹ ಪ್ರದೇಶಗಳಲ್ಲಿ ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಮನೆಗಳು ಇರುತ್ತವೆ ಇವರೆಲ್ಲರೂ ಬೇರೆ ಕಡೆಗೆ ಹೋಗಬೇಕೆಂದರೆ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಂಡು ಮತ್ತು ಇದಕ್ಕೆ ಒಂದು ರೀತಿಯಾದ ಕಾಲ ಮಿತಿ ಗೊತ್ತುಮಾಡಿ, ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಬೇಕು. ಇದಕ್ಕೆ ನಾನು ಒಂದು ಸಲಹೆ ಮಾಡುತ್ತೇನೆ. ಈಗ ಈ ಕೊಳಚೆ ಪ್ರದೇಶಗಳು ಎಲ್ಲಿ ಇವೆಯೋ ಅದನ್ನು ತೆಗೆಯುವಾಗ ಆ ಪ್ರದೇಶಗಳನ್ನೇ ''ಅಪ್ರೂವ್ಡ್ ಬೈ ದಿ ಟ್ರಸ್ಟು ಬೋರ್ಡು'' ಎಂದು ಕೊಡಬಹುದು. ಕಾರ್ಪೊರೇಷನ್ನಿನವರು ಇಲ್ಲವೇ ಮುನಿಸಿಪಾಲಿಟಿಗಳವರು ಸೈಟನ್ನು ಮಾಡಿ ಅದನ್ನು ಹಿಂದೆ ಅಲ್ಲಿ ಯಾರ್‍ಯಾರು ಇದ್ದರು ಅವರಿಗೇ

ಇದನ್ನು ಸೈಟ್ ನೋಡಿ ಕೊಡುವ ವ್ಯವಸ್ಥೆ ಮಾಡಬೇಕು. ಮತ್ತು ಈಗಾಗಲೇ ನಮ್ಮ ನಗರಕ್ಕೆ ಕಾವೇರಿ ನೀರಿನ ಯೋಜನೆ ಮೊದಲನೇ ಸ್ಟೇಜು ಕೆಲಸ ಆರಂಭ ವಾಗಿ, ಇನ್ನೇನು ಕೆಲವೇ ತಿಂಗಳಲ್ಲಿ ಮುಗಿಯುವ ಹಂತದಲ್ಲಿದೆ. ಮುಂದೆ ಈ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಿ ಆ ನಂತರ, ಎಲ್ಲರಿಗೂ ನಮ್ಮ ಸಿಟಿಯಲ್ಲಿರುವ ಇತರ ಜನರಿಗೂ ನೀರನ್ನು ಒದಗಿಸಿಕೊಡಬೇಕಾಗುತ್ತದೆ. ಮತ್ತು ಜನಸಂಖ್ಯೆ ಕೂಡ ಆ ವೇಳೆಗೆ ಹೆಚ್ಚಾಗಿ, ಮುಂದೆ ನಗರಕ್ಕೆ, ನೀರು ಸಾಲದೇ ಬರಬಹುದು. ಈಗಾಗಲೇ ಸುಮಾರು 36 ಕೋಟಿಯಷ್ಟು ಕಾವೇರಿ ಯೋಜನೆಗಾಗಿ ಖರ್ಚುಮಾಡುತ್ತಿದ್ದಾರೆ. ಇಷ್ಟು ಖರ್ಚು ಮಾಡಿ ನೀರು ತಂದರೂ ಅದೂ ಸಾಲದೇ ಬರಬಹುದು. ಇದಕ್ಕಾಗಿ ಕಾವೇರಿ ಯೋಜನೆಯ ಎರಡನೇ ಸ್ಕೀಂನ್ನು ಈಗಿನಿಂದಲೇ ಅಡ್ವಾನ್ಸಾಗಿ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಿದರೆ, ಮುಂದೆ ಇದರಿಂದ ನಗರದ ಎಲ್ಲ ಜನರಿಗೂ ನೀರು ಸಿಗಲು ಸಹಾಯವಾಗುತ್ತದೆ. ಆದುದರಿಂದ ಕಾವೇರಿ ಸ್ಕೀಂನ ಎರಡನೇ ಸ್ಟೇಜನ್ನು ಈಗಿನಿಂದಲೇ ಆರಂಭ ಮಾಡಬೇಕಾಗಿ ಬರುತ್ತದೆ.

ಇನ್ನು ಕೊಳಚೆ ಪ್ರದೇಶಗಳಲ್ಲಿ ಗಾರ್ಬೇಜು ವಿಷಯ ಕೆಲವು ಮಾತನ್ನು ಹೇಳುತ್ತೇವೆ. ಇಂತಹ ಗೊಬ್ಬರ ಇಲ್ಲಿ ಹೆಚ್ಚಾಗಿರುತ್ತದೆ. ಇದನ್ನು ಸರಿಯಾದ ಅಂದರೆ ಒಂದು ವ್ಯವಸ್ಥಿತ ರೀತಿಯಲ್ಲಿ ಊರಿಂದ ಹೊರಕ್ಕೆ ಸಾಗಿಸಿ ಅದನ್ನು ಗೊಬ್ಬರವಾಗಿ ಉಪಯೋಗಿಸಲು ತಕ್ಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಸರಕಾರ ವಿಚಾರ ವಿನಿಮಯ ಮಾಡಬೇಕು.

ಇನ್ನು ಮಾನ್ಯ ಮಂತ್ರಿಗಳು ಖಾಸಗಿಯವರ ಲ್ಯಾಂಡುಗಳಿಗೆ ಕಾಂಪೆನ್ಸೇಷನ್ ಕೊಡುವುದಕ್ಕೆ ಬದಲಾಗಿ ಇದನ್ನು ಅಕ್ವಿಸಿಷನ್ ಮಾಡುವಾಗ ಮಲ್ಟಿಪಲ್ಸ್ ಆಫ್ ಲ್ಯಾಂಡ್ ರೆವಿನ್ಯೂ ರೀತಿ ಕೊಡಬೇಕಾಗುತ್ತದೆ ಎಂದು ಮಂತ್ರಿಗಳು ಹೇಳಿದುದನ್ನು ನಾನೂ ಒಪ್ಪುತ್ತೇನೆ. ಕೆಲವರು ಇಂತಹ ಲ್ಯಾಂಡುಗಳನ್ನು ಸೈಟುಗಳಾಗಿ ಮಾಡಿ ವಿಲೇ ಮಾಡಿ ಹೆಚ್ಚು ಹಣ ಸಂಪಾದನೆ ಮಾಡಿಕೊಂಡಿದ್ದಾರೆ. ಕೆಲವರು ಒಂದು ಸೈಟಿಗೆ 20—25 ಸಾವಿರದಷ್ಟು ಲಾಭ ಪಡೆದಿದ್ದಾರೆ. ಇನ್ನು ಕೆಲವರು ಲ್ಯಾಂಡು ಅಕ್ವೈರು ಮಾಡಿರುವುದು ಸರಿಯಲ್ಲ ಎಂದು ಹೈ ಕೋರ್ಟಿಗೆ ಹೋಗಿ ಸ್ಟೇ ಆರ್ಡರು ಕೂಡ ತಂದಿರುವ ಸಂದರ್ಭಗಳೂ ಅನೇಕ ಉಂಟು. ಇದಕ್ಕೆ ಕಾರಣ ಸರಕಾರದವರು ಕಾಂಪೆನ್ಸೇಷನ್ ಕೊಟ್ಟಿರುವುದು ಕಮ್ಮಿ ಎಂದು.

ಇನ್ನು ಆದರಲ್ಲಿ ಅಪೀಲು ಮಾಡಿಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ. ಇದರ ಉದ್ದೇಶವೇನೋ ಸರಿ. ಆದರೆ ಅದರಲ್ಲಿರುವ ಕ್ಲಾಸು 27 ರಲ್ಲಿ ತೆಗೆದು

(ಶ್ರೀ ಕೆ. ಎಸ್. ಶ್ರೀನಿವಾಸುಲು ನಾಯ್ಡು)

ಕೊಳ್ಳುವ ಭೂಮಿಯನ್ನು ಯಾವ ರೀತಿ ಅಕ್ವೈರು ಮಾಡಿ ಉಪಯೋಗಿಸಿಕೊಳ್ಳಬೇಕು ಎನ್ನುವುದಕ್ಕೆ ಕೆಲವು ವಿವರಗಳನ್ನು ಇದರಲ್ಲಿ ಹೇಳಿದ್ದಾರೆ. ನಗರದ ಅಭಿವೃದ್ಧಿ ಕೆಲಸಗಳಿಗಾಗಿ ತೆಗೆದುಕೊಳ್ಳುವುದೇನೋ ಸರಿ. ಇದರಲ್ಲಿ ಕೊಳಚೆ ಪ್ರದೇಶಗಳನ್ನು ಹಾಗೇ ಬಿಡುತ್ತಾರೆಂದು ನನಗೆ ಕಾಣುತ್ತದೆ ಮತ್ತು ಈ ಕ್ಲಾಸಿನಲ್ಲಿ ಇರುವ ವಾಕ್ಯಗಳು ನೋಡಿದರೆ ಇದರಲ್ಲೇನೋ "ಲೀಗಲ್ ಲ್ಯಾಕುನಾ" ಇರುವಂತೆ ನನಗೆ ತೋರುತ್ತೆ. ಇದನ್ನು ಸರ್ಕಾರ ಮತ್ತೆ ಪರಿಶೀಲನೆ ಮಾಡಬೇಕೆಂದು ಬಯಸುತ್ತೇನೆ.

ಇನ್ನು ಕ್ಲಾಸು 31 ರಲ್ಲಿ ಸ್ಲಂ ಏರಿಯಾದಲ್ಲಿ ರೆಂಟು ಕೊಡುವುದರ ಬಗ್ಗೆ ಹೇಳಿದ್ದಾರೆ. ಇಲ್ಲಿಗೂ ರೇಟು ಕಂಟ್ರೋಲು ಆಕ್ಟ್ ಎಂದು ಅನ್ವಯವಾಗುತ್ತದೆ, ಇದೇ ಸಬ್ ಸೆಕ್ಷನ್‌ನಲ್ಲಿ ಶೇಕಡಾ ಆರರಷ್ಟು ಕಾಸ್ಟು ಕೊಡಬೇಕೆಂದು ಇದೆ. ಇದನ್ನು ಸಾಧ್ಯವಾದಷ್ಟು ಕಡಿಮೆ ಕೊಟ್ಟರೆ ಚೆನ್ನಾಗಿರುತ್ತದೆ. ನಾವೇ ಈ ಬಡ ಜನಕ್ಕೆ ವಸತಿ ಸೌಕರ್ಯ ಮಾಡಿಕೊಡುವಾಗ ಕೆಲವು ಅನುಕೂಲಗಳನ್ನು ಇವರಿಗೆ ಮಾಡಿಕೊಡುವುದು ಸರಿಯಾಗಿರುತ್ತದೆ. ಇನ್ನು ಚಾಪ್ಟರು 8 ರಲ್ಲಿ ಸ್ಲಂಸ್ ಕ್ಲಿಯರೆನ್ಸ್ ಬೋರ್ಡು ಎಂದು ಇದೆ. ಇದಕ್ಕೆ ಬದಲಾಗಿ ಇದನ್ನು ಮೈಸೂರು ಸ್ಲಂಸ್ ಡೆವಲಪ್‌ಮೆಂಟ್ ಮತ್ತು ಕ್ಲಿಯರೆನ್ಸ್ ಬೋರ್ಡು ಎಂದು ಮಾಡಬೇಕು. ಎಂದು ಇಲ್ಲಿ ಸಲಹೆ ಮಾಡುತ್ತೇನೆ. ಇದಲ್ಲದೆ ಹೌಸಿಂಗ್ ಬೋರ್ಡು ಎಂದು ಇದೆ ಇದರ ಜೊತೆಗೆ ಈಗ ಸ್ಲಂಸ್ ಕ್ಲಿಯರೆನ್ಸ್ ಬೋರ್ಡು ಎಂದು ಎರಡು ಬೋರ್ಡುಗಳಾಗುತ್ತವೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಇಲ್ಲಿರುವ ಕ್ಲಾಸು 45 ನ್ನು ಮೂಡಿರುವುದು ಸೂಕ್ತವಾಗಿದೆ.

ಕೊಳಚೆ ಪ್ರದೇಶ ನಿರ್ಮೂಲನಕ್ಕಾಗಿ ನೇಮಕವಾಗುವ ಬೋರ್ಡು ಅಸ್ತಿತ್ವಕ್ಕೆ ಬಂದ ನಂತರ ಈ ಆಕ್ಟ್‌ನಲ್ಲಿ ನಮೂದಾಗಿರುವ ಕೆಲಸಗಳನ್ನು ಹೌಸಿಂಗ್ ಬೋರ್ಡು ಆಕ್ಟ್ ಪ್ರಕಾರ ಹೌಸಿಂಗ್ ಬೋರ್ಡು ತೀರ್ಮಾನ ಮಾಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳಿರುವುದು ಒಂದು ವಿಶೇಷವಾದ ಸಂಗತಿ.

ಈ ಬಿಲ್ಲನ್ನು ಸಾಧ್ಯವಾದ ಮಟ್ಟಿಗೂ ತಡ ಮಾಡದೆ ಜಾರಿಗೆ ತಂದು, ಇದರಲ್ಲಿ ಇನ್ನೂ ಏನಾದರೂ ಲೋಪದೋಷಗಳಿದ್ದರೆ, ಅವುಗಳನ್ನು ಸರಿಪಡಿಸುವುದಕ್ಕೆ ಮುಂದೆ ಮತ್ತೊಂದು ಸಲ ತಂದರೆ ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ಕಾರ್ಯಗತ ಮಾಡಬೇಕೆಂದು ಹೇಳಿ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರು ಕೊಳಚೆ ಪ್ರದೇಶದಲ್ಲಿ ವಾಸವಾಗಿರತಕ್ಕವರ ಬಗ್ಗೆ ಅತೀವವಾದ ದುಃಖ ಅನುಕಂಪ ಮತ್ತು ದಯೆ ವ್ಯಕ್ತಪಡಿಸಿದ್ದಾರೆ. ಬಹಳ ವರ್ಷಗಳಿಂದ ಅವರ ಬಗ್ಗೆ ಒಳ್ಳೆಯದು ಮಾಡಬೇಕು ಎನ್ನುವ ಜನ ಏನೂ ಮಾಡಲಿಲ್ಲ ಎನ್ನುವುದರ ಬಗ್ಗೆ ಕಾರಣವನ್ನು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆದರೆ ಅವರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯ ನನ್ನ ಮತ್ತು ನಮ್ಮ ಸರ್ಕಾರದ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ನಾನು ವಂದನೆಗಳನ್ನು ಅರ್ಪಿಸಬೇಕಾಗಿದೆ.

ನನ್ನ ಬಗ್ಗೆ ಕೆಲವು ಸದಸ್ಯರು ಒಂದು ವಾತ್ಸಲ್ಯದ ಹಿನ್ನೆಲೆಯಲ್ಲಿ ಮಾತನಾಡಿದ್ದಾರೆ. ಅವರಿಗೆ ಕೂಡ ನಾನು ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಬಡವರ ಬಗ್ಗೆ ದಯೆ ಮತ್ತು ಅನುಕಂಪವನ್ನು ಇಟ್ಟುಕೊಂಡು ಕೆಲಸ ಮಾಡಬೇಕೆಂಬುದೇ ನಮ್ಮ ಸರ್ಕಾರದ ಉದ್ದೇಶ. ಈ ಉದ್ದೇಶವನ್ನು ನಾವು ಪ್ರಧಾನವಾಗಿ ಅಳವಡಿಸಿದ್ದೇವೆ. ನಾವು ಜನತೆಗೆ ಏನು ವಾಗ್ದಾನ ಮಾಡಿದ್ದೇವೆ, ಚುನಾವಣೆ ಕಾಲದಲ್ಲಿ ಏನೇನು ಮಾಡುತ್ತೇವೆಂದು ಜನತೆಗೆ ಹೇಳಿದ್ದೇವೆ ಅದನ್ನು ಒಂದೊಂದಾಗಿ ಕಾರ್ಯಗತ ಮಾಡಿ ಆ ವಾಗ್ದಾನದಂತೆ ನಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ನಮ್ಮ ಸರ್ಕಾರ ಆಡಳಿತಕ್ಕೆ ಬಂದ ತರುಣದಲ್ಲಿಯೇ ಈ ಮಸೂದೆಯನ್ನು ತರಬೇಕಾಗಿತ್ತು, ತಡವಾಗಿದೆ. ಆದರೆ ತಡವಾಗಿದ್ದರೂ ಕೂಡ ಈ ಬಗ್ಗೆ ಕೆಲಸ ಮಾಡುವುದರಲ್ಲಿ ತಡ ಮಾಡಿಲ್ಲ, ಮಾಡುತ್ತಲೇ ಇದ್ದೇವೆ. ಕೊಳಚೆ ಪ್ರದೇಶಗಳ ಸುಧಾರಣೆಗೆ ಎನ್‌ವಿರಾನ್‌ಮೆಂಟಲ್ ಇಂಪ್ರೂವ್‌ಮೆಂಟ್ ಸ್ಕೀಂ ಎಂದು ಮಾಡಿ ಅದನ್ನು ಕಾರ್ಯಗತ ಮಾಡಬೇಕೆಂದು ಅಧಿಕಾರಿಗಳನ್ನು ಚುರುಕು ಮಾಡಿ ಅವರಿಗೆ ಕೊಡಬೇಕಾಗಿರತಕ್ಕ ಸಲಹೆಗಳನ್ನು ಕೊಟ್ಟು ತೀವ್ರವಾಗಿ ಕೆಲಸ ನಡೆಯುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನೆಲ್ಲ ತೆಗೆದುಕೊಂಡಿದ್ದೇವೆ. ಸುಮಾರು 50 ಲಕ್ಷ ರೂಪಾಯಿನಷ್ಟು ವೆಚ್ಚ ಮಾಡಿ ಕೆಲಸ ಮಾಡಿದ್ದೇವೆ. ಕೊಳಚೆ ಪ್ರದೇಶಗಳಲ್ಲಿರುವ ಜನಗಳ ಜೀವನವನ್ನು ಸುಧಾರಿಸುವುದಕ್ಕೆ ಎಲ್ಲ ಕಾರ್ಯಕ್ರಮವನ್ನೂ ತೆಗೆದುಕೊಂಡಿದ್ದೇವೆ, ಅವರನ್ನು ತೃಪ್ತಿಪಡಿಸುವುದಕ್ಕೆ ಎಲ್ಲ ಪ್ರಯತ್ನ ಮಾಡಿದ್ದೇವೆ ಎಂದು ನನಗಾದರೂ ಅನ್ನಿಸುತ್ತದೆ ಮಾಡಿರುವ ಕೆಲಸ ಸಾಲದು, ಆ ದಿಕ್ಕಿನಲ್ಲಿ ಪ್ರಯತ್ನ ಮಾಡಿದ್ದೇವೆ. ಇಂಥ ಒಂದು ಮಸೂದೆ ಇದ್ದಿದ್ದರೆ ತೀವ್ರತರವಾಗಿರತಕ್ಕ ಕೆಲಸ ಕಾರ್ಯಗಳನ್ನು ಮಾಡಬಹುದಾಗಿತ್ತು ಎಂದು ನನ್ನ ಅಭಿಪ್ರಾಯ.

ಮಾನ್ಯ ಸದಸ್ಯರಾದ ಸರ್ವಶ್ರೀ ಟಿ. ಆರ್. ಶಾಮಣ್ಣ, ಬಂಗಾರಪ್ಪ, ಕೋಣಂದೂರು ಲಿಂಗಪ್ಪ ಮತ್ತು ಇತರರು ಹಲವಾರು ಸಲಹೆಗಳನ್ನು ನಮ್ಮ

(ಶ್ರೀ ಬಿ. ಬಸವಲಿಂಗಪ್ಪ)

ಮುಂದೆ ಇಟ್ಟಿದ್ದಾರೆ. ಅವು ಒಳ್ಳೆಯ ಸಲಹೆಗಳು. ಅವೆಲ್ಲ ಸಲಹೆಗಳನ್ನೂ ನಾವು ರೂಲ್ ಮಾಡುವಾಗ ಗಮನದಲ್ಲಿಟ್ಟುಕೊಂಡು ಯಾವ ಅವ್ಯವಹಾರಕ್ಕೂ ಅವಕಾಶ ಕೊಡದ ಹಾಗೆ ತೀರ್ಮಾನ ತೆಗೆದುಕೊಂಡು ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪರಿಹಾರವನ್ನು ಕೊಡುವ ಬಗ್ಗೆ ಮಾನ್ಯ ಬಂಗಾರಪ್ಪ ಮತ್ತು ಮಾನ್ಯ ಕೋಣಂದೂರು ಲಿಂಗಪ್ಪ ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪರಿಹಾರ ಕೊಡತಕ್ಕ ವಿಧಿ ಏನಿದೆ ಅದು ಡಿಕ್ಲರೇಷನ್ ಮಾಡಿದ ಮೇಲೆ ಬರತಕ್ಕದ್ದು. ಕೊಳಚೆ ಪ್ರದೇಶವೆಂದು ನಾವು ಯಾವಾಗ ಡಿಕ್ಲೇರ್ ಮಾಡುತ್ತೇವೆ, ಆ ಡಿಕ್ಲರೇಷನ್ ಮಾಡಿದಾಗ ಅಲ್ಲಿ ಖಾಲಿ ಭೂಮಿ ಇರುತ್ತದೆ ಗುಡಿಸಲುಗಳಿರುತ್ತವೆ. ಹೀಗಿರುವಾಗ ಜಾಸ್ತಿ ಹಣ ಖಜಾನೆಯಿಂದ ಹೋಗುತ್ತದೆ ಎಂದು ನನಗಾದರೂ ಅನ್ನಿಸುವುದಿಲ್ಲ. ಕಾಲಾನುಕಾಲದಿಂದ ಬಂದಿರತಕ್ಕ ಅಕ್ವಿಜಿಷನ್ ಆಕ್ಟ್ ಮತ್ತು ನಿಯಮಾವಳಿಗಳ ಪ್ರಕಾರ ಕಾಂಪೆನ್ಸೇಷನ್ ಕೊಡಬೇಕಾಗಿದ್ದರೆ ಬಹಳ ಹಣ ಕೊಡಬೇಕಾಗುತ್ತದೆ. ಆದರೆ ಅದನ್ನು ಮನಸಿನಲ್ಲಿಟ್ಟುಕೊಂಡು, ನಾವು ವಿಚಾರ ಮಾಡಿ ಕಂದಾಯದ ನೂರು ಪಟ್ಟು ಕೊಟ್ಟರೆ ನಾಕು ಜಾಸ್ತಿ ಕೊಟ್ಟು ಹಾಗೆಯೂ ಆಗುವುದಿಲ್ಲ, ಕಡಮೆ ಕೊಟ್ಟ ಹಾಗೆಯೂ ಆಗುವುದಿಲ್ಲ ಎನ್ನುವ ನಿರ್ಧಾರದ ಮೇಲೆ ಆ ವಿಧಿಯನ್ನು ನಾವು ಅಳವಡಿಸಿದ್ದೇವೆ.

ವೋಟಿಗೋಸ್ಕರ ನಾವು ಈ ಮಸೂದೆಯನ್ನು ತರುತಿದ್ದೇವೆನ್ನುವ ಭಾವನೆಯಲ್ಲಿ ಕೆಲವು ಸದಸ್ಯರು ಮಾತನಾಡಿದರು. ಇದು ವೋಟಿನ ಪ್ರಶ್ನೆಯಲ್ಲ, ಇದು ಕರ್ತವ್ಯದ ಪ್ರಶ್ನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಲಿಕ್ಕೆ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದೇವೆ. ಇದನ್ನು ಇನ್ನೂ ಮೊದಲೇ ತರಬೇಕಾಗಿತ್ತು ಎನ್ನುವ ವಾದವನ್ನು ನಾನು ಒಪ್ಪಿದ್ದೇವೆ. ಆದರೆ ಅದಕ್ಕೋಸ್ಕರವೇ ಕೆಲಸದಲ್ಲಿ ತಡ ಮಾಡಿಲ್ಲವೆಂದು ಹೇಳಿದ್ದೇನೆ. ವೋಟನ್ನು ತೆಗೆದುಕೊಳ್ಳುವುವಕ್ಕೋಸ್ಕರವಾಗಿ ಈ ಮಸೂದೆಯನ್ನು ತರುತ್ತಿಲ್ಲ. ಮಾನವೀಯ ದೃಷ್ಟಿಯಿಂದ ಬಡವರ ಕಲ್ಯಾಣ ಕಾರ್ಯ ಆಗಬೇಕೆಂಬ ದೃಷ್ಟಿಯಿಂದ ಈ ಕೆಲಸವನ್ನು ಮಾಡುತ್ತಿದ್ದೇವೆ. ಕೊಳಚೆ ಪ್ರದೇಶಗಳಲ್ಲಿರುವ ಜನರು ಹಂದಿ ನಾಯಿಗಳಂತೆ ಜೀವನ ಮಾಡುತ್ತಿರತಕ್ಕ ಪರಿಸ್ಥಿತಿಯನ್ನು ಸುಧಾರಿಸಿ ಅವರೂ ಸಹ ಬೆಂಗಳೂರು ನಗರದಲ್ಲಿರುವ ಬೇರೆ ನಾಗರಿಕರಂತೆ ಜೀವನ ಮಾಡುವುದನ್ನು ಮಾನ್ಯ ಸದಸ್ಯರೆಲ್ಲ ನೋಡಿ ನಲಿಯತಕ್ಕ ಸನ್ನಿವೇಶವನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

5-30 P.M.

ಅಪೀಲ್ ವಿಚಾರದಲ್ಲಿ ಜಮೀನು ಸ್ವಾಧೀನ ಪಡಿಸುವ ಪ್ರಶ್ನೆ ಇರಕೂಡದು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಅದು ಅಪೀಲಿಗೆ ಒಳಪಡುವುದಿಲ್ಲ. ಎಷ್ಟು ಹಣ ಪರಿಹಾರ ರೂಪದಲ್ಲಿ ಕೊಡುತ್ತಾರೆ ಎಂದು ಹೇಳುವುದಕ್ಕೆ ಸರಿಯಾಗಿ ಗುಣಾಕಾರ ಭಾಗಾಕಾರ ಹಾಕಿದ್ದಾರೆಯೇ ಎನ್ನುವುದಕ್ಕೆ ಅಪೀಲೇ ಹೊರತು ಜಮೀನು ತೆಗೆದುಕೊಳ್ಳುವ ಬಗ್ಗೆ ಅಪೀಲು ಇರುವುದಿಲ್ಲ. ಅದರ ಬಗ್ಗೆ ಜಾಸ್ತಿ ಗಮನ ಹರಿಸಬಾರದು ಎಂದು ಹೇಳುತ್ತೇನೆ. ಶ್ಯಾಮಣ್ಣನವರು ಹೇಳಿದ್ದನ್ನು ಬಂಗಾರಪ್ಪನವರು ಪುಷ್ಟೀಕರಿಸುತ್ತಾ, ನಮ್ಮದು ಸೆಕ್ಯೂಲರ್ ಸ್ಟೇಟ್ ಆದುದರಿಂದ ಕನ್ನಡ ಮಾತನಾಡುವವರನ್ನಾಗಲೀ, ತಮಿಳು ಮಾತನಾಡುವವರನ್ನು ಆಗಲೀ, ತೆಲುಗು ಮಾತನಾಡುವವರನ್ನಾಗಲೀ ಎಲ್ಲರನ್ನು ಸರಿಸಮಾನವಾದ ದೃಷ್ಟಿಯಿಂದ ನೋಡಬೇಕು ಎಂದು ಸಲಹೆ ಮಾಡಿದ್ದಾರೆ. ಈ ಬೆಂಗಳೂರು ನಗರವನ್ನು ಕನ್ನಡಿಗರು ಮಾತ್ರ ಕಟ್ಟಿದು ಅಲ್ಲ. ತಮಿಳರೂ ಈ ನಗರವನ್ನು ಕಟ್ಟಲಿಕ್ಕೆ ಬೆಂಬಲ ಕೊಟ್ಟಿರುವುದನ್ನು ನೋಡಿದ್ದೇನೆ. ತೆಲುಗು ಜನರೂ ಸಹ ಬೆಂಬಲ ಕೊಟ್ಟಿದ್ದಾರೆ. ಕನ್ನಡಿಗರ ಜೊತೆಗೆ ಅಣ್ಣ ತಮ್ಮಂದಿರಂತೆ ಬಹಳ ವರ್ಷಗಳಿಂದ ಈ ಪಟ್ಟಣ ಕಟ್ಟುವುದಕ್ಕೆ ಅವರೆಲ್ಲರೂ ಬೆಂಬಲ, ಸಹಕಾರ ನೀಡಿದ್ದಾರೆ. ತಮಿಳರಿಗಿಂತ, ತೆಲಗುನವರಿಗಿಂತ, ಕನ್ನಡಿಗರಿಗೇ ಹೆಚ್ಚು ಅವಕಾಶ ಮಾಡಿಕೊಡಬೇಕು ಮತ್ತು ಅವರಿಗೇ ಜಾಸ್ತಿ ನಿಗಾ ಕೊಡಬೇಕು, ಗಮನ ಕೊಡಬೇಕು ಎಂದು ಏನು ಸಲಹೆ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಕೊಳಚೆ ಪ್ರದೇಶಗಳಲ್ಲಿರುವವರ ಬಗ್ಗೆ ಮಾನವೀಯತೆಯ ದೃಷ್ಟಿಯಿಂದ ನೋಡಬೇಕು ನಿಖರವಾಗಿ ಅವರ ಕಡೆ ಗಮನಕೊಟ್ಟು ಎಲ್ಲರ ಜೀವನವನ್ನು ಸುಧಾರಿಸಲಿಕ್ಕೆ ಪ್ರಯತ್ನ ಮಾಡಬೇಕೇ ವಿನಹ....

ಶ್ರೀ ಕೋಣಂದೂರು ಲಿಂಗಪ್ಪ :—ಎಲ್ಲರೂ ಅಣ್ಣತಮ್ಮಂದಿರು ಎಂಬುದು ನಿಜ. ನಮ್ಮ ಮನೆಗೆ ಬೆಂಕಿ ಹಚ್ಚಿ ಊರಿಗೆ ಬೆಳಕು ಮಾಡತಕ್ಕ ವಿಶಾಲ ಮನೋಭಾವ ಬೇಡ ಅದನ್ನು ವಿಶಾಲ ಮನೋಭಾವ ಎಂದು ಕರೆಯುವುದಿಲ್ಲ ಮನೆ ಮುರುಕ ಬುದ್ಧಿಯೆಂದು ಕರೆಯುತ್ತೇವೆ. ಕನ್ನಡಿಗರಿಗೇ ಮೊದಲು ಆದ್ಯತೆ ಕೊಡಿ, ಬೇರೆಯವರಿಗೆ ಬೇಡ ಎಂದು ಹೇಳುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ :—ಲಿಂಗಪ್ಪನವರ ಅಭಿಪ್ರಾಯ ನಾನಂತೂ ಒಪ್ಪಲಿಕ್ಕೆ ತಯಾರು ಇಲ್ಲ. ಯಾರು ಯಾವ ಮನೆಯನ್ನೂ ಮುರಿಯಲಿಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. 20-25 ವರ್ಷಗಳಿಂದ ಮುರಿಯತಕ್ಕಂಥವರನ್ನು ನೋಡಿಲ್ಲ, ಎಲ್ಲರೂ ಮನೆ ಕಟ್ಟಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಎಲ್ಲರೂ ಸಹಕಾರ, ಸೌಹಾರ್ದದಿಂದ ಮನೆ ಕಟ್ಟಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅಧ್ಯ

(ಶ್ರೀ ಬಿ. ಬಸವಲಿಂಗಪ್ಪ)

ಇಕ್ಕವನು ಇಲ್ಲದವನ ಪ್ರಶ್ನೆ. ಶ್ರೀರಾಮುಲುರವರು ಹೇಳಿದಹಾಗೆ ಸದಾಶಿವ ನಗರದಲ್ಲಿರತಕ್ಕಂಥ ಜನ ಯಾವರೀತಿ ದೊಡ್ಡದೊಡ್ಡ ಮನೆಗಳನ್ನು ಕಟ್ಟಿಕೊಂಡು ಅಷ್ಟು ಹಾಸದಿಂದ ಮೆರೆಯುತಾರೆ. ಕೊಳಚೆ ಪ್ರದೇಶಗಳಲ್ಲಿ ಹಂದಿ, ನಾಯಿಗಳಂತೆ ಹೇಗೆ ಜೀವನ ಮಾಡುತ್ತಿದ್ದಾರೆ ಅದನ್ನು ಹೇಗೆ ಸರಿದೂಗಿಸುತ್ತೀರಿ ಎಂದು ಪ್ರಶ್ನೆ ಹಾಕಿದ್ದರು. ಅದಕ್ಕೆ ಒಂದಲ್ಲ ಒಂದು ದಿವಸ ಉತ್ತರ ಕೊಡಲೇಬೇಕಾಗುತ್ತದೆ. ಅಂತರ ಕಡಿಮೆ ಮಾಡಲೇಬೇಕಾಗುತ್ತದೆ. ಜನ ಕೊಳಚೆ ಪ್ರದೇಶಗಳಲ್ಲಿ ಇರಬಹುದು, ಕನಿಷ್ಠ ಅವಸ್ಥೆಯಲ್ಲಿರಬಹುದು ಎಂದು ಏನು ವಾದವಿದೆ, ಅದನ್ನು ಅಲ್ಲಗಳೆಯುವುದಿಲ್ಲ, ಅಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಇಲ್ಲದವನಿಗೆ, ಇರುವವನಿಗೂ ಅಂತರ ಕಡಿಮೆ ಮಾಡಿ, ಇಲ್ಲದವನೂ, ಇದ್ದವನನ್ನೂ ಇಬ್ಬರನ್ನೂ ಕೂಡ ಸೂಕ್ತವಾಗಿ ಬಾಳತಕ್ಕ ಸನ್ನಿವೇಶ ಸೃಷ್ಟಿ ಮಾಡಬೇಕು ಅದಕ್ಕೆ ನಾವು ನೀವು ಎಲ್ಲರೂ ಸೇರಿ ಕೆಲಸ ಮಾಡಬೇಕು. ಅದಕ್ಕೆ ತಮಿಳು ಮಾತನಾಡತಕ್ಕ ಜನರು, ತೆಲಗು ಮಾತನಾಡತಕ್ಕಂಥ ಜನರು ಎನ್ನತಕ್ಕಂಥ ಭಾವನೆ ಬಿಟ್ಟು ಮಾನವೀಯತೆಯ ದೃಷ್ಟಿಯಿಂದ ಪ್ರಯತ್ನ ಮಾಡಬೇಕು. ಒಂದೇ ವಿಷಯ ಮನಸ್ಸಿನಲ್ಲಿಟ್ಟುಕೊಂಡು ಕನ್ನಡ ಮಾತನಾಡತಕ್ಕಂಥ ಜನರ ಬಗ್ಗೆ, ತೆಲಗು ಮಾತನಾಡತಕ್ಕಂಥ ಜನರ ಬಗ್ಗೆ, ತಮಿಳು ಮಾತನಾಡತಕ್ಕಂಥ ಜನರ ಬಗ್ಗೆ ಅಭಿಮಾನ ಇಟ್ಟುಕೊಂಡು ಹಾಗೆ ಮುಂದುವರಿಸಿಕೊಂಡು ಹೋಗುವುದು ಸಮಾಜಕ್ಕೆ ಸರಿಯಲ್ಲ ಅದು ಬೆಂಗಳೂರು ಸಿಟಿಯಲ್ಲಿರತಕ್ಕ ದೊಡ್ಡ ಪಟ್ಟಣದಲ್ಲಿ ಇಂಥ ಭಾವನೆ ಸರಿಯಲ್ಲ, ಇದು ಎಲ್ಲರೂ ಒಪ್ಪತಕ್ಕ ಮಾತು. ಎಲ್ಲರೂ ಸೇವೆ ಮಾಡತಕ್ಕ ಅವಕಾಶ ಈ ಬಿಲ್ಲಿನಲ್ಲಿ ಆಗುತ್ತದೆಂದು ನಾನಾದರೂ ಭಾವನೆ ಮಾಡುತ್ತೇನೆ. ಶ್ರೀರಾಮುಲುರವರು ಏನು ಒಂದು ಸಲಹೆಮಾಡಿದ್ದಾರೆ ಈ ಒಂದು ಬೋರ್ಡಿನಲ್ಲಿ ಹಾಕತಕ್ಕ ಸದಸ್ಯರು ಒಳ್ಳೆಯ ಚಾರಿತ್ರ್ಯವನ್ನು ಹೊಂದಿರಬೇಕು ಎಂದು, ಆ ಸಲಹೆಯನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ದೊಡ್ಡ ಸೈಟ್‌ಗಳು ಮತ್ತು ಚಿಕ್ಕ ಸೈಟ್‌ಗಳ ಬಗ್ಗೆ ಮಾನ್ಯಸದಸ್ಯರು ಹೇಳಿದರು ಒಂದು ಪ್ರದೇಶದಲ್ಲಿ ಒಂದು ಲಕ್ಷ 50 ಸಾವಿರ ರೂಪಾಯಿಗಳು ಬೆಲೆ ಬಾಳತಕ್ಕ ಸೈಟುಗಳನ್ನು ಮಾಡಿದ್ದೀರಿ, ಇನ್ನೊಂದು ಪ್ರದೇಶಗಳಲ್ಲಿ ಸಣ್ಣ ಸಣ್ಣ ಸೈಟುಗಳನ್ನು ಮಾಡಿದ್ದೀರಿ, ಅಂತರ ಜಾಸ್ತಿಯಾಗುತ್ತದೆಂದು ಹೇಳಿದರು. ನಾನು ಅವರಿಗೆ ಬಹಳ ವಿನಯದಿಂದ ಹೇಳುತ್ತೇನೆ. ಬಡಾವಣೆಗಳಲ್ಲಿ ಆದಂಥ ಕಾರ್ನರ್ ಮತ್ತು ಕಮರ್ಷಿಯಲ್ ಸೈಟುಗಳು ಎಂದು ಹೇಳಿ ಬಿಟ್ಟು ದೊಡ್ಡ ದೊಡ್ಡ ಸೈಟುಗಳನ್ನು ಮಾಡುತ್ತಿದ್ದೇವೆ. ಅವುಗಳನ್ನು ಹರಾಜು ಮೂಲಕ ಜಾಸ್ತಿ ಬೆಲೆಗೆ ಮಾರಾಟ ಮಾಡಿ ಅದರಿಂದ ಬಂದಿರತಕ್ಕ ಸಂಪತ್ತನ್ನು ಬಡವರಿಗೋಸ್ಕರ, ಸ್ಲಮ್ ಕ್ಲಿಯರೆನ್ಸ್‌ಗೋಸ್ಕರ ಖರ್ಚು ಮಾಡುತ್ತೇವೆ. ಆ ಹಣ ಬೋರ್ಡಿಗೇ ಬರುತ್ತದೆ. ಸಾಹುಕಾರರಿಂದ ಹಣವನ್ನು ಕಿತ್ತುಕೊಂಡು ಬಡವರಿಗೆ ಸಬ್‌ಸಿಡೈಜ್ ರೇಟ್ಸ್‌ಗಾಗಲೀ, ಅಥವಾ ಕೊಳಚೆ ಪ್ರದೇಶವನ್ನು ನಿರ್ಮೂಲ ಮಾಡತಕ್ಕ ಕಾರ್ಯಕ್ಕಾಗಿ ಖರ್ಚು ಮಾಡುವ ವ್ಯವಸ್ಥೆ

ಇದರಲ್ಲಿ ಇದೆ. ಟ್ರಸ್ಟ್ ಬೋರ್ಡ್ ರೂಲ್ಸ್‌ನ್ನು ನಾವು ನೋಡಬೇಕು. ಶ್ರೀರಾಮುಲು ರವರು ನೋಡಿದ್ದರೆ ಇಂಥ ಆಕ್ಷೇಪಣೆ ಮಾಡುತ್ತಾ ಇರಲಿಲ್ಲ ಎಂದು ನನಗನ್ನಿಸುತ್ತದೆ. ಇಲ್ಲಿ ಏನು ಮಾಡಿದ್ದೇವೆಂದರೆ, ಸಾಹುಕಾರರು ಸ್ಥಿತಿವಂತರು ಭೋಗ ಜೀವನ ಮಾಡುವುದಕ್ಕೆ ಇಷ್ಟಪಡುತ್ತಾರೆ. ಅಂಥ ಜನರಿಂದ ಹಣವನ್ನು ಕಿತ್ತುಕೊಳ್ಳಬೇಕಾಗುತ್ತದೆ ಅದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಬಡವರಿಗೆ ಸಬ್‌ಸಿಡೈಜ್ ರೇಟಿನಲ್ಲಿ ಕೊಡುವುದು ಅಥವಾ ಮನೆ ಕಟ್ಟಿಕೊಡುವುದು ಇದಕ್ಕೆ ಹಣವನ್ನು ಹೆಚ್ಚು ಮಾಡುವುದಕ್ಕೆ ಅದನ್ನು ಟ್ರಸ್ಟ್ ಬೋರ್ಡ್ ರೂಲ್ಸ್‌ನಲ್ಲಿ ಅಳವಡಿಸಿದ್ದೇವೆ.

ಕೊನೆಯದಾಗಿ, ಸಣ್ಣ ಮನೆ ಮತ್ತು ಅಂತಸ್ತಿನ ಮನೆಯ ಬಗ್ಗೆ ಬಂಗಾರಪ್ಪನವರು ಪ್ರಸ್ತಾಪಿಸುತ್ತಾ: ಎಲ್ಲೆಲ್ಲಿ ಜಮೀನು ಸುತ್ತಮುತ್ತ ಹೊರಭಾಗದಲ್ಲಿ ಇದೆಯೋ ಅಲ್ಲಿ ಸಣ್ಣ ಮನೆಗಳನ್ನು ಕಟ್ಟಲಿಕ್ಕೆ ಅಭ್ಯಂತರವಿಲ್ಲ ಕೊಳಚೆ ಪ್ರದೇಶಗಳಲ್ಲಿ ಇರುವವರಿಗೆ ಯಾರು ಯಾರಿಗೆ ಕಟ್ಟಿಕೊಡುತ್ತೇವೆ. ಅವರಿಗೆ ಉದ್ಯೋಗ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಎಲ್ಲಿ ಕೊಳಚೆ ಪ್ರದೇಶಗಳು ಸಿಟಿ ಮಾರ್ಕೆಟಿನ ಸುತ್ತಮುತ್ತ ಬೆಳೆದುಕೊಂಡು ಬಂದಿವೆ, ಅಲ್ಲಿ ಒಬ್ಬೊಬ್ಬರು ಪ್ರತ್ಯೇಕವಾಗಿ ಮನೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಅವರಿಗೆ ಪ್ರತ್ಯೇಕವಾದ ನಿವೇಶನವನ್ನು ಕೊಡುವುದಕ್ಕಾಗುವುದಿಲ್ಲ. ಅಂತಸ್ತಿನ ಮನೆಗಳನ್ನು ಅಲ್ಲಿ ಕಟ್ಟಿ ಅಂಥ ಜನಗಳಿಗೆ, ಮಾರ್ಕೆಟಿನಲ್ಲಿ ಕೂಲಿ, ಸಣ್ಣ ಸಣ್ಣ ಕಸಬು ಮಾಡುತ್ತಿರುತ್ತಾರೆ ಅಂಥವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ. ಅವರನ್ನು ದೂರ ಅಟ್ಟಿ ಬಿಡದೆ ಹಾಗೆ ದೊಡ್ಡ ದೊಡ್ಡ ಅಂತಸ್ತಿನ ಮನೆಗಳನ್ನು ಕಟ್ಟಿ ಅಂಥವರಿಗೆ ಪುನರ್‌ವಸತಿ ಮಾಡಬೇಕು ಎಂದು ಸರ್ಕಾರ ಉದ್ದೇಶ ಮಾಡಿದೆ. ಬಂಗಾರಪ್ಪನವರು ಹೇಳಿದ ಸಲಹೆಯನ್ನು ಸಂಪೂರ್ಣವಾಗಿ ಒಪ್ಪಿ ಅದನ್ನು ನಾವು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮದ್ರಾಸಿನಲ್ಲಿ ಸ್ಲಮ್ ಬೋರ್ಡ್ ಸ್ಥಾಪನೆ ಮಾಡಿ ಅವರು ಸಾಧನೆ ಮಾಡಿತತಕ್ಕ ಕೆಲಸದ ಬಗ್ಗೆ ಬಂಗಾರಪ್ಪನವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ ಅವರ ಜೊತೆಗೆ ನಾನು ವ್ಯಕ್ತಪಡಿಸುತ್ತೇನೆ. ಅವರು ಮಾಡಿರತಕ್ಕ ಕೆಲಸ ಮೈಸೂರು ರಾಜ್ಯ ಒಂದೇ ಅಲ್ಲ ಇಡೀ ಇಂಡಿಯಾ ದೇಶದ ಎಲ್ಲಾ ರಾಜ್ಯಗಳು ಅನುಕರಣೆ ಮಾಡತಕ್ಕದೆಂದು ನನ್ನ ಅಭಿಪ್ರಾಯ. ಅವರು ಸಾಧನೆ ಮಾಡಿರತಕ್ಕ ಕೆಲಸ ಜನಗಳಿಗೆ ಮಾಡಿರತಕ್ಕ ಸೌಕರ್ಯಗಳನ್ನು ನಾವು ಕೂಡ ನಮ್ಮ ಜನರಿಗೆ ಮಾಡಬೇಕಾಗುತ್ತದೆ. ನಾವು ಏನಾದರೂ ಅಂಥ ಜನಗಳಿಗೆ ಉಪಕಾರ ಮಾಡಬೇಕು ಎಂದು ಉದ್ದೇಶ ಇದ್ದರೆ ಮದ್ರಾಸ್ ಸರ್ಕಾರದವರು, ಅಲ್ಲಿ ಯಾವ ಪಾರ್ಟಿಯೇ ಇರಲಿ, ಅವರು ಮಾಡಿರತಕ್ಕ ಕೆಲಸ ನೋಡಿ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸತಕ್ಕ ಕಾರ್ಯ ಮಾಡಬೇಕು ಅಂಥ ಕೆಲಸ ಮದ್ರಾಸ್ ಸರ್ಕಾರ ಮಾಡಿದ್ದಾರೆ. ಸ್ಲಮ್ ಬೋರ್ಡ್

(ಶ್ರೀ ಬಿ. ಬಸವಲಿಂಗಪ್ಪ)

ಮುಖಾಂತರ ನಾವು ಕೂಡ ಅದನ್ನು ಅನುಕರಣೆ ಮಾಡಲಿಕ್ಕೆ ಎಷ್ಟು ಸಾಧ್ಯವೋ ಅದನ್ನು ಅನುಕರಣೆ ಮಾಡಿ, ಕೊಳಚೆ ಪ್ರದೇಶಗಳಲ್ಲಿ ವಾಸವಾಗಿರುವ ಜನಗಳಿಗೆ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಎಂದು ನಾನು ಸ್ಪಷ್ಟ ಪಡಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ:—ಕ್ಲಾಜ್ 44 ಬಗ್ಗೆ ಶ್ರೀಮಾನ್ ಬಂಗಾರಪ್ಪ ನವರು ಬೋರ್ಡಿನ ಅಸ್ತಿತ್ವ ನಾಶ ಮಾಡಿ ಸರ್ವಾಧಿಕಾರ ಸರ್ಕಾರ ಬಯಸುವ ಹವಣಿಕೆ ನಡೆದಿದೆ ಎಂದು ಹೇಳಿದರು, ಅದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ:—ಅದು ತೋರುಗಾಣಿಕೆಯ ಮಾತು ಆಗುತ್ತದೆ. ಬೋರ್ಡಿಗೆ ಎಲ್ಲಾ ಅಧಿಕಾರ ಕೊಟ್ಟರೆ ಒಂದು ವಾದ, ಇದು ತಪ್ಪಾಗುತ್ತದೆಂದು ಹೇಳಬಹುದು, ಇನ್ನೊಂದು ವಾದ ಇದು ತಪ್ಪಾಗುತ್ತದೆಂದು ಹೇಳಬಹುದು, ಇನ್ನೊಂದು ವಾದ ಇದು ತಪ್ಪಾಗುವುದಿಲ್ಲ ಎಂದು ಹೇಳಬಹುದು. ಸರ್ಕಾರದ ಪಾಲಿಸಿ ಪ್ರೋಗ್ರಾಮ್‌ಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ತನ್ನ ಕೈಯಲ್ಲಿ ಅಧಿಕಾರ ಇಟ್ಟುಕೊಳ್ಳಲೇ ಬೇಕಾಗುತ್ತದೆ. ಯಾರಾದರೂ ಬೋರ್ಡಿನ ಅಧಿಕಾರಿ ಕೆಲಸ ಮಾಡದೇ ಹೋದರೆ ನಾವು ಒಂದು ಪಾರ್ಟಿ ಜನ, ಕಾಂಗ್ರೆಸ್ ಪಾರ್ಟಿಯವರು ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟ ಹೇಳಿಕೆಯನ್ನು ಸರ್ಕಾರದವರು ಕಾರ್ಯಗತ ಮಾಡಲಿಕ್ಕೆ, ಸರ್ಕಾರದವರ ಕೈಯಲ್ಲಿ ಅಧಿಕಾರವನ್ನು ಇಟ್ಟುಕೊಂಡಿದ್ದರೆ ತಕ್ಕ ಸೂಚನೆಗಳನ್ನು ಕೊಡಬಹುದು.

ಪ್ರಣಾಳಿಕೆಯಲ್ಲಿ ಹೇಳಿದ ಪ್ರಕಾರ ಕೆಲಸಮಾಡಲಿಲ್ಲ ಎಂದು ನೀವೇ ಅಪವಾದ ಹೊರಿಸುತ್ತೀರಿ. ಯಾವ ಬೋರ್ಡ್ ಆಗಲಿ, ಕಾರ್ಪೊರೇಷನ್ ಆಗಲಿ, ಯಾವ ಅಧಿಕಾರಿಯಾಗಲಿ, ಪಾಲಿಸಿ ಪ್ರೋಗ್ರಾಮ್ಸ್ ಏನಿದೆ ಅದನ್ನು ಕಾರ್ಯಗತ ಮಾಡದೇ ಇದ್ದರೆ, ಸರ್ಕಾರ ತಾನೇ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ: ಯಾವ ವ್ಯವಹಾರದಲ್ಲಾಗಲೀ, ಯಾವ ಸಮಯದಲ್ಲಾಗಲೀ ನೀವು ಕಾಗದ ಪತ್ರಗಳನ್ನು ತರಿಸಿಕೊಂಡು ನೇರವಾಗಿ ಆದೇಶ ಕೊಡುವಂಥ ಅಧಿಕಾರವನ್ನು ಒಂದು ವಿಧಿ ಕೆಳಗೆ ಇಟ್ಟುಕೊಂಡಿದ್ದೀರಿ. ಸಾಮಾನ್ಯವಾಗಿ ದಿನನಿತ್ಯದ ವ್ಯವಹಾರಗಳನ್ನು ಬೋರ್ಡಿಗೆ ಬಿಟ್ಟು ಪಾಲಿಸಿಗೆ ಮತ್ತು ಹಣಕಾಸಿಗೆ ಸಂಬಂಧಪಟ್ಟದ್ದನ್ನು ಸರ್ಕಾರದವರು ಇಟ್ಟುಕೊಳ್ಳಬೇಕಾದುದು ನ್ಯಾಯ. ವೈಯುಕ್ತಿಕವಾಗಿ ಯಾವ ವ್ಯವಹಾರದಲ್ಲಿಯೂ ನೇರವಾಗಿ ತಾವು ಕೈಹಾಕಬಾರದು ಎಂದು ನನ್ನ ಅಭಿಪ್ರಾಯ.

ಶ್ರೀ ಬಿ. ಬಸವಲಿಂಗಪ್ಪ : ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇನೆ. ಆದರೆ ಕೆಲಸದ ಸಾಧನೆಯ ಬಗ್ಗೆ ಏನೇನು ಮಾಡಬೇಕು ಅದನ್ನೆಲ್ಲಾ ಇಟ್ಟು ಕೊಂಡಿದ್ದೇವೆ. ಇನ್ನು ಡೆಪ್ಯುಟಿ ಕಮಿಷನರ್ಸ್ ಸ್ಟೈಟ್ ಡಿಸ್ಟ್ರಿಬ್ಯೂಷನ್ ಪ್ರೋಗ್ರಾಂ ವಿಚಾರದಲ್ಲಿ ಸರಿಯಾಗಿ ಕಾರ್ರ್ಯನಿರ್ವಹಣೆ ಮಾಡಲಿಲ್ಲ. ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿಕೆ ಕೊಟ್ಟಿದ್ದೇನೆ. ಅದನ್ನು ತಾವೆಲ್ಲಾ ಓದಿರಬಹುದು. ಮಾನ್ಯ ಬಂಗಾರಪ್ಪನವರು ಹೇಳಿದಹಾಗೆ 24 ಗಂಟೆಯೂ ಬೋರ್ಡಿನ ವ್ಯವಹಾರದಲ್ಲಿ ಕೈಹಾಕುವುದು ಉದ್ಭವಿಸುವುದಿಲ್ಲ. ಯಾವಾಗ ಕರ್ತವ್ಯಲೋಪವಾಗುತ್ತದೆ, ಅಂತಹ ಸಂದರ್ಭದಲ್ಲಿ ನಾವು ಕೈಹಾಕ ಬೇಕಾಗುತ್ತದೆ. ಸದಾ 24 ಗಂಟೆ ಅವರ ಕೆಲಸ ನಿರ್ವಹಣೆಯಲ್ಲಿ ಕೈಹಾಕುತ್ತೇವೆಂದು ಹೇಳುವುದನ್ನು ನಾನ ಒಪ್ಪಲಿಕ್ಕೆ ತಯಾರಿಲ್ಲ.

SRI S. BANGARAPPA :—In that particular clause, no mention is made to the effect that whenever the Board fails in its duties interference of the Government is called for. That matter is not touched at all.

ಎಲ್ಲಿ ಪ್ರೋಗ್ರಾಂಗೆ ಅಡ್ಡಿ ಬರುತ್ತದೆ ಆಗ ಇಂಟರ್‌ಫಿಯರ್ ಅಗಬೇಕು ಎಂದು ಹೇಳಿದ್ದರೆ, ಎಲ್ಲಿ ಫೈಲ್ ಆಗುತ್ತದೆ ಅಲ್ಲಿ ಇಂಟರ್‌ಫಿಯರ್ ಆಗುತ್ತದೆ ಎಂದು ಹೇಳಿದ್ದರೆ, ಆಗ ಸಪೋರ್ಟ್ ಮಾಡುತ್ತೇವೆ. ಅದು ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ :—ಇಲ್ಲದೇ ಇರಬಹುದು. ಪದ್ಧತಿ ಪ್ರಕಾರ ಯಾವತ್ತೂ ದಿನಚರಿಯ ವ್ಯವಹಾರದಲ್ಲಿ ಸರ್ಕಾರದವರು ಕೈಹಾಕುತ್ತಾರೆ ಎಂದು ತಿಳಿಯಬೇಡಿ. ಇಷ್ಟು ಹೇಳಿ ಎಲ್ಲಾ ಸದಸ್ಯರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER:—The question is:

"That the Mysore Slum Area (Improvement and Clearance) Bill, 1973, be taken into consideration".

The motion was adopted

CLAUSES 2 TO 73

MR. DEPUTY SPEAKER :—Since there are no amendments to the Bill, I will put all the Clauses to the vote of the House.

(Deputy Speaker)

The question is:

"That Clauses 2 to 73 both inclusive, do stand part of the Bill."

THE MOTION WAS ADOPTED

Clauses 2 to 73 both inclusive were added to the Bill

CLAUSE 1, ETC

MR. DEPUTY SPEAKER:—The question is:

"That clause 1, the Long Title the preamble and the Enacting Formula do stand part of the Bill."

The motion was adopted.

Clause 1, the Long Title the preamble and Enacting formula were added to the Bill.

Motion to pass

SRI B. BASAVALINGAPPA:—Sir, I move:

"That the Mysore Slum Areas (Improvement and Clearance) Bill, 1973, be passed."

MR. DEPUTY SPEAKER:—The question is:

"That the Mysore Slum Areas (Improvement and Clearance) Bill, 1973, be passed."

The motion was adopted and the Bill was passed.

MYSORE AGRICULTURAL PRODUCE MARKETING (REGULATION) AMENDMENT) BILL, 1973.

Motion to consider

SRI A. SHANKAR ALVA (Minister for Co-operation): Mr. Deputy Speaker, I move:

"That the Mysore Agricultural Produce Marketing (Regulation) (Amendment) Bill, 1973, be taken into consideration."

MR. DEPUTY SPEAKER : Motion moved :

"That the Mysore Agricultural Produce Marketing (Regulation) (Amendment) Bill, 1973, be taken into consideration."

‡ SRI A. SHANKAR ALVA : Sir, This is a short Bill which replaces the Mysore Agricultural Produce Marketing (Regulation) Ordinance, 1973. Yesterday there was a Call Attention Notice in respect of this Ordinance. I had explained the circumstances under which the Ordinance was passed.

This Bill consists practically of two clauses : (1) Amendment of Section 65 and (2) Amendment of Section 90.

As the house is aware, the state Government has entered into an agreement with the I. D. A. an affitiate of the World Bank, with a view to the effect to develop the markets in Mysore State and for that a project of Rs. 43 crores has been prepared and the world Bank has agreed to finance up to Rs. 37 crores as loan. But they have stipulated certain conditions by which the Market committees should be able to repay this loan. For that purpose, specific clauses have been added and we have also agreed to those conditions.

One of the conditions, as it exists today is that under Section 65 it is fixed that in respect of goods sold at Rs. 100 only 30 paise has to be paid by these merchants. But that seems to be a very low item and if the income of the Market Committees are not argumented sufficiently they will not be able to repay the loan. So it has to be

(SRI A. SHANKAR ALVA)

raised to Re. 1. Considering the market fee, certainly this 30 paise is really very little. I had occasion to go to Delhi and to have discussions with the Marketing Committee of both Panjab and Haryana. In Haryana they are charging one rupee and in Panjab it is Rs. 1.50. Now, as it is, the market fee has to be fixed by the Committee itself, This section says that it shall not be beyond a certain rate. As I mention to you yesterday the Courts also have held that this is not a tax but only a fee; and such, it must be commensurate with the services given to the persons who are making use of the Market Yard. The Market Yards will be improved and as a result of improvement, a lot of amount will be spent on them. I in some cases more than a crore of rupees will have to be spent on the Market Yards. In the first phase, the World Bank is advancing a loan of Rs. 10 crores. For this purpose, 50 Market Yards will be taken up and it is expected that in about a couple of years, the Market Yards will be fully completed and there will be a repeater every second year. So within the course of a few years the entire project will be completed. With the purpose in view and to enable the Market Committees to raise their market fees, Section 65 has been amended in Clause 2 which empowers the Market Committees to raise the maaket fees from 30 paise to one Rupee.

The other amendment is in respect of the amounts to be kept in the banks because under 90 clause (3) there is a provision which says, Save as otherwise provided in this Act, the amount to the credit of the market fund and all other moneys received by the Market Committee shall be kept or invested a in a Co-operative District Central Bank approved by the Registrar of Co-operative Societies, or (b) in a Government Savings Bank or (c) in a Scheduled Bank, where there is no bank specified in clause (a) or a branch thereof at the town or village where the office of the market committe is located or in any of the Central or State Government securities with the previous approval of the Chief Marketing Officer.

In the amendment for clause c) of sub-section (3) the following clause has been substituted namely "(c) in a Scheduled Bank with the previous approval of the Chief Marketing Officer, or".' because for the purpose of reimbursement; the amounts have to be kept in the Banks. So, a small modification is necessary. Therefore, this is a bill which is absolutely necessary to put through the scheme of the World Bank and I am sure that it will comment itself to lhe House.

†ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಮಂಡಿಸಿರತಕ್ಕಂಥ ಈ ತಿದ್ದುಪಡಿ ಮಸೂದೆ ಬಗ್ಗೆ ನಾನು ಮಾತನಾಡುತ್ತಾ ಇರುವಾಗ ಇದರಲ್ಲಿ ನನಗೆ ತೋರುವ ಎರಡು ವಿಷಯಗಳನ್ನು ಮಾತ್ರ ಪ್ರಸ್ತಾಪಿಸುವೆ. ಈ ಎರಡು ವಿಷಯಗಳನ್ನು Statement of Objects and *R*easons ನಲ್ಲಿ ಮತ್ತು statement regarding the agreement entered into between the State Government and World Bank ನಲ್ಲ ಕಾಣಿಸಿದೆ. Sections 65 and 90 are to be amended according to this Bill. ಸೆಕ್ಷನ್ 65ರ ಪ್ರಕಾರ ಮಾರುಕಟ್ಟೆ ಶುಲ್ಕವನ್ನು 100 ರೂಪಾಯಿ ಬೆಲೆಬಾಳುವ ಪ್ರತಿಯೊಂದು ಕಮಾಡಿಟಿಗೂ 30 ಪೈಸೇಯಿಂದ ಏರಿಸಬೇಕು ಅಂತ ಒಂದು ರೂಪಾಯಿಗೆ ಮಾಡಿದ್ದೀರಿ. ಇದರಿಂದ ಬೆಳೆಗಾರನಿಗೆ ತೊಂದರೆಯಾಗುತ್ತದೆ. ಮತ್ತು ರಾಜ್ಯದಲ್ಲಿರುವ ರೆಗ್ಯುಲೇಟೆಡ್ ಮಾರ್ಕೆಟ್ ಅಭಿವೃದ್ಧಿಗೆ ವರ್ಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅದು ಬಹಳ ಸಂತೋಷ ಮಾರ್ಕೆಟ್ ಯಾರ್ಡನ್ನು ರಾಜ್ಯಾದ್ಯಂತ ಅಭಿವೃದ್ಧಿಪಡಿಸಬೇಕು ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇದಕ್ಕಾಗಿ ವರ್ಲ್ಡ್ ಬ್ಯಾಂಕ್‌ನವರು 10 ಕೋಟಿ ರೂಪಾಯಿ ಸಾಲ ಕೊಡುವುದನ್ನು ನಾನು ಮೆಚ್ಚುತ್ತೇನೆ. ಆದರೆ ಈ 10 ಕೋಟಿ ರೂಪಾಯಿಯನ್ನು ಅವರಿಗೆ ತೀರಿಸತಕ್ಕಂಥ ರೀತಿ ಹೇಗಿದೆ ಎಂದರೆ ಮಾರ್ಕೆಟ್ ಯಾರ್ಡ್‌ಗೆ ಮಾರುವುದಕ್ಕೆ ಯಾವ ಬೆಳೆಗಾರನು ಬರುತ್ತಾನೋ ಪರೋಕ್ಷವಾಗಿ ಅಂಥವನ ಮೇಲೆ ಹೆಚ್ಚಿನ ಭಾರ ಹೊರಿಸಿ ಈ ಸಾಲವನ್ನು ತೀರಿಸಬೇಕಾಗಿದೆ. ಆದುದರಿಂದ ಅವನಿಗೆ ಇದರಿಂದ ಹೆಚ್ಚಿನ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಇದಕ್ಕೆ ನನ್ನ ಸಲಹೆ ಏನೆಂದರೆ ಮಾರ್ಕೆಟ್ ಶುಲ್ಕವನ್ನು ಒಂದು ರೂಪಾಯಿ ಮಾಡುವ ಬದಲು 50 ಪೈಸೇ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತು ದೇಶದಲ್ಲಿ ಗ್ರೀನ್ ರೆವಲ್ಯೂಷನ್ ಮಾಡಬೇಕು, ಜನತೆ ಬೇಕಾದಷ್ಟು ಆಹಾರ ಧಾನ್ಯ ಬೆಳೆಯಬೇಕು ಎಂದು ಹೇಳುತ್ತೀರಿ. ಆದರೆ ಇದರಿಂದ ಬೆಳೆಗಾರನಿಗೆ ಹಲವಾರು ತೊಂದರೆಗಳು ಬರುತ್ತದೆ. ನೀವು 10 ಕೋಟಿ ರೂಪಾಯಿ ಸಾಲ ತೆಗೆದುಕೊಂಡರೆ ಅದನ್ನು ತೀರಿಸುವ ಭಾರ ಬೆಳೆಗಾರನ ಮೇಲೆ

(ಶ್ರೀ ಎಸ್. ಬಂಗಾರಪ್ಪ)

ಬೀಳುತ್ತದೆ. ಇದನ್ನು ತಾವು ಆಲೋಚನೆ ಮಾಡಬೇಕು. The other conditions do not call for any discussion here. They are conditions embodied in the agreement. It is not necessary for us to discuss them.

ಇನ್ನು ಎರಡನೆಯದಾಗಿ ಹೇಳುವುದಾದರೆ ಸೆಕ್ಷನ್ 90 ಏನು ಇದೆ ಅದು ಒಪ್ಪತಕ್ಕಂಥ ಮತ್ತು ಇದನ್ನು ಸ್ವಾಗತಾರ್ಹ ಮಾಡುತ್ತೇನೆ. ಈವೊತ್ತು 10 ಕೋಟಿ ರೂಪಾಯಿ ಸಾಲವನ್ನು ಏನು ಅವರಿಂದ ತೆಗೆದು ಕೊಳ್ಳುತ್ತೀರಿ ಆ ಬಗ್ಗೆ ನಾಳೆ ದಿವಸ ಅವರಲ್ಲಿ ವ್ಯವಹಾರ ಮಾಡಬೇಕಾದರೆ ಕಮರ್ಷಿಯಲ್ ಬ್ಯಾಂಕ್ ಮುಖಾಂತರವೇ ಮಾಡಬೇಕು. ಆದುದರಿಂದ ಅವರಲ್ಲಿ ಡಿಪಾಸಿಟ್ ಮಾಡಬೇಕಾದರೆ ನಾವು ಅವರಿಗೆ ಕೆಲವು ಅಧಿಕಾರವನ್ನು ಕೊಡಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಅಮೆಂಡ್‌ಮೆಂಟನ್ನು ಮಾಡುವುದು ಒಳ್ಳೆಯದು ಎಂದು ನಾನು ಒಪ್ಪುತ್ತೇನೆ. ಮತ್ತೊಮ್ಮೆ ಈ ಮಾರುಕಟ್ಟೆ ಶುಲ್ಕವನ್ನು 30 ಪೈಸೇಗೆ ಬದಲಾಗಿ 50 ಪೈಸೇ ಮಾಡಬೇಕು ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

‡SRI T. R. SHAMANNA. Sir, yesterday alone, I had given a Calling Attention Notice in respect of raising of this Regulated Market fees from 30 paise to one rupee. We have bitter experience so far as World Bank loans are concerned. Now, when the Water Supply Board wanted to borrow money for the purpose of implementing the Cauvery Scheme through the World Bank, they put so many conditions with the result that the water rates had to be raised abnormally, from one rupee to 2 rupees. The World Bank loan is generally of a 'marwadi' type. The Central Government gets it in sterling of dollars and they will give it in rupees. The Central Government is interested in getting as much as possible from the World Bank. The beneficiary from the development of these activities is the merchant class. You are going to construct buildings for them and give them facilities. You charge rent and collect it from them and from this money, you redeem this loan. Raising the market fees to one rupee will indirectly affect the cultivator and prices also will go up to a considerable extent and this will affect the consumer. The increase from 30 paise to one rupee is an increase by more then times and I

strongly oppose the rise of this fees. Many of the Regulated Markets have large sums of money and they have not been able to spend it in a proper way. Please divert that amount for green revolution instead of investing it on buildings. As suggested by Mr. Bangarappa it may be raised from 30 paise to 50 paise. An additional amount can be collected from the godowns which they are building.

ಶ್ರೀ ಎ. ಶಂಕರ ಆಳ್ವ : ಅಧ್ಯಕ್ಷರೇ, ಈಗ ಮಾರ್ಕೆಟ್‌ಗೆ ಶುಲ್ಕ ಕೊಡುವವರು ಕೊಳ್ಳುವವರೇ ವಿನಾ ಕಲ್ಟಿವೇಟರ್ ಅಲ್ಲ. ಸಾಮಾನುಗಳನ್ನು ಯಾವನು ತೆಗೆದುಕೊಳ್ಳುತ್ತಾನೋ ಅವನು ಕೊಡುತ್ತಾನೆ. ಈಗ ಅವರಿಗೆ ಹೆಚ್ಚು ಸೌಲಭ್ಯ ಒದಗಿಸಬೇಕು ಎನ್ನುವುದಾದರೆ ಅವರಿಂದ ಜಾಸ್ತಿ ಹಣವನ್ನು ಕಲೆಕ್ಟ್ ಮಾಡಬೇಕು. ಅದಕ್ಕೋಸ್ಕರ ಮಾರ್ಕೆಟ್ ಕಮಿಟಿಯವರು ಹೆಚ್ಚು ಹಣವನ್ನು ವಸೂಲು ಮಾಡಿದರೆ ಅವರಿಗೆ ಹೆಚ್ಚು ಸೌಲಭ್ಯ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದುದರಿಂದ ಮಾರ್ಕೆಟ್ ಶುಲ್ಕ 30 ಪೈಸೇ ಇದ್ದುದನ್ನು ಒಂದು ರೂಪಾಯಿಗೆ ಏರಿಸಿದೆ. ನಾನು ಮೊದಲೇ ಹೇಳಿದ ಹಾಗೆ ಬೇರೆ ರಾಜ್ಯಗಳಲ್ಲಿ ಈ ರೀತಿ ಏರಿಸಿದ್ದಾರೆ. ಮತ್ತು ಅವರಿಗೆ ಮಾರ್ಕೆಟ್ ಇಂಪ್ರೂ ಆಗುವುದು ಬೇಡ ಎನ್ನುವುದಾದರೆ ಬೇರೆ ಪ್ರಶ್ನೆ. ಮತ್ತು ಬೇರೆ ರಾಜ್ಯಗಳಲ್ಲಿ ವರ್ತಕರಿಗೆ ಗೋಡಾನ್, ಷಾಪ್ಸ್ ಕಟ್ಟಬೇಕಾದರೆ ಅವರಿಗೆ ಸಾಲ ಕೊಡುತ್ತಾರೆ. ಆ ಹಣವನ್ನು ಅವರು ವಾಪಾಸ್ಸು ಕೊಡಬೇಕು. ಅವರಿಗೆ ಅದನ್ನು ಧರ್ಮವಾಗಿ ಕೊಡುವುದಿಲ್ಲ. ಒಟ್ಟಿನಲ್ಲಿ ಮಾರ್ಕೆಟ್ ಯಾರ್ಡ್ ಇಂಪ್ರೂ ಆಗಬೇಕು ಎಂದು ನಮ್ಮ ಆಶೆ. ಸಾಧಾರಣ ಈ 10 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಪ್ರಥಮ ಹಂತವಾಗಿ 50-55 ಮಾರ್ಕೆಟ್‌ಗಳನ್ನು ಸುಧಾರಿಸುವಂತೆ ತೆಗೆದುಕೊಂಡಿದ್ದೇವೆ. ಇನ್ನು ಸಾಧಾರಣವಾಗಿ 99 ಮಾರ್ಕೆಟ್‌ಗಳು ಮತ್ತು 104 ಸಬ್ ಮಾರ್ಕೆಟ್‌ಗಳು ಇಂಪ್ರೂ ಆಗತಕ್ಕವಿವೆ.

6-00 P. M.

ನಿಜವಾಗಿ ನಾವು ಸಾಲ ಕೊಡುವ ರೀತಿಯನ್ನು ಒಪ್ಪಿಕೊಂಡಿದ್ದೇವೆ. ಏತಕ್ಕೆಂದರೆ ಸಾಲ ಕೊಡುವಾಗ ಯಾವ ರೀತಿಯಲ್ಲಿ ಕೊಡುವುದಕ್ಕೆ ಸಾಧ್ಯವಾದೀತು ಎಂದು ಗೌರ್ನಮೆಂಟ್ ಆಫ್ ಇಂಡಿಯಾದವರು ನಮ್ಮ ರಾಜ್ಯ ಸರಕಾರದವರು ಮತ್ತು ವರ್ಲ್ಡ್ ಬ್ಯಾಂಕಿನವರು ಸಹಿತ ಸೇರಿ ಯಾವ ರೀತಿ ಮಾಡಬೇಕೆಂದು ಅಗ್ರಿಮೆಂಟ್ ಮಾಡಿದ್ದು ಈ ಬಿಲ್ಲಿನಲ್ಲಿ ಕಾಣಿಸಿದೆ. ಇದು ನನಗೆ ತಿಳಿದ ರೀತಿಯಲ್ಲಿ ಯಾವ ರೀತಿ ಆಕ್ಷೇಪಣಾರ್ಹವಾಗಿ ಇಲ್ಲವೆಂದು ಇದನ್ನು ಸೇರಿಸಬಹುದು ಎಂದು ನಾನು ಅಭಿ

(ಶ್ರೀ ಎ. ಶಂಕರ ಆಳ್ವ)

ಪಾ್ರಯಪಡುತ್ತೇನೆ. ಈ ಆಕ್ಟನಲ್ಲಿ ಪ್ರತಿಯೊಂದು ಕಮಿಟಿಯುವರು ರೆಸಲೂಷನ್ ಮಾಡಬೇಕು ಅವರೇ ರೂಲ್ಸ್ ಮಾಡಬೇಕು, ಹಾಗೂ ನಾವು ಏರಿಸುತ್ತೇವೆಂದು ಹೇಳಿದ ಒಪ್ಪಿಗೆಯ ಮೇರೆ ಅದು ವಸೂಲಾಗುತ್ತದೆ.

MR. DEPUTY SPEAKER.—I will put the Bill for the consideration of the House.

The question is :

"That the Mysore Agricultural Produce Marketing (Regulation) (Amendment) Bill, 1973, be taken into consideration".

The motion was adopted

Clauses 2 to 4

MR. DEPUTY SPEAKER : Let us take up clause by clause consideration.

The question is :

'That Clauses 2 to 4 both inclusive do stand part of the Bill."

The motion was adopted

Clauses, 2 to 4, both inclusive, were added to the Bill."

MR DEPUTY SPEAKER : I will put Clause 1 etc. Clause to the vote of the House.

The question is :

"That clause 1. the long Title "the Enacting for mula do Preamble and stand part of the Bill."

The motion was adopted

Clause 1, the long Title the Preamble and Enacting formula were added to the Bill.

Motion to Pass

SRI A. SHANKER ALVA :—I beg to move

"That the Mysore Agricultural Marketing (Regulation) (Amendment) Bill, 1973, be passed."

MR. DEPUTY SPEAKER :—The question is :

"That the Mysore Agricultural Marketing (Regulation) (Amendment) Bill, 1973, be passed".

The motion was adopted and the Bill was passed

MR. DEPUTY SPEAKER :—The House now stands adjourned to meet tomorrow at 1 P.M.

The House adjourned at Five minutes past six of the Clock to meet at one of the Clock on Friday the 7th September 1973.

WD 9—GBPC—550—22-5-74.